# ಪ್ರಪನ್ನಾಮೃತ

(ಶ್ರೀ ರಾಮಾನುಜರ ಜೀವನಗಾಥೆ)

ಕನ್ನಡ ಅನುವಾದ:

## ವಿದ್ವಾನ್ ಎನ್. ನರಸಿಂಹಾಚಾರ್ಯ



ಪ್ರಕಾಶಕರು

## ಶ್ರೀ ರಾಮಾನುಜ ಸೇವಾ ನ್ಯಾಸ

ಬೆಂಗಳೂರು

121

ಶ್ರೀಮದಾಂಧ್ರಪೂರ್ಣಕುಲತಿಲಕ ಶ್ರೀಮದನಂತಾರ್ಯ ವಿರಚಿತ

# ಪ್ರಪನ್ನಾಮೃತ

(ಶ್ರೀರಾಮಾನುಜರ ಜೀವನಗಾಥೆ)

ಕನ್ನಡ ಅನುವಾದ

ವ್ಯಾಕರಣ ತರ್ಕ ಸಾಹಿತ್ಯ ವಿದ್ವಾನ್ ರಾಷ್ಟ್ರಭಾಷಾವಿಶಾರದ

ಎನ್. ನರಸಿಂಹಾಚಾರ್ಯ

ಪ್ರಕಾಶಕರು

ಶ್ರೀ ರಾಮಾನುಜ ಸೇವಾ ನ್ಯಾಸ

ಬೆಂಗಳೂರು

**'PRAPANNAMRUTHA'**-The Biography of Acharya Sri Ramanuja, originally in Sanskrit, translated to Kannada by Vid. N.Narasimhacharya.

Price Rs.45/-

**© 1996 by N.Srinivasan.**
**All rights reserved.**

**Published by**

**Sri Ramanuja Seva Trust**
**151, 'Adarsha Bhavan' 15th Cross**
**Malleswaram, Bangalore- 560 055**
**Ph: 3340153 / 3342224**

**Printed at**

**Samrudha Offset Printers**
**14/57, 9th Cross, 5th Main**
**Ramachandra Agrahara, Chamarajpet**
**Bangalore- 560 018 Ph : 6621377**

**Typeset by**

**International Multimedia Developers**
**No.9, Shubha, R.B.I. Colony, 3rd Block East**
**Jayanagar, Bangalore- 560 011**
**Ph: 640844**

**Financial Aid**
**By Manikarnika family in memory of their Parents**
**Manikarnika Chingamani and Manikarnika Parthasarathy.**

# ಪ್ರಕಾಶಕರ ಮಾತು

ನಮ್ಮ ನಾಡಿನ ಶ್ರೇಷ್ಠ ಸಂತರಲ್ಲಿ ಶ್ರೀರಾಮಾನುಜರು ಒಬ್ಬರು. ಆಚಾರ್ಯ ರಾಮಾನುಜರು ವಿಶಿಷ್ಟಾದ್ವೈತ ಸಿದ್ಧಾಂತದ ನೇತಾರರು, ಹಾಗೆಯೇ ಪ್ರಪತ್ತಿ ಮಾರ್ಗದ ಪ್ರವರ್ತಕರು. ನಮ್ಮ ದೇಶದ ವಿಖ್ಯಾತ ಸಂತರಲ್ಲಿ, ದಾರ್ಶನಿಕರಲ್ಲಿ ಶ್ರೀರಾಮಾನುಜರು ಅಗ್ರಗಣ್ಯರು. ಆಚಾರ್ಯರು ಉಪನಿಷದ್-ಬ್ರಹ್ಮಸೂತ್ರಗಳ ಉಪದೇಶಗಳನ್ನು ಸುಂದರವಾಗಿ ಪ್ರತಿಪಾದಿಸಿ ಸರ್ವಶ್ರುತಿ ಸಾಮಂಜಸ್ಯವನ್ನು ಸ್ಥಾಪಿಸಿದರು. ಪ್ರಪನ್ನಸಿದ್ಧಾಂತವನ್ನು ವ್ಯಾಪಕವಾಗಿ ಪ್ರಚಾರ ಮಾಡಿ ಯಾವ ಭೇದವೂ ಇಲ್ಲದೆ ಎಲ್ಲರೂ ಮೋಕ್ಷವನ್ನು ಪಡೆಯಬಹುದೆಂದು ಘೋಷಿಸಿ ಆಚರಿಸಿ ತೋರಿಸಿದರು ಆಚಾರ್ಯ ರಾಮಾನುಜರು.

ಶ್ರೀರಾಮಾನುಜರ ಜೀವನದ ದಿವ್ಯಾನುಭವವನ್ನು ಈಗಾಗಲೇ ಸಹಸ್ರಾರು ಕೃತಿಗಳಲ್ಲಿ ನೂರಾರು ಲೇಖಕರು ಮಾಡಿ ನಮ್ಮ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಶ್ರೀರಾಮಾನುಜರ ಚರಿತ್ರೆಯನ್ನು ಎಷ್ಟೆಷ್ಟು ಪ್ರಕಾಶನ ಮಾಡಿ ಅನುಭವಿಸಿದರೂ, ಒಂದುರೀತಿಯ ನಾವಿನ್ಯತೆಯನ್ನು, ನರನಾರಾಯಣ ಸೇವೆಯ ಸೊಬಗನ್ನು ಕಾಣಬಹುದಾಗಿದೆ. ಇಂತಹ ಮತ್ತೊಂದು ಕೃತಿ ಮನ ಅರಳಿಸಲು ಕನ್ನಡ ಸಾಹಿತ್ಯಕ್ಕೆ ದೀಪವಾಗಿ ನಿಲ್ಲಿಸಿದೆ. ಸುಮಾರು ನಲವತ್ತು ವರ್ಷಗಳ ಹಿಂದೆ ಅನುವಾದ ಆಗಿದ್ದರೂ, ಇದೀಗ ನಮ್ಮ ಟ್ರಸ್ಟಿನಿಂದ ಪ್ರಕಾಶಗೊಳ್ಳುತ್ತಿರುವುದು ನಮ್ಮ ಸಂಸ್ಥೆಯ ಸೌಭಾಗ್ಯ.

ಈ ಕೃತಿ ಪ್ರಕಾಶನದ ಮುಖ್ಯರು ಅಮೇರಿಕದಲ್ಲಿ ನೆಲೆಸಿರುವ ಶ್ರೀ.ಎಂ.ಶ್ರೀನಿವಾಸನ್ ಅವರು. ಅವರ ಕುಟುಂಬದವತಿಯಿಂದ ಈ ಕೃತಿಯನ್ನು ಪ್ರಕಾಶಗೊಳಿಸಲು ಆರ್ಥಿಕ ಸಹಾಯ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಟ್ರಸ್ಟ್ ಹೃತ್ಪೂರ್ವಕವಾದ ನಮನ ಸಲ್ಲಿಸುತ್ತದೆ.

'ಪ್ರಪನ್ನಾಮೃತ'ದ ಕನ್ನಡ ಅನುವಾದ ಮಾಡಿರುವ ಕೀರ್ತಿಶೇಷ ವಿ||ಎನ್. ನರಸಿಂಹಚಾರ್ಯರ ಕುಟುಂಬ ವರ್ಗದವರು ಶ್ರೀಯುತರು ನಲವತ್ತು ವರ್ಷಗಳ ಹಿಂದೆ ಅನುವಾದಿಸಿರುವ ಈ ಕೃತಿಯನ್ನು ರಕ್ಷಿಸಿ ಸಹಕರಿಸಿದ್ದಾರೆ. ಅವರಿಗೆ ವಿಶೇಷವಾಗಿ ವಂದನೆಗಳು. 'ಪ್ರಪನ್ನಾಮೃತ' ಓದುಗರ ಮನಸ್ಸಿನಲ್ಲಿ ಶ್ರೀರಾಮಾನುಜರ ಜೀವನದ ದಿವ್ಯಾನುಭವವನ್ನು ಮಾಡಿಸಿ, ಅವರು ಧನ್ಯರಾದರೆ, ಈ ಕಾರ್ಯ ಸಾರ್ಥಕ.

ಈ ಕೃತಿ ಪ್ರಕಾಶನಕ್ಕೆ ಸಹಕರಿಸಿದ ***ಇಂಟರ್‌ನ್ಯಾಷನಲ್ ಮಲ್ಟಿಮೀಡಿಯಾ ಡೆವಲಪರ್ಸ್*** ಹಾಗೂ ಸಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ***ಸಮೃದ್ಧ ಆಫ್‌ಸೆಟ್ ಪ್ರಿಂಟರ್ಸ್***‌ನ ಮಾಲೀಕರಾದ ಶ್ರೀ ರಾಘವೇಂದ್ರ ಅವರಿಗೂ, ಈ ಕೃತಿ ಅರಳಲು ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲ ಮಹನೀಯರಿಗೂ ಟ್ರಸ್ಟ್‌ನ ಧನ್ಯವಾದಗಳು.

'**PRAPANNAMRUTHA**'-The Biography of Acharya Sri Ramanuja, originally in Sanskrit, translated to Kannada by Vid. N.Narasimhacharya.

Price Rs.45/-

© 1996 by N.Srinivasan.
All rights reserved.

**Published by**

**Sri Ramanuja Seva Trust**
**151, 'Adarsha Bhavan' 15th Cross**
**Malleswaram, Bangalore- 560 055**
**Ph: 3340153 / 3342224**

**Printed at**

**Samrudha Offset Printers**
**14/57, 9th Cross, 5th Main**
**Ramachandra Agrahara, Chamarajpet**
**Bangalore- 560 018 Ph : 6621377**

**Typeset by**

**International Multimedia Developers**
**No.9, Shubha, R.B.L Colony, 3rd Block East**
**Jayanagar, Bangalore- 560 011**
**Ph: 640844**

**Financial Aid**
**By Manikarnika family in memory of their Parents**
**Manikarnika Chingamani and Manikarnika Parthasarathy**

# ಪ್ರಕಾಶಕರ ಮಾತು

ನಮ್ಮ ನಾಡಿನ ಶ್ರೇಷ್ಠ ಸಂತರಲ್ಲಿ ಶ್ರೀರಾಮಾನುಜರು ಒಬ್ಬರು. ಆಚಾರ್ಯ ರಾಮಾನುಜರು ವಿಶಿಷ್ಟಾದ್ವೈತ ಸಿದ್ಧಾಂತರ ನೇತಾರರು, ಹಾಗೆಯೇ ಪ್ರಪತ್ತಿ ಮಾರ್ಗದ ಪ್ರವರ್ತಕರು. ನಮ್ಮ ದೇಶದ ವಿಖ್ಯಾತ ಸಂತರಲ್ಲಿ, ದಾರ್ಶನಿಕರಲ್ಲಿ ಶ್ರೀರಾಮಾನುಜರು ಅಗ್ರಗಣ್ಯರು. ಆಚಾರ್ಯರು ಉಪನಿಷದ್-ಬ್ರಹ್ಮಸೂತ್ರಗಳ ಉಪದೇಶಗಳನ್ನು ಸುಂದರವಾಗಿ ಪ್ರತಿಪಾದಿಸಿ ಸರ್ವಶ್ರುತಿ ಸಾಮಂಜಸ್ಯವನ್ನು ಸ್ಥಾಪಿಸಿದರು. ಪ್ರಪನ್ನಸಿದ್ಧಾಂತವನ್ನು ವ್ಯಾಪಕವಾಗಿ ಪ್ರಚಾರ ಮಾಡಿ ಯಾವ ಭೇದವೂ ಇಲ್ಲದೆ ಎಲ್ಲರೂ ಮೋಕ್ಷವನ್ನು ಪಡೆಯಬಹುದೆಂದು ಘೋಷಿಸಿ ಆಚರಿಸಿ ತೋರಿಸಿದರು ಆಚಾರ್ಯ ರಾಮಾನುಜರು.

ಶ್ರೀರಾಮಾನುಜರ ಜೀವನದ ದಿವ್ಯಾನುಭವವನ್ನು ಈಗಾಗಲೇ ಸಹಸ್ರಾರು ಕೃತಿಗಳಲ್ಲಿ ನೂರಾರು ಲೇಖಕರು ಮಾಡಿ ನಮ್ಮ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಶ್ರೀರಾಮಾನುಜರ ಚರಿತ್ರೆಯನ್ನು ಎಷ್ಟೆಷ್ಟು ಪ್ರಕಾಶನ ಮಾಡಿ ಅನುಭವಿಸಿದರೂ, ಒಂದುರೀತಿಯ ನಾವಿನ್ಯತೆಯನ್ನು, ನರನಾರಾಯಣ ಸೇವೆಯ ಸೊಬಗನ್ನು ಕಾಣಬಹುದಾಗಿದೆ. ಇಂತಹ ಮತ್ತೊಂದು ಕೃತಿ ಮನ ಅರಳಿಸಲು ಕನ್ನಡ ಸಾಹಿತ್ಯಕ್ಕೆ ದೀಪವಾಗಿ ನಿಲ್ಲಿಸಿದೆ. ಸುಮಾರು ನಲವತ್ತು ವರ್ಷಗಳ ಹಿಂದೆ ಅನುವಾದ ಆಗಿದ್ದರೂ, ಇದೀಗ ನಮ್ಮ ಟ್ರಸ್ಟಿನಿಂದ ಪ್ರಕಾಶಗೊಳ್ಳುತ್ತಿರುವುದು ನಮ್ಮ ಸಂಸ್ಥೆಯ ಸೌಭಾಗ್ಯ.

ಈ ಕೃತಿ ಪ್ರಕಾಶನದ ಮುಖ್ಯರು ಅಮೇರಿಕದಲ್ಲಿ ನೆಲೆಸಿರುವ ಶ್ರೀ.ಎಂ.ಶ್ರೀನಿವಾಸನ್ ಅವರು. ಅವರ ಕುಟುಂಬದವತಿಯಿಂದ ಈ ಕೃತಿಯನ್ನು ಪ್ರಕಾಶಗೊಳಿಸಲು ಆರ್ಥಿಕ ಸಹಾಯ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಟ್ರಸ್ಟ್ ಹೃತ್ಪೂರ್ವಕವಾದ ನಮನ ಸಲ್ಲಿಸುತ್ತದೆ.

'ಪ್ರಪನ್ನಾಮೃತ'ದ ಕನ್ನಡ ಅನುವಾದ ಮಾಡಿರುವ ಕೀರ್ತಿಶೇಷ ವಿ||ಎನ್. ನರಸಿಂಹಚಾರ್ಯರ ಕುಟುಂಬ ವರ್ಗದವರು ಶ್ರೀಯುತರು ನಲವತ್ತು ವರ್ಷಗಳ ಹಿಂದೆ ಅನುವಾದಿಸಿರುವ ಈ ಕೃತಿಯನ್ನು ರಕ್ಷಿಸಿ ಸಹಕರಿಸಿದ್ದಾರೆ. ಅವರಿಗೆ ವಿಶೇಷವಾಗಿ ವಂದನೆಗಳು. 'ಪ್ರಪನ್ನಾಮೃತ' ಓದುಗರ ಮನಸ್ಸಿನಲ್ಲಿ ಶ್ರೀರಾಮಾನುಜರ ಜೀವನದ ದಿವ್ಯಾನುಭವವನ್ನು ಮಾಡಿಸಿ, ಅವರು ಧನ್ಯರಾದರೆ, ಈ ಕಾರ್ಯ ಸಾರ್ಥಕ.

ಈ ಕೃತಿ ಪ್ರಕಾಶನಕ್ಕೆ ಸಹಕರಿಸಿದ ***ಇಂಟರ್‌ನ್ಯಾಷನಲ್ ಮಲ್ಟಿಮೀಡಿಯಾ ಡೆವಲಪರ್ಸ್*** ಹಾಗೂ ಸಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ***ಸಮೃದ್ಧ ಆಫ್‌ಸೆಟ್ ಪ್ರಿಂಟರ್ಸ್***‌ನ ಮಾಲೀಕರಾದ ಶ್ರೀ ರಾಘವೇಂದ್ರ ಅವರಿಗೂ, ಈ ಕೃತಿ ಅರಳಲು ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಎಲ್ಲ ಮಹನೀಯರಿಗೂ ಟ್ರಸ್ಟ್‌ನ ಧನ್ಯವಾದಗಳು.

ಪ್ರಮುಖವಾಗಿ ಈ ಉಪಯುಕ್ತ ಕೃತಿಗೆ ಕೃಪೆಯಾ ಮುನ್ನುಡಿ ಬರೆದು ಆಶೀರ್ವದಿಸಿರುವ ಭಗವಾನ್ ರಾಮಾನುಜರ ನೇರ ಪರಂಪರೆಯಲ್ಲಿ ದಯಮಾಡಿಸಿರುವ, ಶ್ರೀಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್ ಇವರಿಗೆ ಕೃತಜ್ಞತಾಪೂರ್ವಕ ಪ್ರಣಾಮಗಳು.

||ಚಿರಮಭಿವರ್ಧತಾಂ ಶ್ರೀರಾಮಾನುಜ ಸೇವಾಶ್ರೀಃ||

**ಪ್ರಕಾಶಕರು.**

ಶ್ರೀ ಯುವನಾಮ ಸಂವತ್ಸರ ಪುಷ್ಯ ಮಾಸ
ಶುಕ್ರವಾರ, ಆರ್ದ್ರಾ (ಪೂರ್ಣಿಮಾ)೦೫-೦೧-೧೯೯೬.

ಶ್ರೀ

ಶ್ರೀಮತೇ ರಾಮಾನುಜಾಯ ನಮಃ

## ಶ್ರೀಯದುಗಿರಿ ಯತಿರಾಜ ಮಠ

ತಿರುನಾರಾಯಣಪುರಂ (ಮೇಲುಕೋಟೆ)

ಪರಮಹಂಸೇತ್ಯಾದಿ ಶ್ರೀಯದುಗಿರಿ ಯತಿರಾಜ ಸಂಪತ್ಕುಮಾರ ರಾಮಾನುಜ ಜೀಯರ್.

ಅಖಿಲಾಣ್ಡಕೋಟಿ ಬ್ರಹ್ಮಾಣ್ಡ ನಾಯಕನಾದ ಶ್ರೀಮನ್ನಾರಾಯಣನು ಈ ಭೂಲೋಕದ ಪಾಮರರು ಕಲಿಕಾಲದಲ್ಲಿ ಭಗವದ್ವಿಮುಖರಾಗುತ್ತಿರುವುದನ್ನು ಗಮನಿಸಿದನು. ಅನೇಕ ಸಾತ್ವಿಕ ಚೇತನರೂ, ನಾಥಮುನಿ, ಯಾಮುನಮುನಿ ಮುಂತಾದ ಆಚಾರ್ಯರೂ, ನಮ್ಮಾಳ್ವಾರ್ ಮುಂತಾದ ಆಳ್ವಾರರೂ, ಅನನ್ತ ಗರುಡ ವಿಷ್ವಕ್ಸೇನರೂ, ಸಾಕ್ಷಾತ್ ಲಕ್ಷ್ಮಿಯೂ, ಮಹಾವಿಷ್ಣುವಿನಲ್ಲಿ ಮಾಡುತ್ತಿದ್ದ ಪ್ರಾರ್ಥನೆಗಳನ್ನು ಲಾಲಿಸಿ ಅನನ್ತಕಾಲದಿಂದಲೂ ತನ್ನನ್ನು ಅನವರತ ಸೇವಿಸುತ್ತಿದ್ದ ಅನನ್ತನಿಗೆ ಸಮಸ್ತಚೇತನರೂ ಉಜ್ಜೀವಿಸಲು ಅತಿ ಸುಲಭವಾದ ಪ್ರಪತ್ತಿ ಮಾರ್ಗವನ್ನು ಭೂಲೋಕದಲ್ಲಿ ಉಪದೇಶಿಸುವಂತೆ ಆಜ್ಞಾಪಿಸಿದನು. ಈ ಆಜ್ಞೆಯನ್ನು ಶಿರಸಾವಹಿಸಿ ಆದಿಶೇಷನು ಶ್ರೀಪೆರಂಬೂದೂರಿನಲ್ಲಿ ಹಾರೀತ ಕುಲತಿಲಕರಾದ ಶ್ರೀಕೇಶವಸೋಮಯಾಜಿ ಎಂಬ ಭಾಗವತೋತ್ತಮರ ಧರ್ಮಪತ್ನಿಯಾದ ಕಾಂತಿಮತಿಯ ಗರ್ಭಾಂಬುಧಿಯಲ್ಲಿ ಶಾಲೀವಾಹನ ಶಕ ೯೩೯ನೇ ಪಿಂಗಳ ನಾಮ ಸಂವತ್ಸರ ಮಾಘಮಾಸ ಶುಕ್ಲಪಕ್ಷ ಪಂಚಮೀ ಗುರುವಾಸರ ಆರ್ದ್ರಾನಕ್ಷತ್ರದ ಶುಭದಿನ ಆವಿರ್ಭವಿಸಿದರು. ಇವರು ಭೂಲೋಕದಲ್ಲಿ ೧೨೦ ವರ್ಷ ಪ್ರಪತ್ತಿ ಮಾರ್ಗವನ್ನು ಬೋಧಿಸುತ್ತಾ ಜಾತಿ, ಕುಲ, ಲಿಂಗಭೇಧವೆಣಿಸದೆ ಲೋಕದ ಸಮಸ್ತ ಜೀವರೂ ಉಜ್ಜೀವಿಸಬಹುದಾದ ಶ್ರೇಯೋಮಾರ್ಗವನ್ನು ತೋರಿಸಿಕೊಟ್ಟರು. ಇಂತಹ ಪುಣ್ಯ ಪುರುಷರ ಜೀವನಚರಿತ್ರೆ ಪರಮಪಾವನ. ಈ ಚರಿತ್ರೆಯನ್ನೇ ಸುಮಾರು ೫೦೦ ವರ್ಷಗಳ ಹಿಂದೆ ಸಾಲಿಗ್ರಾಮದಲ್ಲಿ ಉದಯಿಸಿದ್ದ ಆಂಧ್ರಪೂರ್ಣಾಚಾರ್ಯರ ವಂಶಕ್ಕೆ ಸೇರಿದ ಶ್ರೀಅನನ್ತಚಾರ್ಯರೆಂಬುವರು "ಪ್ರಪನ್ನಾಮೃತಮ್"ಎಂಬ ಸಂಸ್ಕೃತದ ಕಾವ್ಯವನ್ನು ರಚಿಸಿದ್ದಾರೆ.

"ಅಮೃತಂ ಯತ್ಪ್ರಪನ್ನಾನಾಂ ತತ್ಪ್ರಪನ್ನಾಮೃತಂ ವಿದುಃ" ಎಂದು ಗ್ರಂಥಕರ್ತರೇ ವಿವರಿಸಿದ್ದಾರೆ. ಈ ಗ್ರಂಥದಲ್ಲಿ ಶ್ರೀಮದಾಚಾರ್ಯರ ಜೀವಿತಕಾಲದಲ್ಲಿ ನಡೆದ ಘಟನೆಗಳನ್ನು ನಿರೂಪಿಸುವುದರ ಜೊತೆಗೆ ಇತಿಹಾಸ, ಪುರಾಣ, ಧರ್ಮಶಾಸ್ತ್ರ, ವೇದಾಂತ ಇತ್ಯಾದಿ ಅನೇಕ ಶಾಸ್ತ್ರಗ್ರಂಥಗಳಿಂದ ಅಪೂರ್ವವಾದ ವಿಷಯಗಳನ್ನು ಹಾಸುಹೊಕ್ಕಾಗಿ ಹೊಸೆದಿದ್ದಾರೆ. ಜೊತೆಗೆ ಇದು ಒಂದು ಅಪೂರ್ವ ಚಾರಿತ್ರಿಕ ದಾಖಲೆ. ಕೇವಲ ಸಂಪ್ರದಾಯವಾದವಲ್ಲದೆ ಸಾಮಾಜಿಕ, ಚಾರಿತ್ರಿಕ, ಸಾಂಸ್ಕೃತಿಕ, ಕಾವ್ಯಸೌಂದರ್ಯ ದೃಷ್ಟಿಯಿಂದಲೂ ಈ ಗ್ರಂಥಕ್ಕೆ ವಿಶಿಷ್ಟ ಸ್ಥಾನವಿದೆ. ಇಂತಹ ಅಪೂರ್ವ ಗ್ರಂಥ ಕನ್ನಡ ಜನತೆಗೆ ಮಹದುಪಕಾರ

ಮಾಡಬಲ್ಲದೆಂದರೆ ಆಶ್ಚರ್ಯವಿಲ್ಲ. ಭಾಷಾಂತರಕಾರರು ಅತಿಕ್ಲಿಷ್ಟವಾದ ಕಾರ್ಯವನ್ನು ಸರಳವಾಗಿ ಮಾಡಿದ್ದಾರೆ. ಈ ಗ್ರಂಥ ಕನ್ನಡಿಗರಿಗೆ ವರವಾಗಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ. ಅದರಲ್ಲೂ ಶ್ರೀರಾಮಾನುಜ ಪಂಥೀಯರಿಗೆ ಅಂದರೆ ಆಚಾರ್ಯರಲ್ಲಿ ಪ್ರಪತ್ತಿ ಮಾಡುವ ಸಂಪ್ರದಾಯದವರಿಗೆ ಅಮೃತಪ್ರಾಯವಾಗಿಯೇ ಇದೆ.

ಈ ಕೃತಿಯನ್ನು ಕನ್ನಡಿಸಿರುವವರು ಕೀರ್ತಿಶೇಷ ಎನ್. ನರಸಿಂಹಾಚಾರ್ಯರು. ಸುಮಾರು ೪೨ ವರ್ಷಗಳ ಹಿಂದೆಯೇ ಭಾಷಾಂತರ ಗ್ರಂಥ ಸಿದ್ಧವಾಗಿತ್ತು. ನಾನಾ ಕಾರಣಗಳಿಂದ ಪ್ರಕಾಶನ ಕಂಡಿರಲಿಲ್ಲ. ಅವರ ಕುಟುಂಬವರ್ಗದವರು ಈ ಉತ್ತಮ ಕೃತಿಯನ್ನು ಕಾಪಾಡಿಟ್ಟಿದ್ದು ಈಗ ಶ್ರೀರಾಮಾನುಜ ಸೇವಾ ಟ್ರಸ್ಟ್ ಪ್ರಕಾಶಿಸಲು ಅನುಮತಿಸಿರುವುದು ಶ್ಲಾಘ್ಯ. ಅಂತೆಯೇ ಪ್ರಕಾಶನವನ್ನು ಕೈಗೊಂಡಿರುವ ಟ್ರಸ್ಟ್‌ನ ಕಾರ್ಯ ಪ್ರಶಂಸನೀಯ. ಇವರೆಲ್ಲರಿಗೂ ಶ್ರೀರಾಮಾನುಜಾಚಾರ್ಯರ ಅನುಗ್ರಹವೂ, ಶ್ರೀಮನ್ನಾರಾಯಣನ ಕೃಪೆಯೂ ಉಂಟಾಗಲೆಂದು ಮನಸಾ ಅವನಲ್ಲಿ ಪ್ರಾರ್ಥಿಸುತ್ತೇವೆ.

ಮೊಕ್ಕಾಂ : ಮಲ್ಲೇಶ್ವರಂ
ಬೆಂಗಳೂರು.

ಇತಿ
ಶ್ರೀಯತಿರಾಜಃ

ಯುವನಾಮ ಸಂವತ್ಸರದ ಮಕರ ಸಂಕ್ರಾಂತಿ
(೧೫-೦೧-೧೯೯೬)

।ಶ್ರೀ।

ಶ್ರೀರಂಗರಾಜ ಪದಪಂಕಜ ರಾಜಹಂಸಂ
ರಾಮಾನುಜಾರ್ಯ ಪದಪಂಕಜ ಭೃಂಗರಾಜಮ್।
ಶ್ರೀಶೈಲವಂಶ ಕಲಶಾಂಬುಧಿ ಪೂರ್ಣಚಂದ್ರಂ
ಶ್ರೀರಂಗರಾಜ ಗುರುಮನ್ವಹಮಾಶ್ರಯಾಮಃ ॥

ಶ್ರೀರಾಮಾನುಜರ ಪದಪದ್ಮಗಳಲ್ಲಿನ ಭೃಂಗವೂ, ಶ್ರೀಶೈಲವಂಶಕಲಶಾಂಬುಧಿಗೆ ಪೂರ್ಣಚಂದ್ರನೂ ಆದ ಶ್ರೀರಂಗರಾಜ ಗುರುಗಳನ್ನು ಪ್ರತಿದಿನವೂ ಆಶ್ರಯಿಸುತೇನೆ.

ಮಿಥ್ಯಾವಾದಿಗಳೆಂಬ ಮದಾಂಧಗಜಗಳ ವ್ಯರ್ಥವಾದ ವಾದವೆಂಬ ಕುಂಭಸ್ಥಳ ವನ್ನು ಭೇಧಿಸುವುದರಿಂದುದ್ಭವಿಸಿದ ಸೂಕ್ತಿಗಳೆಂಬ ಮುತ್ತಿನ ಮಣಿಗಳಿಂದ ಅಂತರಿಕ್ಷವನ್ನು ಸ್ವಚ್ಛವಾಗಿ ಮಾಡಿದ, ಸುತರ್ಕಗಳಿಂದ ಉಜ್ವಲವಾದ ಅತ್ಯುನ್ನತ ನಖಗಳುಳ್ಳ ಪ್ರೌಢವಾದ ವಿಹಾರದಿಂದ ವಿಹರಿಸುತಿರುವ, ವೇದಾಂತವೆಂಬ ಪರ್ವತವನ್ನಾಶ್ರಯಿಸಿರುವ ಶ್ರೀರಾಮಾನುಜರೆಂಬ ಸಿಂಹವು ಸರ್ವೋತ್ಕೃಷ್ಟವಾಗಿದೆ.

ಕೌಶಿಕವಂಶದಲ್ಲಿ ಹುಟ್ಟಿದವರೂ, ಕರುಣೆಯೆಂಬ ಅಮೃತಕ್ಕೆ ಸಾಗರವೂ, ನರಸಿಂಹಚಾರ್ಯರ ಮಕ್ಕಳೂ ಆದ ರಾಮಾನುಜ ಗುರುಗಳನ್ನು ಭಜಿಸುತ್ತೇನೆ. ನಾನು ಶಾಸ್ತ್ರಗಳನ್ನು ಓದಿದವನಲ್ಲ; ಗುರುಪೂಜೆಯನ್ನು ಮಾಡಿದವನಲ್ಲ; ನಿಷ್ಕಾರಣವಾದ ವಿಷ್ಣುವಿನ ಕೃಪೆಯಿಂದ ಬರೆಯಲುದ್ಯುಕ್ತನಾಗಿದ್ದೇನೆ. ಆಚಾರ್ಯರು ಅನುಗ್ರಹಿಸಲಿ. ಶ್ರೀಯಃಪತಿಯೂ, ಹಸ್ತಿಶೈಲನಿವಾಸಿಯೂ, ಕೋಟಿ ಸೂರ್ಯಸಂಕಾಶನೂ ಆದ ದೇವನಾದ ದೇವರಾಜನನ್ನು ನಾನು ಭಜಿಸುತ್ತೇನೆ.

ಸಮಸ್ತಲೋಕಗಳಲ್ಲಿಯೂ ಪ್ರಸಿದ್ಧವಾಗಿರುವುದೂ, ನಿತ್ಯರಿಂದಲೂ ಮುಕ್ತರಿಂದಲೂ ಸೇವಿಸಲ್ಪಡುತ್ತಿರುವುದೂ, ವಿಷ್ಣುವಿಗೆ ಪ್ರೀತಿಕರವಾದುದೂ, ಶುಭಕರವೂ ಆದ ವೈಕುಂಠವೆಂಬ ನಗರವೊಂದುಂಟು. ಅಲ್ಲಿ ನವರತ್ನಖಚಿತವಾದ ಪ್ರಾಕಾರಗಳಿಂದಲೂ, ಭವ್ಯವಾದ ಗೋಪುರಗಳಿಂದಲೂ ರಂಜಿಸುವ ಪ್ರಾಸಾದಗಳೂ, ಸೌರಭದಿಂದ ಕೂಡಿದ ಸುವರ್ಣಮಯವಾದ ತರುಗಳಿಂದ ತುಂಬಿರುವ ಉಪವನಗಳೂ ಪ್ರಕಾಶಿಸುತ್ತಿರುವುವು. ಅಲ್ಲಲ್ಲಿ ಅಮೃತಮಯವಾದ ಸರೋವರಗಳಲ್ಲಿ ದೇವಪುರುಷರೂ ಅಪ್ಸರೆಯರೇ ಮೊದಲಾದ ದೇವಸ್ತ್ರೀಯರೂ ನಿತ್ಯಾನಂದದಿಂದ ವಿಹರಿಸುತ್ತಿರುವರು. ಒಟ್ಟಿನಲ್ಲಿ ಈ ವೈಕುಂಠವು ಅನಂತವೂ, ಶಾಶ್ವತವೂ, ದಿವ್ಯವೂ, ನಿತ್ಯಾನಂದಾಸ್ಪದವೂ, ಪರಿಶುದ್ಧವೂ, ಪರಮಸುಖಪ್ರದವೂ ಆಗಿರುವುದಲ್ಲದೆ ಪರಮಭಕ್ತರಿಗೆ ಮಾತ್ರವೇ ಹೊಂದಲು ಸಾಧ್ಯವೇ ಹೊರತು ಬ್ರಹ್ಮಾದಿಗಳಿಂದಲೂ ಹೊಂದಲಸಾಧ್ಯವಾದುದು.

ಈ ನಗರದ ಮಧ್ಯಭಾಗದಲ್ಲಿ ದ್ವಾರಪಾಲಕರಿಂದ ಸುರಕ್ಷಿತವಾದ ಚತುರ್ದ್ವಾರಗಳಿಂದಲೂ, ಮಣಿಮಯವಾದ ಗೋಪುರಗಳಿಂದಲೂ, ದಿವ್ಯರತ್ನಗಳಿಂದ

ಮನೋಹರವಾದ ಧ್ವಜಪಟಗಳಿಂದಲೂ ದಿವ್ಯಾಭರಣಭೂಷಿತರಾದ ಅನೇಕ ದಿವ್ಯಸ್ತ್ರೀಪುರುಷರಿಂದಲೂ ಶೋಭಿಸುತ್ತಿರುವ ಮಹೋನ್ನತವಾದ ದಿವ್ಯವಾದ ಪ್ರಾಸಾದವೊಂದಿರುವುದು.

ಈ ಪ್ರಾಸಾದದ ಮಧ್ಯದಲ್ಲಿ ದಿವ್ಯವಾದ ಚಂದನ, ಕರ್ಪೂರ, ಕುಂಕುಮ ಕೇಸರಿಯೇ ಮೊದಲಾದವುಗಳ ಸೌರಭದಿಂದ ಸುರಭಿಯಾಗಿಯೂ, ನಿತ್ಯರಿಂದಲೂ, ಮುಕ್ತರಿಂದಲೂ ಸೇವ್ಯವಾಗಿಯೂ, ವಿಷ್ಣುವಿಗೆ ಪ್ರಿಯಕರವೂ, ಮಣಿಮಯವೂ ಆದ ಒಂದು ದಿವ್ಯವಾದ ಮಂಟಪವಿರುವುದು.

ಆ ಮಂಟಪದ ಮಧ್ಯದಲ್ಲಿ ಮಹಾಬಲಶಾಲಿಯೂ, ಶುಭ್ರವಾದ ಕಾಂತಿಯುಳ್ಳವನೂ ಆದ ಆದಿಶೇಷನಿರುವನು. ಆ ಶೇಷಪರ್ಯಂಕದಲ್ಲಿ ಶ್ರೀಮನ್ನಾರಾಯಣನು ಸುಖವಾಗಿ ಪವಡಿಸಿರುವನು. ಅವನಾದರೋ ನೋಡಲು ಕನ್ನೈದಿಲೆಯ ದಳದಂತೆ ಕೃಷ್ಣವರ್ಣನು; ಕಮಲದಳದಂತಹ ಕಣ್ಣುಳ್ಳವನು; ಕೋಟಿ ಮನ್ಮಥರ ಲಾವಣ್ಯವುಳ್ಳವನು; ಪ್ರಪಂಚವನ್ನೇ ಮೋಹಗೊಳಿಸುವ ದೇಹವುಳ್ಳವನು; ಕೋಟಿಸೂರ್ಯರ ಪ್ರಕಾಶವುಳ್ಳವನಾದರೂ ಕೋಮಲವಾದ ಅವಯವಗಳಿಂದ ರಮ್ಯವಾಗಿರುವವನು; ದಿವ್ಯವಾದ ಕಿರೀಟ, ಹಾರ ಮೊದಲಾದ ಭೂಷಣಗಳಿಂದ ಶೋಭಿಸುತ್ತಿರುವವನು; ದಿವ್ಯಗಂಧಗಳಿಂದ ಲಿಪ್ತವಾದ ಅವಯವಗಳುಳ್ಳವನೂ, ಪೀತಾಂಬರಧಾರಿಯೂ, ತರುಣನೂ ಆಗಿರುವವನು. ಅನವರತವೂ ಶ್ರೀ ಭೂ ನೀಳಾದೇವಿಯರಿಂದ ಪರಿವೃತನೂ, ನಿತ್ಯರಿಂದಲೂ, ಮುಕ್ತರಿಂದಲೂ ಸೇವಿಸಲ್ಪಡುತ್ತಿರುವವನೂ ಆಗಿರುವನು. ಶ್ರೀದೇವಿಯ ಉಚಿತವಾದ ಸಲಹೆಯಂತೆ ಪ್ರಪಂಚವನ್ನು ಸಂರಕ್ಷಿಸುತ್ತಿರುವ ಸರ್ವೇಶ್ವರನೂ, ಸರ್ವಶಕ್ತನೂ, ಶ್ರಿಯಃಪತಿಯೂ ಆದ ಶ್ರೀಮನ್ನಾರಾಯಣನು (ಒಂದು ಸಾರಿ) ಒಂದಾವರ್ತಿ -'ಈ ಪ್ರಾಣಿಗಳನ್ನು ವೈಕುಂಠಕ್ಕೆ ಬರಮಾಡಿಕೊಳ್ಳಲು ಉಪಾಯವೇನು?'- ಎಂದು ಚಿಂತಿಸುತ್ತಿದ್ದನು.

ಲೋಕರಕ್ಷಕನಾದ ಶ್ರೀಮನ್ನಾರಾಯಣನು ಈ ರೀತಿ ಚಿಂತಿಸುತ್ತಿರಲು ಶಯನ ಸ್ವರೂಪದಿಂದಿದ್ದ ಆದಿಶೇಷನು ಪರಮಪುರುಷನನ್ನು ಕುರಿತು 'ಎಲೈ ದೇವದೇವ, ನಿತ್ಯಪರಿಪೂರ್ಣನಾದ ನಿನಗೆ ಇದಾವ ಚಿಂತೆ? ನೀನು ಹೀಗೆ ವಿಚಾರಮಗ್ನನಾಗಲು ಕಾರಣವೇನು?' ಎಂದು ಕೇಳಿದನು. ಪ್ರಭುವಾದ ಶ್ರೀಮನ್ನಾರಾಯಣನು 'ಎಲೈ ಸರ್ಪರಾಜನೆ, ಇದೋನೋಡು, ಜನರೆಲ್ಲರೂ ದುಃಖಿಗಳೂ, ಅಜ್ಞಾನಿಗಳೂ ಆಗಿದ್ದಾರೆ. ಇಂತಹ ಜನರನ್ನು ರಕ್ಷಿಸುವುದಕ್ಕಾಗಿಯೇ ನಿನ್ನೊಡನೆ ನಾನು ಭೂಲೋಕದಲ್ಲಿ ಅವತರಿಸಿರಲಿಲ್ಲವೆ? ಆ ಅವತಾರ ಕಾಲಗಳಲ್ಲಿ ದಡ್ಡರಾದ ಜನರು ನನ್ನನ್ನು ಅಲ್ಪನೆಂದೂ, ರಾಜನೆಂದೂ, ಗೋಪಾಲನೆಂದೂ ತಿಳಿಯುತ್ತಿದ್ದರಷ್ಟೆ. ಜಗತ್ಕಾರಣ ಭೂತನಾದ ಪರಮಪುರುಷನಾದ ಹರಿಯು ನಮ್ಮ ಸಂರಕ್ಷಣೆಗಾಗಿಯೇ ವೈಕುಂಠದಿಂದ ಬಂದಿರುವನೆಂದು ತಿಳಿಯದಾದರಲ್ಲವೇ! ಎಲೈ ಬುದ್ಧಿಶಾಲಿಯೇ, ಆದ್ದರಿಂದಲೇ ಈ ಜನರು ಹೇಗೆ ಜ್ಞಾನಿಗಳಾದಾರೆಂದು ಚಿಂತಿಸುತ್ತಿರುವೆನು'- ಎಂದು ಹೇಳಿ ಮತ್ತೆ 'ಹಿಂದೆಯೂ ಅನೇಕ ಸಾರಿ ಲೋಕೋದ್ಧಾರಕ್ಕಾಗಿಯೇ ಶಂಖಚಕ್ರಾದ್ಯಾಯುಧಗಳನ್ನೂ, ವಿಷ್ವಕ್ಸೇನಾದಿ ನಿತ್ಯಸೂರಿಗಳನ್ನೂ ಕಳುಹಿಸಿದ್ದೆನಷ್ಟೆ; ಅವರೂ ಸಹ ಭೂಲೋಕದಲ್ಲಿ ಅವತರಿಸಿ ಪಾಪಿಗಳನ್ನು ಕಂಡು, ತಾವು ಮಾಡಿದ ಭಾಷಣವೇ

ಮೊದಲಾದವುಗಳಿಂದ ಜನರು ವಶರಾಗದೆ ಇರುವುದನ್ನು ತಿಳಿದು ಮೌನದಿಂದ ಹಿಂತಿರುಗಿ ಬಂದರಲ್ಲವೇ? ಸರ್ವಶ್ರೇಷ್ಠ ಸಮರ್ಥನಾದ ನೀನು ಭೂಲೋಕದಲ್ಲಿ ಅವತರಿಸಿ ಜನರನ್ನು ಸಂರಕ್ಷಿಸು; ನೀನಲ್ಲದೆ ಮತ್ತೆ ಯಾರು ಸಮರ್ಥರು? ಎಂದನು. ಇದನ್ನು ಕೇಳಿ ಪ್ರಾಜ್ಞನಾದ ಆದಿಶೇಷನು ಶ್ರೀಮಹಾವಿಷ್ಣುವನ್ನು ಕುರಿತು 'ನೀನು ಸಮಸ್ತ ಲೋಕಗಳ ಸೃಷ್ಟಿ ಸ್ಥಿತಿ ಲಯ ಕಾರಣನು; ಎಲೈ ಪರಮೇಶ್ವರನೆ, ನಿನ್ನ ಮಾಯೆಯಿಂದಲೇ ಜಗತ್ತೆಲ್ಲವೂ ಮೋಹಗೊಂಡಿದೆ; ಎಲೈ ಪರಮಾತ್ಮನೆ, ಸರ್ವರನ್ನು ರಕ್ಷಿಸುವುದರಲ್ಲಿ ಧುರಂಧರನಾದ ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ, ಆದರೂ ನನ್ನಲ್ಲಿ ದಯೆಯಿಟ್ಟು ನನ್ನನ್ನು ಈ ಕೆಲಸದಲ್ಲಿ ಆಜ್ಞಾಪಿಸುತ್ತಿರುವೆ. ಈ ನಿನ್ನ ಆಜ್ಞೆಯು ದಾಸನಾದ ನನ್ನಿಂದ ವಿಚಾರವಿಲ್ಲದೆಯೇ ನಿರ್ವಹಿಸಬೇಕಾದುದು; ಆದುದರಿಂದ-ಎಲೈ ಅಚ್ಯುತನೆ, ವಿಭೂತಿದ್ವಯ (ಲೀಲಾವಿಭೂತಿ, ನಿತ್ಯವಿಭೂತಿ)ವನ್ನು ನನಗೆ ಅನುಗ್ರಹಿಸುವುದಾದರೆ ಯಾವುದಾದರೊಂದು ಉಪಾಯದಿಂದ ಆ ಜನರನ್ನು ವೈಕುಂಠಕ್ಕೆ ಬರುವಂತೆ ಮಾಡುವೆನು'- ಎಂದು ವಿಜ್ಞಾಪಿಸಿಕೊಂಡನು. ಈ ರೀತಿಯಾಗಿ ಬಿನ್ನವಿಸಿಕೊಂಡ ಆದಿಶೇಷನಿಗೆ ಪರಮಾತ್ಮನು ಪರಮಪ್ರೀತಿಯಿಂದ ವಿಭೂತಿದ್ವಯವನ್ನು ಅನುಗ್ರಹಿಸಿ -'ಎಲೈ ಭೋಗೀಂದ್ರ, ಇದಕ್ಕೆ ಹಿಂದೆಯೇ ನನ್ನ ಅಪ್ಪಣೆಯಂತೆ, ಶುಭಚಿಂತನೆಯಲ್ಲಿಯೇ ನಿರತರೂ, ಪಂಚ-ಸಂಸ್ಕಾರಗಳಿಂದ ಸಂಸ್ಕೃತರೂ, ಯಾವಾಗಲೂ ಹರಿಪರಾಯಣರೂ ಆದ ಕೆಲವರು ಪ್ರಜಾಪಾಲನದಲ್ಲಿ ಆಸಕ್ತರಾಗಿರುವರು. ಆದರೂ ಅಜ್ಞಾನಮೋಹಿತರಾದ ಜನರನ್ನು ವಶಪಡಿಸಿಕ್ಕೊಳುವ ಸಾಮರ್ಥ್ಯವು ಅವರಿಗಿಲ್ಲವಾಗಿದೆ. ಆದ್ದರಿಂದಲೇ ಈಗ ನಿನ್ನನ್ನು ಕಳುಹಿಸುತ್ತಿರುವೆನು'- ಎನ್ನಲು, ಪ್ರಸನ್ನನಾದ ಭೋಗಿರಾಜನು ಪರಮಪುರುಷನನ್ನು ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಕೂಡಲೆ ಅವನಿಂದ ಅಪ್ಪಣೆಯನ್ನು ಪಡೆದು ಭೂಲೋಕದಲ್ಲಿ ಜನರನ್ನು ರಕ್ಷಿಸುವ ಮನಸ್ಸು ಮಾಡಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀವೈಕುಂಠನಾಥ ಫಣಿರಾಜ ಸಂವಾದವೆಂಬ ಮೊದಲನೆಯ ಅಧ್ಯಾಯವು ಮುಗಿದುದು.

೨

## ಶ್ರೀಮದ್ರಾಮಾನುಜಾವತಾರ ಅಧ್ಯಾಯ

ದಕ್ಷಿಣ ಹಿಂದೂದೇಶದಲ್ಲಿ ತೊಂಡೀರಮಂಡಲದಲ್ಲಿ "ಭೂತಪುರಿ"- (ಶ್ರೀಪೆರಂಬೂದೂರು) ಎಂಬ ನಗರವೊಂದುಂಟು. ಆ ನಗರವು ಮಾವು, ತೆಂಗು,ಹಲಸು ಮೊದಲಾದ ಫಲತರುಗಳಿಂದ ನಿಬಿಡವಾಗಿಯೂ, ಜಾಜಿ, ಸಂಪಿಗೆ, ಮಲ್ಲಿಗೆ ಮೊದಲಾದ ಕುಸುಮಗಳಿಂದ ಸುರಭಿಯಾಗಿಯೂ, ಕೋಗಿಲೆ, ನವಿಲು, ಗಿಣಿ ಮೊದಲಾದ ಪಕ್ಷಿಗಳ ಕಲಕಲ ನಾದದಿಂದ ಇಂಪಾಗಿಯೂ, ತಿಳಿನೀರ್ಗೊಳಗಳಿಂದ ಬೆಳಗುತ್ತಲೂ ಇರುವ ಉಪವನಗಳಿಂದ ಮೆರೆಯುತ್ತಿರುವುದು.

ಆ ನಗರದಲ್ಲಿರುವ ದ್ವಿಜರು ಸರಸಸಾಹಿತಿಗಳೂ, ವೇದವೇದಾಂತ ಪಾರಂಗತರೂ,

ಬ್ರಹ್ಮನಿಷ್ಠರೂ ಆಗಿರುವರಲ್ಲದೆ ಶಾಂತರೂ ಶುದ್ಧರೂ ಆಗಿರುವರು.

ವಿಶಾಲವಾದ ಅಲ್ಲಿನ ರಾಜಬೀದಿಗಳಲ್ಲಿ ಭವ್ಯವಾದ ಭವನಗಳಿರುವಂತೆ ಉನ್ನತವಾದ ಗೋಪುರಗಳಿಂದ ಕೂಡಿದ ಅನೇಕ ವಿಷ್ಣು ದೇವಾಲಯಗಳೂ ಶೋಭಿಸುತ್ತಿರುವುವು.

ಅಂತೂ ಆ ನಗರವು ಸಕಲ ಸಂಪತ್ಸಮೃದ್ಧವಾಗಿಯೂ, ಸುಖಕರವಾಗಿಯೂ, ರಂಜಿಸುತ್ತಿರುವುದು. ಆ ನಗರದಲ್ಲಿ ಮಹಾಪ್ರಾಜ್ಞನೂ ವೇದವೇದಾಂತವೇ ಮೊದಲಾದ ಶಾಸ್ತ್ರಗಳಲ್ಲಿ ನಿಷ್ಣಾತನೂ, ಸದಾಚಾರಸಂಪನ್ನನೂ, ಸತ್ಯಧರ್ಮ ಪರಾಯಣನೂ, ದೇವ ದ್ವಿಜ ಗುರುಪೂಜಾನಿರತನೂ, ತ್ಯಾಗಿಯೂ, ಮಿತಭಾಷಿಯೂ, ಮಹಾ ಭಾಗವತಶ್ರೇಷ್ಠನೂ ಆದ 'ಕೇಶವಸೋಮಯಾಜಿ' ಎಂಬ ಬ್ರಾಹ್ಮಣಶ್ರೇಷ್ಠನಿದ್ದನು.

ಬಹಳ ದಿನಗಳಾದರೂ ಮಕ್ಕಳಿಲ್ಲವೆಂಬ ಚಿಂತೆಯೊಂದು ಅವನನ್ನು ಬಾಧಿಸುತ್ತಿತ್ತು. ಹೀಗಿರಲು ಒಂದು ದಿನ ಚಂದ್ರಗ್ರಹಣವು ಬರಲು, ಪತ್ನಿಯೊಡನೆ ಸಮುದ್ರಸ್ನಾನ ಮಾಡಲು ಹೊರಟು, ಅಲ್ಲಿ ಸ್ನಾನಮಾಡಿ, ಕೈರವಿಣೀ ತೀರ್ಥದಲ್ಲಿಯೂ ಸ್ನಾನಮಾಡಿ, ಪಾರ್ಥಸಾರಥಿಯ ಸನ್ನಿಧಿಗೆ ಹೋಗಿ ಪುತ್ರಾರ್ಥಿಯಾಗಿ ಭಗವಂತನನ್ನು ಪಾರ್ಥಿಸುತ್ತಿದ್ದನು. ಮತ್ತು ಶ್ರೀಹರಿಯನ್ನು ಉದ್ದೇಶಿಸಿ ಪುತ್ರಕಾಮೇಷ್ಟಿಯಾಗವನ್ನು ಮಾಡಿದನು. ಈ ರೀತಿಯಾಗಿ ಯಾಗಮಾಡಿ ಶಾಂತಚಿತ್ತನಾದ ಆ ವಿಪ್ರನನ್ನು ಕುರಿತು ಭಗವಂತನಾದ ಪಾರ್ಥಸಾರಥಿಯು ಸ್ವಪ್ನದಲ್ಲಿ -'ನಾನು ನಿನ್ನ ಮಗನಾಗಿ ಅವತರಿಸುವೆನು'- ಎಂದು ಅನುಗ್ರಹಿಸಿದನು.

ಅನಂತರ ವರವನ್ನು ಪಡೆದು ಸಂತುಷ್ಟನಾದ ಕೇಶವಸೋಮಯಾಜಿಯು ಶ್ರೀಕೇಶವನಿಂದ ಪಾಲಿತವಾದ ಶ್ರೀಪೆರಂಬೂರಿಗೆ ಪತ್ನಿಯೊಡನೆ ಹಿಂತಿರುಗಿದನು.

ಕೆಲವು ದಿವಸಗಳು ಕಳೆಯಲಾಗಿ ಕೇಶವಸೋಮಯಾಜಿಯ ಪತ್ನಿಯಾದ ಕಾಂತಿಮತಿಯು ಗರ್ಭವತಿಯಾದಳು. ಕಾಲಕ್ರಮದಲ್ಲಿ (ಕಲಿಯುಗದಲ್ಲಿ ನಾಲ್ಕು ಸಾವಿರದ ಒಂದುನೂರ ಹದಿನೆಂಟು ವರ್ಷಗಳು ಕಳೆಯಲು, ಶಾಲಿವಾಹನ ಶಕ ಒಂಭೈನೂರ ತೊಂಭತ್ತಮೂರನೇ) ಪಿಂಗಲನಾಮ ಸಂವತ್ಸರದಲ್ಲಿ ವಸಂತಋತು, ಚೈತ್ರಮಾಸ, ಶುಕ್ಲಪಕ್ಷ, ಪಂಚಮೀ, ಗುರುವಾಸರ, ಆರಿದ್ರಾ ನಕ್ಷತ್ರ, ಮಧ್ಯಾಹ್ನ ಕರ್ಕಾಟಕ ಲಗ್ನದಲ್ಲಿ ಕೌಸಲ್ಯೆಯಲ್ಲಿ ಶ್ರೀರಾಮನಂತೆಯೂ,ಅದಿತಿಯಲ್ಲಿ ವಾಮನಮೂರ್ತಿಯಂತೆಯೂ, ದೇವಕಿಯಲ್ಲಿ ಶ್ರೀಕೃಷ್ಣನಂತೆಯೂ, ರೋಹಿಣಿಯಲ್ಲಿ ಬಲರಾಮನಂತೆಯೂ, ಕಾಂತಿಮತಿಯಲ್ಲಿ ಮಹಾಶಕ್ತನೂ, ತೇಜಸ್ವಿಯೂ ಆದ ಆದಿಶೇಷನು ಅವತರಿಸಿದನು. ಶ್ರೀಕೃಷ್ಣನ ಅವತಾರದಿಂದ ಮಥುರೆಯಂತೆಯೂ, ಶ್ರೀರಾಮನ ಅವತಾರದಿಂದ ಅಯೋಧ್ಯೆಯಂತೆಯೂ, ಯತೀಂದ್ರನ ಅವತಾರದಿಂದ ಭೂತನಗರಿಯು ಸತ್ಪುರುಷರಿಗೆ ಸೇವ್ಯವಾದುದೂ ಪವಿತ್ರವೂ ಆಯಿತು. ಉದಯವಲ್ಲಿರುವ ಸೂರ್ಯನಂತೆ ಬೆಳಗುತ್ತಿರುವ ಕುಮಾರನನ್ನು ನೋಡಿ ಕಾಂತಿಮತಿಯು ಹರ್ಷದಿಂದ ವಿಕಸಿತನಯನಳಾಗಿ ಬಾಂಧವರಿಗೂ ಹರ್ಷವನ್ನುಂಟುಮಾಡಿದಳು. ಸೋಮಯಾಜಿಯು ಬಹುಸುಂದರನಾದ ಮಗನನ್ನು ಕಂಡು ದ್ವಿಜರಿಗೆ ಪ್ರೀತಿಯಿಂದ ಧನಧಾನ್ಯಾಧಿಗಳನ್ನು ದಾನ ಮಾಡಿದನು. ಶ್ರೀರಾಮಾನುಜರ ಜನ್ಮನಕ್ಷತ್ರದಲ್ಲಿ ಆ ನಗರದಲ್ಲಿ ಮನೆಮನೆಯಲ್ಲಿಯೂ ಜನರು ತೈಲಾಭ್ಯಂಜನವನ್ನು ಮಾಡಿದರು. ಅದು ಮೊದಲುಗೊಂಡು

ಎಲ್ಲೆಲ್ಲೂ ರಾಮಾನುಜಮಹೋತ್ಸವವು ಜನ್ಮನಕ್ಷತ್ರದಲ್ಲಿ ವಿಶೇಷವಾಗಿ ಆಚರಣೆಗೆ ಬಂದಿತು. ಶ್ರೀರಾಮ ಮತ್ತು ಶ್ರೀಕೃಷ್ಣರ ಜನ್ಮೋತ್ಸವಗಳಂತೆ ಇವರ ಜನ್ಮೋತ್ಸವವೂ ಲೋಕದಲ್ಲಿ ಪ್ರಸಿದ್ಧವಾಯಿತು.

ಅನಂತರ ಶ್ರೀಶೈಲಪೂರ್ಣರು ತನ್ನ ತಂಗಿಗೆ ಪುತ್ರೋತ್ಸವವಾದುದನ್ನು ಕೇಳಿ ಸಂತುಷ್ಟರಾಗಿ, ಬೇಗ ಪೆರೆಂಬೂದೂರಿಗೆ ಬಂದು, ತೇಜೋರಾಶಿಯಾದ ಆ ಕುಮಾರನನ್ನು ನೋಡಿ ಅಮಾನುಷವೆಂದು ತಿಳಿದರು. ಸೋಮಯಾಜಿಯ ಗುರುಗಳೂ,ಅಮಿತತೇಜಸ್ವಿಗಳೂ ಆದ ಶ್ರೀಶೈಲಪೂರ್ಣರಿಂದ ಶಂಖಚಕ್ರಾದ್ಯಂಕನಗಳನ್ನು ಮಾಡಿಸಿ,ಹನ್ನೆರಡನೆಯ ದಿನ ಬಂಧುಗಳೊಡನೆ ಮಗನಿಗೆ 'ರಾಮಾನುಜ'ನೆಂಬ ಶುಭ ನಾಮಕರಣವನ್ನು ಮಾಡಿದರು.

ಆ ಬಾಲಕನು ಬಾಲಸೂರ್ಯನಂತೆ ದಿನದಿನವೂ ಅಭಿವೃದ್ಧಿಹೊಂದುತ್ತಿರಲು, ಸರ್ವಾಂಗ ಸುಂದರನಾದ ಆ ಬಾಲಕನನ್ನು ನೋಡಿದ ವಿಪ್ರರು ಶೇಷನೋ, ಸೇನಾನಾಥ (ವಿಷ್ವಕ್ಸೇನ)ನೋ ಎಂದುಕೊಳ್ಳುತ್ತಿದ್ದರು.

ಆ ಬಾಲಕನು ಭೂಮಿಯಲ್ಲಿ ಹೆಜ್ಜೆಯಿಟ್ಟಕೂಡಲೇ ಕಲಿಯು ಕಣ್ಮರೆಯಾದನು; ಇದ್ದಕ್ಕಿದ್ದಂತೆಯೇ ಪಾಪವು ಪಲಾಯನಮಾಡಿತು; ಧರ್ಮವು ತನ್ನ ನಾಲ್ಕು ಪಾದಗಳಿಂದಲೂ (ಧರ್ಮವು ಗೋರೂಪದಿಂದಿರುವುದೆಂದು ಶಾಸ್ತ್ರಸಿದ್ಧವಾದ ವಿಷಯ)ಸ್ಥಿರವಾಯಿತು. ಶ್ರೀಲಕ್ಷ್ಮಣಾಚಾರ್ಯ(ರಾಮಾನುಜಾಚಾರ್ಯ)ರ ರವಿಪ್ರಕಾಶದಿಂದ ಪಾಪಾಂಧಕಾರವು ನಾಶವಾದುದರಿಂದ ಮಹಾತ್ಮರ ಹೃದಯಕಮಲಗಳು ಮತ್ತೆ ವಿಕಾಸವನ್ನು ಹೊಂದಲಾರಂಭಿಸಿದವು. ಅಜಾನುಬಾಹುವೂ, ಕಮಲನಯನನೂ, ಚಂದ್ರನಂತೆ ಧವಳನೂ, ಕಮಲದಳದಂತೆ ಕೋಮಲವಾದ ಕೈಕಾಲುಗಳುಳ್ಳವನೂ, ಮನುಷ್ಯ ಸ್ವಭಾವವನ್ನು ಜಯಿಸಿದವನೂ ಆದ ಪುತ್ರನನ್ನು ನೋಡಿ ತಂದೆಯು ಬಹುವಾಗಿ ಸಂತೋಷಪಟ್ಟನು. ಜನರೆಲ್ಲರೂ ಇಂತಹ ದಿವ್ಯಸುಂದರ ವಿಗ್ರಹವನ್ನೂ, ದಿವ್ಯ ತೇಜಸ್ಸನ್ನೂ, ಪರಿಶುದ್ಧ ಭಾವವನ್ನೂ ಕಂಡು ಆದಿಶೇಷನೆಂದೇ ಭಾವಿಸಿದರು.

ತಂದೆಯು ಕ್ರಮವಾಗಿ ಅನ್ನಪ್ರಾಶನವೇ ಮೊದಲಾದ ಸಂಸ್ಕಾರಗಳನ್ನು ನಡೆಸಿ, ಎಂಟನೆಯ ವಯಸ್ಸಿನಲ್ಲಿ ಉಪನಯನವನ್ನು ಮಾಡಿ ತಾನೇ ವೇದಗಳನ್ನು ಉಪದೇಶಿಸಿದರು. ತಕ್ಕಮಟ್ಟಿಗೆ ವಿದ್ಯಾಭ್ಯಾಸವು ನಡೆಯಲು ಹದಿನಾರನೆಯ ವಯಸ್ಸಿನಲ್ಲಿ ಯಥಾವಿಧಿಯಾಗಿ ವಿವಾಹವನ್ನು ಮಾಡಿದರು.

ಹೀಗೆ ಸುಖವಾಗಿ ಸ್ವಲ್ಪಕಾಲವು ಕಳೆಯಲಾಗಿ ತಂದೆಯಾದ ಸೋಮಯಾಜಿಯು ನಿತ್ಯಮುಕ್ತರಿಂದ ಸೇವಿಸಲ್ಪಡುವ ವೈಷ್ಣವಲೋಕವನ್ನು ಹೊಂದಿದರು. ಜ್ಞಾನಿಯಾದ ರಾಮಾನುಜರು ತಂದೆಯ ವಿಯೋಗ ದುಃಖವನ್ನು ತಡೆದು ಪಿತೃಕಾರ್ಯಗಳೆಲ್ಲವನ್ನೂ ನಡೆಸಿ, ಮಾತೆಯೊಡನೆಯೂ, ಪತ್ನಿಯೊಡನೆಯೂ ಅದೇ ನಗರದಲ್ಲಿ ವಾಸಮಾಡುತ್ತಿದ್ದರು.

ಅನಂತರ ಸಕಲಶಾಸ್ತ್ರಗಳನ್ನೂ ಅಧ್ಯಯನಮಾಡಿ ಜ್ಞಾನವನ್ನು ಸಂಪಾದಿಸಬೇಕೆಂದು ಇಚ್ಛೆಯುಂಟಾಯಿತು. ಸರಿಯಾದ ವಿದ್ವಾಂಸರು ಯಾರಿರುವರೆಂದು ವಿಚಾರಮಾಡಲು ಕಾಂಚೀ ನಗರದಲ್ಲಿ ಯಾದವಪ್ರಕಾಶರೆಂಬುವರು ಇರುವರೆಂದು ತಿಳಿಯಿತು. ತಿಳಿದ ಕೂಡಲೇ ಭೂತನಗರಿಯನ್ನು ಬಿಟ್ಟು ಕುಟುಂಬಸಹಿತರಾಗಿ ಕಾಂಚೀನಗರಕ್ಕೆ ಹೊರಟು, ಪ್ರದಿದಿನವೂ

ಯಾದವಪ್ರಕಾಶರಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀರಾಮಾನುಜಾವತಾರಾಧಿ ಕಥನವೆಂಬ ಎರಡನೆಯ ಅಧ್ಯಾಯವು ಮುಗಿದುದು.

೩

ಅನಂತರ ರಾಮಾನುಜರು ಶಾಸ್ತ್ರಪ್ರವೀಣನಾದರೂ ಸಹ ಶಾಸ್ತ್ರಾರ್ಥಗಳನ್ನು ಚಿಂತಿಸುತ್ತ ಯಾದವಪ್ರಕಾಶರ ಬಳಿಯಲ್ಲೇ ಇರುತ್ತಿದ್ದರು. ಅವರ ತೀಕ್ಷ್ಣಬುದ್ಧಿಯನ್ನೂ, ತೇಜೋರೂಪಾದಿಗಳನ್ನೂ ಕಂಡು, ಅನಂತನೇ ಇರಬಹುದೆಂದು ಭಾವಿಸಿ ಯದವಪ್ರಕಾಶರು ಸುಮ್ಮನಿದ್ದರು.

ಹೀಗಿರುತ್ತಿರಲು ಆ ದೇಶದ ರಾಜಪುತ್ರಿಯನ್ನು ಯಾವುದೋ ಒಂದು ಬ್ರಹ್ಮರಾಕ್ಷಸವು ಹಿಡಿಯಿತು. ರಾಜನ ಅಪ್ಪಣೆಯಂತೆ ಅನೇಕ ಮಾಂತ್ರಿಕರು ಬಂದರು. ಆದರೂ ಏನೂ ಪ್ರಯೋಜನವಗಲಿಲ್ಲ; ಯಾದವಪ್ರಕಾಶರನ್ನು ಕರೆಸಲು ಶಿಷ್ಯಮಂಡಲಿಯೊಡನೆ ಅವರೂ ಹೋದರು. ಆ ರಾಜನು ಯಾದವಪ್ರಕಾಶರು ಬಂದುದನ್ನು ತಿಳಿದು, ಎದುರುಗೊಂಡು ಬಂದು, ನಮಸ್ಕರಿಸಿ, ಗ್ರಹಪೀಡಿತಳಾದ ಮಗಳನ್ನು ಅವರಿಗೆ ತೋರಿಸಿದನು. ಶಿಷ್ಯ ಪರಿವೃತರಾದ ಗುರುಗಳು ಆ ರಾಜಪುತ್ರಿಯನ್ನು ನೋಡಿ, ಮಂತ್ರವನ್ನು ಜಪಿಸುತ್ತ, ಮೆಲ್ಲಮೆಲ್ಲಗೆ ಸಮೀಪಕ್ಕೆ ಹೋದರು. ಯಾವ ಮಂತ್ರದ ಸ್ಮರಣಮಾತ್ರದಿಂದಲೇ ಸಮಸ್ತವಾದ ಬ್ರಹ್ಮರಾಕ್ಷಸ, ಬೇತಾಳ, ಯಕ್ಷಭೂತಾದಿ ಗ್ರಹಗಳೆಲ್ಲವೂ ಪಲಾಯನ ಮಾಡುತ್ತಿದ್ದವೋ ಅಂತಹ ಮಂತ್ರದಿಂದ ಕನ್ಯೆಯನ್ನು ಮಂತ್ರಿಸಿದ ಕೂಡಲೇ, ಬ್ರಹ್ಮರಾಕ್ಷಸವು ಕಟಕಟನೆ ಹಲ್ಲು ಕಡಿಯುತ್ತಲೂ, ಗರ್ಜಿಸುತ್ತಲೂ, ಜಪಾಸಕ್ತರಾದ ಯಾದವಪ್ರಕಾಶರನ್ನು ಹೆದರಿಸಿತು. ಅದರಿಂದ ಯಾದವಪ್ರಕಾಶರೂ ಹೆದರಿದರು. ಹೀಗೆ ಹೆದರಿದುದನ್ನು ಕಂಡು ಆ ಬ್ರಹ್ಮರಾಕ್ಷಸವು ಅಟ್ಟಹಾಸದಿಂದ ಹೀಗೆಂದಿತು -'ನೀನು ಶಿಷ್ಯರೊಡನೆ ಏತಕ್ಕಾಗಿ ಬಂದಿರುವೆ? ಮಣಿಮಂತ್ರಾದಿಗಳಿಂದ ನೀನು ನನ್ನನ್ನು ಹೊರಡಿಸಲಾರೆ; ನನಗೆ ಹಿಂದಿನ ವೃತ್ತಾಂತಗಳೆಲ್ಲವೂ ತಿಳಿದಿದೆ. ದ್ವಿಜತ್ವವನ್ನು ಹೊಂದುವ ಯಾವ ಕರ್ಮವನ್ನು ನೀನು ಮಾಡಿರುತ್ತೀಯೆ? ನನಗೆ ಬ್ರಹ್ಮರಾಕ್ಷಸತ್ವವು ಬರಲು ನಾನೇನು ಪಾಪವನ್ನು ಮಾಡಿರುತ್ತೇನೆ? ನಿನಗೆ ತಿಳಿಯುವುದಾದರೆ ಹೇಳು'- ಈ ರೀತಿಯಾದ ಮಾತನ್ನು ಕೇಳಿ ಹೆದರಿದ ವಿಪ್ರರು ಲಜ್ಜೆಯಿಂದ ಮೌನದಿಂದಿದರು. ಮೌನದಿಂದಿರುವ ಯಾದವರನ್ನು ಕುರಿತು ಬ್ರಹ್ಮರಾಕ್ಷಸವು ಮತ್ತೆ ಗಂಭೀರವಾಗಿ ಹೇಳತೊಡಗಿತು, -'ಎಲೈ ಯಾದವನೆ, ನಿನ್ನ ಪೂರ್ವಜನ್ಮದ ವೃತ್ತಾಂತವನ್ನು ಹೇಳುವೆನು, ಕೇಳು. ಮಧುರಾಂತಕವೆಂಬ ಒಂದು ಅಗ್ರಹಾರ; ಅದರ ಪಶ್ಚಿಮದಲ್ಲಿ ಒಂದು ಸರೋವರ ; ಅದರ ದಡದಲ್ಲಿರುವ ಹುತ್ತದ ಬಳಿಯಲ್ಲಿ ನೀನು ಹೆಂಟೆಯಗೊದ್ದ (ಗೋಧಾ)ವಾಗಿದ್ದೆ. ಒಂದು ಸಲ ವೇದವೇದಾಂತ ಪಾರಂಗತನಾದ ವೈಷ್ಣವನೊಬ್ಬನು ಆ ಸರೋವರಕ್ಕೆ ಬಂದು ಸ್ನಾನಮಾಡಿ, ಅಡಿಗೆಯನ್ನು ಮಾಡಿ, ಅದನ್ನು ಪರಮಾತ್ಮನಾದ ವಿಷ್ಣುವಿಗೆ ನಿವೇದನ ಮಾಡಿ ಭಗವದೇಕಚಿತ್ತನಾಗಿ ಭಜಿಸಿದನು. ಭೋಜನವಾದ ಮೇಲೆ ಕೈಕಾಲುಗಳನ್ನು ತೊಳೆದು ಕೊಂಡು

ಉಳಿದುದನ್ನು ಹುತ್ತದ ಹತ್ತಿರವೇ ಬಿಸುಟಿದನು. ನೀನು ಹುತ್ತದಿಂದ ಹೊರಗೆ ಬಂದಾಗ ಪಾತ್ರೆಯನ್ನು ನೋಡಿ ಕುತೂಹಲದಿಂದ ಅದರಲ್ಲಿದ್ದುದೆಲ್ಲವನ್ನೂ ಭಕ್ಷಿಸಿದೆ. ಅದರ ಮಹಿಮೆಯಿಂದಲೇ ನೀನು ಈಗ ವಿಪ್ರನಾಗಿ ಹುಟ್ಟಿರುವೆ. ಆದ್ದರಿಂದ ಈಗಲೂ ಶ್ರೇಯಸ್ಸನ್ನು ಅಪೇಕ್ಷಿಸುವುದಾದರೆ ಕಾಂತಿಮತೀ ನಂದನರಾದ ರಾಮಾನುಜರನ್ನು ಆಶ್ರಯಿಸಿ ಉತ್ತಮ ಲೋಕವನ್ನು ಹೊಂದು'- ಎಂದು ಹೇಳಿ, ಮತ್ತೆ -'ಇಲ್ಲಿನವರೆಗೂ ನಿನ್ನ ಪೂರ್ವಜನ್ಮದ ವೃತಾಂತವನ್ನು ತಿಳಿಸಿದೆನು; ಈಗ ನಾನು ಬ್ರಹ್ಮರಾಕ್ಷಸನಾಗಲು ಕಾರಣವನ್ನು ಹೇಳುವೆನು, ಕೇಳು. ನಾನು ಬ್ರಾಹ್ಮಣ ವಂಶದಲ್ಲಿ ಹುಟ್ಟಿ ವೇದವೇದಾಂತ ಪಾರಂಗತನಾಗಿದ್ದೆನು. ಪತ್ನಿಯೊಡನೆ ಯಜ್ಞಕರ್ಮವನ್ನು ಆರಂಭಿಸಿದೆನು. ಮಂತ್ರಲೋಪ, ಕ್ರಿಯಾದಿಲೋಪಗಳಿಂದ ಬ್ರಹ್ಮರಾಕ್ಷಸನಾದೆನು. ಅದೇ ಮೊದಲಾಗಿ, ಸರ್ವಪ್ರಾಣಿ ಭಯಂಕರನಾಗಿ ಪರ್ವತಗಳಲ್ಲಿಯೂ, ಕಾಡುಗಳಲ್ಲಿಯೂ, ಗ್ರಾಮಗಳಲ್ಲಿಯೂ, ನಗರಗಳಲ್ಲಿಯೂ ಅಲೆಯುತ್ತ ಕಡೆಗೆ ಕಾಂಚೀನಗರವನ್ನು ತಲುಪಿದೆನು. ಇಲ್ಲಿಯ ಉಪವನದಲ್ಲಿ ವಿಹರಿಸುತ್ತಿದ್ದ ರಾಜಕುಮಾರಿಯನ್ನು ಕಂಡು ಮುಗ್ಧನಾಗಿ ಅವಳೊಡನೆ ವಿಹರಿಸುತ್ತಿರಲು, ರಾಜನು ಅನೇಕ ಮಾಂತ್ರಿಕರನ್ನು ಕರೆಸಿದನು. ಎಲ್ಲರೂ ಬಂದುನೋಡಿ, ಹೆದರಿ ಓಡಿಹೋದರು. ನೀನು ನನ್ನನ್ನು ಈ ಮನೆಯಿಂದ ಓಡಿಸಲಾರೆ. ಊಷರಕ್ಷೇತ್ರದಲ್ಲಿ ಬಿತ್ತಿದ ಬೀಜದಂತೆ ಎಲ್ಲ ಮಂತ್ರ ತಂತ್ರಗಳೂ ನನ್ನಲ್ಲಿ ನಿಷ್ಫಲವಾಗುವುವು. ನಿನ್ನ ಶಿಷ್ಯರ ಮಧ್ಯದಲ್ಲಿ ಸರ್ವಲಕ್ಷಣ ಶೋಭಿತರಾಗಿಯೂ, ರಾಮಾನುಜರೆಂದು ಪ್ರಸಿದ್ಧರಾಗಿಯೂ ಇರುವ ಪುರುಷಶ್ರೇಷ್ಠರು ತಮ್ಮ ಪಾದದಿಂದ ನನ್ನನ್ನು ಮುಟ್ಟಿ, ಶುಭಕರವಾದ ಶ್ರೀಪಾದತೀರ್ಥವನ್ನು ಕೊಟ್ಟರೆ ನನ್ನ ಮನಸ್ಸು ಬಂದ ಕಡೆ ಹೋಗುವೆನು'- ಎಂದಿತು.

ಈ ರೀತಿಯಾಗಿ ಬ್ರಹ್ಮರಾಕ್ಷಸನ ಮಾತನ್ನು ಕೇಳಿ ಸಂತುಷ್ಟನಾದ ರಾಜನು ರಾಮಾನುಜರನ್ನು ನಮಸ್ಕರಿಸಿ, ಬದ್ಧಾಂಜಲಿಪುಟನಾಗಿ, ಮಧುರವಾಗಿ -'ಎಲೈ ಮಹಾಪ್ರಾಜ್ಞರಾದ ರಾಮಾನುಜರೆ, ಈ ನನ್ನ ಕನ್ಯೆಯನ್ನು ರಕ್ಷಿಸು; ಎಲೈ ಶರಣಾಗತ ರಕ್ಷಕನೆ, ನಿಮ್ಮ ಮಹಿಮೆಯು ನನಗೆ ತಿಳಿಯದು; ಬ್ರಹ್ಮರಾಕ್ಷಸವು ತಿಳಿಸದಿದ್ದರೆ ಹೇಗೆ ತಿಳಿಯುತ್ತಿತ್ತು? ಆದುದರಿಂದ ರಕ್ಷಿಸು'- ಎಂದು ಪ್ರಾರ್ಥಿಸಿದನು.

ರಾಮಾನುಜರು ಈ ಮಾತನ್ನು ಕೇಳಿ ಬ್ರಹ್ಮರಾಕ್ಷಸನ ತಲೆಯಮೇಲೆ ಪಾದವನಿಟ್ಟು ಪಾದತೀರ್ಥವನ್ನು ಕೊಟ್ಟು 'ಇನ್ನು ಹೊರಡು' ಎನ್ನಲಾಗಿ, ಪ್ರೀತನಾದ ರಾಕ್ಷಸನು ರಾಜಪುತ್ರಿಯನ್ನು ಬಿಟ್ಟು, ತನ್ನ ಪಾಪಶರೀರವನ್ನು ತ್ಯಜಿಸಿದನು. ಅಲ್ಲದೆ ಕಾಂತಿಯುಕ್ತವಾದ ದಿವ್ಯಶರೀರವನ್ನು ಧರಿಸಿ, ವಿಮಾನದಲ್ಲಿ ಕುಳಿತು ದೇವಲೋಕಕ್ಕೆ ತೆರಳಿದನು. ಇತ್ತ ಗ್ರಹದಿಂದ ಬಿಡಲ್ಪಟ್ಟ ರಾಜಪುತ್ರಿಯು ಗ್ರಹನಿರ್ಮುಕ್ತಳಾದ ರೋಹಿಣಿಯಂತೆ ಪ್ರಕಾಶಿಸುತ್ತಿರಲು, ಸಂತುಷ್ಟನಾದ ರಾಜನು ರಾಮಾನುಜರಿಗೆ ಕನಕಾಭಿಷೇಕವನ್ನು ಮಾಡಿ, ಯಾದವಪ್ರಕಾಶರಿಗೂ ಯಥೋಚಿತವಾದ ಸತ್ಕಾರವನ್ನು ಮಾಡಿದನು.

ಯಾದವರು ಶಿಷ್ಯರೊಡನೆ ಮನೆಗೆ ಬಂದರು. ತನ್ನ ಶಿಷ್ಯನ ಗೌರವದಿಂದಲೂ ತನ್ನ ಅವಮಾನದಿಂದಲೂ ದುಃಖಿತರಾದರು. ರಾಮಾನುಜರಾದರೋ ಎಲ್ಲವನ್ನೂ ಗುರುವಿಗೆ ಒಪ್ಪಿಸಿದರು. ಅದನ್ನು ಸ್ವೀಕರಿಸಿದರೂ ಸಹ ರಾಮಾನುಜರಲ್ಲಿ ದೀರ್ಘ ಮತ್ಸರವಿಟ್ಟರು.

ರಾಮಾನುಜರ ಇಂತಹ ಅಮಾನುಷಕಾರ್ಯವನ್ನು ಕೇಳಿ, ದ್ಯುತಿಮತಿಯ (ಕಾಂತಿಮತಿಯ ಸಹೋದರಿ) ಪುತ್ರನಾದ ಗೋವಿಂದನೆಂಬುವನು ಸಹೋದರನಾದ ರಾಮಾನುಜರನ್ನು ನೋಡಲು ಮಾತೆಯ ಅಪ್ಪಣೆಯನ್ನು ಪಡೆದು ಕಾಂಚಿಗೆ ಹೊರಟನು. ಅಲ್ಲಿಗೆ ಬಂದು, ಯಾದವರ ಬಳಿಯಲ್ಲಿ ಇತರ ಸಹಪಾಠಿಗಳೊಡನೆ ಶಾಸ್ತ್ರಾಭ್ಯಾಸ ಮಾಡುತ್ತಿರುವ ರಾಮಾನುಜರನ್ನು ನೋಡಿದನು. ಸಹೋದರನು ಬಂದುದನ್ನು ಕಂಡು ರಾಮಾನುಜರು ಆನಂದದಿಂದ ಆಲಂಗಿಸಿದರು. ಅದು ಮೊದಲ್ಗೊಂಡು ಗೋವಿಂದನೂ ಸಹ ರಾಮಾನುಜರೊಡನೆ ಯಾದವರ ಬಳಿಯಲ್ಲಿಯೇ ವೇದಾಂತ ಶಾಸ್ತ್ರವನ್ನು ಅಭ್ಯಾಸಮಾಡುತ್ತಿದ್ದನು.

ಹೀಗಿರುತ್ತಿರಲು ಒಂದುದಿನ ಯಾದವರು 'ಸತ್ಯ' ಶ್ರುತಿಗೆ ಅಪಾರ್ಥವನ್ನು ಹೇಳಲು ರಾಮಾನುಜರು ಹೀಗೆಂದರು -'ವೇದಾಂತರೀತಿಯಿಂದ 'ಸತ್ಯಜ್ಞಾನಾ'-ದಿ ವಾಕ್ಯಗಳು ಬ್ರಹ್ಮನ ಗುಣಗಳನ್ನು ಹೇಳುತ್ತವೆ ; ಶ್ರುತಿವಾಕ್ಯಗಳಿಗೆ ಅಪಾರ್ಥವನ್ನು ಏತಕ್ಕೆ ಹೇಳುವಿರಿ?'.

ಈ ಮಾತನ್ನು ಕೇಳಿ ಕ್ರುದ್ಧರಾದ ಯಾದವರು ಸರ್ವಶಾಸ್ತ್ರವಿಶಾರದರಾದ ರಾಮಾನುಜರನ್ನು ಕುರಿತು -'ಶಠ, ಮೂಢ, ನೀನು ನನಗೆ ಕಲಿಸುವೆಯೋ? ನೀನು ನನಗೆ ಗುರುವೋ?-ಎಂದು ಕಲಿಮೋಹಿತರಾಗಿ ಗದರಿಸಿದರು.

ಅನಂತರ ಪ್ರಾಜ್ಞರಾದ ರಾಮಾನುಜರು ಯಾದವರ ಗುರೂಪದೇಶವನ್ನು ಬಿಟ್ಟು, ಅಭ್ಯಾಸಮಾಡಿದ ಶಾಸ್ತ್ರಗಳನ್ನು ಸ್ವಗೃಹದಲ್ಲಿಯೇ ಮನನ ಮಾಡುತ್ತಲೂ, ವೇದಾಂತ ತತ್ವಾರ್ಥಗಳನ್ನು ವಿಚಾರಮಾಡುತ್ತಲೂ ಸುಖವಾಗಿ ಇರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಜಪುತ್ರೀ ಬ್ರಹ್ಮರಾಕ್ಷಸಮೋಚನವೆಂಬ ಮೂರನೆಯ ಅಧ್ಯಾಯವು ಮುಗಿದುದು.

೪

ಮತ್ಸರಗ್ರಸ್ತರಾದ ಯಾದವರು ಒಂದು ಸಲ ತನ್ನ ಆಪ್ತ ಶಿಷ್ಯರನ್ನು ಕರೆದು-'ನಾನು ದ್ವಿಜರಲ್ಲೆಲ್ಲಾ ಶ್ರೇಷ್ಠನೆಂದೂ, ಪಂಡಿತೋತ್ತಮನೆಂದೂ, ಪಂಡಿತರೆಲ್ಲಾ ತಿಳಿದಿರುವರು. ಎಲ್ಲಾ ವಾದಗೋಷ್ಠಿಗಳಲ್ಲಿಯೂ ಎಂದೂ ನನಗೆ ಅವಮಾನವಾಗಿಲ್ಲ. ವೇದವೇದಾಂತ ಪಾರಂಗತರು ನನ್ನನ್ನು ಗೌರವಿಸುವರು. ಹೀಗಿರುವಲ್ಲಿ ರಾಮಾನುಜನ ಎದುರಿನಲ್ಲಿ ರಾಕ್ಷಸವು ನನ್ನನ್ನು ಅವಮಾನಮಾಡಿತೆಂದರೆ ಇದೇನು ಕೇಡು? ನನ್ನ ಎದುರನಲ್ಲಿಯೇ ಅಲ್ಪವಿದ್ಯನಾದ ನನ್ನ ಶಿಷ್ಯನಿಗೆ ಗೌರವ, ನನಗೆ ಅವಮಾನವೆಂದರೆ ಹೇಗೆ ಸಹಿಸಲಿ? ನನ್ನಲ್ಲಿಯೇ ಸಮಸ್ತ ಗ್ರಂಥಗಳನ್ನೂ ಅಧ್ಯಯನ ಮಾಡಿ, ಶ್ರುತಿಗೆ ಅಪಾರ್ಥ ಮಾಡಿದೆನೆಂದು ನನ್ನನ್ನೇ ದಿನವೂ ರಾಮಾನುಜನು ದೂಷಿಸುತ್ತಿರುವನಲ್ಲವೇ? ಆದುದರಿಂದ ನಿಜವಾಗಿಯೂ ಇವನು ನನ್ನ ಶತ್ರುವಾಗಿರುವನು. ಇವನ ಬುದ್ಧಿಯಲ್ಲಿ ಬೃಹಸ್ಪತಿಗೆ ಸಮನಾಗಿಯೂ, ತೇಜಸ್ಸಿನಲ್ಲಿ ಸೂರ್ಯನಿಗೆ ಸದೃಶನಾಗಿಯೂ ಅದ್ವೈತ ಮತವನ್ನು ಖಂಡಿಸುವುದಕ್ಕಾಗಿಯೇ ಕೇಶವಸೋಮಯಾಜಿಯ ಮನೆಯಲ್ಲಿ ಹುಟ್ಟಿದಂತೆ ಕಾಣುತ್ತದೆ. ನನ್ನ ಶತ್ರುವಾದ ಈ

ವಿಪ್ರನನ್ನು ಹೇಗೆ ಕೊಂದು ಹಾಕಲಿ?'- ಎಂದು ಆಲೋಚಿಸಿದರು. ಇದನ್ನು ಕೇಳಿ ಬಾಲಕರು 'ಗುರುಗಳೇ, ತಾವೇನು ಚಿಂತಿಸಬೇಡಿ; ನಮ್ಮಂಥ ಪ್ರಿಯಶಿಷ್ಯರಿರುವಾಗ ತಾವೇಕೆ ಚಿಂತಿಸಬೇಕು? ಯಾವುದಾದರೊಂದು ಉಪಾಯದಿಂದ ಆ ಬಾಲಕನನ್ನು ನಾಶ ಮಾಡೋಣ' ಎಂದು ಹೇಳಲು, ಹಿತವೂ ಅಹಿತವೂ ಆದ ಬಾಲಕರ ಮಾತನ್ನು ಕೇಳಿ ಯಾದವರು ಮತ್ತೆ ಇಂತೆಂದರು -'ರಾಮಾನುಜನ ವಧೆಯ ಉಪಾಯವನ್ನು ಯೋಚಿಸಿರುವೆನು. ನಾವೆಲ್ಲರೂ ಗಂಗಾಯಾತ್ರೆಗಾಗಿ ಹೊರಡೋಣ. ಉಪಾಯದಿಂದ ಶತ್ರುವಾದ ರಾಮಾನುಜನನ್ನು ಕರೆದುಕೊಂಡುಹೋಗಿ ಸಂಗಮದಲ್ಲಿ ಮುಳುಗಿಸೋಣ. ಇದರಿಂದ ನಮಗೆ ಬ್ರಹ್ಮಹತ್ಯೆಯ ಪಾತಕವೂ ಇರುವುದಿಲ್ಲ'. ಇದನ್ನು ಕೇಳಿದ ಬಾಲಕರು, ರಾಕ್ಷಸರು ರಾವಣನನ್ನು ಹೊಗಳಿದಂತೆ ಹೊಗಳಿದರು.

ಅನಂತರ ಶಿಷ್ಯರ ಮೂಲಕ ಬರಮಾಡಲ್ಪಟ್ಟ ರಾಮಾನುಜರನ್ನು ಕುರಿತು ಯಾದವರು -'ಮಹಾಪ್ರಾಜ್ಞನಾದ ರಾಮಾನುಜನೆ, ಏಕೆ ನೀನು ಬರುವುದೇ ಇಲ್ಲ? ಶಿಷ್ಯನ ಭಾವನೆಯಿಂದ ನಿನ್ನನ್ನು ಶಿಕ್ಷಿಸಿದುದು ನಿನಗೆ ಕೋಪವನ್ನುಂಟು ಮಾಡಿತೆ? ಎಲ್ಲಾ ಶಿಷ್ಯರಿಗಿಂತಲೂ ನಿನ್ನಲ್ಲಿಯೇ ನನಗೆ ಹೆಚ್ಚುಪ್ರೀತಿಯಿರುವುದು. ನಿನಗೆ ಸಮಾನನಾದ ಪುರುಷನು ಲೋಕದಲ್ಲಿ ಯಾರೂ ಇಲ್ಲ, ಪರ್ವತಗಳಲ್ಲಿ ಮೇರುವಿನಂತೆಯೂ, ಧೇನುಗಳಲ್ಲಿ ಕಾಮಧೇನುವಿನಂತೆಯೂ ನೀನು ನಿಶ್ಚಯವಾಗಿಯೂ ಸರ್ವಲೋಕಗಳಲ್ಲಿಯೂ ಪ್ರಸಿದ್ಧನಾಗುವೆ. ಎಲೈ ರಾಮಾನುಜ, ನನ್ನ ಅನುಗ್ರಹದಿಂದ ನೀನು ಪೂರ್ಣವಿದ್ಯಾವಂತನಾಗು; ನೀನು ಹತ್ತಿರವಿಲ್ಲದಿದ್ದರೆ ನನಗೆ ಬಹುವ್ಯಥೆಯಾಗುವುದು'- ಎಂದು ಮೃದುಮಧುರವಾಗಿ ನುಡಿಯಲು, ವಿಷಮಿಶ್ರವಾದ ಅಮೃತದಂತಿರುವ ಆ ಮಾತನ್ನು ಕೇಳಿದ ರಾಮಾನುಜರು ಸಂತುಷ್ಟರಾಗಿ, ಅಂದಿನಿಂದ ಅವರ ಬಳಿಯಲ್ಲಿಯೇ ಶಾಸ್ತ್ರಾಭ್ಯಾಸಮಾಡುತ್ತಿದ್ದರು.

ಅನಂತರ ವಂಚಕರಾದ ಯಾದವರು ರಾಮಾನುಜರನ್ನು ಕುರಿತು -'ಪ್ರಯಾಗದಲ್ಲಿ ಮಾಘಸ್ನಾನಮಾಡಿದರೆ ಸ್ವರ್ಗವು ಲಭಿಸುವುದೆಂದು ಪ್ರಸಿದ್ಧವಲ್ಲವೆ? ಆದುದರಿಂದ ಶಿಷ್ಯರೊಡನೆಯೇ ಹೋಗೋಣವೆಂದು ನಾನು ಯೋಚಿಸಿರುತ್ತೇನೆ. ನಿನಗೂ ಇಷ್ಟವಿರುವುದಾದರೆ ಬರಬಹುದು'- ಎನ್ನಲು, ರಾಮಾನುಜರು ಮಾತೆಯ ಅಪ್ಪಣೆಯನ್ನು ಪಡೆದು ಯಾದವರೊಡನೆ ಗಂಗಾಯಾತ್ರೆಗೆ ಹೊರಟರು.

ಗೋವಿಂದನು ಯಾದವರ ಕೆಲಸಗಳಿಂದ ಅವರ ಕಪಟವನ್ನು ತಿಳಿದು ರಾಮಾನುಜರಿಗೆ ತಿಳಿಸಲು ಸಮಯ ಕಾಯುತ್ತಿದ್ದನು. ಅದರಂತೆ, ಎಲ್ಲರೂ ವಿಂಧ್ಯಮಾರ್ಗದಿಂದ ಪ್ರಯಾಣ ಮಾಡುತ್ತಿರಲು, ಮೃಗಗಳಿಂದ ತುಂಬಿ ಗಹನವಾದ ಅರಣ್ಯದಲ್ಲಿ ರಾಮಾನುಜರನ್ನು ಬಿಟ್ಟು ಯಾದವರು ಶಿಷ್ಯರೊಡನೆ ಮುಂದೆ ಹೋಗುತ್ತಿದ್ದರು ಈ ಸಮಯವನ್ನು ಸಾಧಿಸಿ ಭ್ರಾತೃವತ್ಸಲನಾದ ಗೋವಿಂದನು ರಾಮಾನುಜರನ್ನು ಕಂಡು 'ಗಂಗಾ ಸ್ನಾನದ ನೆಪದಿಂದ ಗುರುವು ನಿಮ್ಮನ್ನು ವಧಿಸಬೇಕೆಂದಿರುವರು'-ಎಂದು ತಿಳಿಸಿ, ಗುರುವಿನ ಹೆದರಿಕೆಯಿಂದ ಬೇಗ ಗುಂಪಿಗೆ ಹೋಗಿ ಸೇರಿಕೊಂಡನು. ರಾಮಾನುಜರು ಈ ಮಾತನ್ನು ಕೇಳಿ ಮುಂದೆ ಹೋಗದೆ ಮರದ ಕೆಳಗೆ ಕುಳಿತುಬಿಟ್ಟರು.

ಅಷ್ಟರಲ್ಲಿ ವಿಪರೀತವಾಗಿ ಮಳೆಯು ಬರಲು ಎಲ್ಲರೂ ನೆನೆದು ಹೋದರು.

ಮಳೆಯು ನಿಂತಮೇಲೆ ಯಾದವರು ಗೋವಿಂದನನ್ನು 'ರಾಮಾನುಜನೆಲ್ಲಿ? ನೀನು ಒಬ್ಬನೇ ಏತಕ್ಕೆ ಬಂದೆ? ಅವನಿಲ್ಲದೆ ನೀನು ಬಂದುದಾದರು ಏತಕ್ಕೆ?- ಎಂದು ಕೇಳಲು, ಗೋವಿಂದನು -'ನಾನು ಅದನ್ನೇ ವಿಜ್ಞಾಪಿಸಿಕೊಳ್ಳಬೇಕೆಂದಿದ್ದೆನು. ಅವರೆಲ್ಲಾದರೂ ಮುಂದೆ ಹೊರಟು ಹೋದರೋ? ಅಥವ ಹಿಂದೆ ಉಳಿದುಬಿಟ್ಟಿರುವರೋ ತಿಳಿಯದು'- ಎಂದನು.

ಅನಂತರ ಯಾದವರು ಶಿಷ್ಯರನ್ನು ಕರೆದು -'ಎಲ್ಲರೂ ರಾಮಾನುಜನನ್ನು ಹುಡುಕಿಕೊಂಡು ಬನ್ನಿರಿ'- ಎಂದು ಹೇಳಲು, ಅವರೆಲ್ಲರೂ ಹುಡುಕಿ 'ಈ ಘೋರಾರಣ್ಯದಲ್ಲಿ, ಈ ಗಾಢಾಂಧಕಾರದಲ್ಲಿ ಎಷ್ಟು ಹುಡುಕಿದರೂ ರಾಮಾನುಜರು ನಮಗೆಲ್ಲಿಯೂ ಕಾಣಿಸಲಿಲ್ಲ'- ಎಂದು ತಿಳಿಸಲು, ಯಾದವರು ಗಂಗಾಯಾತ್ರೆಯ ಫಲವು ಇಲ್ಲಿಯೇ ಲಭಿಸಿತೆಂದು ಮನಸ್ಸಿನಲ್ಲಿ ಸಂತೋಷಪಟ್ಟರೂ ಸಹ, ಗೋವಿಂದನ ಮೆಚ್ಚಿಗೆಗಾಗಿ ದುಃಖವನ್ನು ನಟಿಸುತ್ತ ಕೊನೆಗೆ ನಿಶ್ಚಿಂತರಾಗಿ ನಿದ್ರಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯಾದವಪ್ರಕಾಶರ ಗಂಗಾಯಾತ್ರೆಯಲ್ಲಿ ವಿಂಧ್ಯಾರಣ್ಯದಲ್ಲಿ ರಾಮಾನುಜವಿಸರ್ಜನವೆಂಬ ನಾಲ್ಕನೆಯ ಅಧ್ಯಾಯವು ಮುಗಿದುದು.

೫

ಅನಂತರ ಪ್ರಾಜ್ಞರಾದ ರಾಮಾನುಜರು ನಿರ್ಮಾನುಷವಾದ ಆ ಅರಣ್ಯದಲ್ಲಿ ದಿಕ್ಕುತೋರದೆ ಅನನ್ಯಭಾವದಿಂದ ಶ್ರೀಕೇಶವನನ್ನು ಸ್ಮರಿಸಿದರು. ಭಕ್ತಪರಾಧೀನನಾಗಿಯೂ, ಶ್ರೀಹಸ್ತಿಗಿರಿನಾಯಕನೂ, ಶರಣಾಗತಸಂರಕ್ಷಕನೂ, ಶ್ರಿಯಃಪತಿಯೂ ಆದ ದೇವರಾಜನು ಧನುರ್ಬಾಣಗಳನ್ನು ಧರಿಸಿದವನಾಗಿಯೂ, ಪಾದುಕೆಗಳನ್ನು ಪಾದಗಳಲ್ಲಿ ಇಟ್ಟುಕೊಂಡವನಾಗಿಯೂ, ಪೀತಾಂಬರಧಾರಿಯಾಗಿಯೂ ಶ್ರೀದೇವಿಯೊಡನೆ ವ್ಯಾಧದಂಪತಿಗಳ ವೇಷದಿಂದ ರಾಮಾನುಜರ ಹತ್ತಿರಕ್ಕೆ ಬಂದನು. ರಾಮಾನುಜರು ಅವನನ್ನು ನೋಡಿ ಆಶ್ಚರ್ಯದಿಂದ 'ನೀನು ಯಾರು? ಈ ಮಹಾರಣ್ಯದಲ್ಲಿ ಸ್ತ್ರೀಯೊಡನೆ ಏಕೆ ಸಂಚರಿಸುತ್ತಿರುವೆ? ಇಲ್ಲಿಗೆ ಬಂದ ಕಾರಣ ಏನು?'- ಎಂದು ಕೇಳಲಾಗಿ ವ್ಯಾಧರೂಪಿಯಾದ ಪರಮಪುರುಷನು ಹೀಗೆಂದನು -'ಎಲೈ ವಿಪ್ರಶ್ರೇಷ್ಠ, ನಾನು ಸತ್ಯವ್ರತ ಕ್ಷೇತ್ರಕ್ಕೆ (ಕಾಂಚಿ) ಹೋಗುತ್ತಿದ್ದೇನೆ. ನೀನು ಸಿಂಹ-ವ್ಯಾಘ್ರಾದಿ ದುಷ್ಟಜಂತುಗಳಿಂದ ಕೂಡಿದ ಈ ಘೋರಾರಣ್ಯದಲ್ಲಿ ಅಸಹಾಯನಾಗಿ ಏಕೆ ತಿರುಗುತ್ತಿರುವೆ? ನಿನ್ನ ದೇಶ ಯಾವುದು? ಎಲ್ಲಿಗೆ ಹೋಗಬೇಕೆಂದಿರುವೆ? ವ್ಯಾದನ ಈ ಮಾತನ್ನು ಕೇಳಿ ಹೃಷ್ಟರಾದ ರಾಮಾನುಜರು 'ನಾನು ಪ್ರಯಾಗಕ್ಕೆ ಹೋಗಬೇಕೆಂದು ಕಾಂಚಿಯಿಂದ ಹೊರಟೆನು. ಯಾವುದೋ ಕಾರಣದಿಂದ ಅಸಹಾಯನಾಗಿ ವಿಜನವಾದ ಈ ಅರಣ್ಯದಲ್ಲಿ ಉಳಿದೆನು. ಮತ್ತೆ ಕಾಂಚಿಗೆ ಹಿಂತಿರುಗಬೇಕೆಂದು ಇಚ್ಛಿಸುತ್ತಿರುವೆನಾದರೂ ದಿಕ್ಕು ತೋರದಿರುವುದು'- ಎಂದರು. ಈ ಮಾತನ್ನು ಕೇಳಿ ವ್ಯಾಧರೂಪಿಯಾದ ಹರಿಯು ರಾಮಾನುಜರನ್ನು ಕರೆದುಕೊಂಡು ಕಾಂಚಿಯ ಕಡೆಗೆ ಹೊರಟನು. ಸ್ವಲ್ಪದೂರ ಪ್ರಯಾಣಮಾಡಲು ಸೂರ್ಯನು ಅಸ್ತಂಗತನಾದನು.

ಆ ರಾತ್ರಿಯಲ್ಲಿ ವ್ಯಾಧದಂಪತಿಗಳು ಒಂದು ಮರದ ಕೆಳಗೆ ಮಲಗಿದರು. ರಾಮಾನುಜರೂ ಸಹ ಅವರ ಸಮೀಪದಲ್ಲಿಯೇ ಇದ್ದರು. ಸ್ವಲ್ಪ ಹೊತ್ತಿನ ಮೇಲೆ ವ್ಯಾಧನ ಪತ್ನಿಯು 'ನಾಥ, ನನಗೆ ಬಹಳ ಬಾಯಾರಿಕೆಯಾಗುತ್ತಿದೆ. ಎಲ್ಲಿಯಾದರೂ ನೀರನ್ನು ತಂದು ಕೊಡು'- ಎಂದಳು. ಪತ್ನಿಯ ಮಾತನ್ನು ಕೇಳಿ -'ಎಲೈ ಚಾರುಹಾಸಿನಿ, ಹತ್ತಿರದಲ್ಲಿಯೇ ಸಜ್ಜನರ ಚಿತ್ತದಂತೆ ನಿರ್ಮಲವಾದ ನೀರೇನೋ ಇರುವುದು. ಆದರೆ ಈ ವನಪ್ರದೇಶವು ಬಹು ಗಹನವಾದುದರಿಂದಲೂ, ಕತ್ತಲು ಕವಿದಿರುವುದರಿಂದಲೂ ಈಗ ನನ್ನಿಂದ ತರಲು ಸಾಧ್ಯವಿಲ್ಲ'- ಎಂದನು. ರಾಮಾನುಜರು ಈ ಮಾತನ್ನು ಕೇಳಿ ವ್ಯಾಧನನ್ನು ಕುರಿತು-'ಈ ರೂಪದಿಂದ ನನ್ನ ಸಹಾಯಕ್ಕಾಗಿ ಲೋಕದಂಪತಿಗಳೇ ಬಂದಿರಬೇಕೆಂದು ನಾನು ನಿಶ್ಚಯಿಸಿದ್ದೇನೆ. ಆದರೂ ಈಗಲೇ ನೀರನ್ನು ತಂದುಕೊಡಲು ಅಸಮರ್ಥನಾಗಿರುವುದರಿಂದ ಸ್ವಲ್ಪ ಬೆಳಕಾದಮೇಲಾದರೂ ತಂದುಕೊಡುವೆನು'- ಎಂದು ಹೇಳಿ ಸುಮ್ಮನಾದರು.

ಬೆಳಕಾಯಿತು. ಕೂಡಲೇ ವ್ಯಾಧರೂಪಿಯಾದ ಹರಿಯು -'ಎಲೈ ಪುರುಷನೆ, ನನಗೆ ನೀರನ್ನು ತಂದುಕೊಡುವೆಯೆಂದು ರಾತ್ರಿಹೇಳಿದ್ದೆಯಷ್ಟೆ; ಇದೋ ಸಮೀಪದಲ್ಲಿಯೇ ಭಾವಿಯಿರುವುದು; ನೀರೂ ಸ್ವಚ್ಛವಾಗಿರುವುದು. ಬೇಗ ಕೈಯಿಂದಲೇ ನಮಗೆ ನೀರನ್ನು ತಂದುಕೊಡು' ಎಂದು ಹೇಳಿದನು. ಈ ಮಾತನ್ನು ಕೇಳಿ ರಾಮಾನುಜರು ಶೀಘ್ರದಲ್ಲಿಯೇ ಭಕ್ತಿಪೂರ್ವಕವಾಗಿ ನೀರನ್ನು ತಂದುಕೊಟ್ಟರು. ಹೀಗೆ ಮೂರು ಸಲ ನೀರನ್ನು ತಂದುಕೊಟ್ಟು ನಾಲ್ಕನೆಯ ಸಾರಿ ನೀರನ್ನು ತರುವ ವೇಳೆಗೆ ವ್ಯಾಧದಂಪತಿಗಳು ಅಲ್ಲೆಲ್ಲೂ ಕಾಣಿಸಲಿಲ್ಲ. ಚಿಂತೆಯಿಂದ ಸುತ್ತಲೂ ನೋಡುತ್ತಿರಲು, ಮರಳಿನ ತೀರವುಳ್ಳ ನದಿಯೂ, ಸಲ್ಪದೂರದಲ್ಲೇ ರಸ್ತೆಯೂ, ಕೆಲವು ಹಳ್ಳಿಗಳೂ, ಅದಕ್ಕೂ ಮುಂದೆ ನಗರವೂ ಕಂಡಿತು. ಇದನ್ನು ನೋಡಿ ರಾಮಾನುಜರಿಗೆ ಬಹಳ ಆಶ್ಚರ್ಯವಾಯಿತು. ಸ್ವಲ್ಪಹೊತ್ತಿನಲ್ಲಿ ಕೆಲವು ಜನರು ಅಲ್ಲಿಗೆ ಬರಲು ಇದು ಯಾವಪ್ರದೇಶ' ಎಂದು ಕೇಳಿದರು. 'ಇದು ಭುಕ್ತಿ ಮುಕ್ತಿಪ್ರದವಾದ ಸತ್ಯವ್ರತ ಕ್ಷೇತ್ರವು. ನೋಡು, ಮುಂದೆಯೇ ನದಿಯೂ, ಉಪವನಗಳೂ, ಗೋಪುರಗಳೂ ಪ್ರಕಾಶಿಸುತ್ತಿರುವುವು'- ಎಂದು ಜನರೆನ್ನಲು, ಮತ್ತೂ ಆಶ್ಚರ್ಯಗೊಂಡ ಪ್ರಾಜ್ಞರಾದ ರಾಮಾನುಜರು -'ಇದು ಪರಮಾತ್ಮನಾದ ಹಸ್ತಿಗಿರೀಶನ ಮಹಿಮೆ ಎಂದು ತಿಳಿದುಕೊಂಡರು.

ಅನಂತರ ಮನೆಗೆ ಹೋಗಿ, ನಡೆದುದೆಲ್ಲವನ್ನೂ ತಾಯಿಗೆ ಸಂತೋಷದಿಂದ ತಿಳಿಸಿದರು. ಕಾಂಚೀನಗರದ ಜನರು ರಾಮಾನುಜರು ಬಂದುದನ್ನು ಕಂಡು, ನಡೆದ ವಿಚಾರವನ್ನು ಕೇಳಿ, ಅವರಿಗೆ ಪುನರ್ಜನನ್ಮವುಂಟಾಯಿತೆಂದು- ಸಂತೋಷಪಟ್ಟರು.

ಕಾಂತಿಮತಿಯು ಮಗನನ್ನು ನೋಡಿ,'ವತ್ಸ , ನಿನಗೆ ಒಂದು ಹಿತವನ್ನು ಹೇಳುವೆನು, ಕೇಳು. ಈ ಸತ್ಯವ್ರತ ಕ್ಷೇತ್ರದಲ್ಲಿ ಚತುರ್ಥಕುಲೋತ್ಪನ್ನರೂ, ಶಬರ್ಯಂಶದಿಂದ ಹುಟ್ಟಿದವರೂ, ಶಮದಮಾದಿ ಗುಣಗಳಿಂದ ಕೂಡಿದವರೂ, ಯಾವಾಗಲೂ ಹರಿ ಪರಾಯಣರೂ, ನಿತ್ಯವೂ ವರದರಾಜನ ಕೈಂಕರ್ಯಾಸಕ್ತರೂ, ತತ್ಪದಪಂಕಜಧ್ಯಾನವನ್ನುಳಿದು ಮತ್ತೆ ಯಾವುದನ್ನೂ ಕಾಣದವರೂ ಆದ ಕಾಂಚೀಪೂರ್ಣರೆಂದು ಪ್ರಸಿದ್ಧರಾದ ಪುರುಷನೋರ್ವನಿರುವರು. ಅವರು ಸರ್ವಾಂತರ್ಯಾಮಿಯಾದ ಭಗವಂತನ ಅಂತರಂಗ ಭಕ್ತರಾಗಿರುವರು. ಅವರಿಗೆ ಮಾರ್ಗದಲ್ಲಿ ನಡೆದ ವೃತಾಂತವನ್ನು ತಿಳಿಸು ಎಂದು ಹೇಳಲಾಗಿ,

ರಾಮಾನುಜರು ಕಾಂಚೀಪೂರ್ಣರ ಮನೆಗೆ ಹೋಗಿ ನಮ್ರತೆಯಿಂದ ನಡೆದುದೆಲ್ಲವನ್ನೂ ತಿಳಿಸಿದರು. ಅದನ್ನು ಕೇಳಿ ಕಾಂಚೀಪೂರ್ಣರು -'ಎಲೈ ರಾಮಾನುಜ, ನಿನ್ನಲ್ಲಿ ಭಗವಂತನು ನಿರ್ವ್ಯಾಜವಾದ ಕರುಣೆಯಿಟ್ಟಿರುವನು. ಆದ್ದರಿಂದಲೇ ನೀನು ಆಪತ್ತಿನಿಂದ ಮುಕ್ತನಾದೆ. ನಿನ್ನಿಂದ ತರಲ್ಪಟ್ಟ ನೀರನ್ನು ಕುಡಿಯಬೇಕೆಂದು ಹರಿಯು ಶ್ರೀದೇವಿಯೊಡನೆ ವ್ಯಾದವೇಷದಿಂದ ಬಂದು, ನಿನ್ನನ್ನು ಕೇಳಿ ನೀರನ್ನು ಕುಡಿದು ಮರೆಯಾದನು. ಆದುದರಿಂದ ನೀನು ಪ್ರತಿದಿನವೂ ಆ ಕೂಪದಿಂದ ಭಕ್ತಿಯಿಂದ ನೀರನ್ನು ತಂದು ಭಗವಂತನಾದ ದೇವರಾಜನಿಗೆ ಸಮರ್ಪಿಸು'- ಎಂದು ಸೂಚಿಸಿದರು. ಅದನ್ನು ಕೇಳಿ ಬಹು ಸಂತುಷ್ಟರಾದ ರಾಮಾನುಜರು -'ಎಲೈ ಭಕ್ತಾಗ್ರಣಿಯೇ, ಇದೋ ನಿನ್ನ ಮಾತಿನಂತೆ ನಡೆಯುವೆನು, ಸಂಶಯವಿಲ್ಲ. ಎಲೈ ಕರುಣಾನಿಧಿಯೇ, ಯಾವಾಗಲೂ ಬ್ರಹ್ಮಾದಿಗಳೂ ಕೂಡ ವೇದಾಂತಾದಿ ಶಾಸ್ತ್ರಗಳಿಂದ ಯಾವ ಪರಮಾತ್ಮನನ್ನು ಹುಡುಕುತ್ತಿರುವರೋ ಅಂತಹ ವರದರಾಜನ ಅಂತರಂಗ ಭಕ್ತನಾದ ನಿನ್ನ ಮಾತನ್ನು ಬುದ್ಧಿವಂತನಾದ ಯಾವನು ತಾನೆ ನಡೆಸಲಾರನು?'- ಎಂದು ಹೇಳಿ ಕಾಂಚೀಪೂರ್ಣರು ತನ್ನ ಹಿತೈಷಿಯೆಂದು ತಿಳಿದು, ಮನೆಗೆ ಹೋಗಿ, ಎಲ್ಲವನ್ನೂ ತಾಯಿಗೆ ತಿಳಿಸಿ, ಪ್ರತಿನಿತ್ಯವೂ ಶಾಲಕೂಪದಿಂದ ಸುವರ್ಣಕುಂಭದಲ್ಲಿ ನೀರನ್ನು ತಂದು, ಪರಮಾತ್ಮನ ಪದಪಂಕಜವನ್ನು ಸ್ಮರಿಸುತ್ತ ನಾಗಾಚಲ ನಿವಾಸಿಯೂ, ನಿತ್ಯನೂ, ಅಪ್ರಮೇಯನೂ, ಪರಮಾತ್ಮನೂ ಆದ ವರದರಾಜನಿಗೆ ಸಮರ್ಪಿಸುತ್ತಿದ್ದರು. ಈ ರೀತಿಯಾಗಿ, ರಾಮಾನುಜರು ದುಸ್ಸಹವಾಸವನ್ನು ಬಿಟ್ಟು, ಆಪ್ತವಚನದಿಂದ ಸತ್ಸಹವಾಸವನ್ನು ಹೊಂದಿ, ಅನವರತವೂ ಹಸ್ತಿಗಿರೀಶನ ಕೈಂಕರ್ಯಮಗ್ನರಾಗಿ ಪ್ರಕಾಶಿಸುತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶಾಲಕೂಪಜಲ ಸಮರ್ಪಣವೆಂಬ ಐದನೆಯ ಅಧ್ಯಾಯವು ಮುಗಿದುದು.

## ೬

ಅನಂತರ ರಾಮಾನುಜರು ಕಾಂಚೀಪುರದಲ್ಲಿ ಸರ್ವಜನಪ್ರಸಿದ್ಧರಾಗಿ ವೈಕುಂಠದಲ್ಲಿ ಆದಿಶೇಷನಂತೆ ಶ್ರೀವಿಷ್ಣುಕೈಂಕರ್ಯತತ್ಪರರಾಗಿರುತ್ತಿದ್ದರು.

ಈ ವೇಳೆಗೆ ಶ್ರೀರಂಗದಲ್ಲಿ ಪಂಚಸಂಸ್ಕಾರ ಸಂಸ್ಕೃತರೂ, ಪರವಾದಿ ಭಯಂಕರರೂ, ಶೀಲಾದಿಗುಣಯುತರೂ, ಸಿಂಹಾಸನಾಂಶ ಸಂಭೂತರೂ, ವೇದವೇದಾಂತ ಪಾರಂಗತರೂ, ಆದ ಯಾಮುನಾಚಾರ್ಯರು ಸಂನ್ಯಾಸಾಶ್ರಮವನ್ನು ಆಶ್ರಯಿಸಿದರು. ಇವರು ಶರಣಾಗತರಕ್ಷಕರೂ ಶ್ರೀಮದ್ವೈಷ್ಣವಸಿದ್ಧಾಂತ ಪಾಲಕರೂ ಆದರು.

ಒಂದು ಸಾರಿ ಇವರು ಶಠಕೋಪ (ನಮ್ಮಾಳ್ವಾರ್ರವರ)ರ ಗ್ರಂಥವನ್ನು ನೋಡಿ ಧ್ಯಾನಾಸಕ್ತರಾದರು. ಸ್ವಲ್ಪ ಹೊತ್ತಿನಲ್ಲಿ ತಮ್ಮ ಶಿಷ್ಯರನ್ನು ಕರೆದು -'ಎಲೈ ಶಿಷ್ಯೋತ್ತಮರೆ, ಮಹಾಪ್ರಾಜ್ಞನಾಗಿಯೂ, ಸುಲಕ್ಷಣನೂ, ವಿಷ್ಣುಭಕ್ತನೂ, ಶಮಾದಿ ಗುಣವಂತನೂ, ಸರ್ವಶಾಸ್ತ್ರತತ್ವಜ್ಞನೂ, ಪ್ರಿಯವಾದಿಯೂ, ಸದಾಚಾರನಿಷ್ಠನೂ, ಸಜ್ಜನಪೂಜಕನೂ ಆದ ಪುರುಷನನ್ನು ನೀವು ಎಲ್ಲಾ ದೇಶಗಳಲ್ಲಿಯೂ ಹುಡುಕಿ ನನಗೆ ತಿಳಿಸಿರಿ'- ಎಂದು ಹೇಳಿದರು.

ಈ ಮಾತನ್ನು ಕೇಳಿದ ಶಿಷ್ಯರು ದೇಶದೇಶಗಳಲ್ಲಿ ಹುಡುಕುತ್ತ ಕಡೆಗೆ ಕಾಂಚೀಪುರಿಗೆ ಬಂದರು. ಅಲ್ಲಿ ರಾಮಾನುಜರನ್ನು ಕಂಡು, ಅವರ ವೃತ್ತಾಂತವನ್ನೂ ಕೇಳಿ ತಿಳಿದು, ಶ್ರೀರಂಗಕ್ಕೆ ಹೋಗಿ ಯಾಮುನಾಚಾರ್ಯರಿಗೆ ತಿಳಿಸಿದರು. ಆಚಾರ್ಯರು ಶಿಷ್ಯರ ಮುಖದಿಂದ ಈ ವೃತ್ತಾಂತವನ್ನು ಕೇಳಿ ರಾಮಾನುಜರನ್ನು ನೋಡಬೇಕೆಂದು ಕಾತುರರಾದರು. ಆದರೆ ಆಕಸ್ಮಿಕವಾದ ವ್ಯಾಧಿಯಿಂದ ಹೋಗಲು ಸಾಧ್ಯವಾಗಲಿಲ್ಲ.

ಇತ್ತ ಯಾದವರು ಗಂಗೆಗೆ ಹೋಗಿ ಶಿಷ್ಯರೊಡನೆ ಗಂಗೆಯಲ್ಲಿ ಮಾಘಸ್ನಾನ ಮಾಡುತ್ತಿದ್ದರು. ಎಲ್ಲರೂ ಹೀಗೆ ಸ್ನಾನಮಾಡುತ್ತಿರಲು ನದಿಯಲ್ಲಿ ಗೋವಿಂದನ ಕೈಯಲ್ಲಿ ಒಂದು ಶಿವಲಿಂಗವು ಕಾಣಿಸಿತು. ಅವನು ಆಶ್ಚರ್ಯದಿಂದ ಅದನ್ನು ಗುರುವಿಗೆ ತೋರಿಸಿದನು. ಯಾದವರು ಅದನ್ನು ನೋಡಿ 'ಗೋವಿಂದ, ಕರುಣಾಕರನಾದ ವಿಶ್ವನಾಥನು ಮಾಘಸ್ನಾನದಿಂದ ನಿನ್ನಲ್ಲಿ ಪ್ರಸನ್ನನಾಗಿರುವನು' ಎಂದು ಹೇಳಿ, ಮಾಘಮಾಸ ಮುಗಿಯುವವರೆಗೂ ಗಂಗಾತೀರದಲ್ಲಿಯೇ ಇದ್ದು, ಪವಿತ್ರ ತೀರ್ಥಾಟನೆ ಮಾಡಿ ಮತ್ತೆ ಕಾಂಚೀಪುರಕ್ಕೆ ಹಿಂತಿರುಗಿದರು. ಗೋವಿಂದನೂ ಸಹ ಅವರೊಡನೆ ಕಾಂಚಿಯವರೆಗೆ ಬಂದು, ಅವರ ಅಪ್ಪಣೆಯಂತೆ ತನ್ನ ಊರಾದ ಶ್ರೀಮಂಗಳ ಗ್ರಾಮಕ್ಕೆ ಹೋಗಿ, ತನಗೆ ಗಂಗಾನದಿಯಲ್ಲಿ ಸಿಕ್ಕಿದ ಶಿವಲಿಂಗವನ್ನು ಅಲ್ಲಿ ಪ್ರತಿಷ್ಠೆಮಾಡಿ, ಭಸ್ಮಾದಿಗಳನ್ನು ಧರಿಸಿ, ಕಾಳಹಸ್ತಿಗೆ ಹೋಗಿ ಉಮಾಪತಿಯಾದ ಶಿವನನ್ನು ನಿತ್ಯವೂ ಪೂಜಿಸುತ್ತಾ ಅಲ್ಲಿಯೇ ಸುಖವಾಗಿರುತ್ತಿದ್ದನು.

ಇತ್ತ ಯಾದವರು ರಾಮಾನುಜರು ವಿಂಧ್ಯಾರಣ್ಯದಿಂದ ಕಾಂಚಿಗೇ ಹಿಂತಿರುಗಿ ಬಂದಿರುವುದೇ ಮೊದಲಾದ ವೃತ್ತಾಂತವನ್ನು ಜನರಿಂದ ತಿಳಿದು, ಬಹಳ ಹೆದರಿಕೆಯಿಂದಲೂ ಆಶ್ಚರ್ಯದಿಂದಲೂ ಕೂಡಿದವರಾಗಿ, ರಾಮಾನುಜರಲ್ಲಿ ವೈರವನ್ನು ಬೆಳೆಸಿದರೆ ತನಗೆ ಹಾನಿಯೇ ಉಂಟಾಗುವುದೆಂದು ಯೋಚಿಸಿ, ಶಿಷ್ಯರೊಡನೆಯೂ ಆಲೋಚಿಸಿ, ಮತ್ತೆ ಅವರೊಡನೆ ಸ್ನೇಹಮಾಡಿಕೊಂಡರು. ರಾಮಾನುಜರೂ ಸಹ ಆ ಕಾಲದಲ್ಲಿ ಶಾಸ್ತ್ರೋಪದೇಶಕರು ಸುತರಾಂ ಇಲ್ಲದೇಇದ್ದುದರಿಂದ ಶಾಸ್ತ್ರಾಭ್ಯಾಸದ ಕುತೂಹಲದಿಂದ ಪರಮಾತ್ಮನ ಕೈಂಕರ್ಯವನ್ನು ಬಿಟ್ಟು ಮತ್ತೆ ಅವರ ಬಳಿಯಲ್ಲಿಯೇ ಮೊದಲಿನಂತೆಯೇ ಶಾಸ್ತ್ರಾಭ್ಯಾಸ ಮಾಡುತ್ತಾ ಸುಖದಿಂದಿರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೋವಿಂದನ ಕಾಳಹಸ್ತಿನಿವಾಸವೆಂಬ ಆರನೆಯ ಅಧ್ಯಾಯವು ಮುಗಿದುದು.

## ೭

ಒಂದು ದಿನ ಯಾಮುನಾಚಾರ್ಯರು ರಾಮಾನುಜರನ್ನು ನೋಡಬೇಕೆಂದು ಶಿಷ್ಯರೊಡನೆ ಶ್ರೀರಂಗದಿಂದ ಹೊರಟು ಕಾಂಚೀನಗರಕ್ಕೆ ಬಂದರು.

ಕಾಂಚೀಪೂರ್ಣನು ತನ್ನ ಗುರುಗಳು ಬರುತ್ತಿರುವುದನ್ನು ಕೇಳಿ, ಕೂಡಲೇ ಇತರ ಭಕ್ತರೊಡನೆಯೂ ಪುರಜನರೊಡನೆಯೂ ಎದುರುಗೊಂಡು ಹೊರಟನು.

ಯಾಮುನಾಚಾರ್ಯರು ಕಾಂಚೀಪೂರ್ಣರೊಡನೆ ದೇವರಾಜಸನ್ನಿಧಿಗೆ ಹೋಗಿ,

ಹಸ್ತಿಗಿರಿಯಲ್ಲಿ ರಾರಾಜಿಸುತ್ತಿರುವ, ಭಕ್ತವತ್ಸಲನೂ, ಕೋಟಿಸೂರ್ಯ ಪ್ರಕಾಶನಾದರೂ ಕೋಮಲಾವಯವಗಳಿಂದ ಮನೋಹರನೂ, ಶಂಖಚಕ್ರಧಾರಿಯೂ, ಶರಣಾಗತ ರಕ್ಷಕನೂ, ಶ್ರೀಭೂನೀಳಾ ಸಹಿತನೂ ಆದ ವರದರಾಜನನ್ನು ನೋಡಿ ಆನಂದದಿಂದ ಪುಲಕಿತರಾಗಿ, ಪ್ರದಕ್ಷಿಣೆಮಾಡಿ ನಮಸ್ಕರಿಸಿದರು. ತಮಗೆ ಶಕ್ತಿಯಿದ್ದಷ್ಟು ಸ್ತೋತ್ರಮಾಡಿ

ಶ್ರೀಹಸ್ತಿಗಿರಿವಾಸಾಯ ಮಂಗಳಂ ಮಧುವೈರಿಣೇ ।
ವೈಕುಂಠಲೋಕನಾಥಯ ಮಂಗಳಂ ವಿಶ್ವರೂಪಿಣೇ ॥
ಭಕ್ತಾಭೀಷ್ಟಪ್ರದಾಯಾಸ್ತು ಮಂಗಳಂ ಪರಮಾತ್ಮನೇ ।
ಪರಬ್ರಹ್ಮ ಸ್ವರೂಪಾಯ ಮಂಗಳಂ ಕರುಣಾತ್ಮನೇ ॥
ಪೀತಾಂಬರದರಾಯಾಸ್ತು ಮಂಗಳಂ ಕಂಸವೈರಿಣೇ॥

ಎಂದು ಮಂಗಳಾಶಾಸನ ಮಾಡಿ, ಪರಮಾತ್ಮನ ಪಾವನವಾದ ತೀರ್ಥಶಠ ಕೋಪಾದಿಗಳನ್ನು ಪರಿಗ್ರಹಿಸಿ, ಹಸ್ತಿಶೈಲದಿಂದ ಹೊರಟು ಪ್ರೀತಿಯಿಂದ ರಾಮಾನುಜರನ್ನು ನೋಡಲುದ್ಯುಕ್ತರಾದರು.

ಆ ಕಾಲಕ್ಕೆ ಸರಿಯಾಗಿ ಯಾದವರೂ ಸಹ ತನ್ನ ಇತರ ಶಿಷ್ಯರೊಡನೆಯೂ, ರಾಮಾನುಜರೊಡನೆಯೂ ಭಕ್ತವತ್ಸಲನಾದ ವರದರಾಜನ ಸಂದರ್ಶನಕ್ಕಾಗಿ ಹೊರಟು ಬರುತ್ತಿದ್ದನು.

ಯಾಮುನಾಚಾರ್ಯರು ಬರುತ್ತಿರುವ ಶಿವಭಕ್ತರಾದ ದ್ವಿಜರನ್ನು ಕಂಡು, ಕಾಂಚೀ ಪೂರ್ಣನನ್ನು ಕುರಿತು-' ವತ್ಸ ಎಲ್ಲರ ಮುಂದುಗಡೆ ಏಕದಂಡಿಯಾಗಿ ಬರುತ್ತಿರುವ ಇವನಾರು ? ಇವನ ವೃತ್ತಾಂತವೇನು ?'- ಎಂದು ಕೇಳಲು, -'ಇವನೇ ಯಾದವಪ್ರಕಾಶನೆಂದು ಪ್ರಸಿದ್ಧನಾಗಿರುವವನು; ಸರ್ವಶಾಸ್ತ್ರಗಳಲ್ಲಿಯೂ, ಸರ್ವಮಂತ್ರಗಳಲ್ಲಿಯೂ ನಿಪುಣನು; ಬುದ್ಧಿವಂತನೂ; ಸ್ವಪಕ್ಷವನ್ನು ಸ್ಥಾಪಿಸುವುದರಲ್ಲಿಯೂ, ಪರಪಕ್ಷವನ್ನು ನಾಶಮಾಡುವುದರಲ್ಲಿಯೂ ಚತುರನು. ಇವನ ಸಮೀಪದಲ್ಲಿಯೇ ರಾಮಾನುಜನು ವೇದಾಂತಶಾಸ್ತ್ರವನ್ನು ಅಭ್ಯಾಸಮಾಡುತ್ತಿರುವನು. ಇದೋ ಇವನ ಪಕ್ಕದಲ್ಲಿರುವ ಈತನೇ ರಾಮಾನುಜನು. ಇವನನ್ನು ನೋಡಿ ಹೇಗಿರುವನು. ತನ್ನ ಕೋಮಲವಾದ ಕೈಯಿನಿಂದ ವಿಪ್ರಬಾಲನ ಕೈಯನ್ನು ಹಿಡಿದಿರುವನು; ಮಧುರ ಸ್ಮಿತನು; ಧೀರ್ಘಬಾಹು; ವಿಶಾಲವಾದ ಕಣ್ಣುಗಳು; ಪೂರ್ಣಚಂದ್ರನಂತಹ ಮುಖ; ವಿಸ್ತಾರವಾದ ಎದೆ; ಉನ್ನತವಾದ ಭುಜಗಳು; ಜನಪ್ರಿಯನು; ಕ್ಷೀರಸಮುದ್ರದ ನೊರೆಯಂತೆ ಧವಳವಾದ ವಸ್ತ್ರಯುಗ್ಮವನ್ನು ಧರಿಸಿರುವನು; ನವರತ್ನಖಚಿತವಾದ ಕುಂಡಲಗಳಿಂದ ಶೋಭಿಸುತ್ತಿರುವನು; ತಾವರೆಯದಂಟಿನಂತಹ ಬ್ರಹ್ಮಸೂತ್ರಗಳಿಂದ ಬೆಳಗುತ್ತಿರುವನು; ಹಣೆಯಲ್ಲಿ ಸರಂಧ್ರವಾದ ಊರ್ಧ್ವಪುಂಡ್ರಗಳನ್ನು ಧರಿಸಿ ಮೆರೆಯುತ್ತಿರುವನು. ಇವನೇ ಪರಿಶುದ್ಧನಾದ ರಾಮಾನುಜನು'- ಎಂದು ತೋರಿಸಿ ವಿಂಧ್ಯಾರಣ್ಯದಲ್ಲಿ ನಡೆದ ವೃತ್ತಾಂತವೇ ಮೊದಲಾಗಿ ಎಲ್ಲವನ್ನು ಕಾಂಚೀ ಪೂರ್ಣರು ಗುರುವಿಗೆ ವಿವರಿಸಿದರು.

ಇದನ್ನು ಕೇಳಿ ರಾಮಾನುಜರನ್ನು ಪ್ರೀತಿಯಿಂದ ನೋಡಿ, ಯಮುನಾಚಾರ್ಯರು ರಾಮಾನುಜರೊಡನೆ ಮಾತನಾಡಬೇಕೆಂದು ಇಚ್ಛಿಸಿದರು. ಆದರೆ, ಅಸಜ್ಜನ ಸಮಾವೃತನಾದ ಈ ಬಾಲನು ನಾನು ಕರೆದರೆ ಬರುವನೋ ಇಲ್ಲವೋ ಎಂದು ಮನಸ್ಸಿನಲ್ಲಿಯೇ ಆಲೋಚಿಸಿ ತನ್ನ ಇಷ್ಟಾರ್ಥಸಿದ್ಧಿಗಾಗಿ-

ಯಸ್ಯಪ್ರಸಾದಕಲಯಾತ್ ಬಧಿರಃ ಶೃಣೋತಿ
ಪಂಗುಃ ಪ್ರಧಾವತಿ ಜವೇನ ಚ ವಕ್ತಿ ಮೂಕಃ।
ಅಂಧ: ಪ್ರಪಶ್ಯತಿ ಸುತಂ ಲಭತೇ ಚ ವಂಧ್ಯಾ
ತಂ ದೇವಮೇವ ವರದಂ ಶರಣಂ ಗತೋಸ್ಮಿ ॥
ಲಕ್ಷ್ಮೀಶ ಪುಂಡರೀಕಾಕ್ಷ ಕೃಪಾಂ ರಾಮಾನುಜೇ ತವ।
ನಿಧಾಯ ಸ್ವಮತೇನಾಥ ಪ್ರವಿಷ್ಟಂ ಕರ್ತುಮರ್ಹಸಿ॥

ಎಂದು ಭಕ್ತಿಪೂರ್ವಕವಾಗಿ ವರದರಾಜನನ್ನು ಪ್ರಾರ್ಥಿಸಿ ಮತ್ತೆ ಶಿಷ್ಯರೊಡನೆ ಶ್ರೀರಂಗವನ್ನು ತಲುಪಿದರು. ಶ್ರೀರಂಗವನ್ನು ತಲುಪಿ, ರಾಮಾನುಜರ ಅಭ್ಯುದಯಕ್ಕಾಗಿ ಸ್ತೋತ್ರರತ್ನವನ್ನು ರಚಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಜ ದರ್ಶನಕ್ಕಾಗಿ ಯಾಮುನಮುನಿಗಳ ಕಾಂಚೀಪ್ರಯಾಣವೆಂಬ ಏಳನೆಯ ಅಧ್ಯಾಯವು ಮುಗಿದುದು.

೮

ಯಾದವರ ಬಳಿಯಲ್ಲಿ ವೇದಾಂತಶಾಸ್ತ್ರವನ್ನು ಅಧ್ಯಯನಮಾಡುತ್ತ ರಾಮಾನುಜರು ಒಂದು ದಿನ ಯಾದವರಿಗೆ ತೈಲಾಭ್ಯಂಜನವನ್ನು ಮಾಡಿಸುತ್ತ ಶಾಸ್ತ್ರಾರ್ಥವನ್ನು ಕೇಳುತ್ತಿದ್ದರು. ಶಾಸ್ತ್ರೋಪದೇಶವು ನಡೆಯುತ್ತಿರಲು ಯಾದವರು ಶ್ರುತಿಗೆ ಅಪಾರ್ಥವನ್ನು ಹೇಳಿದರು. ರಾಮಾನುಜರಿಗೆ ಬಹಳ ದುಃಖವಾಯಿತು. ಕಣ್ಣಿಂದ ಬಾಷ್ಪಗಳು ಉದುರಿದವು. ಕಾದಿರುವ ದೀಪಗಳಿಂದ ಕಾದ ಎಣ್ಣೆಯ ಬಿಂದುಗಳಂತೆ ತನ್ನ ಎದೆಯ ಮೇಲೆ ಉದುರುತ್ತಿರುವ ಅಶ್ರುಗಳನ್ನೂ, ಬಾಷ್ಪದಿಗ್ಧವಾದ ರಾಮಾನುಜರ ಮುಖವನ್ನೂ ನೋಡಿ ಯಾದವರು -'ವತ್ಸ, ಏತಕ್ಕೆ ದುಃಖಿಸುತ್ತಿರುವೆ? ದುಃಖಕ್ಕೆ ಕಾರಣವೇನು?' ಎಂದು ಕೇಳಲು,'ಕಪ್ಯಾಸಂ..' ಎಂಬ ವಾಕ್ಯಕ್ಕೆ ವಿರುದ್ಧವಾದ ಅರ್ಥವು ಹೇಳಲ್ಪಟ್ಟಿತೆಂದು ದುಃಖವಾಗಿದೆ'- ಎಂದರು. ಇದನ್ನು ಕೇಳಿ ಕ್ರುದ್ಧರಾದ ಯಾದವರು -'ಎಲೋ ದುಷ್ಟ, ಎಲ್ಲಿ ಹಾಗಾದರೆ ನೀನೇ ಇದರ ಸರಿಯಾದ ಅರ್ಥವನ್ನು ಹೇಳು, ನೋಡೋಣ'- ಎಂದರು. ಆಗ ರಾಮಾನುಜರು 'ಎಲೈ ವಿಪ್ರ, 'ಕಪ್ಯಾಸ..' ವಾಕ್ಯಕ್ಕೆ 'ನೀರಿನಲ್ಲಿ ಹುಟ್ಟಿದ, ಸೂರ್ಯನಿಂದ ವಿಕಸಿತವಾದ ಕಮಲದದಳದಂತಿರುವ ಕಣ್ಣುಗಳು'- ಎಂದು ಶಾಸ್ತ್ರಜ್ಞರಾದವರು ಅರ್ಥವನ್ನು ಹೇಳಬೇಕಾಗಿರುವಾಗ, ಷಡ್ಗುಣಪರಿಪೂರ್ಣನಾದ ಅಪರಿಮಿತ ತೇಜಸ್ವಿಯಾದ ವಿಷ್ಣುವಿನ ಕಣ್ಣುಗಳಿಗೆ ಮರ್ಕಟಾಸನದ ಸಾದೃಶ್ಯವನ್ನು ಹೇಳುವುದು ಎಷ್ಟೊಂದು ವಿರುದ್ಧವಾದುದೆಂದು

ದುಃಖಿಸುತ್ತೇನೆ' ಎಂದರು. ಯಾದವರು ಇದನ್ನು ಕೇಳಿ ಕುಪಿತರಾಗಿ 'ಎಲೋ ದುಷ್ಟ, ದುರ್ಮಾರ್ಗಿ, ಅಸಂಗತವಾದ ಅರ್ಥವನ್ನು ಒದರಬೇಡ, ತೊಲಗು ನನ್ನೆದುರಿಗೆ ನಿಲ್ಲಲು ನಿನಗೆ ಯೋಗ್ಯತೆಯಿಲ್ಲ; ದ್ವಿಜಾಧಮ, ಹೋಗು, ಹೋಗು'- ಎಂದು ಶಾಂತರಾದ ರಾಮಾನುಜರನ್ನು ಗದರಿಸಿದರು.

ರಾಮಾನುಜರಾದರೋ ಕೂಡಲೇ ಅಲ್ಲಿಂದ ಹೊರಟು ಕಾಂಚೀಪೂರ್ಣರ ಹತ್ತಿರ ಹೋಗಿ ನಡೆದುದೆಲ್ಲವನ್ನೂ ತಿಳಿಸಿ, ಅವರ ಅನುಮತಿಯಂತೆ ಮೊದಲಿನಂತೆಯೇ ಶ್ರೀಹಸ್ತಿಶೈಲನಾಥನ ನಿತ್ಯಕೈಂಕರ್ಯನಿರತನಾದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ 'ಕಪ್ಯಾಸ.' ಶ್ರುತ್ಯರ್ಥ ವಿಚಾರವೆಂಬ ಎಂಟನೆಯ ಅಧ್ಯಾಯವು ಮುಗಿದುದು

೯

ಶ್ರೀರಂಗನಗರದಲ್ಲಿ ಯಾಮುನಾಚಾರ್ಯಯತೀಶ್ವರರು ದೇವರಾಜನನ್ನುದ್ದೇಶಿಸಿ ಸ್ತೋತ್ರರತ್ನವನ್ನು ವಿರಚಿಸಿ, ರಾಮಾನುಜರ ವೃತ್ತಾಂತವನ್ನು ನಿರೀಕ್ಷಿಸುತ್ತಿದ್ದರು.

ಇತ್ತ ಕಾಂಚೀಪುರದಲ್ಲಿ ಯಾದವರ ಸಹವಾಸವನ್ನು ಬಿಟ್ಟು ರಾಮಾನುಜರು ವರದರಾಜನ ಕೈಂಕರ್ಯನಿರತರಾಗಿರುವುದನ್ನು ಕೇಳಿ ಯಾಮುನಾಚಾರ್ಯರಿಗೆ ಬಹಳ ಸಂತೋಷವಾಯಿತು. ಆಗ ತನ್ನ ಶಿಷ್ಯರಾದ ಪೂರ್ಣಾಚಾರ್ಯರನ್ನು ಕರೆದು 'ನೀನು ಕಾಂಚೀಪುರಕ್ಕೆ ಹೋಗಿ ರಾಮಾನುಜರ ಎದುರಿನಲ್ಲಿ ಈ ಸ್ತೋತ್ರರತ್ನವನ್ನು ಪಠಿಸು' ಎಂದು ಹೇಳಿದರು. ಗುರುಗಳ ಮಾತನ್ನು ಕೇಳಿ ಅವರ ಅಪ್ಪಣೆಯಂತೆ ಪೂರ್ಣಾಚಾರ್ಯರು ಕೂಡಲೇ ಕಾಂಚೀನಗರಕ್ಕೆ ಹೊರಟರು. ಕಾಂಚಿಯನ್ನು ತಲುಪಿ ಹಸ್ತಿಗಿರೀಶನಾದ ವರದರಾಜನ ಸನ್ನಿಧಿಗೆ ಹೋಗಿ ವರದರಾಜನನ್ನು ವಂದಿಸಿ ಸ್ತೋತ್ರರತ್ನವನ್ನು ಅವನಲ್ಲಿ ವಿಜ್ಞಾಪಿಸಿ, ತೀರ್ಥಶಠಕೋಪಾದಿಗಳನ್ನು ಭಕ್ತಿಯಿಂದ ಸ್ವೀಕರಿಸಿ, ಕಾಂಚೀಪೂರ್ಣರಿಂದ ರಾಮಾನುಜರ ದಿನಚರಿಯನ್ನು ತಿಳಿದು, ಸ್ತೋತ್ರಪಠನ ಮಾಡುತ್ತಾ ಅವರ ಬರುವಿಕೆಯನ್ನೇ ನಿರೀಕ್ಷಿಸುತ್ತಿದ್ದರು. ಅಷ್ಟು ಹೊತ್ತಿಗೆ ರಾಮಾನುಜರು ಸುವರ್ಣಕುಂಭದಲ್ಲಿ ತೀರ್ಥವನ್ನು ತೆಗೆದುಕೊಂಡು ವರದರಾಜನ ಸನ್ನಿಧಿಗೆ ಬಂದರು. ಬಂದಕೂಡಲೇ ವಿಮತ್ಸರರೂ, ವಿಷ್ಣುಭಕ್ತರೂ, ವಿಷ್ಣುಸ್ತೋತ್ರವನ್ನು ಗಂಭೀರವಾಗಿ ಪಠಿಸುತ್ತಿರುವವರೂ, ಮಹಾಪ್ರಾಜ್ಞರೂ, ಆದ ಪೂರ್ಣಾಚಾರ್ಯರನ್ನು ಕಂಡರು. ಆ ಸ್ತೋತ್ರದಲ್ಲಿರುವ ಸ್ವಾಭಾವಿಕವಾಗಿಯೂ, ಸುಂದರವಾಗಿಯೂ ಇರುವ ಶುಭನಾಮವನ್ನು ಕೇಳಿ ರಾಮಾನುಜರಿಗೆ ಬಹುಹರ್ಷವಾಯಿತು. ಇನ್ನೂ ಕೇಳುತ್ತಿರುವಲ್ಲಿ ಈ ಪದ್ಯವು ಕೇಳಿಸಿತು

'ಸ್ವಾಭಾವಿಕಾನವಧಿಕಾತಿಶಯೇಶಿತೃತ್ವಂ---------------- ವಿಪ್ರುಷಸ್ತೇ'

(ಸ್ವಾಭಾವಿಕವಾಗಿಯೂ ನ್ಯೂನಾಭ್ಯಧಿಕರಹಿತವಾಗಿಯೂ ಇರುವ ಐಶ್ವರ್ಯವನ್ನು - ಎಲೈ ನಾರಾಯಣನೇ ನಿನ್ನಲ್ಲಿ ಸಹಿಸದೆ ಇರುವವನು ಅಬ್ರಾಹ್ಮಣನೇ ಸರಿ; ನಿತ್ಯರೂ, ಮುಕ್ತರೂ, ಬ್ರಹ್ಮನೂ, ಶಿವನೂ ಇಂದ್ರನೇ ಮೊದಲಾದವರೂ ಸಹ ನಿನ್ನ ಮಹಿಮೆಯೆಂಬ ಸಮುದ್ರದ ಬಿಂದುಗಳು ಮಾತ್ರವಷ್ಟೆ! ಇಂತಹ ಸ್ತೋತ್ರರತ್ನವನ್ನು ಕೇಳಿದ ಹರಿಪ್ರಿಯರಾದ ರಾಮಾನುಜರು

ಆಶ್ಚರ್ಯಗೊಂಡು ಪೂರ್ಣಾಚಾರ್ಯರನ್ನು ಕುರಿತು -'ಎಲೈ ದ್ವಿಜೋತ್ತಮ, ನೀವು ಪಠಿಸುತ್ತಿರುವ ಈ ಶುಭಸ್ತೋತ್ರವನ್ನು ರಚಿಸಿದ ಗುರುವರ್ಯರಾರು? ದಯವಿಟ್ಟು ನನಗೆ ತಿಳಿಸಿ'-ಎಂದು ಕೇಳಿದರು. ಕೃಪಾನಿಧಿಯಾದ ಪೂರ್ಣಾಚಾರ್ಯರು ರಾಮಾನುಜರ ಪ್ರಶ್ನೆಯನ್ನು ಕೇಳಿ ಹೀಗೆಂದರು:-

ಶ್ರೀರಂಗಕ್ಷೇತ್ರದಲ್ಲಿ ವಿಪ್ರಕುಲಸಮುತ್ಪನ್ನರೂ, ವೇದವೇದಾಂತಪಾರಂಗತರೂ, ಪಂಚಸಂಸ್ಕಾರ ಸಂಸ್ಕೃತರೂ, ಚತುರ್ಥಾಶ್ರಮವನ್ನು ಸ್ವೀಕರಿಸಿರುವವರೂ, ಸರ್ವಶಾಸ್ತ್ರಾರ್ಥತತ್ವಜ್ಞರೂ, ಸದಾಚಾರನಿಷ್ಠರೂ, ಜಿತೇಂದ್ರಿಯರೂ, ವಿಷ್ಣುಭಕ್ತರೂ ಆದ ಯಾಮುನಾಚಾರ್ಯರೆಂಬ ಮಹಾಗುರುಗಳಿರುವರು. ಅವರು ಈ ಸ್ತೋತ್ರವನ್ನು ರಚಿಸಿದವರು. ಆಗ ರಾಮಾನುಜರು -'ಎಲೈ ಮಹಾಮಹಿಮನೆ, ನಾನು ಆ ಯಾಮುನಾರ್ಯ ಯತಿಶ್ರೇಷ್ಠರನ್ನು ನೋಡಲು ಕಾತುರನಾಗಿರುವೆನು; ನನ್ನನ್ನು ಈಗಲೇ ಶ್ರೀರಂಗಕ್ಷೇತ್ರಕ್ಕೆ ಕರೆದುಕೊಂಡುಹೋಗುವಿರಾ? ಎಂದು ಕೇಳಿದರು. ಪೂರ್ಣಾಚಾರ್ಯರು ಈ ಮಾತನ್ನು ಕೇಳಿ ಸಂತುಷ್ಟರಾಗಿ, ಕಾಂಚೀಪೂರ್ಣರಿಗೆ ವೃತ್ತಾಂತವೆಲ್ಲವನ್ನೂ ತಿಳಿಸಿ ರಾಮಾನುಜರನ್ನು ಕುರಿತು -'ನಿನ್ನನ್ನು ಶ್ರೀರಂಗಕ್ಕೆ ಈಗಲೇ ಕರೆದುಕೊಂಡು ಹೋಗುವೆನು, ಸಿದ್ಧನಾಗು' ಎನ್ನಲು, ರಾಮಾನುಜರು ಸುವರ್ಣಕುಂಭದಲ್ಲಿ ತಂದಿದ್ದ ತೀರ್ಥವನ್ನು ಪರಮಾತ್ಮನಾದ ಹಸ್ತಿಗಿರಿನಾಯಕನಿಗೆ ಭಕ್ತಿಯಿಂದ ಸಮರ್ಪಿಸಿ, ಕಾಂಚೀಪೂರ್ಣರ ಅನುಮತಿಯಂತೆ ಪೂರ್ಣಾಚಾರ್ಯರೊಡನೆ ಶ್ರೀರಂಗಕ್ಕೆ ಹೊರಟರು.

ಈ ವೇಳೆಗೆ ಶ್ರೀರಂಗಕ್ಷೇತ್ರದಲ್ಲಿ ಶ್ರೀರಂಗರಾಜನು ತನ್ನ ಮನಸ್ಸಿನಲ್ಲಿ 'ರಾಮಾನುಜರೂ, ಯಾಮುನರೂ ಇಬ್ಬರೂ ಒಂದುಕಡೆ ಸೇರಿದರೆ ನಮ್ಮ ಲೀಲಾವಿಭೂತಿಯು ಮುಗಿದಂತೆಯೇ ಸರಿ' ಎಂದು ಚಿಂತಿಸಿ, ಅರ್ಚಕನ ಮುಖಾಂತರವಾಗಿ 'ಎಲೈ ಯಾಮುನನೇ, ಯತಿಶ್ರೇಷ್ಠ, ನಿನಗೆ ಪರಮಪದವನ್ನು ಅನುಗ್ರಹಿಸಿರುತ್ತೇನೆ. ನೀನು ಈಗಲೇ ಹೊರಡು' ಎಂದು ಆಜ್ಞಾಪಿಸಿದನು. ಯಾಮುನಾಚಾರ್ಯರು ಪರಮಾತ್ಮನನ್ನು ನಮಸ್ಕರಿಸಿ, ರಾಮಾನುಜರನ್ನು ನೋಡಬೇಕೆಂಬ ಕುತೂಹಲದಿಂದ -'ಎಲೈ ರಂಗಾಧಿಪತಿ, ಇನ್ನು ಕೇವಲ ಎಂಟುದಿನಗಳ ಅವಕಾಶವನ್ನು ಕೊಡು, ಅನಂತರ ಹೊರಡುವೆನು'- ಎಂದು ವಿಜ್ಞಾಪಿಸಿ, ರಾಮಾನುಜರ ಬರುವಿಕೆಯನ್ನೇ ನಿರೀಕ್ಷಿಸುತ್ತಾ ಮಠಕ್ಕೆ ಹೊರಟರು

ಮಹಾಮಹಿಮರಾದರೂ ಯಾಮುನಾಚಾರ್ಯರು ಪರಾಧೀನರಾಗಿ, ತಮ್ಮ ಇಷ್ಟಾರ್ಥವು ಫಲಿಸದೆಯೇ ಸ್ವಾಚಾರ್ಯಪದಪಂಕಜವನ್ನು ಹೊಂದಿದರು. ಇಷ್ಟುಹೊತ್ತಿಗೆ ಯಾಮುನಾಚಾರ್ಯರನ್ನು ನೋಡಬೇಕೆಂದು ಹೊರಟಿದ್ದ ರಾಮಾನುಜ, ಪೂರ್ಣಾಚಾರ್ಯರಿಬ್ಬರೂ ಕಾವೇರಿಯ ಹತ್ತಿರಕ್ಕೆ ಬಂದರು. ಕಾವೇರಿಯ ತೀರದಲ್ಲಿ ನೆರೆದಿರುವ ದ್ವಿಜವೃಂದವನ್ನು ನೋಡಿ ಹತ್ತಿರದಲ್ಲಿ ಬಂದ ಕೆಲವರನ್ನು ಕುರಿತು 'ಇಲ್ಲಿ ಇದೇಕೆ ಇಷ್ಟು ಶ್ರೀವೈಷ್ಣವರ ಸಮೂಹವು ಕೂಡಿರುವುದು? ವಿಶದವಾಗಿ ತಿಳಿಸಿರಿ' ಎಂದು ಕೇಳಿದರು. ಅವರು ಕಾರಣವನ್ನು ವಿವರಿಸಲು ಅದನ್ನು ಕೇಳಿ ಇಬ್ಬರೂ ಬುಡವನ್ನು ಕತ್ತರಿಸಿದ ಮರಗಳಂತೆ ನೆಲದಮೇಲೆ ಉರುಳಿದರು. ಯಾಮುನಾಚಾರ್ಯರ ವಿಯೋಗದಿಂದ ಇಬ್ಬರೂ ಮೂರ್ಛಿತರಾದರೂಕೂಡ, ಮಹಾಪ್ರಾಜ್ಞರಾದ ಪೂರ್ಣಾಚಾರ್ಯರು ಧೈರ್ಯಗೊಂಡು

ಭೂತಲದಲ್ಲಿಯೇ ಬಿದ್ದಿದ್ದ ರಾಮಾನುಜರನ್ನು 'ಎಲೈ ಜ್ಞಾನಸಂಪನ್ನನೆ, ವ್ಯರ್ಥವಾಗಿ ದುಃಖಿಸಬೇಡ. ಶೋಕಿಸುತ್ತಿದ್ದರೆ ಮುಂದಿನಕೆಲಸವೇನಾದೀತು ? ರಾಮಾನುಜ ನನ್ನ ಮಾತನ್ನು ಕೇಳು, ಬ್ರಾಹ್ಮಣರು ಪರಲೋಕವನ್ನೈದಿದ ಯಾಮುನಾಚಾರ್ಯರಿಗೆ ವಿದ್ಯುಕ್ತವಾದ ಕಾರ್ಯಗಳನ್ನು ನಡೆಸುತ್ತಿರುವರು. ಗುರುಗಳಾದ ಯತಿಶ್ರೇಷ್ಠರನ್ನು ಭೂಮಿಯಲ್ಲಿ ಸ್ಥಾಪಿಸುವುದರೊಳಗೆ ಬೇಗಹೋಗಿ ಆಚಾರ್ಯರನ್ನು ನೋಡೋಣ. ಆದ್ದರಿಂದ ಏಳು, ಧೈರ್ಯವನ್ನು ತಂದುಕೋ. ಯಾರಿಗಾಗಿ ಪವಿತ್ರವಾದ ಸತ್ಯವ್ರತಕ್ಷೇತ್ರವನ್ನೂ, ಜಗತ್ಪತಿಯಾದ ವರದರಾಜನ ತೀರ್ಥಕೈಂಕರ್ಯವನ್ನೂ ಬಿಟ್ಟು ಬಂದೆಯೋ ಆ ಯಾಮುನಾಚಾರ್ಯರು ಸ್ವಾಚಾರ್ಯಪದವನ್ನಾಶ್ರಯಿಸಿದರು. ಇದು ಕೇವಲ ದೈವಕೃತವಾದುದರಿಂದ ದುಃಖವನ್ನು ಬಿಡು; ಎಲೈ ಬುದ್ಧಿಶಾಲಿಯೇ, ಸುಖ, ದುಃಖ, ಸಂಯೋಗ, ವಿಯೋಗ, ಮರಣ, ಭಯ, ಲಾಭ,ಹಾನಿ ಎಲ್ಲಕ್ಕೂ ದೈವವೇ ಕಾರಣವಲ್ಲವೆ'- ಎಂಬುದಾಗಿ ಸಮಾಧಾನಮಾಡುತ್ತ ಯುಗಾಂತದಲ್ಲಿ ಬಿದ್ದಂತಹ ಸೂರ್ಯನಂತೆಯೂ, ವೇಗರಹಿತವಾದ ಸಮುದ್ರದಂತೆಯೂ ಇರುವ, ನಿರುತ್ಸಾಹನೂ, ನಿಶ್ಚೇಷ್ಟನಾಗಿಯೂ, ಸ್ವಾರ್ಥಭ್ರಷ್ಟನಾದ ದ್ವಿಜನಂತೆ ದೀನನಾಗಿಯೂ, ಕೆಸರಿನಲಿ ಸಿಕ್ಕಿಕೊಂಡಿರುವ ಆನೆಯಂತೆ ದುಃಖಿತರೂ ಆದ ರಾಮಾನುಜರನ್ನು ಕೈಗಳಿಂದ ಹಿಡಿದೆತ್ತಿ ಪ್ರೀತಿಪೂರ್ವಕವಾಗಿ ಆಲಂಗಿಸಿದರು.ಅನಂತರ ರಾಮಾನುಜರು ಪೂರ್ಣಾಚಾರ್ಯರೊಡನೆ ಹೋಗಿ ಯಾಮುನಾಚಾರ್ಯರ ರೂಪಲಕ್ಷಣಾದಿಗಳನ್ನು ನೋಡಿ 'ಕ್ಷುದ್ರನಿಗೆ ಸತ್ಸಹವಾಸವು ಅಲಭ್ಯವಾಗುವಂತೆ ನನಗೆ ಯಾಮುನಾಚಾರ್ಯರ ಸಂಭಾಷಣಾದಿಗಳ ಪ್ರಾಪ್ತಿಯು ಇಲ್ಲವಾಯಿತು. ಒಂದು ವೇಳೆ ದೊರಕಿದ್ದರೆ -ಎಲೈ ಪುರುಷೋತ್ತಮರೆ, ಈ ಲೋಕದಲ್ಲಿರುವ ಎಲ್ಲ ಜನರಿಗೂ ಹರಿಪದವನ್ನು ಹೊಂದಲೂ ಅವನನ್ನು ಸೇವಿಸಲೂ ಸೋಪಾನಮಾರ್ಗವನ್ನು ಕಲ್ಪಿಸುತ್ತಿದ್ದೆನು' ಎಂದುಹೇಳುತ್ತ ಯಾಮುನಾಚಾರ್ಯರ ಬಗ್ಗಿರುವ ಮೂರು ಬೆರಳುಗಳನ್ನು ಕಂಡು ಆಶ್ಚರ್ಯಪಟ್ಟವನಾಗಿ, ಅವರ ಶಿಷ್ಯರನ್ನು ಕುರಿತು 'ಎಲೈ ವಿಪ್ರರೆ, ಆಚಾರ್ಯರ ಬೆರಳುಗಳು ಹುಟ್ಟಿದ ಮೊದಲಿನಿಂದಲೂ ಹೀಗೆಯೇ ಇವೆಯೋ ಅಥವಾ ಈಗ ಬಗ್ಗಿರುವುದೋ?' ಎಂದು ಕೇಳಿದರು. ಆಗ ಆಶ್ಚರ್ಯದಿಂದ ಕೂಡಿದ ವಿಪ್ರರು- 'ಮೊದಲು ಅವರ ಬೆರಳುಗಳು ಸರಿಯಾಗಿಯೇ ಇದ್ದವು. ಈಗ ಬಗ್ಗಿರುವುವು. ಇದಕ್ಕೆ ಕಾರಣವೇನೋ ನಮಗೆ ತಿಳಿಯದು. ಪ್ರಾಜ್ಞನಾದ ನೀವೇ ಊಹಿಸಬೇಕು'- ಎಂದರು. ಆಗ ರಾಮಾನುಜರು ಚಿಂತಿಸಿ ಯಾಮುನಾರ್ಯರ ಅಭಿಪ್ರಾಯವನ್ನು ಊಹಿಸಿ 'ನಾನು ಶ್ರೀವೈಷ್ಣವ ಸಿದ್ಧಾಂತದಲ್ಲಿದ್ದು ಅಜ್ಞಾನಮೋಹಿತರಾದ ಜನರನ್ನು ಪಂಚಸಂಸ್ಕಾರ ಸಂಪನ್ನರನ್ನಾಗಿಯೂ, ದ್ರಾವಿಡವೇದ (ದಿವ್ಯಪ್ರಬಂಧ) ಪಾರಂಗತರನ್ನಾಗಿಯೂ, ಪ್ರಪತ್ತಿ ಧರ್ಮನಿರತರನ್ನಾಗಿಯೂ ಮಾಡಿ ಸರ್ವದಾ ರಕ್ಷಿಸುತ್ತೇನೆ'- ಎಂದು ಹೇಳಲಾಗಿ ಯಾಮುನಾಚಾರ್ಯರ ಬಗ್ಗಿದ್ದ ಬೆರಳುಗಳಲ್ಲಿ ಒಂದು ಸರಿಯಾಯಿತು. ಮತ್ತೆ ಧರ್ಮಾತ್ಮರಾದ ರಾಮಾನುಜರು -'ತತ್ವಾರ್ಥಗಳೆಲ್ಲವನ್ನೂ ಸಂಗ್ರಹಿಸಿ ಲೋಕರಕ್ಷಣಾರ್ಥವಾಗಿ ಶುಭಕರವಾದ ಶ್ರೀಭಾಷ್ಯವನ್ನು ರಚಿಸುತೇನೆ'- ಎಂದು ಹೇಳಲಾಗಿ ಎರಡನೆಯ ಬೆರಳು ಸರಿಯಾಯಿತು. ಮತ್ತೆ -'ಎಲೈ ಮಹಾತ್ಮನೇ, ಯಾವ ಪರಾಶರ ಮುನಿಯು ಲೋಕೋಪಕಾರಕ್ಕಾಗಿ ಜೀವೇಶ್ವರಾದಿಗಳನ್ನೂ, ತದುಪಾಯಗಳನ್ನು ತೋರಿಸುತ್ತಾ ಪುರಾಣರತ್ನ (ವಿಷ್ಣುಪುರಾಣ)ವನ್ನು ರಚಿಸಿದನೋ ಆತನ ಕೃತಜ್ಞತೆಗಾಗಿ ಯಾವನಾದರೊಬ್ಬ

ವೈಷ್ಣವನಿಗೆ 'ಪರಾಶರ'ನೆಂದು ನಾಮಕರಣಮಾಡುತ್ತೇನೆ'- ಎಂದು ಹೇಳಲಾಗಿ ಕೃತಕೃತ್ಯರಾದ ಯಾಮುನಾಚಾರ್ಯರ ಮೂರನೆಯ ಬೆರಳೂ ಸರಿಯಾಯಿತು. ಇದನ್ನು ಕಂಡು ಮಹಾಶ್ಚರ್ಯ ಭರಿತರಾದ ಜನರು ರಾಮಾನುಜರನ್ನು ಮಹಾತ್ಮರೆಂದೂ ಪುರುಷೋತ್ತಮರೆಂದೂ ತಿಳಿದು ಕೊಂಡರು. ಹೀಗೆ ರಾಮಾನುಜರು ಯಾಮುನಾಚಾರ್ಯರ ಬಗ್ಗಿದ ಬೆರಳುಗಳನ್ನು ಬಿಡಿಸಿ ವಿಪ್ರರನ್ನು ವಂದಿಸಿ -'ಎಲೈ ವಿಪ್ರಶ್ರೇಷ್ಠರೇ, ನಾನು ಇದುವರೆಗೂ ಯಾಮುನಾಚಾರ್ಯರನ್ನು ತಿಳಿದವನಲ್ಲ; ಇದರಿಂದ ಬಹಳ ಅನರ್ಥವಾಯಿತು,ಏನು ಮಾಡಲಿ? ರಂಗನಾಥನ ಕರುಣೆಯು ನನ್ನಲ್ಲಿ ಈ ರೀತಿಯಾಗಿರುವುದು. ಮಾಡುವುದೇನು? ನಾನು ಕಾಂಚೆಗೇ ಹೋಗುವೆನು'- ಎಂದು ಹೊರಡಲುದ್ಯುಕ್ತರಾದರು. ಅವರ ದರ್ಶನವನ್ನೇ ಅಪೇಕ್ಷಿಸುತ್ತಿರುವ ಆ ಜನರು -'ಎಲೈ ರಾಮಾನುಜರೆ, ನೀವು ಯಾಮುನಾರ್ಯರನ್ನು ನೋಡಬೇಕೆಂದು ಬಹಳ ದೂರದಿಂದ ಇಲ್ಲಿಗೆ ಬಂದಿರಿ. ಆದರೆ ನಮ್ಮ ಗುರುಗಳಿಗೆ ಆಕಸ್ಮಿಕವಾಗಿ ಇಂತಹ ಗತಿಯುಂಟಾಯಿತು. ಭಕ್ತವತ್ಸಲನಾದ ರಂಗನಾಥನನ್ನಾದರೂ ಸೇವಿಸಿ ಅನಂತರ ಹೊರಡಬಹುದು' ಎನ್ನಲು, 'ಎಲೈ ದ್ವಿಜೋತ್ತಮರೇ, ಮಹಾಮಹಿಮನಾದ ರಂಗನಾಥನು ಈ ದಿವ್ಯಕ್ಷೇತ್ರದಲ್ಲಿದ್ದರೂ ಕೂಡ, ಮಹಾತ್ಮರಾದ ಯಾಮುನಾಚಾರ್ಯರಿಲ್ಲದಿದ್ದಮೇಲೆ ಒಂದು ಗಳಿಗೆಯೂ ಇಲ್ಲಿರಲು ನನಗೆ ಇಷ್ಟವಿಲ್ಲ. ರಂಗನಾಥನು ಲೋಕನಾಥನಾದರೂ ಸಹ ಯಾಮುನಾಚಾರ್ಯರ ಆಶಾಂಕುರವನ್ನು ಕತ್ತರಿಸಿದವನಾದುದರಿಂದ ನನಗೆ ದುಃಖವನ್ನುಂಟು ಮಾಡಿದ ನಿರ್ದಯನಾದ ಅವನನ್ನು ನೋಡುವುದಿಲ್ಲ'- ಎಂದು ಹೇಳಿ, ಆ ಗಳಿಗೆಯೇ ಅವರ ಅನುಮತಿಯನ್ನು ಪಡೆದು ಅಲ್ಲಿಂದ ಕಾಂಚೀನಗರಕ್ಕೆ ಹೊರಟುಹೋದರು. ಹೋಗುತ್ತ ಹೋಗುತ್ತ ಅನೇಕ ಗ್ರಾಮಗಳೂ, ಪರ್ವತಗಳೂ, ಕಡೆಗೆ ಕ್ಷೀರನದಿಯೂ, ಕಾಂಚೀನಗರವೂ ಕಂಡಿತು. ನದಿಯನ್ನು ಕಂಡು ಮಾರ್ಗಾಯಾಸದೊಡನೆ ಯಾಮುನಾಚಾರ್ಯರ ವಿಯೋಗ ದಿಂದ್ದುಂಟಾದ ದುಃಖ ಕಡಿಮೆಯಾಗಲು, ಸ್ನಾನಮಾಡಿ ಊರ್ಧ್ವಪುಂಡ್ರಗಳನ್ನು ಧರಿಸಿ, ದೇವರ್ಷಿ ಪಿತೃತರ್ಪಣಗಳನ್ನು ಮಾಡಿ, ಇತರ ಆಹ್ನಿಕಗಳನ್ನು ಮುಗಿಸಿ ಕಾಂಚೀನಗರವನ್ನು ಪ್ರವೇಶಿಸಿ, ಕರಿಶೈಲನಾಥನ ಸನ್ನಿಧಿಗೆ ಬಂದು ಭಗವಂತನನ್ನು ನಮಸ್ಕರಿಸಿ, ಸ್ತೋತ್ರಮಾಡಿ ಸ್ವಲ್ಪಹೊತ್ತು ಅಲ್ಲೇ ಇದ್ದು ಮನೆಗೆ ಹೋಗಿ ಆ ರಾತ್ರಿಯನ್ನು ಸುಖವಾಗಿ ಕಳೆದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯಾಮಾನಾರ್ಯಾ-ಕುಂಚಿತಾಂಗುಳಿಮೋಚನವೆಂಬ ಒಂಬತ್ತನೆಯ ಅಧ್ಯಾಯವು ಮುಗಿದುದು.

## ೧೦

ಬ್ರಾಹ್ಮಮುಹೂರ್ತದಲ್ಲಿ ಎದ್ದು ಪೂರ್ವಾಹ್ನಿಕಕ್ರಿಯೆಗಳನ್ನು ಮಾಡಿದ ರಾಮಾನುಜರು ಕಾಂಚೀಪೂರ್ಣರ ಮನೆಗೆ ಹೊರಟರು. ಅಲ್ಲಿಗೆ ಹೋಗಿ ಗುರುಗಳಾದ ಯಾಮುನಾಚಾರ್ಯರ ವಿಷಯವನ್ನು ತಿಳಿಸಲು ಶಿಷ್ಯರಾದ ಕಾಂಚೀಪೂರ್ಣರಿಗೆ ಬಹಳ ದುಃಖವಾಯಿತು. ಬಹಳ ಕಷ್ಟದಿಂದ ಸಹಿಸಿಕೊಂಡು, ದ್ವಿಜರನ್ನು ಕರೆಸಿ ಶಿಷ್ಯನು ಮಾಡ ಬೇಕಾದ ಕೃತ್ಯವನ್ನು ನಿರ್ವಹಿಸಿ, ಎಂದಿನಂತೆ ವರದರಾಜನ ನಿತ್ಯಕೈಂಕರ್ಯನಿರತಾಗಿ

ಭಗವಂತನೊಡನೆ ಸಂಲಾಪ ಮಾಡುತ್ತಿದ್ದರು. ರಾಮಾನುಜರು ದೃಢವ್ರತನಾದ ಕಾಂಚೀಪೂರ್ಣರನ್ನು ಕಂಡು, ಅವರು ಪರಮಾತ್ಮನ ಅಂತರಂಗ ಭಕ್ತರಾಗಿರುವುದನ್ನು ತಿಳಿದು ತನ್ನ ಗುರುವನ್ನಾಗಿ ತಿಳಿದುಕೊಂಡರು.

ಒಂದು ಸಲ ಲಕ್ಷ್ಮಣಾಚಾರ್ಯ (ರಾಮಾನುಜ)ರು ಕಾಂಚೀಪೂರ್ಣರ ಶೇಷಾನ್ನವನ್ನು ಭುಜಿಸಬೇಕೆಂಬ ಇಚ್ಛೆಯಿಂದ ಕಾಂಚೀಪೂರ್ಣರನ್ನು ಕುರಿತು -'ದಯಾನಿಧೇ ಕಾಂಚೀಪೂರ್ಣ, ನನ್ನಲ್ಲಿ ದಯವಿಟ್ಟು ಈ ದಿವಸ ನಮ್ಮ ಮನೆಯಲ್ಲಿಯೇ ಭೋಜನ ಮಾಡಬೇಕು'- ಎಂದು ಪ್ರಾರ್ಥಿಸಲು, ಕಾಂಚೀಪೂರ್ಣರು ಅವರ ಇಂಗಿತವನ್ನರಿತು -'ನಾನು ಇವನ ಮನೆಯಲ್ಲಿ ಊಟಮಾಡದಿದ್ದರೆ ನಿಜವಾಗಿಯೂ ಇವನ ಮನಸ್ಸು ದುಃಖಿಗೊಳ್ಳುತ್ತದೆ; ಪಾಪಭೀರುವಾದವನು ಯಾವಾಗಲೂ ಜನರಿಗೆ ಹಿತವಾದುದನ್ನೇ ಮಾಡಬೇಕು. ಇವನಾದರೋ ನನ್ನ ಮಿತ್ರನು; ವಿಷ್ಣುಭಕ್ತನು; ಮೇಧಾವಿಯಾದ ದ್ವಿಜಶ್ರೇಷ್ಠನು; ಲೋಕಸಂರಕ್ಷಣಾರ್ಥವಾಗಿಯೇ ವೈಕುಂಠದಿಂದ ಬಂದಿರುವನು. ಆದುದರಿಂದ ಇವನಿಗೆ ಇಷ್ಟವಾದುದನ್ನೇ ಮಾಡಬೇಕು'- ಎಂದು ಚಿಂತಿಸಿ ರಾಮಾನುಜರನ್ನು ಕುರಿತು-' ಎಲೈ ದ್ವಿಜೋತ್ತಮನೆ, ನಿನ್ನ ಇಷ್ಟದಂತೆಯೇ ಆಗಲಿ'-ಎಂದರು. ವೈಷ್ಣವೋತ್ತಮರಾದ ರಾಮಾನುಜರು ಬಹು ಸಂತುಷ್ಟರಾಗಿ ಬೇಗ ಮನೆಗೆ ಬಂದು ಪ್ರೀತಿಯಿಂದ ವಿಶೇಷವಾಗಿ ಅಡಿಗೆಯನ್ನು ಮಾಡಿಸಿ, ಭಗವಂತನನ್ನು ಭಕ್ತಿಯಿಂದ ಅರ್ಚನೆಮಾಡಿ ಕಾಂಚೀಪೂರ್ಣರ ಬರುವಿಕೆಯನ್ನು ನಿರೀಕ್ಷಿಸುತ್ತಿದ್ದರು. ಇಷ್ಟು ಹೊತ್ತಾದರೂ ಬರಲಿಲ್ಲ; ಹರಿಪ್ರಿಯನು ಬರುವರೋ ಇಲ್ಲವೋ ಎಂದು ಯೋಚಿಸಿ ಮತ್ತೆ ಹಸ್ತಿಗಿರಿಯ ದಕ್ಷಿಣದಿಂದ ಅವರ ಮನೆಗೆ ಹೋದರು. ಕಾಂಚೀಪೂರ್ಣರಾದರೋ ಅದರ ಉತ್ತರ ಮಾರ್ಗದಿಂದ ರಾಮಾನುಜರ ಮನೆಗೆ ಹೊರಟ್ಟಿದ್ದರು. ಮನೆಗೆ ಹೋಗಿ ರಾಮಾನುಜರ ಪತ್ನಿಯನ್ನು ಕುರಿತು -'ಎಲೈ ಪತಿವ್ರತೆಯೇ, ಲಕ್ಷ್ಮಣಾಚಾರ್ಯರೆಲ್ಲಿ?'- ಎಂದು ಕೇಳಲಾಗಿ ಭಕ್ತಿಯುತಳಾದ ಆ ಸಾಧ್ವಿಯು -'ಅವರು ದೇವಾರ್ಚನೆಯನ್ನು ಮಾಡಿ, ನಿಮ್ಮ ನಿರೀಕ್ಷಣೆಯಿಂದಲೇ ಭೋಜನವಿಲ್ಲದೆ ನಿಮ್ಮನ್ನು ಕರೆತರುವುದಕ್ಕಾಗಿಯೇ ನಿಮ್ಮ ಮಠಕ್ಕೆ ಈಗ ತಾನೆ ಹೋರಟರು. ಒಂದುಗಳಿಗೆ ದಯಾಮಾಡಿ ಕುಳಿತರೆ ಬರುವರು'- ಎಂದಳು. ಅವಳ ಮಾತನ್ನು ಕೇಳಿದ ಕಾಂಚೀಪೂರ್ಣರು -'ಎಲೈ ಮಾತೆ, ಸರ್ವಹಿತಕಾಂಕ್ಷಿಣಿ, ನನ್ನ ವಿಜ್ಞಾಪನೆಯನ್ನು ಕೇಳು. ನನಗೆ ಬಹಳ ಹಸಿವಾಗಿರುವು ದರಿಂದ ಬೇಗ ಭೋಜನವನ್ನು ಮಾಡಿಸು; ದೇವರಾಜನ ಕೈಂಕರ್ಯಕ್ಕಾಗಿ ನಾನು ಈಗಲೇ ಹೋಗಬೇಕಾಗಿರುವುದರಿಂದಲೂ ನಿನ್ನ ಪತಿಯು ಬರುವವರೆಗೂ ನಿರೀಕ್ಷಿಸಲು ಸಾಧ್ಯವಿಲ್ಲ' ಎಂದರು. ಕಾಂಚೀಪೂರ್ಣರ ಈ ಮಾತಿನಿಂದಲೂ, ಪತಿಯ ಅಭಿಪ್ರಾಯವು ತನಗೆ ತಿಳಿಯದೆ ಇದ್ದುದರಿಂದಲೂ ಬೇಗ ಬಡಿಸಿದಳು. ಕಾಂಚೀಪೂರ್ಣರು ಅಮೃತಕ್ಕೆ ಸಮಾನವಾದ ಭೋಜನವನ್ನು ಮಾಡಿ, ಬೇಗ ಕೈಕಾಲುಗಳನ್ನು ತೊಳೆದುಕೊಂಡು, ಉಚ್ಛಿಷ್ಟಪಾತ್ರವನ್ನು ದೂರದಲ್ಲಿ ಬಿಸುಟು, ಪೂರ್ವದಿಕ್ಕಿನ ಗೋಪುರದ್ವಾರದ ಮಾರ್ಗವಾಗಿ ನಾಗಾಚಲಕ್ಕೆ ಹೊರಟರು. ಭರ್ತೃಪೋಷಣಾ ತತ್ಪರಳಾದ ಸಾಧ್ವಿಯು ಉಳಿದಿದ್ದ ಅನ್ನವನ್ನು ಭೃತ್ಯವರ್ಗಕ್ಕೆ ಕೊಟ್ಟು ಮತ್ತೆ ಸ್ನಾನಮಾಡಿ ಅಡಿಗೆ ಮಾಡುತ್ತಿದ್ದಳು.

ಅತ್ತ ಕಾಂಚೀಪೂರ್ಣರ ಮಠಕ್ಕೆ ಹೋದ ರಾಮಾನುಜರು ಪರಜನರಿಂದ

ವೃತ್ತಾಂತವನ್ನು ತಿಳಿದು, ಬೇಗ ಮನೆಗೆ ಬಂದು ಮತ್ತೆ ಸ್ನಾನಮಾಡಿರುವ ಪತ್ನಿಯನ್ನು ನೋಡಿ ಬಹಳ ಆಶ್ಚರ್ಯದಿಂದ -'ಎಲೈ ಮೂಢಳೆ, ಮತ್ತೆ ಸ್ನಾನಮಾಡಲು ಕಾರಣವೇನು? ಎಂದು ಕೇಳಿದರು. ಆಗ ಪತ್ನಿಯು, ಪತಿಯು ಅತ್ತ ಹೋದಕೂಡಲೇ ಕಾಂಚೀಪೂರ್ಣರು ಮನೆಗೆ ಬಂದುದನ್ನೂ, ಭೋಜನ ಮಾಡಿದುದನ್ನೂ, ಭಗವತ್ಕೈಂಕರ್ಯಕ್ಕೆ ತ್ವರೆಪಟ್ಟು ಹೊರಟುದುದನ್ನೂ ತಿಳಿಸಿ, ಬ್ರಾಹ್ಮಣನು ಶೂದ್ರ ಶೇಷವನ್ನು ಎಂದೂ ತಿನ್ನಬಾರದೆಂಬುದನ್ನು ಆಲೋಚಿಸಿ ಇದ್ದುದೆಲ್ಲವನ್ನೂ ದಾಸ ಜನರಿಗೆ ಕೊಟ್ಟು, ಉಪವಾಸದಿಂದಿರುವ ಪತಿಗಾಗಿ ಶುಚಿಯಾಗಿ ಮತ್ತೆ ಅಡಿಗೆ ಮಾಡಬೇಕೆಂದು ಸ್ನಾನಮಾಡಿರುವುದನ್ನೂ ವಿವರಿಸಿದಳು. ತನಗೆ ಅಸಮಾಧಾನಕರವಾದ ಆ ಮಾತನ್ನು ಕೇಳಿ ಸ್ವಾರ್ಥಭ್ರಷ್ಟರಂತೆ ರಾಮಾನುಜರು ಬಹುವಾಗಿ ಪರಿತಪಿಸಿದರು.

ಅನಂತರ ರಾಮಾನುಜರು ಮತ್ತೆ ಭಗವದರ್ಚನೆಯನ್ನು ಮಾಡಿ ಭಗವನ್ನಿವೇದಿತವಾಗಿ ಅನ್ನವನ್ನು ಭುಜಿಸಿ ಕಾಂಚೀಪೂರ್ಣರನ್ನು ನೋಡಬೇಕೆಂದು ಹಸ್ತಿಗಿರಿಗೆ ಹೋಗಿ, ಅಲ್ಲಿ ಹರಿಪ್ರಿಯನಾಗಿ ವರದರಾಜನ ಸಮೀಪದಲ್ಲಿರುವ ಕಾಂಚೀಪೂರ್ಣರನ್ನು ಕಂಡು ಅಂಜಲಿಬದ್ಧರಾಗಿ -'ಎಲೈ ಪೂಜ್ಯರೇ, ದಯಾನಿಧಿಯೇ, ಈಗಲೇ ನನಗೆ ಪಂಚಸಂಸ್ಕಾರ ಗಳನ್ನು ಮಾಡಿ ರಕ್ಷಿಸಬೇಕು. ನಾನು ತಮ್ಮ ಶರಣಾಗತನಾಗಿರುತ್ತೇನೆ. ಈ ಲೋಕದಲ್ಲಿ ತಮಗೆ ಸಮಾನರಾದವರು ಮತ್ತೊಬ್ಬರಿಲ್ಲ, ಆದುದರಿಂದ ದೀನನೂ, ಭಕ್ತನೂ ಆದ ನನ್ನನ್ನು ಉಪೇಕ್ಷಿಸುವುದು ಯುಕ್ತವಲ್ಲ'- ಎಂದು ಪ್ರಾರ್ಥಿಸಿದರು. ವಿಷ್ಣುಭಕ್ತರಾದ ಕಾಂಚೀಪೂರ್ಣರು ಪರಮವೈದಿಕರಾದ ಲಕ್ಷ್ಮಣಾಚಾರ್ಯರ ಮಾತನ್ನು ಕೇಳಿ ದೇವರಾಜನ ಸನ್ನಿಧಿಯಲ್ಲಿ ಅರ್ಥಗರ್ಭಿತವಾಗಿ -'ಎಲೈ ರಾಮಾನುಜನೆ, ನೀನು ಹೇಳಿದ ಈ ಮಾತು ಲೋಕಗರ್ಹಿತವಾದುದು; ವರ್ಣಸಂಕರಕಾರಕವಾದುದು; ಆದುದರಿಂದ ಇದನ್ನು ಹೇಗೆ ನಡೆಸುವುದು?'- ಎನ್ನಲು, ರಾಮಾನುಜರು ಆ ಮಾತು ನಿಜವೆಂದು ತಿಳಿದು ನಮ್ರತೆಯಿಂದ 'ಎಲೈ ದಯಾನಿಧಿಯೇ, ನಾನು ಯಾವ ಯಾವ ತತ್ವಾರ್ಥಗಳನ್ನು ಚಿಂತಿಸಬಹುದೆಂಬುದನ್ನು ದೇವರಾಜನಲ್ಲಿ ವಿಜ್ಞಾಪಿಸಿ ನನಗರುಹಬೇಕೆಂದು ವಿಜ್ಞಾಪಿಸಿದರು. ಕಾಂಚೀಪೂರ್ಣರು ಹಾಗೆಯೇ ಆಗಲೆಂದು ಹೇಳಿ ಭಗವತ್ಕೈಂಕರ್ಯದಲ್ಲಿಯೇ ನಿರತರಾದರು. ರಾಮಾನುಜರು ಭಗವಂತನನ್ನು ವಂದಿಸಿ ತನ್ನ ಮನೆಗೆ ಹೋದರು.

ಅದೇ ದಿನರಾತ್ರಿ ಕಾಂಚೀಪೂರ್ಣರು ಭಕ್ತಿಯಿಂದ ಭಗವಂತನಿಗೆ ಬೀಸಣಿಗೆಯನ್ನು ಬೀಸುತ್ತಿದ್ದರು. ಇಂತಹ ಅಂತರಂಗಭಕ್ತರಾದ ಕಾಂಚೀಪೂರ್ಣರನ್ನು ಕುರಿತು ಭಗವಂತನು 'ಎಲೈ ತಪೋಧನನೆ, ನಿನ್ನ ಮುಖವನ್ನು ನೋಡಿದರೆ ಏನೋ ಹೇಳಬೇಕೆಂದಿರುವಂತೆ ಕಾಣುತ್ತದೆ. ಆದುದರಿಂದ ಮನಸ್ಸಿನಲ್ಲಿ ಯೋಚಿಸುತ್ತಿರುವುದನ್ನು ಬೇಗ ಹೇಳು'- ಎಂದು ಮಂದಹಾಸಪೂರ್ವಕವಾಗಿ ಕೇಳಿದನು. ಆಗ ವಿನೀತರಾದ ಕಾಂಚೀಪೂರ್ಣರು ರಾಮಾನುಜರು ಹೇಳಿದ ಮಾತನ್ನು ಭಗವಂತನಿಗೆ ವಿಜ್ಞಾಪಿಸಲು, ಅದನ್ನು ಕೇಳಿ ಪ್ರೀತನಾದ ಪರಮಾತ್ಮನು,-'ನಾನೇ ಜಗತ್ಕಾರಣನಾದ ಪರಬ್ರಹ್ಮನು. ಜೀವೇಶ್ವರರ ಭೇಧವು ಸಿದ್ಧವಾದುದೇ ಸರಿ. ಮುಕ್ತಿಯನ್ನು ಅಪೇಕ್ಷಿಸುವ ಜನರಿಗೆ ಮೋಕ್ಷೋಪಾಯವು ನ್ಯಾಸವೇ ಸರಿಯಾದುದು. ಜನರಿಗೆ ಅಂತಿಮಸ್ಮೃತಿಯು ಬರುವುದು ಕಷ್ಟ. ನನ್ನ ಭಕ್ತರಿಗೆ ದೇಹಾವಸಾನದಲ್ಲಿ ನಾನು

ಪರಮಪದವನ್ನು ಕೊಡುತ್ತೇನೆ. ಮಹಾತ್ಮನಾದ ಪೂರ್ಣಾಚಾರ್ಯರನ್ನು ಆಶ್ರಯಿಸು'- ಎಂದು ರಾಮಾನುಜರಿಗೆ ತಿಳಿಸಬೇಕೆಂದು ಆಜ್ಞಾಪಿಸಿದನು. ಕಾಂಚೀಪೂರ್ಣರು ಹಾಗೆಯೇ ಭಗವದಾಜ್ಞೆಯನ್ನು ನೆರವೇರಿಸಿದರು. ಕಾಂಚೀಪೂರ್ಣರಿಂದ ಈ ವೃತ್ತಾಂತವನ್ನು ಕೇಳಿ, ತಾನು ಯೋಚಿಸಿದ್ದುದೂ ಇದೂ ಒಂದೇ ಆಗಿದ್ದುದರಿಂದ ರಾಮಾನುಜರಿಗೆ ಬಹಳ ಆಶ್ಚರ್ಯ ವಾಯಿತು. ಅನಂತರ ಭಗವಂತನನ್ನೂ ಕಾಂಚೀಪೂರ್ಣರನ್ನೂ ಭಕ್ತಿಯಿಂದ ಸೇವಿಸಿ, ಕಾಂಚೀಪೂರ್ಣರ ಮೂಲಕ ಭಗವಂತನಿಂದ ಅನುಗ್ರಹಿಸಲ್ಪಟ್ಟ ಷಡರ್ಥಗಳನ್ನೂ ಗ್ರಹಿಸಿ, ಪೂರ್ಣಾಚಾರ್ಯರನ್ನು ಆಶ್ರಯಿಸುವ ಉತ್ಕಟೇಚ್ಛೆಯಿಂದ ಕಾಂಚೀನಗರವನ್ನು ಬಿಟ್ಟು ಶ್ರೀರಂಗಕ್ಕೆ ಹೊರಟರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ದೇವರಾಜನಿಂದ ಷಡರ್ಥ ಸಂಪ್ರಾಪ್ತಿಯೆಂಬ ಹತ್ತನೆಯ ಅಧ್ಯಾಯವು ಮುಗಿದುದು.

೧೧

ಶ್ರೀರಂಗಕ್ಷೇತ್ರದಲ್ಲಿ ಪೂರ್ಣಾಚಾರ್ಯರೇ ಮೊದಲಾದ ದ್ವಿಜಶ್ರೇಷ್ಠರು ತಮ್ಮ ಆಚಾರ್ಯ ರಾದ ಯಾಮುನಾಚಾರ್ಯರ ಆರಾಧನಾದಿಗಳನ್ನು ಭಕ್ತಿಯಿಂದ ನೆರವೇರಿಸಿದರು. ಅದೇ ಪ್ರಸಂಗದಿಂದ ಯಾಮುನಾಚಾರ್ಯರ ಗುಣಗಳನ್ನೆಲ್ಲಾ ಸ್ಮರಿಸುತ್ತ ಬಹಳ ದುಃಖಿತರಾದರು. ಅಷ್ಟರಲ್ಲಿ ಕೆಲವರು ವಿಪ್ರಶ್ರೇಷ್ಠರಾದ ರಾಮಾನುಜರನ್ನು ಜ್ಞಾಪಿಸಿಕೊಂಡು 'ಮಹಾತ್ಮರಾದ ಯಾಮುನಾಚಾರ್ಯರು ಪರಂಧಾಮವನ್ನೆದಿದುದಕ್ಕಾಗಿ ದುಃಖಿಸಬೇಡಿ. ಸತ್ಯವ್ರತಕ್ಷೇತ್ರದಲ್ಲಿ ರಾಮಾನುಜರೆಂದು ಪ್ರಸಿದ್ಧರಾದ ವಿಪ್ರೋತ್ತಮರು ಈಗ ನಮ್ಮ ರಕ್ಷಕರಾಗಿರುವರು. ಯಾಮುನಾರ್ಯರ ಅನಂತರ ರಾಮಾನುಜರನ್ನು ಬಿಟ್ಟರೆ ನಮ್ಮ ಮತಪಾಲಕರು ಮತ್ತೆ ಯಾರು ಇರುವುದಿಲ್ಲ, ಈ ರಾಮಾನುಜರಾದರೋ ಬುದ್ಧಿಶಾಲಿಯು; ಯಾಮುನಾಚಾರ್ಯರಿಗೆ ಸಮಾನರು; ಶೀಲಾದಿ ಗುಣಯುತರು; ಬುದ್ಧಿಯಲ್ಲಿ ಬೃಹಸ್ಪತಿಯಂತೆಯೂ, ತೇಜಸ್ಸಿನಲ್ಲಿ ಸೂರ್ಯನಂತೆಯೂ, ಭಕ್ತಿಯಲ್ಲಿ ಪ್ರಹ್ಲಾದನಂತೆಯೂ,ತಾಳ್ಮೆಯಲ್ಲಿ ಭೂಮಿಯಂತೆಯೂ ಇರುವರು. ಮಹಾಜ್ಞಾನಿಯು; ಸರ್ವಶಾಸ್ತ್ರಾರ್ಥವೇತ್ತರು; ದಯಾಳುವು; ಧರ್ಮಶೀಲರು; ಲೋಕರಕ್ಷಾಸಮರ್ಥರು. ಆದುದರಿಂದ ನಮ್ಮ ಮತವನ್ನು ಪಾಲಿಸುವುದರಲ್ಲಿ ಸಂಶಯವಿಲ್ಲ. ಎಲೈ ಪೂರ್ಣಾಚಾರ್ಯರೇ, ಈಗಲೇ ಕಾಂಚೀಪುರಕ್ಕೆ ಹೋಗಿ, ರಾಮಾನುಜರಿಗೆ ಪಂಚಸಂಸ್ಕಾರವನ್ನು ಮಾಡಿ. ಕೆಲವು ದಿನಗಳು ಅಲ್ಲಿಯೇ ಅವನೊಡನೆ ಇದ್ದು, ವಿಷ್ಣುಚಿತ್ತಾದಿ ಗಳಿಂದ ರಚಿಸಲ್ಪಟ್ಟ ಸ್ವಮತಕ್ಕೆ ಆವಶ್ಯಕವಾದ ಗ್ರಂಥಗಳನ್ನು ಉಪದೇಶಿಸಿ ಯಾವುದಾದರೊಂದು ಉಪಾಯದಿಂದ ಆತನನ್ನು ಇಲ್ಲಿಗೆ ಕರೆದುಕೊಂಡು ಬನ್ನಿರಿ ಎಂದರು. ಅವರ ಮಾತನ್ನು ಕೇಳಿ ದಯಾಳುಗಳಾದ ಪೂರ್ಣಾಚಾರ್ಯರು ರಂಗನಾಥನ ಅನುಮತಿಯನ್ನು ಪಡೆದು ಸಕುಟುಂಬವಾಗಿ ಸತ್ಯವ್ರತಕ್ಷೇತ್ರವನ್ನು ಕುರಿತು ಪ್ರಯಾಣ ಮಾಡಿದರು. ಪ್ರಯಾಣ ಮಾಡುತ್ತ ಅನೇಕ ನದಿಗಳನ್ನೂ, ವನಗಳನ್ನೂ, ಗ್ರಾಮಗಳನ್ನೂ ದಾಟಿ ಮಧುರಾಂತಕವೆಂಬ ಅಗ್ರಹಾರವನ್ನು ಸೇರಿದರು.

ಅಷ್ಟು ಹೊತ್ತಿಗೆ ರಾಮಾನುಜರೂ ಸಹ ಶ್ರೀರಂಗಕ್ಕಾಗಿ ಹೊರಟು ಅದೇ ಅಗ್ರಹಾರಕ್ಕೆ ಬಂದಿರಲು, ಸಕುಟುಂಬವಾಗಿ ಪೂರ್ಣಾಚಾರ್ಯರು ಬಂದುದನ್ನು ಕಂಡು ಬಹಳ ಆಶ್ಚರ್ಯದಿಂದಲೂ, ಆನಂದದಿಂದಲೂ ನಮ್ರತೆಯಿಂದಲೂ ಅವರ ಪಾದಗಳಿಗೆ ವಂದಿಸಿ -'ಎಲೈ ಮಹಾಮಹಿಮರೆ, ಮಹಾಪವಿತ್ರವೂ ಮನೋಹರವೂ ಆದ ಶ್ರೀರಂಗಕ್ಷೇತ್ರವನ್ನೂ, ಭುಕ್ತಿಮುಕ್ತಿ ಪ್ರದಾಯಕವಾದ ಶ್ರೀರಂಗನಾಥನ ಸೇವೆಯನ್ನೂ ಬಿಟ್ಟು ಸಕುಟುಂಬರಾಗಿ ಎಲ್ಲಿಗೆ ಹೊರಟಿರುವಿರಿ ?'- ಎಂದು ಕೇಳಲು, ಪೂರ್ಣಾಚಾರ್ಯರು ತಾವು ಹೊರಟುಬಂದ ಕಾರಣವನ್ನು ಅವರಿಗೆ ವಿಸ್ತರಿಸಿ ಹೇಳಿ, ಅವರು ಇಲ್ಲಿಗೆ ಬಂದ ಕಾರಣವನ್ನು ಕೇಳಿದರು. ಕೂಡಲೇ ರಾಮಾನುಜರು ತಮ್ಮ ವೃತ್ತಾಂತವೆಲ್ಲವನ್ನೂ ಹೇಳಿದುದಲ್ಲದೇ -'ಎಲೈ ದಯಾನಿಧಿಗಳೇ, ಇಲ್ಲಿಯೇ ನನಗೆ ಪಂಚಸಂಸ್ಕಾರಗಳನ್ನು ಮಾಡಿ, ಸಂಸಾರಕೂಪಪತಿತನಾದ ನನ್ನನ್ನು ಉದ್ಧರಿಸಿ'- ಎಂದು ಪ್ರಾರ್ಥಿಸಿದರು. ರಾಮಾನುಜರ ಪ್ರಾರ್ಥನೆಯನ್ನು ಕೇಳಿದ ಕೂಡಲೇ ಪೂರ್ಣಾಚಾರ್ಯರು 'ಪವಿತ್ರವಾದ ಸತ್ಯವ್ರತಕ್ಷೇತ್ರದಲ್ಲಿ ದೇವರಾಜನ ಸನ್ನಿಧಿಯಲ್ಲಿ ನಿನಗೆ ಪಂಚಸಂಸ್ಕಾರಗಳನ್ನು ಮಾಡುವೆನು; ಯೋಚಿಸಬೇಡ. ಈ ಅಗ್ರಹಾರಕ್ಕೆ ಸ್ವಲ್ಪದೂರದಲ್ಲಿಯೇ ಕ್ಷೇತ್ರವಿರುವುದಷ್ಟೆ; ಎಲೈ ಪ್ರಾಜ್ಞನೆ, ಒಂದು ದಿನ ಸಹಿಸು; ಈಗಲೇ ಅಲ್ಲಿಗೆ ಹೊರಡೋಣ'- ಎನ್ನಲು, ರಾಮಾನುಜರು -'ಆಚಾರ್ಯರೆ, ಶರೀರವು ಅಸ್ಥಿರವೆಂದು ತಿಳಿದು ನಾನು ಹೇಗೆ ಕಾಲವಿಳಂಬವನ್ನು ಸಹಿಸಲಿ ? ಹಿಂದೆ ನಾನು ಯಾಮುನಾಚಾರ್ಯರನ್ನು ನೋಡಬೇಕೆಂದು ತವೊಡನೆಯೇ ಕಾಂಚೀನಗರದಿಂದ ಹೊರಟು ಶ್ರೀರಂಗಕ್ಕೆ ಬರುವ ವೇಳೆಗೆ ಅವರು ಪರಮಪದವನ್ನು ಹೊಂದಿದರು. ಮಲಗಿರುವವನನ್ನಾಗಲಿ, ಊಟಮಾಡುತ್ತಿರುವವನನ್ನಾಗಲಿ, ದಾರಿಯಲ್ಲಿ ನಡೆಯುತ್ತಿರುವವನನ್ನಾಗಲಿ, ತರುಣನನ್ನಾಗಲಿ, ಬಾಲನನ್ನಾಗಲಿ, ವಿಧಿಯು ತನ್ನ ವಶಪಡಿಸಿಕೊಳ್ಳುವುದಷ್ಟೆ; ಆದುದರಿಂದ ಶ್ರೇಯಸ್ಕಾಮನಾದ ಮನುಷ್ಯನು ಆಗಾಗಲೇ ಕಾರ್ಯವನ್ನು ಮಾಡಿಕೊಳ್ಳಬೇಕು; ವಿಳಂಬ ಮಾಡುವುದು ಯುಕ್ತವಲ್ಲ'- ಎಂದರು. ಯುಕ್ತಿಯುಕ್ತವಾದ ಆ ಮಾತನ್ನು ಕೇಳಿದ ಆಚಾರ್ಯರು -' ಎಲೈ ರಾಮಾನುಜನೆ, ಈ ಸರೋವರದಲ್ಲಿ ಸ್ನಾನ ಮಾಡಿ ಬಾ' ಎಂದು ಹೇಳಿ, ತಾವೂ ಸ್ನಾನಾಹ್ನಿಕಗಳೆಲ್ಲವನ್ನೂ ಮುಗಿಸಿ, ವಿಷ್ಣುದೇವಾಲಯಕ್ಕೆ ಹೋಗಿ, ಅಲ್ಲಿದ್ದ ಶ್ರೀವೈಷ್ಣವರೊಡನೆ ಅಗ್ನಿ ಪ್ರತಿಷ್ಠಾಪನೆಯನ್ನು ಮಾಡಿ, ಆಜ್ಯಭಾಗಾಂತವಾಗಿ ಹೋಮ ಮಾಡಿ, ಋತ್ವಿಕ್ಕುಗಳೊಡನೆ ಪುರುಷಸೂಕ್ತದಿಂದಲೂ, ಮೂಲಮಂತ್ರದಿಂದಲೂ, ಇತರವಾದ ವೈಷ್ಣವಾನುವಾಕಗಳಿಂದಲೂ, ಭಕ್ತಿಯಿಂದ ಅಷ್ಟೋತ್ತರ ಸಹಸ್ರ ಸಂಖ್ಯೆಯಿಂದ ಚರುಹೋಮವನ್ನೂ, ಆಜ್ಯಹೋಮವನ್ನೂ ಮಾಡಿ, ಸುದರ್ಶನವನ್ನೂ ಪಾಂಚಜನ್ಯವನ್ನೂ ಗಂಧಪುಷ್ಪಾಕ್ಷತೆಗಳಿಂದ ಅರ್ಚಿಸಿ, ವಿಪ್ರೋತ್ತಮರೂ, ವಿಷ್ಣುಭಕ್ತರೂ, ಮುಂದುಗಡೆಯೇ ಅಂಜಲೀಬದ್ಧರೂ, ವಿನೀತರೂ, ಪರಿಶುದ್ಧರೂ ಆದ ಲಕ್ಷ್ಮಣಾಚಾರ್ಯರನ್ನು ನೋಡಿ, ಶರಕೋದಂಡಧಾರಿಯಾದ ಶ್ರೀರಾಮಚಂದ್ರನ ಸನ್ನಿಧಿಯಲ್ಲಿ ವಿಧಿಪೂರ್ವಕವಾಗಿ ಶಂಖಚಕ್ರಗಳನ್ನು ತಾಪನಮಾಡಿ, ಲಕ್ಷ್ಮಣಾಚಾರ್ಯರ ಲಕ್ಷಣವಾದ ಎರಡು ಭುಜಗಳಲ್ಲಿಯೂ ಶಂಖಚಕ್ರಗಳನ್ನು ಅಂಕನಮಾಡಿ, ಶಿಷ್ಯವತ್ಸಲರಾದ ಆಚಾರ್ಯರು ರಾಮಾನುಜರಿಗೆ ಆಪನ್ನರಕ್ಷಕ ಮಂತ್ರವನ್ನೂ, ದಾಸ್ಯನಾಮಾದಿಗಳನ್ನೂ ಆರ್ಚಾರೂಪಿಯಾದ ದೇವರಾಜನನ್ನೂ ಅನುಗ್ರಹಿಸಿದರು. ಈ ರೀತಿಯಾಗಿ ಆಚಾರ್ಯರಾದ ಪೂರ್ಣಾಚಾರ್ಯರಿಂದ ಪಂಚಸಂಸ್ಕಾರಗಳನ್ನು

ಹೊಂದಿದ ರಾಮಾನುಜರು ಶರಚ್ಚಂದ್ರನಂತೆ ನಿರ್ಮಲರಾಗಿ ಪ್ರಕಾಶಿಸುತ್ತಿದ್ದರು.

ಆಚಾರ್ಯರು ರಾಮಾನುಜರನ್ನು ಶ್ರೀವೈಷ್ಣವತೇಜಸ್ಸಿನಿಂದ ಕೂಡಿರುವವರನ್ನಾಗಿ ಮಾಡಿ ಶ್ರೀಹರಿಯ ದಾಸ್ಯಸಾಮ್ರಾಜ್ಯದಲ್ಲಿ ಅವರಿಗೆ ಪಟ್ಟಾಭಿಷೇಕವನ್ನು ಮಾಡಿ, ಅವರ ಅತ್ಯದ್ಭುತವಾದ ತೇಜಸ್ಸನ್ನು ನೋಡಿ ಕುತೂಹಲದಿಂದಲೂ ಪ್ರೀತಿಯಿಂದಲೂ -'ಎಲೈ ಮಹಾಮಹಿಮನೆ, ಭೂಲೋಕದಲ್ಲಿ ಯಾಮುನಾಚಾರ್ಯರ ಅನಂತರ ಎಲ್ಲರಿಗೂ ಆಚಾರ್ಯನಾಗಿ ರಕ್ಷಕನಾಗಿರಲು ನೀನೇ ಯೋಗ್ಯನು. ಪ್ರಚ್ಛನ್ನಬೌದ್ಧರ ಸಿದ್ಧಾಂತಗಳನ್ನು ಸಮೂಲವಾಗಿ ನಾಶಮಾಡಿ, ಶ್ರೀಯಃಪತಿಯನ್ನೂ ಸರ್ವಶೇಷಿಯನ್ನಾಗಿ ತೋರಿಸಿಕೊಡುವ ಶಕ್ತಿಯು ನಿನಗಲ್ಲದೆ ಮತ್ತೆ ಯಾರಿಗೂ ಇಲ್ಲ'- ಎಂದು ಹೇಳಿದರು.

ಅನಂತರ ರಾಮಾನುಜರು ತನ್ನ ಆಚಾರ್ಯರಿಗೆ ಅಗ್ರಪೂಜೆಯನ್ನು ಸಲ್ಲಿಸಿ, ಶಾಸ್ತ್ರೋಕ್ತವಾಗಿ ಅಲ್ಲಿದ್ದ ವೈಷ್ಣವರೆಲ್ಲರನ್ನೂ ಪೂಜಿಸಿ, ಕೃಪಾನಿಧಿಯಾದ ಆಚಾರ್ಯರನ್ನು ಕುಟುಂಬ ಸಹಿತವಾಗಿ ಕರೆದುಕೊಂಡು ಮತ್ತೆ ಸತ್ಯವ್ರತಕ್ಷೇತ್ರಕ್ಕೆ ಹೊರಟರು.

ಕಾಂಚೀನಗರವನ್ನು ತಲುಪಿ, ದೇವರಾಜನ ಸನ್ನಿಧಿಗೆ ಹೋಗಿ ತೀರ್ಥಶಠಾರಿಗಳನ್ನು ಭಕ್ತಿಯಿಂದ ಸ್ವೀಕರಿಸಿ, ಕಾಂಚೀಪೂರ್ಣರಿಗೆ ನಡೆದ ವೃತ್ತಾಂತವೆಲ್ಲವನ್ನೂ ತಿಳಿಸಿ,ತಮ್ಮ ಮನೆಗೆ ಹೋದರು. ಮನೆಗೆ ಹೋಗಿ, ಸ್ವಾಚಾರ್ಯರಾದ ಪೂರ್ಣಾಚಾರ್ಯರಿಗೆ ಪ್ರೀತಿಯಿಂದ ತನ್ನ ಮನೆಯ ಅರ್ಧಭಾಗವನ್ನು ಕೊಟ್ಟು, ಅವರ ಸನ್ನಿಧಿಯಲ್ಲಿ ಪ್ರತಿದಿನವೂ ದ್ರಾವಿಡದಿವ್ಯ ಪ್ರಬಂಧಗಳನ್ನೂ, ಸಾತ್ವಿಕ ಪುರಾಣಗಳನ್ನೂ, ಭಕ್ತಿಪೂರ್ವಕವಾಗಿ ಅಧ್ಯಯನ ಮಾಡುತ್ತ ಭಗವತ್ಪರರಾಗಿ ಸುಖವಾಗಿರುತ್ತಲಿರಲು ಆರು ಮಾಸಗಳು ಕಳೆದವು.

ಪೂರ್ಣಾಚಾರ್ಯರೂ ಸಹ ತಮ್ಮ ಆಚಾರ್ಯರ ಅಪ್ಪಣೆಯಂತೆ ರಾಮಾನುಜರಿಗೆ ಶಾಸ್ತ್ರಾರ್ಥಗಳನ್ನು ಉಪದೇಶಮಾಡುತ್ತ, ಹಸ್ತಿಗಿರಿನಾಯಕನಾದ ದೇವರಾಜನಲ್ಲಿ ಭಕ್ತಿಯುತ ರಾಗಿ, ಕಾಂಚೀನಗರದಲ್ಲಿಯೇ ವಾಸಮಾಡುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ದೇವರಾಜನ ಆಜ್ಞೆಯಿಂದ ಪೂರ್ಣಾಚಾರ್ಯ ಸಮಾಶ್ರಯಣವೆಂಬ ಹನ್ನೊಂದನೆಯ ಅಧ್ಯಾಯವು ಮುಗಿದುದು.

## ೧೨

ಒಂದು ದಿನ ಲಕ್ಷ್ಮಣಾಚಾರ್ಯರಿಗೆ ತೈಲಾಭ್ಯಂಜನವನ್ನು ಮಾಡಿಸುವ ಶ್ರೀವೈಷ್ಣವ ನೊಬ್ಬನು ಅಭ್ಯಂಜನಮಾಡಿಸಲು ಕರೆಸಲ್ಪಟ್ಟನು. ಆದರೆ ಆ ವಿಪ್ರನು ಬಹಳ ಆಯಾಸಗೊಂಡಿದ್ದನು. ಬಹಳ ಹಸಿವೂ ಆಗಿದ್ದಿತು. ಅವನು ಬಳಲಿರುವುದನ್ನು ಕಂಡ ರಾಮಾನುಜರು ಪತ್ನಿಯನ್ನು ಕರೆದು -'ಇವನು ಬಹಳ ಹಸಿದಿರುವನು, ಮನೆಯಲ್ಲಿ ತಂಗಳಾದರೂ ಸರಿ ಅನ್ನವೇನಾದರೂ ಇರುವುದೆ?'- ಎಂದು ಕೇಳಲು ಅವಳು ಅನ್ನವು ಸ್ವಲ್ಪವೂ ಇಲ್ಲವೆಂದಳು. ರಾಮಾನುಜರು ಪತ್ನಿಯನ್ನು ಯಾವದೋ ಕೆಲಸಕ್ಕಾಗಿ ಬೇರೊಂದು ಕಡೆಗೆ ಕಳುಹಿಸಿ, ಅಡಿಗೆಯ ಮನೆಯನ್ನು ಹುಡಿಕಿದಾಗ ಒಂದು ಪಾತ್ರೆಯಲ್ಲಿ ಅನ್ನವಿದ್ದುದು

ಕಂಡಿತು. ಪತ್ನಿಯು ಬಂದ ಮೇಲೆ ಆ ಅನ್ನವನ್ನು ತೋರಿಸಿ ಕೋಪದಿಂದ 'ಇಂತಹವರಲ್ಲಿಯೂ ನಿನ್ನ ಹೃದಯವು ಎಷ್ಟು ಕಠಿಣವಾದುದು! ಹಿಂದಿನವರು -'ಪಾಪನಾಮಾಕರಾಃ ಸ್ತ್ರೀಯಃ'ಎಂದು ಹೇಳಿರುವುದು ಸತ್ಯವೇ ಸರಿ'- ಎಂದು ಹೇಳಿ ಬಹಳವಾಗಿ ದುಃಖಪಟ್ಟರು.

ರಾಮಾನುಜಜ ಹೆಂಡತಿ ಕೂಡಲೇ ಬಿಂದಿಗೆಯನ್ನು ತೆಗೆದುಕೊಂಡು ನೀರನ್ನು ತರಲು ಬಾವಿಗೆ ಹೋದಳು. ಆ ವೇಳೆಗೆ ಸರಿಯಾಗಿ ಪೂರ್ಣಾಚಾರ್ಯರ ಪತ್ನಿಯೂ ಕೂಡ ನೀರನ್ನು ತರಲು ಅದೇ ಬಾವಿಗೆ ಬಂದಳು. ಇಬ್ಬರೂ ಬಿಂದಿಗೆಯನ್ನು ಹಗ್ಗದಿಂದ ಕಟ್ಟಿ ಒಟ್ಟಿಗೆ ಬಾವಿಗೆ ಬಿಟ್ಟು ಒಟ್ಟಿಗೆ ಸೇದಲಾರಂಭಿಸಿದರು. ಹೀಗೆ ಸೇದುತ್ತಿದಾಗ ಪೂರ್ಣಾಚಾರ್ಯರ ಪತ್ನಿಯ ಬಿಂದಿಗೆಯಿಂದ ರಾಮಾನುಜರ ಪತ್ನಿಯ ತುಂಬಿದ ಬಿಂದಿಗೆಯಲ್ಲಿ ಕೆಲವು ಹನಿಗಳು ಉದುರಿದವು. ಇದನ್ನು ಕಂಡ ರಾಮಾನುಜರ ಹೆಂಡತಿಯು ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು, ಇವಳು ಗುರುಪತ್ನಿ; ನನ್ನ ಪತಿಗೆ ಆಚಾರ್ಯರು ಪೂಜ್ಯರಾಗಿರುವಂತೆ ಇವಳು ಪೂಜ್ಯಳು; ಇವಳ ಕುಂಭದಿಂದ ನನ್ನ ಕುಂಭಕ್ಕೆ ನೀರು ಬಿದ್ದರೆ ಸ್ವಲ್ಪವೂ ದೋಷವಿಲ್ಲ; ಅಷ್ಟೆ ಅಲ್ಲ, ಪವಿತ್ರವೂ ಆಯಿತು; ಶಿಷ್ಯನು ಯಾವಾಗಲೂ ಪ್ರಯತ್ನಪಟ್ಟು ಭಕ್ತಿಯಿಂದ ಗುರೂಚ್ಛಿಷ್ಟವನ್ನೂ, ಪಾದತೀರ್ಥವನ್ನೂ ಸ್ವೀಕರಿಸಬೇಕು ಎಂಬುದನ್ನೂ ಗಮನಿಸದೆ, ಪೂರ್ಣಾಚಾರ್ಯರ ಪತ್ನಿಯನ್ನು ಕುರಿತು -'ಎಲೈ ನೀಚಳೆ, ದುರಾಚಾರಿಣಿ, ಕುಂಭಗಳೆರಡೂ ಒಂದಾದವು. ನೋಡು, ನಿನ್ನ ಜಾತಿಯೇನು? ನಡತೆಯೇನು? ತಿನ್ನುವುದಕ್ಕೆ ಗತಿಯಿಲ್ಲ'- ಎಂಬ ಇದೇ ಮೊದಲಾದ ಒರಟೊರಟಾದ ಅರ್ಥವಿಲ್ಲದ ಮಾತುಗಳಿಂದ ಬೈದಳು. ಪೂರ್ಣಾಚಾರ್ಯರ ಪತ್ನಿಯೂ ಕೂಡ ಪ್ರತಿಯಾಗಿ ಬೈದಳು. ಹೀಗೆ ಅವರಿಬ್ಬರಿಗೂ ಜಗಳವು ಆರಂಭವಾಯಿತು. ಇದು ಪೂರ್ಣಾಚಾರ್ಯರಿಗೆ ಮೊದಲು ತಿಳಿಯಿತು. ಅವರು ಹೆಂಡತಿಯ ಮೇಲೆ ಕೋಪಗೊಂಡು ರಾಮಾನುಜರಿಗೆ ಈ ವೃತ್ತಾಂತವು ತಿಳಿಯುವುದಕ್ಕೆ ಮುಂಚೆಯೇ ಪತ್ನಿಯೊಡನೆ ಶ್ರೀರಂಗಕ್ಕೆ ಹೊರಟುಹೋದರು.

ನಿತ್ಯದಂತೆ ರಾಮಾನುಜರು ಆಚಾರ್ಯರ ಮನೆಗೆ ಹೋಗಲು ಆಚಾರ್ಯರು ಇರಲಿಲ್ಲ. ಎಲ್ಲೆಲ್ಲಿ ಹುಡುಕಿದರೂ ಕಾಣಲಿಲ್ಲ, ಆಗ ಕೆಲವರು ರಾಮಾನುಜರನ್ನು ಕುರಿತು 'ಪೂರ್ಣಾಚಾರ್ಯರ ಹೆಂಡತಿಗೂ ನಿಮ್ಮ ಹೆಂಡತಿಗೂ ಬಾವಿಯ ಹತ್ತಿರ ಜಗಳವಾಯಿತು ಕಾರಣವೇನೋ ತಿಳಿಯದು. ಅದು ಭಗವಂತನಿಗೇ ತಿಳಿಯಬೇಕು. ಇದಾದ ಕೂಡಲೇ ಆಚಾರ್ಯರು ಪತ್ನಿಯೊಡನೆ ಶ್ರೀರಂಗಕ್ಕೆ ಹೊರಟರು'- ಎಂದು ಹೇಳಿದರು. ಅಪ್ರಿಯವಾದ ಆ ಮಾತನ್ನು ಕೇಳಿ ಖಿನ್ನರಾದ ರಾಮಾನುಜರು ಬೇಗ ಮನೆಗೆ ಬಂದು ಪತ್ನಿಯಿಂದ ವಿಶದವಾದ ವಿಚಾರವನ್ನು ತಿಳಿದು ಕೋಪಗೊಂಡು -'ಎಲೈ ಪಾಪಿನಿ, ನೀನು ಹಿಂದೆಯೇ ದೊಡ್ಡ ತಪ್ಪನ್ನು ಮಾಡಿದೆ. ಅದನ್ನೇನೋ ಸಹಿಸಿಕೊಂಡೆನು. ಇದನ್ನು ಮಾತ್ರ ಸಹಿಸಲಾರೆ. ನೀನು ನಿನ್ನ ತೌರುಮನೆಗೆ ಹೊರಟುಹೋಗು. ಸ್ತ್ರೀಯರಿಗೆ ಪತಿಯ ಮನಸ್ಸಿನಂತೆ ನಡೆಯುವುದೇ ಪರಧರ್ಮವು. ದುಷ್ಟಳಾದ ನಿನ್ನಲ್ಲಿ ಆ ಸ್ವಭಾವವಿಲ್ಲವಾದುದರಿಂದ ನಿನ್ನನ್ನು ಬಿಡುವೆನು'-ಎಂದರು. ಅದನ್ನು ಕೇಳಿ ಅವಳು ನಡುಗತೊಡಗಿದಳು. ಹೀಗೆ ಅವಳ ಸ್ಥಿತಿಯನ್ನು ಕಂಡ ಮೃದುಸ್ವಭಾವದ ರಾಮಾನುಜರ ಕೋಪವು ಮಾಯವಾಯಿತು. ಆದರೂ ದುಷ್ಟಳಾದ ಪತ್ನಿಯನ್ನು ಬಿಡಬೇಕೆಂದು ಮಾತ್ರ ಮನಸ್ಸಿನಲ್ಲಿ ತೋರುತ್ತಲೇ ಇತ್ತು.

ಹೀಗಿರುತ್ತಿರಲು ಒಂದು ದಿನ ರಾಮಾನುಜರು ಕರಿಶೈಲದಲ್ಲಿ ದೇವರಾಜನ ಕೈಂಕರ್ಯನಿರತರಾಗಿದ್ದರು. ಆಗ ಯಾವನೋ ಒಬ್ಬ ಪಂಡಿತನಾದ ವಿಪ್ರನು ಹಸಿವಿನಿಂದ ಬಳಲಿದವನಾಗಿ ರಾಮಾನುಜರನ್ನು ಅನ್ನವನ್ನು ಕೇಳಿದನು. ಆಗ ರಾಮಾನುಜರು ಆ ವಿಪ್ರನನ್ನು ಕುರಿತು ನಮ್ರತೆಯಿಂದ -'ಎಲೈ ದ್ವಿಜಶ್ರೇಷ್ಠನೇ, ನಾನು ಕೊಟ್ಟಿರುವ ಗುರುತನ್ನು ತೆಗೆದುಕೊಂಡು ಹೋಗಿ ನಮ್ಮ ಮನೆಯಲ್ಲಿ ನನ್ನ ಪತ್ನಿಗೆ ತೋರಿಸಿ, ಅವಳು ಪ್ರೀತಿಯಿಂದ ಕೊಡುವ ಅನ್ನವನ್ನು ತಿಂದು ಬೇಗ ಬಾ; ಈಗ ವರದರಾಜನ ಉತ್ಸವ ಸಮಯ, ಜಗತ್ಪತಿಯ ಇಂತಹ ಸೇವಾಸಮಯವನ್ನು ಬಿಟ್ಟು ಬರಲಾರೆನು. ಭಗವತ್ಸೇವೆಗಿಂತಲೂ ಅತಿಥಿಪೂಜನವು ಶ್ರೇಷ್ಠವೇ ಸರಿ; ಆದರೂ ನಾನು ಬರದೆ ಇರಲು ಕಾರಣವುಂಟು. ಹೋಗಿ ಬಾ'- ಎನ್ನಲು, ವಿಪ್ರನು ರಾಮಾನುಜರ ಮನೆಗೆ ಹೋಗಿ ಅವರ ಪತ್ನಿಯನ್ನು ಕಂಡು ವಿನಯದಿಂದ -'ಎಲೆ ತಾಯೆ, ಪತಿವ್ರತೆಯೆ, ನಿನ್ನ ಪತಿಯು ಈಗ ಕರಿಶೈಲದಲ್ಲಿ ಭಕ್ತವತ್ಸಲನಾದ ಭಗವಂತನ ಸೇವೆಯಲ್ಲಿರುವರು. ಅವರು ನನ್ನನ್ನು ಭೋಜನಕ್ಕಾಗಿ ಇಲ್ಲಿಗೆ ಕಳುಹಿಸಿರುವರು. ಬೇಗ ನನಗೆ ಊಟವನ್ನು ಕೊಡು'- ಎಂದು ಕೇಳಿದನು. ದ್ವಿಜನ ಮಾತನ್ನು ಕೇಳಿ ಕುಪಿತಳಾದ ರಾಮಾನುಜರ ಪತ್ನಿಯು -'ಈಗ ನಮ್ಮ ಮನೆಯಲ್ಲಿ ಅನ್ನವೂ ಇಲ್ಲ, ಅಕ್ಕಿಯೂ ಇಲ್ಲ, ಇಲ್ಲಿ ನಿಲ್ಲಬೇಡ, ಹೋಗು, ಹೋಗು. ಯಾರು ನಿನ್ನನ್ನು ಕಳುಹಿಸಿದರೋ ಆ ದಯಾನಿಧಿಯನ್ನೇ ಕೇಳುಹೋಗು'- ಎಂದು ಒರಟಾಗಿ ಹೇಳುತ್ತ ಬಾಗಿಲನ್ನು ಹಾಕಿಕೊಂಡಳು.

ಇದರಿಂದ ನಿರಾಶನಾದ ವಿಪ್ರನು ರಾಮಾನುಜರಿಗೆ ವಿಚಾರವನ್ನು ತಿಳಿಸಲು ಅವರು ಯೋಚಿಸಿ, ತಂದೆಯ ಮನೆಯಿಂದ ಮದುವೆಗಾಗಿ ಬಂದಂತಿರುವ ಒಂದು ಕಾಗದವನ್ನು ಬರೆದು, ಅರಿಶಿನ, ಕುಂಕುಮ, ತಾಂಬೂಲ, ನೂತನವಸ್ತ್ರ - ಇವೆಲ್ಲವನ್ನೂ ಜೊತೆಮಾಡಿ -'ಎಲೈ ವಿಪ್ರನೇ ಇವೆಲ್ಲವನ್ನೂ ತೆಗೆದುಕೊಂಡು ಮತ್ತೆ ನನ್ನ ಮನೆಗೆ ಹೋಗು. ಹೋಗಿ ನಾನು ನಿನ್ನ ತಂದೆಯ ಊರಿನಿಂದ ಬಂದಿರುವೆನು. ನಿನ್ನನ್ನು ಕರೆದುಕೊಂಡು ಬರಬೇಕೆಂದು ನಿನ್ನ ತಂದೆಯವರು ಹೇಳಿರುತ್ತಾರೆ ಮತ್ತು ಇದೆಲ್ಲವನ್ನೂ ಕಳುಹಿಸಿರುತ್ತಾರೆ. ಇದು ನಿನಗೆ ಬರೆದಿರುವ ಕಾಗದವೆಂದು ಅದನ್ನು ಓದಿ ಹೇಳು. ಆಗ ಸಂತುಷ್ಟಳಾಗಿ ನಿನಗೆ ಊಟಮಾಡಿಸುವಳು'-ಎನ್ನಲು ಅವನು ಹಾಗೆಯೇ ಮಾಡಿದನು. ಅವಳು ಅದನ್ನು ನಿಜವೆಂದೇ ನಂಬಿ, ತಾಯಿ ತಂದೆಗಳ ಕುಶಲವನ್ನು ಕೇಳಿದಳು. ಅವನೂ ಯಥೋಚಿತವಾದ ಉತ್ತರವನ್ನು ಕೊಟ್ಟನು. ಮತ್ತು 'ನಿನ್ನ ತಮ್ಮನ ಮದುವೆಗಾಗಿ ನಿನ್ನನ್ನು ಕರೆದುಕೊಂಡು ಬರಬೇಕೆಂದು ನಿನ್ನ ತಂದೆಯವರು ಹೇಳಿದ್ದಾರೆ'- ಎನಲು, ಅವಳು ಪ್ರೀತಿಯಿಂದ ಸೊಗಸಾದ ಅಡಿಗೆಯನ್ನು ಮಾಡಿ ವಿಪ್ರನಿಗೆ ಭೋಜನ ಮಾಡಿಸಿದಳು.

ಇಷ್ಟು ಹೊತ್ತಿಗೆ ರಾಮಾನುಜರು ಮನೆಗೆ ಬಂದು ಏನೂ ತಿಳಿಯದವರಂತೆ ವಿಪ್ರನಿಂದ ವೃತ್ತಾಂತವೆಲ್ಲವನ್ನೂ ಕೇಳಿ ಸಂತುಷ್ಟರಾದರು. ಮತ್ತೆ ಪತ್ನಿಯನ್ನು ನೋಡಿ -'ನೀನು ನಿನಗೆ ಬೇಕಾದ ಬಟ್ಟೆಬರೆಗಳನ್ನೂ, ಒಡವೆಗಳನ್ನೂ ತೆಗೆದುಕೊಂಡು ಈ ಬ್ರಾಹ್ಮಣನೊಡನೆ ಈಗಲೇ ತಂದೆಯ ಮನೆಗೆ ಹೊರಡಬಹುದು. ನನಗೆ ಸ್ವಲ್ಪ ಕೆಲಸವಿರುವುದರಿಂದ ಐದಾರು ದಿವಸಗಳಾದ ಮೇಲೆ ನಾನು ಅಲ್ಲಿಗೆ ಬರುವೆನು'- ಎಂದು ಹೇಳಿದರು. ಪತಿಯ ಮಾತನ್ನು ಕೇಳಿ ಸಂತುಷ್ಟಳಾದ ಆಕೆಯು ಕೆಲವರು ಬಂಧುಗಳೊಡನೆಯೂ ದಾಸದಾಸಿಯರೊಡನೆಯೂ

ತೌರೂರಿಗೆ ಹೊರಟಳು.

ಇತ್ತ ರಾಮಾನುಜರು ಪತ್ನಿಯನ್ನು ಉಪಾಯದಿಂದ ತೌರೂರಿಗೆ ಕಳುಹಿಸಿ, ರಾಗ, ಮೋಹಾದಿಗಳಿಗೆ ಒಳಗಾಗುವ ಬುದ್ಧಿಯನ್ನು ಪರಮಾತ್ಮನಲ್ಲಿ ನಿಶ್ಚಲರಾಗಿ ನಿಲ್ಲಿಸಲು ಚತುರ್ಥಾಶ್ರಮವನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿ, ಪತ್ನಿಯ ವಿಚಾರವನ್ನು ಮನಸ್ಸಿನಲ್ಲಿಯೂ ಚಿಂತಿಸದೆ ಇರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಭಾರ್ಯಾವಿಸರ್ಜನೋಪಾಯಸಿದ್ಧಿ ಎಂಬ ಹನ್ನೆರಡನೆಯ ಅಧ್ಯಾಯವು ಮುಗಿದುದು.

೧೩

ಹೀಗೆ ರಾಮಾನುಜಗುರುವು ಪತ್ನಿಯನ್ನು ಕಳುಹಿಸಿ, ಸರ್ವಸ್ವವನ್ನೂ ತ್ಯಜಿಸಿ, ಚತುರ್ಥಾಶ್ರಮ ಪ್ರವೇಶಕ್ಕೆ ಯೋಗ್ಯವಾದ ತ್ರಿದಂಡ, ಕಮಂಡಲು, ಕಾಷಾಯವಸನವೇ ಮೊದಲಾದ ಎಲ್ಲ ಉಪಕರಣಗಳನ್ನೂ ಶಿಷ್ಯರಿಂದ ಬೇಗ ತರಿಸಿ, ಶುಚಿಯಾಗಿ, ಅವೆಲ್ಲವನ್ನೂ ಜಗತ್ಪತಿಯಾದ ದೇವರಾಜನ ಸನ್ನಿಧಿಯಲ್ಲಿಟ್ಟು, ಭಕ್ತವತ್ಸಲನಾದ ಭಗವಂತನನ್ನು ವಂದಿಸಿ, ಅನಂತಸರಸ್ಸಿನ ತೀರದಲ್ಲಿ ಲೋಕಪಾವನವಾದ ಯಾಮುನಾಚಾರ್ಯರ ಪಾದಗಳನ್ನು ಸ್ಮರಿಸುತ್ತ, ಸಂನ್ಯಾಸವನ್ನೂ ಸ್ವೀಕರಿಸಿದರು. ಕೂಡಲೇ ಹರ್ಷನಿರ್ಭರರಾದ ದೇವತೆಗಳು "ಯತಿರಾಜ"ರ ತಲೆಯಮೇಲೆ ಹೂಮಳೆಗರೆದರು. ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳಗಿದವು. ಸುಖಸ್ಪರ್ಶವಾದ ಮಂದಮಾರುತವು ಬೀಸಿತು. ಸೂರ್ಯನು ಹಿತಕರವಾದ ಪ್ರಭೆಯಿಂದ ಕೂಡಿದನು. ದಿಕ್ಕುಗಳೆಲ್ಲವೂ ವಿಮಲವೂ ಶಾಂತವೂ ಆದವು. ಜನರೆಲ್ಲರೂ ಆನಂದಗೊಂಡರು. ರಾಮಾನುಜರು ಯತಿಸಾರ್ವಭೌಮರಾದುದನ್ನು ಕಂಡು ನಿರಾಶನಾದ ಕಲಿಯು ಕಾಂತಾರವನ್ನು ಹೊಕ್ಕನು. ಕಾಷಾಯಾಂಬರವನ್ನುಟ್ಟು ದಂಡ ಕಮಂಡಲುಗಳನ್ನು ಹಿಡಿದು ದ್ವಾದಶೋರ್ಧ್ವಪುಂಡ್ರಗಳನ್ನು ಧರಿಸಿರುವ ರಾಮಾನುಜಾಚಾರ್ಯರು ನಾರಾಯಣ ಮುನಿಯಂತೆ ಪ್ರಕಾಶಿಸುತ್ತಿದ್ದರು.

ಆಗ ಹಸ್ತಿಗಿರೀಶನಾದ ದೇವರಾಜನು ಕಾಂಚೀಪೂರ್ಣರನ್ನು ಕುರಿತು -'ನನ್ನ ಎಲ್ಲ ಪರಿಜನರೊಡನೆ ಛತ್ರಚಾಮರಾದಿಗಳೆಲ್ಲವನ್ನೂ ತೆಗೆದುಕೊಂಡು ದ್ವಿಜಶ್ರೇಷ್ಠರಾದ ಶ್ರೀವೈಷ್ಣವರನ್ನೂ ಕರೆದುಕೊಂಡು ಪಲ್ಲಕಿಯಲ್ಲಿ ಶಠಾರಿಯನ್ನು ಇಟ್ಟುಕೊಂಡು ರಾಮಾನುಜರಿರುವಲ್ಲಿಗೆ ಹೋಗಿ,ಆ ನನ್ನ ಭಕ್ತನನ್ನು ಬೇಗ ಇಲ್ಲಿಗೆ ಕರೆದುಕೊಂಡು ಬಾ. ನಾನು ಈಗಲೇ ಅವನನ್ನು ನೋಡಬೇಕೆಂದು ಇಚ್ಛಿಸುತ್ತೇನೆ '- ಎಂದು ಅಪ್ಪಣೆಮಾಡಿದನು.

ಕಾಂಚೀಪೂರ್ಣರು ವರದರಾಜನ ಅಪ್ಪಣೆಯಂತೆ ಎಲ್ಲರೊಡನೆಯೂ ರಾಮಾನುಜಾಚಾರ್ಯರ ಬಳಿಗೆ ಹೋದರು. ರಾಮಾನುಜಾಚಾರ್ಯರೂ ಸಹ ಚತುರ್ಥಾಶ್ರಮಕ್ಕೆ ವಿಹಿತವಾದ ಕಾರ್ಯಗಳೆಲ್ಲವನ್ನೂ ಶಾಸ್ತ್ರೋಕ್ತವಾಗಿ ನಡೆಸಿ ವೇದವೇದಾಂತ ಪಾರಂಗತರಾದ ಅನೇಕ ಬ್ರಾಹ್ಮಣರೊಡನೆ ವರದರಾಜನ ಸೇವೆಗಾಗಿ ಅಲ್ಲಿಂದ ಹೊರಟರು. ಕಾಂಚೀಪೂರ್ಣ, ರಾಮಾನುಜಾಚಾರ್ಯರಿಬ್ಬರೂ ಪರಸ್ಪರ ನೋಡಿ ಅಪರಿಮಿತವಾದ ಆನಂದಪಟ್ಟು

ತತ್ಕಾಲೋಚಿತವಾದ ಸತ್ಕಾರಮಾಡಿದರು. ಅನಂತರ ಕಾಂಚೀಪೂರ್ಣರು ಅರ್ಚಕರಿಂದ ಯತಿರಾಜರಿಗೆ ತೀರ್ಥಶಠಕೋಪಾದಿಗಳನ್ನು ಕೊಡಿಸಿ, ಭಗವದಾಜ್ಞೆಯಂತೆ ಅನೇಕ ಪರಿಚಾರಕರನ್ನು ಆಚಾರ್ಯರ ಕೈಂಕರ್ಯಕ್ಕಾಗಿ ನಿಯಮಿಸಿದರು. ಹೃಷ್ಟರಾದ ಬ್ರಾಹ್ಮಣರು ವೇದಘೋಷಗಳನ್ನು ಮಾಡಿದರು. ಭೇರೀಮೃದಂಗಾದಿ ಮಂಗಳವಾದ್ಯಗಳು ಘೋರ್ಗರೆಯುತ್ತಿದ್ದವು. ಆಗ ಆಚಾರ್ಯರು ಶಠಕೋಪವನ್ನು ಮುಂದಿಟ್ಟುಕೊಂಡು ಕಾಂಚೀಪೂರ್ಣರೊಡನೆಯೂ ಇತರ ಬ್ರಾಹ್ಮಣರೊಡನೆಯೂ ಜಗತ್ಪತಿಯಾದ ವರದರಾಜನ ಸನ್ನಿಧಿಗೆ ದಯಮಾಡಿಸಿದರು. ದಯಮಾಡಿಸಿ ಬ್ರಹ್ಮನಿಂದ ಅರ್ಚಿತವಾದ ಭಗವಂತನ ಪದಪಂಕಜಗಳನ್ನು ವಂದಿಸಿದರು. ದೇವರಾಜನು ಯತಿಶ್ರೇಷ್ಠರನ್ನು ಕಂಡು ಆನಂದಿತನಾಗಿ ಅದೊಂದು ಚಿಂತೆಯಿಂದ ಮುಕ್ತನಾದನು. ಮತ್ತು ಆಚಾರ್ಯರಿಗೂ ಇತರ ವಿಪ್ರರಿಗೂ ಎಲ್ಲರಿಗೂ ಅರ್ಚಕರಿಂದ ತೀರ್ಥಶಠಾರಿಗಳನ್ನು ಕೊಡಿಸಿ, ಲಕ್ಷ್ಮಣಾಚಾರ್ಯರಿಗೆ ಪ್ರತ್ಯೇಕವಾಗಿ ವಿಶೇಷವಾದ ಸನ್ಮಾನಗಳನ್ನು ಮಾಡಿಸಿ "ಯತಿರಾಜ"ರೆಂಬ ನಾಮಧೇಯವನ್ನು ಅನುಗ್ರಹಿಸಿದನು. ಕಾಂಚೀಪೂರ್ಣರನ್ನು ಕುರಿತು -'ಈ "ಯತಿರಾಜ"ನಿಗೆ ಮನೋಹರವಾದ ಒಂದು ಮಠವನ್ನು ಏರ್ಪಡಿಸಿ ಅನುಕೂಲಮಾಡಿಕೊಡು'- ಎಂದು ಅಪ್ಪಣೆಮಾಡಲು, ಕಾಂಚೀಪೂರ್ಣರು ಭಗವಂತನ ಆಜ್ಞೆಯಂತೆ ಪರಿಚಾರಕರೊಡನೆ ಯತಿಪತಿಯನ್ನು ಒಂದು ಸುಂದರವಾದ ಮಠಕ್ಕೆ ಕರೆದುಕೊಂಡು ಹೋದರು. ಆಚಾರ್ಯರು ಮಠವನ್ನು ತಲುಪಿ, ಅಲ್ಲಿಗೆ ಬಂದಿದ್ದ ವಿಪ್ರರೆಲ್ಲರನ್ನೂ ಯಥೋಚಿತವಾಗಿ ಸತ್ಕರಿಸಿದರು. ವಿಪ್ರರೂ ಸಹ ಯತಿಶೇಖರರನ್ನು ವಂದಿಸಿ ತಮ್ಮ ತಮ್ಮ ಮನೆಗೆ ತೆರಳಿದರು. ಕಾಂಚೀಪೂರ್ಣರು ಸಹ ಆಚಾರ್ಯರಿಗೆ ಎಲ್ಲ ಅನುಕೂಲಗಳನ್ನೂ ಕಲ್ಪಿಸಿಕೊಟ್ಟು ದೇವರಾಜನಲ್ಲಿ ಈ ವಿಷಯವನ್ನು ವಿಜ್ಞಾಪಿಸಿ ತನ್ನ ಮಠಕ್ಕೆ ಹೊರಟರು.

ಅನಂತರ ಬಾಲಸೂರ್ಯನಂತೆ ಬೆಳಗುತ್ತಿರುವ ಆಚಾರ್ಯರು ಎಲ್ಲರನ್ನೂ ತಮ್ಮ ಪೂರ್ಣಕಟಾಕ್ಷದಿಂದ ನೋಡಿ ನಿರಂತರವೂ ಅವರನ್ನು ತಮ್ಮ ಪಾದಪದ್ಮಾಭಿಮುಖರಾಗುವಂತೆ ಮಾಡುತ್ತಾ, ಭಕ್ತವತ್ಸಲನಾದ ವರದರಾಜನಿಂದ ಅರ್ಪಿತವಾದ ಮಠದಲ್ಲಿ ಶೋಭಿಸುತ್ತಿದ್ದರು.

ಈ ರೀತಿಯಾಗಿ ವೈಷ್ಣವೋತ್ತಮರಾದ ರಾಮಾನುಜರು ಪ್ರತಿಕೂಲಳಾದ ಪತ್ನಿಯನ್ನು ಬಿಟ್ಟು ಭಗವದಾಜ್ಞೆಯಿಂದ ಅನಂತಸರೋವರ ತೀರದಲ್ಲಿ ಚತುರ್ಥಾಶ್ರಮವನ್ನು ಸ್ವೀಕರಿಸಿದರು. ಭಗವಂತನಿಂದ "ಯತಿರಾಜ"ನೆಂದು ಕರೆಯಲ್ಪಟ್ಟು, ಹಸ್ತಿಶೈಲದಲ್ಲಿರುವ ಆ ಭಗವಂತನನ್ನು ಅನವರತವೂ ಸೇವಿಸುತ್ತ ಕಾಂಚೀನಗರದಲ್ಲಿ ಆಚಾರ್ಯರು ಸುಖದಿಂದಿರುತ್ತಿದ್ದರು.

ಯಾವ ಮನುಷ್ಯಶ್ರೇಷ್ಠರು ಸಂಸಾರವೆಂಬ ರೋಗವನ್ನು ನಾಶಮಾಡುವ ಶುಭಕರವಾದ ರಾಮಾನುಜಾಚಾರ್ಯರ ಚರಿತ್ರೆಯನ್ನು ಕೇಳುವರೋ ಅವರು ವೈಕುಂಠ ಲೋಕವನ್ನು ಹೊಂದುವರು. ಈ ಚರಿತ್ರವು ಜ್ಞಾನಪ್ರದವೂ ಕೇಳುವವರ ಕಿವಿಗೆ ಇಂಪಾಗಿರುವುದಲ್ಲದೆ ಪಾಪಹರವೂ, ಅಲೌಕಿಕ ಶ್ರೇಯಸ್ಕರವೂ ಆಗಿರುತ್ತದೆ.

ರಾಮಾನುಜಾಯ ನಾಥಾಯ ಯತೀಂದ್ರಾಯ ಮಹಾತ್ಮನೇ।
ಕೃಪಾಮಾತ್ರಪ್ರಸನ್ನಾಯ ಲಕ್ಷ್ಮಣಾರ್ಯಾಯ ತೇ ನಮಃ॥

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಜಾಚಾರ್ಯರ ಚತುರ್ಥಾಶ್ರಮ ಪ್ರವೇಶವೆಂಬ ಹದಿಮೂರನೆಯ ಅಧ್ಯಾಯವು ಮುಗಿದುದು.

೧೪

ಕಾಂಚೀಪುರಿಯ ಪೂರ್ವದಿಕ್ಕಿನಲ್ಲಿ ಪುರುಷಮಂಗಳವೆಂಬ ಒಂದು ಅಗ್ರಹಾರ. ಅಲ್ಲಿ ಅನೇಕ ವಿದ್ವಾಂಸರಿದ್ದರು. ಅವರಲ್ಲಿ ಅನಂತದೀಕ್ಷಿತನೆಂಬ ಬ್ರಾಹ್ಮಣನು ವೇದವಿದರಲ್ಲಿ ಶ್ರೇಷ್ಠನೂ ಸರ್ವಧರ್ಮಪರಾಯಣನೂ ಆಗಿದ್ದನು. ಅವನು ಗುಣಸಂಪನ್ನಳೂ, ಲಕ್ಷಣವತಿಯೂ ಆದ ಕೇಶವಸೋಮಯಾಜಿಯ ಮಗಳನ್ನು ವಿಧಿಪೂರ್ವಕವಾಗಿ ಮದುವೆ ಮಾಡಿಕೊಂಡಿದ್ದನು. ಇವರಲ್ಲಿ ಭರತನ ಅಂಶದಿಂದ ಒಬ್ಬ ಮಗನು ಹುಟ್ಟಿದನು. ಅವನ ಹೆಸರು ದಾಶರಥಿ. ಅವನು ವೇದವೇದಾಂತ ಪಾರಂಗತನೂ ಹರಿಭಕ್ತನೂ ಆಗಿದ್ದನು. ತನ್ನ ಮಾವನು ಸಂನ್ಯಾಸವನ್ನು ಸ್ವೀಕರಿಸಿದ ವಿಚಾರವನ್ನು ಕೇಳಿ ಸಂತುಷ್ಟನಾಗಿ ಬೇಗ ಕಾಂಚೀನಗರಕ್ಕೆ ಬಂದು ಭಕ್ತಿಯಿಂದ ಆಚಾರ್ಯರನ್ನು ಆಶ್ರಯಿಸಿದನು.

ಇದಾದ ಮೇಲೆ ರಾಮನ ಅಂಶದಿಂದ ಹುಟ್ಟಿದವನೂ, ಕೂರನಾಥನೆಂದು ಪ್ರಸಿದ್ಧನೂ, ಹಾರೀತಕುಲಸಮುತ್ಪನ್ನನೂ, ಸರ್ವಶಾಸ್ತ್ರಾರ್ಥಕೋವಿದನೂ, ಹರಿಪರಾಯಣನೂ ಆದ ಅನಂತಭಟ್ಟನ ಮಗನೂ ಸಹ ಯತಿರಾಜರ ಆಶ್ರಯವನ್ನು ಹೊಂದಿದನು. ಆಚಾರ್ಯರು ಇಬ್ಬರು ಶಿಷ್ಯರಿಗೂ ಗ್ರಂಥೋಪದೇಶ ಮಾಡುತ್ತ ಕಾಂಚಿಯಲ್ಲಿ ಇರುತ್ತಿದ್ದರು.

ಒಂದು ದಿನ ಆಚಾರ್ಯರು ಶಿಷ್ಯರಿಗೆ ಪ್ರೀತಿಪೂರ್ವಕವಾಗಿ ಗ್ರಂಥೋಪದೇಶ ಮಾಡುತ್ತಿದ್ದರು. ಆ ಸಮಯದಲ್ಲಿ ಯಾದವರ ತಾಯಿಯು ಅಲ್ಲಿಗೆ ಬಂದಳು. ಊರ್ಧ್ವಪುಂಡ್ರಧಾರಿಗಳಾಗಿಯೂ, ಕಾಷಾಯಾಂಬರ ಶೋಭಿತರಾಗಿಯೂ, ತ್ರಿದಂಡಧಾರಿಗಳಾಗಿಯೂ, ಪ್ರಾಜ್ಞರಾಗಿಯೂ, ನಾರಾಯಣ ಮುನಿಯಂತೆಯೂ ಸೂರ್ಯನಂತೆಯೂ ಪ್ರಕಾಶಿಸುತ್ತಿರುವ ಆಚಾರ್ಯರನ್ನು ನೋಡಿ ಭಕ್ತಿಯಿಂದ ಪರವಶಳಾಗಿ ನಮಸ್ಕರಿಸಿ, ಯಾದವರ ಮಠಕ್ಕೆ ಬಂದಳು. ಬಂದು ಯಾದವರನ್ನು ಕುರಿತು -'ವತ್ಸ ಯಾದವ, ಭಕ್ತಿಯಿಂದ ನನ್ನ ಮಾತನ್ನು ಕೇಳು. ಮಹಾತ್ಮರಾದ ರಾಮಾನುಜಾಚಾರ್ಯರನ್ನು ಮೊದಲಿನಂತೆ ತಿರಸ್ಕರಿಸಬೇಡ. ವೈರವನ್ನು ಬಿಟ್ಟು ಬೇಗ ಅವರನ್ನು ಆಶ್ರಯಿಸು. ಧರ್ಮಸಂಸ್ಥಾಪನಾರ್ಥವಾಗಿಯೇ ಶ್ರೀಹರಿಯಿಂದ ಕಳುಹಿಸಲ್ಪಟ್ಟ ಅನಂತನು ವೈಕುಂಠದಿಂದ ಬಂದು ಕೇಶವಸೋಮಯಾಜಿಯ ಮಗನಾಗಿ ಹುಟ್ಟಿ ರಾಮಾನುಜರೆಂದು ಪ್ರಸಿದ್ಧರಾದರು. ಕಾಂಚೀಪೂರ್ಣರೇ ಮೊದಲಾದ ಜ್ಞಾನಿಗಳೆಲ್ಲರೂ ಇದೇ ಅಭಿಪ್ರಾಯವುಳ್ಳವರಾಗಿರುತ್ತಾರೆ. ವಿಷ್ಣುಭಕ್ತವಿಹೀನನಾದ ವಿಪ್ರನ ವಿದ್ಯೆ, ಆಚಾರ ಮೊದಲಾದವೆಲ್ಲವೂ ಶವಕ್ಕೆ ಮಾಡುವ ಅಲಂಕಾರದಂತೆ ವ್ಯರ್ಥವೇ ಸರಿ; ವಿಷ್ಣುವೇ ಸೃಷ್ಟಿಸ್ಥಿತಿಲಯಕಾರಕನಾದ ಜಗತ್ಕರ್ತೃವು. ಬ್ರಹ್ಮರುದ್ರಾದಿದೇವತೆಗಳು ಅವನ ಅಂಶದಿಂದಲೇ ಹುಟ್ಟಿದವರು. ತತ್ವಜ್ಞಾನಿಗಳಾದ ಪರಾಶರರೇ ಮೊದಲಾದ ಋಷಿಗಳೆಲ್ಲರೂ ಜಗತ್ಪತಿಯಾದ ನಾರಾಯಣನನ್ನೇ ಆಶ್ರಯಿಸಿ ಮುಕ್ತಿಯನ್ನು ಹೊಂದಿದರು'- ಎಂದು ಹೇಳಲಾಗಿ, ಯಾದವರು ಆ ಮಾತನ್ನು ಕೇಳಿ ಅದೆಲ್ಲವೂ ನಿಜವೆಂದು ತಿಳಿದು ಸ್ವಲ್ಪಹೊತ್ತು ಯೋಚಿಸಿ, ತಾಯಿಯನ್ನು

ಕುರಿತು -'ಎಲೈ ಮಾತೆಯೆ, ನೀನು ಹೇಳಿದುದೆಲ್ಲವೂ ಸತ್ಯವೂ ಹಿತವೂ ಆದುದು. ನನ್ನ ತಪ್ಪಿಗಾಗಿ ನಾನು ಅವಶ್ಯವಾಗಿಯೂ ಭೂಪ್ರದಕ್ಷಿಣವನ್ನು ಮಾಡಬೇಕು. ಆದರೆ ಈ ಶರೀರವನ್ನು ವಾರ್ಧಕ್ಯವು ಆವರಿಸಿಕೊಂಡಿರುವುದು. ಆದುದರಿಂದ ಅದೂ ಸಾಧ್ಯವಿಲ್ಲದು'- ಎಂದರು. ಆಗ ಅವರ ಮಾತೆಯು -'ವತ್ಸ ಈಗಲೇ ಹೋಗಿ ಅಮಾನುಷರಾದ ಯತಿರಾಜರನ್ನು ಪ್ರದಕ್ಷಿಣಮಾಡು. ಇದು ಭೂಪ್ರದಕ್ಷಿಣೆಗೆ ಸಮಾನ ವಾದುದು. ಈ ವಿಚಾರದಲ್ಲಿ ಸ್ವಲ್ಪವೂ ಯೋಚಿಸಬೇಡ'- ಎನ್ನಲು, ಯಾದವರು ಏನು ಮಾಡಬೇಕೆಂದು ನಿಶ್ಚಯಿಸಲಾರದವರಾದರು.

ಹೀಗೆಯೇ ಕೆಲವು ದಿನಗಳು ಕಳೆಯಲು ಒಂದು ದಿನ ಯಾದವರು ಸಂಶಯ ಗ್ರಸ್ತರಾಗಿ ಮಠಕ್ಕೆ ಹೋಗಿ ರಾಮಾನುಜಾಚಾರ್ಯರನ್ನು ಕಂಡು -'ಎಲೈ ರಾಮಾನುಜ, ನೀನು ಶಂಖಚಕ್ರಗಳ ಅಂಕನವನ್ನು ಮಾಡಿಕೊಂಡಿರುವೆ. ಊರ್ಧ್ವಪುಂಡ್ರಗಳನ್ನು ಧರಿಸಿರುವೆ. ಬ್ರಹ್ಮನು ನಿರ್ಗುಣನಾದರೂ ಸಗುಣನೆಂದು ಪ್ರತಿಪಾದಿಸುವೆ. ಇವುಗಳಿಗೆ ಶಾಸ್ತ್ರಗಳಲ್ಲಿ ಎಲ್ಲಿಯೂ ಪ್ರಮಾಣವು ದೊರಕುವುದಿಲ್ಲ, ಹಾಗಿದ್ದರೆ, ಹೇಳು ನೋಡೋಣ'- ಎನ್ನಲು, ಆಚಾರ್ಯರು ತಮ್ಮ ಶಿಷ್ಯರಾದ ಕೂರನಾಥರನ್ನು ಅವರೊಡನೆ ಸಂಭಾಷಣೆಗೆ ನಿಯಮಿಸಿದರು.

ಮಹಾತ್ಮರಾದ ಆಚಾರ್ಯರ ಅನುಮತಿಯನ್ನು ಹೊಂದಿದ ಕೂರನಾಥರು ಯಾದವರನ್ನು ಸಂಬೋಧಿಸಿ 'ಶಂಖಚಕ್ರಾದಿಧಾರಣೆಯ ವಿಷಯದಲ್ಲಿಯೂ, ಬ್ರಹ್ಮನು ಸಗುಣನೆಂಬ ವಿಷಯದಲ್ಲಿಯೂ, ವಿಷ್ಣುವೇ ಪರನೆಂಬ ತತ್ವದ ವಿಷಯದಲ್ಲಿಯೂ ಶ್ರುತಿ ಸ್ಮೃತಿ ಪುರಾಣಗಳಲ್ಲಿರುವ ಪ್ರಮಾಣವನ್ನು ಹೇಳುತ್ತೇನೆ. ಕೇಳೋಣವಾಗಲಿ'- ಎಂದು ಹೇಳಲಾರಂಭಿಸಿದರು-

೧. (ಶ್ರುತಿ)-ಪ್ರತಪ್ತೇವಿಷ್ಣೋರಬ್ಜಚಕ್ರೇ ಪವಿತ್ರೇ ಜನ್ಮಾಂಭೋಧಿಂ ತರ್ತವೇಚರ್ಷಣೀಂದ್ರಾಃ।
ಮೂಲೇ ಬಾಹ್ವೋರ್ದಧತೇಽನ್ಯೇ ಪುರಾಣಾಃ ಲಿಂಗಾನ್ಯಂಗೇ ತಾವಕಾನ್ಯರ್ಪಯಂತಿ॥

೨. (ಸಾಮ್ನಿ)-ಪವಿತ್ರಮಿತ್ಯಗ್ನಿಃ । ಅಗ್ನಿ ರ್ವೈ ಸಹಸ್ರಾರಃ। ಸಹಸ್ರಾರೋ ನೇಮಿಃ ।
ನೇಮಿನಾ ತಪ್ತತನುರ್ಬ್ರಾಹ್ಮಣಃ ಸ್ಸಾಯುಜ್ಯಂ ಸಲೋಕತಮಾಪ್ನೋತಿ ॥

೩. (ಅಥರ್ವಣೆ)-ಏಭಿರ್ವಯಮುರುಕ್ರಮಸ್ಯ ಚಿಹ್ನೈರಂಕಿತಾ ಲೋಕೇ ಸುಭಗಾಭವಾಮಃ।
ತದ್ವಿಷ್ಣೋಃ ಪರಮಂಪದಂ ಯೇಽದಿ ಗಚ್ಛಂತಿ ಲಾಂಛಿತಾಃ ॥

೪. (ಪರಾಶರ ಸಂಹಿತಾಯಾಂ)-ಉಪವೀತಾದಿವದ್ಧಾರ್ಯಾಃ ಶ್ಯಂಖ ಚಕ್ರಾದಯಸ್ತಥಾ ।
ಬ್ರಾಹ್ಮಣಸ್ಯ ವಿಶೇಷೇಣ ವೈಷ್ಣವಸ್ಯ ವಿಶೇಷತಃ ॥

೫. (ಭೀಷ್ಮಪರ್ವಣಿ)- ಬ್ರಾಹ್ಮಣೈಃ ಕ್ಷತ್ರಿಯೈರ್ವೈಶ್ಯೈಃ ಶೂದ್ರೈಶ್ಚಕೃತಲಕ್ಷಣೈಃ।
ಅರ್ಚನೀಯಶ್ಚ ವಂದ್ಯಶ್ಚ ನಿತ್ಯಮುಕ್ತೈಃ ಸ್ವಕರ್ಮಸು ॥

೬. (ಲೈಂಗೇ)-ಅಷ್ಟಾಕ್ಷರವಿದಸ್ಸರ್ವೇ ತಪ್ತ ಚಕ್ರಾಂಕಿತಾಸ್ತದಾ। ಸೇವಕಾ ವಾಸುದೇವಸ್ಯ
ತಥೈವ ನಟನರ್ತಕಾಃ। ಅನ್ಯೇ ಚ ವೈಷ್ಣವಾಸ್ತತ್ರ ಸರ್ವೇ ಚಕ್ರೇಣ ಲಾಂಛಿತಾಃ॥

೭. (ಸ್ಕಾಂದೇ)- ಯೇಷಾಂ ಚಕ್ರಾಂಕಿತಂ ಗಾತ್ರಂ ಶೂದ್ರೇಷ್ವಪಿ ಚ ದೃಶ್ಯತೇ ।
ತೇ ವೈ ಸ್ವರ್ಗಸ್ಯ ನೇತಾರೋ ಬ್ರಾಹ್ಮಣಾ ಭುವಿ ದುರ್ಲಭಾಃ ॥

೮. (ಪರಾಶರಃ)- ವಿನಾ ಯಜ್ಞೋಪವಿತೇನ ವಿನಾ ಚಕ್ರಸ್ಯ ಧಾರಣಾತ್ । ವಿನಾ

ದ್ವಯೇನ ವೈ ವಿಪ್ರಶ್ಚಾಂಡಾಲತ್ವಮವಾಪ್ನುಯಾತ್ । ಅನಿಷ್ಟಾನಾಂ ನಿವೃತ್ಯರ್ಥ ಮೈಕಾಂತ್ಯಾಯ ಜಗತ್ಪತೌ । ಸಿದ್ಧ್ಯರ್ಥಂ ಕರ್ಮಣಾಂಚೈವ ಧಾರ್ಯಂ ಚಕ್ರಾದಿಲಾಂಛನಂ ॥ ದಕ್ಷಿಣೇ ತು ಭುಜೇ ವಿಪ್ರೋ ಬಿಭೃಯಾದ್ವೈ ಸುದರ್ಶನಂ । ಸವ್ಯೇತು ಶಂಖಂ ಬಿಭೃಯಾದಿತಿ ಬ್ರಹ್ಮವಿದೋ ವಿದುಃ॥

೯. (ಅಥರ್ವಣೋಪನಿಷದಿ)-ಹರೇಃ ಪಾದಾಕೃತಿ ಮಾತ್ಮನೋ ಹಿತಾಯ ಮಧ್ಯೇಛಿದ್ರ ಮೂರ್ಧ್ವಪುಂಡ್ರಂ ಯೋ ಧಾರಯತಿ। ಸ ಪರಸ್ಯ ಪ್ರಿಯೋಭವತಿ। ಸ ಪುಣ್ಯವಾನ್ಭವತಿ। ಸ ಮುಕ್ತಿಮಾನ್ ಭವತಿ॥

೧೦. (ಮಹೋಪನಿಷದಿ)-ಧೃತೋರ್ಧ್ವಪುಂಡ್ರಃ ಪರಮೀಶಿತಾರಂ ನಾರಾಯಣಂ ಸಾಂಖ್ಯಯೋಗಾಭಿಗಮ್ಯಂ । ಜ್ಞಾತ್ವಾ ವಿಮುಚ್ಯೇತ ನರಸ್ಸಮಸ್ತೈಸ್ಸಂಸಾರ ಪಾಶೈರಿಹ ಚೈತಿ ವಿಷ್ಣುಂ ॥

೧೧. (ಆಗ್ನೇಯೇ)- ತ್ರಿಪುಂಡ್ರಧಾರಣಂ ವಿಪ್ರೋ ಲೀಲಯಾಪಿ ನಧಾರಯೇತ್। ಧಾರಯೇದ್ವಿದಿನಸ್ಸಮ್ಯಗೂರ್ಧ್ವಪುಂಡ್ರಂ ಪ್ರಯತ್ನತಃ ॥

೧೨. (ಬ್ರಹ್ಮಾಂಡೇ)-ಬ್ರಾಹ್ಮಣಸ್ಯೋರ್ಧ್ವಪುಡ್ರಂತು ಕ್ಷತ್ರಿಯಸ್ಯಾರ್ಧ ಚಂದ್ರಕಂ। ವೈಶ್ಯಸ್ಯ ವರ್ತುಲಾಕಾರಂ ಶೂದ್ರಸ್ಯೈವ ತ್ರಿಪುಂಡ್ರಕಂ ॥ ಬ್ರಾಹ್ಮಣೇನ ನ ಕರ್ತವ್ಯಂ ತಿರ್ಯಕ್ಪುಂಡ್ರಸ್ಯ ಧಾರಣಂ। ಸ ಶೂದ್ರ ಏವ ಮಂತವ್ಯಃ ತಿರ್ಯಕ್ಪುಂಡ್ರಸ್ಯ ಧಾರಣಾತ್ ॥

೧೩. (ಪಾದ್ಮೇ)- ಯೇ ಕಂಠಲಗ್ನ ತುಳಸೀ ನಳಿನಾಕ್ಷಮಾಲಾ ಯೇ ಬಾಹುಮೂಲ ಪರಿಚಿಹ್ನಿತ ಶಂಖಚಕ್ರಾಃ। ಯೇ ವಾ ಲಲಾಟಫಲಕೇ ಲಸದೂರ್ಧ್ವಪುಂಡ್ರಾಸ್ತೇ ವೈಷ್ಣವಾ ಭುವನಮಾಶು ಪವಿತ್ರಯಂತಿ॥

೧೪. (ಈಶ್ವರ ಸಂಹಿತಾಯಾಂ)- ವಿಷ್ಣುದೇಹ ಪರಾಮೃಷ್ಟಂ ಯಚ್ಚೂರ್ಣಂ ಶಿರಸಾ ವಹೇತ್। ಸೋಶ್ವಮೇಧಫಲಂಪ್ರಾಪ್ಯ ವಿಷ್ಣುಲೋಕೇಮಹೀಯತೇ।. ಸಾಂತರಾಳೋರ್ಧ್ವಪುಂಡ್ರಸ್ಯ ಮಧ್ಯೇ ಶ್ರೀಶಸ್ಯಧಾಮನಿ। ಹರಿದ್ರಾಸಾರ ಸಂಭೂತ ರಜಸಾ ಧಾರಯೇಚ್ಛ್ರಿಯಂ॥

೧೫. (ಪಾರಾಶರಸ್ಮೃತೌ)- ಏಕೋಪವೀತಂ ಧಾರ್ಯಂ ಸ್ಯಾದ್ಯತೀನಾಂ ಬ್ರಹ್ಮಚಾರಿಣಾಂ। ಗೃಹಸ್ಥಾನಾಂ ವನಸ್ಥಾನಾಮುಪವೀತೋಭಯಂ ಸ್ಮೃತಂ॥ ಮೌಂಜ್ಯೇಣಾಜಿನ ದಂಡಾದಿ ಧಾರ್ಯಾಣಿ ಬ್ರಹ್ಮಚಾರಿಣಾ। ಕಟಿಸೂತ್ರಂತು ಕೌಪೀನಂ ಶುಕ್ಲವಸ್ತ್ರ ದ್ವಯಂಶುಭಂ। ಮಂಡನಂ ಚಾಂಗುಳೀ ಯಾದಿ ಗೃಹಸ್ಥಸ್ಯವಿಶಿಷ್ಯತೇ॥

೧೬. (ಶೇಷಧರ್ಮೇ)- ಶಂಖಚಕ್ರಾಂಕಿತಾನ್ ಭಕ್ತಾನ್ ಯಃ ಪೂಜಯತಿ ಮಾನವಃ। ಸ ಸಾಕ್ಷಾದ್ವಿಷ್ಣುಸಾಮಿಪ್ಯಂ ಲಭತೇ ನಾऽತ್ರ ಸಂಶಯಃ। ವಿಷ್ಣುಚಕ್ರಾಂಕಿತಂ ವಿಪ್ರಂ ಯೋ ಭೂಮಾವಭಿವಾದಯೇತ್। ಲಲಾಟೇ ಸಕ್ತಪಾಂಸೂನಾಂ ಸಂಖ್ಯಾ ತಸ್ಯಾಸ್ತಿ ಯಾವತೀ।ತಾವತ್ಸಮಾ ಸ್ಸಮನುಜೋ ಬ್ರಹ್ಮಲೋಕೇ ಮಹೀಯತೇ॥ ಸಗೋತ್ರಂ ಯದ್ಯಪಿಶ್ರಾದ್ಧೇ ಚಕ್ರಾಂಕಿತ ಭುಜಂ ವದೇತ್। ಸ ಸಾಕ್ಷಾದ್ವಿಷ್ಣು ಸಾಯುಜ್ಯಂ ದ್ವಿಜಃ ಪ್ರಾಪ್ನೋತ್ಯಸಂಶಯಂ॥ ಶಂಖಚಕ್ರಾಂಕಿತಂ ವಿಪ್ರಂ

ದೃಷ್ಟ್ವಾಯೋऽಹ್ಲಾದಿತೋ ಭವೇತ್। ಸಪುಣ್ಯಲೋಕಾನಾಪ್ನೋತಿ ದೈಹಿಕಂ ಸುಖ ಮಶ್ನುತೇ।। ಚಕ್ರಾಂಕಿತಾನಾಂ ನಾಮಾನಿ ಯೋ ವದೇದ್ಭಕ್ತಿಮಾನ್ನರಃ। ಸರ್ವ ಪಾಪವಿನಿರ್ಮುಕ್ತ ಸ್ಸಯಾತಿ ಪರಮಂಪದಂ।। ಚಕ್ರಾಂಕಿತಾಯ ವಿಪ್ರಾಯ ಯೋ ಭಕ್ತ್ಯಾನ್ನಂ ದದಾತಿ ಚ। ಅನ್ನ ಸಂಖ್ಯಾನಿ ವರ್ಷಾಣಿ ಬ್ರಹ್ಮಲೋಕೇ ಮಹೀಯತೇ।। ವಿಷ್ಣುಭಕ್ತಾಯ ವಿಪ್ರಾಯ ಚಕ್ರಚಿಹ್ನಾಯ ಮಾನವಃ। ಗೋಚರ್ಮಮಾತ್ರಂ ಯೋ ದದ್ಯಾದ್ಭೂಮಿಂ ಸ್ಯಾತ್ಸತು ರಾಜ್ಯಭಾಕ್।। ವಿಷು ವಾಯನ ಸಂಕ್ರಾಂತಿಷೂಪರಾಗೇ ತಥಾ ರವೇಃ। ಚಕ್ರಾಂಕಿತಾಯ ವಿಪ್ರಾಯ ದಾನಾನ್ಮೋಕ್ಷಮವಾಪ್ನುಯಾತ್।। ಸರ್ವಭೂತದಯಾಯುಕ್ತಂ ವೈಷ್ಣವಂ ದ್ವೇಷ್ಟಿ ಯೋನರಃ। ಸಚಂಡಾಲೋ ಮಹಾದೇವಿ ರೌರವಂನರಕಂವ್ರಜೇತ್।। ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ। ಚಕ್ರಾಂಕಿತಸ್ಯ ನಿಂದಾಚ ಪಂಚೈತೇ ತ್ವತಿ ಪಾತಕಾಃ।। ಶಿಖಾಂ ಯಜ್ಞೋಪವೀತಂ ಚ ಚಕ್ರಚಿಹ್ನಂ ಚ ಕುಂಡಲೇ।ಊರ್ಧ್ವಪುಂಡ್ರಾಣಿ ವಸ್ತ್ರಾಣಿ ದಂಡಂಚೈವ ಕಮಂಡಲುಂ। ಏತಾನಿ ಧಾರಯನ್ನಿತ್ಯಶ್ಶುಕ್ಲ ದಂಷ್ಟ್ರೋ ದೃಢವ್ರತಃ।। ಸಾತ್ವಿಕಂ ಭಾವಮಾಸ್ಥಾಯ ಸ್ಥಿರಚಿತ್ತೋ ಭವೇತ್ಸದಾ।।

೧೭. (ಶ್ರುತಿಃ)-ಯಸ್ಸರ್ವಜ್ಞಸ್ಸರ್ವವಿತ್। ಪರಾऽಸ್ಯ ಶಕ್ತಿರ್ವಿವಿಧೈವ ಶ್ರೂಯತೇ ಸ್ವಾಭಾವಿಕೀಜ್ಞಾನಬಲಕ್ರಿಯಾ ಚ। ಅಪಹತಪಾಪ್ಮಾ ವಿಜ್ವರೋ ವಿಮೃತ್ಯುರ್ವಿಶೋಕೋ ವಿಜಿಘಿತ್ಸೋऽಪಿಪಾಸಃ ಸ್ಸತ್ಯಕಾಮಃ ಸ್ಸತ್ಯಸಂಕಲ್ಪಃ ಇತಿ।। ಜ್ಞಾऽಜ್ಞೌ ದ್ವಾವಜಾವೀಶನೀಶೌ। ನಿತ್ಯೋ ನಿತ್ಯಾನಾಂ ಚೇತನಶ್ಚೇತನಾನಾಮೇಕೋ ಬಹೂನಾಂ ಯೋ ವಿಧಧಾತಿ ಕಾಮಾನ್। ನಾರಾಯಣ ಪರಂಬ್ರಹ್ಮ ತತ್ತ್ವಂ ನಾರಾಯಣಃ ಪರಃ। ನಾರಾಯಣ ಏವೇದಗ್ಂ ಸರ್ವಂ। ನಿಷ್ಕಳಂಕೋ ನಿರಂಜನೋ ನಿರ್ವಿಕಲ್ಪೋ ನಿರಾಖ್ಯಾತಶ್ಶುದ್ಧೋ ದೇವ ಏಕೋ ನಾರಾಯಣಃ। ಏಕೋಹವೈ ನಾರಾಯಣ ಆಸೀತ್। ನ ಬ್ರಹ್ಮಾನೇಶಾನೋ ನೇಮೇ ದ್ಯಾವಾಪೃಥಿವೀ ನ ನಕ್ಷತ್ರಾಣಿ ನಾಪೋನಾಗ್ನಿರ್ನಸೋಮೋ ನ ಸೂರ್ಯ ಇತಿ।।

೧೮. (ಶ್ರೀಭಾಗವತೇ)-ಹರಿಃ ಪರಾಯಣಂ ಪರಂ ಹರಿಃ ಪರಾಯಣಂ ಪರಂ ಪುನಃ ಪುನರ್ವದಾಮ್ಯಹಂ ಹರಿಃ ಪರಾಯಣಂ ಪರಂ।।

೧೯. (ಮೋಕ್ಷಧರ್ಮೇ)-ತ್ವಯಾಪಿ ಸತತಂ ರಾಜನ್ನಭ್ಯರ್ಚ್ಯಃ ಪುರುಷೋತ್ತಮಃ। ಸಹಿ ಮಾತಾಪಿತಾಚೈವ ಕೃತ್ಸ್ನಸ್ಯ ಜಗತೋ ಗುರುಃ।।

೨೦. (ವಿಷ್ಣುಧರ್ಮೋತ್ತರೇ)-ತಸ್ಮಾತ್ಸರ್ವೇಷು ದೇವೇಷು ವಿಷ್ಣುರೇವ ಸನಾತನಃ। ತಸ್ಮಾತ್ಸರ್ವಪ್ರಯತ್ನೇನ ವಿಷ್ಣುಮೇವ ಸಮಾಶ್ರಯೇತ್।।

ಹೀಗೆ ಕೂರನಾಥರು ಯುಕ್ತಿ ಯುಕ್ತವಾಗಿಯೂ, ಸರ್ವಶಾಸ್ತ್ರಗಳಿಗೂ ವಿರೋಧವಿಲ್ಲದಂತೆಯೂ ಇರುವ ಶ್ರುತಿ ಸ್ಮೃತಿ ಪುರಾಣಗಳ ಸಾವಿರಾರು ಪ್ರಮಾಣಗಳನ್ನು ಉದಾಹರಿಸಿದರು. ಇವೆಲ್ಲವನ್ನೂ ಕೇಳಿದ ಯಾದವಪ್ರಕಾಶರು ಅತ್ಯಾಶ್ಚರ್ಯಪಟ್ಟವರಾಗಿ ಅವರ ಅನುಮತಿಯನ್ನು

ಪಡೆದು ತನ್ನ ಮಠಕ್ಕೆ ಹೋದರು.

ಕೂರೇಶರು ಶ್ರೀಮನಾರಾಯಣನ ಪರತ್ವವನ್ನೂ, ಪರಬ್ರಹ್ಮನ ಸಗುಣತ್ವವನ್ನೂ, ಚಕ್ರಾದ್ಯಂಕನಗಳ ವಿಷಯವನ್ನೂ ಶ್ರುತ್ಯಾದಿ ಪ್ರಬಲ ಪ್ರಮಾಣಗಳಿಂದ ದೃಢೀಕರಿಸುವುದರ ಮೂಲಕ ಯಾದವಪ್ರಕಾಶರನ್ನು ಜಯಿಸಿ, ನಿರ್ಮಲತೇಜಸ್ಸಿನಿಂದ ಶೋಭಿಸುತ್ತಿರುವ "ಯತಿರಾಜ"ರನ್ನು ಸೇವಿಸುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕೂರನಾಥ ಯಾದವ ಸಂವಾದದಲ್ಲಿ "ವಿಷ್ಣುವಿನ ಪರತ್ವ"ವೆಂಬ ಹದಿನಾಲ್ಕನೆಯ ಅಧ್ಯಾಯವು ಮುಗಿದುದು

೧೫

ಅದೇ ದಿನ ರಾತ್ರಿ, ಯಾದವರು ವಾದದಲ್ಲಿ ಸೋತು ಸಂಶಯಗ್ರಸ್ತರಾಗಿದ್ದರು. ಆಗ ಕರುಣಾನಿಧಿಯೂ, ಜಗತ್ಪತಿಯೂ ಆದ ದೇವರಾಜನು ಸ್ವಪ್ನದಲ್ಲಿ -'ಎಲೈ ಯಾದವನೇ, ನಿನ್ನ ತಾಯಿಯು ನಿನ್ನೊಡನೆ ಹೇಳಿದ ಮಾತು ಸತ್ಯವಾದುದು. ಎಲೈ ವಿಪ್ರಶ್ರೇಷ್ಠ, ಯತಿರಾಜರನ್ನು ಆಶ್ರಯಿಸದಿದ್ದರೆ ಮುಕ್ತಿಯುಂಟಾಗುವುದಿಲ್ಲ. ಸಮಸ್ತಕಾರ್ಯಗಳನ್ನೂ ನಾಶಮಾಡುವ ಚಿಂತೆಯನ್ನು ಬಿಟ್ಟು ಮಹಾತ್ಮರೂ ಗುಣಾಶ್ರಯರೂ ಆದ ಯತಿರಾಜರನ್ನು ಆಶ್ರಯಿಸು'- ಎಂದು ಹೇಳಿ ಅಂತರ್ಹಿತನಾದನು. ಈ ಸ್ವಪ್ನವನ್ನು ಕಂಡಮೇಲೂ ಸಹ ಅವರು ನಿಶ್ಚಯಿಸಲು ಸಮರ್ಥರಾಗಲಿಲ್ಲ.

ಒಂದು ದಿನ ಯಾದವರ ತಾಯಿಯು ದೇವರಾಜನ ದರ್ಶನಾರ್ಥವಾಗಿ ಹೋಗಿರುವಾಗ ಶಿಷ್ಯರಿಂದ ಪರಿವೃತರಾಗಿಯೂ ತೇಜೋರಾಶಿಯಾಗಿಯೂ ಇರುವ ಯತಿರಾಜರನ್ನು ಕಂಡು ತನ್ನ ಮನಸ್ಸಿನಲ್ಲಿ -'ಯಾದವನು ಇವರನ್ನು ಆಶ್ರಯಿಸುವುದು ಶ್ರೇಯಸ್ಕರ'- ಎಂದುಕೊಳ್ಳುವ ಸಮಯದಲ್ಲಿ ಯಾರೋ ಮತ್ತೊಬ್ಬರು ಅದೇ ವಿಷಯವನ್ನು ಹೇಳುತ್ತಿದ್ದುದರಿಂದ ಅವಳ ಮನಸ್ಸಿಗೆ ಬಹಳ ಆನಂದವಾಯಿತು. ಮಠಕ್ಕೆ ಬಂದು ಚಂಚಲಚಿತ್ತನಾದ ಮಗನಿಗೆ ಮತ್ತೆ ಹಿತವನ್ನು ಬೋಧಿಸಿದಳು. ತಾಯಿಯ ಮಾತನ್ನು ಕೇಳಿ ಸಂಶಯವಿಲ್ಲದವರಾಗಿ ರಾತ್ರಿಯಲ್ಲಿ ಕಂಡ ಸ್ವಪ್ನವೃತ್ತಾಂತವನ್ನು ಅವಳಿಗೆ ಹೇಳಿದರು. ಆದರೂ ದೃಢನಿಶ್ಚಯವಿಲ್ಲದೆ ಕರುಣಾನಿಧಿಯಾದ ಕಾಂಚೀಪೂರ್ಣರ ಬಳಿಗೆ ಹೋಗಿ -'ಎಲೈ ಮಹಾನುಭಾವರಾದ ಕಾಂಚೀಪೂರ್ಣರೆ, ಶರಣಾಗತನಾದ ನನ್ನನ್ನು ದಯವಿಟ್ಟು ರಕ್ಷಿಸು. ನನ್ನ ಮನಸ್ಸಿನಲ್ಲೊಂದು ಮಹಾ ಚಿಂತೆಯುಂಟಾಗಿರುವುದು. ಎಲೈ ತಪೋಧನರೆ, ಅದನ್ನು ನಡೆಸುವುದರಲ್ಲಿ ಮಾತ್ರ ನನಗೆ ಬಹಳ ಸಂಶಯವಾಗಿದೆ. ಗಾಳಿಯಲ್ಲಿರುವ ದೀಪದಂತೆ ನನ್ನ ಮನಸ್ಸು ಚಂಚಲವಾಗಿರುವುದು. ನನಗಾಗಿ ದೇವರಾಜನಲ್ಲಿ ವಿಜ್ಞಾಪಿಸಿ ಅವನಿಗೆ ಅನುಮತವಾದ ವಿಚಾರವನ್ನು ದಯವಿಟ್ಟು ನನಗೆ ತಿಳಿಸಿ. ಕಾಂಚೀಪೂರ್ಣರು ಅದರಂತೆಯೇ ವರದರಾಜನಲ್ಲಿ ವಿಜ್ಞಾಪಿಸಲು -'ಎಲೈ ಕಾಂಚೀಪೂರ್ಣನೆ, ಯಾದವನು ಯೋಚಿಸಿರುವ ವಿಷಯವು ನನಗೆ ತಿಳಿದಿದೆ. ಅವನ ತಾಯಿಯು ರಾಮಾನುಜಾಶ್ರಯವನ್ನು ಹೊಂದಬೇಕೆಂದು ಹೇಳಿದ ಹಿತವಚನವು ಅವನಿಗೆ ದೃಢಪಟ್ಟಿಲ್ಲ. ಆದುದರಿಂದಲೇ ಸ್ವಪ್ನದಲ್ಲಿ ನಾನು ಅವನಿಗೆ

ಬೋಧಿಸಿದೆನು. ಆದರೂ ಆ ಯತಿಗೆ ಸಂಶಯವು ಹೋಗಲಿಲ್ಲ. ಈಗಲಾದರೂ ನಾನು ಹೇಳಿದನೆಂದು ಹೇಳಿ, ರಾಮಾನುಜರನ್ನು ಆಶ್ರಯಿಸಿ ಉತ್ತಮಲೋಕವನ್ನು ಪಡೆಯುವಂತೆ ತಿಳಿಸು. ದುರ್ಲಭವಾದ ಮನುಷ್ಯಜನ್ಮವನ್ನು ಅದರಲ್ಲಿಯೂ ಬ್ರಾಹ್ಮಣ್ಯವನ್ನೂ ಹೊಂದಿ ಯಾವನು ತನ್ನ ಶ್ರೇಯಸ್ಸಿನ ವಿಚಾರದಲ್ಲಿ ಸಮರ್ಥನಾಗುವುದಿಲ್ಲವೋ, ಅವನು ಆತ್ಮವಂಚಕನೇ ಸರಿ. ಸರ್ವಶಾಸ್ತ್ರಗಳನ್ನೂ ಅಧ್ಯಯನ ಮಾಡಿ, ಶಿಷ್ಯರಿಗೆಲ್ಲ ಬೋಧಿಸುತ್ತಿದ್ದು ತನ್ನ ಶ್ರೇಯಸ್ಸನ್ನು ಮಾಡಿಕೊಳ್ಳಲಾರದವನು ಆತ್ಮವಂಚಕನೇ ಸರಿ'- ಎಂದು ಅಪ್ಪಣೆ ಮಾಡಿದನು. ಕೂಡಲೇ ಕಾಂಚೀಪೂರ್ಣರು ಯಾದವರಿಗೆ ಆ ವಿಚಾರವನ್ನು ತಿಳಿಸಿದರು. ಅದನ್ನು ಕೇಳಿದ ಯಾದವರು ಸಂಶಯರಹಿತರಾಗಿಯೂ ಸಂತುಷ್ಟರಾಗಿಯೂ ಬೇಗ ಮಠಕ್ಕೆ ಹೋಗಿ ಯತಿರಾಜರಿಗೆ ಭಕ್ತಿಯಿಂದ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ, 'ಪರಮಕರುಣಾಶಾಲಿಗಳಾದ ಯತಿರಾಜರೇ, ನಾನು ಹಿಂದೆ ಮಾಡಿದ ತಪ್ಪುಗಳನ್ನೆಲ್ಲ ಕ್ಷಮಿಸುವುದಲ್ಲದೆ ಸಂಸಾರಸಾಗರದಲ್ಲಿ ಮಗ್ನನಾದ ನನ್ನನ್ನು ಉದ್ಧರಿಸಬೇಕು'-ಎಂದು ಪ್ರಾರ್ಥಿಸಿದರು. ಹೀಗೆ ಪಾದತಲದಲ್ಲಿ ಬಿದ್ದು ಪ್ರಾರ್ಥಿಸುವ ಯಾದವರನ್ನು ನೋಡಿ ಕರುಣೆಯಿಂದ ಕರಗಿದ ಹೃದಯವುಳ್ಳ ಆಚಾರ್ಯರು ಕೂಡಲೇ ಮೇಲಕ್ಕೆ ಹಿಡಿದೆತ್ತಿ -'ಎಲೈ ವಿಪ್ರಶ್ರೇಷ್ಠನೇ, ಏಳು. ಇನ್ನು ಮುಂದೆ ನಿನಗೆ ಯಾವ ದುಃಖವೂ ಇಲ್ಲ. ಜಗತ್ಪತಿಯಾದ ದೇವರಾಜನ ಅನುಗ್ರಹವುಂಟಾಗಿರುವಾಗ ಚಿಂತಿಸಲು ಕಾರಣವಿಲ್ಲ'- ಎಂದು ಹೇಳಿ ಅವರನ್ನು ಸಂರಕ್ಷಿಸುವ ಯೋಚನೆಯನ್ನು ಮಾಡಿದರು.

ಕ್ರಮೇಣ ಆಚಾರ್ಯರು ಯಾದವರಿಗೆ ಮೌಂಜೀಬಂಧನಾದಿಗಳನ್ನು ಮಾಡಿ ಪಂಚಸಂಸ್ಕಾರಗಳಿಂದ ಸಂಸ್ಕರಿಸಿ, ಚತುರ್ಥಾಶ್ರಮವನ್ನು ಅನುಗ್ರಹಿಸಿದರು. ಗೋವಿಂದದಾಸನೆಂದು ನಾಮಕರಣ ಮಾಡಿದರು. ಸಂಸ್ಕೃತರಾದ ಯಾದವರು ಪರುಶುದ್ಧರಾಗಿ ಪ್ರಕಾಶಿಸಿದರು.

ಅನಂತರ ಆಚಾರ್ಯರು ಗೋವಿಂದದಾಸರಿಗೆ ಸಮಸ್ತ ವೈಷ್ಣವ ಗ್ರಂಥಗಳನ್ನೂ ತಾವೇ ಉಪದೇಶಿಸಿ -'ನೀನು ಹಿಂದೆ ವೈಷ್ಣವ ಯತಿಗಳನ್ನು ದೂಷಿಸಿರುವೆ. ಆದುದರಿಂದ ಆ ದೋಷಪರಿಹಾರಕ್ಕಾಗಿಯೂ ಈ ಮತದಲ್ಲಿ ನಿನಗೆ ದೃಢತೆ ಉಂಟಾಗುವುದಕ್ಕಾಗಿಯೂ ಒಂದು ಗ್ರಂಥವನ್ನು ರಚಿಸು'- ಎಂದು ಆಜ್ಞಾಪಿಸಲು, ಅವರ ಅಪ್ಪಣೆಯಂತೆ "ಯತಿಧರ್ಮಸಮುಚ್ಚಯ"ವೆಂಬ ಗ್ರಂಥವನ್ನು ಬರೆದರು. ಆ ಗ್ರಂಥವು ಶಾಸ್ತ್ರಗಳ ಸಾರವಾಗಿಯೂ ಆರ್ಯಸಮ್ಮತವಾಗಿಯೂ ತ್ರಿದಂಡ ಸಂನ್ಯಾಸವಿಧಿಯನ್ನು ಬೋಧಿಸುವುದೂ ಆಯಿತು. ಹೀಗೆ ಕೆಲವು ದಿನಗಳು ಯಾದವರು ಆಚಾರ್ಯರ ಬಳಿಯಲ್ಲಿದ್ದು ಹಸ್ತಿಗಿರೀಶನ ಆಜ್ಞೆಯಿಂದ ಯತಿರಾಜರ ಅನುಗ್ರಹಕ್ಕೆ ಪಾತ್ರರಾಗಿ, ವಿಷ್ಣುವಿನ ಪರತ್ವದಲ್ಲಿ ದಾರ್ಢ್ಯವುಳ್ಳವರಾಗಿ, ವೈಷ್ಣವಮತವನ್ನಾಶ್ರಯಿಸಿ, ಗೋವಿಂದದಾಸರೆಂದು ಪ್ರಖ್ಯಾತರಾಗಿ ಪರಮಪದವನ್ನು ಹೊಂದಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀವರದರಾಜನ ಆಜ್ಞೆಯಿಂದ ಯಾದವರ ಯತಿರಾಜಸಮಾಶ್ರಯಣವೆಂಬ ಹದಿನೈದನೆಯ ಅಧ್ಯಾಯವು ಮುಗಿದುದು.

೧೬

ಕಾಂಚಿಯಲ್ಲಿಯೇ ಕರುಣಾಕರನಾದ ಯತಿರಾಜರು ಚಂದ್ರನು ಕತ್ತಲೆಯನ್ನು ನಾಶ ಮಾಡುವಂತೆ ಜನರ ಅಜ್ಞಾನಾಂಧಕಾರವನ್ನು ತೊಲಗಿಸುತ್ತ ಪ್ರಕಾಶಿಸುತ್ತಿದ್ದರು. ಜನರೆಲ್ಲರೂ ಅವರ ಪವಿತ್ರವಾದ ಕಟಾಕ್ಷಕ್ಕೆ ಪಾತ್ರರಾಗಿ ಸಂಸಾರಸುಖಗಳಲ್ಲಿ ವಿರಕ್ತರಾಗಿ ವೈಕುಂಠದಲ್ಲಿರುವ ದೇವೋತ್ತಮರಂತೆ ವಿರಾಜಿಸುತ್ತಿದ್ದರು.

ಇತ್ತ ಕಾಳಹಸ್ತಿಯಲ್ಲಿದ್ದ ಗೋವಿಂದನ ಹಿತಕ್ಕಾಗಿ ಆಚಾರ್ಯರು ತಮ್ಮ ಮಾವನಾದ ಶ್ರೀಶೈಲಪೂರ್ಣರಿಗೆ ಒಂದು ಲೇಖನ (ಕಾಗದ)ವನ್ನು ಬರೆದು ಕಳುಹಿಸಿದರು.

ಅತ್ತ ಶ್ರೀರಂಗನಿವಾಸಿಗಳಾದ ಯಾಮುನಾಚಾರ್ಯರ ಶಿಷ್ಯರು ಯತಿರಾಜರ ವೈಭವವನ್ನು ಕೇಳಿ ಹೃಷ್ಟರಾಗಿ, ಭಕ್ತವತ್ಸಲನಾದ ರಂಗನಾಥನನ್ನು ವಂದಿಸಿ, 'ಎಲೈ ಜಗತ್ಪತಿಯಾದ ರಂಗನಾಥನೇ, ಜಗದ್ಗುರುವಾದ ಯತಿರಾಜರನ್ನು ಇಲ್ಲಿಗೆ ಕರೆತಂದು ನಮ್ಮನ್ನು ರಕ್ಷಿಸು'-ಎಂದು ಪ್ರಾರ್ಥಿಸುತ್ತಿದ್ದರು. ಭಕ್ತರ ಮೊರೆಯನ್ನು ಕೇಳಿದ ರಂಗನಾಥನು ಈ ವಿಚಾರವಾಗಿ ದೇವರಾಜನಿಗೆ ಬರೆದು ಕಳುಹಿಸಿದನು. ಅದರಲ್ಲಿ -'ಎಲೈ ವರದರಾಜನೆ, ಯತಿರಾಜನು ಇಲ್ಲಿಯವರೆಗೆ ನಿನ್ನ ಸಮೀಪದಲ್ಲಿದ್ದನಷ್ಟೆ. ಅವನನ್ನು ಈಗ ನನ್ನಲ್ಲಿಗೆ ಕಳುಹಿಸಿಕೊಡು'- ಎಂಬ ಅಭಿಪ್ರಾಯವಿತ್ತು. ಇದನ್ನು ಓದಿಸಿ ಕೇಳಿದ ವರದರಾಜನು ನಗುತ್ತ -'ಲೋಕದಲ್ಲಿ ದಾನಶೀಲರಾದವರು ಅಪೇಕ್ಷಿತವಾದ ಪದಾರ್ಥಗಳನ್ನು ಇತರರಿಗೆ ದಾನಮಾಡುವುದುಂಟು. ಆದರೆ ಅಭಿಮಾನವನ್ನು ದಾನಮಾಡುವವರಾಗಲೀ, ಅದನ್ನು ಕೇಳತಕ್ಕವರಾಗಲಿ ಎಲ್ಲಿಯಾದರೂ ಉಂಟೆ? ಹೋಗು ಹೋಗು'-ಎನ್ನಲು ಬಂದಿದ್ದ ವಿಪ್ರನು ಶ್ರೀರಂಗಕ್ಕೆ ಹೋಗಿ ರಂಗನಾಥನಲ್ಲಿ ವಿಜ್ಞಾಪಿಸಿದನು. ಆಗ ರಂಗನಾಥನು ಯಾಮುನಾಚಾರ್ಯರ ಮಗನನ್ನು ಕರೆದು -'ಎಲೈ ದೇವಗಾನವಿಶಾರದನಾದ ವರರಂಗನೇ, ಈಗಲೇ ಸತ್ಯವ್ರತಕ್ಷೇತ್ರಕ್ಕೆ ಹೋಗು. ಹೋಗಿ ರಮಾಪತಿಯಾದ ದೇವರಾಜನನ್ನು ನಾಟ್ಯದಿಂದಲೂ ದೇವಗಾನದಿಂದಲೂ ಆನಂದಗೊಳಿಸು. ಎಲೈ ವೈಷ್ಣವೋತ್ತಮನೇ, ಪ್ರಸನ್ನನಾದ ವರದರಾಜನು ನಿನಗೆ ಅನರ್ಘ್ಯವಾದ ಬಹುಮಾನಗಳನ್ನು ಕೊಡುವನು. ಆದರೆ ಅವುಗಳನ್ನು ತೆಗೆದುಕೊಳ್ಳಬೇಡ. ಯತೀಶ್ವರರನ್ನೇ ಕೊಡಬೇಕೆಂದು ಪ್ರಾರ್ಥಿಸು. ಹೇಗೋ- ನಿನ್ನ ಶಕ್ತಿಯಿದ್ದಂತೆ ಪ್ರಯತ್ನಪಟ್ಟು ಯತಿರಾಜರನ್ನು ಇಲ್ಲಿಗೆ ಕರೆದುಕೊಂಡು ಬಾ ಹೋಗು' ಎಂದು ಆಜ್ಞಾಪಿಸಿದನು. ಹೀಗೆ ಭಗವಂತನಿಂದ ಆಜ್ಞಾಪಿಸಲ್ಪಟ್ಟ ವರರಂಗನು ಯತಿರಾಜರನ್ನು ಕರೆತರಲು ಕಾಂಚೀನಗರಕ್ಕೆ ಪ್ರಯಾಣಮಾಡಿದನು.

ಇತ್ತ ಕಾಂಚೀನಗರದಲ್ಲಿ ಗುರುಪುತ್ರನಾದ ವರರಂಗನ ಆಗಮನವನ್ನು ಕೇಳಿ ಹೃಷ್ಟರಾದ ಕಾಂಚೀಪೂರ್ಣರೇ ಮೊದಲಾದವರು ಮಂಗಳವಾದ್ಯ ಪೂರ್ವಕವಾದ ಮರ್ಯಾದೆಗಳೊಡನೆ ಅವನನ್ನು ಎದುರುಗೊಂಡು ಕರೆತಂದು, ಪೂಜ್ಯನಾದ ಅವನನ್ನು ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿದರು. ವರರಂಗನು ಅವರೊಡನೆ ಹಸ್ತಿಗಿರಿಗೆ ಹೋಗಿ ಪೀತಾಂಬರಧಾರಿಯಾದ ದೇವರಾಜನನ್ನು ಭಕ್ತಿಯಿಂದ ವಂದಿಸಿ, ತೀರ್ಥಶಠಕೋಪಾದಿಗಳನ್ನು ಸ್ವೀಕರಿಸಿ, ಕಾಂಚೀಪೂರ್ಣರು ಏರ್ಪಡಿಸಿದ್ದ ಮನೆಗೆ ಬಂದನು. ಅಲ್ಲಿ ಒಂದು ದಿನ ಮಾರ್ಗಾಯಾಸವನ್ನು ಹೋಗಲಾಡಿಸಿಕೊಳ್ಳಲು ವಿಶ್ರಾಂತಿಯನ್ನು ಪಡೆದನು.

ಮಾರನೆಯದಿನ ವರರಂಗನು ಉಷಃಕಾಲದಲ್ಲಿ ಎದ್ದು, ಪ್ರಾತರಾಹ್ನಿಕಗಳನ್ನು ಮುಗಿಸಿಕೊಂಡು ಮನೋಹರವಾದ ಉಡುಪನ್ನು ಧರಿಸಿ, ನಾಟ್ಯಕ್ಕೆ ಸಿದ್ಧನಾಗಿ ದೇವರಾಜನ ಸನ್ನಿಧಿಗೆ ಹೊರಟನು.

ಶ್ರೀಮದ್ವರದರಾಜನು ಶ್ರೀಭೂದೇವಿಯರಿಂದ ಪರಿವೃತನಾಗಿ ತ್ಯಾಗಮಂಟಪದಲ್ಲಿ ಶೋಭಿಸುತ್ತಿದ್ದನು.

ವರರಂಗನು ಬಂದು ನಮಸ್ಕರಿಸಿ ಜಗತ್ಪತಿಯಾದ ವರದರಾಜನ ಎದುರಿನಲ್ಲಿ ದೇವಗಾನಗಳನ್ನು ಹಾಡಿ, ದಿವ್ಯನಾಟ್ಯಗಳನ್ನು ಪ್ರದರ್ಶಿಸಲು, ಸಂತುಷ್ಟನಾದ ಭಗವಂತನು ಅನರ್ಘ್ಯವಾದ ಆಭರಣಾದಿಗಳನ್ನು ಅನುಗ್ರಹಿಸಿದನು. ವರರಂಗನು ಅವುಗಳನ್ನು ನೋಡಿ 'ಎಲೈ ಭಕ್ತಹಿತಪ್ರದಾಯಕನಾದ ವರದರಾಜನೆ, ಇವುಗಳಿಂದ ನನಗೇನು ಪ್ರಯೋಜನ? ನನಗೆ ಬೇಕಾದುದನ್ನು ಅನುಗ್ರಹಿಸು'- ಎನ್ನಲು, ಭಗವಂತನು -'ಎಲೈ ಭಕ್ತನೆ, ಲಕ್ಷ್ಮಿಯನ್ನೂ ನನ್ನನ್ನೂ ಬಿಟ್ಟು ಏನನ್ನು ಬೇಕಾದರೂ ಕೊಡುವೆನು, ಕೇಳು'- ಎಂದನು. ಆಗ ವರರಂಗನು ಅತ್ಯಂತ ಹೃಷ್ಟನಾಗಿ -'ಶ್ರೀರಂಗನಾಥನಿಗೆ ಯತಿರಾಜರನ್ನು ಅರ್ಪಿಸು. ಇದಕ್ಕಿಂತಲೂ ಬೇರೆ ಯಾವುದನ್ನೂ ನಾನು ಇಚ್ಛಿಸುವುದಿಲ್ಲ. ಶ್ರೀರಂಗರಾಜನಿಗೆ ಆ ಮಹಾತ್ಮನಲ್ಲಿಯೇ ಅತಿಶಯವಾದ ಪ್ರೀತಿಯಿರುವುದು'- ಎಂದಾಗ ಉದ್ವಿಗ್ನನಾದ ವರದರಾಜನು -'ಎಲೈ ಭಕ್ತಶಿಖಾಮಣಿಯೇ, ಯತಿರಾಜನನ್ನು ಬಿಟ್ಟು ಯಾವುದನ್ನು ಬೇಕಾದರೂ ಕೇಳು. ನನ್ನ ಪ್ರಾಣವಾದ ಯತಿರಾಜನನ್ನು ನಾನು ಹೇಗೆ ಕೊಡಲಿ? ಲೋಕದಲ್ಲಿ ಪ್ರಾಣವಿಲ್ಲದೆ ಯಾರಾದರೂ ಬದುಕಿರುವರೇ? ನಿನ್ನ ಪ್ರಾಣಗಳನ್ನು ನನಗೆ ಕೊಡು ಎಂದು ಕೇಳುವವರಾದರೂ ಉಂಟೆ?'- ಎನ್ನಲು ವರರಂಗನು -'ಎಲೈ ವರದರಾಜನೇ, ಎಲ್ಲರೂ ನಿನ್ನನ್ನು ಸತ್ಯವಾದಿಯೆಂದೂ, ದಯಾನಿಧಿಯೆಂದೂ, ಸಕಲಪುರುಷಾರ್ಥಪ್ರದನೆಂದೂ, ದೇವದೇವನೆಂದೂ, ಜಗತ್ಪತಿಯೆಂದೂ ಹೇಳುವರು. ಎಲೈ ದೇವನೆ, ಮೊದಲು ಬೇಕಾದುದನ್ನು ಕೊಡುವೆನೆಂದು ಹೇಳಿ ಈಗ ಕೊಡಲಾರೆನೆನ್ನುವುದು ಉಚಿತವಲ್ಲ. ನೀನು ಎರಡು ಮಾತನಾಡುವುದಿಲ್ಲವೆಂದು ಎಲ್ಲರೂ ಹೇಳುತ್ತಿರುವರಲ್ಲವೇ! ನಿನ್ನ ಬೇರೆಬೇರೆ ಅವತಾರಗಳಲ್ಲಿ ನೀನೇ ಹೇಳಿರುವ ಮಾತುಗಳಾದರೂ ನಿನಗೆ ನೆನಪಿಲ್ಲವೇ! ಚಿಂತೆಯನ್ನು ಬಿಡು, ಅದರಿಂದೇನು ಪ್ರಯೋಜನ? ಸಂತೋಷದಿಂದ ಯತಿರಾಜರನ್ನು ರಂಗರಾಜನಿಗೆ ಸಮರ್ಪಿಸು' ಎಂದು ಭಗವಂತನಿಗೆ ಹೇಳುತ್ತಲೇ ಯತಿರಾಜರನ್ನು ಕುರಿತು -'ಶ್ರೀರಂಗಕ್ಕೆ ದಯಮಾಡಿಸಬೇಕು'- ಎಂದು ಅವರ ಕೈಯನ್ನು ಹಿಡಿದುಕೊಂಡನು.

ಆಗ ಯತಿರಾಜರು ಜಗತ್ಪತಿಯಾದ ದೇವರಾಜನಿಗೆ ಸಾಷ್ಟಾಂಗ ಪ್ರಣಾಮಮಾಡಿ, ಅವನ ಅನುಮತಿಯನ್ನು ಪಡೆದು, ವರರಂಗನೊಡನೆ ಮಠಕ್ಕೆ ಬಂದು, ತನ್ನ ಶಿಷ್ಯರಿಗೆ ವೃತ್ತಾಂತವನ್ನು ತಿಳಿಸಿ ಶ್ರೀರಂಗಕ್ಕೆ ಹೊರಡಲುದ್ಯುಕ್ತರಾದರು. ಕೂರನಾಥ, ದಾಶರಥಿಯೇ ಮೊದಲಾದ ಶಿಷ್ಯರು, ಶ್ರೀರಂಗನಾಥನನ್ನು ನೋಡಬೇಕೆಂಬ ಕುತೂಹಲದಿಂದ ಆಚಾರ್ಯರನ್ನು ಸಂತೋಷದಿಂದ ಅನುಸರಿಸಿದರು.

ಲೋಕದಲ್ಲಿ ನೂತನವಧುವು ತೌರುಮನೆಯಿಂದ ಪತಿಗೃಹಕ್ಕೆ ಹೊರಡುವಾಗ ಪತಿಪ್ರೇಮವಿದ್ದರೂ ತಾಯಿ ತಂದೆಗಳನ್ನು ನೆನೆಸಿಕೊಂಡು ಕಣ್ಣೀರು ಬಿಡುತ್ತಿರುವಂತೆ,

ಯತಿರಾಜರೂ ಕೂಡ ವರದರಾಜನನ್ನು ನೆನೆನೆನೆದು ಚಿಂತಿಸುತ್ತಾ ಮೆಲ್ಲಮೆಲ್ಲಗೆ ಶ್ರೀರಂಗಕ್ಕೆ ಹೊರಟರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಂಗರಾಜನಿಗೆ ದೇವರಾಜನಿಂದ ಯತಿರಾಜ ಸಮರ್ಪಣವೆಂಬ ಹದಿನಾರನೆಯ ಅಧ್ಯಾಯವು ಮುಗಿದುದು.

೧೭

ಶ್ರೀರಾಮಾನುಜಾಚಾರ್ಯರು ಪ್ರಯಾಣಮಾಡುತ್ತ ಕಲಿನಾಶಕವೂ, ಸ್ವಚ್ಛವೂ, ಮನೋಹರವೂ ಶ್ರೀರಂಗದ ಸಮೀಪದಲ್ಲಿಯೇ ಹರಿಯುತ್ತಲೂ ಇರುವ ಕಾವೇರಿಯನ್ನು ನೋಡಿ, ಶಿಷ್ಯರೊಡನೆ ಅಲ್ಲಿ ಸ್ನಾನಮಾಡಿ, ಊರ್ಧ್ವಪುಂಡ್ರಗಳನ್ನು ಧರಿಸಿ ಮಂತ್ರ ರತ್ನವನ್ನು ಜಪಿಸುತ್ತಿದ್ದರು.

ಇತ್ತ ವರರಂಗನು ಎಲ್ಲರಿಗಿಂತಲೂ ಮುಂಚೆಯೇ ರಂಗನಗರದೊಳಗೆ ಪ್ರವೇಶಿಸಿ ಪೂರ್ಣಾಚಾರ್ಯರೊಡನೆ ಶ್ರೀರಂಗನಾಥನ ಸನ್ನಿಧಿಗೆ ಹೋಗಿ, ತನ್ನ ಕಾರ್ಯಸಿದ್ಧಿ ರೂಪವಾದ ಆಚಾರ್ಯಾಗಮನವನ್ನು ಭಗವಂತನಿಗೆ ವಿಜ್ಞಾಪಿಸಿದನು. ರಂಗನಾಥನು ಸಂತೋಷಕರವಾದ ಮಾತನ್ನು ಕೇಳಿ ವರರಂಗನಿಗೆ ಅಪರಿಮಿತವಾದ ಸನ್ಮಾನವನ್ನು ಮಾಡಿದನು.

ಅನಂತರ ರಂಗನಾಥನು ಪೂರ್ಣಾಚಾರ್ಯರನ್ನು ಕರೆದು -'ಬೇಗ ಸುವರ್ಣಮಯವಾದ ಛತ್ರಚಾಮರಾದಿ ಮರ್ಯಾದಿಗಳೊಡನೆಯೂ, ನಮ್ಮ ದಿವ್ಯಕಥೆಗಳನ್ನು ಪಠಿಸುತ್ತಿರುವ ವಿಪ್ರಶ್ರೇಷ್ಠರೊಡನೆಯೂ, ಆಚಾರ್ಯಶ್ರೇಷ್ಠರೊಡನೆಯೂ, ಇತರ ಪೌರರೊಡನೆಯೂ ಹೋಗಿ ಯತಿರಾಜನನ್ನು ಕರೆದುಕೊಂಡು ಬಾ'- ಎಂದು ಆಜ್ಞಾಪಿಸಿದನು.

ಶ್ರೀರಂಗರಾಜನ ಮಾತುಗಳನ್ನು ಕೇಳಿ ಪೂರ್ಣಾಚಾರ್ಯರು ಬಹುಪರಿವಾರದೊಡನೆಯೂ, ಸಮಸ್ತವೈಭವದೊಡನೆಯೂ ಎದುರುಗೊಂಡರು. ಅಷ್ಟರಲ್ಲಿ ರಂಗನಾಥನೂ ಸಹ ಪ್ರೀತಿಯಿಂದ ಅಗ್ರಮಂಟಪಕ್ಕೆ ಬಂದು ಯತಿರಾಜರ ಆಗಮನವನ್ನು ನಿರೀಕ್ಷಿಸುತ್ತಿದ್ದನು.. ಯತಿರಾಜರು ಬರುತ್ತಿರುವ ಶ್ರೀವೈಷ್ಣವರ ಅಪರಿಮಿತವಾದ ಗೋಷ್ಠಿಯನ್ನು ಕಂಡು ಶಿಷ್ಯರೊಡನೆ ಹೊರಟರು. ಸಮೀಪಕ್ಕೆ ಬಂದ ಶ್ರೀವೈಷ್ಣವರು ಯತಿರಾಜರಿಗೆ ದಂಡವತ್ಪ್ರಣಾಮವನ್ನು ಮಾಡಿದರು. ಯತಿರಾಜರೂ ಕೂಡ ತಮ್ಮ ಆಚಾರ್ಯರಾದ ಪೂರ್ಣಾಚಾರ್ಯರಿಗೆ ಭಕ್ತಿಯಿಂದ ನಮಸ್ಕರಿಸಿದರು. ಈ ರೀತಿ ಯಥೋಚಿತವಾದ ಸಂಪ್ರದಾಯಗಳಾದ ಮೇಲೆ ಯತಿರಾಜರು ತಮ್ಮ ಆಚಾರ್ಯರನ್ನು ಮುಂದಿಟ್ಟು ಕೊಂಡು ಅನೇಕ ಗೋಪುರಗಳಿಂದಲೂ, ಮಂಟಪಗಳಿಂದಲೂ, ಸಪ್ತಪ್ರಾಕಾರಗಳಿಂದಲೂ ಶೋಭಿಸುತ್ತಿರುವ ಶ್ರೀರಂಗನಿಲಯವನ್ನು ಹೊಂದಿ, ಬೇಗ ದೇವಾಲಯವನ್ನು ಪ್ರವೇಶಿಸಿ, ವಿಷ್ವಕ್ಸೇನಾದಿಗಳಿಗೆ ನಮಸ್ಕರಿಸಿ ಶ್ರೀರಂಗನಾಥನ ಸೇವೆಗಾಗಿ ರಂಗಮಂಟಪವನ್ನು ಪ್ರವೇಶಿಸಿದರು.

ಆಗ ಭಕ್ತವತ್ಸಲನಾದ ಶ್ರೀರಂಗನಾಥನು ತಾನೇ ಯತಿರಾಜರ ಅಭಿಮುಖವಾಗಿ ಬರುತ್ತಿದ್ದನು. ಅದನ್ನು ಕಂಡು ಅತ್ಯಾಶ್ಚರ್ಯಗೊಂಡ ಆಚಾರ್ಯರು ಇದೇನೆಂದು ಯೋಚಿಸಿ,

ರಂಗನಾಥನ ಸಮೀಪಕ್ಕೆ ಹೋಗಿ, ಪಾದಪದ್ಮಗಳನ್ನು ವಂದಿಸಿ -'ಎಲೈ ರಂಗನಾಥ, ಹರೇ, ಜಗನ್ನಾಥ, ನಿನ್ನ ದಾಸನಾದ ನಾನು ಬಂದರೆ ನೀನೇ ಹೀಗೆ ಎದುರಿಗೆ ಬರುವುದು ಯುಕ್ತವಲ್ಲ'- ಎಂದರು. ಆಗ ಶ್ರೀರಂಗನಾಥನು -'ಎಲೈ ಯತಿಸಾರ್ವಭೌಮ, ನೀನು ನನ್ನಲ್ಲಿಗೆ ಬಂದಂತೆ ನಾನು ನಿನ್ನ ಎದುರಾಗಿ ಬಂದುದರಲ್ಲಿ ಅತಿಶಯವೇನು? ವಿಭೂತಿದ್ವಯಗಳಲ್ಲಿಯೂ ಜನರಿಗೆ ಅಭಯವನ್ನು ಕೊಟ್ಟು ಅವರ ಯೋಗಕ್ಷೇಮವನ್ನು ವಹಿಸು. ಇಲ್ಲಿಯವರೆಗೂ ನಾನು ಅವರ ಯೋಗಕ್ಷೇಮವನ್ನು ವಹಿಸಿದ್ದೆನು. ಈಗ ನಾನು ವಿಶ್ರಮಿಸಿಕೊಳ್ಳಬೇಕೆಂದು ಇಚ್ಛಿಸುವುದರಿಂದ ನೀನು ಆ ಜವಾಬ್ದಾರಿಯನ್ನು ವಹಿಸಿಕೋ. ಬೇಗ ಈ ಭಾರವನ್ನು ವಹಿಸಿ, ನಮ್ಮ ಎಲ್ಲ ಕೆಲಸಗಳನ್ನೂ ಮಾಡುತ್ತ ಸ್ವತಃ ಶೇಷಿಯಾಗಿ ಎಲ್ಲರನ್ನೂ ಶೇಷಭೂತರನ್ನಾಗಿ ಮಾಡಿ ರಕ್ಷಿಸು. ನನ್ನ ಸನ್ನಿಧಿಯಲ್ಲಿಯೇ ನನಗೆ ಪ್ರಿಯವಾದುದನ್ನು ಮಾಡುತ್ತ, ನಿನ್ನ ಅಧೀನವಾದ ವಿಭೂತಿದ್ವಯವನ್ನೂ ಉಪಯೋಗಿಸಿಕೊಂಡು ನಿನಗೆ ತೋರಿದಂತೆ ಪ್ರಪಂಚವನ್ನು ರಕ್ಷಿಸು'- ಎಂದು ಹೇಳಿ ಕೂಡಲೇ ಯತಿರಾಜರಿಗೆ -'ವಿಭೂತಿದ್ವಯನಾಯಕ'-ನೆಂದು ನಾಮಧೇಯವನ್ನು ಅನುಗ್ರಹಿಸಿದನು. ರಂಗನಾಥನ ಮಾತನ್ನು ಕೇಳಿ ಆಶ್ಚರ್ಯಗೊಂಡ ಯತಿರಾಜರು ವಿನಯವಾಗಿಯೂ ,ಗಂಭೀರವಾಗಿಯೂ -'ಇದೆಲ್ಲವೂ ಪೂರ್ಣಾಚಾರ್ಯರ ಮಹಾ ವೈಭವವು; ನನ್ನದಲ್ಲ'- ಎಂದರು.

ಪೂರ್ಣಾಚಾರ್ಯರು -'ಎಲೈ ಯತೀಂದ್ರನೇ, ಹಿಂದೆ ವೈಕುಂಠದಿಂದ ಬಂದು ಶಠಕೋಪನಾಗಿ ಅವತರಿಸಿದ ಮಹಾಮುನಿಯು ಈ ಜನರನ್ನು ಭವಬಂಧನದಿಂದ ಮುಕ್ತರನ್ನಾಗಿ ಮಾಡಬೇಕೆಂದು ಪ್ರಯತ್ನಿಸಿ ಕೊನೆಗೆ ಸಾಧ್ಯವಿಲ್ಲವೆಂದು ತಿಳಿದು ತನ್ನ ಗ್ರಂಥದಲ್ಲಿ 'ಈ ಭೂಲೋಕದಲ್ಲಿ ಮುಂದೆ ಮಹಾತ್ಮನೊಬ್ಬನು ಹುಟ್ಟುವನು. ಅವನು ಜನರನ್ನು ನಿಸ್ಸಂಶಯವಾಗಿ ರಕ್ಷಿಸುವನು. ಅವನಿಂದ ಕಲಿಧರ್ಮವು ಸಂಪೂರ್ಣವಾಗಿ ನಾಶವಾಗುವುದು'- ಎಂದು ಹೇಳಿರುವನು. ಕಾರಿಪುತ್ರನ ಆ ಮಾತೂ ನಿನ್ನ ಈ ಜನ್ಮವೂ ಪರಸ್ಪರ ಹೊಂದಿಕೊಂಡಿರುವುದು. ಶ್ರೀರಂಗರಾಜನು ನಿನಗೆ ವಿಭೂತಿದ್ವಯವನ್ನು ಈಗ ಅನುಗ್ರಹಿಸಿರುವನು. ಎಲೈ ಲಕ್ಷ್ಮಣದೇಶಿಕ, ರಂಗನಾಥನ ಆಜ್ಞೆಯಂತೆ ಇಲ್ಲಿಯೇ ವಾಸಮಾಡಿಕೊಂಡಿರು. ಸಮಸ್ತ ಜನರನ್ನೂ ರಮಾಪತಿಯ ಪರಮಭಕ್ತರನ್ನಾಗಿ ಮಾಡು. ಹೀಗೆ ಸಮಸ್ತರನ್ನೂ ಪರಿಪಾಲಿಸುತ್ತ ಮಹಾವೈಭವದಿಂದ ಈ ಭೂಲೋಕದಲ್ಲಿ ಅನೇಕ ವರ್ಷಗಳವರೆಗೂ ಸುಖವಾಗಿರು'-ಎಂದರು.

ಪೂರ್ಣಾಚಾರ್ಯರ ಮಾತನ್ನು ಕೇಳಿ ಮತ್ತೂ ವಿಸ್ಮಿತರಾದ ಆಚಾರ್ಯರು ಮತ್ತೆ ರಂಗನಾಥನಿಗೆ ಭಕ್ತಿಯಿಂದ ನಮಸ್ಕರಿಸಿ -'ಎಲೈ ಹರಿಯೇ, ತಮ್ಮ ಅಪ್ಪಣೆಯಂತೆಯೇ ನಡೆಯುತ್ತೇನೆ. ನಿಮ್ಮ ಅಪ್ಪಣೆಯನ್ನು ಉಲ್ಲಂಘಿಸುವುದುಂಟೆ? ಅಷ್ಟೇ ಅಲ್ಲದೇ ನಿಮ್ಮ ಅಪ್ಪಣೆಯನ್ನು ಪಾಲಿಸುವುದಲ್ಲದೆ ನನ್ನ ಕರ್ತವ್ಯವಾದರು ಮತ್ತಾವುದುಂಟು? ಎಂದು ಹೇಳಿ ಗರ್ಭಗುಡಿಯನ್ನು ಪ್ರವೇಶಿಸಿ, ಭಗವಂತನನ್ನು ಪ್ರದಕ್ಷಿಣ ಮಾಡಿ, ಶೇಷಶಯನನಾದ ರಂಗನಾಥನನ್ನು ಸಂದರ್ಶಿಸಿದರು. ಆ ರಂಗನಾಥನ ಕೋಟಿ ಸೂರ್ಯನಿಗೆ ಸಮಾನನಾದ ಪ್ರಭೆಯನ್ನೂ, ಶರಚ್ಚಂದ್ರನಂತಹ ಮುಖವನ್ನೂ, ನವರತ್ನಗಳ ಸಮುದಾಯಗಳಿಂದಲೇ ಖಚಿತವಾದ ಕವಚದಿಂದ ಹೊಳೆಯುತ್ತಿರುವ ದಿವ್ಯಮಂಗಳ ವಿಗ್ರಹವನ್ನೂ ನೋಡಿ,

ಬಾಷ್ಪದಿಗ್ಧವಾದ ನೇತ್ರವುಳ್ಳವರಾಗಿಯೂ ಪುಲಕಿತವಾದ ಶರೀರವುಳ್ಳರಾಗಿಯೂ, ಆಪಾದ ಮಸ್ತಕವಾಗಿ ಮತ್ತೆ ಮತ್ತೆ ದರ್ಶನಮಾಡುತ್ತ, ತೃಪ್ತಿಯನ್ನೇ ಹೊಂದದವರಾದರು. ತೀರ್ಥ ಶಠಾರಿಗಳನ್ನು ಭಕ್ತಿಯಿಂದ ಸ್ವೀಕರಿಸಿ ವೈನತೇಯಮಂಟಪದಲ್ಲಿ ಕುಳಿತರು. ಪೂರ್ಣಾಚಾರ್ಯರೇ ಮೊದಲಾದ ವೈಷ್ಣವೋತ್ತಮರು ಅವರ ಸುತ್ತಲೂ ಕುಳಿತರು.

ಅನಂತರ ಆಚಾರ್ಯರು ಆ ರಂಗನಿಲಯದಲ್ಲಿರುವ ಕೈಂಕರ್ಯಪರರೆಲ್ಲರನ್ನೂ ಕರೆದು -ಎಲೈ ವಿಷ್ಣುಕಿಂಕರರೇ, ನೀವೆಲ್ಲರೂ ನಿಮ್ಮನಿಮ್ಮ ಸೇವಕಾರ್ಯಗಳಲ್ಲಿ ಬಹು ಭಕ್ತಿಯಿಂದಲೂ ಜಾಗರೂಕತೆಯಿಂದಲೂ ಇರಬೇಕು.ಜಗತ್ಪತಿಯಾದ ರಂಗನಾಥನ ಕೈಂಕರ್ಯದಲ್ಲಿ ಸ್ವಲ್ಪವೂ ಪ್ರಮಾದವುಂಟಾಗಬಾರದು'- ಎಂದು ಹೇಳಿ ಪರಕಾಲ (ತಿರುಮಂಗೈಯಾಳ್ವಾರ್)ರಿಂದ ನಡೆಸಲ್ಪಟ್ಟ ಕೈಂಕರ್ಯವನ್ನು ನೋಡುವುದಕ್ಕಾಗಿ ಸ್ವಜನರೊಡನೆ ಅಲ್ಲಿಂದ ಹೊರಟರು.

ಪೂರ್ಣಾಚಾರ್ಯರು ತೋರಿಸಿದ ಆ ಕೈಂಕರ್ಯವನ್ನು ನೋಡಿ ಸಂತುಷ್ಟರಾಗಿ, ರಂಗನಾಥನ ಅಪ್ಪಣೆಯಂತೆ ಶ್ರೀರಂಗದಲ್ಲಿಯೇ ವಾಸಮಾಡುತ್ತಿದ್ದರು.

ಯತಿರಾಜರು ಶಾಸ್ತ್ರಜ್ಞರಲ್ಲಿ ಶ್ರೇಷ್ಠರಾದ ಕೂರನಾಥರೇ ಮೊದಲಾದ ತಮ್ಮ ಶಿಷ್ಯರಿಗೆ ಭಗವತ್ಕಾಲಕ್ಷೇಪವನ್ನು ಮಾಡಿಸುತ್ತ, ಉಭಯವೇದಾಂತಪ್ರವಣರನ್ನಾಗಿರುವ ವೈಷ್ಣವರನ್ನು ಪರಮಭಕ್ತರನ್ನಾಗಿ ಮಾಡುತ್ತ ರಕ್ಷಿಸುತ್ತಿದ್ದರು. ಅವರ ದೃಷ್ಟಿಮಾರ್ಗಕ್ಕೆ ಗೋಚರಿಸಿದವರೆಲ್ಲರೂ ಪಾಪನಿರ್ಮುಕ್ತರಾಗಿ ಪರಮವೈಷ್ಣವರೂ ಪರಿಶುದ್ಧರೂ ಆದರು.

ಹೀಗೆ ಆಚಾರ್ಯರು ಹಗಲೂ ರಾತ್ರಿಯಾಗಿ ರಂಗನಾಥನನ್ನು ಸೇವಿಸುತ್ತಲೂ, ಪೂರ್ಣಾಚಾರ್ಯರೊಡನೆ ಸಲ್ಲಾಪಮಾಡುತ್ತಲೂ, ಪೌರರಿಗೆ ಪ್ರಿಯರಾಗಿ, ಹಸ್ತಿಗಿರಿನಾಥನ ದುಃಖವನ್ನು ಕಡಿಮೆಮಾಡಿಕೊಂಡು ಸುಖವಾಗಿರುತ್ತಿದ್ದರು.

ಶುಭಕರವಾದ ರಂಗರಾಜ ಯತಿರಾಜರ ಸಂವಾದರೂಪವಾದ ಈ ಆಖ್ಯಾನವನ್ನು ಪಠಿಸುವವರು ವೈಕುಂಠಲೋಕವನ್ನು ಹೊಂದುವರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಜಾಚಾರ್ಯರಿಗೆ ವಿಭೂತಿದ್ವಯಾಧಿಪತ್ಯವೆಂಬ ಹದಿನೇಳನೆಯ ಅಧ್ಯಾಯವು ಮುಗಿದುದು.

## ೧೮

ಗೋವಿಂದನನ್ನು ರಕ್ಷಿಸುವುದಕ್ಕಾಗಿ ಯತಿರಾಜರಿಂದ ಶ್ರೀಶೈಲಪೂರ್ಣರ ಹತ್ತಿರಕ್ಕೆ ಕಳುಹಿಸಲ್ಪಟ್ಟಿದ್ದ ಶ್ರೀವೈಷ್ಣವರು ಕೃತಕೃತ್ಯರಾಗಿ ಆಚಾರ್ಯರನ್ನು ನೋಡಬೇಕೆಂಬ ತವಕದಿಂದ ಶ್ರೀರಂಗಕ್ಕೆ ಬಂದರು.ಆಚಾರ್ಯರು ಅವರನ್ನು ಕಂಡು ಆದರದಿಂದ ಸತ್ಕರಿಸಿ 'ಶ್ರೀಶೈಲಪೂರ್ಣನೂ ಆತನ ಸೋದರಳಿಯನಾದ ಗೋವಿಂದನೂ ಕುಶಲವೇ? ಗೋವಿಂದನು ಸನ್ಮಾರ್ಗಗಾಮಿ ಯಾಗಿರುವನೇ?'- ಎಂದು ಕೇಳಲು, ಅವರು ಎಲ್ಲವನ್ನೂ ಯಥಾರ್ಥವಾಗಿ ತಿಳಿಸಿದರು. ಆಗ ಆಚಾರ್ಯರು -'ನಿಮ್ಮ ಪರಸ್ಪರ ಪರಿಚಯವು ಹೇಗೆ ಉಂಟಾಯಿತು? ನಡೆದ ಮಾತುಕತೆಗಳ ವಿವರವೇನು, ವಿಸ್ತಾರವಾಗಿ ಹೇಳಿರಿ'- ಎನ್ನಲು ಅವರು ಇಂತೆಂದರು.

'ತಮ್ಮ ಅಪ್ಪಣೆಯನ್ನು ಪಡೆದು ಹೊರಟ ನಾವು ನಾಲ್ಕು ದಿವಸಗಳಲ್ಲಿ

ವೇಂಕಟಾಚಲವನ್ನು ತಲುಪಿ, ಶ್ರೀಯಃಪತಿಯಾದ ಶ್ರೀನಿವಾಸನನ್ನು ಸೇವಿಸಿ, ಶ್ರೀಶೈಲ ಪೂರ್ಣರನ್ನೂ ವಂದಿಸಿ, ತಮ್ಮ ಆದೇಶವನ್ನು ಅವರಲ್ಲಿ ವಿಜ್ಞಾಪಿಸಿದೆವು. ನಮ್ಮ ಮಾತನ್ನು ಕೇಳಿದ ಶ್ರೀಶೈಲಪೂರ್ಣರು ಸಂತುಷ್ಟರಾಗಿ -'ನನ್ನ ಸೋದರಳಿಯನಾದ ಗೋವಿಂದನು ಬುದ್ಧಿಶಾಲಿ, ಶಾಸ್ತ್ರಜ್ಞ, ಅವನು ಯಾದವರೊಡನೆ ಗಂಗಾಸ್ನಾನಕ್ಕಾಗಿ(ಒಂದು ಸಲ) ಹೊರಟನು. ಆದರಿಂದಲೇ ಅವನಿಗೆ ಕೂಡಲೇ ಶೈವತ್ವವುಂಟಾಯಿತು. ದುರ್ಜನ ಸಹವಾಸವು ಸಜ್ಜನರಿಗೂ ಮೋಹಕವಷ್ಟೆ! ಬ್ರಹ್ಮರುದ್ರಾದಿಗಳೇ ಯಾವನ ಮಾಯೆಯಿಂದ ಮೋಹಿತರಾಗುವರೋ ಅಂತಹ ವಿಷ್ಣುವಿಗೆ ಅನಂತ ವಂದನೆಗಳು. ಬ್ರಾಹ್ಮಣರೂ, ಶಾಸ್ತ್ರಜ್ಞರೂ ಆದ ಮಹರ್ಷಿಗಳೂ ಸಹ ನಾರಾಯಣನೇ ಬ್ರಹ್ಮ ರುದ್ರಾದಿಗಳ ಸೃಷ್ಟಿಕರ್ತನೆಂದೂ, ಜಗತ್ಕಾರಣನೆಂದೂ ತಿಳಿಯದೆ ಇರುವಾಗ ಅಲ್ಪರ ವಿಷಯವನ್ನು ಹೇಳತಕ್ಕದೇನು? ಈ ಕೆಲಸವನ್ನು ನಾನು ಹಿಂದೆಯೇ ಮಾಡಬೇಕೆಂದಿದ್ದೆನು. ಯತಿರಾಜರೂ ಈಗ ಹೇಳಿ ಕಳುಹಿಸಿರುವರೆಂದಮೇಲೆ ಅವಶ್ಯ ವಾಗಿಯೂ ಮಾಡಲೇಬೇಕು'- ಎಂದು ಶಿಷ್ಯರೊಡನೆಯೂ ನಮ್ಮೊಡನೆಯೂ ವೇಂಕಟಾಚಲದಿಂದ ಹೊರಟರು. ಹೊರಟು ಕಾಳಹಸ್ತಿಯನ್ನು ಸೇರಿ ಗೋವಿಂದನ ಉಪವನದ ಹತ್ತಿರ ಅವನ ಪರಿವಾರದಿಂದ ಅವನ ಬರುವಿಕೆಯನ್ನು ತಿಳಿದು, ಸಮೀಪದಲ್ಲಿಯೇ ಇದ್ದ ಕೆರೆಯ ತೀರದಲ್ಲಿ ತನ್ನ ಶಿಷ್ಯರಿಗೆ ಗ್ರಂಥೋಪದೇಶ ಮಾಡುತ್ತಿದ್ದರು.

ಅಷ್ಟರಲ್ಲಿ ಗೋವಿಂದನು ರುದ್ರಾಭಿಷೇಕಕ್ಕಾಗಿ ನೀರನ್ನು ತೆಗೆದುಕೊಂಡು ಹೋಗಲು ಕುಂಭವನ್ನು ಹಿಡಿದು ಭಕ್ತಿಯಿಂದ ಆ ಕೆರೆಗೆ ಬಂದನು. ಬಂದು ರುದ್ರಪರವಾದ ಶ್ಲೋಕಗಳನ್ನೂ, ದ್ರಾವಿಡ ಪ್ರಬಂಧಗಳನ್ನೂ ಪಠಿಸುತ್ತ ನೀರನ್ನು ತುಂಬಿಕೊಂಡು ಹೊರಡುವಾಗ ನಮ್ಮನ್ನು ನೋಡಿ ಸುಮ್ಮನಾದನು. ಆದರೂ ಹೊರಡಲನುವಾದನು. ಆಗ ಶ್ರೀಶೈಲಪೂರ್ಣರು 'ಎಲೈ ವಿಪ್ರನೆ, ತಪೋಧನನೆ, ಈ ರೀತಿಯಾಗಿ ಬಹುಶ್ರಮದಿಂದ ನೀರನ್ನು ಹೊತ್ತು ಮಾಡುವ ರುದ್ರಾಭಿಷೇಕದಿಂದ ನಿನಗೆ ಆಗುವ ಪ್ರಯೋಜನವೇನು?'- ಎಂದು ಕೇಳಲು, ಗೋವಿಂದನು ಅವರ ಮಾತನ್ನು ಕೇಳಿ, ಅವರನ್ನು ಬಿರುಗಣ್ಣಿನಿಂದ ಸ್ವಲ್ಪಹೊತ್ತು ನೋಡುತ್ತಿದ್ದು ಏನೊಂದೂ ಉತ್ತರವನ್ನು ಕೊಡದೆ ಹೊರಟುಹೋದನು. ಶ್ರೀಶೈಲಪೂರ್ಣರೂ ನಮ್ಮೊಡನೆ ವೇಂಕಟಾಚಲಕ್ಕೆ ಹೊರಟು ಬಂದರು.

ಕೆಲವು ದಿನಗಳು ಕಳೆಯಲಾಗಿ ಮತ್ತೆ ಶ್ರೀಶೈಲಪೂರ್ಣರು ಗೋವಿಂದನ ಹಿತಕ್ಕಾಗಿ ನಮ್ಮೆಲ್ಲರೊಡನೆಯೂ ಕಾಳಹಸ್ತಿಗೆ ಹೊರಟು ಅದೇ ಕೆರೆಯ ದಡದಲ್ಲಿದ್ದ ಒಂದು ಆಲದ ಮರದ ಕೆಳಗೆ ಕುಳಿತರು.

ದೂರದಲ್ಲಿ ಎಂದಿನಂತೆ ಗೋವಿಂದನು ಬರುತ್ತಿದ್ದನು. ಕೈಯ್ಯಲ್ಲಿ ಕುಂಭ, ಭಸ್ಮ ಲಿಪ್ತವಾದ ಅಂಗಾಂಗಗಳು, ತ್ರಿಪುಂಡ್ರದಿಂದ ಲಾಂಛಿತವಾದ ಹಣೆ. ಕಂಠದಲ್ಲಿ ರುದ್ರಾಕ್ಷಿಯ ಮಾಲೆ; ಬಾಯಲ್ಲಿ ಪಂಚಾಕ್ಷರಿಯ ಜಪ, ಶಿವಭಕ್ತರಲ್ಲಿ ಶ್ರೇಷ್ಠನು. ಇಂತಹ ಅವನನ್ನು ನೋಡಿದ ಕೂಡಲೇ 'ಈ ವಿಶ್ವವು ಶಿವಾತ್ಮಕವಾದುದು; ಶಿವನಿಗಿಂತಲೂ ಬೇರೆಯಾದುದಿಲ್ಲ; ಶಿವನೇ ಸತ್ಯ; ನಾನೇ ಶಿವ'- ಎಂಬ ಭಾವನೆಯಿಂದ ರೋಮಾಂಚಿತನಾಗುತ್ತಿದ್ದುದನ್ನು ಕಾಣಬಹುದಾಗಿತ್ತು. ಅಂಥ ಗೋವಿಂದನು ಸಮೀಪಕ್ಕೆ ಬರುವ ಸಮಯವನ್ನು ನೋಡಿ ಶ್ರೀಶೈಲಪೂರ್ಣರು ಕೆಲವು ದ್ರಾವಿಡ ಪ್ರಬಂಧಗಳನ್ನೂ, ಯಾಮುನಾಚಾರ್ಯರ -'ಸ್ವಾಭಾವಿಕಾ

ನವಧಿಕಾ........'- ಎಂಬ ಪದ್ಯವನ್ನೂ ಒಂದು ಕಾಗದದಲ್ಲಿ ಬರೆದು ಗೋವಿಂದನು ಬರುವ ದಾರಿಯಲ್ಲಿ ಅವನ ಕಣ್ಣಿಗೆ ಕಾಣುವಂತೆ ಇಟ್ಟು ತಮ್ಮ ಸ್ಥಳದಲ್ಲಿ ಕುಳಿತರು. ಗೋವಿಂದನು ಬರುತ್ತಾ ನೆಲದಲ್ಲಿ ಬಿದ್ದಿರುವ ಆ ಪತ್ರಿಕೆಯನ್ನು ತೆಗೆದು ಓದಿಕೊಂಡು 'ನೀನು ಇಲ್ಲಿಯೇ ಬಿದ್ದಿರು'-ಎಂದು ಅದನ್ನು ಕೆಳಕ್ಕೆ ಎಸೆದು, ಕುಂಭದಲ್ಲಿ ನೀರನ್ನು ತುಂಬಿಕೊಂಡು ಶಿವಾಲಯಕ್ಕೆ ಹೋಗಬೇಕೆಂದು ಹಿಂತಿರುಗಿ ಹೋಗುತ್ತಾ, ಆ ಕಾಗದವು ಅಲ್ಲೇ ಇದ್ದುದ್ದನ್ನು ನೋಡಿ ತೆಗೆದುಕೊಂಡು ನಮ್ಮ ಕಡೆ ತಿರುಗಿನೋಡಿ,ಹಿಂದೆ ವಾಲ್ಮೀಕಿಯು ಚಿಂತಿಸಿದಂತೆ ಏನೋ ಯೋಚಿಸಿಕೊಂಡನು. ಅನಂತರ ಶ್ರೀಶೈಲಪೂರ್ಣರ ಎದುರಿಗೆ ಬಂದು -'ಎಲೈ ವೈಷ್ಣವೋತ್ತಮರೆ, ಇದೋ ನಿಮ್ಮ ಕೈಯಿಂದ ಜಾರಿಬಿದ್ದ ಅರ್ಥವು ಇಲ್ಲಿರುವುದು'-ಎಂದು ಪತ್ರಿಕೆಯನ್ನು ತೋರಿಸಿದನು. ಅವರು ಆ ಮಾತನ್ನು ಕೇಳಿ -'ಇತರರ 'ಅರ್ಥ'ಗಳಾದರೆ ಬಿದ್ದು ಹೋಗುತ್ತದೆ; ನಮ್ಮ 'ಅರ್ಥ'ಗಳು ಎಂದಿಗೂ ಬಿದ್ದುಹೋಗುವುದಿಲ್ಲ' ಎಂದರು. ಆ ಮಾತಿಗೆ ಗೋವಿಂದನು -'ಈ ಚಾತುರ್ಯದ ಮಾತು ಹಾಗಿರಲಿ; ಇದನ್ನು ಕೇಳಿ. ಅನೇಕಮಾರ್ಗಗಳಿರುವಾಗ ವೈಷ್ಣವರು ಯಾವಾಗಲೂ ಒಂದೇ ದಾರಿಯನ್ನೇ ಏಕೆ ಅನುಸರಿಸುವರು?' ಎಂದು ಪ್ರಶ್ನಿಸಲು, ಶ್ರೀಶೈಲಪೂರ್ಣರು -'ಈ ದಾರಿಯು ಸುಗುಮ ವಾಗಿರುವುದರಿಂದ ನಾವು ಯಾವಾಗಲೂ ಇದೊಂದೇ ದಾರಿಯಲ್ಲಿರುತ್ತೇವೆ'- ಎಂದರು. ಗೋವಿಂದನು -'ನೀವು ಬಂಧುಗಳನ್ನು ಬಿಟ್ಟು ಹೋಗಲು ಇಲ್ಲಿಗೆ ಬಂದಿರುವಿರೋ?' ಎಂದು ಕೇಳಲು, ಶ್ರೀಶೈಲಪೂರ್ಣರು -'ಗೋವಿಂದನೇ, ನಾವು ಧೇನುಗಳನ್ನು ಕೊಂಡುಕೊಂಡುಹೋಗಲು ಇಲ್ಲಿಗೆ ಬಂದಿದ್ದೇವೆ'- ಎಂದರು. ಅದಕ್ಕೆ ಗೋವಿಂದನು 'ಗೋಸೇವಾಪರನ ಪಾದಧೂಳಿಯೇ ಪವಿತ್ರವಲ್ಲವೆ?'- ಎನ್ನಲು, 'ನಿಜ, ಉಚಿತಸ್ಥಾನದಲ್ಲಿರುವುದು ಸಿಕ್ಕುವುದಾದರೆ ಪವಿತ್ರವೇ ಸರಿ' ಎಂದು ಉತ್ತರ ಕೊಟ್ಟರು. ಮತ್ತೆ ಗೋವಿಂದನು-'ಮಾರ್ಗವು ಋಜುವಾದರೇನು, ವಕ್ರವಾದರೇನು? ಇವೆರಡರಲ್ಲಿಯೂ ಭೇದವೇನು?'- ಎಂದು ಪ್ರಶ್ನಿಸಲು, 'ಋಜುಮಾರ್ಗವಿರಲು ವಕ್ರವೆನ್ನುವುದೇ ಇದಕ್ಕಿಂತಲೂ ಬೇರೆಯಾದುದೆನ್ನುವುದೇ ಭೇದವಲ್ಲವೇ?'- ಎಂದು ಹೇಳಿದರು. 'ಇದು ಎಂತಹ ವಾಗ್ಬಂಧನ' 'ಇದು ಒಳ್ಳೆಯ ಮಾತುಗಳ ಸ್ವಭಾವ'. 'ಅದರಲ್ಲೇನು ಹೆಚ್ಚು ವಿಚಾರಮಾಡಬಾರದೋ?'. 'ಪರತ್ವದ ವಿಚಾರದಲ್ಲಿ ವಿಚಾರವುಂಟು'. ಯುಕ್ತಿಯುಕ್ತವಾದ ಉತ್ತರಗಳನ್ನು ಕೇಳಿ ಗೋವಿಂದನು ಸುಮ್ಮನಾದನು. ಶ್ರೀಶೈಲಪೂರ್ಣರು ಅವನ ಲಕ್ಷಣಗಳನ್ನು ನೋಡಿ ಅವನನ್ನು ಸಾಧ್ಯಕೋಟಿಯಲ್ಲಿ ನಿಶ್ಚಯಿಸಿ ಶಿಷ್ಯರೊಡನೆ ವೇಂಕಟಾಚಲಕ್ಕೆ ಹೊರಟರು. ಆಚಾರ್ಯರು ಅವರ ಮಾತನ್ನು ಕೇಳಿ ಹೃಷ್ಟರಾಗಿ ಶಿಷ್ಯರಾದ ದಾಶರಥಿಯನ್ನೂ, ಕೂರನಾಥನನ್ನೂ ನೋಡಿ 'ಎಲೈ ವೈಷ್ಣವಶ್ರೇಷ್ಠರೆ, ನೀವೆಲ್ಲರೂ ಕಥೆಯನ್ನು ಕೇಳುವಿರಾ? ಯಾಮುನಾಚಾರ್ಯರ ಸೂಕ್ತಿಯು ಅವನ ಮನಸ್ಸಿನಲ್ಲಿ ನಾಟಿರುವುದು. ವಿತಂಡಾವಾದವು ಮಾತಿನಲ್ಲಿ ಮಾತ್ರ ಕಾಣುತ್ತದೆ. ಇಬ್ಬರ ವಾಗ್ವಾದವೂ ಚಾತುರ್ಯದಿಂದ ಸಾಗಿದೆ. ಗೋವಿಂದನೂ ಶಾಸ್ತ್ರಪಾರಂಗತ ನಾದುದರಿಂದಲೇ ಅವನ ವಾಕ್ಯಾರ್ಥದಲ್ಲಿ ಶ್ರೀಶೈಲಪೂರ್ಣರು ಆಸಕ್ತರಾದರು.ಅದರ ವಿವರವನ್ನು ಕೇಳಬೇಕೆಂದು ನಿಮಗೆ ಕುತೂಹಲವಿದ್ದರೆ ಕೇಳಿ, ಹೇಳುವೆನು:-'ಶ್ರುತಿ, ಸ್ಮೃತಿ, ಪುರಾಣ, ಇತಿಹಾಸ ಇವೆಲ್ಲವುಗಳಲ್ಲಿಯೂ ಸಾವಿರಾರು ಪ್ರಮಾಣಗಳಿಂದ ಯಾವನೋ

ಒಬ್ಬನು ನನ್ನನ್ನು ತತ್ವದೃಷ್ಟಿಯಿಂದ ತಿಳಿಯುವನು. ಕ್ಷರವೆಂಬುದು ಸರ್ವಭೂತಗಳು. ಅಕ್ಷರನು ಕೂಟಸ್ಥನಾದ ಪರಮಾತ್ಮನು. ಮನುಷ್ಯರಿಗೆ ಎಲ್ಲಕ್ಕಿಂತಲೂ ಹೆಚ್ಚಿನದು ಜ್ಞಾನ. ಜ್ಞಾನವಿಲ್ಲದವನು ಪಶುವಿಗೆ ಸಮಾನನು. ಇದರಂತೆಯೇ-'ಯೇ ವಾ ಲಲಾಟಫಲಕೇ ಲಸದೂರ್ಧ್ವಪುಂಡ್ರಾಃ''ಊರ್ಧ್ವಪುಂಡ್ರಂ ದ್ವಿಜಾತೀನಾಂ ಶಂಖಚಕ್ರಾದಿಧಾರಣಂ। ವೇದಮಾಲ ಪ್ರಮಾಣಾದ್ವಿ ಧರ್ಮೇಃಸರ್ವಂ ಪ್ರತಿಷ್ಠಿತಂ।।''ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ।।''ಪ್ರಣವೋ ಧನುಶ್ಶರೋಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯ ಮುಚ್ಯತೇ। ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್।।''ಸದೇವೇತ್ಯಾದಿ ವಾಕ್ಯಾನಿ ಸತ್ಯಜ್ಞಾನಾದಿಕಾನ್ಯಪಿ। ಏಕಮೇವೇತಿ ವಾಕ್ಯಾನಿ ಬಹುಸ್ಯಾಂ ಪ್ರಭತನಿಬ।' ಈ ಅಭಿಪ್ರಾಯ ಗರ್ಭಿತವಾದ ವಾಕ್ಯಗಳು ಪ್ರತಿಪಾದಿಸಲ್ಪಟ್ಟವು. ಇವೇ ಮೊದಲಾದ ಪ್ರಮಾಣಪರಂಪರೆಗಳಿಂದ ಜನಾರ್ಧನನೇ ತಿಳಿಯಲ್ಪಡತಕ್ಕವನು. ಕಲ್ಯಾಣಗುಣಸಾಗರನಾದ ನಾರಾಯಣನೇ ಜಗತ್ಕರ್ತೃವು. ಆದ್ದರಿಂದ ಮುಮುಕ್ಷುಗಳಾದವರು ವಿಷ್ಣು ಪೂಜೆಯನ್ನೇ ಮಾಡಬೇಕು. ದ್ವಿಜೋತ್ತಮರು ಶಂಖಚಕ್ರಾದಿಗಳನ್ನು ಧರಿಸಬೇಕು.'- ಇವೆಲ್ಲವನ್ನೂ ಮನಸ್ಸಿನಲ್ಲಿಯೇ ಆಲೋಚಿಸಿ, ಸಂಶಯಗೊಂಡ ಚಿತ್ತವುಳ್ಳವನಾಗಿ, ಶಾಸ್ತ್ರಜ್ಞನಾದುದರಿಂದ ಗೋವಿಂದನು ಸುಮ್ಮನಾದನು. ಆದ್ದರಿಂದಲೇ ಶ್ರೀಶೈಲಪೂರ್ಣರೂ ಅವನನ್ನು ಸಾಧ್ಯಕೋಟಿಯಲ್ಲಿ ಸೇರಿಸಿದರು.'ಎಂದು ಹೇಳಿ, ವೃತ್ತಾಂತವನ್ನು ಹೇಳಿದ ವಿಪ್ರರನ್ನು ಕುರಿತು 'ಮತ್ತೆ ಏನಾಯಿತು' ಎಂದು ಕೇಳಿದರು. ಆಗ ವೈಷ್ಣವರು -'ಯಂ ಯಂ ಸ್ಪೃಶತಿ ಪಾಣಿಭ್ಯಾಂ ಯಂ ಯಂ ಪಶ್ಯತಿ ಚಕುಷಾ। ಸ್ಥಾವರಾಣ್ಯಪಿ ಮುಚ್ಯಂತೇ ಕಿಂಪುನ ಬ್ರಾಹ್ಮಣಾ ಜನಾಃ'।। ಎಂಬಂತೆ ವಿಭೂತಿದ್ವಯನಾಯಕರಾದ ತಮ್ಮ ಸಂಬಂಧದಿಂದ ಸ್ಥಾವರಗಳಿಗೂ ಗತಿಯಿರುವಲ್ಲಿ ಗೋವಿಂದನ ವಿಚಾರದಲ್ಲಿ ಹೇಳತಕ್ಕದೇನು?' ಎಂದು ಉಳಿದ ವಿಚಾರವನ್ನು ಹೇಳತೊಡಗಿದರು. ಆಚಾರ್ಯರು ಕೂರನಾಥನೇ ಮೊದಲಾದ ವಿದ್ವಾಂಸರಾದ ಶಿಷ್ಯರಿಂದ ಪರಿವೃತರಾಗಿ ಪ್ರಿಯಕರವಾಗಿಯೂ ಆಶ್ಚರ್ಯಕರವಾಗಿಯೂ ಇರುವ ಗೋವಿಂದನ ಕಥೆಯನ್ನು ಕೇಳಲು ಆಸಕ್ತರಾಗಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀಶೈಲಪೂರ್ಣ ಗೋವಿಂದ ಸಂವಾದವೆಂಬ ಹದಿನೆಂಟನೆಯ ಅಧ್ಯಾಯವು ಮುಗಿದುದು.

## ೧೯

ಆಚಾರ್ಯರಿಂದ ಪ್ರೇರಿದರಾದ ವೈಷ್ಣವರು ಹೇಳಲಾರಂಭಿಸಿದರು:-

'ಶ್ರೀಶೈಲಪೂರ್ಣರು ವೆಂಕಟೇಶನನ್ನು ನಮಸ್ಕರಿಸಿ ನಮ್ಮೊಡನೆಯೂ ಅವರ ಶಿಷ್ಯರೊಡನೆಯೂ ಹೊರಟು ಕಾಳಹಸ್ತಿಯ ಸಮೀಪದಲ್ಲಿ ಸುವರ್ಣಮುಖರೀ ತೀರದಲ್ಲಿ ಶಿಷ್ಯರಿಗೆ ಸಹಸ್ರಗೀತೆಯ ವ್ಯಾಖ್ಯಾನವನ್ನುಪದೇಶಿಸುತ್ತಿದ್ದರು.

ಆಗ ಗೋವಿಂದನು ಪೂಜಾರ್ಥವಾಗಿ ಪುಷ್ಪಗಳನ್ನು ಸಂಗ್ರಹಿಸಲು ಅಲ್ಲಿಗೇ ಬಂದು ಪಾದರಿಯ ಮರದಮೇಲೆ ಹೂವುಗಳನ್ನು ಆರಿಸುತ್ತಿದ್ದನು. ಅಷ್ಟು ಹೊತ್ತಿಗೆ ತಿರುವಾಯ್ಮೊಳಿಯಲ್ಲಿ ದ್ವಿತೀಯ ಶತಕದಲ್ಲಿ ಎರಡು ದಶಕಗಳು ಮುಗಿದು ಮೂರನೆಯ ಶತಕವು ಆರಂಭವಾಗಿತ್ತು. ಗೋವಿಂದನು ಮೌನವಾಗಿ ಅದೆಲ್ಲವನ್ನೂ ಕೇಳುತ್ತಿದ್ದನು. ನಾಲ್ಕನೆಯ ಶತಕದಲ್ಲಿ -'ಯಾವನ ನಾಭಿಕಮಲದಿಂದ ಹುಟ್ಟಿದ ಬ್ರಹ್ಮನು ಜಗತ್ಸೃಷ್ಟಿಗೆ ಕಾರಣನಾದನೋ ಅಂತಹ ಕಲ್ಯಾಣಗುಣಸಾಗರನಾದ ದೇವದೇವನಾದ ನಾರಾಯಣನಿಗಲ್ಲದೇ ಅರ್ಚನೆಯೂ, ಪುಷ್ಪಾದಿಗಳೂ ಇತರರಿಗೆ ಹೇಗೆ ತಾನೆ ಯೋಗ್ಯಗಳಾಗುವುವು?'- ಎಂಬ ಅಭಿಪ್ರಾಯವಿತ್ತು. ಇದನ್ನು ಕೇಳಿದ ಗೋವಿಂದನು -'ನಾರಾಯಣನಿಗೇ ಏಕೆ? ಇತರರಿಗೆ ಏತಕ್ಕೆ ಯೋಗ್ಯವಾಗಬಾರದು?' ಎಂದು ಮರದ ಮೇಲಿಂದಲೇ ಪ್ರಶ್ನಿಸಲು, ಶ್ರೀಶೈಲ ಪೂರ್ಣರು ಅದೇ ಧೀರಸ್ವಭಾವದಿಂದಲೇ 'ಪೂಜೆಯೂ, ಪುಷ್ಪಾದಿಗಳೂ, ನಿಶ್ಚಯವಾಗಿಯೂ ಅವನಿಗಲ್ಲದೆ ಮತ್ತೆ ಯಾರಿಗೂ ಯೋಗ್ಯವಲ್ಲ'- ಎಂದರು. ಅವನು ಹೀಗೆ ಮೂರುಸಲ ಕೇಳಿದಾಗಲೂ ಒಂದೇ ವಿಧವಾದ ಉತ್ತರವನ್ನು ಕೊಟ್ಟರು. ಗೋವಿಂದನು ಆ ಮಾತನ್ನು ಕೇಳಿ ತಾನು ಸಹ ಗಟ್ಟಿಯಾಗಿ -'ನಿಜ, ಇದು ಯೋಗ್ಯವಲ್ಲ' ಎಂದು ಹೇಳುತ್ತ, ಮರದ ಮೇಲಿಂದಲೇ ರುದ್ರಾಕ್ಷಿ ಮಾಲೆಯನ್ನು ಕಿತ್ತೊಗೆದು, ಬಳಿದುಕೊಂಡಿದ್ದ ವಿಭೂತಿಯನ್ನು ಬಟ್ಟೆಯಿಂದ ಅಳಿಸಿಕೊಂಡು, ಮಹಾಪಾತಕಿಯಾದವನು ಪರ್ವತದ ತುದಿಯಿಂದ ಕೆಳಕ್ಕೆ ಬೀಳುವಂತೆ ಕೆಳಕ್ಕೆ ಧುಮಿಕಿ, ಶ್ರೀಶೈಲಪೂರ್ಣರ ಹತ್ತಿರಕ್ಕೆ ಬಂದನು. ಬಂದ ಗೋವಿಂದನನ್ನು ನೋಡಿ ಶ್ರೀಶೈಲಪೂರ್ಣರು "ತಿರುವಾಯ್ಮೊಳಿ"ಯನ್ನು ಬಹುವಾಗಿ ಹೊಗಳಿದರು. ಗೋವಿಂದನು ಬಂದು ಅವರ ಪಾದಗಳಲ್ಲಿ ಬಿದ್ದು -'ಅಜ್ಞನೂ, ಆಚಾರಹೀನನೂ ಆದ ನಾನು ದುಃಖಸಾಗರದಲ್ಲಿ ಮುಳುಗಿ ಹೋಗಿರುವೆನು. ಶರಣಾಗತನಾದ ನನ್ನನ್ನು ರಕ್ಷಿಸಿ, ರಕ್ಷಿಸಿ'- ಎಂದೂ, 'ವಿಭೂತಿದ್ವಯ ನಿರ್ವಾಹದಲ್ಲಿ ಸಾರ್ವಭೌಮರಾದವರನ್ನು ಬಿಟ್ಟು ವಿಸ್ರಸ್ತ ಕೇಶಾಗ್ರಮಸ್ತಕನಲ್ಲಿ ಮೋಹಿತನಾಗಿದ್ದೆನಲ್ಲವೇ! ವಿಶ್ವಕಂಠನನ್ನು ತ್ಯಜಿಸಿ ವಿಷಕಂಠನಲ್ಲಿ ಭ್ರಾಂತನಾದೆನು. ಶ್ರಿಯಃಪತಿಯನ್ನು ಆಶ್ರಯಿಸದೆ ನಿಃಶ್ರೀಕನನ್ನು ಆಶ್ರಯಿಸಿದೆನು. ಪುಂಡರೀಕಾಕ್ಷನನ್ನು ಹೊಂದದೇ ವಿರೂಪಾಕ್ಷನನ್ನು ಹೊಂದಿದೆನು. ಗೋಕುಲ ಸಂರಕ್ಷಕನಾದ ಗಿರಿಧಾರಿಯನ್ನು ಅಗಲಿ ಕಪಾಲಕರನನ್ನು ಪಡೆದೆನು. ಬ್ರಹ್ಮಾದಿ ಸ್ಥಾವರಪರ್ಯಂತದಲ್ಲಿಯೂ ಇರುವ, ಸೃಷ್ಟಿ ಸ್ಥಿತಿ ಲಯ ಕಾರಣನಾದ ಸರ್ವೇಶ್ವರನಾದ ನಾರಾಯಣನನ್ನು ಮರೆತು ಶ್ಮಶಾನವಾಸಿಯಾದ ರುದ್ರನನ್ನು ಪ್ರದಕ್ಷಿಣೆಮಾಡಿದೆನು. ಪೀತಾಂಬರನನ್ನು ಚಿಂತಿಸದೆ ದಿಗಂಬರನನ್ನು ಚಿಂತಿಸಿದೆನು'- ಎಂದೂ ಇನ್ನೂ ಏನೇನೋ ಹೇಳುತ್ತಾ, ಪಾದಗಳಲ್ಲಿ ಬಿದ್ದವನು ಮೇಲಕ್ಕೆ ಏಳಲೇ ಇಲ್ಲ. ಶ್ರೀಶೈಲಪೂರ್ಣರು ನಮ್ಮನ್ನು ನೋಡಿ -'ಇವನ ಭವಿಷ್ಯತ್ಸಿದ್ಧಿಯು ಈಗಲೇ ಸಫಲವಾಯಿತು. ಮಹಾತ್ಮರಾದ ಯಾಮುನಾಚಾರ್ಯರ ಕರುಣೆಯು ವ್ಯರ್ಥವಾಗಲಿಲ್ಲ' ಎಂದು ಹೇಳಿ ಗೋವಿಂದನನ್ನು ಹಿಡಿದೆತ್ತಿ ಪ್ರೀತಿಯಿಂದ ನೋಡುತ್ತ, ಅಂಗಾಂಗಗಳನ್ನೂ ತಡವಿ ಸಮಾಧಾನ ಹೇಳುತ್ತಿದ್ದರು.

'ಇಷ್ಟು ಹೊತ್ತಿಗೆ ಈ ವೃತ್ತಾಂತವನ್ನು ತಿಳಿದ ಕಾಳಹಸ್ತಿಯ ನಿವಾಸಿಗಳಾದ ಕೆಲವರು ಅಲ್ಲಿಗೆ ವಿಮುಖನಾದ (ಬಾರದಿರುವ) ಗೋವಿಂದನನ್ನು ಕಂಡು -'ಎಲೈ ವೈಷ್ಣವೋತ್ತಮರೆ,

ನಮ್ಮ ದರ್ಶನ(ಶೈವದರ್ಶನ)ವನ್ನು ನಿರ್ವಹಿಸುವ ಗೋವಿಂದನನ್ನು ನೀವು ಮಣಿಮಂತ್ರಾದಿಗಳಿಂದಲೂ ಮಾಯೆಯಿಂದಲೂ ಮೋಹಗೊಳಿಸಿ, ನಿಮ್ಮ ವಶಪಡಿಸಿಕೊಳ್ಳುವುದು ಯುಕ್ತವೇ?' ಎಂದು ಕೇಳಿದರು. ಆಗ ಶ್ರೀಶೈಲಪೂರ್ಣರು -'ಎಲೈ ಶಿವಭಕ್ತರೆ, ನೀವೇ ಗೋವಿಂದನನ್ನು ಕೇಳಿ; ನಾವು ಔಷಧಿಯನ್ನು ಹಾಕಿದೆವೋ ಮಾಯೆಮಾಡಿದೆವೋ ಎಂದು, ಜಗಳವೇತಕ್ಕೆ? ನಿಜವಾದ ಮಾರ್ಗವನ್ನು ನೀವೇ ತಿಳಿದುಕೊಳ್ಳಿರಿ; ನಾವೇನು ಬೇರೆ ದಾರಿಯಲ್ಲಿ ಹೋಗುವವರಲ್ಲ; ಒಂದೇ ದಾರಿಯಲ್ಲಿ ಇರತಕ್ಕವರು', ಎಂದರು. ಅನಂತರ ಶಿವಭಕ್ತರು ಗೋವಿಂದನನ್ನು ಸುತ್ತಿನಿಂತು -'ಎಲೈ ಗೋವಿಂದನೆ, ಶಿವಭಕ್ತ ಶಿಖಾಮಣಿಯೆ, ಪೂಜೆಯ ಕಾಲವು ಮೀರಿಹೋಗುತ್ತಿದೆ. ಕಾಳಹಸ್ತೀಶ್ವರನು ನಿನ್ನ ಪೂಜೆಯನ್ನು ನಿರೀಕ್ಷಿಸುತ್ತಿರುವನು. ಏಕೆ ಹೀಗೆ ನಿಂತಿರುವೆ? ಮಾತನಾಡುವುದಿಲ್ಲವೇಕೆ? ಬಾ, ಹೋಗೋಣ'- ಎಂದು ಅವನ ಕೈಯನ್ನು ಹಿಡಿದುಕೊಂಡರು. ಗೋವಿಂದನು ಕೂಡಲೇ ಅವರ ಕೈಯನ್ನು ಬಿಡಿಸಿಕೊಂಡು-'ಎಲೈ ಶೈವರೇ, ನೀವು ನನ್ನ ಕೈಯನ್ನು ಮುಟ್ಟಬೇಡಿ. ಈಗ ನನಗೂ ನಿಮಗೂ ಸಂಬಂಧವು ಇಲ್ಲವೇ ಇಲ್ಲ. ಹಿಂದೆ ನಾನೇ ನೀವು, ನೀವೇ ನಾನು ಆಗಿದ್ದೆವು. ಈಗ ವಿಷ್ಣುಸಂಬಂಧದಿಂದ ನೀವು ನೀವೇ, ನಾವು ನಾವೇ'- ಎಂದು ಹೇಳಿ ತನ್ನಲ್ಲಿದ್ದ ಉಂಗುರವೇ ಮೊದಲಾದ ಎಲ್ಲ ಆಭರಣಗಳನ್ನು ಅವರಿಗೆ ಕೊಟ್ಟು ಕೈಚಪ್ಪಾಳೆ ಹಾಕಿದನು. ಶೈವರು -'ಶಿವನು ಅಮೃತಪ್ರದನು, ಈ ಧರ್ಮವೇ ಶ್ರೇಷ್ಠವಾದ ಧರ್ಮವು' ಎಂದು ಎಷ್ಟು ಲೋಭಗೊಳಿಸಿದರೂ ಅವನು ಒಪ್ಪಲಿಲ್ಲ. ಅವರಿಗೂ ನಮಗೂ -'ನೀವು ಹೀಗೆ ಮಾಡಿದಿರಿ, ನಿಮ್ಮಿಂದ ಹೀಗಾಯಿತು' ಎಂದು ಸಂಜೆಯವರೆಗೂ ಜಗಳವು ನಡೆಯಿತು. ನಿಮ್ಮ ಕೃಪೆಯಿಂದ ಗೋವಿಂದನು ಅವರ ಮಾತನ್ನು ಒಪ್ಪಲಿಲ್ಲ. ಕಡೆಗೆ ಶ್ರೀಶೈಲ ಪೂರ್ಣರು ಗೋವಿಂದನೊಡನೆ ಆ ದಿವಸ ಅಲ್ಲಿಯೇ ಇದ್ದರು.

'ಹೀಗೆಯೇ ಕೆಲವು ದಿವಸಗಳು ಕಳೆಯಲು ಶಿವಭಕ್ತರು ಬಂದು-'ನೀವು ನಮ್ಮ ಗೋವಿಂದನನ್ನು ಕರೆದುಕೊಂಡು ಹೋಗಲು ಬಂದಿರುವಿರೆಂದು ತಿಳಿದು ಈ ದಿವಸ ನಿಮ್ಮೊಡನೆ ಜಗಳವಾಡಲು ಸಿದ್ಧರಾಗಿದ್ದೆವು. ಆದರೆ ಕಾಳಹಸ್ತೀಶ್ವರನು ಸ್ವಪ್ನದಲ್ಲಿ -'ಪಾಷಂಡ ಬೌದ್ಧಚಾರ್ವಕರಿಂದ ವೈದಿಕಧರ್ಮವು ಲೋಪವಾಗುತ್ತಿರಲು; ತ್ರಿದಂಡಧಾರಿಯೂ ದತ್ತಾತ್ರೇಯ ಸ್ವರೂಪಿಯೂ ಆದ ವಿಷ್ಣುವು ರಕ್ಷಿಸಿದನು. ಈಗ ವಿಷ್ಣುವಿನ ಪಾರಿಷದರಾದ ಅನಂತ ಗರುಡ ಶಂಖಾದಿಗಳು ರಾಮಾನುಜಾಚಾರ್ಯ, ಗೋವಿಂದ, ದಾಶರಥಿಯೇ ಮೊದಲಾದ ಆಚಾರ್ಯರಾಗಿ ಅವತರಿಸಿರುತ್ತಾರೆ. ಹಿಂದೆ ಗಂಗಾಸ್ನಾನದ ನೆಪದಲ್ಲಿ ನಾನು ಅವನನ್ನು ಲಿಂಗಪ್ರದಾನಪೂರ್ವಕವಾಗಿ ಅನುಗ್ರಹಿಸಲು ಅವನು ನನ್ನನ್ನು ನಿತ್ಯವೂ ಪೂಜಿಸುತ್ತಿರುವನು. ಅವರೆಲ್ಲರೂ ಕರ್ಮವಶರಾಗಿ ಹುಟ್ಟಿದವರಲ್ಲವಾದುದರಿಂದ ನಿರ್ಬಂಧ ಮಾಡುವುದು ಯುಕ್ತವಲ್ಲ' ಎಂದು ಹೇಳಿದುದರಿಂದ ನಾವು ಹೋಗುತ್ತೇವೆ' ಎಂದು ಹೊರಟುಹೋಗಲು ಶ್ರೀಶೈಲಪೂರ್ಣರು ಗೋವಿಂದನನ್ನು ಕರೆದುಕೊಂಡು ವೇಂಕಟಾಚಲಕ್ಕೆ ಹೊರಟರು.

'ಅಲ್ಲಿಗೆ ಕರೆದುಕೊಂಡು ಹೋಗಿ ಚೌಲವನ್ನು ಮಾಡಿಸಿ ಪಂಚಸಂಸ್ಕಾರಗಳನ್ನು ಮಾಡಿ, ನಾಲ್ಕು ಸಾವಿರ ದಿವ್ಯ ಪ್ರಬಂಧವನ್ನು ಅಧ್ಯಯನ ಮಾಡಿಸಿ, ಅರ್ಥಪಂಚಕ ಜ್ಞಾನವನ್ನು

ಉಪದೇಶಿಸಿದರು. ನಮ್ರನಾದ ಗೋವಿಂದನು ತತ್ತ್ವಾರ್ಥಜ್ಞಾನವುಳ್ಳವನಾಗಿ ಹಿಂದೆ ಲಕ್ಷ್ಮಣನು ರಾಮನನ್ನು ಕುರಿತು -'ಅಹಂ ಸರ್ವಂ ಕರಿಷ್ಯಾಮಿ ಜಾಗ್ರತಃ ಸ್ವಪತಶ್ಚ ತೇ'- ಎಂದು ಹೇಳಿದಂತೆ ಆಚಾರ್ಯರಾದ ಶ್ರೀಶೈಲಪೂರ್ಣರಿಗೆ ವಿಜ್ಞಾಪಿಸಿ, ಈಗ ತಮ್ಮ ಸೇವಾಕಾಂಕ್ಷಿಯಾಗಿರುವನು'- ಎಂದರು. ಆಚಾರ್ಯರು ಗೋವಿಂದನ ವೃತ್ತಾಂತವನ್ನು ಕೇಳಿ ಸಂತುಷ್ಟರಾಗಿ ಎಲ್ಲರನ್ನೂ ಕಳುಹಿಸಿ, ತಾವು ಅಂತರ್ಮುಖಿಗಳಾದರು.

ಸಕಲಾರ್ಥಸಾರಭೂತವಾದ ಶ್ರೀಶೈಲಪೂರ್ಣ-ಗೋವಿಂದರ ಈ ಸಂವಾದವನ್ನು ಓದುವವರೂ, ಕೇಳುವವರೂ ವಿಷ್ಣುಭಕ್ತರಾಗಿ ಆಗುವರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೋವಿಂದನ ಶ್ರೀಶೈಲಪೂರ್ಣರ ಸಮಾಶ್ರಯಣವೆಂಬ ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

## ೨೦

ಅನಂತರ ಆಚಾರ್ಯರು ತಮ್ಮ ಆಚಾರ್ಯರಾದ ಪೂರ್ಣಾಚಾರ್ಯರ ಮನೆಗೆ ಹೋಗಿ -'ಆಚಾರ್ಯರೇ, ತಮ್ಮ ಪಾದಾಶ್ರಯಣದಿಂದ ಯಾಮುನಾಚಾರ್ಯರನ್ನು ನೋಡದೆ ಇದ್ದ ದುಃಖವೆಲ್ಲವೂ ನಾಶವಾಯಿತು. ದಾಸಭೂತನಾದ ನನಗೆ ವಿಶೇಷಾರ್ಥಗಳನ್ನು ದಯವಿಟ್ಟು ಉಪದೇಶಿಸಬೇಕೆಂದು ಪ್ರಾರ್ಥಿಸುತ್ತೇನೆ'- ಎಂದು ಕೇಳಲು, ಪೂರ್ಣಾಚಾರ್ಯರು ಮನಸ್ಸಿನಲ್ಲಿಯೇ ಸನಾತನವಾಗಿಯೂ ವೇದಸಾರವಾಗಿಯೂ, ಸಂಸಾರತಾರಕವಾಗಿಯೂ ಇರುವ ಮಂತ್ರರತ್ನ ಮತ್ತು ದ್ವಯಗಳನ್ನು ಹೊಗಳುತ್ತ, ಯತಿರಾಜರಿಗೆ ಅವುಗಳನ್ನೂ, ಗೀತಾರ್ಥಸಂಗ್ರಹವನ್ನೂ, ವ್ಯಾಸಸೂತ್ರಗಳನ್ನೂ ಪಾಂಚರಾತ್ರಾಗಮವನ್ನೂ ಉಪದೇಶಿಸಿ, ಯತಿರಾಜರನ್ನು ಸರ್ವಶ್ರೇಷ್ಠರೆಂದು ತಿಳಿದು ತನ್ನ ಮಗನಾದ ಪುಂಡರೀಕಾಕ್ಷನನ್ನು ಅವರ ಶಿಷ್ಯನನ್ನಾಗಿ ಮಾಡಿ -'ಎಲೈ ಯತಿಶ್ರೇಷ್ಠನೇ, ಗೋಷ್ಠೀಪುರದಲ್ಲಿ ಸರ್ವಶಾಸ್ತ್ರವಿಶಾರದನಾದ ಗೋಷ್ಠೀಪೂರ್ಣನೆಂಬ ಒಬ್ಬ ವೈಷ್ಣವೋತ್ತಮನಿರುವನು. ಯಾಮುನಾಚಾರ್ಯರು ಉಪದೇಶಿಸಿರುವ ಕೆಲವು ತತ್ತ್ವಾರ್ಥಗಳು ಅವನಲ್ಲಿರುವುವು. ಬೇಗ ಅಲ್ಲಿಗೆ ಹೋಗಿ ಆ ಮಹಾತ್ಮನಿಂದ ಅವುಗಳನ್ನು ತಿಳಿದುಕೋ' ಎಂದು ಸೂಚಿಸಿದರು. ಆಚಾರ್ಯರು ಅವರ ಮಾತಿನಿಂದ ಸಂತುಷ್ಟರಾಗಿ ಕೂಡಲೇ ಗೋಷ್ಠೀಪುರಕ್ಕೆ ಹೋಗಿ, ಯಥಾವಿಧಿಯಾಗಿ ಗೋಷ್ಠೀಪೂರ್ಣರನ್ನು ನಮಸ್ಕರಿಸಿ -'ಎಲೈ ದಯಾನಿಧಿಗಳೆ, ಮಂತ್ರಾರ್ಥವನ್ನು ಉಪದೇಶಿಸಿ ರಕ್ಷಿಸಬೇಕೆಂದು ಪ್ರಾರ್ಥಿಸಲು, ಗೋಷ್ಠೀಪೂರ್ಣರು ಆಚಾರ್ಯರ ಪ್ರಯತ್ನದ ಆ ನಿಷ್ಠೆಯನ್ನು ತಿಳಿಯುವುದಕ್ಕಾಗಿಯೂ ಲೋಕದಲ್ಲಿ ಮಂತ್ರಾರ್ಥಕ್ಕೆ ಇರುವ ಗೌರವವನ್ನು ತಿಳಿಯಪಡಿಸುವುದಕ್ಕಾಗಿಯೂ -'ಎಲೈ ಯೋಗೀಂದ್ರನೆ, ಈಗ ಲೋಕದಲ್ಲಿ ಮಂತ್ರಾರ್ಥದ ಉಪದೇಶಕ್ಕೆ ಅರ್ಹರಾದವರೇ ಇಲ್ಲವಾದುದರಿಂದ ನಾನು ನಿನಗೆ ಉಪದೇಶ ಮಾಡುವುದಿಲ್ಲ' ಎನ್ನಲು ಆಚಾರ್ಯರು ಕೂಡಲೇ ಶ್ರೀರಂಗಕ್ಕೆ ಹೋದರು.

ಕೆಲವು ದಿನಗಳ ಮೇಲೆ ಗೋಷ್ಠೀಪೂರ್ಣರು ಶ್ರೀರಂಗದಲ್ಲಿ ನಡೆಯುವ ಒಂದು ಮಹೋತ್ಸವವನ್ನು ನೋಡಲು ಶ್ರೀರಂಗಕ್ಕೆ ಹೋದರು. ದೇವರ ದರ್ಶನಮಾಡಿ

ಹಿಂತಿರುಗುವಾಗ ಶ್ರೀರಂಗರಾಜನು ಅರ್ಚಕರ ಮೂಲಕ ತೀರ್ಥಶಠಕೋಪಾದಿಗಳನ್ನು ಅನುಗ್ರಹಿಸಿ -'ಎಲೈ ಗುರುಶ್ರೇಷ್ಠ, ಗೋಷ್ಠೀಪೂರ್ಣ, ನನ್ನ ಭಕ್ತನಾದ ಲಕ್ಷ್ಮಣಾಚಾರ್ಯನಿಗೆ ರಹಸ್ಯಾರ್ಥಗಳೆಲ್ಲವನ್ನೂ ಉಪದೇಶಿಸು'- ಎಂದು ತಿಳಿಸಲು, ಗೋಷ್ಠೀಪೂರ್ಣರು ರಂಗರಾಜನನ್ನು ಕುರಿತು -'ಎಲೈ ರಂಗನಾಥ, ರಹಸ್ಯಾರ್ಥವನ್ನು ತಪಸ್ವಿಯಲ್ಲದವನಿಗೂ, ಭಕ್ತನಲ್ಲದವನಿಗೂ,ಶುಶ್ರೂಷೆಮಾಡದವನಿಗೂ, ನನ್ನನ್ನು ಕಂಡು ಅಸೂಯೆ ಪಡುವವನಿಗೂ ಹೇಳಬಾರದೆಂದೂ, ಒಂದು ವರ್ಷವಾಗಲಿ, ಆರು ತಿಂಗಳಾಗಲಿ ಒಂದು ತಿಂಗಳಾಗಲಿ, ಕಡೆಗೆ ಒಂದು ಕ್ಷಣವೇ ಆಗಲಿ, ಶಿಷ್ಯನನ್ನು ವಿವಿಧವಾದ ಉಪಾಯಗಳಿಂದ ಪರೀಕ್ಷಿಸಿ, ಕೃಪೆಯಿಟ್ಟು ನಿಸ್ಪೃಹನಾಗಿ ಉಪದೇಶಿಸಬೇಕೆಂದೂ (ಭಗವದ್ಗೀತೆ) ಹಿಂದೆ ನೀನೇ ಹೇಳಿದ್ದೆ ಯಲ್ಲವೇ?'- ಎಂದು ವಿಜ್ಞಾಪಿಸಿದರು. ಆಗ ಶ್ರೀರಂಗನಾಥನು -'ಎಲೈ ಗೋಷ್ಠೀಪೂರ್ಣ-ಅದು ನಿಜ. ಆದರೆ ಈ ವಿಚಾರವು ಹಾಗಲ್ಲ. ಯಾವನು ತನ್ನ ಐಶ್ವರ್ಯವನ್ನೂ, ಶರೀರವನ್ನೂ, ಜ್ಞಾನವನ್ನೂ, ಕರ್ಮಗಳನ್ನೂ, ಗುಣಗಳನ್ನೂ ಕಡೆಗೆ ಪ್ರಾಣಗಳನ್ನೂ ಸಹ ಗುರುವಿಗಾಗಿ ಧಾರೆಯೆರೆಯುವನೋ ಅವನೇ ಶಿಷ್ಯನು; ಇತರನಲ್ಲ, ಇಂತಹ ಗುಣಯುಕ್ತನಾದ ಯತಿರಾಜನಿಗೆ ಮಂತ್ರಾರ್ಥವನ್ನು ಉಪದೇಶಿಸುವುದರಲ್ಲಿ ಯಾವ ನ್ಯೂನತೆಯು ಇಲ್ಲ'- ಎಂದು ತಿಳಿಯಪಡಿಸಿದನು. ರಂಗರಾಜನ ಮಾತನ್ನು ಕೇಳಿ ಪರಮಾತ್ಮನ ಮಾತು ಮೀರ ತಕ್ಕದಲ್ಲವೆಂದು ತಿಳಿದು ಹಾಗೇ ಆಗಲೆಂದು ಒಪ್ಪಿ ಭಗವಂತನನ್ನು ನಮಸ್ಕರಿಸಿ ಯತಿರಾಜರ ಕಡೆಗೆ ತಿರುಗಿ -'ಎಲೈ ಯತಿಶ್ರೇಷ್ಠ, ಗೋಷ್ಠೀನಗರಕ್ಕೆ ಬಾ'- ಎಂದು ಹೇಳಿ ಹೊರಟು ಹೋದರು.

ಅನಂತರ ಆಚಾರ್ಯರು ಗೋಷ್ಠೀಪುರಕ್ಕೆ ಹೋಗಿ ಗೋಷ್ಠೀಪೂರ್ಣರನ್ನು ಕಂಡು ಮಂತ್ರಾರ್ಥವನ್ನು ಉಪದೇಶಿಸಿ ಅನುಗ್ರಹಿಸಬೇಕೆಂದು ಭಕ್ತಿಯಿಂದ ಪ್ರಾರ್ಥಿಸಲು ಮತ್ತೆ ತಿರಸ್ಕರಿಸಿದರು. ಮತ್ತೆ ಇವರು ರಂಗನಗರಿಗೆ ಹಿಂತಿರುಗಿದರು. ಹೀಗೇ ಹದಿನೆಂಟು ಸಾರಿ ರಂಗನಗರದಿಂದ ಹೋಗಿ ಪ್ರಾರ್ಥಿಸುವುದು, ಅವರು ಕಠೋರವಾಗಿ -'ಹೋಗು, ಹೋಗು'- ಎಂದು ಗದರಿಸಿ ಕಳುಹಿಸುವುದು ಹೀಗೆಯೇ ನಡೆಯಿತು. ಕೊನೆಗೆ ಆಚಾರ್ಯರಿಗೆ ತಡೆಯಲಾರದೆ ದುಃಖವುಂಟಾಗಿ ಅಳುತ್ತ ಬಹಳ ಕಷ್ಟದಿಂದ ಹಿಂತಿರುಗುತ್ತಿರುವುದನ್ನು ನೋಡಿ ಗೋಷ್ಠೀಪೂರ್ಣರಿಗೆ -'ಇನ್ನು ಮೇಲೆ ಶಿಷ್ಯನು ಉಪದೇಶಾರ್ಹನಾಗಿ ಕಾಣುತ್ತಾನೆ; ಉಪದೇಶಿಸಬಹುದು'- ಎಂದು ಮನಸ್ಸಿನಲ್ಲಿ ಅಂದುಕೊಂಡರೇ ವಿನಾ ಹೋಗುತ್ತಿರುವ ಆಚಾರ್ಯರನ್ನು ಕರೆಯಲಿಲ್ಲ.

ಒಂದುಸಲ ಶ್ರೀವೈಷ್ಣವನೊಬ್ಬನು ತನ್ನ ಯಾವುದೋ ಒಂದು ಕಾರ್ಯಾರ್ಥವಾಗಿ ಶ್ರೀರಂಗಕ್ಕೆ ಹೋದನು. ಆಚಾರ್ಯರು ದುಃಖದಿಂದ ಪೀಡಿತರಾಗಿ ಬಳಲುತ್ತಿರುವುದನ್ನು ಕಂಡನು. ಕಂಡು ತಾನೂ ಅತ್ಯಂತ ದುಃಖಿತನಾಗಿ, ಗೋಷ್ಠೀಪುರಕ್ಕೆ ಬಂದು ಎಲ್ಲವನ್ನೂ ಗೋಷ್ಠೀಪೂರ್ಣರಿಗೆ ತಿಳಿಸಿದನು. ಗೋಷ್ಠೀಪೂರ್ಣರು ಹಿಂದೆಯೇ ತಾವು ನೋಡಿ ಅನುಭವಿಸಿದ್ದ ಆ ವಿಚಾರವನ್ನು ಮತ್ತೆ ಕೇಳಿ ಪಶ್ಚಾತ್ತಾಪಗೊಂಡು ಒಬ್ಬ ವಿಪ್ರನನ್ನು ಯತಿರಾಜರನ್ನು ಕರೆತರುವುದಕ್ಕಾಗಿ ಶ್ರೀರಂಗಕ್ಕೆ ಕಳುಹಿಸಿದರು. ಆ ವಿಪ್ರನು ರಂಗನಗರಿಗೆ ಬಂದು ಯತಿರಾಜರನ್ನು ನಮಸ್ಕರಿಸಿ -'ಗೋಷ್ಠೀಪೂರ್ಣರು ತಮ್ಮನ್ನು ಕರೆದುಕೊಂಡು

ಬರಬೇಕೆಂದು ಹೇಳಿರುವರು, ದಂಡಸಹಿತರಾಗಿ ತಾವು ಒಬ್ಬರೇ ದಯಮಾಡಿಸಿದರೆ ಮಂತ್ರಾರ್ಥವನ್ನು ಉಪದೇಶಿಸುವ ಉದ್ದೇಶವುಳ್ಳವರಾಗಿರುತ್ತಾರೆ'- ಎಂದು ವಿಜ್ಞಾಪಿಸಲು, ಆಚಾರ್ಯರು ಸಂತೋಷದಿಂದ ಶ್ರೀರಂಗನಾಥನ ಅಪ್ಪಣೆಯನ್ನು ಪಡೆದು ತನ್ನ ಇಬ್ಬರು ಶಿಷ್ಯರೊಡನೆ ಗೋಷ್ಠೀಪುರಕ್ಕೆ ಹೊರಟರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಮಂತ್ರೋಪದೇಶಕ್ಕಾಗಿ ಗೋಷ್ಠೀಪುರಾಭಿಗಮನವೆಂಬ ಇಪ್ಪತ್ತನೆಯ ಅಧ್ಯಾಯವು ಮುಗಿದುದು.

೨೧

ಲಕ್ಷ್ಮಣಾಚಾರ್ಯರು ತನ್ನ ಇಬ್ಬರು ಶಿಷ್ಯರೊಡನೆಯೂ ಗೋಷ್ಠೀಪುರಕ್ಕೆ ಹೋಗಿ ಭಕ್ತಿಯಿಂದ ಗೋಷ್ಠೀಪೂರ್ಣರನ್ನು ನಮಸ್ಕರಿಸಿ ನಿಂತರು. ಗೋಷ್ಠೀಪೂರ್ಣರು ಇಬ್ಬರು ಶಿಷ್ಯರೊಡನೆ ಬಂದಿರುವ ಯತಿರಾಜರನ್ನು ಕಂಡು -'ಎಲೈ ಯೋಗೀಂದ್ರ, ನಾನು ಹೇಳಿದಂತೆ ನೀನು ನಡೆದುಕೊಳ್ಳಲಿಲ್ಲವಾದುದರಿಂದ ನಿನಗೆ ಮಂತ್ರಾರ್ಥವನ್ನುಪದೇಶಿಸುವುದಿಲ್ಲ, ಹೋಗು'- ಎಂದರು. ಅದನ್ನು ಕೇಳಿದ ಆಚಾರ್ಯರು -'ತಾವು ಉಪವೀತ ತ್ರಿದಂಡಗಳೊಡನೆ ಬರಬೇಕೆಂದು ಆಜ್ಞಾಪಿಸಿದಂತೆಯೇ ಮಾಡಿರುವೆನು. ಈ ವೈಷ್ಣವರಿಬ್ಬರೂ, ನನಗೆ ಉಪವೀತ ತ್ರಿದಂಡಸ್ಥಾನದಲ್ಲಿರತಕ್ಕವರು'-ಎನ್ನಲು,ಅವರು-'ಯಾರುಉಪವೀತ ?ತ್ರಿದಂಡವು ಯಾರು ?'- ಎಂದು ಕೇಳಲು, ಆಚಾರ್ಯರು ಶಿಷ್ಯರಲ್ಲಿ ಕೂರೇಶನನ್ನು ತೋರಿಸಿ'ಈತನು ಉಪವೀತ'ನೆಂದೂ, ದಾಶರಥಿಯನ್ನು ತೋರಿಸಿ 'ಈತನು ತ್ರಿದಂಡವು'-ಇವರಿಗಿಂತಲೂ ಬೇರೆಯಾರು ಇಲ್ಲ'- ಎಂದರು. ಆಗ ಗೋಷ್ಠೀಪೂರ್ಣರು ಅವರ ಮಾತಿಗೆ ಒಪ್ಪಿ -'ಎಲೈ ಯತೀಂದ್ರ,ಈ ಮಂತ್ರವನ್ನು ನಿನ್ನ ಈ ಇಬ್ಬರು ಶಿಷ್ಯರಿಗೆ ಮಾತ್ರ ಉಪದೇಶಿಸು. ಇದು ಬಹು ರಹಸ್ಯವಾದುದು ಇನ್ನು ಯಾರಿಗೂ ಹೇಳಬಾರದು. ಈ ಮಂತ್ರಾರ್ಥದಲ್ಲಿ ನಿನಗೇ ಮಾತ್ರ ಅಧಿಕಾರ ಉಂಟೇ ವಿನಾ ಮತ್ತೇ ಯಾರಿಗೂ ಇಲ್ಲ. ಆದರೂ ಇವರಿಬ್ಬರನ್ನೂ ಬಿಟ್ಟು ನೀನೊಬ್ಬನೇ ಬಾ' ಎಂದು ಹೇಳಿ, ಅವರೊಬ್ಬರನ್ನು ಕರೆದು ಅವರಿಂದ ಅನೇಕ ಶಪಥಗಳನ್ನು ಮಾಡಿಸಿ, ಮುಮುಕ್ಷುಗಳಿಗೆ ಯೋಗ್ಯವಾಗಿಯೂ, ಸರ್ವಸಿದ್ಧಿಕರವಾಗಿಯೂ, ಭಕ್ತಿಜ್ಞಾನಪ್ರವರ್ಧಕ ನಾಗಿಯೂ ಇರುವ ಅಷ್ಟಾಕ್ಷರೀಮಂತ್ರವನ್ನೂ ಮಂತ್ರಾರ್ಥವನ್ನೂ ಉಪದೇಶಿಸಿ, ಸತ್ಪಾತ್ರದಲ್ಲಿ ತನ್ನ ವಿದ್ಯೆಯು ಸೇರಿದುದರಿಂದ ತೃಪ್ತರಾದರು. ಆಚಾರ್ಯರು ಸಹ ಕೃತಕೃತ್ಯರಾಗಿ ಅವರ ಅಪ್ಪಣೆಯನ್ನು ಪಡೆದು ಹೊರಟರು.

ಒಂದು ಸಲ ಗೋಷ್ಠೀಪುರದಲ್ಲಿ ಶ್ರೀನೃಸಿಂಹಸ್ವಾಮಿಯವರ ಮಹೋತ್ಸವವು ಆರಂಭವಾಯಿತು. ಅದನ್ನು ನೋಡಲು ಅನೇಕ ಕಡೆಗಳಿಂದ ವೈಷ್ಣವರು ಬಂದಿದ್ದರು. ಆಗ ಪರಮದಯಾಳುಗಳಾದ ಯತಿರಾಜರು ಅವರನ್ನು ನೋಡಿ ಸಂತುಷ್ಟರಾಗಿ, ಶ್ರೀನೃಸಿಂಹಸ್ವಾಮಿಯ ಸನ್ನಿಧಾನದಲ್ಲಿ ಎಲ್ಲರಿಗೂ ಮಂತ್ರ-ಮಂತ್ರಾರ್ಥಗಳನ್ನು ಉಪದೇಶಿಸಿದರು.

ಇದನ್ನು ಕೇಳಿದ ಗೋಷ್ಠೀಪೂರ್ಣರು ಯತಿರಾಜರನ್ನು ಕರೆಸಿ-'ಎಲೈ ಯೋಗೀಂದ್ರ

ನಾನು ಇದನ್ನು ಯಾರಿಗೂ ಹೇಳಬಾರದೆಂದೂ, ಗೋಪ್ಯವಾದುದೆಂದೂ ಹೇಳಿ ನಿನ್ನಿಂದ ಯಾರಿಗೂ ಹೇಳುವುದಿಲ್ಲವೆಂದು ಪ್ರತಿಜ್ಞೆಮಾಡಿಸಿಕೊಂಡಿರಲಿಲ್ಲವೆ? ನೀನು ಇದೇನು ಹೀಗೆ ಗುರುದ್ರೋಹ ಮಾಡಿದೆಯಲ್ಲ? ಗುರುದ್ರೋಹಕ್ಕೆ ಫಲವೇನೆಂಬುದು ನಿನಗೆ ಗೊತ್ತೇ?' ಎಂದು ಕೇಳಲು ಆಚಾರ್ಯರು -'ಗುರುದ್ರೋಹಕ್ಕೆ ನರಕವೇ ಫಲ' ಎಂದರು. 'ಇದನ್ನು ತಿಳಿದೂ ನೀನು ಏತಕ್ಕೆ ಇಂಥ ಪಾಪಕಾರ್ಯವನ್ನು ಮಾಡಿದೆ?' 'ಇಂಥ ಗುರುದ್ರೋಹರೂಪವಾದ ಪಾತಕದಿಂದ ನಾನೊಬ್ಬನೇ ನರಕಭಾಗಿಯಾಗುವೆನು. ಆದರೆ ತಮ್ಮ ಅನುಗ್ರಹದಿಂದ ಅವರೆಲ್ಲರೂ ಪರಮಪದವನ್ನು ಹೊಂದಲಿ' ಯತಿರಾಜರ ಇಂತಹ ಮಾತನ್ನು ಕೇಳಿ, ಗೋಷ್ಠೀಪೂರ್ಣರು ತಮ್ಮ ಮನಸ್ಸಿನಲ್ಲಿ 'ನನ್ನಲ್ಲಿ ಇಂತಹ ಗುಣವಿಲ್ಲವಲ್ಲ' ಎಂದು ಯೋಚಿಸಿ, ಲಕ್ಷ್ಮಣಾಚಾರ್ಯರನ್ನು ಜಗದ್ರಕ್ಷಣಾಕ್ಕಾಗಿ ವೈಕುಂಠದಿಂದ ಅವತರಿಸಿರುವ ಜಗದ್ಗುರುವೆಂದೂ, ಅಮಾನುಷನೆಂದೂ ತಿಳಿದುಕೊಂಡರು. ಲೋಕದಲ್ಲಿ ತನ್ನ ಕೆಟ್ಟುದನ್ನೂ ಇತರರ ಒಳ್ಳೆಯದನ್ನೂ ಯಾರು ಮಾಡುವರು? ಎಂದು ಚಿಂತಿಸುತ್ತ - ಯತಿರಾಜರನ್ನು ಕುರಿತು ಹೀಗೆಂದರು-'ಎಲೈ ಯತಿಶ್ರೇಷ್ಠನೇ, ನಮಗೆ ನೀನೇ ಆ ರಂಗನಾಥನು ಮತ್ತು 'ಮನ್ನಾಥ'ನೆಂದು ನಾಮಕರಣಮಾಡಿ, ಅಲ್ಲಿದ್ದ ವೈಷ್ಣವರನ್ನು ಕುರಿತು 'ನಮ್ಮ ಈ ವೈಷ್ಣವ ಸಿದ್ಧಾಂತವು ಇನ್ನು ಮುಂದೆ ರಾಮಾನುಜಾಚಾರ್ಯಸಿದ್ಧಾಂತವೆಂದು ಪ್ರಸಿದ್ಧವಾಗಲಿ'- ಎಂದು ಹೇಳಿ ಯತಿರಾಜರನ್ನು ಕುರಿತು ರಹಸ್ಯವಾಗಿ -'ಎಲೈ ಯತಿಪುಂಗವ, ಹಿಂದೆ ರಂಗನಾಥನು ಪ್ರಪಂಚವು ಕಲಿಯಿಂದ ಆಕ್ರಾಂತವಾಗಿರುವುದನ್ನು ನೋಡಿ, ನನ್ನನ್ನು ಕರೆದು 'ಎಲೈ ವಿದ್ವಾಂಸನೇ ಕೆಲವರಿಗಾದರೂ ದಯವಿಟ್ಟು ಮೋಕ್ಷಸಾಧನವಾದ ಚರಮಶ್ಲೋಕವನ್ನು ಉಪದೇಶಿಸು'- ಎಂದು ಅಪ್ಪಣೆ ಕೊಡಲು, ನಾನು -'ಎಲೈ ರಂಗೇಶನೇ, ಈಗ ಲೋಕದಲ್ಲಿ ಅದಕ್ಕೆ ಯೋಗ್ಯರಾದವರು ಯಾರೂ ಇಲ್ಲ, ನಾಸ್ತಿಕರಾದವರಿಗೆ ಇದನ್ನು ಉಪದೇಶಿಸುವುದು ಶಾಸ್ತ್ರಸಮ್ಮತವಲ್ಲ'- ಎಂದೆನು. ಆಗ ಜಗದೀಶ್ವರನು ಅದು ನಿಜವೆಂದು ತಿಳಿದು-'ಈ ಪ್ರಪಂಚದಲ್ಲಿ ಅಂತಹ ವೈಷ್ಣವೋತ್ತಮನನ್ನು ನಾನೇ ಹುಡುಕಿ ನಿನ್ನ ಬಳಿಗೆ ಕಳುಹಿಸುತ್ತೇನೆ; ನೀನು ಈಗ ಹೋಗು' ಎಂದನು. ಅವನಿಂದ ಕಳುಹಿಸಲ್ಪಟ್ಟವನು ನೀನೇ ಸರಿ. ಆದುದರಿಂದ ಈ ರಹಸ್ಯವಾದ ಮಂತ್ರವನ್ನು ನಿನಗೆ ಹೇಳಿಕೊಡುವೆನು. ನೀನು ಮಾತ್ರ ಯಾರಿಗೂ ಎಲ್ಲಿಯೂ ಹೇಳಬೇಡ'- ಎಂದರು. ಆಗ ಆಚಾರ್ಯರು -'ತಾವು ಇಂಥವರಿಗೆ ಹೇಳಬಹುದೆಂದು ಅನುಮತಿ ಕೊಟ್ಟವರಿಗೆ ಮಾತ್ರ ಹೇಳುವೆನು. ತಮ್ಮ ಪಾದಪದ್ಮಗಳನ್ನು ಮುಟ್ಟಿ ಹೇಳುವೆನು, ತಮ್ಮ ಅಪ್ಪಣೆಯನ್ನು ಮೀರುವುದಿಲ್ಲ'- ಎನ್ನಲು, ಮತ್ತೆ ಗೋಷ್ಠೀಪೂರ್ಣರು -'ಇದಂ ತೇ ನಾತಪಸ್ಕಾಯ ನಾಭಕ್ತಾಯ ಕದಾಚನ। ನಚಾ ಶುಶ್ರೂಷವೇ ವಾಚ್ಯಂ ನಚಮಾಂ ಯೋಭ್ಯಸೂಯತಿ॥ಸಂವತ್ಸರ ತದರ್ಧಂವಾ ಮಾಸತ್ರಯ ಮಥಾಪಿವಾ। ಪರೀಕ್ಷ್ಯವಿವಿಧೋಪಾಯೈಃ ಕೃಪಯಾ ನಿಸ್ಪೃಹೋ ವದೇತ್'- ಎಂಬುದನ್ನು ಗುಟ್ಟಾಗಿ ಹೇಳುತ್ತ, ಹಿಂದೆ ಶ್ರೀಕೃಷ್ಣನು ಅರ್ಜುನನಿಗೆ ಚರಮಾರ್ಥವನ್ನು ಉಪದೇಶಿಸಿದಂತೆ ರಾಮಾನುಜಾಚಾರ್ಯರಿಗೂ ಉಪದೇಶಿಸಿದರು.

ಅನಂತರ ಗೋಷ್ಠೀಪೂರ್ಣರು ತಮ್ಮ ಮಗನಾದ ಸೌಮ್ಯನಾರಾಯಣನನ್ನು ಯತಿ ರಾಜರ ಶಿಷ್ಯನನ್ನಾಗಿ ಮಾಡಿ ಆಚಾರ್ಯರನ್ನು ಕುರಿತು -'ಯಾಮುನಾಚಾರ್ಯರು ಮಗನಾದ ವರರಂಗನಿಗೆ ಉಪದೇಶಿಸಿರುವ ರಹಸ್ಯಾರ್ಥಗಳನ್ನು ತಿಳಿದುಕೊ'- ಎಂದು ಹೇಳಿ

ಸಂತುಷ್ಟರಾದರು. ಕೃತಕೃತ್ಯರಾದ ಆಚಾರ್ಯರು ಸಹ ಗುರುಪುತ್ರನೊಡನೆಯೂ ತನ್ನ ಶಿಷ್ಯರೊಡನೆಯೂ ಶ್ರೀರಂಗವನ್ನು ತಲುಪಿ, ತಾವು ಪಡೆದ ಎರಡು ಮಂತ್ರಗಳಲ್ಲಿ ಒಂದನ್ನು ವಿಶೇಷವಾಗಿ ದಾನಮಾಡಿ, ಶ್ರೀರಂಗನಾಥನ ನಿತ್ಯಕೈಂಕರ್ಯನಿರತರಾಗಿ ಸುಖವಾಗಿರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೋಷ್ಠೀಪೂರ್ಣ ಕೃಪಾಲಬ್ಧ ಮಂತ್ರರಾಜ ಭೂರಿಪ್ರದಾನವೆಂಬ ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

೨೨

ಅನಂತರ ಕೂರೇಶರು ಯತಿರಾಜರನ್ನು ನಮಸ್ಕರಿಸಿ ಚರಮಾರ್ಥವನ್ನು ಉಪದೇಶಿಸಬೇಕೆಂದು ಬೇಡಿದರು. ಆಚಾರ್ಯರು 'ಗೋಷ್ಠೀಪೂರ್ಣರು ಹೇಳಿದ ಮಾತನ್ನು ನೀನು ಕೇಳಲಿಲ್ಲವೆ? ಒಂದು ವರ್ಷವಾದರೂ ಶುಶ್ರೂಷೆಮಾಡಿ ಶಮದಮಾದಿ ಗುಣಗಳಿಂದ ಕೂಡಿರುವವನಿಗೆ ಮಾತ್ರ ಹೇಳಿಕೊಡಬೇಕೆಂಬುದು ಶಾಸ್ತ್ರಸಮ್ಮತವೆಂದು ಹೇಳಿದ್ದರಲ್ಲವೇ?' ಎನ್ನಲು, ಕೂರೇಶರು 'ಶರೀರವು ಅಸ್ಥಿರ; ಒಂದು ವರುಷದವರೆಗೂ ಹೇಗೆ ತಡೆಯಲಿ' ಎಂದನು. 'ಹಾಗಾದರೆ ಒಂದು ತಿಂಗಳು ಉಪವಾಸ ಮಾಡಿದರೆ ಅದಕ್ಕೆ ಸಮನಾಗುವುದು'- ಎಂದು ಆಚಾರ್ಯರೆನ್ನಲು, ಸಂತೋಷದಿಂದ ಮಾಸೋಪವಾಸವನ್ನು ಮಾಡಿ, ಗುರುಗಳಿಂದ ಅರ್ಥಸಹಿತವಾದ ಚರಮಶ್ಲೋಕವನ್ನು ಗ್ರಹಿಸಿದನು.

ಇದಾದಮೇಲೆ ದಾಶರಥಿಯೂ ಸಹ ಚರಮಾರ್ಥಕ್ಕಾಗಿ ಆಚಾರ್ಯರನ್ನು ಪ್ರಾರ್ಥಿಸಲು 'ನಾನು ಕೂರೇಶನಿಗೆ ಮಾತ್ರ ಉಪದೇಶಿಸಬಹುದೆಂದು ಗೋಷ್ಠೀಪೂರ್ಣರಿಂದ ಅನುಮತಿಯನ್ನು ಪಡೆದಿದ್ದೆನು. ಆದುದರಿಂದ ನೀನು ಅವರನ್ನೇ ಕೇಳು' ಆಚಾರ್ಯರೆಂದರು. ಆಗ ದಾಶರಥಿಯು ಗೋಷ್ಠೀಪುರಕ್ಕೆ ಹೋಗಿ ಗೋಷ್ಠೀಪೂರ್ಣರನ್ನು ಪ್ರಾರ್ಥಿಸಲು ಅವರು ತಿರಸ್ಕರಿಸಿದರು. ಆದರೂ ದಾಶರಥಿಯು ಹಿಂತಿರುಗದೇ ಒಂದೇ ಸಮನಾಗಿ ಆರು ತಿಂಗಳ ಕಾಲ ಅನುಸರಿಸುತ್ತಿರಲು, ಸಂತುಷ್ಟರಾದ ಗೋಷ್ಠೀಪೂರ್ಣರು -'ಯಾರು ನೀನು? ನೋಡಿದರೆ ಯತಿಸಾರ್ವಭೌಮನ ಸಂಬಂಧಿಕನಂತೆ ಕಾಣುತ್ತಿರುವೆ? ಏತಕ್ಕಾಗಿ ಬಂದಿರುವೆ?'- ಎಂದು ಕೇಳಿದರು. ಆಗ ದಾಶರಥಿಯು ಆನಂದದಿಂದ -'ನಾನು ಲಕ್ಷ್ಮಣಾಚಾರ್ಯರ ದಾಸಭೂತನು. ನನ್ನನ್ನು ದಾಶರಥಿಯೆನ್ನುವರು. ಚರಮಾರ್ಥದ ಅನುಗ್ರಹಕ್ಕಾಗಿ ಅವರಿಂದ ಇಲ್ಲಿಗೆ ಕಳುಹಿಸಲ್ಪಟ್ಟಿರುವೆನು -'ಎಲೈ ಕರುಣಾನಿಧಿಯೆ, ಮಂತ್ರಾರ್ಥವನ್ನುಪದೇಶಿಸಿ ರಕ್ಷಿಸಬೇಕೆಂದು ಬೇಡಲು'- ಎಂಥವರಿಗಾದರೂ ವಿದ್ಯಾಮದ, ಧನಮದ, ಕುಲಮದವೆಂಬುವು ಮಹಾ ಅನರ್ಥಕರಗಳು. ಆದುದರಿಂದ ಅವುಗಳೆಲ್ಲವನ್ನೂ ಬಿಟ್ಟು ಅತನನ್ನೇ ಆಶ್ರಯಿಸು. ಆತನೇ ನಿನಗೆ ಉಪದೇಶಮಾಡುವನು'- ಎಂದರು. ಆಗ ದಾಶರಥಿಯು ಅವರನ್ನು ನಮಸ್ಕರಿಸಿ ಅವರ ಅಪ್ಪಣೆಯಂತೆ ಶ್ರೀರಂಗಕ್ಕೆ ಬಂದು ನಡೆದುದೆಲ್ಲವನ್ನೂ ವಿಸ್ತಾರವಾಗಿ ವಿಜ್ಞಾಪಿಸಿ ನಮ್ರನಾಗಿ ನಿಂತನು.

ಈ ವೇಳೆಗೆ ಸರಿಯಾಗಿ ಮಹಾಪೂರ್ಣರ ಮಗಳಾದ 'ಅತ್ತುಳಾಯಿ' ಎಂಬುವಳು ತಂದೆಯ ಬಳಿಯಲ್ಲಿ 'ಅಪ್ಪ, ಅತ್ತೆಯ ಮನೆಯಲ್ಲಿ ನನ್ನ ಕಷ್ಟವನ್ನು ಹೇಳತೀರದು. ನೋಡು

ರಾತ್ರಿಯೆಲ್ಲ ನಾನೊಬ್ಬಳೇ ನೀರನ್ನು ಹೊತ್ತು ತರಬೇಕು. ಒಂದು ದಿನ ಅತ್ತೆಯವರನ್ನು ಸಹಾಯಕ್ಕೆ ಕರೆಯಲು, 'ಹೋಗು ನೀಚಳೆ ಹೋಗು, ನಾನೇನು ನಿನ್ನ ದಾಸಿಯೇ?ನಿನಗೆ ಕಷ್ಟವಾದರೆ ನಿಮ್ಮ ತಂದೆಗೆ ಹೇಳಿ ಒಬ್ಬಳು ದಾಸಿಯನ್ನು ತಂದಿಟ್ಟುಕೋ'- ಎಂದು ಹೇಳಿದರು. ಅಪ್ಪ, ಈಗ ನನಗೊಬ್ಬಳು ದಾಸಿಯನ್ನು ಗೊತ್ತುಮಾಡಿಕೊಡು' ಎಂದು ಕೇಳಿದಳು. ಮಹಾಪೂರ್ಣರು -'ಈ ವಿಚಾರ ನನಗೆ ಗೊತ್ತಿಲ್ಲ, ನಿನಗೇ ಗೊತ್ತು. ಅಥವಾ ಯತಿರಾಜರನ್ನು ಕೇಳು' ಎನ್ನಲು ಆ ಬಾಲೆಯು ಯತಿರಾಜರ ಬಳಿಯಲ್ಲಿ ಬಂದು ತನ್ನ ದುಃಖವೆಲ್ಲವನ್ನೂ ಹೇಳಿಕೊಂಡಳು. ನಿಪುಣರಾದ ಆಚಾರ್ಯರು ಅದನ್ನು ಕೇಳಿ, ಚರಮಾರ್ಥವನ್ನು ಯಾಚಿಸುತ್ತಿರುವ ದಾಶರಥಿಯನ್ನು ನೋಡಿ, ವೈಷ್ಣವರ ಸಭೆಯ ಮಧ್ಯೆ 'ಎಲೈ ದಾಶರಥಿ, ನಿನ್ನ ಹಿತಕ್ಕಾಗಿ ಹೇಳುವೆನು. ಇದೋ ಇವಳ ಜೊತೆಯಲ್ಲಿ ಹೋಗಿ ಇವಳು ಹೇಳಿದ ಕೆಲಸಗಳೆನ್ನೆಲ್ಲ ಮಾಡಿಕೊಂಡಿರು' ಎಂದು ಆಜ್ಞಾಪಿಸಲು, ಅವರು ಅದರಂತೆಯೇ ನಡೆದುಕೊಂಡರು.

ಹೀಗೆ ದಾಶರಥಿಯು ದಾಸ್ಯವೃತ್ತಿಯಲ್ಲಿರುತ್ತಿರಲು, ಅಲ್ಲಿನ ವೈಷ್ಣವನು ಒಂದು ದಿನ ಶಾಸ್ತ್ರಾರ್ಥವನ್ನು ತಪ್ಪಾಗಿ ಹೇಳಲು ದಾಶರಥಿಯು ಅದನ್ನು ಹಾಗಲ್ಲವೆಂದರು. ಕುಪಿತನಾದ ವೈಷ್ಣವನು -'ಎಲೋ ಪಾಚಕ, ನೀರುಹೊರು ಹೋಗು, ಇದಕ್ಕೂ ನಿನಗೂ ಸಂಬಂಧವೇನು ? ನರಿಯೆಲ್ಲಿ? ದೇವಲೋಕವೆಲ್ಲಿ?' ಎನ್ನಲು, ದಾಶರಥಿಯು ಶಾಂತರಾಗಿ, ಶಾಸ್ತ್ರಾರ್ಥವನ್ನು ಪೂರ್ವಾಪರಸಂದರ್ಭಗಳೊಡನೆ ಸರಿಯಾಗಿ ವಿವರಿಸಿದರು. ಆಗ ಭೀತರಾದ ವೈಷ್ಣವನೇ ಮೊದಲಾದವರು -'ಪಾಚಕನಾದ ನಿನಗೆ ಈ ರಹಸ್ಯಾರ್ಥಗಳೆಲ್ಲಾ ಹೇಗೆ ತಿಳಿದವು?' ಎಂದು ಕೇಳಲು, ಅವರು ತಾನು ಯತಿರಾಜರ ದಾಸನೆಂದೂ ಅವರ ಅನುಜ್ಞೆಯಿಂದ ಬಂದಿರುವುದನ್ನೂ ತಿಳಿಸಿದರು. ಆಗ ಅವರನ್ನು ವಸ್ತ್ರಭೂಷಣಾದಿಗಳಿಂದ ಅನೇಕ ವಿಧವಾಗಿ ಸತ್ಕರಿಸಿ ತಮ್ಮ ತಪ್ಪನ್ನು ಕ್ಷಮಿಸಬೇಕೆಂದು ಕೇಳಿ 'ತಾವು ಹೊರಡಬಹುದು' ಎಂದರು. ದಾಶರಥಿಯು -'ನಾನು ಆಚಾರ್ಯರ ಅಪ್ಪಣೆಯಿಂದ ಬಂದವನು, ಅವರ ಅಪ್ಪಣೆಯಿಲ್ಲದೆ ಹೋಗಲಾರೆನು' ಎನ್ನಲು, ಅವರೆಲ್ಲರೂ ಹೋಗಿ ಆಚಾರ್ಯರಲ್ಲಿ ನಡೆದುದೆಲ್ಲವನ್ನೂ ವಿಸ್ತಾರವಾಗಿ ಹೇಳಲು, ಅವರು ದಾಶರಥಿಯನ್ನು ಕರೆಸಿ, ಮದತ್ರಯವನ್ನು ಬಿಟ್ಟಿರುವ ಆತನಿಗೆ ಚರಮಾರ್ಥೋಪದೇಶವನ್ನು ಮಾಡಿ, ವರರಂಗನ ಮನೆಗೆ ತೆರಳಿದರು. ದಾಶರಥಿಯು ವೈಷ್ಣವರ ದಾಸನಾಗಿದ್ದುದರಿಂದ ಅವರು ಅಂದಿನಿಂದ ವೈಷ್ಣವದಾಸನೆಂದು ಪ್ರಸಿದ್ಧರಾದರು.

ಹೀಗೆ ಕೂರೇಶರು ಮಾಸೋಪಾಸದಿಂದಲೂ, ವೈಷ್ಣವದಾಸರು(ದಾಶರಥಿ) ದಾಸ್ಯ ದಿಂದಲೂ ಚರಮಾರ್ಥವನ್ನು ಗ್ರಹಿಸಿ ತೃಪ್ತರಾದರು.

ಯತಿರಾಜರು ವರರಂಗನ ಮನೆಗೆ ಹೋಗಿ ದ್ರಾವಿಡವೇದವೆಲ್ಲವನ್ನೂ ತಿಳಿದು, ಅದನ್ನು ಶಿಷ್ಯರಿಗೂ ಉಪದೇಶಿಸಿ ಅದರ ಅರ್ಥಗ್ರಹಣದಲ್ಲಿ ಆಸಕ್ತರಾಗಿರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕೂರೇಶ-ದಾಶರಥಿಗಳಿಗೆ ಚರಮಶ್ಲೋಕೋಪದೇಶವೆಂಬ ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು.

## ೨೩

ಹೀಗಿರಲು ಒಂದುಸಲ ಗೋಷ್ಠೀಪೂರ್ಣರು ಮಾಲಾಧರರೊಡನೆ ಶ್ರೀರಂಗಕ್ಕೆ ಬಂದು ಯತಿರಾಜರ ಮಠಕ್ಕೆ ಹೋದರು. ರಾಮಾನುಜಾಚಾರ್ಯರು ವಿನೀತರಾಗಿ ನಮಸ್ಕರಿಸಿ ನಿಂತಿರಲು, 'ಎಲೈ ಲಕ್ಷ್ಮಣಾಚಾರ್ಯ, ಈ ಮಾಲಾಧರನಿಂದ ಸಹಸ್ರಗೀತೆ (ತಿರುವಾಯ್ಮೊಳಿ)ಯ ವ್ಯಾಖ್ಯಾನವನ್ನು ಅಭ್ಯಾಸಮಾಡು' ಎಂದು ಹೇಳಿ ಗೋಷ್ಠೀಪುರಕ್ಕೆ ಹೊರಟರು.

ಆಚಾರ್ಯರು ಅವರ ಹಿತೋಕ್ತಿಯಂತೆ ಮಾಲಾಧರರಲ್ಲಿ ಸಹಸ್ರಗೀತೆಯ ಕಾಲಕ್ಷೇಪದಲ್ಲಿದ್ದರು. ಮಾಲಾಧರರೂ ಸಹ ಯಾಮುನಾಚಾರ್ಯರ ಉಪದೇಶಕ್ರಮವನ್ನೇ ಅನುಸರಿಸಿಯೇ ಪ್ರವಚನವನ್ನು ನಡೆಸುತ್ತಿದ್ದರೂ ಕೂಡ ಒಂದು ಗೀತೆಗೆ ಅಪಾರ್ಥವನ್ನು ಹೇಳಲು ಆಚಾರ್ಯರು -'ಇದು ಹೀಗಿರಲಾರದು' ಎನ್ನಲು, ಮಾಲಾಧರರು ಕುಪಿತರಾಗಿ -'ಈ ನಿನ್ನ ಕುಚೇಷ್ಟೆಯು ನನ್ನಲ್ಲಿ ನಡೆಯುವುದಿಲ್ಲ'- ಎಂದು ಹೇಳಿ ನಡೆದುಬಿಟ್ಟರು. ವ್ಯಾಖ್ಯಾನವು ಅಲ್ಲಿಯೇ ನಿಂತಿತು.

ಕೆಲವು ದಿನಗಳಲ್ಲಿಯೇ ಈ ವಿಚಾರವು ಜನಜನಿತವಾಗಿ ಗೋಷ್ಠೀಪೂರ್ಣರಿಗೆ ತಿಳಿಯಲು, ಅವರು ಶ್ರೀರಂಗಕ್ಕೆ ಬಂದು ಮಾಲಾಧರರನ್ನು ಕುರಿತು -'ಶಠಾರಿಸೂಕ್ತಿಯ ವ್ಯಾಖ್ಯಾನವು ಸರಿಯಾಗಿ ನಡೆಯುತ್ತಿದೆಯೇ?' ಎಂದು ಕೇಳಲು, ಅವರು -'ನಾನು ಯಾಮುನಾಚಾರ್ಯರ ಅಭಿಪ್ರಾಯದಂತೆ ಅರ್ಥವನ್ನು ಹೇಳುತ್ತಿರಲು, ರಾಮಾನುಜರು ಹಾಗಲ್ಲವೆಂದರು. ಅಲ್ಲಿಗೆ ನಿಂತಿದೆ' ಎಂದನು. ಆಗ ಗೋಷ್ಠೀಪೂರ್ಣರು -'ಮಾಲಾಧರ, ಹಿಂದೆ ಶ್ರೀಕೃಷ್ಣನು ಸಾಂದೀಪಿನಿಯಿಂದ ವಿದ್ಯಾಭ್ಯಾಸವನ್ನು ಮಾಡಿದಂತೆ ರಾಮಾನುಜರು ನಿನ್ನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವರು. ಯಾಮುನಾಚಾರ್ಯರ ಹೃದಯದಲ್ಲಿದ್ದ ಅರ್ಥವೇ ಈಗ ಆ ಮಹಾಮಹಿಮನಿಗೆ ಗೋಚರವಾಗುತ್ತಿದೆ. ಆತನಿಗೆ ತಿಳಿಯದ ವಿಷಯವನ್ನು ನಾನು ತಿಳಿಸುತ್ತಿರುವೆನೆಂದು ಭಾವಿಸಬೇಡ. ಯಾಮುನಾಚಾರ್ಯ ರಾಮಾನುಜಾಚಾರ್ಯರ ಹೃದಯಗಳೆರಡೂ ಒಂದೇ. ಈ ರಾಮಾನುಜನು ಸಾಮಾನ್ಯ ಮನುಷ್ಯನಲ್ಲ, ಆದುದರಿಂದ ಮತ್ತೆ ವ್ಯಾಖ್ಯಾನವನ್ನು ಆರಂಭಿಸು' ಎನ್ನಲು ಮಾಲಾಧರರು ಒಪ್ಪಿಕೊಂಡರು.

ಅನಂತರ ಗೋಷ್ಠೀಪೂರ್ಣರು ಪೂರ್ಣಾಚಾರ್ಯರೊಡನೆಯೂ ಮಾಲಾಧರರೊಡನೆಯೂ ಯತಿರಾಜರ ಮಠಕ್ಕೆ ಬಂದು -'ಎಲೈ ಯತಿಸಾರ್ವಭೌಮ. ಲೋಕ ರಕ್ಷಣಕ್ಕಾಗಿ ಉಳಿದಿರುವ ವ್ಯಾಖ್ಯಾನವನ್ನು ಮುಗಿಸು' ಎನ್ನಲು, ಆಚಾರ್ಯರು ಸಂತೋಷದಿಂದ ಒಪ್ಪಿದರು. ಮತ್ತೆ ವ್ಯಾಸಂಗವು ಆರಂಭವಾಯಿತು. ಮತ್ತೊಂದು ಗೀತೆಯ ಅರ್ಥದಲ್ಲಿಯೂ ಆಚಾರ್ಯರು 'ಯಾಮುನಾಚಾರ್ಯರ ಅಭಿಪ್ರಾಯವು ಹೀಗಿರಲಾರದು' ಎನ್ನಲು, ಮಾಲಾಧರರು-'ನೀನು ಎಂದೂ ಯಾಮುನಾಚಾರ್ಯರನ್ನು ಕಂಡವನಲ್ಲ, ನಿನಗೆ ಅವರ ಮನಸ್ಸಿನ ಅಭಿಪ್ರಾಯವು ಹೇಗೆ ತಿಳಿಯಿತು?' ಎಂದು ಕೇಳಲು, ಆಚಾರ್ಯರು -'ದ್ರೋಣಾಚಾರ್ಯರಿಗೆ ಏಕಲವ್ಯ ಹೇಗೆ ಶಿಷ್ಯನೋ ಅದರಂತೆ ಯಮುನಾಚಾರ್ಯರಿಗೆ ನಾನು' ಎಂದರು. ಅದನ್ನು ಕೇಳಿದ ಮಾಲಾಧರರು ಗೋಷ್ಠೀಪೂರ್ಣರು ಹೇಳಿದ ಮಾತುನಿಜವೆಂದು ನಂಬಿ, ಆಚಾರ್ಯರನ್ನು ಶ್ರೀಹರಿಯ ಅಂಶವೆಂದು ತಿಳಿದು, 'ಎಲೈ ಮಹಾತ್ಮನೆ, ಯಾಮುನಾಚಾರ್ಯರಿಂದ ನಾನು ಅರಿಯದ ವಿಷಯವೂ ಈಗ ತಿಳಿದಂತಾಯಿತು' ಎಂದು ಹೇಳಿ ಆನಂದಪಟ್ಟರು. ಆಚಾರ್ಯರು ಸಹ ಗ್ರಂಥವನ್ನು ಸಾಂಗವಾಗಿ ಮುಗಿಸಿ ಮಾಲಾಧರಗುರುಗಳಿಗೆ ಸನ್ಮಾನಮಾಡಿ ಸಂತುಷ್ಟರಾದರು.

ಮಾಲಾಧರರು ತನ್ನ ಮಗನಾದ ಸುಂದರಬಾಹುವನ್ನು ಆಚಾರ್ಯರ ಶಿಷ್ಯನನ್ನಾಗಿ ಮಾಡಿ, ವರರಂಗನಲ್ಲಿರುವ ವಿಶೇಷಾರ್ಥವನ್ನು ಗ್ರಹಿಸಬೇಕೆಂದು ಸೂಚಿಸಿದನು.

ಈ ರೀತಿ ಸೂಚಿಸಲ್ಪಟ್ಟ ಆಚಾರ್ಯರು ವಿಶೇಷಾರ್ಥಕ್ಕಾಗಿ ಆರು ತಿಂಗಳ ಕಾಲ ಪ್ರತಿದಿನವೂ ರಾತ್ರಿಯಹೊತ್ತು ಹಾಲನ್ನು ಕಾಯಿಸಿ ವರರಂಗನಿಗೆ ಭಕ್ತಿಯಿಂದ ಕೊಡುತ್ತ ಬಂದರು. ಆ ವೇಳೆಗೆ ಧನುರ್ಮಾಸವು ಬಂದಿತು. ಶ್ರೀರಂಗದಲ್ಲಿ ರಂಗನಾಥನ ಎದುರಿನಲ್ಲಿ ಬೆಳಗಿನ. ಜಾವದಲ್ಲಿ ನಾಟ್ಯದಿಂದ ಶ್ರಾಂತನಾದ ವರರಂಗನ ಕೈಕಾಲುಗಳನ್ನು ಆಚಾರ್ಯರು ಸ್ವತಃ ತೈಲಾಭ್ಯಂಜನಾದಿಗಳಿಂದ ಉಪಚರಿಸುತ್ತಿದ್ದರು. ಇದನ್ನು ಕಂಡು ತೃಪ್ತನಾದ ವರರಂಗನು 'ಎಲೈ ಲಕ್ಷ್ಮಣದೇಶಿಕ, ನೀನು ನನ್ನ ಸರ್ವಸ್ವವನ್ನೂ ಅಪಹರಿಸಲು ಈ ರೀತಿ ಮಾಡುತ್ತಿರುವೆ. ಆಗಲಿ, ಬಾ ಹೇಳಿಕೊಡುವೆನು'- ಎಂದು, 'ಹಿಂದೆ ಆ ಮಧುರಕವಿಯು ಶಠಕೋಪ ಮುನಿಯನ್ನು ಬಿಟ್ಟು ಬೇರೆ ದೇವರನ್ನೇ ಕಾಣದೇ ಇದ್ದಂತೆ ನೀನು ಇರು.

ಗುರುರೇವ ಪರಂಬ್ರಹ್ಮ ಗುರುರೇವ ಪರಂಧನಂ।
ಗುರುರೇವ ಪರಃಕಾಮೋ ಗುರುರೇವ ಪರಾಯಣಂ।
ಗುರುರೇವ ಪರಾವಿದ್ಯಾ ಗುರುರೇವ ಪರಾಗತಿಃ।
ಯಸ್ಮಾತ್ತದುಪದೇಷ್ಟಾಽಸೌ ತಸ್ಮಾದ್ಗುರುತರೋ ಗುರುಃ॥

ಎಂಬಂತೆ ಉಪಾಯವೂ ಉಪೇಯವೂ ಗುರುವೇ ಎಂದು ಭಾವಿಸು' ಎಂದು ಯತೀಂದ್ರರಿಗೆ ಚರಮಪುರುಷಾರ್ಥವನ್ನು ಉಪದೇಶಿಸಿ, ತನಗೆ ಮಕ್ಕಳಿಲ್ಲದ್ದರಿಂದ ತಮ್ಮನಾದ 'ಶೊಟ್ಟನಂಬಿ'ಯನ್ನು ಶಿಷ್ಯನನ್ನಾಗಿ ಮಾಡಿ ಕೃತಕೃತ್ಯನಾದನು.

ರಾಮಾನುಜಾಚಾರ್ಯರು ಹೀಗೆ ಗುರುಗಳಿಂದ ಸಕಲ ವಿದ್ಯೆಗಳನ್ನೂಗ್ರಹಿಸಿ ವಿಷ್ಣು ಲೋಕದಲ್ಲಿ ದೇವತೆಗಳಿಂದ ಕೂಡಿದ ವಿಷ್ಣುವಿನಂತೆ ಶ್ರೀರಂಗದಲ್ಲಿ ಪ್ರಕಾಶಿಸುತ್ತಿದ್ದರು.

ರಾಜರು ಐಶ್ವರ್ಯವನ್ನು ತಮ್ಮ ಮಕ್ಕಳಿಗಾಗಿ ಸನ್ಮಂತ್ರಿಗಳಲ್ಲಿಡುವಂತೆ ಯಾಮುನಾ ಚಾರ್ಯರು ತಮ್ಮ ಸರ್ವಸ್ವವನ್ನೂ ಐದು ಜನ ಆಚಾರ್ಯರಲ್ಲಿಟ್ಟಿರಲು ಅವರೆಲ್ಲರೂ ಯತಿರಾಜರಿಗೆ ಉಪದೇಶಿಸಿ ತಮ್ಮ ಮಕ್ಕಳನ್ನು ಅವರ ಶಿಷ್ಯರನ್ನಾಗಿ ಮಾಡಿದರು.

ಆಚಾರ್ಯರ ಶಿರಸ್ಸಿನ ಸಂಬಂಧದಿಂದ ಪ್ರಾಚೀನಚಾರ್ಯರೂ, ಅವರ ಪಾದಸಂಬಂಧದಿಂದ ಈಚಿನ ಆಚಾರ್ಯರೂ ಶ್ರೇಷ್ಠವಾದ ಸಿದ್ಧಿಯನ್ನೂ ಪಡೆದರು. ಆದರಿಂದ ಆಚಾರ್ಯರು ಹಾರದ ಮಧ್ಯದಲ್ಲಿರುವ ಪದಕದಂತೆ ಆಚಾರ್ಯರ ಪಂಕ್ತಿಯಲ್ಲಿ ಶೋಭಿಸುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಜಚಾರ್ಯರಿಗೆ ಸರ್ವಾರ್ಥೋಪದೇಶವೆಂಬ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

## ೨೪

ಲಕ್ಷ್ಮಣಾಚಾರ್ಯರು ಲೋಕಹಿತಕ್ಕಾಗಿ ಗದ್ಯತ್ರಯವನ್ನೂ ಶ್ರೀವಿಷ್ಣುವಿನ ಆರಾಧನ ಕ್ರಮವನ್ನೂ ರಚಿಸಿ, ದೇವದೇವನಾದ ಶ್ರೀಮನ್ನಾರಾಯಣನೇ ಪರಮಾತ್ಮನು, ಅವನೇ ಪರಬ್ರಹ್ಮನು ಎಂದು ಪ್ರತಿಪಾದಿಸುತ್ತ, ವೈಷ್ಣವದರ್ಶನವನ್ನು ಅಭಿವೃದ್ಧಿಪಡಿಸುತ್ತ ಶ್ರೀರಂಗದಲ್ಲಿ

ಅರ್ಚಕರಿಂದ ರಂಗನಾಥನಿಗೆ ಕೈಂಕರ್ಯಗಳನ್ನು ನಡೆಸುತ್ತ ಸುಖವಾಗಿರುತ್ತಿದ್ದನು.

ಕೈಂಕರ್ಯದ ವಿಚಾರವಾಗಿ ಅರ್ಚಕರಿಗೆ ಆಚಾರ್ಯರು ಮಾಡುವ ಈ ನಿರ್ಬಂಧವು ಭಗವಂತನ ದ್ರವ್ಯಾಪಹಾರಕ್ಕೆ ವಿಘ್ನವಾಯಿತು. ಅರ್ಚಕರ ಮುಖ್ಯಸ್ಥನು ಆಚಾರ್ಯರನ್ನು ಹಿಂಸೆ ಮಾಡುತ್ತ, ಒಂದು ದಿನ ಒಬ್ಬ ಲೋಭಿಯಾದ ಬ್ರಾಹ್ಮಣನಿಗೆ ಧನಲೋಭವನ್ನುಂಟು ಮಾಡಿ ರಾಮಾನುಜಾಚಾರ್ಯರಿಗೆ ವಿಷಾನ್ನವನ್ನು ಕೊಡುವಂತೆ ಪ್ರೇರಿಸಿದನು. ದುಡ್ಡಿನ ಆಸೆಯಿಂದ ಅವನು ಒಪ್ಪಿಕೊಂಡನು. ಅವನು ತನ್ನ ಹೆಂಡತಿಗೆ ಹೇಳಲು ಅವಳು ಒಪ್ಪಲಿಲ್ಲ. ಆದರೂ ಪತಿಯ ನಿರ್ಬಂಧವನ್ನೂ ತಡೆಯಲಾರದೆ ವಿಷಮಿಶ್ರಿತವಾದ ಅನ್ನವನ್ನು ಆಚಾರ್ಯರ ಮುಂದೆ ಇಟ್ಟು ಪಾದಗಳಿಗೆ ನಮಸ್ಕಾರ ಮಾಡುವಾಗ ಉಗುರುಗಳಿಂದ ಅವರ ಪಾದಗಳನ್ನು ಕೆರೆದಳು. ಆಚಾರ್ಯರು ಕಣ್ಣೀರು ಸುರಿಸುತ್ತಿರುವ ಅವಳ ಮುಖವನ್ನೂ ಆ ಚೇಷ್ಟೆಯನ್ನೂ ಕಂಡು ಸಂಶಯದಿಂದ ಅನ್ನವನ್ನು ನಾಯಿಗೆ ಹಾಕಿಸಲು, ಕೂಡಲೇ ಅದು ಸತ್ತಿತು. ಆಚಾರ್ಯರು ತೀರ್ಥವನ್ನು ತೆಗೆದುಕೊಂಡು ಭಿಕ್ಷೆಯನ್ನು ಬಿಟ್ಟು ಹೊರಟರು.

ಹೇಗೋ ಈ ವೃತ್ತಾಂತವು ಗೋಷ್ಠೀಪೂರ್ಣರಿಗೆ ತಿಳಿಯಲು ಶಿಷ್ಯವತ್ಸಲರಾದ ಅವರು ಕೂಡಲೇ ಶ್ರೀರಂಗಕ್ಕೆ ಹೊರಟರು. ಅವರ ಆಗಮನವನ್ನು ತಿಳಿದ ಆಚಾರ್ಯರು ಸಹ ತಮ್ಮ ಶಿಷ್ಯರೊಡನೆ ಕಾವೇರಿಯ ದಕ್ಷಿಣತೀರಕ್ಕೆ ಹೋದರು. ಬೇಸಿಗೆಯ ಕಾಲ. ಮಧ್ಯಾಹ್ನ, ಕಾದಿರುವ ಮರಳಿನ ತೀರ. ಅಲ್ಲಿ ಆಚಾರ್ಯರು ದಂಡವತ್ಪ್ರಣಾಮವನ್ನು ಮಾಡಲು ಬಿದ್ದರು. ಆಗ ಗೋಷ್ಠೀಪೂರ್ಣರು, ರಾಮಾನುಜಾಚಾರ್ಯರಲ್ಲಿ ಶಿಷ್ಯರಿಗಿರುವ ಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಆಚಾರ್ಯರನ್ನು 'ಮೇಲಕ್ಕೆ ಏಳು'- ಎಂದೂ ಹೇಳದೆ ಸುಮ್ಮನಿದ್ದರು. ಎಲ್ಲರೂ ಹಾಗೆಯೇ ಇದ್ದರು. ಆದರೆ ರಾಮಾನುಜಾಚಾರ್ಯರ ಶಿಷ್ಯರಲ್ಲಿ ಒಬ್ಬನಾದ ಆತ್ರೇಯವಂಶದಲ್ಲಿ ಹುಟ್ಟಿದ ಪ್ರಣತಾರ್ತಿಹರನೆಂಬುವನು ಗೋಷ್ಠೀಪೂರ್ಣರನ್ನು ಕುರಿತು -'ಎಲೋ ಚೋಳಿಯ, ನಮ್ಮ ಗುರುಗಳನ್ನು ಕೊಲ್ಲುವುದಕ್ಕೆ ಬಂದಿರುವೆಯೋ'- ಎಂದು ಹೇಳಿ ಕೂಡಲೇ ಆಚಾರ್ಯರನ್ನು ಮೇಲಕ್ಕೆ ಎತ್ತಿ ಆ ಜಾಗದಲ್ಲಿ ತಾನು ಬಿದ್ದನು. ಆಗ ಗೋಷ್ಠೀಪೂರ್ಣರು -'ಎಲೈ ಲಕ್ಷ್ಮಣಾಚಾರ್ಯ ಇನ್ನು ಮುಂದೆ ನೀನು ಈ ದಯಾಳುವಾದ ವೈಷ್ಣವನಿಂದ ಪಾಕವನ್ನು ಮಾಡಿಸಿ ಭೋಜನವನ್ನು ಮಾಡು'- ಎಂದು ಹೇಳಲು, ಆಚಾರ್ಯರು ಹಾಗೆಯೇ ಮಾಡಿದರು.

ಒಂದು ಸಲ ಆಚಾರ್ಯರು ಒಬ್ಬರೇ ರಂಗನಾಥನ ಸೇವೆಗಾಗಿ ದೇವಾಲಯಕ್ಕೆ ಹೋಗಲು ಸುಸಮಯವು ಸಿಕ್ಕಿದುದನ್ನು ಕಂಡ ಅರ್ಚಕನು ವಿಷಮಿಶ್ರಿತವಾದ ತೀರ್ಥವನ್ನು ಕೊಡಲು, ವಿಷಯವು ತಿಳಿದರೂ ಸಹ ಹರಿಭಕ್ತರಾದ ಆಚಾರ್ಯರು ತೀರ್ಥವನ್ನು ಗ್ರಹಿಸಿದರು. ಅವರ ತೇಜಸ್ಸಿನಿಂದ ವಿಷವೂ ಶಕ್ತಿಯಿಲ್ಲದಾಯಿತು. ಈ ಉಪಾಯದಿಂದಲೂ ಬದುಕಿಕೊಂಡ ಆಚಾರ್ಯರನ್ನು ಸಂಹರಿಸಲು ಕ್ರೂರಿಗಳಾದ ಅರ್ಚಕರು ಅನೇಕ ವಿಧವಾದ ಅಭಿಚಾರಕ ಕೃತ್ಯಗಳನ್ನು ಮಾಡಿಸಿದರು. ಆದರೆ ಎಲ್ಲವೂ ವಸಿಷ್ಠನ ಬ್ರಹ್ಮದಂಡದ ಮುಂದೆ ವಿಶ್ವಾಮಿತ್ರನ ಶಕ್ತಿಯೆಲ್ಲವೂ ಕುಗ್ಗಿದಂತೆ ಫಲಿಸಲಿಲ್ಲ. ಅನಂತರ ಎಲ್ಲರೂ ಇವನ ಮಹಿಮೆಯನ್ನು ತಿಳಿದು ಗೌರವಿಸಲು, ಎಲ್ಲರನ್ನೂ ಕ್ಷಮಿಸಿ ಆಸೇತುಹಿಮಾಚಲಪರ್ಯಂತವಾಗಿ ಕೀರ್ತಿಶಾಲಿಗಳಾಗಿ ಮೆರೆಯುತ್ತಿದ್ದರು.

ಮಾಲಾಧರರು ತನ್ನ ಮಗನಾದ ಸುಂದರಬಾಹುವನ್ನು ಆಚಾರ್ಯರ ಶಿಷ್ಯನನ್ನಾಗಿ ಮಾಡಿ, ವರರಂಗನಲ್ಲಿರುವ ವಿಶೇಷಾರ್ಥವನ್ನು ಗ್ರಹಿಸಬೇಕೆಂದು ಸೂಚಿಸಿದನು.

ಈ ರೀತಿ ಸೂಚಿಸಲ್ಪಟ್ಟ ಆಚಾರ್ಯರು ವಿಶೇಷಾರ್ಥಕ್ಕಾಗಿ ಆರು ತಿಂಗಳ ಕಾಲ ಪ್ರತಿದಿನವೂ ರಾತ್ರಿಯಹೊತ್ತು ಹಾಲನ್ನು ಕಾಯಿಸಿ ವರರಂಗನಿಗೆ ಭಕ್ತಿಯಿಂದ ಕೊಡುತ್ತ ಬಂದರು. ಆ ವೇಳೆಗೆ ಧನುರ್ಮಾಸವು ಬಂದಿತು. ಶ್ರೀರಂಗದಲ್ಲಿ ರಂಗನಾಥನ ಎದುರಿನಲ್ಲಿ ಬೆಳಗಿನ ಜಾವದಲ್ಲಿ ನಾಟ್ಯದಿಂದ ಶ್ರಾಂತನಾದ ವರರಂಗನ ಕೈಕಾಲುಗಳನ್ನು ಆಚಾರ್ಯರು ಸ್ವತಃ ತೈಲಾಭ್ಯಂಜನಾದಿಗಳಿಂದ ಉಪಚರಿಸುತ್ತಿದ್ದರು. ಇದನ್ನು ಕಂಡು ತೃಪ್ತನಾದ ವರರಂಗನು 'ಎಲೈ ಲಕ್ಷ್ಮಣದೇಶಿಕ, ನೀನು ನನ್ನ ಸರ್ವಸ್ವವನ್ನೂ ಅಪಹರಿಸಲು ಈ ರೀತಿ ಮಾಡುತ್ತಿರುವೆ. ಆಗಲಿ, ಬಾ ಹೇಳಿಕೊಡುವೆನು'- ಎಂದು, 'ಹಿಂದೆ ಆ ಮಧುರಕವಿಯು ಶಠಕೋಪ ಮುನಿಯನ್ನು ಬಿಟ್ಟು ಬೇರೆ ದೇವರನ್ನೇ ಕಾಣದೇ ಇದ್ದಂತೆ ನೀನು ಇರು.

ಗುರುರೇವ ಪರಂಬ್ರಹ್ಮ ಗುರುರೇವ ಪರಂಧನಂ।
ಗುರುರೇವ ಪರಃಕಾಮೋ ಗುರುರೇವ ಪರಾಯಣಂ।
ಗುರುರೇವ ಪರಾವಿದ್ಯಾ ಗುರುರೇವ ಪರಾಗತಿಃ।
ಯಸ್ಮಾತ್ತದುಪದೇಷ್ಟಾಽಸೌ ತಸ್ಮಾದ್ಗುರುತರೋ ಗುರುಃ॥

ಎಂಬಂತೆ ಉಪಾಯವೂ ಉಪೇಯವೂ ಗುರುವೇ ಎಂದು ಭಾವಿಸು' ಎಂದು ಯತೀಂದ್ರರಿಗೆ ಚರಮಪುರುಷಾರ್ಥವನ್ನು ಉಪದೇಶಿಸಿ, ತನಗೆ ಮಕ್ಕಳಿಲ್ಲದ್ದರಿಂದ ತಮ್ಮನಾದ 'ಶೊಟ್ಟನಂಬಿ'ಯನ್ನು ಶಿಷ್ಯನನ್ನಾಗಿ ಮಾಡಿ ಕೃತಕೃತ್ಯನಾದನು.

ರಾಮಾನುಜಾಚಾರ್ಯರು ಹೀಗೆ ಗುರುಗಳಿಂದ ಸಕಲ ವಿದ್ಯೆಗಳನ್ನೂಗ್ರಹಿಸಿ ವಿಷ್ಣು ಲೋಕದಲ್ಲಿ ದೇವತೆಗಳಿಂದ ಕೂಡಿದ ವಿಷ್ಣುವಿನಂತೆ ಶ್ರೀರಂಗದಲ್ಲಿ ಪ್ರಕಾಶಿಸುತ್ತಿದ್ದರು.

ರಾಜರು ಐಶ್ವರ್ಯವನ್ನು ತಮ್ಮ ಮಕ್ಕಳಿಗಾಗಿ ಸನ್ಮಂತ್ರಿಗಳಲ್ಲಿಡುವಂತೆ ಯಾಮುನಾ ಚಾರ್ಯರು ತಮ್ಮ ಸರ್ವಸ್ವವನ್ನೂ ಐದು ಜನ ಆಚಾರ್ಯರಲ್ಲಿಟ್ಟಿರಲು ಅವರೆಲ್ಲರೂ ಯತಿರಾಜರಿಗೆ ಉಪದೇಶಿಸಿ ತಮ್ಮ ಮಕ್ಕಳನ್ನು ಅವರ ಶಿಷ್ಯರನ್ನಾಗಿ ಮಾಡಿದರು.

ಆಚಾರ್ಯರ ಶಿರಸ್ಸಿನ ಸಂಬಂಧದಿಂದ ಪ್ರಾಚೀನಚಾರ್ಯರೂ, ಅವರ ಪಾದಸಂಬಂಧದಿಂದ ಈಚಿನ ಆಚಾರ್ಯರೂ ಶ್ರೇಷ್ಠವಾದ ಸಿದ್ಧಿಯನ್ನೂ ಪಡೆದರು. ಆದರಿಂದ ಆಚಾರ್ಯರು ಹಾರದ ಮಧ್ಯದಲ್ಲಿರುವ ಪದಕದಂತೆ ಆಚಾರ್ಯರ ಪಂಕ್ತಿಯಲ್ಲಿ ಶೋಭಿಸುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಜಚಾರ್ಯರಿಗೆ ಸರ್ವಾರ್ಥೋಪದೇಶವೆಂಬ ಇಪ್ಪತ್ತಮೂರನೆಯ ಅಧ್ಯಾಯವು ಮುಗಿದುದು.

## ೨೪

ಲಕ್ಷ್ಮಣಾಚಾರ್ಯರು ಲೋಕಹಿತಕ್ಕಾಗಿ ಗದ್ಯತ್ರಯವನ್ನೂ ಶ್ರೀವಿಷ್ಣುವಿನ ಆರಾಧನ ಕ್ರಮವನ್ನೂ ರಚಿಸಿ, ದೇವದೇವನಾದ ಶ್ರೀಮನ್ನಾರಾಯಣನೇ ಪರಮಾತ್ಮನು, ಅವನೇ ಪರಬ್ರಹ್ಮನು ಎಂದು ಪ್ರತಿಪಾದಿಸುತ್ತ, ವೈಷ್ಣವದರ್ಶನವನ್ನು ಅಭಿವೃದ್ಧಿಪಡಿಸುತ್ತ ಶ್ರೀರಂಗದಲ್ಲಿ

ಅರ್ಚಕರಿಂದ ರಂಗನಾಥನಿಗೆ ಕೈಂಕರ್ಯಗಳನ್ನು ನಡೆಸುತ್ತ ಸುಖವಾಗಿರುತ್ತಿದ್ದನು.

ಕೈಂಕರ್ಯದ ವಿಚಾರವಾಗಿ ಅರ್ಚಕರಿಗೆ ಆಚಾರ್ಯರು ಮಾಡುವ ಈ ನಿರ್ಬಂಧವು ಭಗವಂತನ ದ್ರವ್ಯಾಪಹಾರಕ್ಕೆ ವಿಘ್ನವಾಯಿತು. ಅರ್ಚಕರ ಮುಖ್ಯಸ್ಥನು ಆಚಾರ್ಯರನ್ನು ಹಿಂಸೆ ಮಾಡುತ್ತ, ಒಂದು ದಿನ ಒಬ್ಬ ಲೋಭಿಯಾದ ಬ್ರಾಹ್ಮಣನಿಗೆ ಧನಲೋಭವನ್ನುಂಟು ಮಾಡಿ ರಾಮಾನುಜಾಚಾರ್ಯರಿಗೆ ವಿಷಾನ್ನವನ್ನು ಕೊಡುವಂತೆ ಪ್ರೇರಿಸಿದನು. ದುಡ್ಡಿನ ಆಸೆಯಿಂದ ಅವನು ಒಪ್ಪಿಕೊಂಡನು. ಅವನು ತನ್ನ ಹೆಂಡತಿಗೆ ಹೇಳಲು ಅವಳು ಒಪ್ಪಲಿಲ್ಲ. ಆದರೂ ಪತಿಯ ನಿರ್ಬಂಧವನ್ನೂ ತಡೆಯಲಾರದೆ ವಿಷಮಿಶ್ರಿತವಾದ ಅನ್ನವನ್ನು ಆಚಾರ್ಯರ ಮುಂದೆ ಇಟ್ಟು ಪಾದಗಳಿಗೆ ನಮಸ್ಕಾರ ಮಾಡುವಾಗ ಉಗುರುಗಳಿಂದ ಅವರ ಪಾದಗಳನ್ನು ಕೆರೆದಳು. ಆಚಾರ್ಯರು ಕಣ್ಣೀರು ಸುರಿಸುತ್ತಿರುವ ಅವಳ ಮುಖವನ್ನೂ ಆ ಚೇಷ್ಟೆಯನ್ನೂ ಕಂಡು ಸಂಶಯದಿಂದ ಅನ್ನವನ್ನು ನಾಯಿಗೆ ಹಾಕಿಸಲು, ಕೂಡಲೇ ಅದು ಸತ್ತಿತು. ಆಚಾರ್ಯರು ತೀರ್ಥವನ್ನು ತೆಗೆದುಕೊಂಡು ಭಿಕ್ಷೆಯನ್ನು ಬಿಟ್ಟು ಹೊರಟರು.

ಹೇಗೋ ಈ ವೃತ್ತಾಂತವು ಗೋಷ್ಠೀಪೂರ್ಣರಿಗೆ ತಿಳಿಯಲು ಶಿಷ್ಯವತ್ಸಲರಾದ ಅವರು ಕೂಡಲೇ ಶ್ರೀರಂಗಕ್ಕೆ ಹೊರಟರು. ಅವರ ಆಗಮನವನ್ನು ತಿಳಿದ ಆಚಾರ್ಯರು ಸಹ ತಮ್ಮ ಶಿಷ್ಯರೊಡನೆ ಕಾವೇರಿಯ ದಕ್ಷಿಣತೀರಕ್ಕೆ ಹೋದರು. ಬೇಸಿಗೆಯ ಕಾಲ. ಮಧ್ಯಾಹ್ನ, ಕಾದಿರುವ ಮರಳಿನ ತೀರ. ಅಲ್ಲಿ ಆಚಾರ್ಯರು ದಂಡವತ್ಪ್ರಣಾಮವನ್ನು ಮಾಡಲು ಬಿದ್ದರು. ಆಗ ಗೋಷ್ಠೀಪೂರ್ಣರು, ರಾಮಾನುಜಾಚಾರ್ಯರಲ್ಲಿ ಶಿಷ್ಯರಿಗಿರುವ ಭಕ್ತಿಯನ್ನು ಪರೀಕ್ಷಿಸುವುದಕ್ಕಾಗಿ ಆಚಾರ್ಯರನ್ನು 'ಮೇಲಕ್ಕೆ ಏಳು'- ಎಂದೂ ಹೇಳದೆ ಸುಮ್ಮನಿದ್ದರು. ಎಲ್ಲರೂ ಹಾಗೆಯೇ ಇದ್ದರು. ಆದರೆ ರಾಮಾನುಜಾಚಾರ್ಯರ ಶಿಷ್ಯರಲ್ಲಿ ಒಬ್ಬನಾದ ಆತ್ರೇಯವಂಶದಲ್ಲಿ ಹುಟ್ಟಿದ ಪ್ರಣತಾರ್ತಿಹರನೆಂಬುವನು ಗೋಷ್ಠೀಪೂರ್ಣರನ್ನು ಕುರಿತು -'ಎಲೋ ಚೋಳಿಯ, ನಮ್ಮ ಗುರುಗಳನ್ನು ಕೊಲ್ಲುವುದಕ್ಕೆ ಬಂದಿರುವೆಯೋ'- ಎಂದು ಹೇಳಿ ಕೂಡಲೇ ಆಚಾರ್ಯರನ್ನು ಮೇಲಕ್ಕೆ ಎತ್ತಿ ಆ ಜಾಗದಲ್ಲಿ ತಾನು ಬಿದ್ದನು. ಆಗ ಗೋಷ್ಠೀಪೂರ್ಣರು -'ಎಲೈ ಲಕ್ಷ್ಮಣಾಚಾರ್ಯ ಇನ್ನು ಮುಂದೆ ನೀನು ಈ ದಯಾಳುವಾದ ವೈಷ್ಣವನಿಂದ ಪಾಕವನ್ನು ಮಾಡಿಸಿ ಭೋಜನವನ್ನು ಮಾಡು'- ಎಂದು ಹೇಳಲು, ಆಚಾರ್ಯರು ಹಾಗೆಯೇ ಮಾಡಿದರು.

ಒಂದು ಸಲ ಆಚಾರ್ಯರು ಒಬ್ಬರೇ ರಂಗನಾಥನ ಸೇವೆಗಾಗಿ ದೇವಾಲಯಕ್ಕೆ ಹೋಗಲು ಸುಸಮಯವು ಸಿಕ್ಕಿದುದನ್ನು ಕಂಡ ಅರ್ಚಕನು ವಿಷಮಿಶ್ರಿತವಾದ ತೀರ್ಥವನ್ನು ಕೊಡಲು, ವಿಷಯವು ತಿಳಿದರೂ ಸಹ ಹರಿಭಕ್ತರಾದ ಆಚಾರ್ಯರು ತೀರ್ಥವನ್ನು ಗ್ರಹಿಸಿದರು. ಅವರ ತೇಜಸ್ಸಿನಿಂದ ವಿಷವೂ ಶಕ್ತಿಯಿಲ್ಲದಾಯಿತು. ಈ ಉಪಾಯದಿಂದಲೂ ಬದುಕಿಕೊಂಡ ಆಚಾರ್ಯರನ್ನು ಸಂಹರಿಸಲು ಕ್ರೂರಿಗಳಾದ ಅರ್ಚಕರು ಅನೇಕ ವಿಧವಾದ ಅಭಿಚಾರಕ ಕೃತ್ಯಗಳನ್ನು ಮಾಡಿಸಿದರು. ಆದರೆ ಎಲ್ಲವೂ ವಸಿಷ್ಠನ ಬ್ರಹ್ಮದಂಡದ ಮುಂದೆ ವಿಶ್ವಾಮಿತ್ರನ ಶಕ್ತಿಯೆಲ್ಲವೂ ಕುಗಿದಂತೆ ಫಲಿಸಲಿಲ್ಲ. ಅನಂತರ ಎಲ್ಲರೂ ಇವನ ಮಹಿಮೆಯನ್ನು ತಿಳಿದು ಗೌರವಿಸಲು, ಎಲ್ಲರನ್ನೂ ಕ್ಷಮಿಸಿ ಆಸೇತುಹಿಮಾಚಲಪರ್ಯಂತವಾಗಿ **ಕೀರ್ತಿಶಾಲಿಗಳಾಗಿ** ಮೆರೆಯುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯತಿರಾಜರಿಗೆ ಪಿಷಾನ್ನಾದಿ ಪ್ರದಾನವೆಂಬ ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

೨೫

ಮಾಯಾವಾದಿಯಾದ ಯಜ್ಞಮೂರ್ತಿಯೆಂಬ ಮಹಾಪ್ರಾಜ್ಞನಾದ ಶಾಸ್ತ್ರಜ್ಞನೊಬ್ಬನು ವಾದದಲ್ಲಿ ಎಲ್ಲರನ್ನೂ ಜಯಿಸುತ್ತ ಗಂಗಾತೀರಕ್ಕೆ ಬಂದು, ಅಲ್ಲಿ ಸಂನ್ಯಾಸವನ್ನು ಗ್ರಹಿಸಿ,ಆಚಾರ್ಯರ ವೈಭವವನ್ನು ಕೇಳಿ ಅವರನ್ನೂ ಜಯಿಸಬೇಕೆಂಬ ಇಚ್ಛೆಯಿಂದ ಅನೇಕ ಗ್ರಂಥಗಳೊಡನೆ ಶ್ರೀರಂಗಕ್ಕೆ ಬಂದು ಆಚಾರ್ಯರನ್ನು ಕುರಿತು -'ರಾಮಾನುಜ, ನನ್ನೊಡನೆ ಶಾಸ್ತ್ರವಾದಕ್ಕೆ ಬಾ'- ಎಂದನು. 'ವಾದದಲ್ಲಿ ನೀನು ಸೋತರೆ ನಿನಗೇನು ಶಿಕ್ಷೆ?' 'ನಾನು ಸೋತರೆ ನನ್ನ ಮತವನ್ನು ಬಿಟ್ಟು ನಿನ್ನ ಮತವನ್ನು ಅಂಗೀಕರಿಸಿ ನಿನ್ನ ಪಾದುಕೆಗಳನ್ನು ಶಿರಸಾವಹಿಸಿ ನಿನ್ನ ಹೆಸರನ್ನೇ ಇಟ್ಟುಕೊಳ್ಳುವೆನು-ನೀನೇ ಸೋತರೆ ನಿನಗೇನು ಶಿಕ್ಷೆ?' 'ಎಲೈ ವಿದ್ವಾಂಸನೆ, ನಾನು ಸೋತರೆ ಇನ್ನುಮುಂದೆ ಗ್ರಂಥತ್ಯಾಗಮಾಡುವೆನು'. ಹೀಗೆ ಇಬ್ಬರೂ ಪ್ರತಿಜ್ಞೆಯನ್ನು ಮಾಡಿ ವಾದಕ್ಕೆ ಹದಿನೆಂಟು ದಿನಗಳ ಅವಕಾಶವನ್ನು ಕಲ್ಪಿಸಿ ಪರಸ್ಪರ ಜಯಾಕಾಂಕ್ಷೆಯಿಂದ ಮದಗಜಗಳಂತೆ ಹೋರಾಡುತ್ತಿದ್ದರು. ಹದಿನೇಳನೆಯ ದಿನ ಯಜ್ಞಮೂರ್ತಿಯ ವಾದವು ಸಫಲವಾಗುವಂತೆ ತೋರಲು ಅವನು ಹರ್ಷದಿಂದ ನಡೆದನು. ಆಚಾರ್ಯರು ಖಿನ್ನರಾಗಿ ಮಠಕ್ಕೆ ಬಂದು, ಆರಾಧನೀಯನಾದ ವರದರಾಜನನ್ನು ಅರ್ಚಿಸಿ, 'ಎಲೈ ದೇವರಾಜ, ವರದ, ಬಹುಕಾಲದಿಂದಲೂ ಈ ವೈಷ್ಣವದರ್ಶನವು ಅನುಸೂತ್ಯವಾಗಿ ಬಂದಿರುವುದು. ಶ್ರೀಪರಾಂಕುಶಾದಿಗಳ ಕಾಲದಿಂದಲೂ ಅವ್ಯಾಹತವಾಗಿ ನಡೆದುಕೊಂಡು ಬಂದ ಈ ದರ್ಶನವು ನನ್ನ ಕಾಲದಲ್ಲಿ ನಾಶವಾಗುವುದಕ್ಕೆ ಬಂದಿತೆ? ಇಲ್ಲಿಯವರೆಗೂ ನಿನ್ನ ಸ್ವರೂಪಗುಣಾದಿಗಳೆಲ್ಲವೂ ಸತ್ಯವಾದವೆಂಬುದಾಗಿದ್ದು ಈಗ ಅಸತ್ಯವೆನಿಸಿಕೊಳ್ಳಬಹುದೆ? ಎಲೈ ದೇವ ,ಈಗ ನೀನು ಯಾವನೋ ಒಬ್ಬ ಮಾಯಾವಾದಿಯನ್ನು ಕರೆತಂದು ನನ್ನ ಜೀವನದಲ್ಲಿಯೇ ಸತ್ಯಪ್ರಮಾಣಗಳನ್ನು ನಾಶಮಾಡುವೆಯಾ? ನಿನ್ನ ಸಂಕಲ್ಪವಿದ್ದಂತೆ ಆಗಲಿ ಎಂದು ಊಟಮಾಡದೆಯೇ ಮಲಗಿದರು.

ಸ್ವಪ್ನದಲ್ಲಿ ದೇವರಾಜನು -'ಯತೀಂದ್ರ, ಹೆದರಬೇಡ. ನಾನು ನಿನಗೊಬ್ಬ ಶ್ರೇಷ್ಠನಾದ ಶಿಷ್ಯನನ್ನು ಒದಗಿಸಿಕೊಟ್ಟಿರುವೆನು. ನೀನೇನು ಚಿಂತಿಸಬೇಡ. ನಿನ್ನ ಪರಮಾಚಾರ್ಯರಾದ ಯಾಮುನಾಚಾರ್ಯರಿಂದ ವಿರಚಿತವಾದ ನಿರ್ದುಷ್ಟವಾದ 'ಮಾಯಾವಾದಖಂಡನ'ದಿಂದ ಯಜ್ಞಮೂರ್ತಿಯನ್ನು ಜಯಿಸು' ಎಂದು ಅನುಗ್ರಹಿಸಿದನು. ಆಚಾರ್ಯರು ಬೆಳಗ್ಗೆ ಎದ್ದು ವರದರಾಜನ ಅನುಗ್ರಹವನ್ನು ನೆನೆಯುತ್ತ ನಿತ್ಯಕ್ರಿಯೆಗಳನ್ನು ಮುಗಿಸಿ, ಹೃಷ್ಟಚಿತ್ತರಾಗಿ ಶಿಷ್ಯರೊಡನೆ ವಾದಗೋಷ್ಠಿಗೆ ತೆರಳಿದರು. ಯಜ್ಞಮೂರ್ತಿ ಯಾದರೋ, ಮೊದಲನೆಯ ದಿನ ಖಿನ್ನರಾಗಿ ಹೋದ ಆಚಾರ್ಯರು ಗಂಭೀರ ಮುಖಮುದ್ರೆಯಿಂದಿರುವುದನ್ನೂ ಅವರ ಮುಖೋಲ್ಲಾಸವನ್ನೂ ಕಂಡು, ಶ್ರೀಹರಿಯ ಅಂಶವೆಂದು ತಿಳಿದು ವಾದವೇ ಇಲ್ಲದೆ ಆಚಾರ್ಯರ ಶಿಷ್ಯತ್ವವನ್ನು ಒಪ್ಪಿಕೊಂಡನು. ಆಚಾರ್ಯರು ಇದೇಕೆ ಈ ದಿನ ವಾದಿಸುವುದಿಲ್ಲವೇ?' ಎನ್ನಲು,

ಯಜ್ಞಮೂರ್ತಿಯು -'ತಮಗೆ ವಿಷ್ಣುವು ಪ್ರತ್ಯಕ್ಷವಾಗಿರುವುದರಿಂದ ನನಗೆ ಯಾವ ಮಾತಾಡಲೂ ತೋರುವುದಿಲ್ಲ, ತಮಗೂ ಭಗವಾನ್ ವಿಷ್ಣುವಿಗೂ ವ್ಯತ್ಯಾಸವೇನು?' ಎಂದನು. ಮತ್ತೆ ಆಚಾರ್ಯರು -'ನಿನ್ನ ಮಾಯಾವಾದ ಸಿದ್ಧಾಂತದಲ್ಲಿ ಪರಬ್ರಹ್ಮನಿಗೆ ನಿರ್ಗುಣತ್ವವು ಪ್ರತಿಪಾದಿಸಲ್ಪಟ್ಟಿತು. ಬ್ರಹ್ಮನು ಸಗುಣನೆಂದೂ ಪ್ರತಿಪಾದಿಸುವ ವೇದೋಕ್ತಪ್ರಮಾಣಗಳು ಬ್ರಹ್ಮನು 'ಅವಿದ್ಯೆ'ಯಿಂದ ತಿರಸ್ಕೃತನಾಗಿರು ವುದರಿಂದ ಸಗುಣನೆನಿಸಿಕೊಳ್ಳುವನು ಎಂಬುದರಿಂದ ಸಗುಣವಾಕ್ಯಗಳಿಗೂ, ನಿರ್ಗುಣ ವಾಕ್ಯಗಳಿಗೂ ಪರಸ್ಪರ ವಿರೋಧವಿಲ್ಲ'- ಎಂಬ ನಿನ್ನ ಮತವು ಯುಕ್ತಿಯುಕ್ತವಾಗಿಲ್ಲ. ಏಕೆಂದರೆ, 'ಪರಬ್ರಹ್ಮನು ಜ್ಞಾನಸ್ವರೂಪನು. ಆ ಪರಬ್ರಹ್ಮನನ್ನು ಮಿಥ್ಯೆಯಾದ ಅಜ್ಞಾನವು ತಿರಸ್ಕರಿಸುವುದಾದರೆ ಆ ಮಾಯೆಯನ್ನು (ಮಿಥ್ಯಾಜ್ಞಾನವನ್ನು) ನಾಶಮಾಡಲು ಸಮರ್ಥನಾರು? ಅವಿದ್ಯೆಗೆ ನಾಶವಿಲ್ಲದ್ದರಿಂದ ಅದು ನಿತ್ಯವಾಯಿತು. ಅವಿದ್ಯೆಯೂ ಬ್ರಹ್ಮನೂ ಇರುವಲ್ಲಿ ಬ್ರಹ್ಮಾದ್ವೈತವು ಹೇಗೆ ಸಿದ್ಧಿಸುವುದು?'- ಎಂದು ವಾದವನ್ನು ಮುಗಿಸಿದರು.

ಯಜ್ಞಮೂರ್ತಿಯು ತನ್ನ ಏಕದಂಡವನ್ನು ಬಿಸುಟು, ಆಚಾರ್ಯರನ್ನು ನಮಸ್ಕರಿಸಿ 'ಎಲೈ ಯೋಗಿಶ್ರೇಷ್ಠ, .ನಿನ್ನಿಂದ ಜಿತನಾದೆನು. ಉಪವೀತ ತ್ರಿದಂಡಾದಿಗಳನ್ನು ಕೊಟ್ಟು ಶಿಷ್ಯನನ್ನಾಗಿ ಮಾಡಿಕೊಂಡು ರಕ್ಷಿಸಬೇಕು'- ಎಂದು ಪ್ರಾರ್ಥಿಸಿದನು.ಇದನ್ನು ಕೇಳಿದ ಆಚಾರ್ಯರು ಯಜ್ಞಮೂರ್ತಿಗೆ ಸಮಾಧಾನವನ್ನು ಹೇಳಿ ಸನ್ಯಾಸಿಯು ಶಿಖಾಯಜ್ಞೋಪವೀತ ಗಳನ್ನು ಬಿಟ್ಟರೆ ಮಾಡಬೇಕಾದ ಪ್ರಾಯಶ್ಚಿತ್ತ (ಹೀನೋ ಯಜ್ಞೋಪವಿತೇನ ಯದಿಸ್ಯಾದ್ಯಾನ ಭಿಕ್ಷುಕಃ। ಗಾಯತ್ರೀ ಸಹಿತಾನೇವ ಪ್ರಜಾಪತ್ಯಾನ್‌ಷಡಾಚರೇತ್॥)ವನ್ನು ಮಾಡಿಸಿ, ವೈಷ್ಣವಾದಿ ಸ್ತ್ರೀಪುರುಷರೆಲ್ಲರಿಗೂ ಸರ್ವಾಶ್ರಮಗಳಲ್ಲಿಯೂ ತಾಪಸಂಸ್ಕಾರವು ಮುಖ್ಯವಾದುದರಿಂದ ತಾಪಾದಿ ಪಂಚಸಂಸ್ಕಾರಗಳನ್ನು ಮಾಡಿಸಿ

'ಉಪವೀತಂ ತ್ರಿದಂಡಂ ಚ ಪಾತ್ರಂ ಜಲಪವಿತ್ರಕಂ ।
ಕೌಪೀನಂ ಕಟಿಸೂತ್ರಂಚ ನ ತ್ಯಾಜ್ಯಂ ಯಾವದಾಯುಷಂ॥ '-

ಎಂದು ಹೇಳಿ, ಸ್ವಪ್ನದಲ್ಲಿ ವರದರಾಜನ ಅನುಗ್ರಹದಿಂದ ಸಿಕ್ಕಿದ ಶಿಷ್ಯನಿಗೆ ಅವನ ಹೆಸರು ಮತ್ತು ತಮ್ಮ ಹೆಸರುಗಳನ್ನು ಸೇರಿಸಿ 'ದೇವರಾಡ್ದೇವಮನ್ನಾಥ'ನೆಂದೂ 'ದೇವರಾಜಮುನಿ' ಯೆಂದೂ ಹೆಸರನ್ನಿಟ್ಟರು. ಅನಂತರ ದೇವರಾಜಮುನಿಯನ್ನು ಕರೆದುಕೊಂಡು ಶ್ರೀರಂಗನಾಥನ ಸನ್ನಿಧಿಗೆ ದಯಮಾಡಿಸಿ, ತೀರ್ಥಶಠಕೋಪಾದಿಗಳನ್ನು ಕೊಡಿಸಿ, ಮಠಕ್ಕೆ ಬಂದು ಭಕ್ತವತ್ಸಲನಾದ ವರದರಾಜನನ್ನು ಅರ್ಚಿಸಿ, ಭೋಜನಮಾಡಿ ಉಳಿದ ಅನ್ನವನ್ನೂ ಶ್ರೀಪಾದತೀರ್ಥವನ್ನೂ ಶಿಷ್ಯನಿಗೆ ಅನುಗ್ರಹಿಸಿದರು. ದೇವರಾಜಮುನಿಯು ಆಚಾರ್ಯರ ಮುಖಾಂತರ ನಾಲ್ಕುಸಾವಿರ ದಿವ್ಯಪ್ರಬಂಧಗಳನ್ನೂ ಕಲಿತನು. ಹೀಗೆ ಆಚಾರ್ಯರು ಕೂರನಾಥ, ದಾಶರಥಿ, ದೇವರಾಜಮುನಿಗಳೊಡನೆ ಶ್ರೀರಂಗದಲ್ಲಿ ಸುಖವಾಗಿರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯಜ್ಞಮೂರ್ತಿ ಪರಾಜಯವೆಂಬ ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು.

## ೨೬

ಅನಂತರ ಆಚಾರ್ಯರು -'ಈ ದೇವರಾಜಮುನಿಯು ಪ್ರಜ್ಞೆ, ವಿದ್ಯೆ - ಇವುಗಳಲ್ಲಿ ನನಗಿಂತಲೂ ಶ್ರೇಷ್ಠನೆಂಬುದರಲ್ಲಿ ಸಂಶಯವಿಲ್ಲ. ದೇವರಾಜನ ಕೃಪಾಕಟಾಕ್ಷದಿಂದ ಈತನು ನನ್ನ ಶಿಷ್ಯನಾದನು. ಇವನನ್ನು ವಾದದಲ್ಲಿ ಯಾರೂ ಜಯಿಸಲಾರರು. ಆದುದರಿಂದ ನನಗೆ ಸಮಾನವಾದ ವೈಭವದಿಂದ ಮತ್ತೊಂದು ಮಠವನ್ನು ಏರ್ಪಡಿಸಬೇಕು'- ಎಂದು ಯೋಚಿಸಿ ಹಾಗೆ ಮಾಡಿದರು.

ಇದಾದ ಕೆಲವು ದಿನಗಳಲ್ಲಿ, ಸಭಕ್ತಗ್ರಾಮಪೂರ್ಣ, ಮರುಧಗ್ರಾಮಪೂರ್ಣ, ಅನಂತಾರ್ಯ, ಯಜ್ಞೇಶ ಎಂಬ ನಾಲ್ವರು ವೈಷ್ಣವರು ಯತಿರಾಜರ ಆಶ್ರಮಕ್ಕೆ ಬಂದರು. ಆಚಾರ್ಯರು ಅವರನ್ನು ದೇವರಾಜಮುನಿಯ ಸಮೀಪಕ್ಕೆ ಕಳುಹಿಸಲು, ಅವರು -'ಆಚಾರ್ಯರ ಅಪ್ಪಣೆಯಂತೆ ನಾನು ನಿಮಗೆ ಪಂಚಸಂಸ್ಕಾರಾದಿಗಳನ್ನು ನಡೆಸುವೆನು. ಆದರೆ ತಾವು ಮಾತ್ರ ಲಕ್ಷ್ಮಣಾಚಾರ್ಯರ ಪಾದಗಳೇ ರಕ್ಷಕವೆಂಬುದನ್ನು ಮರೆಯಬೇಡಿ'- ಎಂದು ಎಚ್ಚರಿಸಿದರು.

ಇನ್ನು ಕೆಲವು ದಿನಗಳಾದ ಮೇಲೆ ಆಚಾರ್ಯರ ಸೇವೆಗಾಗಿ ಪಶ್ಚಿಮದಿಂದ ಕೆಲವರು ವೈಷ್ಣವರು ಶ್ರೀರಂಗಕ್ಕೆ ಬಂದರು. ಅಲ್ಲಿರುವವರನ್ನು 'ಮನ್ನಾಥನ ಮಠವೆಲ್ಲಿ!'- ಎಂದು ಕೇಳಿದರು. 'ಯಾವ ಮನ್ನಾಥನ ಮಠ?' 'ಮನ್ನಾಥನೆಂದು ನಾವು ಒಬ್ಬರನ್ನೇ ಕೇಳಿರುವುದು. ನಮಗೆ ಈ ಹೆಸರಿನ ಮತ್ತೊಬ್ಬರು ತಿಳಿದಿಲ್ಲ'. 'ಈಚೆಗೆ ದೇವರಾಡ್ದೇವಮನ್ನಾಥ, ದೇವರಾಜಮುನಿ ಎಂದು ಮತ್ತೊಬ್ಬ ಯತಿಶ್ರೇಷ್ಠನು ಈ ಶ್ರೀರಂಗದಲ್ಲಿ ಬಂದಿರುವನು'. 'ನಮ್ಮ ವೈಷ್ಣವಸಿದ್ಧಾಂತ ನಿರ್ವಾಹಕರಾಗಿಯೂ, ರಾಮಾನುಜರೆಂದು ಪ್ರಸಿದ್ಧರಾಗಿಯೂ, ಜಗದ್ಗುರುವಾಗಿಯೂ ಇರುವ ಮನ್ನಾಥನನ್ನೇ ನಾವು ಕೇಳುವುದು'- ಎಂದು ವೈಷ್ಣವರೆನ್ನಲು ಆಚಾರ್ಯರ ಮಠವನ್ನು ಅವರು ತೋರಿಸಿದರು.

ಈ ಪ್ರಸಂಗವು ದೇವರಾಜಮುನಿಗೆ ತಿಳಿದ ಕೂಡಲೇ ಕಳವಳಗೊಂಡು, ಕೂಡಲೇ ತನ್ನ ವೈಭವ, ಮಠ ಎಲ್ಲವನ್ನೂ ಬಿಟ್ಟು, ಆಚಾರ್ಯರ ಬಳಿಗೆ ಬಂದು -'ಪೂಜ್ಯರೇ, ಈ ಜೀವವು ಭಗವನ್ಮಾಯೆಗೆ ಸಿಲುಕಿ ಲಕ್ಷ ಲಕ್ಷಜನ್ಮಗಳಲ್ಲಿ ಹುಟ್ಟಿ ಹುಟ್ಟಿ, ಸತ್ತು ಸತ್ತು, ಬಹು ದುಃಖಗಳನ್ನೂ ಭಯಂಕರ ನರಕಗಳನ್ನೂ ಅನುಭವಿಸಿ ಯಾವುದೋ ಅಲ್ಪಪುಣ್ಯದಿಂದ ಘುಣಾಕ್ಷರ ನ್ಯಾಯದಿಂದ ಈ ದೇಹವನ್ನು ಹೊಂದಿದೆ. ಆದರೂ ಅಹಂಕಾರದಿಂದ ಮೂಢನಾಗಿ 'ಸೋಹಂಬ್ರಹ್ಮ'ನೆಂದು ತಿಳಿದು ಸಂಸಾರಸಾಗರದಲ್ಲಿ ಮುಳುಗಿರಲು ತಮ್ಮಿಂದಲೇ ಮೇಲಕ್ಕೆ ಎತ್ತಲ್ಪಟ್ಟಿತು. ಆದರೂ ನನ್ನನ್ನು ಮೋಹಗೊಳಿಸಲು ಬೇರೆ ಇರಿಸೋಣವಾಯಿತು. ಇದರಿಂದ ಆತ್ಮನಾಶವಲ್ಲದೇ ಮತ್ತೇನು ಪ್ರಯೋಜನವಿಲ್ಲ. ಆದುದರಿಂದ ಈ ದೇಹವು ಬೀಳುವವರೆಗೂ ತಮ್ಮ ಸಮೀಪದಲ್ಲಿಯೇ ಇದ್ದು ,ತಮ್ಮ ಅಪ್ಪಣೆಯಂತೆ ತಮ್ಮ ಕೈಂಕರ್ಯವನ್ನು ಮಾಡಿಕೊಂಡಿರುವಂತೆ ಅನುಗ್ರಹಿಸಬೇಕು. ತಮ್ಮ ಪಾದಪದ್ಮಗಳಲ್ಲದೆ ಮತ್ತೆ ಯಾವುದೂ ಶಿಕ್ಷಕವಲ್ಲ' ಎಂದು ಪ್ರಾರ್ಥಿಸಲು, ಆಚಾರ್ಯರು ನಸುನಕ್ಕು ದೇವರಾಜಮುನಿಯನ್ನು ಒಳ್ಳೆಯ ಮಾತುಗಳಿಂದ ಸಂತೋಷಪಡಿಸಿ ವಿಷ್ಣುವಿನ ಆರಾಧನಕ್ರಮವನ್ನು ಉಪದೇಶಿಸಿ -'ಇದೇ ಕ್ರಮದಿಂದ ಪ್ರತಿದಿನವೂ ದೇಹಪತನಪರ್ಯಂತವಾಗಿ ನಮ್ಮ ವರದರಾಜನನ್ನು ಅರ್ಚನೆ ಮಾಡಿತ್ತಿರು. ಇದೇ ನೀನು ಮಾಡಬೇಕಾದ ಕೈಂಕರ್ಯ'- ಎಂದು ಆಜ್ಞಾಪಿಸಿದರು.

ದೇವರಾಜಮುನಿಯು ಆಚಾರ್ಯರ ಅಪ್ಪಣೆಯಂತೆ ಭಗವತ್ಕೈಂಕರ್ಯನಿರತರಾಗಿರುತ್ತ, ಲೋಕಹಿತಕ್ಕಾಗಿ ಜ್ಞಾನಾಸಾರ, ಪ್ರಮೇಯಸಾರ ಎಂಬ ಎರಡು ಗ್ರಂಥಗಳನ್ನು ದ್ರಾವಿಡಭಾಷೆಯಲ್ಲಿ ರಚಿಸಿದನು. ಜ್ಞಾನಾಸಾರವು ಸಕಲಶಾಸ್ತ್ರಾರ್ಥಗಳಿಂದ ಕೂಡಿರುವುದು. ಪ್ರಮೇಯಸಾರದಲ್ಲಿ -'ಶಿಷ್ಯನಿಗೆ ಗುರುವೇ ಪರದೈವವು. ಗುರುಪಾದಾಬ್ಜ ಕೈಂಕರ್ಯವೇ ಪರಮಪ್ರಾಪ್ಯವಾದುದು. ಗುರುವನ್ನು ಭಗವಂತನ ಸಾಕ್ಷಾದವತಾರವೆಂದು ತಿಳಿಯುತ್ತಿರಬೇಕು' ಎಂಬ ವಿಚಾರಗಳು ಹೇಳಲ್ಪಟ್ಟಿರುತ್ತವೆ.ಈ ರೀತಿಯಾಗಿ ಗ್ರಂಥಗಳನ್ನು ರಚಿಸಿ ಭಗವತ್ಕೈಂಕರ್ಯ ನಿರತರಾಗಿರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಜ್ಞಾನಸಾರ-ಪ್ರಮೇಯ ಸಾರಗಳೆಂಬ ಗ್ರಂಥದ್ವಯ ನಿರ್ಮಾಣವೆಂಬ ಇಪ್ಪತ್ತಾರನೆಯ ಅಧ್ಯಾಯವು ಮುಗಿದುದು.

೨೭

ಒಂದು ಸಲ ಯತಿರಾಜರು ವಿದ್ವದ್ಗೋಷ್ಠಿಯಿಂದ ಪರಿವೃತರಾಗಿ ಶಿಷ್ಯರಿಗೆ ಸಹಸ್ರಗೀತೆ (ತಿರುವಾಯ್ಮೊಳಿ)ಯನ್ನು ಉಪದೇಶಿಸುತ್ತಿದ್ದರು. ಆ ಗೀತೆಗಳ ಒಂದು ಪದ್ಯದಲ್ಲಿ ಬದುಕಿರುವವರೆಗೂ ಶ್ರೀವೆಂಕಟೇಶನ ಕೈಂಕರ್ಯವನ್ನು ಮಾಡುತ್ತಿರಬೇಕು ಎಂಬ ಅಭಿಪ್ರಾಯ ವಿದ್ದುದನ್ನು ಕಂಡಕೂಡಲೇ ಆಚಾರ್ಯರು ಶಿಷ್ಯರನ್ನು ಉದ್ದೇಶಿಸಿ-'ಈ ಸಭೆಯಲ್ಲಿ ಯಾರಾದರೂ ಮಹಾತ್ಮರು ಪುಷ್ಪಮಂಟಪವಾದ ವೇಂಕಟಾಚಲಕ್ಕೆ ಹೋಗಿ ಪುಷ್ಪಬೃಂದಾವನವನ್ನು ಮಾಡಿ ತುಲಸೀಮಾಲೆ ಮೊದಲಾದವುಗಳಿಂದ ವೆಂಕಟೇಶನ ಕೈಂಕರ್ಯವನ್ನು ಮಾಡುವವರು ಉಂಟೇ?'- ಎಂದು ಕೇಳಲು, ಅನಂತಾರ್ಯನೆಂಬುವರು ಎದ್ದು -'ಇದೋ ಈ ಸೇವಕನು ತಮ್ಮ ಇಷ್ಟವನ್ನು ನಡೆಸಿಕೊಡಲು ಸಿದ್ಧನಾಗಿರುವೆನು'- ಎಂದು ಹೇಳಿ, ಆಚಾರ್ಯರನ್ನು ವಂದಿಸಿ, ಅವರ ಅನುಮತಿಯಿಂದ ವೇಂಕಟಾಚಲಕ್ಕೆ ಹೋಗಿ, ಬೃಂದಾವನವನ್ನು ರಚಿಸಿ, ಅದಕ್ಕೆ'ರಾಮಾನುಜ' ಎಂಬ ಹೆಸರನ್ನಿಟ್ಟು, ಪುಷ್ಪಮಾಲಾದಿಗಳಿಂದ ಭಗವತ್ಕೈಂತರ್ಯವನ್ನು ನಡೆಸುತ್ತಿದ್ದನು.

ಆಚಾರ್ಯರು ಶಠಾರಿಸೂಕ್ತಿಯ ಅರ್ಥವನ್ನು ಮೂರುಸಾರಿ ಪ್ರವಚನಮಾಡಿ ರಂಗನಾಥನ ಅನುಮತಿಯಿಂದ ವೇಂಕಟಾಚಲಕ್ಕೆ ಹೊರಟರು. ದಾರಿಯಲ್ಲಿ ಮಹಿತಕ್ಷೇತ್ರದಲ್ಲಿ ಇಳಿದು, ಪದ್ಮಲೋಚನಭಗವಂತನನ್ನು ವಂದಿಸಿ ನಿತ್ಯಕ್ರಿಯೆಗಳನ್ನು ಮುಗಿಸಿ ಮುಂದಕ್ಕೆ ದಿವ್ಯದೇಶಗಳ ದರ್ಶನ ಮಾಡುತ್ತ, ದೇಹಲೀ ನಗರದಲ್ಲಿ ಭಗವಾನ್ ತ್ರಿವಿಕ್ರಮನನ್ನು ಸೇವಿಸಿ ಚಿತ್ರಕೂಟವನ್ನು ತಲುಪಿದರು. ಅದು ಶೈವಸಮಾಕ್ರಾಂತವಾಗಿತ್ತು. ಅದನ್ನು ಸರಿಪಡಿಸಲು ಸಮಯವಿಲ್ಲವೆಂದು ಮುಂದೆ ಹೊರಟು ಅಷ್ಟಸಹಸ್ರಗ್ರಾಮವೆಂಬ ಊರಿನ ಸಮೀಪಕ್ಕೆ ಹೋದರು. ಆ ಊರಿನಲ್ಲಿ ವರದಾಚಾರ್ಯ-ಯಜ್ಞೇಶ ಎಂಬ ಪರಮದರಿದ್ರನೂ ಪರಮಧನಿಕನೂ ಆದ ಇಬ್ಬರು ಆಚಾರ್ಯರ ಶಿಷ್ಯರಿದ್ದರು. ಆಚಾರ್ಯರು ಅನೇಕ ಶಿಷ್ಯರೊಡನೆ ಇದ್ದುದರಿಂದ ಧನಿಕ ಶಿಷ್ಯನಿಗಾಗಿ ತಮ್ಮ ಆಗಮನವನ್ನು ಇಬ್ಬರ ಶಿಷ್ಯರೊಡನೆ ಹೇಳಿ ಕಳುಹಿಸಿದನು. ಆ ಧನಿಕ ಶಿಷ್ಯನಾದ ಯಜ್ಞೇಶನು ಮಾರ್ಗಾಯಾಸದಿಂದ ಬಳಲಿಬಂದಿದ್ದ

ಆ ಶಿಷ್ಯರ ಯೋಗಕ್ಷೇಮವನ್ನು ಸ್ವಲ್ಪವೂ ವಿಚಾರಿಸದೆ ಆಚಾರ್ಯರೊಬ್ಬರ ಸೇವೆಗೆ ಬೇಕಾದುದನ್ನು ಮಾತ್ರ ಹವಣಿಸತೊಡಗಿದನು. ಇದನ್ನು ಕೇಳಿದ ಆಚಾರ್ಯರು ಅವನ ಮನೆಗೆ ಹೋಗದೇ ದರಿದ್ರ ಶಿಷ್ಯನಾದ ವರದಾಚಾರ್ಯನ ಮನೆಯನ್ನೇ ಹುಡುಕಿಕೊಂಡು ಹೋದರು. ಆ ಸಮಯದಲ್ಲಿ ವರದಾಚಾರ್ಯನು ಭಿಕ್ಷಾವೃತ್ತಿಗಾಗಿ ಹೋಗಿದ್ದನು. ಅವನ ಹೆಂಡತಿ (ಕಾರ್ಪಾಸಾರಾಮಲಕ್ಷ್ಮಿ)ಯು ಸರಿಯಾಗಿ ಉಟ್ಟುಕೊಳ್ಳಲು ಬಟ್ಟೆಯೂ ಇಲ್ಲದ್ದರಿಂದ ಮನೆಯ ಬಾಗಿಲನ್ನು ಹಾಕಿಕೊಂಡು ಒಳಗೆ ಮಂತ್ರರತ್ನದ ಪಾರಾಯಣದಲ್ಲಿದ್ದಳು. ಆಚಾರ್ಯರು ಕೂಗಿದ ಧ್ವನಿಯಿಂದಲೇ ಆಕೆಯು -'ನಮ್ಮ ಅದೃಷ್ಟವು ಫಲಿಸಿತು. ಆದರೆ ಈ ಅವಸ್ಥೆಯಲ್ಲಿ ನಾನು ಬಾಗಿಲನ್ನು ಹೇಗೆ ತೆರೆಯಲಿ? ತೆರೆಯದಿದ್ದರೆ ಹೊರಟು ಹೋಗುವರು. ನನ್ನ ಪತಿಯು ತರುವ ಭಿಕ್ಷೆಯಾದರೂ ಇಷ್ಟು ಜನಕ್ಕೂ ಏನೇನೂ ಸಾಲದು' ಎಂದು ಚಿಂತಿಸುತ್ತ ಲಜ್ಜೆಯಿಂದ ಒಳಗಿಂದಲೇ ಚಪ್ಪಾಳೆ ಹಾಕಿದಳು. ಆಚಾರ್ಯರು ಅಭಿಪ್ರಾಯವನ್ನು ಊಹಿಸಿ, ತಲೆಗೆ ಸುತ್ತಿದ್ದ ಬಟ್ಟೆಯನ್ನು ತೆಗೆದು ಒಳಕ್ಕೆ ಎಸೆಯಲು, ಅದನ್ನೇ ಉಟ್ಟುಕೊಂಡು ಹೊರಗೆ ಬಂದು ಆಚಾರ್ಯರಿಗೆ ವಂದಿಸಿ, ಎಲ್ಲರನ್ನೂ ಕುಳ್ಳಿರಿಸಿ, ಅರ್ಘ್ಯಪಾದ್ಯಾದಿಳಿಂದ ಯಥಾಶಕ್ತಿಯಾಗಿ ಉಪಚರಿಸಿ, ಅವರೆಲ್ಲರ ಆತಿಥ್ಯದ ವಿಷಯವಾಗಿ ಚಿಂತಿಸತೊಡಗಿದಳು. 'ಶರೀರಮರ್ಥಂ ಪ್ರಾಣಾಂಶ್ಚ ಸದ್ಗುರುಭ್ಯೋ ನಿವೇದಯೇತ್। ಶರೀರಂ ವಸುವಿಜ್ಞಾನಂ ವಾಸಃ ಕರ್ಮಗುಣಾನಸೂನ್। ಗುರ್ವರ್ಥಂ ಧಾರಯೇದ್ಯಸ್ತು ಸ ಶಿಷ್ಯೋನೇತರ ಸ್ಮೃತಃ॥ ಎಂದೂ, ಗುರುವಿನ- ಅವರ ಭಕ್ತರ ಕೈಂಕರ್ಯಕ್ಕಾಗಿ ಏನು ಪಾಪಮಾಡಿದರೂ ತಪ್ಪಲ್ಲ, ಹಿಂದೆ ಪರಕಾಲನು (ತಿರುಮಂಗೈಆಳ್ವಾರ್) ದಾರಿಯಲ್ಲಿ ನಿಂತು ಕಳ್ಳತನದಿಂದ ಹಣವನ್ನು ಹೊಂದಿಸಿ ತದೀಯಾರಾಧನವನ್ನು ಮಾಡಿ ಪುಣ್ಯಶಾಲಿಯಾಗಲಿಲ್ಲವೇ? ಸಾಕ್ಷಾದ್ಭಗವಂತನೇ 'ನನಗಾಗಿ ಮಾಡುವ ಪಾಪವೂ ಪುಣ್ಯಪ್ರದವಾಗುವುದೆಂದೂ, ನನ್ನನ್ನು ತಿರಸ್ಕರಿಸಿಮಾಡಿದ ಪುಣ್ಯವೂ ಪಾಪಕ್ಕೆ ಕಾರಣವಾಗುವುದೆಂದು ಹೇಳಿರುವನಲ್ಲವೇ? ಈ ಊರಿನಲ್ಲಿ ಶ್ರೀಮಂತನಾದ ವೈಶ್ಯನೊಬ್ಬನು ನನ್ನನ್ನು ಬಹುದಿವಸಗಳಿಂದ ಅಪೇಕ್ಷಿಸುತ್ತಿರುವನು. ಈ ತುಚ್ಛವಾದ ಶರೀರವನ್ನು ಅವನಿಗೆ ಒಪ್ಪಿಸಿ ತದೀಯಾರಾಧನವನ್ನು ಮಾಡುವೆನು.' ಎಂದು ನಿಶ್ಚಯಿಸಿ, ಆಚಾರ್ಯರನ್ನು ಕುರಿತು ತಾವೆಲ್ಲರೂ ಸ್ವಲ್ಪಹೊತ್ತು ವಿಶ್ರಮಿಸಿಕೊಳ್ಳಿ. ಈಗಲೇ ಪದಾರ್ಥಗಳೆಲ್ಲವನ್ನೂ ಅಣಿಮಾಡಿಕೊಂಡು ಬರುವೆನೆಂದು ಹೇಳಿ, ವೈಶ್ಯನ ಬಳಿಗೆ ಹೋಗಿ ತನ್ನ ಅಭಿಪ್ರಾಯವನ್ನು ತಿಳಿಸಿದಳು. ಅನೇಕ ದಿನಗಳಿಂದ ತಾನೇ ಮಾತಾಡಿಸಿದರೂ ಮಾತಾಡದೇ, ಅಮೂಲ್ಯವಾದ ವಸ್ತ್ರಾಭರಣಗಳನ್ನು ಕೊಟ್ಟರೆ ಆಕಡೆ ತಿರುಗಿಯೂ ನೋಡದೆ ಇದ್ದ ಆಕೆಯು ತಾನಾಗಿ ಬಂದಿರುವುದನ್ನು ಕಂಡು ಆನಂದಪರವಶನಾದ ವೈಶ್ಯನು ಅಪರಿಮಿತವಾದ ಪದಾರ್ಥಗಳನ್ನು ಒದಗಿಸಿಕೊಟ್ಟನು. ಪದಾರ್ಥಗಳೆಲ್ಲವೂ ಬಂದಮೇಲೆ ಸಹಾಯಕ್ಕೆ ಕೆಲವರನ್ನು ಕೊಟ್ಟು ನೀನೇ ಅಡಿಗೆಯನ್ನು ಮಾಡೆಂದು ಆಚಾರ್ಯರು ಆಕೆಗೆ ಹೇಳಲು ಎಲ್ಲವೂ ಸಿದ್ಧವಾಯಿತು. ಆಚಾರ್ಯರು ಶಿಷ್ಯರೊಡನೆ ಅವಳ ಆತಿಥ್ಯವನ್ನು ಸಂತೋಷದಿಂದ ಸ್ವೀಕರಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಅಷ್ಟಸಹಸ್ರಗ್ರಾಮದಲ್ಲಿ ಕಾರ್ಪಾಸಾರಾಮವರದಾಚಾರ್ಯನ ಮನೆಯಲ್ಲಿ ಭಗವದ್ರಾಮಾನುಜಾರ್ಚನವೆಂಬ ಇಪ್ಪತ್ತೇಳನೇ ಅದ್ಯಾಯವು ಮುಗಿದುದು.

## ೨೮

ಆಚಾರ್ಯರು ನಿತ್ಯಕ್ರಿಯೆಗಳಾದಮೇಲೆ ವರದಾಚಾರ್ಯನ ಮನೆಯಲ್ಲಿ ಶಿಷ್ಯರಿಗೆ ಉಪದೇಶಮಾಡುತ್ತಿರಲು, ಭಿಕ್ಷಾವೃತ್ತಿಯನ್ನು ಮುಗಿಸಿಕೊಂಡು ವರದಾಚಾರ್ಯನು ಮನೆಗೆ ಬಂದನು. ಬಂದು ಆಚಾರ್ಯರನ್ನು ವಂದಿಸಿ, ಎಲ್ಲ ವಿಚಾರವನ್ನೂ ಹೆಂಡತಿಯಿಂದ ತಿಳಿದನು. ಎಲ್ಲವನ್ನೂ ಕೇಳಿ ಬಹಳಸಂತುಷ್ಟನಾಗಿ ಹೆಂಡತಿಯನ್ನು ನೋಡಿ- 'ನೀನು ನಿಜವಾಗಿಯೂ ನನ್ನ ಹೆಂಡತಿಯಲ್ಲ, ದೇವತೆಯೇ ಸರಿ-ಹೀಗೆ ಆಚಾರ್ಯರ ಆತಿಥ್ಯವನ್ನು ಮಾಡಲು ಸರ್ವಸ್ವವನ್ನೂ ತ್ಯಾಗಮಾಡುವ ಶಕ್ತಿಯು ಮತ್ತೇ ಹೇಗೆ ಬಂದೀತು? ಎಂದು ಹೇಳಿ, ಆಚಾರ್ಯರ ಬಳಿಗೆ ಬಂದು ಪಾದಗಳನ್ನು ಹಿಡಿದು ಸ್ತೋತ್ರಮಾಡಿದನು.- 'ನಮಸ್ತೇ ಪುರುಷಶ್ರೇಷ್ಠ ಯತೀಶ್ವರ ನಮೋನಮಃ। ಹಿತಾಯ ಲೋಕಸ್ಯ ಚರಾಚರಸ್ಯ ತವಾವತಾರಃ ಕಿಲ ಲಕ್ಷ್ಮಣಾರ್ಯ । ಯಥಾವತಾರೋ ಜಗತಾಂ ಹಿತಾಯ ಹರೇಶ್ಚ ವಿಷ್ಣೋರ್ಜಗದಾಶ್ರಯಸ್ಯ॥ ತ್ವಂ ಸರ್ವವಿತ್ಸರ್ವವಿದಾಂ ವರಿಷ್ಠ ಸ್ಸಾಕ್ಷಾದ್ಧರೇಸ್ಸಂಪ್ರತಿಪನ್ನರೂಪಃ । ತಸ್ಮಾಚ್ಚತೇ ಲಕ್ಷ್ಮಣದೇಶಿಕೇಂದ್ರ ಕರ್ಮಾಣಿ ಚಿತ್ರಾಣಿ ವಿಲಕ್ಷಣಾನಿ॥ ಪಾತುಂ. ತ್ವದನ್ಯೋ ಭುವಿ ವಿದ್ಯತೇ ಕಸ್ತಂ ಜೀವಲೋಕಂ ಯತಿರಾಜ ಶಕ್ತ॥ ಯಥಾಹಿನಾ ನಾನ್ಯಜನಸ್ಸಮರ್ಥೋ ದಷ್ಟಂ ಜನಂ ಜೀವಯಿತುಂ ನರೇಂದ್ರಾತ್॥ ಧ್ವಾಂತಂ ಯಥಾ ನಾಶಯಿತುಂ ರವಿಂ ವಿನಾ ನಿದಾಘತಪ್ತಸ್ಯ ಯಥೋದಕಂ ವಿನಾ। ಅನ್ಯತ್ಸಮರ್ಥಂ ನಹಿ ವಿದ್ಯತೇ ತಥಾ ಸಂಸಾರತಪ್ತಸ್ಯ ತವಾಂಘ್ರಿಪೂಜನಾತ್॥ ಯದಂಘ್ರಿ ಸಂಸ್ಪರ್ಶನತೋ ವಿಸೃಜ್ಯ ತಾಂ ತದಬ್ರಹ್ಮರಕ್ಷಸ್ತ್ವ ಕಳೇಬರಂ ಸ್ವಯಂ। ಜಗಾಮ ಲೋಕಂ ಸುರಸಿದ್ಧಸೇವಿತಂ ತಸ್ಮೈ ನಮಸ್ತೇ ಗುರುವೇ ಮಹಾತ್ಮನೇ॥ ಭೂಮ್ಯಾಂ ತ್ವಯಾದ್ಯಜನನಂ ನಕೃತಂ ಯದಿಸ್ಯಾದ್ಯೋಗೀಶ ಮಾದೃಶಜನಸ್ಯಗತಿಃ ಕಥಂಸ್ಯಾತ್। ವಿದ್ವಜ್ಜನಾ ಅಪಿ ಭೃಶಂ ಕಲಿದತ್ತಚಿತ್ತಾಃ ಪಾಷಂಡವೃತ್ತಿ ನಿರತಾ ನಿರಯೇ ಪತಂತಿ॥ ಕೃಪಾಂ ವಿನಿಕ್ಷಿಪ್ಯ ಮಯಿತ್ವಮಾಗತೋ ಹ್ಯಕಿಂಚನೇ ಸಂಪ್ರತಿ ಶಿಷ್ಯಸಂವೃತಃ।ವಿಮೃಗ್ಯ ಕಾರ್ಪಾಸನಗಾಚಿತಂ ಗೃಹ ಪೂತಂ ವಿಧಾತುಂ ಸ್ವಪದಾಬರೇಣುಭಿಃ॥ ಸಂದರ್ಶನಾಚ್ಚ ಭವತಾ ಮಧುನಾ ಯತೀಂದ್ರ ಪೂರ್ವಾರ್ಜಿತಾನಿ ದುರಿತಾನಿ ವಿನಾಶಮಾಪುಃ। ಧನ್ಯೋಹಮಸ್ಮಿ ಕೃತಕೃತ್ಯತಮೋಹಮಸ್ಮಿ ಸರ್ವೇಚ ಮತ್ಪಿತೃಗಣಾಸ್ಸುರಲೋಕಮಾಪುಃ॥

ಹೀಗೆ ಸ್ತೋತ್ರಮಾಡಿ ಆಚಾರ್ಯರ ಶ್ರೀಪಾದತೀರ್ಥವನ್ನೂ ಪ್ರಸಾದವನ್ನೂ ಪತ್ನಿಸಹಿತನಾಗಿ ಸ್ವೀಕರಿಸಿದನು. ಆ ದಂಪತಿಗಳ ಅತಿಶಯವಾದ ಭಕ್ತಿಯನ್ನೂ, ಪ್ರೀತಿಯನ್ನೂ ಕಂಡು ಪ್ರೀತರಾದ ಆಚಾರ್ಯರು ಅಲ್ಲಿಯೇ ಕೆಲವು ದಿನಗಳಿದ್ದರು.

ಆ ದಿನದ ತದೀಯಾರಾಧನವು ಮುಗಿದ ಕೂಡಲೇ ದಂಪತಿಗಳು ತೀರ್ಥಪ್ರಸಾದಗಳನ್ನು ತೆಗೆದುಕೊಂಡು ವೈಶ್ಯನ ಮನೆಗೆ ಹೋದರು. ತೀರ್ಥಪ್ರಸಾದಗಳನ್ನು ಸ್ವೀಕರಿಸಿದ ಕೂಡಲೇ ಆ ಸಾಧ್ವಿಯು ತನ್ನ ಮಾತಿನಂತೆ ನಡೆದುಕೊಳ್ಳುವ ನಿಶ್ಚಯಜ್ಞಾನದಿಂದಲೇ ವೈಶ್ಯನ ಮನಸ್ಸೂ ಬದಲಾಗಿ ಆಕೆಯನ್ನು ಕುರಿತು -'ನೀನು ನನ್ನ ಮಾತೆ, ನಿನ್ನ ಪತಿಯೇ ನನ್ನ ತಂದೆಯು. ನಾನು ಕಾಮಾತುರನಾಗಿ ಮಾಡಬಾರದ ಕೆಲಸವನ್ನು ಮಾಡಬಯಸುತ್ತಿದ್ದೆ.

ದಯವಿಟ್ಟು ನನ್ನನ್ನು ಆಚಾರ್ಯರ ಶಿಷ್ಯನನ್ನಾಗಿ ಮಾಡಿಕೊಡಬೇಕು. ನಾನು ಮಾಡಿದ ತಪ್ಪುಗಳೆಲ್ಲವನ್ನೂ ಕ್ಷಮಿಸಬೇಕು'- ಎಂದು ಅನೇಕ ವಿಧವಾಗಿ ಬೇಡಿಕೊಳ್ಳಲು, ಅವನನ್ನು ಆಚಾರ್ಯರ ಬಳಿಗೆ ಕರೆದುಕೊಂಡು ಬರಲು, ಅವರು ಕರುಣೆಯಿಂದ ಆತನಿಗೆ ಪಂಚಸಂಸ್ಕಾರಗಳನ್ನು ಮಾಡಿ ಶಿಷ್ಯನನ್ನಾಗಿ ಮಾಡಿಕೊಂಡರು. ಅವನು ತನ್ನ ಸರ್ವಸ್ವವನ್ನೂ ಆಚಾರ್ಯರಿಗೆ ಒಪ್ಪಿಸಿ ಕೃತಕೃತ್ಯನಾದನು. ಆಚಾರ್ಯರು ಕಾರ್ಪಾಸಾರಾಮವರದನ ಮನೆಯಲ್ಲಿಯೇ ಆ ದಂಪತಿಗಳ ಆತಿಥ್ಯದಲ್ಲಿ ಮತ್ತೂ ಕೆಲವು ದಿವಸಗಳಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ವೈಶ್ಯನಿಗೆ ವೈಷ್ಣವತ್ವ ಸಿದ್ಧಿಯೆಂಬ ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

ಇತ್ತ ಯಜ್ಞೇಶನು ತನ್ನ ಗುರುವಿನ ಆಗಮನವನ್ನು ಕೇಳಿ ಸಂಭ್ರಮದಿಂದ ಬಹುವಿಧವಾದ ಸಾಮಾಗ್ರಿಗಳನ್ನು ಸಿದ್ಧಪಡಿಸಿಕೊಂಡು, ಕಮಲವು ಸೂರ್ಯೋದಯವನ್ನು ಎದುರುನೋಡುತ್ತಿರುವಂತೆ ಬಂಧುಸಹಿತನಾಗಿ ಆಚಾರ್ಯರನ್ನು ನಿರೀಕ್ಷಿಸುತ್ತಿದ್ದನು. ಆಚಾರ್ಯರ ದರ್ಶನವಾಗದಿರಲು ಅವರ ವಿಚಾರವನ್ನು ತಿಳಿಯಲು ಶಿಷ್ಯರನ್ನು ಕಳುಹಿಸಿದನು. ಎಲ್ಲ ವಿಚಾರವನ್ನೂ ತಿಳಿದ ಶಿಷ್ಯರು ನಡೆದ ವೃತ್ತಾಂತವನ್ನು ತಿಳಿಯಪಡಿಸಿದರು. ಇದನ್ನು ಕೇಳಿದ ಯಜ್ಞೇಶನು ಬಹುದುಃಖಿತನಾಗಿ, ಆಚಾರ್ಯರ ಬಳಿಗೆ ಹೋಗಿ ಪಾದಗಳಲ್ಲಿ ಬಿದ್ದು ಅತ್ತನು. ಆಚಾರ್ಯರು ಕೃಪೆಯಿಂದ ಆತನನ್ನು ಹಿಡಿದೆತ್ತಿ ಲೋಕಶಿಕ್ಷಣಕ್ಕಾಗಿ ನುಡಿದರು.

'ಎಲೈ ಯಜ್ಞೇಶನೇ, ಕೇಳು, ಪ್ರಪನ್ನನಾದವನಿಗೆ ಪಂಚಸಂಸ್ಕಾರ ಸಂಪತ್ತಿಯೂ, ಶ್ರೀಮದ್ಭಾಗವತಾರ್ಚನವೂ, ಅರ್ಥಪಂಚಕದ ಜ್ಞಾನವೂ, ಆಚಾರ್ಯಾಧೀನನಾಗಿರುವಿಕೆಯೂ, ಆಚಾರ್ಯರಿಗೆ ಸಂಬಂಧಪಟ್ಟವರನ್ನು ಅನುಸರಿಸುವಿಕೆಯೂ ಆತ್ಮೋಜ್ಜೀವಕರವು. ಶ್ರಮಪಟ್ಟಿರುವ ವೈಷ್ಣವನಾದ ಅತಿಥಿಯನ್ನು ಕಂಡು ಭಕ್ತಿಯಿಂದಲೂ ಸಂತೋಷದಿಂದಲೂ ಬೀಸಣಿಗೆಯಿಂದ ಬೀಸಿ, ಅರ್ಘ್ಯಪಾದ್ಯಾದಿಗಳಿಂದ ಉಪಚರಿಸಬೇಕು. ಆತನನ್ನೇ ವಿಷ್ಣುವೆಂದು ತಿಳಿದು ಪ್ರಿಯವಾದ ಮಾತುಗಳನ್ನಾಡಿ ಆತನ ಮನೆಯಲ್ಲಿಯೇ ಆತನಿರುವಂತೆ ಸುಖಭೋಜನವನ್ನು ಮಾಡಿಸಿ ಶೇಷಾನ್ನವನ್ನು ಭಕ್ತಿಯಿಂದ ಸ್ವೀಕರಿಸಬೇಕು. ಹೀಗಿರುವವನಿಗೆ ವೈಷ್ಣವತ್ವದಲ್ಲಿ ಸ್ವಲ್ಪವೂ ನ್ಯೂನತೆಯಿರುವುದಿಲ್ಲ. ಪ್ರಪನ್ನನಿಗೆ ಇಂಥ ವೈಷ್ಣವ ಅತಿಥಿ ಸತ್ಕಾರವೇ ಹಿತವಾದುದು. ನಿನ್ನಲ್ಲಿ ಅದಿಲ್ಲ, ಕೇವಲ ಡಂಭಕ್ಕಾಗಿಯೂ ಕೀರ್ತಿಗಾಗಿಯೂ ನೀನು ಪ್ರಯತ್ನಿಸುತ್ತಿರುವೆ. ನಾವು ಎಂದಿಗೂ ಡಾಂಭಿಕರ ಮನೆಗೆ ಬರಲಾರೆವು. ಲೋಕದಲ್ಲಿ ಸಾತ್ವಿಕವಾದ ದಾನವೇ ಭಗವದರ್ಪಿತವಾಗುವುದು'-

ಇದನ್ನು ಕೇಳಿ ಯಜ್ಞೇಶನು -'ಓ ದಯಾನಿಧಿ, ನಾನು ಮಾಡಿದ ತಪ್ಪುಗಳನ್ನು ದಯವಿಟ್ಟು ಕ್ಷಮಿಸಬೇಕು. ತಮ್ಮ ಆಗಮನದಿಂದುಂಟಾದ ಆನಂದದಿಂದ ಇಲ್ಲಿಗೆ ಬಂದ ವೈಷ್ಣವರನ್ನು ಮರೆತು ಶ್ರೀವೈಷ್ಣವಗೋಷ್ಠಿಯಿಂದ ಪರಿವೃತರಾದ ತಮ್ಮ ಸೇವೆಯನ್ನು ಮಾಡಬೇಕೆಂಬ ಯೋಚನೆಯಲ್ಲಿಯೇ ಇದ್ದನು. ಇದು ಸುಳ್ಳಲ್ಲ, ಅಹಂಕಾರದಿಂದ ನಾನು

ಹಾಗೆ ಮಾಡಿದವನಲ್ಲ. ಇದನ್ನು ಆಲೋಚಿಸಿ ನನ್ನನ್ನು ರಕ್ಷಿಸಬೇಕು'-- ಎಂದು ಪ್ರಾರ್ಥಿಸಲು ಆಚಾರ್ಯರು -'ಎಲೈ ವತ್ಸ ಕೇಳು, ನಿನಗೆ ಹಿತವಾದುದನ್ನು ಹೇಳುವೆನು. ಅತಿಥಿ ಸತ್ಕಾರವೊಂದು ವಿನಾ ಮಿಕ್ಕ ಎಲ್ಲಾ ಗುಣಗಳು ನಿನ್ನಲ್ಲಿವೆ. ಆದುದರಿಂದ ಈಗಿನಿಂದಲೇ ನಿನಗೆ ಇಷ್ಟವಿರುವುದಾದರೆ ಇಲ್ಲಿರುವ ಮಹಾತ್ಮರಾದ ಶ್ರೀವೈಷ್ಣವರ ಬಟ್ಟೆಗಳನ್ನು ಕ್ರಮವಾಗಿ ಪ್ರತಿದಿನವೂ ಒಗೆದುಕೊಡು. ಶ್ರದ್ಧೆಯಿಂದ ಈ ಕೆಲಸ ಮಾಡು'- ಎಂದು ಅಪ್ಪಣೆಮಾಡಿ ಶಿಷ್ಯರೊಡನೆ ಆ ಗ್ರಾಮದಿಂದ ಹೊರಟರು.

ಕಾಂಚಿಯನ್ನು ತಲುಪಿ ಕಾಂಚೀಪೂರ್ಣರೊಡನೆ ವರದರಾಜನನ್ನು ವಂದಿಸಿ, ಅಲ್ಲಿ ಮೂರು ದಿವಸಗಳಿದ್ದು, ಅವರಿಂದ ಬೀಳ್ಕೊಂಡು ವೇಂಕಟಾಚಲಕ್ಕೆ ಹೊರಟರು. ವೇಂಕಟಾಚಲದ ದಕ್ಷಿಣಭಾಗದಲ್ಲಿ 'ಕಪಿಲತೀರ್ಥ' ಇದೆ. ಅದರ ದಡದಲ್ಲಿ ಶಠಕೋಪನೇ ಮೊದಲಾದ ಹತ್ತು ಜನ ಯೋಗೀಂದ್ರರಿರುವುದರಿಂದ ''ದಿವ್ಯಸೂರಿತೀರ್ಥ''ವೆಂದೂ ಅದು ಪ್ರಸಿದ್ಧವಾಗಿದೆ. ಆಚಾರ್ಯರು ಆ ತೀರ್ಥದಲ್ಲಿ ಸ್ನಾನಜಪಾದಿಗಳನ್ನು ಮಾಡಿ, ಶಠಕೋಪಾದಿಗಳನ್ನು ವಂದಿಸಿ,ಪರ್ವತ ಶ್ರೇಷ್ಠವನ್ನು ಕಂಡು ವಿಸ್ಮಿತರಾಗಿ ಅಲ್ಲಿಯೇ ಕೆಲವು ದಿನಗಳವರೆಗೆ ಇರುತ್ತಿದ್ದರು.

ಅನಂತರ ಆ ದೇಶದ ರಾಜ ವಿಟ್ಠಲದೇವನೆಂಬುವನು ಯತಿರಾಜರ ವೈಭವವನ್ನು ಕೇಳಿ ಅವರ ಸೇವೆಗಾಗಿ ಅಲ್ಲಿಗೆ ಬಂದನು. ಬಂದು ಆಚಾರ್ಯರನ್ನು ಸೇವಿಸಿ, ಆಶ್ಚರ್ಯಭರಿತನಾಗಿ ಅವರ ಶಿಷ್ಯನಾದನು. ಆಚಾರ್ಯರು ಸಹ ಆತನಿಗೆ ಪಂಚಸಂಸ್ಕಾರಗಳನ್ನು ಮಾಡಿದರು. ಆತನು ಅನೇಕವಾದ ನಿಧಿಗಳನ್ನು ಅರ್ಪಿಸಿದನು. ಮತ್ತು ಆಚಾರ್ಯರ ಶಿಷ್ಯರಾದ ಮೂವತ್ತು ಜನಗಳಿಗೂ ಮೂವತ್ತು ಕ್ಷೇತ್ರಗಳಿಂದ ಕೂಡಿದ ''ಇಳಮಂಡಯ''ವೆಂಬ ಗ್ರಾಮವನ್ನು ದಾನವಾಗಿ ಕೊಟ್ಟನು. ಆಗ ಆಚಾರ್ಯರ ಅಭಿಪ್ರಾಯವನ್ನು ತಿಳಿದ ಅನಂತಾರ್ಯರೇ ಮೊದಲಾದ ಶಿಷ್ಯರೆಲ್ಲರೂ ಅವರ ಬಳಿಗೆ ಹೋಗಿ ಭಕ್ತಿಯಿಂದ ನಮಸ್ಕರಿಸಿ -'ಎಲೈ ಗುರುವರ್ಯರೇ, ಶೇಷಾಚಲಾಧಿಪತಿಯ ಮಂಗಳಾಶಾಸನಕ್ಕಾಗಿ ಪರ್ವತಾರೋಹಣವು ನಡೆಯಲಿ. ತಮ್ಮ ಮಂಗಳಾಶಾಸನದಿಂದ ಜಗತ್ಪ್ರಭುವಾದ ವೇಂಕಟೇಶ್ವರನು ನಿತ್ಯೈಶ್ವರ್ಯದಿಂದ ಬೆಳಗುತ್ತಿರಲಿ'- ಎಂದು ವಿಜ್ಞಾಪಿಸಿಕೊಂಡರು. ತಮ್ಮ ಆಚಾರ್ಯರಲ್ಲಿ ಪ್ರಿಯರಾದ ಆಚಾರ್ಯರು - ಸರೋಯೋಗಿಯೇ ಮೊದಲಾದವರ ಮಾರ್ಗವನ್ನು ಅನುಸರಿಸಿ -'ಹಿಂದಿನ ಆಚಾರ್ಯರೆಲ್ಲರೂ ಈ ಪರ್ವತವನ್ನು ಆದಿಶೇಷನೆಂದು ಭಾವಿಸಿ ಪರ್ವತಾರೋಹಣವನ್ನು ಮಾಡದೆ ವಿನೀತರಾಗಿ ಇಲ್ಲಿಯೇ ಇದ್ದು ಶ್ರೀನಿವಾಸನಿಗೂ ವೇಂಕಟಾಚಲಕ್ಕೂ ಸಹ ಮಂಗಳಾಶಾಸನವನ್ನು ಮಾಡುತ್ತಿರುವರು. ಅವರ ಶಿಷ್ಯರಾದ ನಾನು ಹಾಗೆಯೇ ಮಾಡುವೆನು''- ಎನ್ನಲು, ಅನಂತಾರ್ಯರು --'ಆಚಾರ್ಯರೇ, ತಾವು ಪರ್ವತಾರೋಹಣ ಮಾಡದಿದ್ದರೆ ಯಾವಾಗಲೂ ನಾವು ಹಾಗೆಯೇ ಇರುವೆವು'- ಎಂದರು. ಎಲ್ಲ ಶಿಷ್ಯರೂ ಹಾಗೆಯೇ ಅಂದರು. ಅವರೆಲ್ಲರ ಮಾತನ್ನು ಕೇಳಿ, ದಿವ್ಯಸೂರಿಗಳ ಚರಿತವನ್ನು ಆಲೋಚಿಸಿ, ಆಚಾರ್ಯರು ಚಿಂತೆಗೊಳಗಾದರು. ಚೆನ್ನಾಗಿ ಆಲೋಚಿಸಿ ಪರ್ವತಾ ರೋಹಣದ ವಿಷಯವಾಗಿ ನಿಶ್ಚಯಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ವಿಟ್ಠಲದೇವರಾಜನ ರಾಮಾನುಜಾಶ್ರಯಣವೆಂಬ ಇಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

೩೦

ಹೀಗೆ ಯತಿರಾಜರು ಆಲೋಚಿಸಿ ವೇಂಕಟಾದ್ರಿಯ ಮೊದಲ ಮೆಟ್ಟಿಲನ್ನು ನಮಸ್ಕರಿಸಿ ಪರ್ವತಾರೋಹಣಕ್ಕೆ ಆರಂಭಿಸಿದರು. ಅರ್ಧದಲ್ಲಿಯೇ ಶ್ರೀಶೈಲಪೂರ್ಣರು ಶ್ರೀನಿವಾಸನ ತೀರ್ಥಪ್ರಸಾದಗಳನ್ನು ತೆಗೆದುಕೊಂಡು ಅಭಿಮುಖವಾಗಿ ಬಂದು ಆಚಾರ್ಯರಿಗೆ ಸಮರ್ಪಿಸಿದರು. ಆಚಾರ್ಯರು ಶ್ರೀಶೈಲಪೂರ್ಣರನ್ನು ಕುರಿತು - 'ಗುರುಗಳೇ, ತಾವು ನನಗಾಗಿ ಪ್ರಸಾದವನ್ನು ತೆಗೆದುಕೊಂಡು ಬರುವುದು ಯುಕ್ತವೇ? ಯಾವನಾದರೂ ಒಬ್ಬ ಬಾಲಕನ ಕೈಯಲ್ಲಿ ಕಳುಹಿಸಿದ್ದರಾಗುತ್ತಿರಲಿಲ್ಲವೇ?'-- ಎಂದು ಕೇಳಿದರು. ಅದಕ್ಕೆ ಅವರು 'ಎಲೈ ಯತಿರಾಜ, ವೇಂಕಟಾದ್ರಿಯಲ್ಲಿ ನಾಲ್ಕು ಬೀದಿಗಳಲ್ಲಿಯೂ ನೋಡಿದೆನು. ಆದರೆ ನಾನೊಬ್ಬನಲ್ಲದೆ ಮತ್ತೆ ಯಾರೂ ಬಾಲಕರು ಕಂಡು ಬರಲಿಲ್ಲ'- ಎಂದರು. ಇದನ್ನು ಕೇಳಿ ಆಶ್ಚರ್ಯಗೊಂಡ ಆಚಾರ್ಯರು ಎಲ್ಲರೊಡನೆಯೂ ಗಾಳಿಗೋಪುರವನ್ನು ದಾಟಿ ಸಮಭೂಮಿಯಲ್ಲಿ ಬರುತ್ತಿರಲು, ತಿರುಮಲೆಯಿಂದ ಅನೇಕ ಶ್ರೀವೈಷ್ಣವರೂ, ಯತಿಗಳೂ, ಅರ್ಚಕರೂ ಬಂದರು. ಅವರು ಯತೀಂದ್ರ ಉಚಿತವಾದ ಆದರ ಸತ್ಕಾರಗಳನ್ನು ಮಾಡಿದ ಮೇಲೆ ಎಲ್ಲರೂ ಪರ್ವತಾರೋಹಣ ಮಾಡಿದರು. ಆಚಾರ್ಯರು ಪರ್ವತದ ನಾಲ್ಕು ರಸ್ತೆಗಳಲ್ಲಿಯೂ ಪ್ರದಕ್ಷಿಣವಾಗಿ ಬಂದು "ಧನುರ್ಮಾಸೇ ಸಿತೇಪಕ್ಷೇ ದ್ವಾದಶ್ಯಾಮರುಣೋದಯೇ। ಆಯಾಂತಿ ಸರ್ವತೀರ್ಥಾನಿ ಸ್ವಾಮಿಪುಷ್ಕರಿಣೀ ಜಲೇ॥" ಎಂಬ ಮಹಿಮೆಯಿಂದ ಕೂಡಿದ ಸ್ವಾಮಿಪುಷ್ಕರಿಣೀ ತೀರ್ಥದಲ್ಲಿ ಮಿಂದು, ಆಹ್ನಿಕಗಳನ್ನು ಮಾಡಿ, ದೇವಾಲಯವನ್ನು ಪ್ರವೇಶಿಸಿ ಬಲಿಪೀಠದಲ್ಲಿ ನಮಸ್ಕರಿಸಿ ಪ್ರದಕ್ಷಿಣವಾಗಿ ಮಹಾನಸ (ಅಡಿಗೆಮನೆ), ಯಾಗಶಾಲೆ, ಪುಷ್ಪಮಂಟಪಾದಿಗಳನ್ನು ನೋಡಿಕೊಂಡು ಮಣಿಮಂಟಪವನ್ನು ಹೊಕ್ಕು ಸೇನೇಶಾದಿಗಳನ್ನು ನಮಸ್ಕರಿಸಿ ಆನಂದವಿಮಾನವನ್ನು ನೋಡಿ, ಹೃಷ್ಟರಾಗಿ, ರಮಾಪತಿಯಾದ ಶ್ರೀಶೀನಿವಾಸರನ್ನು ಸಂದರ್ಶಿಸಿ, ಆನಂದಪುಳಕಿತರಾಗಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ, ಇದೇ ಭೂವೈಕುಂಠವೆಂದೂ, ಅಲ್ಲಿರುವ ಪಶು ಪಕ್ಷಿ ಮೃಗಗಳೆಲ್ಲವೂ ನಿತ್ಯಸೂರಿಗಳೆಂದೂ, ತಾವು ಅಲ್ಲಿರುವುದು ಯುಕ್ತವಲ್ಲವೆಂದೂ, ವೇಂಕಟಾಚಲವನ್ನು ಇಳಿದು ಹೋಗಬೇಕೆಂದು ಯೋಚಿಸಿಕೊಂಡರು. ಆದರೆ ಶ್ರೀಶೈಲಪೂರ್ಣರು ಬಂದು ದಿವ್ಯದೇಶದಲ್ಲಿ ಮೂರು ದಿವಸಗಳಿರಬೇಕೆನ್ನಲು ಉಪವಾಸಗಳಿಂದ ಮೂರು ದಿವಸಗಳು ಭಗವತ್ಸೇವೆಯಲ್ಲಿದ್ದು,ಹೊರಡುವ ದಿವಸ ದ್ವಾದಶಸಂಖ್ಯಾಪರಿಮಿತವಾದ ದ್ರಾವಿಡಪ್ರಬಂಧವನ್ನೂ, ಭಟ್ಟನಾಥ ಕೃತಿಯನ್ನೂ ಪಠಿಸಿ ಸ್ತೋತ್ರಮಾಡಲು, ಶ್ರೀವೇಂಕಟೇಶನು ತೀರ್ಥಪ್ರಸಾದಗಳನ್ನು ಕೊಡಿಸಿ -'ಎಲೈ ಯತಿಶ್ರೇಷ್ಠ, ನಿನಗೂ ನಿನ್ನವರಿಗೂ ವಿಭೂತಿದ್ವಯವನ್ನು ಅನುಗ್ರಹಿಸಿರುವೆನು. ಇದರಲ್ಲಿ ಸಂಶಯವಿಲ್ಲ'- ಎಂದು ಅನುಗ್ರಹಿಸಲು, ಆಚಾರ್ಯರು ಧನ್ಯರಾಗಿ ವೇಂಕಟಾಚಲವನ್ನು ಇಳಿದು ಸಮೀಪದಲ್ಲಿರುವ ಪಟ್ಟಣದಲ್ಲಿರುವ ಶ್ರೀಶೈಲಪೂರ್ಣರ ಮನೆಯಲ್ಲಿ ಊಟಮಾಡಿ ಅಲ್ಲಿಯೇ ರಾಮಾಯಣ ಕಾಲಕ್ಷೇಪಮಾಡುತ್ತ ಒಂದು ವರ್ಷಕಾಲ ಇರುತ್ತಿದ್ದರು.

ಅಲ್ಲಿ ಗೋವಿಂದನು ಆಚಾರ್ಯರಾದ ಶ್ರೀಶೈಲಪೂರ್ಣರ ಕೈಂಕರ್ಯದಲ್ಲಿ ನಿರತನಾಗಿದ್ದನು. ಒಂದು ದಿನ ಆತನು ಗುರುಗಳಿಗಾಗಿ ಹಾಸಿದ ಹಾಸಿಗೆಯಲ್ಲಿ ತಾನೇ ಮಲಗಿರುವುದನ್ನು ನೋಡಿ ಸಹಿಸದೆ, ಆಚಾರ್ಯರು ಅದನ್ನು ಶ್ರೀಶೈಲಪೂರ್ಣರಿಗೆ ತಿಳಿಸಿದರು. ಅವರು ವಿಚಾರಿಸಲು, ಗೋವಿಂದನು -'ಗುರುತಲ್ಪದಲ್ಲಿ ಮಲಗುವುದಕ್ಕೆ ನರಕವೇ ಫಲವೆಂಬುದು ತಿಳಿದಿದೆ. ಆದರೂ ತಮಗೆ ಸುಖನಿದ್ರೆ ಬರುವುದಾದರೆ ನನಗೆ ನರಕವುಂಟಾದರೂ ಪರವಾಗಿಲ್ಲ'- ಎಂದನು. ಅದನ್ನು ಕೇಳಿದ ಆಚಾರ್ಯರು ಆತನು ಭಕ್ತಿಯಿಂದ ಈ ಕೆಲಸ ಮಾಡಿದನೆಂದು ಸಂತುಷ್ಟರಾದರು.

ಇನ್ನೊಂದು ಸಲ ಆಚಾರ್ಯರು ಶ್ರೀಶೈಲಪೂರ್ಣರ ಉಪವನದ ಕಡೆಗೆ ಹೋದರು. ಅಲ್ಲಿ ಗೋವಿಂದನು ಒಂದು ಸರ್ಪದ ಬಾಯಿಗೆ ಕೈಯಿಟ್ಟು ತೆಗೆದು ಅನಂತರ ಸ್ನಾನಕ್ಕೆ ಹೋದನು. ಆಗ ಆಚಾರ್ಯರು ಇದೇನೆಂದು ಕೇಳಲು ಗೋವಿಂದನೆಂದನು -'ಅಯ್ಯೋ ಪಾಪ, ಈ ಸರ್ಪದ ನಾಲಿಗೆಯಲ್ಲಿ ಮುಳ್ಳುಚುಚ್ಚಿಕೊಂಡು ಬಹು ಹಿಂಸೆ ಪಡುತ್ತಿತ್ತು, ನಾನು ಅದನ್ನು ಕಿತ್ತು ಹಾಕಿದೆನು'- ಇದನ್ನು ಕೇಳಿಯಂತೂ ಅವನ ಭೂತದಯೆಯನ್ನು ಕಂಡು ಆಚಾರ್ಯರು ಪರಮವಿಸ್ಮಿತರಾದರು.

ಅನಂತರ ಆಚಾರ್ಯರು ಶ್ರೀಶೈಲಪೂರ್ಣರನ್ನು ಶ್ರೀರಂಗಕ್ಕೆ ಹೊರಡಲು ಅನುಮತಿಯನ್ನು ಕೇಳಲು ಅವರು -'ಇಷ್ಟು ದೂರ ಬಂದ ಯತಿರಾಜನಿಗೆ ಕೊಡಲು ನನ್ನಲ್ಲಿ ಏನಿರುವುದು' ಎನ್ನಲು, ಆಚಾರ್ಯರು -'ಹಾಗಾದರೆ ಗೋವಿಂದನನ್ನು ನನಗೆ ಕೊಡಿ' ಎಂದು ಕೇಳಲು ಅವನನ್ನು ಕಳುಹಿಸಿಕೊಟ್ಟರು. ಆಚಾರ್ಯರು ಅವನನ್ನು ಕರೆದುಕೊಂಡು ಕಾಂಚೆಪುರಕ್ಕೆ ಬಂದು ವರದರಾಜನ ಸೇವೆಯಲ್ಲಿದ್ದರು.

ಇತ್ತ ಗೋವಿಂದನು ಶ್ರೀಶೈಲಪೂರ್ಣರ ಕೈಂಕರ್ಯವಿಲ್ಲದೆ ಚಿಂತೆಯಿಂದ ಕಳೆಗುಂದುತ್ತಿದ್ದನು. ಇದನ್ನು ಕಂಡ ಆಚಾರ್ಯರು 'ನೀನು ಶ್ರೀಶೈಲಪೂರ್ಣರ ಬಳಿಗೆ ಹೋಗಿ ಅವರನ್ನು ನೋಡಿಕೊಂಡು ಬಾ' ಎಂದು ಕಳುಹಿಸಿದರು. ಅವನು ಅಲ್ಲಿಗೆ ಬಂದುದನ್ನು ವೈಷ್ಣವರು ಶ್ರೀಶೈಲಪೂರ್ಣರಿಗೆ ತಿಳಿಸಲು, ಹಿಂತಿರುಗಿ ಹೋಗುವಂತೆ ಹೇಳಿದರು. ಅವರ ಪತ್ನಿಯು ಬಹಳ ದೂರದಿಂದ ಆಯಾಸಪಟ್ಟು ಬಂದಿರುವವನಿಗೆ ಅನ್ನನೀರುಗಳನ್ನಾದರೂ ಕೊಡಬೇಡವೇ ? -ಎನ್ನಲು- 'ಮಾರಿದ ಹಸುವಿಗೆ ಯಾರು ಹುಲ್ಲನ್ನು ಹಾಕುವರು'- ಎಂದರು. ಗೋವಿಂದನು ನಿರಾಶನಾಗಿ ಆಚಾರ್ಯರ ಬಳಿಗೆ ಬರಲು, ಅವರು ಅವನನ್ನು ಸಮಾಧಾನಗೊಳಿಸಿದರು.

ಅನಂತರ ಗೋವಿಂದನೊಡನೆ ಶ್ರೀರಂಗವನ್ನು ಕುರಿತು ಪ್ರಯಾಣಮಾಡುತ್ತ, ಮತ್ತೆ ಅಷ್ಟಸಹಸ್ರಗ್ರಾಮದಲ್ಲಿ ಯಜ್ಞೇಶನ ಆತಿಥ್ಯವನ್ನು ಸ್ವೀಕರಿಸಿ ರಂಗನಗರಿಯನ್ನು ತಲುಪಿದರು. ಶ್ರೀರಂಗನಾಥನು ಆದರದಿಂದ ತೀರ್ಥಪ್ರಸಾದಗಳನ್ನು ಕೊಡಿಸಿ, ವೇಂಕಟಾಚಲದ ಯಾತ್ರೆಯು ಸುಗಮವಾಗಿತ್ತೇ ? ಎಂದು ಪ್ರಶ್ನೆಮಾಡಲು,ಆಚಾರ್ಯರು ಭಗವಂತನ ದಿವ್ಯದರ್ಶನವನ್ನು ಪಡೆದು ಮಠಕ್ಕೆ ತೆರಳಿದರು.

ಹೀಗೆ ಆಚಾರ್ಯರು ವೇಂಕಟಾಚಲಯಾತ್ರೆಯನ್ನು ಮುಗಿಸಿ ಶ್ರೀಶೈಲಪೂರ್ಣರಲ್ಲಿ ೨೪ ವಿಧವಾದ ರಾಮಾಯಣಾರ್ಥವನ್ನು ಗ್ರಹಿಸಿ ಶ್ರೀರಂಗವನ್ನು ತಲುಪಿ ಸುಖವಾಗಿರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀಶೈಲಪೂರ್ಣರಿಂದ ಶ್ರೀರಾಮಾಯಣ ಶ್ರವಣವೆಂಬ ಮೂವತ್ತನೆಯ ಅಧ್ಯಾಯವು ಮುಗಿದುದು.

೩೧

ಅನಂತರ ಗುರುವೇ ದೈವವೆಂದು ಭಾವಿಸಿದ ಗೋವಿಂದನು ನಿದ್ರೆ, ಸೋಮಾರಿತನ ಎಲ್ಲವನ್ನೂ ಬಿಟ್ಟು ಯಾವಾಗಲೂ ಆಚಾರ್ಯರ ಸಮೀಪದಲ್ಲಿಯೇ ಅವರ ಕೈಂಕರ್ಯದಲ್ಲಿಯೇ ನಿರತನಾಗಿರುತ್ತಿದ್ದನು.

ಒಂದು ಸಲ ಗೋವಿಂದನ ಜ್ಞಾನ, ವೈರಾಗ್ಯ, ಗುರುಭಕ್ತಿಯೇ ಮೊದಲಾದ ಸದ್ಗುಣಗಳನ್ನು ಕಂಡ ವೈಷ್ಣವರು ಆಚಾರ್ಯರ ಎದುರಿಗೆ ಆತನನ್ನು ಶ್ಲಾಘಿಸಲು ಗೋವಿಂದನು 'ಈ ಸ್ತುತಿಯು ನನಗೆ ಯೋಗ್ಯವಾಗಿದೆ, ನ್ಯಾಯವಾಗಿದೆ'- ಎಂದನು. ಆಚಾರ್ಯರು 'ಗೋವಿಂದ, ಇತರರು ನಿನ್ನ ಗುಣಗಳನ್ನು ಹೊಗಳಿದರೆ ವಿದ್ವಾಂಸನೂ ಜ್ಞಾನಿಯೂ ಆದ ನೀನು ನೈಚ್ಯಾನುಸಂಧಾನ ಮಾಡಿಕೊಳ್ಳಬೇಕಲ್ಲದೆ ಆತ್ಮಶ್ಲಾಘನೆಯನ್ನು ಮಾಡಿ ಕೊಳ್ಳಬಹುದೇ?' ಎನ್ನಲು, ಗೋವಿಂದನು ಹೀಗೆಂದನು -'ಎಲೈ ದಯಾನಿಧಿಯೇ, ಈ ಆತ್ಮವು ಭಗವನ್ಮಾಯೆಯಿಂದಾವೃತವಾಗಿದ್ದು ಅನೇಕ ಜನ್ಮಗಳಲ್ಲಿ ಕ್ರಿಮಿಕೀಟಗಳಾಗಿ ಹುಟ್ಟಿ ಸತ್ತು, ಯಾವುದೋ ಪುಣ್ಯಲೇಶದಿಂದ (ಘುಣಾಕ್ಷರ ನ್ಯಾಯದಿಂದ) ಈ ಮನುಷ್ಯದೇಹವನ್ನು ಹೊಂದಿಯೂ ಮಾರ್ಗಭ್ರಷ್ಟವಾಗಿತ್ತಲ್ಲವೇ? ಇಂತಹ ದುರಾತ್ಮನಾಗಿದ್ದರೂ ಸಹ - ಎಲೈ ಯತಿಭೂಪತಿಯೇ ! ನಾರಾಯಣ ಸ್ವರೂಪಿಗಳಾದ ತಮ್ಮ ಅನುಗ್ರಹದಿಂದಲೇ ತಮ್ಮ ದಾಸ್ಯವು ನನಗೆ ದೊರಕಿತು. ದೇವತೆಗಳಿಗೂ ದುರ್ಲಭವಾದ ತಮ್ಮ ದಯೆಯು ನನ್ನಲ್ಲಿರಲು ನಾನು ನನ್ನನ್ನು ಹೊಗಳಿಕೊಂಡರೆ ಅದು ತಮ್ಮ ಹೊಗಳಿಕೆಯೇ ಅಲ್ಲವೇ?'- ಎನ್ನಲು ಆಚಾರ್ಯರು ಸಂತುಷ್ಟರಾಗಿ ತಾವೂ ಗೋವಿಂದನನ್ನು ಶ್ಲಾಘಿಸಿ 'ನಿರ್ಮಲವಾದ ಮನಸ್ಸಿನಿಂದ ನಿತ್ಯವೂ ನನ್ನನ್ನು ಸ್ಮರಿಸುತ್ತಿರು' ಎಂದು ಹೇಳಿ ಪ್ರೀತಿಯಿಂದ ಅಪ್ಪಿಕೊಂಡರು.

ಮತ್ತೊಂದು ಸಲ ಕೆಲವು ವೈಷ್ಣವರು ಆಚಾರ್ಯರ ಬಳಿಗೆ ಬಂದು -'ಗೋವಿಂದನು ಅರುಣೋದಯ ಸಮಯದಲ್ಲಿ ಸ್ನಾನಾಹ್ನಿಕಗಳಿಲ್ಲದೆ ವೇಶ್ಯೆಯ ಮನೆಯ ಬಾಗಿಲ ಬಳಿಯಿರುವನು' ಎಂದು ಹೇಳಲು ಆಚಾರ್ಯರು ಕರೆಸಿ ಕೇಳಿದರು. ಅದಕ್ಕೆ ಗೋವಿಂದನು 'ಅಲ್ಲಿ ಮನೆಯೊಳಗೆ ತಮ್ಮ ವಿಷಯದ ಪ್ರಬಂಧಗಳನ್ನು ಸೊಗಸಾಗಿ ಹಾಡುತ್ತಿರಲು ಆನಂದಪರವಶನಾಗಿ ಅದನ್ನು ಕೇಳುತ್ತಿದ್ದೆನು'- ಎನ್ನಲು, ಅದನ್ನು ಕೇಳಿದ ಆಚಾರ್ಯರು ಅವನ ಅತಿಶಯವಾದ ಭಕ್ತಿಗೆ ಮೆಚ್ಚಿ ಪರಮಾಶ್ಚರ್ಯಪಟ್ಟರು. ಹೀಗೆ ಗೋವಿಂದನು ಯಾವಾಗಲೂ ಆಚಾರ್ಯ ಕೈಂಕರ್ಯದಲ್ಲಿಯೇ ನಿರತನಾಗಿ ಆನಂದದಿಂದಿರುತ್ತಿದ್ದನು.

ಒಂದು ದಿನ ಶ್ರೀಶೈಲಪೂರ್ಣರ ಸಹೋದರಿಯೂ ಗೋವಿಂದನ ಮಾತೆಯೂ ಆದ ದ್ಯುತಿಮತಿಯು ಮಗನ ಬಳಿಗೆ ಬಂದು 'ನಿನ್ನ ಸತಿಯು ಋತುಮತಿಯಾಗಿರುವಳು; ಶಾಂತಿಕರ್ಮವು ನಡೆಯಲಿ' ಎನ್ನಲು, 'ಎಲೈ ತಾಯೆ, ನಾನು ಆಚಾರ್ಯರನ್ನು ಬಿಟ್ಟು ಒಬ್ಬನೇ ಇರುವಾಗ ಆಗಲಿ' ಎಂದನು. ಎಷ್ಟು ದಿನಗಳಾದರೂ ಅಂತಹ ಸಮಯವೇ ದೊರಕದಿರಲು

ಖಿನ್ನಳಾದ ದ್ಯುತಿಮತಿಯು ಯತಿರಾಜರ ಬಳಿಗೆ ಬಂದು ಹೇಳಿಕೊಳ್ಳಲು, ಆಚಾರ್ಯರು ಗೋವಿಂದ, ಕತ್ತಲೆಯಾಗಿರುವಾಗ ಋತುಶಾಂತಿಕರ್ಮವನ್ನು ಆಚರಿಸು' ಎನ್ನಲು, ಹಾಗೆಯೇ ಆಗಲೆಂದು ಗೋವಿಂದನು ರಾತ್ರಿಯಲ್ಲಿ ಶಯನದಲ್ಲಿರುವಾಗಲೂ ಜ್ಞಾನವೈರಾಗ್ಯಗಳಿಂದಲೇ ಕೂಡಿದ್ದನು. ಈ ವೃತ್ತಾಂತವನ್ನು ತಿಳಿದ ಮಾತೆಯು ದುಃಖಿತಳಾಗಿ ಮಗನನ್ನು ಕೇಳಲು -ಚಾರ್ಯರು ಕತ್ತಲೆಯಿರುವಾಗ'- ಎಂದು ಹೇಳಿದ್ದರು. ಎಲ್ಲೆಲ್ಲಿಯೂ ಆತ್ಮದ ಪ್ರಕಾಶವು ಬೆಳಗುತ್ತಿರಲು ಕತ್ತಲೆಯೇ ಇಲ್ಲವಲ್ಲ ಎಂದು ಉತ್ತರಕೊಟ್ಟನು. ಆಕೆಯು ಮತ್ತೆ ಯತಿರಾಜರ ಬಳಿಗೆ ಬಂದು ಹೇಳಿಕೊಳ್ಳಲು, ಅವರು ಗೋವಿಂದನನ್ನು ಕರೆದು -'ಗೋವಿಂದ ನಾನು ಹೇಳಿದಂತೆ ಕೇಳಲಿಲ್ಲವೇಕೆ? ಎಂದು ಪ್ರಶ್ನಿಸಲು ಗೋವಿಂದನು -'ತಾವು ಅಂಧಕಾರವಿರುವಾಗ ಪತ್ನಿಯನ್ನು ಹೊಂದಬೇಕೆಂದು ಹೇಳಿದಿರಿ. ಅದರಂತೆ ನಾನು ನೋಡಿದರೆ ಅಂಧಕಾರವೇ ಇರಲಿಲ್ಲವಾದುದರಿಂದ ತಮ್ಮ ಅಪ್ಪಣೆಯನ್ನು ಮೀರಲಿಲ್ಲ'- ವೆಂದನು. ಅದಕ್ಕೆ ಆಚಾರ್ಯರು 'ಗೋವಿಂದ ಯಾವಾಗಲೂ ಆಶ್ರಮಧರ್ಮವನ್ನು ಪಾಲಿಸಬೇಕು. ಆಯಾ ಆಶ್ರಮದಲ್ಲಿದ್ದು ಅದನ್ನು ಅನುಸರಿಸದಿದ್ದರೆ ಪತಿತನಾಗುವನು. ಆಶ್ರಮರಹಿತನಾಗಿಯಂತೂ ಇರಬಾರದು. ಗೃಹಸ್ಥನಾದವನು ಮಾಡಬಹುದಾದ ಧರ್ಮಗಳಲ್ಲಿ ಭೋಗ್ಯತಾ ಬುದ್ಧಿಯಿರಬಾರದು. ಕೈಂಕರ್ಯಬುದ್ಧಿಯಿಂದಲೇ ಅವುಗಳನ್ನೂ ಅನುಸರಿಸಬೇಕು. ಅವುಗಳಲ್ಲಿಯೂ ವಿರಕ್ತಿ ಯಿರುವುದಾದರೆ ಕೂಡಲೇ ಸಂನ್ಯಾಸವನ್ನು ಸ್ವೀಕರಿಸಬೇಕು'- ಎಂದ ಕೂಡಲೇ ಗೋವಿಂದನು 'ಈಗಲೇ ನನಗೆ ಸಂನ್ಯಾಸವನ್ನು ಕೊಡಿ, ಕೊಡಿ' ಎಂದು ಬೇಡಿಕೊಂಡನು. ಅವನ ಜ್ಞಾನವೈರಾಗ್ಯಾದಿಗಳನ್ನು ನೋಡಿ ಆಚಾರ್ಯರು ಕೂಡಲೇ ಸಂನ್ಯಾಸವನ್ನು ಅನುಗ್ರಹಿಸಿ ಆತನಿಗೆ 'ಮನ್ನಾಥ'ನೆಂಬ ತಮ್ಮ ಹೆಸರನ್ನೇ ಇಟ್ಟರು. ಸಂನ್ಯಾಸವನ್ನು ಗ್ರಹಿಸಿದುದರಿಂದ ಸಂತುಷ್ಟನಾದರೂ 'ಮನ್ನಾಥ'ನೆಂಬ ಹೆಸರನ್ನು ಕೇಳಿ ಭೀತನಾಗಿ 'ಆಚಾರ್ಯರೇ, ಈ ನಾಮಧೇಯವು ಜಗದ್ಗುರುಗಳಾದ ತಮಗೊಬ್ಬರಿಗಲ್ಲದೆ ಮತ್ತೆ ಯಾರಿಗೂ ಸಲ್ಲದು. ಶ್ರೇಷ್ಠವಾದ ಜಗತ್ತಿನಲ್ಲೇ ಪ್ರಖ್ಯಾತವಾದ ಆ ನಾಮಧೇಯವೆಲ್ಲಿ? ಅಹಂಕಾರಿಯೂ, ಪಾಪಿಯೂ, ಪರವಂಚಕನೂ ದುರಾತ್ಮನೂ ಆದ ನಾನೆಲ್ಲಿ? ಆ ಹೆಸರನ್ನು ಹೊಂದಿ ಯಜ್ಞಮೂರ್ತಿಯು ಅನುಭವಿಸಿದ ಗತಿಯೇ ನನಗೂ ಆದೀತು. ಆದುದರಿಂದ ದಯವಿಟ್ಟು ಆ ಹೆಸರನ್ನು ಹೊಂದಲು ನಾನು ಯೋಗ್ಯನಲ್ಲ'- ಎಂದನು. ಇದನ್ನು ಕೇಳಿ ಸಂತುಷ್ಟರಾದ ಆಚಾರ್ಯರು ಆತನಲ್ಲಿರುವ ಜ್ಞಾನವೈರಾಗ್ಯಾದಿಗಳನ್ನು ಕಂಡು ಆ ಹೆಸರನ್ನು ಬದಲಾಯಿಸಲು ಇಷ್ಟವಿಲ್ಲದೆ ಅದೇ ಅಭಿಪ್ರಾಯವಿರುವ ತಮಿಳಿನ 'ಎಂಬಾರ್' ಎಂಬ ಹೆಸರಿನಿಂದ ನಾಮಕರಣ ಮಾಡಿದರು.

ಅಂದುನಿಂದ ಗೋವಿಂದನು 'ಎಂಬಾರ್' ಎಂಬ ಹೆಸರಿನಿಂದ ಪ್ರಸಿದ್ಧನಾಗಿ, ತೃಷ್ಣಾರಹಿತನಾಗಿ ಸಂನ್ಯಾಸಿಯಾಗಿ ಮತ್ತೂ ತೇಜಸ್ವಿಯಾದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೋವಿಂದನ ಚತುರ್ಥಾಶ್ರಮ ಸ್ವೀಕಾರವೆಂಬ ಮೂವತ್ತೊಂದನೆಯ ಅಧ್ಯಾಯವು ಮುಗಿದುದು.

೩೨

ಅನಂತರ ಯತಿರಾಜರು -'ಹಿಂದೆ ಇದೇ ಶ್ರೀರಂಗದಲ್ಲಿ ಯಾಮುನಾಚಾರ್ಯರ ಅವಾಸನ ಸಮಯದಲ್ಲಿ ಶ್ರೀಭಾಷ್ಯವನ್ನು ರಚಿಸುವೆನೆಂದು ಪ್ರತಿಜ್ಞೆಮಾಡಿದ್ದೆನು. ಅದರಂತೆ ಈಗ ಖಂಡಿತವಾಗಿಯೂ ಶ್ರೀಭಾಷ್ಯವನ್ನು ರಚಿಸುವೆನು' ಎಂದು ಮನಸ್ಸಿನಲ್ಲಿಯೇ ಆಲೋಚಿಸಿಕೊಂಡರು.

ಶ್ರೀಭಾಷ್ಯವನ್ನು ರಚಿಸಲು ಬೋಧಾಯನವೃತ್ತಿಯಿಲ್ಲದಿದ್ದರೆ ಸಾಧ್ಯವಿಲ್ಲವೆಂದು ತಿಳಿದು ಕೂರನಾಥನೊಡನೆ ಶಾರದಾಪೀಠಕ್ಕೆ ಹೋಗಿ ಶಾಸ್ತ್ರವಾದದಲ್ಲಿ ಶಾರದಾದೇವಿಯನ್ನು ಸಂತೋಷಪಡಿಸಿ ಆ ದೇವಿಯಿಂದ ಕೊಡಲ್ಪಟ್ಟ ಬೋಧಾಯನ ವೃತ್ತಿಯನ್ನು ತೆಗೆದುಕೊಂಡು ಶ್ರೀರಂಗಕ್ಕೆ ಹೋಗುತ್ತಿದ್ದರು.

ಇತ್ತ ಶಾರದಾಪೀಠದ ಕೆಲವು ಪಂಡಿತರು ಬೋಧಾಯನವೃತ್ತಿಯ ಪುಸ್ತಕವನ್ನು ಕಾಣದೇ ರಾಮಾನುಜಾಚಾರ್ಯರೇ ತೆಗೆದುಕೊಂಡು ಹೋಗಿರಬಹುದೆಂದು ಊಹಿಸಿ, ಅವರನ್ನು ಹಿಂಬಾಲಿಸಿ ಒಂದು ತಿಂಗಳ ಮೇಲೆ ಅವರನ್ನು ಹಿಡಿದು ಪುಸ್ತಕವನ್ನು ತೆಗೆದುಕೊಂಡು ಹೋದರು. ಆಚಾರ್ಯರಿಗೆ ತಾವು ಮಾಡಿದ ಕೆಲಸವು ಸಫಲವಾಗಲಿಲ್ಲವೆಂದು ಚಿಂತೆಯುಂಟಾಗಲು ಕೂರೇಶರು -'ಗುರುಗಳೇ, ನಾನು ಆ ಗ್ರಂಥವನ್ನು ರಾತ್ರಿಯೇ ಚೆನ್ನಾಗಿ ನೋಡಿರುವೆನು.ಎಲ್ಲವೂ ನನಗೇ ದೃಢವಾಗಿ ನೆನಪಿದೆ. ಇದಕ್ಕಾಗಿ ಚಿಂತಿಸಬೇಕಾಗಿಲ್ಲ' ಎಂದು ವಿಜ್ಞಾಪಿಸಲು; ಆಚಾರ್ಯರು ಸಂತೋಷದಿಂದ ಶ್ರೀರಂಗವನ್ನು ತಲುಪಿದರು.

ಅನಂತರ ಯತಿರಾಜರು ಕೂರೇಶ, ದಾಶರಥಿಯೇ ಮೊದಲಾದವರನ್ನು ಕುರಿತು 'ಕೆಲವು ಕುದೃಷ್ಟಿಗಳು 'ತತ್ವಮಸಿ' ಮೊದಲಾದ ವಾಕ್ಯಾರ್ಥಜ್ಞಾನವೇ ಮೋಕ್ಷಸಾಧನವೆನ್ನುವರು. ಇನ್ನು ಕೆಲವರು ಜ್ಞಾನ-ಕರ್ಮಗಳೆರಡೂ ಮೋಕ್ಷಸಾಧನವೆನ್ನುವರು. ಇವರ ಮತಗಳನ್ನು ದೂರೀಕರಿಸಿ, ವೇದಪ್ರತಿಪಾದ್ಯವಾದ ಧ್ಯಾನ, ಉಪಾಸನ, ಶಬ್ದ ಇವುಗಳಿಂದ ತಿಳಿಯಲು ಯೋಗ್ಯವಾಗಿಯೂ, ಭಗವತ್ಕೈಂಕರ್ಯಕ್ಕೆ ಅಂಗವಾದ ಜ್ಞಾನವೂ, ಭಕ್ತಿಯೂ ಉಪಾಸನೆಯೂ ಮೋಕ್ಷಸಾಧನವೆಂಬ ವೇದಾಂತದ ಮರ್ಮವನ್ನು ಲೋಕಕ್ಕೆ ತಿಳಿಸಬೇಕೆಂದಿರುವೆನು'- ಎಂದರು. ಅದನ್ನು ಕೇಳಿ ಎಲ್ಲರೂ ಸಂತುಷ್ಟರಾಗಿ ತಮ್ಮ ಒಪ್ಪಿಗೆಯನ್ನು ಸೂಚಿಸಿದರು.

ಕೂಡಲೇ ಆಚಾರ್ಯರು ಕೂರನಾಥರನ್ನು ನೋಡಿ -'ಕೂರನಾಥ, ನಾನು ಹೇಳುವ ಭಾಷ್ಯದ ವಾಕ್ಯಗಳನ್ನು ಕೇಳು, ಅವು ಸರಿಯಾಗಿದೆಯೆಂದು ತೋರಿದರೆ ವಾಕ್ಯಗಳನ್ನು ಬರೆ ಇಲ್ಲದಿದ್ದರೆ ಸುಮ್ಮನಿರು'- ಎನ್ನಲು, ಅವರು ಬರೆಯಲಾರಂಭಿಸಿದರು. ಹೀಗೆ ಬರೆಯುತ್ತಿರಲು, ಆಚಾರ್ಯರು ಜೀವದ ಲಕ್ಷಣವನ್ನು ಹೇಳುವಾಗ 'ಜೀವವು ವಿಷ್ಣುಶೇಷತ್ವರಹಿತ ಜ್ಞಾತೃತ್ವಪ್ರತಿಪಾದಕವಾದುದು' ಎಂದು ಹೇಳಲು ಕೂರನಾಥರು ಬರೆಯಲಿಲ್ಲ, ಆಚಾರ್ಯರು ಬರೆಯಲು ಮತ್ತೆ ಮತ್ತೆ ಪ್ರೇರಣೆಮಾಡಿದರೂ ಬರೆಯದಿರಲು, ಹಾಗಾದರೆ ನೀನೇ ಶ್ರೀಭಾಷ್ಯವನ್ನು ರಚಿಸು ಹೋಗು'- ಎಂದು ಅವರನ್ನು ತ್ಯಜಿಸಿದರು.

ಹೀಗೆ ಬೇರೆಯಿರುವ ಕೂರನಾಥರ ಬಳಿಗೆ ಬಂದ ಕೆಲವರು ವೈಷ್ಣವರು 'ಆಚಾರ್ಯರು ಕೋಪಗೊಂಡಿರುವುದಕ್ಕೆ ಕಾರಣವೇನು?'- ಎಂದು ಕೇಳಲು, 'ಗುರುವು ಹೇಳಿದಂತೆ ನಾನು ಬೇರೆ ಇರುವೆನೇ ವಿನಾ, ಇದರಲ್ಲಿ ನನಗೂ ಕೋಪಕ್ಕೂ ಸಂಬಂಧವೇನು?' ಎಂದು

ಉತ್ತರಕೊಟ್ಟನು.

ಕೆಲವು ದಿನಗಳ ಮೇಲೆ ಆಚಾರ್ಯರು ತಾವು ಹೇಳಿದ ವಾಕ್ಯಾರ್ಥವನ್ನು ಸ್ಮರಿಸಿಕೊಂಡು ತಪ್ಪುಹೇಳಿದುದನ್ನು ತಿಳಿದು ಪಶ್ಚಾತ್ತಾಪಪಟ್ಟು, ಕೂರನಾಥರನ್ನು ಕರೆಸಿ, 'ಜೀವವು ವಿಷ್ಣುಶೇಷತ್ವಸಂಯುಕ್ತ ಜ್ಞಾತೃತ್ವಪ್ರತಿಪಾದಕ'ವೆಂದು ಹೇಳಲು ಕೂಡಲೇ ಕೂರನಾಥರು ಬರೆದರು.

ಹೀಗೆ ಆಚಾರ್ಯರು ಲೋಕಾನುಗ್ರಹಕ್ಕಾಗಿ ಶ್ರೀಭಾಷ್ಯವನ್ನು ರಚಿಸಿ ಯಾಮುನಾಚಾರ್ಯರ ಮೊದಲನೆಯ ದುಃಖವನ್ನು ಪರಿಹರಿಸಿ, ಇದೇ ಕ್ರಮದಲ್ಲಿ ವೇದಾಂತದೀಪ, ವೇದಾಂತಪಾಠ, ವೇದಾಂತಸಂಗ್ರಹ, ಗೀತಾಭಾಷ್ಯ, ಇವುಗಳನ್ನು ಸ್ಪಷ್ಟವಾಗಿಯೂ, ಶಾಸ್ತ್ರಸಮ್ಮತವಾಗಿಯೂ ರಚಿಸಿ ಜಗತ್ತಿನಲ್ಲಿ ವಿಶುದ್ಧವಾದ ಕೀರ್ತಿಯನ್ನು ಗಳಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಬೋಧಾಯನವೃತ್ತಿಗನುಸಾರವಾಗಿ ಶ್ರೀಭಾಷ್ಯಾದಿನಿರ್ಮಾಣ ಕಥನವೆಂಬ ಮೂವತ್ತೆರಡನೆಯ ಅಧ್ಯಾಯವು ಮುಗಿದುದು.

## ೩೩

ಇದಾದ ಮೇಲೆ ಕೆಲವು ಶಿಷ್ಯರು ಆಚಾರ್ಯರ ಬಳಿಗೆ ಬಂದು -'ಆಚಾರ್ಯರೆ, ಇತರ ಮತಗಳನ್ನು ನಿರಾಕರಿಸಿ ತಾವು ದರ್ಶನಸ್ಥಾಪನವನ್ನು ಮಾಡಿದಿರಿ. ಇನ್ನು ಮೇಲೆ ದಶದಿಕ್ಕುಗಳಿಗೂ ಹೋಗಿ ದಿಗ್ವಿಜಯಮಾಡಿಕೊಂಡು ಅಲ್ಲಲ್ಲಿರುವ ದಿವ್ಯದೇಶಗಳನ್ನು ಸೇವಿಸಿಕೊಂಡು ಬರಬಹುದಲ್ಲವೆ?'- ಎಂದು ಕೇಳಿಕೊಂಡರು. ಶಿಷ್ಯರ ಮಾತನ್ನು ಒಪ್ಪಿ, ಶ್ರೀರಂಗನಾಥನ ಅನುಮತಿಯನ್ನು ಪಡೆದು ಪರಿವಾರದಿಂದ ಪರಿವೃತರಾಗಿ ಚೋಳಮಂಡಲಕ್ಕೆ ಹೊರಟರು. ಆ ದೇಶದಲ್ಲಿರುವ ಕುಂಭಕೋಣವೇ ಮೊದಲಾದ ದಿವ್ಯದೇಶಗಳನ್ನು ಸಂದರ್ಶಿಸಿ, ಅಲ್ಲಿನ ಪಂಡಿತರನ್ನು ವಾದದಲ್ಲಿ ಜಯಿಸಿ, ಅಲ್ಲಿನವರನ್ನೆಲ್ಲರನ್ನೂ ಶಿಷ್ಯರನ್ನಾಗಿ ಮಾಡಿಕೊಂಡು ಪಾಂಡ್ಯಮಂಡಲವನ್ನು ಪ್ರವೇಶಿಸಿದರು. ಅಲ್ಲಿಯೂ ಅದೇ ರೀತಿ ವಾದದಲ್ಲಿ ಜಯಿಸಿ ಕುರುಕಾನಗರಿಯನ್ನು ಪ್ರವೇಶಿಸಿದರು. ಅಲ್ಲಿ ಶಠಕೋಪರನ್ನು ವಂದಿಸಿ, ಅವರಿಂದ ತೀರ್ಥಪ್ರಸಾದಗಳನ್ನು ಸ್ವೀಕರಿಸಿ, ಈ ರೀತಿ ಸ್ತೋತ್ರಮಾಡಿದರು. 'ವಕುಳಧವಳಮೂಲಾ ವಕ್ಷಸಂ ವೇದಬಾಹ್ಯ ಪ್ರಬಲಸಮಯವಾದಚ್ಛೇದಿನಂ ಪೂಜನೀಯಂ। ವಿಪುಲ ಕುರುಕುನಾಥಂ ಕಾರಿಸೂನುಂ ಕವೀಶಂ ಶರಣಮುಪಗತೋಽಹಂ ಚಕ್ರಹಸ್ತೇಭಚಕ್ರಂ ॥'- ಹೀಗೆ ಸ್ತೋತ್ರಮಾಡಿ ಅಲ್ಲಿಂದ ಹೊರಟು ಕುರಂಗನಗರಿಯನ್ನು ತಲುಪಿ, ಕುರಂಗನಗರೀಪೂರ್ಣನೆಂಬ ಹೆಸರಿನಿಂದಿರುವ ಭಗವಂತನನ್ನು ಸಂದರ್ಶಿಸಿ ಆಚಾರ್ಯರು ಆನಂದಪರವಶರಾದರು. ಭಗವಂತನಾದರೋ ಅಪರಿಮಿತ ಶಿಷ್ಯಸಂಪತ್ತಿನಿಂದ ಕೂಡಿರುವ ಯತಿಸಾರ್ವಭೌಮರನ್ನು ಕಂಡು ಆಶ್ಚರ್ಯಭರಿತರಾಗಿ -'ಹಿಂದೆ ನಾನು ಲೋಕರಕ್ಷಣಾರ್ಥವಾಗಿ ಪತ್ನೀಸಹಿತನಾಗಿ ರಾಮ, ಕೃಷ್ಣನೇ ಮೊದಲಾದ ರೂಪಗಳಿಂದ ಅವತರಿಸಿದ್ದೆನು. ಆದರೆ ಪಾಮರರಾದ ಜನರು ನನ್ನನ್ನು ರಾಜನೆಂದೂ ಗೊಲ್ಲನೆಂದೂ ತಿಳಿದರೆ ವಿನಾ ನಮ್ಮ ಸಂರಕ್ಷಣೆಗಾಗಿ

ವೈಕುಂಠದಿಂದ ಶ್ರೀಹರಿಯೇ ಬಂದಿರುವನೆಂದು ತಿಳಿಯಲಿಲ್ಲ. ಎಲೈ ಮನ್ನಾಥನೇ, ನೀನು ಯಾವ ಉಪಾಯದಿಂದ ಎಲ್ಲರನ್ನೂ ವಶಪಡಿಸಿ ಕೊಂಡಿರುವೆ ? ಹೇಳು'- ಎನ್ನಲು, ಆಚಾರ್ಯರು -'ಎಲೈ ಭಗವಂತನೇ ನೀನು ಕೇಳುವುದಾದರೆ ಹೇಳುವೆನು' ಎನಲು, ಭಗವಂತನು ಆಚಾರ್ಯರಿಗೆ ದಿವ್ಯಪೀಠವನ್ನು ಕೊಟ್ಟು ತಾನು ಅವರ ಮುಂದೆ ನಿಂತುಕೊಂಡನು. ಆಚಾರ್ಯರು ಆ ಪೀಠದಲ್ಲಿ ಪೂರ್ಣಾಚಾರ್ಯರೇ ಕುಳಿತಿರುವರೆಂದು ಭಾವಿಸಿ ಭಗವಂತನ ಬಲಗಿವಿಯಲ್ಲಿ ಎಲ್ಲ ಮಂತ್ರಗಳಲ್ಲಿಯೂ ಮಂತ್ರರತ್ನವೇ ಶ್ರೇಷ್ಠವೆಂದೂ, ಮಂತ್ರರತ್ನ, ದ್ವಯ, ನ್ಯಾಸ, ಪ್ರಪತ್ತಿ ಶರಣಾಗತಿ - ಇವುಗಳೇ ಸರ್ವಫಲಪ್ರದವೆಂದೂ ಉಪದೇಶ ಮಾಡಿ ಆ ಭಗವಂತನಿಗೆ "ವೈಷ್ಣವನಂಬಿ" ಎಂಬ ನಾಮಧೇಯವನ್ನು ಕೊಟ್ಟರು. ಶ್ರೀಹರಿಯು ಆಚಾರ್ಯರನ್ನು ಬ್ರಹ್ಮರಥದಲ್ಲಿ ಕುಳ್ಳಿರಿಸಿ ಶ್ಲಾಘಿಸಿದರು. ಆಚಾರ್ಯರು -'ಎಲೈ ಸರ್ವಶಕ್ತನಾದ ಭಗವಂತನೆ, ಇದೆಲ್ಲ ನಿನ್ನ ಲೀಲೆಯು. ನನ್ನ ಸರ್ವಾಪರಾಧವನ್ನೂ ಕ್ಷಮಿಸು'- ಎಂದು ಪ್ರಾರ್ಥಿಸಿ, ಭಗವಂತನ ಅನುಮತಿಯನ್ನು ಪಡೆದು ಕೇರಳ ದೇಶಕ್ಕೆ ಹೊರಟರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕುರಂಗನಗರೀ ಪೂರ್ಣನಿಗೆ ಮಂತ್ರರತ್ನೋಪದೇಶವೆಂಬ ಮೂವತ್ತಮೂರನೆಯ ಅಧ್ಯಾಯವು ಮುಗಿದುದು.

## ೩೪

ಕೇರಳ ದೇಶಕ್ಕೆ ಹೊರಟು ಆಚಾರ್ಯರು ಅಲ್ಲಲ್ಲಿಯೇ ವೈಷ್ಣವ ಕ್ಷೇತ್ರಗಳನ್ನು ವಂದಿಸುತ್ತ, ಅನಂತಶಯನದಲ್ಲಿ ಅನಂತಶಯನನಾದ ಪದ್ಮನಾಭನನ್ನು ಮೂರು ಬಾಗಿಲುಗಳಲ್ಲಿಯೂ ಪಾದಾದಿ ಕೇಶಪರ್ಯಂತವಾಗಿ ಸಂದರ್ಶಿಸಿ ಅಲ್ಲಿನ ಪಂಡಿತರನ್ನು ಜಯಿಸುತ್ತ ಕೇರಳವನ್ನು ಹೊಂದಿದರು. ಅಲ್ಲಿಯೂ ಅದೇ ರೀತಿಯಾಗಿ ಪ್ರವಾಸಮಾಡಿ, ಪಶ್ಚಿಮಸಮುದ್ರದ ತೀರಮಾರ್ಗದಿಂದ ಉತ್ತರಾಭಿಮುಖವಾಗಿ ಹೊರಟು, ದ್ವಾರವತೀ, ಮಧುರಾ, ಸಾಲಿಗ್ರಾಮ, ಸಾಕೇತ, ಬದರಿಕಾಶ್ರಮ, ನೈಮಿಶ, ಪುಷ್ಕರ, ಬೃಂದಾವನವೇ ಮೊದಲಾದ ಕ್ಷೇತ್ರಗಳಲ್ಲಿ ಸಂಚರಿಸುತ್ತ, ಭಟ್ಟಮಂಟಪವನ್ನು ಹೊಂದಿ ಶಾರದಾಪೀಠಕ್ಕೆ ಹೋದರು. ಆಗ ಶಾರದಾದೇವಿಯು ತಾನಾಗಿಯೇ ಬಾಗಿಲನ್ನು ತೆಗೆದುಕೊಂಡು ಬಂದು 'ಕಪ್ಯಾಸ' ಶ್ರುತಿಗೆ ಅರ್ಥವೇನೆಂದು ಕೇಳಿದಳು. ಆಗ ಆಚಾರ್ಯರು ವಿಕಸಿತವಾದ ಕಮಲದಂತೆ ಕಣ್ಣುಳ್ಳವನು ಭಗವಂತನೆಂದು ಇದರ ಅರ್ಥವೆನ್ನಲು ಸಂತುಷ್ಟಳಾದ ಶಾರದಾದೇವಿಯು ಆಚಾರ್ಯರಿಂದ ರಚಿತವಾದ ಶ್ರೀಭಾಷ್ಯವನ್ನು ತಲೆಯ ಮೇಲಿಟ್ಟುಕೊಂಡು ಆಚಾರ್ಯರಿಗೆ 'ಶ್ರೀಭಾಷ್ಯಕಾರ'ನೆಂಬ ನಾಮಕರಣವನ್ನು ಮಾಡಿದಳು. ಆಚಾರ್ಯರು ದೇವಿಯನ್ನು 'ನನ್ನಲ್ಲಿ ಇಷ್ಟೊಂದು ಅನುಗ್ರಹವಿಡಲು ಕಾರಣವೇನು ?'- ಎಂದು ಕೇಳಲು, ದೇವಿಯು -'ಹಿಂದೆ ಶಂಕರಾಚಾರ್ಯರು ಇಲ್ಲಿಗೆ ಬಂದಿದ್ದಾಗ ಅವರನ್ನೂ ಈ ಪ್ರಶ್ನೆಯನ್ನು ಕೇಳಲು ಅವರು ಹಾಸ್ಯಕರವಾದ ಉತ್ತರವನ್ನು ಕೊಟ್ಟರು. ಈಗ ನಿಜವಾದ ಅರ್ಥವನ್ನು ಕೇಳಿ ಸಂತುಷ್ಟಳಾಗಿ ಗೌರವಿಸಿದೆನು'- ಎಂದಳು.

ಈ ವೃತ್ತಾಂತವನ್ನು ಕೇಳಿದ ಆ ದೇಶದ ಪಂಡಿತರೆಲ್ಲರೂ ಬಂದು ವಾದಮಾಡಿ ಸೋತು ಓಡಿಹೋದರು. ಇದನ್ನೆಲ್ಲ ನೋಡಿದ ಆ ದೇಶದ ರಾಜನು ಬಹುವಿಸ್ಮಿತನಾಗಿ

ಆಚಾರ್ಯರ ಶಿಷ್ಯನಾದನು. ಇದನ್ನೆಲ್ಲಾ ಸಹಿಸದ ಪಂಡಿತರು ಯತಿರಾಜರನ್ನು ನಾಶಮಾಡಬೇಕೆಂದು ಅಭಿಚಾರಕೃತ್ಯವನ್ನು ಮಾಡುತ್ತಿರುವರೆಂಬ ವೃತ್ತಾಂತವು ಆಚಾರ್ಯರಿಗೆ ತಿಳಿದಕೂಡಲೇ ಅವರು ಅದರ ಪರಿಹಾರವನ್ನು ಕಂಡುಕೊಂಡು ಏನೂ ತಿಳಿಯದವರಂತೆ ಇರುತ್ತಿರಲು, ಆ ಅಭಿಚಾರವು ಆಚಾರ್ಯರಿಗೆ ಏನೂ ಕೆಡಕನ್ನುಂಟುಮಾಡಲಾರದೆ ಅದನ್ನು ಮಾಡಿದವರನ್ನೇ ಹೋಗಿ ಸೇರಲು, ಅವರು ಬಾಯಿಗೆ ಬಂದಂತೆ ಹರಟುತ್ತ ಗ್ರಹಗ್ರಸ್ತರಂತೆ ಬೀದಿಬೀದಿಗಳಲ್ಲಿಯೂ ಅಲೆಯುತ್ತಿದ್ದರು. ಈ ದುರವಸ್ಥೆಯನ್ನು ಕಂಡ ರಾಜನು ಆಚಾರ್ಯರ ಬಳಿಗೆ ಬಂದು -'ತಾವು ಹೀಗೆ ಉದಾಸೀನ ಮಾಡಬಹುದೆ? ಅವರನ್ನು ಮೊದಲಿನಂತೆ ಆಗುವ ಹಾಗೆ ಅನುಗ್ರಹಿಸಬೇಕು'- ಎಂದು ಪ್ರಾರ್ಥಿಸಲು, ಕರುಣಾಳುಗಳಾದ ಆಚಾರ್ಯರು ಹಾಗೆಯೇ ಮಾಡಿದರು. ರಾಜನ ಮಾತಿನಂತೆ ಅವರೆಲ್ಲರೂ ಆಚಾರ್ಯರ ಶಿಷ್ಯರಾದರು.

ಅನಂತರ ರಾಜನು ಸಮಸ್ತ ರಾಜವೈಭವಗಳೊಡನೆ ಆಚಾರ್ಯರನ್ನು ಅನುಸರಿಸಿ ಅವರ ಮುಂದಿನ ಪ್ರಯಾಣಕ್ಕೆ ಅನುಕೂಲಮಾಡಿಕೊಟ್ಟನು. ಆಚಾರ್ಯರು ಅಲ್ಲಿಂದ ಗಂಗಾ ನದಿಯ ಕಡೆಗೆ ಹೊರಟರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶಾರದಾಪೀಠವಿಬುಧ ಪರಾಜಯವೆಂಬ ಮೂವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

೩೫

ಶಾರದಾದೇವಿಯಿಂದ ಬೀಳ್ಕೊಂಡ ಆಚಾರ್ಯರು ಕಲಿಮಲಾಪಹಾರಕವಾದ ಕಾಶಿಯನ್ನು ಹೊಂದಿದರು. ಅಲ್ಲಿ ಗಂಗಾವಗಾಹನಮಾಡಿ ಭೋಗಿಶಯನನಾದ ಹರಿಯನ್ನು ವಂದಿಸಿ, ಅಲ್ಲಿಯೂ ಪಂಡಿತರನ್ನು ವಾದದಲ್ಲಿ ಜಯಿಸಿ ಅವರಿಂದ ಸತ್ಕೃತರಾಗಿ ಶ್ರೀಪುರುಷೋತ್ತಮ ಕ್ಷೇತ್ರಕ್ಕೆ ಹೋಗಿ, ಜಗನ್ನಾಥನನ್ನು ನಮಿಸಿ, ಅಲ್ಲಿನ ಪ್ರಚ್ಛನ್ನಬೌದ್ಧರನ್ನು (ಅದ್ವೈತಿ) ಜಯಿಸಿ, ರಾಮಾನುಜ ಮಠವನ್ನು ಸ್ಥಾಪಿಸಿ, ಅಲ್ಲಿ ಕೆಲವು ದಿವಸಗಳು ಸುಖವಾಗಿರುತ್ತಿದ್ದರು.

ಹೀಗಿರಲು ಒಂದು ದಿನ ಆಚಾರ್ಯರು ಅಲ್ಲಿನ ಅರ್ಚಕರನ್ನು ಕರೆದು -'ಈಗ ಶ್ರೀರಂಗಾದಿ ದಿವ್ಯದೇಶಗಳಲ್ಲೆಲ್ಲ ಪಾಂಚರಾತ್ರಾಗಮ ಪ್ರಕಾರ ಮಾಡಿದ ಪೂಜೆಯೇ ಅಕ್ಷಯ ಫಲಪ್ರದವೂ ಮೋಕ್ಷಸಾಧಕವೂ ಆಗಿರುವುದು. ಆದುದರಿಂದ ಇಂದಿನಿಂದ ನೀವು ಅದರಂತೆಯೇ ನಡೆಸಿಕೊಂಡು ಬನ್ನಿ, ಇದರಿಂದ ಯಾವ ನ್ಯೂನತೆಯೂ ಇಲ್ಲ - ಇಷ್ಟೇ ಅಲ್ಲದೆ ಇದು ಶ್ರೇಯಸ್ಕರವೂ ಹೌದು'-ಎನ್ನಲು, ಅವರೆಲ್ಲರೂ ಈ ಮಾತನ್ನು ಒಪ್ಪದೆ ಹಾಗೆಯೇ ಹೊರಟು ಹೋದರು.

ಆಚಾರ್ಯರು ಈ ಅರ್ಚಕರನ್ನು ಲಕ್ಷಿಸದೆ, ರಾಜಸಹಾಯವನ್ನು ಪಡೆದು ಆ ಅರ್ಚಕರನ್ನು ತೆಗೆದುಹಾಕಿ ಬೇರೆ ಅರ್ಚಕರನ್ನಿಟ್ಟು ಪಾಂಚರಾತ್ರಾಗಮನದಂತೆ ಪೂಜಾದಿಗಳನ್ನು ನಡೆಸಬೇಕೆಂದು ಏರ್ಪಡಿಸುತ್ತಿದ್ದರು. ಇದನ್ನು ತಿಳಿದ ಆ ಅರ್ಚಕರು ಭಗವಂತನಾದ ಜಗನ್ನಥನ ಸಾನ್ನಿಧ್ಯವನ್ನು ಹೊಂದಿ -'ಎಲೈ ಪರಮಾತ್ಮನೇ, ಈ ಯತೀಂದ್ರನೆಂಬ ಸಂನ್ಯಾಸಿಯು

ಹೊಸದಾಗಿ ಬಂದು ನಾವು ಅನೂಚಾನವಾಗಿ ನಡೆಸಿಕೊಂಡು ಬಂದಿರುವ ಪೂಜಾಕ್ರಮವನ್ನು ತಪ್ಪಿಸಿ ಬೇರೆ ಕ್ರಮದಿಂದ ಪೂಜಾದಿಗಳನ್ನು ಮಾಡಬೇಕೆಂದು ಬಲಾತ್ಕರಿಸುತ್ತಿರುವನು. ಎಲೈ ಭಕ್ತಪರಾಧೀನನೇ, ನಾವು ಎಂದಿನಂತೆ ಅದೇ ಕ್ರಮದಲ್ಲಿ ಪೂಜೆಮಾಡಲು ಅವಕಾಶವನ್ನು ಕೊಟ್ಟು ಭಕ್ತಾಭೀಷ್ಟಫಲಪ್ರದವಾಗಿರುವಂತೆ ನೀನು ಅನುಗ್ರಹಿಸು. ಇಲ್ಲದಿದ್ದರೆ ಇದೋ ನಾವು ನಿಜವಾಗಿಯೂ ಸತ್ತು ಹೋಗುವೆವು'- ಎಂದು ಕಲ್ಲುಗಳಿಂದ ತಮ್ಮ ತಲೆಯನ್ನು ಒಡೆದುಕೊಳ್ಳಲಾರಂಭಿಸಿದರು. ಆಗ ಪರಮಾತ್ಮನು ಅವರಿಗೆ ಅಭಯವನ್ನು ಕೊಡಲು ಅವರು ಮನೆಗೆ ಹೋದರು.

ಮಾರನೆಯ ದಿನ ಆಚಾರ್ಯರು ಜಗನ್ನಾಥನ ಸನ್ನಿಧಿಗೆ ಹೋಗಿ -'ಎಲೈ ಪರಮಾತ್ಮನೆ, ಶ್ರೀರಂಗಾದಿಸ್ಥಳಗಳಂತೆ ಇಲ್ಲಿಯೂ ಪಾಂಚರಾತ್ರಾಗಮದಂತೆ ಪೂಜಾದಿಗಳು ನಡೆಯಲು ಅವಕಾಶ ಕೊಡು'- ಎಂದು ಅನೇಕ ವಿಧವಾಗಿ ಪ್ರಾರ್ಥಿಸಿದರು. ಪರಮಾತ್ಮನು -'ಎಲೈ ಜಗದ್ಗುರುವೇ, ಶ್ರೀರಂಗಾದಿ ಅನೇಕ ದಿವ್ಯದೇಶಗಳನ್ನು ನಿನ್ನ ಅಧೀನವಾಗಿ ಮಾಡಿರುವೆನು. ಇದೊಂದು ಕ್ಷೇತ್ರವು ನನ್ನ ಅಧೀನದಲ್ಲಿರಲಿ. ಇಲ್ಲಿ ನಾನು ಸ್ವಚ್ಛಂಧವಾಗಿ ವಿಹರಿಸುತ್ತಿರುವೆನು'- ಎಂದನು. ಹೀಗೆ ಇಬ್ಬರಿಗೂ ಬಹಳ ಹೊತ್ತಿನವರೆಗೆ ಸಂಭಾಷಣೆಯು ನಡೆಯಿತು. ಒಬ್ಬರೂ ಅವರ ಮಾತಿಗೆ ಸೋಲಲಿಲ್ಲ. ಆದರೂ, ಆಚಾರ್ಯರು ಆ ಕ್ಷೇತ್ರದಲ್ಲಿನ ಅಧಿಕಾರವರ್ಗ, ಪೌರರು ಎಲ್ಲರ ಸಹಾಯವನ್ನು ಪಡೆದು ಆ ಪುರುಷೋತ್ತಮ ಕ್ಷೇತ್ರವನ್ನು ಪಾಂಚರಾತ್ರಾಗಮಾನುಸಾರವಾಗಿಯೇ ಮಾಡಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಜಗನ್ನಾಥ ರಾಮಾನುಜ ಸಂವಾದವೆಂಬ ಮೂವತ್ತೈದನೆಯ ಅಧ್ಯಾಯವು ಮುಗಿದುದು.

## ೩೬

ಭಕ್ತಪರಾಧೀನನಾದ ಜಗನ್ನಾಥನು ಹೀಗೆ ಆಲೋಚಿಸಿದನು. ನಿಜವಾಗಿಯೂ ಈ ರಾಮಾನುಜನು ನನ್ನ ಮಾತನ್ನು ಉಲ್ಲಂಘಿಸಿ ಈ ಕ್ಷೇತ್ರವನ್ನು ಪಾಂಚರಾತ್ರ ಕ್ಷೇತ್ರವನ್ನಾಗಿ ಪರಿವರ್ತಿಸುವನು. ನನ್ನ ಅರ್ಚಕರು ಸಾಯುವುದರಲ್ಲಿ ಸಂಶಯವಿಲ್ಲ. ಆದುದರಿಂದ ಈ ರಾತ್ರಿಯೇ ಈ ಮಹಾಮಹಿಮನಾದ ಯೋಗೀಂದ್ರನನ್ನು ನನ್ನ ಯೋಗಮಾಯೆಯಿಂದ ಬೇರೆಕಡೆಗೆ ಸಾಗಿಸುವೆನು ಎಂದು ಯೋಚಿಸಿ ಕೂರ್ಮಕ್ಷೇತ್ರಕ್ಕೆ ತಲುಪಿಸಿದನು.

ಬೆಳಗಾಯಿತು, ಆಚಾರ್ಯರು 'ಶ್ರೀ ಹರಿರ್ಹರಿ:' ಎಂದು ಹೇಳುತ್ತಾ ಎದ್ದುನೋಡಿದರೆ ಮಲಗಿದ್ದ ಜಾಗವೇ ಮಾಯವಾಗಿತ್ತು. ವಿಚಾರಿಸಲು ಕೂರ್ಮಕ್ಷೇತ್ರವೆಂದು ತಿಳಿಯಿತು. ಅಲ್ಲಿಯ ದೇವರು ಶಿವಲಿಂಗವೆಂದು ಜನಗಳಿಂದ ತಿಳಿದು, ಧರಿಸಲು ಶ್ವೇತಮೃತ್ತಿಕೆಯೂ ಇಲ್ಲದ್ದರಿಂದ ಆಚಾರ್ಯರು ಒಂದು ವಾರ ಉಪವಾಸ ಮಾಡಿದರು. ಆಗ ಶ್ರೀಕೂರ್ಮ ನಾಯಕನು ಆಚಾರ್ಯರ ಸ್ವಪ್ನದಲ್ಲಿ ಕಾಣಿಸಿಕೊಂಡು -'ಎಲೈ ಯತಿಶ್ರೇಷ್ಠ, ಅಜ್ಞಾನರಾದ ಜನರೆಲ್ಲರೂ ನನ್ನನ್ನು ಶಿವಲಿಂಗವೆಂದು ಸುಮ್ಮನೆ ಭಾವಿಸಿರುವರೇ ಹೊರತು ಯಾರು ಸರಿಯಾಗಿ ನೋಡಲಿಲ್ಲ. ನಾನು ಶಂಖಚಕ್ರ ಗಧಾಧಾರಿಯಾದ ನಾರಾಯಣನು. ನೀನು

ಬಂದು ನನ್ನನ್ನು ನೋಡಿ, ನನ್ನನ್ನು ಅರ್ಚಿಸು. ನನ್ನ ಆಲಯದ ಮುಂಭಾಗದಲ್ಲಿಯೇ ಶ್ವೇತಮೃತ್ತಿಕೆಯು ಇರುವುದು. ತೆಗೆದು ಊರ್ಧ್ವಪುಂಡ್ರಗಳನ್ನು ಧರಿಸಿ, ನನಗೆ ನಿವೇಧಿಸಿ ನೀನೂ ಭೋಜನವನ್ನು ಮಾಡು ಏಳು. ಸ್ವಲ್ಪವೂ ಚಿಂತಿಸಬೇಡ. ಮೊದಲೇ ಈ ಕ್ಷೇತ್ರವನ್ನು ನಿನ್ನ ಅಧೀನವನ್ನಾಗಿ ಮಾಡಿರುವೆನು. ಸ್ವಲ್ಪ ದಿವಸಗಳಲ್ಲಿಯೇ ಜಗನ್ನಾಥನಿಂದ ಪ್ರೇರಿತರಾಗಿ ನಿನ್ನವರೆಲ್ಲರೂ ಇಲ್ಲಿಗೆ ಬರುವರು. ಯೋಚಿಸಬೇಕಾದುದಿಲ್ಲ'- ಎಂದು ಹೇಳಲು ಆಚಾರ್ಯರು ಅದರಂತೆಯೇ ನಡೆಸಿ ಅಲ್ಲಿಯೇ ಇರುತ್ತಿದ್ದರು.

ಹೀಗಿರುತ್ತಿರಲು ಕೂರ್ಮಕ್ಷೇತ್ರ ನಿವಾಸಿಗಳೂ ಇತರರೂ ಕೂರ್ಮನಾಯಕನು ನಾರಾಯಣನೆಂದೂ ಈ ಕ್ಷೇತ್ರವು ವಿಷ್ಣುಕ್ಷೇತ್ರವೆಂದೂ ತಿಳಿದು ಹೃಷ್ಟರಾಗಿ ಎಲ್ಲರೂ ಆಚಾರ್ಯರ ಶಿಷ್ಯರಾದರು. ಆ ವೇಳೆಗೆ ಜಗನ್ನಾಥನಿಂದ ಪ್ರೇರಿತರಾದ ಶಿಷ್ಯರೂ ಬಂದು ಸೇರಲು, ಅವರೊಡನೆ ಆಚಾರ್ಯರು ಸಿಂಹಾಚಲಕ್ಕೆ ಹೊರಟರು. ಸಿಂಹಾಚಲದಲ್ಲಿ ಮಹಾಸಿಂಹನನ್ನು ವಂದಿಸಿ, ಅಹೋಬಿಲ ಕ್ಷೇತ್ರಕ್ಕೆ ಹೋದರು. ಅಲ್ಲಿಯೂ ನಾರಸಿಂಹನನ್ನು ಸಂದರ್ಶಿಸಿ ವೇಂಕಟಾಚಲಕ್ಕೆ ಬಂದರು. ಈ ಸಮಯಕ್ಕೆ ಸರಿಯಾಗಿ ಕೆಲವರು ಶೈವರು ಬಂದು ವೇಂಕಟೇಶನು ಶಂಖಚಕ್ರಾದಿರಹಿತವಾಗಿರುವುದನ್ನು ನೋಡಿ ಈತನು ಸ್ಕಂದನೆಂದು ಹೇಳತೊಡಗಿದ್ದರು. ವೈಷ್ಣವರು ವೇಂಕಟೇಶನೆಂದು ಹೇಳುತ್ತಿದ್ದರು. ಇಬ್ಬರಿಗೂ ಬಹಳ ಜಗಳವಾಗುತ್ತಿತ್ತು. ಆಗ ಭಾಷ್ಯಕಾರರು ಶೈವರನ್ನು ಕುರಿತು -'ಎಲೈ ಶೈವರೇ ವೃಥಾ ಜಗಳವೇಕೆ? ನಿಮ್ಮ ಸ್ಕಂದನ ಆಯುಧಗಳಾದ ತ್ರಿಶೂಲ ಡಮರುಗಾದಿಗಳನ್ನು ಮಾಡಿಸಿ ಇಲ್ಲಿಡಿ,.ನಮ್ಮ ದೇವರ ಆಯುಧಗಳಾದ ಶಂಖಚಕ್ರಗಳನ್ನು ಮಾಡಿಸೋಣ. ಭಗವಂತನು ಯಾವುದನ್ನು ಧರಿಸುವನೊ ನೋಡೋಣ' ಎನ್ನಲು, ಎಲ್ಲರೂ ಒಪ್ಪಿಕೊಂಡರು. ಆಯುಧಗಳೆಲ್ಲವನ್ನೂ ಮಾಡಿಸಿದ ಮೇಲೆ ,ಆಚಾರ್ಯರು ಅವುಗಳನ್ನು ತೆಗೆದುಕೊಂಡು ಹೋಗಿ ಗರ್ಭಗೃಹದಲ್ಲಿ ವೇಂಕಟೇಶನ ಸನ್ನಿಧಿಯಲ್ಲಿಟ್ಟು, ಅಲ್ಲಿ ತಮ್ಮವರಾಗಲೀ ಇತರರಾಗಲಿ ಯಾರು ಇಲ್ಲವೆಂಬುದನ್ನು ಶೋಧಿಸಿ ಬಾಗಿಲನ್ನು ಹಾಕಿಕೊಂಡು ಬಂದರು.

ಬೆಳಗಾಯಿತು. ಶೈವ-ವೈಷ್ಣವರಿಬ್ಬರೂ ವೇಂಕಟೇಶನ ಸನ್ನಿಧಿಗೆ ಹೋಗಿ ನೋಡಲು ಶಂಖಚಕ್ರಧರನಾಗಿದ್ದನು. ತ್ರಿಶೂಲ ಡಮರುಗಗಳು ಪಾದತಳದಲ್ಲಿ ಬಿದ್ದಿದ್ದವು. ಇದನ್ನು ನೋಡಿ ಲಜ್ಜಿತರಾದ ಶೈವರು ಅಲ್ಲಿಂದ ಓಡಿಹೋದರು.

ಶ್ರೀಭಾಷ್ಯಕಾರರು ಶಂಖಚಕ್ರಧಾರಿಯಾದ ಪರಮಾತ್ಮನಿಗೆ ಮಂಗಳಾಶಾಸನವನ್ನು ಮಾಡಿ, ಆತನ ವಕ್ಷಸ್ಥಳದಲ್ಲಿ ಸುವರ್ಣಲಕ್ಷ್ಮಿಯನ್ನು ಧಾರಣಮಾಡಿಸಲು, ಆಚಾರ್ಯರು ಪರಮಾತ್ಮನ ಮಾವನೂ (ಶ್ವಶುರ) ಆಚಾರ್ಯರೂ ಆದರು. ಮತ್ತು ಆ ಕ್ಷೇತ್ರದ ಸಂರಕ್ಷಣೆಗಾಗಿ ಇಬ್ಬರು ಸಂನ್ಯಾಸಿಗಳನ್ನು ಇಟ್ಟು, ಸತ್ಯವ್ರತಕ್ಷೇತ್ರಕ್ಕೆ ಬಂದು ದೇವರಾಜನನ್ನು ನಮಸ್ಕರಿಸಿ, ವೀರನಾರಾಯಣಪುರಕ್ಕೆ ಹೋಗಿ ನಾಥಮುನಿಯ ಯೋಗಾಭ್ಯಾಸ ಸ್ಥಲವನ್ನು ಸಂದರ್ಶಿಸಿ ಶ್ರೀರಂಗಕ್ಕೆ ದಯಮಾಡಿಸಿದರು.

ಈ ರೀತಿಯಾಗಿ ಆಚಾರ್ಯರು ದಿಗ್ವಿಜಯವನ್ನು ಮಾಡಿಕೊಂಡು ಬಂದ ಕಥೆಯನ್ನು ಕೇಳುವವರಿಗೂ ಹೇಳುವವರಿಗೂ ಹರಿಪದ ಪ್ರಾಪ್ತಿಯಾಗುವುದು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ದಿಗ್ವಿಜಯಯಾತ್ರೆಯಲ್ಲಿ

ಶ್ರೀಕೂರ್ಮ-ಶ್ರೀವೇಂಕಟಾಚಲಗಳ ವಿಷ್ಣುಕ್ಷೇತ್ರತ್ವ ನಿರ್ವಾಹವೆಂಬ ಮೂವತ್ತಾರನೆಯ ಅಧ್ಯಾಯವು ಮುಗಿದುದು.

೩೭

ಕಾಂಚಿಯ ಪಶ್ಚಿಮಕ್ಕೆ ಒಂದು ಹರಿದಾರಿಯ ದೂರದಲ್ಲಿ ಕೂರ ಎಂಬ ಅಗ್ರಹಾರವಿತ್ತು. ಅಲ್ಲಿ ಕೂರಾಧಿಪನೆಂದು ಪ್ರಸಿದ್ಧನಾದ ಕೂರನಾಥನು ಬಹು ಶ್ರೀಮಂತನೂ, ಧರ್ಮನಿಷ್ಠನೂ, ಸರ್ವಶಾಸ್ತ್ರವಿಶಾರದನೂ ಆಗಿದ್ದನು. ಆತನು ಸಕುಟುಂಬನಾಗಿ ಸೂರ್ಯೋದಯವನ್ನು ಆರಂಭಿಸಿ ಅರ್ಧರಾತ್ರಿಯವರೆಗೂ ಕುಂಟ, ಕುರುಡ ಮೊದಲಾದ ದೀನರೆಲ್ಲರಿಗೂ ಒಂದೇ ಸಮನಾದ ಅನ್ನದಾನ ಮಾಡುತ್ತಿದ್ದನು.

ಒಂದು ದಿನ ರಾತ್ರಿ ಆತನ ಅನ್ನಶಾಲೆಯ ಕಂಚಿನ ಬಾಗಿಲನ್ನು ಮುಚ್ಚಿದ ಮಹಾಶಬ್ದವನ್ನು ಕೇಳಿ ಆಶ್ಚರ್ಯಗೊಂಡ ಲಕ್ಷ್ಮಿಯು ವರದರಾಜನನ್ನು ಇದೇನೆಂದು ಕೇಳಲು ವರದರಾಜನು ಕೂರನಾಥನ ವೈಭವವೆಲ್ಲವನ್ನೂ ತಿಳಿಸಿದನು. ಆಗ ಲಕ್ಷ್ಮಿಯು 'ನಾನು ಆತನನ್ನು ನೋಡಬೇಕು'- ಎಂದಳು. ವರದರಾಜನ ಅಪ್ಪಣೆಯಂತೆ ಕಾಂಚೀಪೂರ್ಣರು ಆತನನ್ನು ಕರೆತರಲು ಹೋಗಿ ನಡೆದುದೆಲ್ಲವನ್ನೂ ತಿಳಿಸಿದನು. ಇದನ್ನು ಕೇಳಿ ಬಹಳವಾಗಿ ಆಲೋಚಿಸಿದ ಕೂರನಾಥನು -'ಕೃತಘ್ನನೂ ದುರಹಂಕಾರಿಯೂ ಪಾಪಿಯೂ ಆದ ನಾನೆಲ್ಲಿ? ಬ್ರಹ್ಮರುದ್ರಾದಿವಂದಿತಳೂ ಜಗನ್ಮಾತೆಯೂ ಆದ ಲಕ್ಷ್ಮಿಯೆಲ್ಲಿ? ಯಾವ ದೇವಿಯ ಅಪಾಂಗದ ಸೂಕ್ಷ್ಮವಾದ ತೆರೆಯುವಿಕೆ, ಮುಚ್ಚುವಿಕೆಗಳಿಂದಲೇ ಜಗತ್ತಿನ ಜನ್ಮವೂ ಲಯವೂ ಆಗುವುದೋ ಅಂತಹ ಶ್ರೀದೇವಿಗೆ ನಮಸ್ಕಾರವು. ಮದತ್ರಯವನ್ನು ಬಿಟ್ಟವನಿಗೆ ಮೋಕ್ಷವು ಹಸ್ತಗತವಾಗಿರುವುದು'- ಎಂದು ಹೇಳಿ ನಿಸ್ಪೃಹನಾಗಿ ಶ್ರೀರಂಗವನ್ನು ಕುರಿತು ಹೊರಟನು.

ಕಾಂಚೀಪೂರ್ಣರು ನಡೆದುದೆಲ್ಲವನ್ನೂ ದೇವರಾಜನಿಗೆ ತಿಳಿಸಲು, ಅವನ ಜ್ಞಾನ ವೈರಾಗ್ಯಗಳನ್ನು ಕಂಡ ಪರಮಾತ್ಮನು ಸಂತುಷ್ಟನಾದನು.

ಇತ್ತ ಕೂರನಾಥನು ಶ್ರೀರಂಗಕ್ಕೆ ಹೊರಟು ಕಾಡುಮಾರ್ಗದಲ್ಲಿ ಹೋಗುತ್ತಿದ್ದನು. ಆತನನ್ನು "ಆಂಡಾಳ್" ಎಂಬ ಆತನ ಹೆಂಡತಿಯು ಹಿಂಬಾಲಿಸುತ್ತಿದ್ದಳು. ಆದರೆ, ಸರ್ವಸ್ವವನ್ನೂ ಆತನು ತ್ಯಾಗಮಾಡಿರಲು, ಆಕೆಯು ರತ್ನಖಚಿತವಾದ ಒಂದು ಬಂಗಾದ ಬಟ್ಟಲನ್ನು ಬಟ್ಟೆಯಲ್ಲಿ ಮುಚ್ಚಿಕೊಂಡು ಭಯದಿಂದ ಹಿಂದೆ ಹಿಂದೆ ಬರುತ್ತಿದ್ದಳು. ಕೂರನಾಥನು ನೋಡಿ ಮುಂದೆ ಮುಂದೆ ಹೋಗುತ್ತಿದ್ದನು. ಆಗ ಆಕೆಯು -'ಎಲೈ ನಾಥನೆ, ಈ ದಾರಿಯಲ್ಲಿ ಭಯವಾಗುವುದಿಲ್ಲವೇ?'- ಎಂದು ಕೇಳಿದಳು. ಅದಕ್ಕೆ ಆತನು 'ಹಣವಿರುವವರಿಗೆ ಭಯ. ಮಾಂಸವು ನೀರಿನಲ್ಲಿ ಮೀನುಗಳಿಂದಲೂ, ಭೂಮಿಯಲ್ಲಿ ದುಷ್ಟಮೃಗಗಳಿಂದಲೂ, ಆಕಾಶದಲ್ಲಿ ಪಕ್ಷಿಗಳಿಂದಲೂ ಕಿತ್ತು ತಿನ್ನಲ್ಪಡುವಂತೆಯೂ, ಪ್ರಾಣಿಗಳಿಗೆ ಮೃತ್ಯುವಿನಿಂದ ಭಯವಿರುವಂತೆಯೂ, ಹಣವಿರುವವರಿಗೆ ಯಾವಾಗಲೂ ಭಯವುಂಟು. ನಿನ್ನಲ್ಲಿ ಹಣವೇನಾದರೂ ಇದ್ದರೆ ಅದನ್ನು ನನ್ನ ಕೈಗೆ ಕೊಡು'- ಎನ್ನಲು, ಆಕೆಯು ನಂಬಿಕೆಯಿಂದ -'ತಾವು ಸರ್ವಸ್ವವನ್ನು ತ್ಯಾಗಮಾಡಲು, ಹಾಲು ಕುಡಿಯುವ

ತಮ್ಮ ಬಂಗಾರದ ಬಟ್ಟಲೊಂದನ್ನು ಮಾತ್ರ ತಂದಿರುವೆನು'- ಎಂದು ಹೇಳುತ್ತ ಪತಿಯ ಕೈಗೆ ಕೊಟ್ಟಳು. ಆತನು ಅದನ್ನು ತೆಗೆದು ಕಾಡಿನಲ್ಲಿ ದೂರಕ್ಕೆ ಎಸೆದು -'ಇನ್ನು ಮೇಲೆ ಭಯಕ್ಕೆ ಕಾರಣವಿಲ್ಲ, ನಿಶ್ಚಿಂತಳಾಗಿ ಬಾ'- ಎಂದನು. ಸ್ವಲ್ಪ ಹೊತ್ತಿನಲ್ಲಿಯೇ ಸಮಾಧಾನ ಹೊಂದಿದ ಆಕೆಯು ಪತಿಯೊಡನೆ ಸಂತೋಷದಿಂದ ಹೊರಟಳು. ಕೂರನಾಥನಿಗೆ ರಂಗರಾಜ, ಯತಿರಾಜರ ಸಂದರ್ಶನದ ಉತ್ಕಟಾಕಾಂಕ್ಷೆಯುಂಟಾಗಿತ್ತು. ಆಚಾರ್ಯರು ಸಹ ಕೂರನಾಥನು ಬಂದದನ್ನು ಕೇಳಿ ಕೂಡಲೇ ಮಠಕ್ಕೆ ಕರೆಸಿಕೊಂಡು ಆಲಂಗಿಸಿ ಸಂತೋಷಪಟ್ಟರು.

ಹೀಗೇ ಕೂರನಾಥನು ತನ್ನ ಅಪರಿಮಿತವಾದ ಸಮಸ್ತ ಸಂಪತ್ತಿಗಳನ್ನೂ ತ್ಯಜಿಸಿ, ಶ್ರೀರಂಗಕ್ಕೆ ಬಂದು ಉಂಛವೃತ್ತಿಯನ್ನಾಶ್ರಯಿಸಿ ಪತ್ನಿಯೊಡನೆ ಶ್ರೀರಂಗದಲ್ಲಿಯೇ ಅನವರತವೂ ಸುಖದಿಂದಿರುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕೂರೇಶನ ಸರ್ವಸಂಪತ್ಪರಿ ತ್ಯಾಗಪೂರ್ವಕ ಶ್ರೀರಂಗನಿತ್ಯನಿವಾಸನೆಂಬ ಮೂವತ್ತೇಳನೆಯ ಅಧ್ಯಾಯವು ಮುಗಿದುದು.

೩೮

ಹೀಗೆ ಕೂರನಾಥನು ಶ್ರೀರಂಗದಲ್ಲಿ ಉಂಛವೃತ್ತಿಯಿಂದಲೇ ಜೀವನವನ್ನು ಕಳೆಯುತ್ತಿರಲು, ಮಳೆಗಾಲದಲ್ಲೊಂದು ದಿನ ಮಧ್ಯಾಹ್ನವಾದರೂ ಹಿಡಿದ ಮಳೆಯು ಬಿಡದೆ ಇರಲು, ಕೂರನಾಥನಿಗೆ ಉಂಛವೃತ್ತಿಗೂ ಅವಕಾಶವಿಲ್ಲವಾಯಿತು. ಆಗ ಆತನು ಸ್ನಾನಮಾಡಿ ಭಗವದರ್ಚನೆ ಮಾಡಿ, ಸ್ವಲ್ಪ ಹಣ್ಣನ್ನು ಭಗವಂತನಿಗೆ ಅರ್ಪಿಸಿ, ತಾನು ಸಾಲಿಗ್ರಾಮ ತೀರ್ಥವನ್ನು ಮಾತ್ರ ಸ್ವೀಕರಿಸಿ ಸುಮ್ಮನಿದ್ದನು. ಸಂಜೆಯಾಗುತ್ತಿರಲು, ಸಂಧ್ಯಾ ವಂದನಾದಿಗಳನ್ನು ಮುಗಿಸಿ, ರಂಗನಾಥನ ಸನ್ನಿಧಿಗೆ ಹೋಗಿ, ಪರಮಾತ್ಮನನ್ನು ನಮಸ್ಕರಿಸಿ ಮನೆಗೆ ಬಂದು ಶಠಾರಿಸೂಕ್ತಿಯನ್ನು ಜಪಿಸುತ್ತ ಮಲಗಿದನು.

ಸ್ವಲ್ಪಹೊತ್ತಿನಲ್ಲಿಯೇ ದೇವಾಲಯದಲ್ಲಿ ರಂಗನಾಥನಿಗೆ ನೈವೇದ್ಯವಾಗುವ ಸಮಯವನ್ನು ಸೂಚಿಸುವ ಕಹಳೆಯ ಧ್ವನಿಯು ಕೇಳಿಸಿತು.ಇದನ್ನು ಕೇಳಿದ ಕೂರನಾಥನ ಪತ್ನಿಯು -'ಎಲೈ ರಂಗೇಶ, ನಿನ್ನ ಭಕ್ತನು ಹಸಿವಿನಿಂದ ಪೀಡಿತನಾಗಿ ಮಲಗಿರಲು ನೀನು ಭುಜಿಸುತ್ತಿರುವುದು ನ್ಯಾಯವೇ?' ಎಂದು ಮನಸ್ಸಿನಲ್ಲಿ ಚಿಂತಿಸಿದಳು. ಆಗ ರಂಗನಾಥನು ದೇವಾಲಯದ ಅಧಿಕಾರಿಯಾದ ಉತ್ತಮಪೂರ್ಣನೆಂಬುವನ ಸ್ವಪ್ನದಲ್ಲಿ ಕಾಣಿಸಿಕೊಂಡು 'ನೀನೀಗಲೇ ಛತ್ರಚಾಮರಾದಿ ಸಮಸ್ತ ವೈಭವಗಳೊಡನೆಯೂ ನನ್ನ ಈ ಪ್ರಸಾದವನ್ನು ತೆಗೆದುಕೊಂಡು ಹೋಗಿ ಕೂರನಾಥನಿಗೆ ಅರ್ಪಿಸು'- ಎನ್ನಲು, ಆತನು ಹಾಗೆಯೇ ಮಾಡಿದನು. ಆಗ ಕೂರನಾಥನು ಭಕ್ತಿಯಿಂದ ಅದನ್ನು ಸ್ವೀಕರಿಸಿದನಾದರೂ ಹೀಗೆ ಆಲೋಚಿಸಿದನು -'ರಂಗನಾಥನು ನನಗೆ ಅನುಗ್ರಹಿಸ ಬೇಕಾದುದೆಲ್ಲವನ್ನೂ ಅನುಗ್ರಹಿಸಿರುವನು. ಇದೇನು, ಇದೊಂದು ಹೊಸರೀತಿ'- ಎಂದು ಚಿಂತಿಸಿ, ಹೆಂಡತಿಯನ್ನು ನೋಡಿ -'ನೀನೇನಾದರೂ ಮನಸ್ಸಿನಲ್ಲಿ ಯೋಚಿಸುತ್ತಿದ್ದೆಯಾ?' ಎಂದು ಕೇಳಿದನು. ಅದಕ್ಕೆ

ಕಾಲಕ್ರಮದಲ್ಲಿ ಕೂರನಾಥನೂ ಗೋವಿಂದನೂ ಪರಾಶರಭಟ್ಟನಿಗೆ ಅರ್ಥಶಿಕ್ಷಣ, ತತ್ವಶಿಕ್ಷಣವೆಲ್ಲವನ್ನೂ ಮುಗಿಸಿದರು. ಪ್ರಾಪ್ತವಯಸ್ಕನಾಗಲು ತಂದೆಯಾದ ಕೂರನಾಥನು ಮಗನಿಗೆ ಮದುವೆಮಾಡಬೇಕೆಂದು ಯೋಚಿಸಿ, ಯತಿರಾಜರ ಸನ್ನಿಧಿಗೆ ಹೋಗಿ, ಸರಿಯಾದ ಸಂಬಂಧವನ್ನು ಸೂಚಿಸಿ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದನು. ಅವರು ಪೂರ್ಣಾಚಾರ್ಯರಿಗೆ ಒಂದು ಕನ್ಯೆಯಿರುವುದಾಗಿಯೂ ಸಂಬಂಧವು ಶ್ಲಾಘ್ಯವಾದುದೆಂದೂ ಸೂಚಿಸಿದರು. ಕೂರನಾಥನು ಅದರಂತೆ ಪೂರ್ಣಾಚಾರ್ಯರ ಬಳಿಗೆ ಹೋಗಿ ಕೇಳಲು ಅವರು ಮೊದಲು ಸಮ್ಮತಿಸಿದರು. ಆದರೂ ಹೊಸ ಸಂಬಂಧವೆಂದು ಸ್ವಲ್ಪ ಸಂಶಯಪಟ್ಟರು. ಕೂರನಾಥನು ಮನೆಗೆ ಬಂದನು. ಇತ್ತ ಮನೆಯಲ್ಲಿಯೂ ಕೂರನಾಥನ ಪತ್ನಿಯು ಮದುವೆಯ ಪ್ರಸ್ತಾಪವನ್ನೇ ಎತ್ತಲು, ಕೂರನಾಥನು ರಂಗನಾಥನಲ್ಲಿ ವಿಜ್ಞಾಪಿಸಿದನು. ರಂಗನಾಥನು -'ಅವನ ಮದುವೆ ಮಾಡುವ ಭಾರವು ನನ್ನದು. ನೀನು ಚಿಂತೆಯಿಲ್ಲದೆ ಸುಖವಾಗಿರು' ಎಂದು ಸಮಾಧಾನಮಾಡಿ ಕಳುಹಿಸಿದನು.

ಮಾರನೆಯ ರಾತ್ರಿ ರಂಗನಾಥನು ಪೂರ್ಣಾಚಾರ್ಯರ ಸ್ವಪ್ನದಲ್ಲಿ -'ನನ್ನ ಮಗನಾದ ಪರಾಶರಭಟ್ಟನಿಗೆ ಕನ್ಯಾದಾನಮಾಡು'- ಎಂದು ತಿಳಿಸಲು, ಅದರಂತೆ ಅವರಿಬ್ಬರ ಮದುವೆ ಯಾಯಿತು. ಯತಿರಾಜರ ಅನುಗ್ರಹವು ಪೂರ್ಣವಾಗಿ ಫಲಿಸಿತು.

ಯತಿರಾಜರು ಸಭೆಯಲ್ಲಿ ಉಪದೇಶ ಮಾಡುತ್ತ ಪ್ರಸಂಗ ಬಂದು -'ನಾನು ಹಿಂದೆ ಸಂನ್ಯಾಸವನ್ನು ಸ್ವೀಕರಿಸಿದಾಗ ದಾಶರಥಿಯೊಬ್ಬನನ್ನು ವಿನಾ ದೇಹಸಂಬಂಧವೆಲ್ಲವನ್ನೂ ಬಿಟ್ಟಿದ್ದೆನು'- ಎಂದನು. ಶಿಷ್ಯರೆಲ್ಲರೂ 'ತಾವು ಹೀಗೆ ಹೇಳಬಹುದೆ?' ಎಂದು ಕೇಳಲು, 'ಸಂನ್ಯಾಸಿಗೆ ತ್ರಿದಂಡವು ಹೇಗೆ ಗ್ರಾಹ್ಯವೋ ಹಾಗೆ ನನಗೆ ದಾಶರಥಿಯು' ಎಂದು ಉತ್ತರವಿತ್ತನು.

ಮುಂದೆ ಆಚಾರ್ಯರು ಶಠಾರಿಸೂಕ್ತಿಯನ್ನು ಪಠಿಸುತ್ತಿರಲು ದಾಶರಥಿಯು ಹಾಗೆಯೇ ಮುಗ್ಧನಾದನು. ಆಚಾರ್ಯರು ಈ ದ್ರಾವಿಡಸೂಕ್ತಿಯು 'ವೇದವೇದ್ಯೇ ಪರೇಪುಂಸಿ ಜಾತೇ ದಶರಥಾತ್ಮಜೇ। ವೇದಃ ಪ್ರಾಚೇತಸಾದಾಸೀತ್ಸಾಕ್ಷಾದ್ರಾಮಾಯಣಾತ್ಮನಾ॥'- ಎಂಬಂತೆ, ವೇದವೇ ದ್ರಾವಿಡ ಪ್ರಬಂಧರೂಪದಲ್ಲಿ ಬಂದಿದೆ ಎಂದು ತಿಳಿಸಿದರು.

ಹೀಗೆ ಆಚಾರ್ಯರು (ಚತುಸ್ಸಪ್ತತಿ) ೭೪ ಪೀಠಗಳಿಂದ(ಅವರಿಂದ ಸ್ಥಾಪಿಸಲ್ಪಟ್ಟ ಮಠಗಳು)ಲೂ, ಅಪರಿಮಿತ ಶಿಷ್ಯಸಂಪತ್ತಿನಿಂದಲೂ ಕೂಡಿ ಶ್ರೀರಂಗದಲ್ಲಿ ಅಮಿತ ವೈಭವದಿಂದ ಮೆರೆಯುತ್ತಿದ್ದರು.

ಇಬಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀಪರಾಶರಭಟ್ಟಾರ್ಯನ ವಿವಾಹಾದಿ ಕಥನವೆಂಬ ಮೂವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

## ೪೦

ಆಚಾರ್ಯರು ಅತಿವೈಭವದಿಂದ ರಂಗನಾಥನ ಕೈಂಕರ್ಯ ನಿರತರಾಗಿಲು ಶತ್ರುಮಿತ್ರರೆನ್ನದೆ ಎಲ್ಲರೂ ಅವರ ಶಿಷ್ಯರಾದರು.

ನಿಚುಳವೆಂಬ ಒಂದು ನಗರ. ಅಲ್ಲಿ ಚಾಣೂರನಂತೆ ಅಪ್ರತಿಮವೀರನಾದ ಧನುರ್ದಾಸನೆಂಬ ಒಬ್ಬ ಮಲ್ಲನಿದ್ದನು. ಹೇಮಾಂಬಾ ಎಂಬ ವಾರಾಂಗನೆಯು ಅವನಿಗೆ ಪ್ರಿಯಳಾಗಿದ್ದಳು. ಅವನು ಕೇವಲ ಅವಳ ಕಣ್ಣುಗಳ ಸೌಂದರ್ಯಕ್ಕೇ ಮುಗ್ಧನಾಗುತ್ತಿದ್ದನು.

ಶ್ರೀರಂಗದಲ್ಲಿ ವಸಂತೋತ್ಸವ (ಚೈತ್ರೋತ್ಸವ)ವು ಆರಂಭವಾಯಿತು. ಶ್ರೀರಂಗನಾಥನ ಆ ಮಹೋತ್ಸವವನ್ನು ನೋಡಲು ಹೇಮಾಂಬೆಯು ಹೊರಟಳು. ಧನುರ್ದಾಸನೂ ಅವಳನ್ನು ಅನುಸರಿಸಿದನು. ಆದರೆ ಬೀದಿಯಲ್ಲಿ ಹೋಗುತ್ತಿರುವಾಗಲೂ ಅವನು ಅವಳ ಮುಖವು ಬಾಡದಿರುವಂತೆ ಛತ್ರಿಯನ್ನು ಮರೆಮಾಡಿಕೊಂಡು ಅವಳ ಮುಖವನ್ನೇ ನೋಡುತ್ತ ಅಲ್ಲಲ್ಲೇ ಎಡವಿ ಬೀಳುತ್ತ ಹೋಗುತ್ತಿದ್ದನು.

ಇತ್ತ ಆಚಾರ್ಯರು ಕಾವೇರಿ ನದಿಯಲ್ಲಿ ಶಿಷ್ಯರೊಡನೆ ಸ್ನಾನಮಾಡುತ್ತ, ಈ ದೃಶ್ಯವನ್ನು ಆಕಸ್ಮಿಕವಾಗಿ ಕಂಡರು. ಅವನನ್ನು ಹೇಗಾದರೂ ಈ ವ್ಯಸನದಿಂದ ತಪ್ಪಿಸಬೇಕೆಂದು ಮನಸ್ಸು ಮಾಡಿ ಅವನ ಹಿಂದೆ ಕೆಲವು ಶಿಷ್ಯರನ್ನು ಕಳುಹಿಸಿದರು. ಅವರು ಅವನ ವಸತಿಸ್ಥಾನವನ್ನು ತಿಳಿದುಕೊಂಡು ಬಂದರು. ಉತ್ಸವವೆಲ್ಲವೂ ಆದ ಮೇಲೆ ಆಚಾರ್ಯರು ಧನುರ್ದಾಸನನ್ನು ಕರೆಸಿ -'ನೀನು ಯಾರು? ಇಲ್ಲಿಗೆ ಬಂದ ಕಾರಣವೇನು?'- ಎಂದು ಕೇಳಿದರು. ಅವನು -'ನಾನು ಒಬ್ಬ ಮಲ್ಲನು, ನನ್ನ ಹೆಸರು ಧನುರ್ದಾಸ. ನಿಚುಳಾನಗರವು ನನ್ನ ಊರು. ಚೈತ್ರೋತ್ಸವ ದರ್ಶನಕ್ಕಾಗಿ ಇಲ್ಲಿಗೆ ಬಂದಿರುವೆನು'- ಎಂದನು. ಅದನ್ನು ಕೇಳಿ ಆಚಾರ್ಯರು ನಗುತ್ತ -'ಎಲೈ ಧನುರ್ದಾಸ, ನಿನ್ನ ಕೆಲಸವನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಲೋಕದಲ್ಲಿ ಪುರುಷರು ಕಾಮಾತುರರಾದರೂ ಸಹ ರಹಸ್ಯದಲ್ಲಿ ಸುಖಾನುಭವಮಾಡುವುದುಂಟು. ನಿನ್ನಂತಹ ಶೂರರು ರಾಜಬೀದಿಯಲ್ಲಿ ಎಲ್ಲರೂ ನೋಡುತ್ತಿರುವಂತೆ ವೇಶ್ಯಾಸೇವೆ ಮಾಡುವುದುಂಟೆ?'- ಎಂದು ಕೇಳಿದರು. ಧನುರ್ದಾಸನು 'ಗುರುಗಳೇ, ನಾನು ಅಂಥ ಕಾಮಾತುರನೂ ಅಲ್ಲ, ವೇಶ್ಯಾಲಂಪಟನೂ ಅಲ್ಲ, ಆದರೆ ಹೇಮಾಂಬಾ ಎಂಬ ಒಬ್ಬ ವಾರಾಂಗನೆಯು ನನಗೆ ಪ್ರಿಯಳಾಗಿರುವಳು. ಅವಳ ಕಣ್ಣುಗಳನ್ನು ನೋಡುವುದರಲ್ಲಿ ಮಾತ್ರ ನನಗೆ ಆಶೆಯುಂಟು. ಅವಳೂ ಈ ಉತ್ಸವಕ್ಕಾಗಿ ಬರುತ್ತಿರಲು ಬಿಸಿಲಿನಲ್ಲಿ ಅವಳ ಮುಖವು ಬಾಡಿ ಕಣ್ಣುಗಳೂ ಎಲ್ಲಿ ಬಾಡಿಹೋಗುವುವೋ ಎಂದು ಮಾತ್ರ ಹಾಗೆ ಬರುತ್ತಿದ್ದೆನು'- ಎಂದನು. ಆಚಾರ್ಯರು -'ಧನುರ್ದಾಸ, ಅವುಗಳಿಗಿಂತ ಸುಂದರವಾದ ಕಣ್ಣುಗಳನ್ನು ತೋರಿಸಿದರೆ ಈ ಆಸಕ್ತಿಯನ್ನು ಬಿಡುವೆಯೋ?'- ಎನ್ನಲು, 'ಅವಶ್ಯವಾಗಿಯೂ ಬಿಡುವೆನು, ಮತ್ತು ತಾವು ನನಗೆ ಹಿತವಾದುದನ್ನು ಉಪದೇಶಿಸಿ ಅನುಗ್ರಹಿಸಬೇಕು'- ಎಂದು ಪ್ರಾರ್ಥಿಸಿದನು. ಆಚಾರ್ಯರು ಆತನನ್ನು ಶ್ರೀರಂಗರಾಜನ ಸನ್ನಿಧಿಗೆ ಕರೆದುಕೊಂಡು ಹೋಗಿ ಶೇಷಶಯನನಾದ ರಂಗನಾಥನ ದರ್ಶನವನ್ನು ಮಾಡಿಸಿ ಆ ಪರಮಾತ್ಮನ ದಿವ್ಯವಾದ ಕಣ್ಣುಗಳನ್ನೂ ತೋರಿಸಿದರು. ರಂಗನಾಥನು ಈ ಧನುರ್ದಾಸನು ಯತಿರಾಜರ ಕಟಾಕ್ಷಕ್ಕೆ ಪಾತ್ರನಾಗಿ ಅವರಿಗೆ ಬೇಕಾದವನಾದನೆಂದು ತಿಳಿದು ತನ್ನ ಕರುಣಾಮಯವಾದ ಕಟಾಕ್ಷಗಳಿಂದ ನೋಡಲು, ಧನುರ್ದಾಸನು ಅತಿಶಯವಾದ ಆನಂದವನ್ನು ಹೊಂದಿ ಆಚಾರ್ಯರ ಶಿಷ್ಯನಾದನು. ಆತನ ಪ್ರಾರ್ಥನೆಯಂತೆ ಆಚಾರ್ಯರು ಅವನಿಗೆ ಪಂಚಸಂಸ್ಕಾರಗಳನ್ನು ಮಾಡಿದರು. ಅವನು ಅನವರತವೂ ಆಚಾರ್ಯ ಕೈಂಕರ್ಯದಲ್ಲಿ

ನಿರತನಾಗಿರುತ್ತಿದ್ದನು.

ಇದನ್ನು ತಿಳಿದ ಹೇಮಾಂಬೆಯು ತಾನೂ ಆಚಾರ್ಯರ ಬಳಿಗೆ ಬಂದು ಬಹುಭಕ್ತಿಯಿಂದ ಪಂಚಸಂಸ್ಕಾರಗಳಿಗಾಗಿ ಪ್ರಾರ್ಥಿಸಲು ಅನುಗ್ರಹಿಸಿದರು. ಮೊದಲಿನಂತೆ ಧನುರ್ದಾಸ -ಹೇಮಾಂಬೆಯರಿಬ್ಬರೂ ದಂಪತಿಗಳಾಗಿಯೇ ಇದ್ದರು. ಆದರೆ ಇಬ್ಬರೂ ದೃಢವ್ರತರಾಗಿಯೂ ಆಚಾರ್ಯ ಕೈಂಕರ್ಯನಿರತರಾಗಿಯೂ ವೈಷ್ಣವ ದಾಸರಾಗಿಯೂ ಇರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯತಿರಾಜರ ಕೃಪೆಯಿಂದ ಹೇಮಾಂಬಾ ಧನುರ್ದಾಸರ ವೈಷ್ಣವತ್ವ ಸಿದ್ಧಿ ಎಂಬ ನಲವತ್ತನೆಯ ಅಧ್ಯಾಯವು ಮುಗಿದುದು.

## ೪೧

ರಾಮಾನುಜಾಚಾರ್ಯರು ಶ್ರೀರಂಗದಲ್ಲಿ ಎರಡನೆಯ ರಂಗನಾಥನಂತೆ ಪ್ರಕಾಶಿಸುತ್ತಿರಲು, ಶ್ರೀರಾಮನಿಗೆ ಮಾರುತಿಯು ಕಿಂಕರನಾಗಿದ್ದಂತೆ ಧನುರ್ದಾಸನು ಆಚಾರ್ಯರ ನಿತ್ಯಕೈಂಕರ್ಯನಿರತನಾಗಿದ್ದನು.

ರಂಗನಾಥನ ತೀರ್ಥೋತ್ಸವ ಸಮಾರಂಭದಲ್ಲಿ ಆಚಾರ್ಯರು ದಾಶರಥಿಯ ಕೈಯನ್ನು ಹಿಡಿದುಕೊಂಡು ಹೋಗಿ ಸ್ನಾನಮಾಡಿ, ಬರುವಾಗ ಧನುರ್ದಾಸನ ಕೈಯನ್ನು ಹಿಡಿದುಕೊಂಡು ಮಠಕ್ಕೆ ಬಂದರು. ಇದನ್ನು ಕಂಡು ಆಶ್ಚರ್ಯಗೊಂಡ ವಿಪ್ರರು ಕಾರಣವನ್ನು ಕೇಳಿದರು. ಅದಕ್ಕೆ ಆಚಾರ್ಯರು -'ಲೋಕದಲ್ಲಿ ವಿದ್ಯಾಮದ, ಧನಮದ, ಅಭಿಜನಮದವೆಂದು ಮದತ್ರಯವುಂಟು. ಇದನ್ನು ಬಿಡುವುದೇ ಸಜ್ಜನರ ಲಕ್ಷಣ. ಈ ಮಲ್ಲನು ಮದತ್ರಯವನ್ನೂ ಬಿಟ್ಟವನಾದುದರಿಂದ ಇವನ ಕೈಯನ್ನು ಸ್ನಾನವಾದ ಮೇಲೆ ಹಿಡಿದುಕೊಂಡು ಬಂದೆನು'- ಎಂದರು. ಇದನ್ನು ಕೇಳಿ ವಿಪ್ರರು ಲಜ್ಜೆಗೊಂಡರು. ಸಾತ್ವಿಕನಾಗಿಯೂ, ಯತಿಪತಿಯ ಕೈಂಕರ್ಯನಿರತನೂ ಆದ ಆ ಧನುರ್ದಾಸನ ಭಾವವನ್ನು ತಿಳಿಯದ ವೈಷ್ಣವಶ್ರೇಷ್ಠರು 'ಯಾವನೋ ಜಟ್ಟಿ, ವೇಶ್ಯಾಲಂಪಟ, ಶೂದ್ರ, ಅಶುದ್ಧ, ಅಲ್ಪ, ಇವನಿಗೂ ವೇದವೇದಾಂತ ಪಾರಂಗತರಾದ ವೈಷ್ಣವರಿಗೂ ಯಾವ ಸಮಾನತೆ?' ಇದೇ ಮೊದಲಾಗಿ ನಿಂದಿಸುತ್ತಿದ್ದರು. ಆಚಾರ್ಯರು ವೈಷ್ಣವರ ಈ ಬುದ್ಧಿಯನ್ನು ತಿರುಗಿಸುವುದಕ್ಕಾಗಿ ಯೋಚಿಸಿ ಒಂದು ಉಪಾಯವನ್ನು ಮಾಡಿದರು.

ಒಂದು ದಿನ ಒಬ್ಬ ಶಿಷ್ಯನನ್ನು ಕರೆದು -'ವತ್ಸ, ಇಲ್ಲಿನೋಡು, ನಮ್ಮ ಮಠದಲ್ಲಿರುವ ಈ ವೈಷ್ಣವರು ಅವರ ಬಟ್ಟೆಗಳನ್ನು ಒಗೆದು ಒಣಗಿ ಹಾಕಿದ್ದಾರಷ್ಟೆ. ಅರ್ಧರಾತ್ರಿಯಲ್ಲಿ ಯಾರಿಗೂ ತಿಳಿಯದಂತೆ ಪ್ರತಿಯೊಬ್ಬರ ಬಟ್ಟೆಯಲ್ಲಿಯೂ ಒಂದೊಂದು ಕೌಪೀನದಷ್ಟು ಬಟ್ಟೆಯನ್ನು ಮಾತ್ರ ಹರಿದು ಗೊತ್ತಾಗದಂತೆ ಇಡು'- ಎಂದು ಹೇಳಲು, ಅವನು ಹಾಗೆಯೇ ಮಾಡಿದನು. ಬೆಳಗಾಯಿತು ವೈಷ್ಣವರೆಲ್ಲರೂ ಸ್ನಾನಮಾಡಿ ಬಟ್ಟೆಯನ್ನು ನೋಡಿದಾಗ ಎಲ್ಲರ ಬಟ್ಟೆಯೂ ಒಂದೇ ಸಮನಾಗಿ ಹರಿದಿರಲು, ಬಾಯಿಗೆ ಬಂದಂತೆ ಬಯ್ಯುತ್ತ ಕೋಲಾಹಲವನ್ನು ಮಾಡುತ್ತ ಒಂದು ಸಣ್ಣ ಯುದ್ಧವನ್ನೇ ಮಾಡಿಬಿಟ್ಟರು. ಈ ಗದ್ದಲವನ್ನು

ಕೇಳಿ ಆಚಾರ್ಯರು ಬಂದು ಹೇಗೋ ಸಮಾಧಾನ ಮಾಡಿದರು.

ಇನ್ನೊಂದು ದಿನ ಆಚಾರ್ಯರು ರಾತ್ರಿಯಹೊತ್ತಿನಲ್ಲಿ ಧನುರ್ದಾಸನನ್ನು ಕರೆಸಿ ಅವನೊಡನೆ ಮಾತನಾಡುತ್ತಿದ್ದರು. ಸ್ವಲ್ಪ ಹೊತ್ತಿನ ಮೇಲೆ ಸ್ವಲ್ಪ ಬಟ್ಟೆ ಹರಿದುಹೋದುದಕ್ಕಾಗಿ ಕಾದಾಡಿದ ವೈಷ್ಣವರನ್ನು ಕರೆದು ಗುಟ್ಟಾಗಿ -'ಧನುರ್ದಾಸನು ಈಗ ನನ್ನ ಬಳಿಯಲ್ಲಿಯೇ ಮಾತನಾಡುತ್ತಿರುವನಷ್ಟೆ. ಈಗ ರಾತ್ರಿಯಾಗಿರುವುದರಿಂದ ಈತನ ಪತ್ನಿಯು ಮನೆಯಲ್ಲಿ ಮಲಗಿ ನಿದ್ರೆ ಮಾಡುತ್ತಿರಬಹುದು. ನೀವು ಬೇಗ ಹೋಗಿ ಅವಳ ಮೈಮೇಲೆ ಇರುವ ಒಡವೆಗಳನ್ನು ತಿಳಿಯದಂತೆ ಹೇಗಾದರೂ ಮಾಡಿ ತೆಗೆದುಕೊಂಡು ಬನ್ನಿ'- ಎಂದರು. ಗುರುಗಳು ಹೇಳಿದ್ದರಿಂದ ಅವರೂ ಧನುರ್ದಾಸನ ಮನೆಗೆ ಹೋದರು. ಆಕೆಯು ಎಡಮಗ್ಗುಲಾಗಿ ನಿದ್ರಿಸುತ್ತಿರಲು ವೈಷ್ಣವರು ಬಲಗಡೆಯ ಆಭರಣಗಳನ್ನು ತೆಗೆಯಲು ಪ್ರಯತ್ನಿಸಿದರು. ಹೇಮಾಂಬೆಗೆ ಸ್ವಲ್ಪ ಎಚ್ಚರವಾಗಿ ಗಮನಿಸಲು ವೈಷ್ಣವರು ಭೂಷಣಗಳನ್ನು ತೆಗೆದುಕೊಳ್ಳುತ್ತಿರುವುದು ತಿಳಿಯಿತು. ಆಕೆಯು ವೈಷ್ಣವ ಕೈಂಕರ್ಯನಿರತಳಾದುದರಿಂದ ಅವರು ಒಂದು ಕಡೆಯ ಆಭರಣಗಳನ್ನೆಲ್ಲಾ ತೆಗೆದುಕೊಳ್ಳುವವರೆಗೂ ಸುಮ್ಮನಿದ್ದು ಇನ್ನೊಂದು ಕಡೆಯ ಆಭರಣಗಳನ್ನೂ ತೆಗೆದುಕೊಳ್ಳಲೆಂಬ ಉದ್ದೇಶದಿಂದ ಪಕ್ಕಕ್ಕೆ ಮೆಲ್ಲಗೆ ಹೊರಳಿದಳು. ಆಗ ವೈಷ್ಣವರು ಆಕೆಯು ಎಚ್ಚರವಾದಳೆಂದು ಹೆದರಿ ಓಡಿಹೋದರು ಮತ್ತು ಅವುಗಳನ್ನು ರಹಸ್ಯವಾಗಿ ಆಚಾರ್ಯರಿಗೆ ಕೊಟ್ಟರು. ಆಚಾರ್ಯರು ಧನುರ್ದಾಸನನ್ನು ಮನೆಗೆ ಕಳುಹಿಸಿ, ಮತ್ತೆ ಆ ವೈಷ್ಣವರನ್ನು ಕರೆದು -'ಧನುರ್ದಾಸನು ಈಗ ಮನೆಗೆ ಹೋಗುತ್ತಿರುವನು. ನೀವೂ ಅವನನ್ನು ಹಿಂಬಾಲಿಸಿ ಮನೆಯಲ್ಲಿ ಏನು ಸಂಭಾಷಣೆಯು ನಡೆಯುತ್ತಿರುವುದೆಂಬುದನ್ನು ಗುಟ್ಟಾಗಿ ತಿಳಿದುಕೊಂಡು ಬನ್ನಿ' ಎಂದರು. ಅವರು ಅವನನ್ನು ಹಿಂಬಾಲಿಸಿ ಹೋಗಿ ಕೇಳುತ್ತಿರಲು, ಹೇಮಾಂಬೆಯು ನಡೆದ ವೃತ್ತಾಂತವೆಲ್ಲವನ್ನೂ ಧನುರ್ದಾಸನಿಗೆ ತಿಳಿಸಿದಳು. ಆಗ ಧನುರ್ದಾಸನು -'ಎಲೈ ಮೂಢಳೆ, ಒಡವೆಯ ಯಜಮಾನರು ಒಡವೆಗಳನ್ನು ತೆಗೆದುಕೊಂಡರು, ಇದರಲ್ಲಿ ನಿನ್ನದೇನು ಸ್ವಾತಂತ್ರ್ಯ? ಸ್ವಾತಂತ್ರ್ಯದಿಂದ ಎಲ್ಲವೂ ಹಾಳಾಗುತ್ತದೆ. ಸ್ವಾತಂತ್ರ್ಯದಿಂದಲೇ ನರಕವು ಸಿದ್ಧ. ಸ್ವಾತಂತ್ರ್ಯ ಬುದ್ಧಿಯಿಂದ ನೀನು ಹೊರಳಿದೆ, ಅದರಿಂದಲೇ ಅವರು ಒಂದು ಕಡೆಯ ಆಭರಣಗಳನ್ನು ಬಿಟ್ಟುಹೋದರು. ನೀನು ಈಗ ಧರಿಸಿರುವ ಆಭರಣಗಳು ವ್ಯರ್ಥವಾದವು. ಅವರು ತೆಗೆದುಕೊಂಡು ಹೋದ ಆಭರಣಗಳೇ ಸಾರ್ಥಕವಾದವು'- ಎಂದು ಹೇಳುತ್ತ ಗುರುಗಳ ಪಾದಾಂಬುಜವನ್ನು ಸ್ಮರಿಸುತ್ತ ನಿದ್ರೆಮಾಡಿದನು. ವೈಷ್ಣವರು ಇದನ್ನು ಆಚಾರ್ಯರಿಗೆ ತಿಳಿಸಿದರು. ಆಗ ಆಚಾರ್ಯರು 'ನೋಡಿದಿರಾ, ಯಾವನೋ ಅಜ್ಞಾನದಿಂದ ನಿಮ್ಮ ಬಟ್ಟೆಯ ಒಂದು ಚೂರನ್ನು ಹರಿಯಲು ಬಾಯಿಗೆ ಬಂದಂತೆ ಬಯ್ಯುತ್ತ ಒಂದು ದೊಡ್ಡ ಯುದ್ಧವನ್ನೇ ಮಾಡಿದಿರಿ. ಧನುರ್ದಾಸನಿಗೆ ನಿಮ್ಮ ಕೆಲಸದಿಂದ ಸ್ವಲ್ಪವಾದರೂ ಮನಸ್ಸು ನೋಯದೆ ಎಷ್ಟು ನಿರ್ಮಲವಾಗಿತ್ತು. ಆದ್ದರಿಂದ ಲೋಕದಲ್ಲಿ ಗುಣಗಳೇ ಶ್ರೇಯಸ್ಸಿಗೆ ಕಾರಣವೇ ಹೊರತು ಜಾತಿಯಲ್ಲ (ನ ಜಾತಿಃ ಕಾರಣಂ ಲೋಕೇ ಗುಣಾಃ ಕಲ್ಯಾಣಹೇತವಃ) ಎಂಬುದಾಗಿ ಅನೇಕ ಶಾಸ್ತ್ರಾರ್ಥಗಳನ್ನು ಉಪದೇಶಿಸಿದರು. ಇದನ್ನೆಲ್ಲ ಅರಿತ ವೈಷ್ಣವರು ಲಜ್ಜಿತರಾದರು.

ಬೆಳಗಾದ ಮೇಲೆ ಧನುರ್ದಾಸನನ್ನು ಕರೆಸಿ ನಡೆದ ವೃತ್ತಾಂತವನ್ನೆಲ್ಲಾ ತಿಳಿಸಿ

ಅವನಿಗೆ ಆಭರಣಗಳನ್ನು ಕೊಡಲು ಪರಾಧೀನನಾದ ಅವನು ಅವುಗಳನ್ನು ತೆಗೆದುಕೊಂಡು ಹೋದನು.

ಹೀಗೆ ಆಚಾರ್ಯರು ಸ್ನಾನಮಾಡಿದ ಮೇಲೆ ಧನುರ್ದಾಸನ ಕೈಯನ್ನು ಹಿಡಿದುಕೊಂಡು ಬರುವುದರ ಮೂಲಕ ಅಸೂಯಗ್ರಸ್ತರಾದ ವೈಷ್ಣವರು ಮದವನ್ನು ನೀಗಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಧನುರ್ದಾಸ ಹೇಮಾಂಬೆಯರ ಗುಣೋತ್ಕರ್ಷ ಪ್ರಕಟನವೆಂಬ ನಲವತ್ತೊಂದನೆಯ ಅಧ್ಯಾಯವು ಮುಗಿದುದು.

## ೪೨

ಮಹಾಪೂರ್ಣರು ಗುರುಗಳ ಅಪ್ಪಣೆಯಂತೆ ಮೂರನೇರಪೂರ್ಣನೆಂಬುವನಿಗೆ (ಶೂದ್ರ) ಬ್ರಹ್ಮಮೇಧ ಸಂಸ್ಕಾರ ಮಾಡಿದರು. ಇದನ್ನು ಕೇಳಿದ ವೈಷ್ಣವರೆಲ್ಲರೂ 'ಶೂದ್ರಸಂಸ್ಕಾರ ಕಾರಿ, ಶೂದ್ರಶುಶ್ರೂಣರತ, ವರ್ಣಧರ್ಮವ್ಯತಿಕ್ರಮಿ' ಇಂಥವನು ಬ್ರಾಹ್ಮಣರ ಮಧ್ಯ ಇರಲು ಅಯೋಗ್ಯನೆಂದು ನಿಂದಿಸಿದರು. ಪೂರ್ಣಾಚಾರ್ಯರ ಮಗಳಾಗ 'ಅತ್ತುಳಾಯಿ' ಎಂಬುವಳು ನಿರ್ಭಯಳಾಗಿ ಈ ಅಪಕೀರ್ತಿಯನ್ನು ರಂಗನಾಥನಲ್ಲಿ ಆರೋಪಿಸಿ, ವೈಷ್ಣವರನ್ನು ಕುರಿತು -'ಇನ್ನು ಮುಂದೆ ಶ್ರೀಹರಿಪಾದವಂದನವನ್ನೂ ಮಾಡಬೇಡಿ, ಶ್ರೀಪಾದತೀರ್ಥ ಗ್ರಹಣವನ್ನೂ ಮಾಡಬೇಡಿ, ಪರಾಂಕುಶರ ಪಾದದಾಣೆ'- ಎಂದಳು. ಈ ಕೋಲಾಹಲವೆಲ್ಲವನ್ನೂ ಕೇಳಿ ರಾಮಾನುಜಾಚಾರ್ಯರು ಪೂರ್ಣಾಚಾರ್ಯರ ಬಳಿಗೆ ಬಂದು -'ನಾನು ವರ್ಣಾಶ್ರಮ ಧರ್ಮಗಳಿಗೆ ಅವಿರೋಧವಾಗಿ ಈ ಜನರೆಲ್ಲರನ್ನೂ ನಾನು ಸಂಸಾರ ವಿನಿರ್ಮುಕ್ತರನ್ನಾಗಿ ಮಾಡುತ್ತಿರಲು ತಾವೇಕೆ ಹೀಗೆ ಮಾಡಿದಿರಿ? ಎಂದು ಕೇಳಿದರು. ಅದಕ್ಕೆ ಪೂರ್ಣಾಚಾರ್ಯರು -'ಪ್ರೀತಿಯಿಂದ ಸಾಮಾನ್ಯಧರ್ಮವನ್ನು ಹರಡಲು ನಾನು ಇಕ್ಷ್ವಾಕುವಂಶ ಪ್ರಭವನಾದ ಶ್ರೀರಾಘವನಿಗಿಂತಲೂ ದೊಡ್ಡವನೇ? ಈ ಪೂರ್ಣನು ಗೃಧ್ರರಾಜನಾದ ಜಟಾಯುವಿ ಗಿಂತಲೂ ಕಡೆಯೆ? ಸಾಮಾನ್ಯಧರ್ಮ ನಿರತನಾದ ಧರ್ಮರಾಜನಿಗಿಂತಲೂ ನಾನು ಮಹಾಮಹಿಮನೆ? ಎಲೈ ಯತಿರಾಜ, ಈ ಪೂರ್ಣನು ವಿದುರನಿಗಿಂತಲೂ ಕಡಿಮೆಯೆ?'- ಎನ್ನಲು ಆಚಾರ್ಯರು ಸಂತುಷ್ಟರಾದರು.

ಒಂದು ಸಲ ಆಚಾರ್ಯರು ಒಬ್ಬ ಮೂಕನನ್ನು ಕರೆದು ಮಠದ ಒಳಕ್ಕೆ ಹೋಗಿ ಬಾಗಿಲನ್ನು ಹಾಕಿಕೊಂಡು ಆತನಿಗೆ ತಮ್ಮ ಶರೀರವನ್ನು ತೋರಿಸಿ ಸಂಜ್ಞೆಯಿಂದಲೇ ಈ ಶರೀರವೇ ರಕ್ಷಕವೆಂದು ತಿಳಿಯಪಡಿಸಲು ಆತನು ತಿಳಿದುಕೊಂಡನು. ಕೂರನಾಥರು ಬಾಗಿಲಿನ ರಂಧ್ರದಿಂದ ಇದನ್ನು ನೋಡಿ ಆಶ್ಚರ್ಯದಿಂದಲೂ ದುಃಖದಿಂದಲೂ, ಆಚಾರ್ಯರೊಡನೆ 'ವ್ಯರ್ಥವಾಗಿ ನಾನು ಉನ್ನತಕುಲದಲ್ಲಿ ಹುಟ್ಟಿ ವ್ಯರ್ಥವಾದ ಶಾಸ್ತ್ರಾರ್ಥ ಗಳನ್ನೆಲ್ಲಾ ಅಭ್ಯಾಸ ಮಾಡಿದೆನು. ನಾನು ಮೂಗನೋ ಅಜ್ಞನೋ ಆಗಿದ್ದರೆ ಆಚಾರ್ಯರು ನನಗೂ ಈ ರಹಸ್ಯವನ್ನು ಉಪದೇಶಿಸುತ್ತಿದ್ದರು'- ಎನ್ನಲು, ಆಚಾರ್ಯರು -'ಹಿಂದೆ ಗೋಷ್ಠೀನಗರದಲ್ಲಿ ಗೋಷ್ಠೀಪೂರ್ಣರು ಬಾಗಿಲನ್ನು ಹಾಕಿಕೊಂಡು ಧ್ಯಾನದಲ್ಲಿದ್ದುದನ್ನು

ಕಂಡೆನು. ಕೇಳಲಾಗಿ, ಅವರೆಂದರು -'ನನ್ನ ಆಚಾರ್ಯರಾದ ಯಾಮುನಾಚಾರ್ಯರು ಕಾವೇರಿಯಲ್ಲಿ ಅಘಮರ್ಷಣವನ್ನು ಜಪಿಸುತ್ತಿದ್ದರೆ ಅವರ ಬೆನ್ನು ಆಮೆಯಂತೆ ಕಾಣುತ್ತಿತ್ತು. ಅದೇ ನನಗೆ ಜಪ್ಯವಾದ ವಸ್ತು. ಇದಕ್ಕೆ ಮಂತ್ರವು 'ಯಾಮುನ'ನೆಂಬ ನಾಮಾಕ್ಷರಗಳೂ ಆದುದರಿಂದ ಗುರುಶರೀರವೇ ಧ್ಯೇಯ, ತನ್ನಾಮವೇ ಜಪ್ಯ' ವೆಂದು ಹೇಳಿದ್ದರು'- ಎಂದು ಹೇಳಿದರು -'ಬಾಲಮೂಕ ಜಡಾರಿಧಾಶ್ಚ ಪಂಗವೋ ಬಧಿರಾಸ್ತಥಾ। ಸದಾಚಾರ್ಯೇಣ ಸಂದೃಷ್ಟ್ಯಾ ಗಮಿಷ್ಯಂತಿ ಪರಾಂಗತಿಂ ॥''- ಎಂಬ ತತ್ವವನ್ನು ಕೂರೇಶ, ದಾಶರಥ್ಯಾದಿ ಶಿಷ್ಯರಿಗೂ ಪ್ರತಿಪಾದಿಸುತ್ತ ಶ್ರೀರಂಗದಲ್ಲಿ ಸುಖವಾಗಿರುತ್ತಿದ್ದರು. (ಜಪ್ಯಂ ನಾಮ ಗುರೋರ್ವಪುಶ್ಚಾನ್ಯದನಿಶಂ ಸ್ಮರ್ಯಂ ಚ ತದ್ವರ್ಷ ತದ್ವತ್ತಂಶ್ರಾವ್ಯ ಮುಪಸ್ಯ ನಿತ್ಯವಸತೇ ರ್ಹೇತುರ್ಗುರುಸ್ಸರ್ವದಾ। ಇತ್ಯಾದ್ಯರ್ಥ ಚಯಂ ಯತಿಕ್ಷತಿ ಪತಿ ಸ್ಸಾಂ ಘ್ರ್ಯಾಶ್ರಿತಾವಾಂ ಮುದಾ ಗೋಷ್ಠೀಪೂರ್ಣ ಸಮೀರಿತಂ ಪ್ರವಿತರನ್ರಂಗೇ ವಿಭಾತ್ಯಹ್ವಹಂ॥)

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗುರುವೇ ಮೋಕ್ಷೋಪಾಯವೆಂಬ ನಲವತ್ತೆರಡನೆಯ ಅಧ್ಯಾಯವು ಮುಗಿದುದು.

## ೪೩

ಶ್ರೀಯಃಪತಿಯಾದ ಶ್ರೀರಂಗನಾಥನು, ಪ್ರಾಪ್ತವಯಸ್ಸನೂ ದಕ್ಷನೂ ಆದ ಮಗನಲ್ಲಿ ಸಂಸಾರಭಾರವನ್ನು ವಹಿಸಿ ತಾನು ನಿಶ್ಚಿಂತನಾಗಿರುವಂತೆ ಶ್ರೀರಾಮಾನುಜಾಚಾರ್ಯರಿಗೆ ತನ್ನ ವಿಭೂತಿದ್ವಯವನ್ನೂ ಅನುಗ್ರಹಿಸಿ, ತಾನು ಶ್ರೀದೇವಿಯೊಡನೆ ಸುಖವಾಗಿಯೂ ಆನಂದವಾಗಿಯೂ ವಿಹರಿಸುತ್ತಿದ್ದನು. ರಾಮಾನುಜಾಚಾರ್ಯರೂ ಸಹ ಜವಾಬ್ದಾರಿಯನ್ನು ತಿಳಿದ ಮಗನು ತಂದೆಯನ್ನು ಸಂತೋಷಪಡಿಸುವಂತೆ, ಅತಿಗೋಪ್ಯವೂ ಮುಕ್ತಿಪ್ರದವೂ ಆದ ಮಂತ್ರರತ್ನಧನವನ್ನೂ ಯಥೇಚ್ಛವಾಗಿ ದಾನಮಾಡಿ ಲೋಕಸಂರಕ್ಷಣ ತತ್ಪರರಾಗಿರುತ್ತಿದ್ದರು. ೭೪ ಪೀಠಗಳಲ್ಲಿರುವ ಆಚಾರ್ಯರ ಶಿಷ್ಯರೂ ಪ್ರಶಿಷ್ಯರೂ ಅವರ ಶಿಷ್ಯರೂ ಸಹ ಬಾಲಮೂಕ ಜಡಾಂಧಾದಿಗಳಿಗೂ ರಾಮಾನುಜಾಚಾರ್ಯರ ದಿವ್ಯದೇಹವನ್ನು ತೋರಿಸಿ, ಎಲ್ಲವನ್ನೂ ಅವರ ಶಿಷ್ಯರನ್ನಾಗಿ ಮಾಡಿ ಮುಕ್ತಿಮಾರ್ಗವನ್ನು ಉಪದೇಶಿಸುತ್ತಿದ್ದರು. 'ದರ್ಶನಸ್ಥಾಪಕೇಽತ್ಯಂತಂ ವಿಷ್ಣೋಃ ಪರಮವೈದಿಕೇ। ವಿದ್ಯಮಾನೇ ಯತಿಶ್ರೇಷ್ಠೇ ಸರ್ವಂ ವಿಷ್ಣುಮಯಂ ಜಗತ್'- ಎಂಬಂತೆ ಪ್ರಪಂಚವೇ ವಿಷ್ಣುಮಯವಾಯಿತು. ಜಾತಿ, ವ್ಯಕ್ತಿ, ವಯಸ್ಸು - ಇವುಗಳ ಯಾವ ಭೇದವೂ ಇಲ್ಲದೆ ಪ್ರತಿಯೊಬ್ಬರೂ ಆಚಾರ್ಯರ ಸಂಬಂಧದಿಂದ ಪರಮಪದವನ್ನು ಹೊಂದಿದರು. ನಮ್ಮ ವಂಶದಲ್ಲಿ ವೈಷ್ಣವನು ಹುಟ್ಟಿದನೆಂಬ ಸ್ವರ್ಗಸ್ಥರಾದ ಪಿತೃ-ಪಿತಾಮಹಾದಿಗಳೆಲ್ಲರೂ ಆನಂದದಿಂದ ಕುಣಿದಾಡುತ್ತಿದ್ದರು. ಹಿಂದೆ ರುಕ್ಮಾಂಗದನು ಧರ್ಮದಿಂದ ರಾಜ್ಯಪರಿಪಾಲನ ಮಾಡುತ್ತಿರಲು ಏಕಾದಶೀ ವ್ರತದಿಂದಲೇ ಸಮಸ್ತರೂ ವೈಷ್ಣವಪದವನ್ನು ಹೊಂದಿದಂತೆಯೂ, ಶ್ವೇತದ್ವೀಪದಂತೆಯೂ ಭಾರತವರ್ಷವು ರಂಜಿಸುತ್ತಿತ್ತು. ರಾಮಾನುಜಯತಿವರ್ಯರಿರಲು ಕಲಿಯು ಕೆಲಸವಿಲ್ಲದವನಾದನು. 'ಪೋಲಿಘ ಪೋಲಿಘ'- ಎಂಬ ಪದ್ಯದ ಅರ್ಥವು ಜನರಿಂದ ಸ್ಪಷ್ಟವಾಯಿತು.

ಇದೆಲ್ಲವನ್ನೂ ನೋಡಿ ಚಿಂತಾಶೋಕಪರಾಯಣನೂ ನಿರ್ವ್ಯಾಪಾರನೂ ಆದ ಯಮನು ಬ್ರಹ್ಮನ ಹತ್ತಿರ ಹೋಗಿ ಎಲ್ಲವನ್ನೂ ವಿಜ್ಞಾಪಿಸಿಕೊಂಡನು. ಹೀಗೆ ಪ್ರಾರ್ಥಿಸಲ್ಪಟ್ಟ ಬ್ರಹ್ಮನು ರುದ್ರಾದಿಗಳೊಡನೆ ಶ್ರೀರಂಗಕ್ಕೆ ಬಂದನು. ಬಂದು ಸುಖಲೋಲುಪನಾಗಿದ್ದ ರಂಗನಾಥನನ್ನು ಸ್ತುತಿಗಳಿಂದ ಎಚ್ಚರಗೊಳಿಸಿದರು. ಎಚ್ಚರಗೊಂಡವನಾಗಿ ಆಚಾರ್ಯರ ಸಾಮಾರ್ಥ್ಯಾತಿಶಯವನ್ನು ನೋಡುವ ಕುತೂಹಲದಿಂದ ಜಗತ್ತನ್ನು ನೋಡಿದನು. ಎಲ್ಲವೂ ಶುದ್ಧಸತ್ವಮಯವಾಗಿ ಕಂಡಿತು. ಹಾಗೆಯೇ ತನ್ನಲ್ಲಿ ಆಲೋಚಿಸಿಕೊಂಡನು -'ನನ್ನ ವಿಭೂತಿದ್ವಯಗಳಲ್ಲಿ ಲೀಲಾವಿಭೂತಿಯು ಅನಿತ್ಯವಾದುದು. ಭೋಗವಿಭೂತಿಯು ನಿತ್ಯವಾದುದು. ಯತಿರಾಜರಿಗೆ ವಿಭೂತಿ ದ್ವಯವನ್ನು ಅನುಗ್ರಹಿಸಲು ಎಲ್ಲವೂ ಒಂದೇ ವಿಧವಾಗಿ ಪರಿಣಮಿಸಿರುವುದು. ತನ್ನ ಸಂಬಂಧ ಮಾತ್ರದಿಂದಲೇ ಸಕಲ ಜಂತುಗಳಿಗೂ ಪರಮಪದವನ್ನು ಉಂಟುಮಾಡುತ್ತಿರುವರು. ಚೇತನರೆಲ್ಲರೂ ನಿತ್ಯಮುಕ್ತರಂತೆ ಪರಿಶುದ್ಧ ರಾಗಿರುವರು. ನಾನು ರಾಮಾನುಜನಿಗೆ ವಿಭೂತಿದ್ವಯವನ್ನು ಅನುಗ್ರಹಿಸಿ ಬಹಳ ಪ್ರಮಾದವಾಯಿತು. ಲಕ್ಷ್ಮೀಪರವಶನಾಗಿ ಲೋಕರಕ್ಷಣೆಗೆಂದು ಆ ಮಹಾತ್ಮನಿಗೆ (ಆದಿಶೇಷ ರೂಪಿಯಾದ ರಾಮಾನುಜನಿಗೆ) ಪ್ರೀತಿಯಿಂದ ವಿಭೂತಿದ್ವಯವನ್ನು ಅನುಗ್ರಹಿಸಿದೆನು. ನಿಜ, ಸ್ತ್ರೀಪರವಶನಾದವನಿಗೆ ಕಾರ್ಯಕಾರ್ಯವಿವೇಕವಿರುವುದೆ? ಆ ಯೋಗಿಯನ್ನಾಶ್ರಯಿಸಿ ಬ್ರಹ್ಮಾದಿಗಳಿಗೂ ಅಸಾಧ್ಯವಾದ ಪರಮಪದವು ಪ್ರಾಣಿಗಳಿಗೆ ಲಭಿಸುತ್ತಿದೆ. ಈತನು ನಿಜವಾಗಿಯೂ ನನ್ನನ್ನು ಅಪ್ರಯೋಜಕನನ್ನಾಗಿ ಮಾಡುವನು. ಈ ಮನ್ನಾಥನನ್ನು ಆಶ್ರಯಿಸತಕ್ಕವರೆಲ್ಲರೂ ಆಚಾರ್ಯಕೈಂಕರ್ಯ ಮಾತ್ರನಿಷ್ಠರಾಗಿಯೂ, ಕಾಮಕ್ರೋಧಾದಿರಹಿತ ರಾಗಿಯೂ, ದ್ರಾವಿಡವೇದ ನಿರತರಾಗಿಯೂ, ತತ್ವಜ್ಞರೂ, ಸಮದರ್ಶಿಗಳೂ, ಅರ್ಥಪಂಚಕಜ್ಞಾನಿಗಳೂ, ಪಂಚಸಂಸ್ಕಾರ ಸಂಸ್ಕೃತರೂ, ಆಕಾರತ್ರಯಸಂಪನ್ನರೂ ಮಹಾಭಾಗವತರೂ ಆಗಿರುವರು. ಹೀಗೆಯೇ ಇದ್ದಂತೆ ಇನ್ನು ಸ್ವಲ್ಪ ದಿನಗಳಲ್ಲಿಯೇ ನನ್ನ ಲೀಲಾವಿಭೂತಿಯು ನಷ್ಟವಾಗುವುದು'. ಹೀಗೆ ಯೋಚಿಸಿ ಲೀಲೈಕರತಿಯುಳ್ಳ ಪರಮಾತ್ಮನು ತನ್ನ ಲೀಲೆಗೆ ಕಾರಣಭೂತನೂ, ಮಹಾಬಲಿಯೂ, ಭಗವದ್ದ್ವೇಷಿಯೂ ಆದ ಚೋಳರಾಜನನ್ನು (ಕ್ರಿಮಿಕಂಠಚೋಳ) ಸೃಷ್ಟಿಸಿದನು. ಮಾಯಾವಿಯಾದ ಪರಮಾತ್ಮನು ಧರ್ಮನಾಶಕ್ಕಾಗಿ ಕ್ರಿಮಿಕಂಠಚೋಳನನ್ನು ಸೃಷ್ಟಿಸಿ ತಾನು ಏನು ತಿಳಿಯದವನಂತೆ ಶ್ರೀದೇವಿ ಯೊಡನೆ ಸುಖವಾಗಿರುತ್ತಿರಲು, ಬ್ರಹ್ಮರುದ್ರಾದಿಗಳೆಲ್ಲರೂ ಅನುಮತಿಯನ್ನು ಪಡೆದು ತಮ್ಮ ತಮ್ಮ ಲೋಕಕ್ಕೆ ಹೋದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕ್ರಿಮಿಕಂಠಚೋಳರಾಜ ಜನ್ಮಹೇತು ಕಥನವೆಂಬ ನಲವತ್ತಮೂರನೆಯ ಅಧ್ಯಾಯವು ಮುಗಿದುದು.

## ೪೪

ದಕ್ಷಿಣದೇಶಾಧಿಪತಿಯಾಗಿ ಕ್ರಿಮಿಕಂಠಚೋಳನು ಚಿತ್ರಕೂಟದಲ್ಲಿ ಇರುತ್ತಿದ್ದನು. ಆತನು ಬಹುಕ್ರೂರಿಯೂ ಧರ್ಮನಾಶಕನು ಆಗಿದ್ದನು. ವೇದವೆಲ್ಲವೂ ಶಿವಪರವೆಂದೂ

ಎಲ್ಲರೂ ಹಾಗೆಯೇ ಹೇಳಬೇಕೆಂದೂ ಹೇಳದಿದ್ದವರಿಗೆ ಬಹುವಿಧವಾದ ಕಠಿಣ ಶಿಕ್ಷೆಗಳನ್ನು ವಿಧಿಸಬೇಕೆಂದು ಕಟ್ಟಪ್ಪಣೆ ಮಾಡಿದ್ದುದಲ್ಲದೆ ಅದರಂತೆ ಮಾಡಲಾರಂಭಿಸಿದ್ದನು. ವೈದಿಕರನ್ನೆಲ್ಲಾ ಹಿಡಿದು ಕೊಂದು ಹಾಕುತ್ತಿದ್ದನು. 'ಶಿವಾತ್ಪರತರಂ ನಾಸ್ತಿ'- ಎಂದು ಪಂಡಿತರೆಲ್ಲರೂ ಬರೆದುಕೊಡಬೇಕೆಂದು ಬಲಾತ್ಕರಿಸತೊಡಗಿದನು. ತನ್ನ ದೇಶದಲ್ಲಿದ್ದವರೆಲ್ಲರನ್ನೂ ನಿರ್ಬಂಧಿಸಿದುದಲ್ಲದೆ ಇತರ ಕಡೆಗಳಲ್ಲಿರುವವರು ಹಾಗೆಯೇ ಮಾಡಬೇಕೆನ್ನುತ್ತಿದ್ದನು. ಕೆಲವರು ಪಂಡಿತರು ರಾಜಾಜ್ಞೆಯೆಂದೂ, ಇನ್ನು ಕೆಲವರು ತಮಗೆ ಬೇಕಾಗಿದ್ದ ಮನೆ-ಮಠ ಇವುಗಳ ಲೋಭದಿಂದಲೂ ಬರೆದುಕೊಟ್ಟರು, ಮತ್ತೆ ಕೆಲವರು ಬರೆಯಲು ಇಷ್ಟವಿಲ್ಲದೆ ಮನೆಮಠಗಳನ್ನು ಬಿಟ್ಟು ಓಡಿಹೋದರು.

ಹೀಗಿರುವಲ್ಲಿ ಆ ರಾಜನಿಗೆ ಮಂತ್ರಿಯಾಗಿದ್ದ ವಿಪ್ರನು ಕೂರನಾಥನ ಶಿಷ್ಯನಾಗಿದ್ದನು. ಅವನು ರಾಜನನ್ನು ಕುರಿತು -'ಈ ಅಲ್ಪರಾದ ಪಂಡಿತರು ಬರೆದದ್ದರಿಂದ ಪ್ರಯೋಜನವೇನು ? ವೈಷ್ಣವಶ್ರೇಷ್ಠರಾದ ಯತಿರಾಜ-ಕೂರನಾಥರು ಬರೆದುಕೊಟ್ಟರೆ ತ್ರಿಭುವನವೇ ಬರೆದುಕೊಟ್ಟಂತೆ ಆಗುವುದು. ಆದುದರಿಂದ ಅವರಿಂದ ಬರೆಸುವ ಏರ್ಪಾಡು ಮಾಡಿದರೆ ಒಳ್ಳೆಯದು'- ಎಂದನು. ರಾಜನು ಕೂಡಲೇ ಅವರನ್ನು ಕರೆಸಲು ಕೆಲವು ದೂತರನ್ನು ಶ್ರೀರಂಗಕ್ಕೆ ಕಳುಹಿಸಿದನು.

ಅವರು ಶ್ರೀರಂಗವನ್ನು ತಲುಪಿ 'ಮನ್ನಾಥನೆಲ್ಲಿ?' ಎಂದು ಕೇಳುತ್ತ, ಯತಿರಾಜರ ಮಠಕ್ಕೆ ಹೋದರು. ಈ ವೃತ್ತಾಂತವನ್ನು ತಿಳಿದ ಒಬ್ಬ ಬ್ರಾಹ್ಮಣನು ಆಗತಾನೆ ಆಚಾರ್ಯರಿಗಾಗಿ ಸ್ನಾನಕುಂಭವನ್ನು ತರುತ್ತಿದ್ದ ಕೂರನಾಥರ ಕಿವಿಯಲ್ಲಿ ಮೆಲ್ಲಗೆ ತಿಳಿಸಿದನು. ಕೂಡಲೇ ಕೂರನಾಥರು ಆಚಾರ್ಯರ ತ್ರಿದಂಡಕಮಂಡಲುಗಳನ್ನು, ಕಾಷಾಯಗಳನ್ನೂ ಧರಿಸಿ ಆಚಾರ್ಯರಿಗೆ ಹೇಳದೆಯೇ ಹೊರಟುಬಿಟ್ಟರು. ಪೂರ್ಣಾಚಾರ್ಯರು ಕೂರನಾಥನನ್ನು ಅನುಸರಿಸಿದರು. ದಾಶರಥಿಯು ಈ ವೃತ್ತಾಂತವೆಲ್ಲವನ್ನೂ ಧರಿಸಿ ಅವರಿಬ್ಬರ ಶುಭವನ್ನು ಚಿಂತಿಸುತ್ತಿದ್ದರು.

ಇಲ್ಲಿರುವುದು ಒಳ್ಳೆಯದಲ್ಲವೆಂದು ಶಿಷ್ಯರಿಂದ ಪ್ರೇರಿಸಲ್ಪಟ್ಟು, ಶ್ರೀರಂಗನಾಥನ ಅನುಮತಿಯನ್ನು ಪಡೆದು ಪಶ್ಚಿಮದ ಕಡೆದೆ ಹೊರಟರು. ಅಲ್ಲಿಯೂ ಕೆಲವರು ರಾಜದೂತರು ಹಿಂಬಾಲಿಸಲು ಆಚಾರ್ಯರು ಒಂದು ಹಿಡಿ ಮರಳನ್ನು ತೆಗೆದುಕೊಂಡು ಮಂತ್ರವನ್ನು ಜಪಿಸಿ - ಅದನ್ನು ಶಿಷ್ಯರ ಕೈಗೆ ಕೊಟ್ಟು ರಾಜದೂತರ ಕಡೆ ಎರಚುವಂತೆ ಹೇಳಿದರು. ಇದರಿಂದ ಆ ದೂತರು ಮಂತ್ರಮುಗ್ಧರಾಗಿ ಆ ಕಡೆಗೆ ಹೋಗಲು ಅಶಕ್ತರಾಗಿ ಹಿಂತಿರುಗಿದರು.

ಇತ್ತ ಕಾಡುದಾರಿಯಲ್ಲಿ ನಡೆಯುತ್ತ ಆಚಾರ್ಯರು ಶಿಷ್ಯರೊಡನೆ ಐದಾರು ದಿನಗಳ ವರೆಗೂ ಉಪವಾಸವಿರಬೇಕಾಯಿತು. ಕೊನೆಗೆ ಒಂದು ಬೆಟ್ಟದ ಬುಡದಲ್ಲಿ ಸ್ವಲ್ಪವೇ ಬೆಂಕಿಯುರಿ ಯುತ್ತಿರುವುದನ್ನು ಕಂಡು ಜನರಿರಬಹುದೆಂದು ನಂಬಿಕೆಯುಂಟಾಗಲು ಆ ಕಡೆಗೆ ತಿರುಗಿದರು. ಅಲ್ಲಿ ಮಂಚದ ಮೇಲೆ ಕುಳಿತ್ತಿದ್ದ ಕೆಲವರು ಬೇಡರು ಹೆಚ್ಚು ಬೆಳಕು ಮಾಡಿ, ಶೀತದಿಂದ ನಡುಗುತ್ತಿರುವ ವೈಷ್ಣವರಿಗೆ ಶುಭ್ರವಸ್ತ್ರಗಳನ್ನು ಕೊಟ್ಟು ತಮಗೆ ಶಕ್ತಿಯಿದ್ದಂತೆ ಉಪಚರಿಸಿದರು. ಮತ್ತು ಅವರಲ್ಲಿ ಹೀಗೆ ಸಂಭಾಷಣೆಯು ನಡೆಯಿತು. ಬೇಡರು -'ನೀವು ಯಾರು? ನಿಮ್ಮ ದೇಶವಾವುದು? ಈ ವನಕ್ಕೆ ಏತಕ್ಕೆ ಬಂದಿರಿ?'

ವೈಷ್ಣವರು -'ಏನೋ ಒಂದು ಕಾರಣದಿಂದ ಶ್ರೀರಂಗದಿಂದ ನಾವು ಈ ಕಾಡಿಗೆ ಬಂದಿದ್ದೇವೆ'. ಬೇಡರು -'ಶ್ರೀರಂಗದಲ್ಲ ಲಕ್ಷ್ಮಣಾಚಾರ್ಯರು ಕ್ಷೇಮವಾಗಿರುವರೇ?' ವೈಷ್ಣವರು -'ವನಚರರಾದ ನಿಮಗೆ ಲಕ್ಷ್ಮಣಾಚಾರ್ಯರ ಪರಿಚಯವು ಹೇಗಾಯಿತು? ಬೇಡರು -'ಹಿಂದೆ ಒಂದು ಸಲ ಆ ಮಹಾತ್ಮರು ನದಿಯ ಪ್ರವಾಹದಲ್ಲಿ ಕೊಚ್ಚಿಕೊಂಡು ಬರುತ್ತಿದ್ದ ಶಂಖಚಕ್ರಗಳಿಂದ ಲಾಂಛಿತವಾದ ಒಂದು ಶವವನ್ನು ನೋಡಿ ದಯೆಯಿಂದ ಸಂಸ್ಕರಿಸಿದರು. ಹಿಂದೆ ವರದರಾಜನು ಆ ಮಹಾತ್ಮನನ್ನು -'ನಿನ್ನಿಂದ ದೇಶವು ಚೆನ್ನಾಗಿದೆ. ನೀನು ನನಗೆ ಅತ್ಯಂತ ಪ್ರಿಯನು' ಎಂದು ಹೇಳಿದನು. ನಾವೆಲ್ಲರೂ ಅದೇ ಮಹಾತ್ಮನ ಶಿಷ್ಯರು. ನಮ್ಮ ಗುರುಗಳೂ "ನಿಮ್ಮ ಪರಮಾಚಾರ್ಯರು ಮನ್ನಾಥನು. ಅವರ ಪಾದಾಂಬುಜವೇ ನಿಮಗೆ ರಕ್ಷಕವಲ್ಲದೆ ಮತ್ತೆ ಯಾವುದೂ ಇಲ್ಲ' ಎಂದಿದ್ದರು. ಆಗ ವೈಷ್ಣವರು ಯತಿರಾಜರನ್ನು ತೋರಿಸಲು ಅವರ ಪಾದಗಳಲ್ಲಿ ನಮಸ್ಕರಿಸಿ, ತಮ್ಮಲ್ಲಿದ್ದ ಕಂದಮೂಲಗಳನ್ನೂ ಜೇನುಮೊದಲಾದವುಗಳನ್ನೂ ಭಕ್ತಿಯಿಂದ ಅರ್ಪಿಸಿದರು. ಯತಿರಾಜರು ಭಕ್ತಿಯಿಂದ ಅವರು ಕೊಟ್ಟ ಆಹಾರವನ್ನು ಯಥೋಚಿತವಾಗಿ ಸ್ವೀಕರಿಸಿ ರಾತ್ರಿ ಶಿಷ್ಯರೊಡನೆ ಸುಖವಾಗಿ ಮಲಗಿದ್ದರು.

ಬೆಳಗಾದಮೇಲೆ ಆಚಾರ್ಯರು ತಮ್ಮ ಒಬ್ಬ ಶಿಷ್ಯನನ್ನು ಒಬ್ಬ ಬೇಡನೊಡನೆ ಶ್ರೀರಂಗದ ವೃತ್ತಾಂತವನ್ನು ತಿಳಿಯಲು ಕಳುಹಿಸಿದರು. ಇಲ್ಲಿ ನಲವತ್ತೈದು ಜನ ಶಿಷ್ಯರು ಆಚಾರ್ಯರನ್ನು ಅನುಸರಿಸಿಕೊಂಡು ಅವರ ಕೈಂಕರ್ಯದಲ್ಲಿದ್ದರು. ಇವರೆಲ್ಲರನ್ನೂ ಬೇಡರು ಹತ್ತಿರದಲ್ಲಿದ್ದ ಒಂದು ಹಳ್ಳಿಗೆ ಕರೆದುಕೊಂಡು ಹೋದರು. ತಾವೆಲ್ಲರೂ ಬೇಟೆಯಾಡಿಕೊಂಡು ಬಂದು, ತಮ್ಮಲ್ಲಿ ಆಚಾರ್ಯರು ಊಟವಿಲ್ಲದೆ ಇರುವುದನ್ನು ಕಂಡು ವ್ಯಾಕುಲರಾಗಿ, ಅಕ್ಕಿ ತರಕಾರಿ ಮೊದಲಾದ ಸಾಮಾನುಗಳನ್ನೆಲ್ಲಾ ಸಮೀಪದಲ್ಲಿಯೇ ಇದ್ದ 'ಚೇಲಾಂಚಲಾಂಬ' ಎಂಬ ವೈಷ್ಣವಳ ಮನೆಗೆ ಕಳುಹಿಸಿ ವೈಷ್ಣವರೆಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಿ ತಾವು ಸುಖವಾಗಿ ಭೋಜನಮಾಡಿ ಇಲ್ಲಿರುತ್ತಿರಿ' ಎಂದು ಹೇಳಿ ಅವರ ಅಪ್ಪಣೆಯನ್ನು ಪಡೆದು ತಮ್ಮ ಬಿಡಾರಕ್ಕೆ ಹೋದರು.

ಹೀಗೆ ಆಚಾರ್ಯರು (ಕ್ರಿಮಿಕಂಠ) ಚೋಳನ ನೆಪದಿಂದ ಪಶ್ಚಿಮದಿಕ್ಕಿಗೆ ಹೊರಟು 'ಚೇಲಾಂಚಲಾಂಬಾ' ನಗರವನ್ನು ಪ್ರವೇಶಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ 'ಚೇಲಾಂಚಲಾಂಬಾ' ನಗರಪ್ರವೇಶವೆಂಬ ನಲವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

## ೪೫

ಚೇಲಾಂಚಲಾಂಬಾ ತನ್ನ ಮನೆಗೆ ಶ್ರೀವೈಷ್ಣವರು ಬಂದದ್ದರಿಂದ ಸಂತುಷ್ಟಳಾಗಿ, ಅರ್ಘ್ಯಪಾದ್ಯಾಸನಾದಿಗಳಿಂದ ಉಪಚರಿಸಿ, ಅವರು ಸುಖವಾಗಿ ಕುಳಿತಿರಲು -'ಷಡ್ರಸೋಪೇತವಾದ ಭೋಜನವನ್ನು ತಯಾರಿಸುವೆನು. ಎಲ್ಲರೂ ನಿಮ್ಮ ಮನೆಯೆಂದು ತಿಳಿದು ಭೋಜನ ಮಾಡಬೇಕು'- ಎಂದು ಪ್ರಾರ್ಥಿಸಿದಳು. ವೈಷ್ಣವರು -'ನಿನ್ನ ಸತ್ಯವೂ

ಪ್ರಿಯವೂ ಆದ ಮಾತಿನಿಂದಲೇ ನಾವು ತೃಪ್ತರಾದೆವು. ಈಗ ನಮಗೆ ಭೋಜನ ಬೇಕಾಗಿಲ್ಲ'- ಎಂದರು. ಆಕೆಯು 'ನೀವೇನು ಸಂದೇಹಪಡಬೇಡಿ; ನಾನು ಯತಿರಾಜರ ಶಿಷ್ಯಳು, ಹೇಗೆಂದರೆ:- ಹಿಂದೆ ಈ ದೇಶದಲ್ಲಿ ೧೨ ವರ್ಷಗಳ ಕ್ಷಾಮವು ಬಂದಿತ್ತು. ಜನರೆಲ್ಲರೂ ತಳಮಳಗೊಂಡು ದಿಕ್ಕುದಿಕ್ಕಿಗೂ ಓಡಿಹೋದರು, ನಾನು ನನ್ನ ಪತಿಯೊಡನೆ ಶ್ರೀರಂಗಕ್ಕೆ ಹೋಗಿದ್ದೆನು. ಅಲ್ಲಿ ಪ್ರತಿದಿನವೂ ಯತಿರಾಜರು ಭಿಕ್ಷೆಗೆ ಹೋಗಿ ಬರುತ್ತಿದ್ದುದನ್ನು ನೋಡಿತ್ತಿದ್ದೆನು. ಇಷ್ಟಾದರೂ ವೇದವೇದಾಂತ ಪಾರಂಗತರಾದ ವೈಷ್ಣವರಿಂದಲೂ ಇತರ ರಾಜಾಧಿರಾಜರಿಂದಲೂ ಗೌರಿಸಲ್ಪಡುತ್ತಿದ್ದುದನ್ನೂ ನೋಡುತ್ತಿದ್ದೆನು. ಒಂದು ದಿನ ಅವರು ಹೀಗೆ ಭಿಕ್ಷೆಯಿಂದ ಹಿಂದಕ್ಕೆ ಬರುತ್ತಿದ್ದಾಗ ನಾನು ಎದುರಿಗೆ ಹೋಗಿ -'ಎಲೈ ಮಹಾತ್ಮನೆ, ನೀನಾದರೋ ಕೇವಲ ಭಿಕ್ಷಾವೃತ್ತಿಯಿಂದ ಜೀವಿಸುತ್ತಿರುವನು. ರಾಜಾಧಿರಾಜರೇ ಮೊದಲಾಗಿ ಎಲ್ಲರೂ ನಿನ್ನನ್ನು ರಂಗರಾಜನಂತೆ ಪೂಜಿಸಲು ಕಾರಣವೇನು?'- ಎಂದು ಕೇಳಿದೆನು. ಅವರು -'ನಾನು ಅವರಿಗೆಲ್ಲಾ ಭಗವದ್ವಿಷಯವಾದ ಶ್ರೇಷ್ಠವಾದ ಮಂತ್ರವನ್ನು ಉಪದೇಶಿಸಿರುವೆನು. ಆದುದರಿಂದ ಅವರೆಲ್ಲರೂ ನನ್ನನ್ನು ಆಶ್ರಯಿಸುತ್ತಾರೆ'- ಎಂದರು. ಈ ದಾಸಿಗೂ ಅದನ್ನು ಹೇಳಿಕೊಡಬೇಕೆನ್ನಲು ಕರುಣೆಯಿಂದ ಉಪದೇಶಿಸಿದರು. ಆವೇಳೆಗೆ ನಮ್ಮ ಈ ದೇಶವು ಸರ್ವಸಸ್ಯಸಮೃದ್ಧವಾಗಿದೆಯೆಂದು ಕೇಳಿ ಇಲ್ಲಿಗೆ ಹೊರಟು ಬರುವ ಸಂಭ್ರಮದಲ್ಲಿ ಮಂತ್ರವು ಮರೆತುಹೋಗಲು ಮತ್ತೆ ಅವರ ಬಳಿಗೆ ಹೋಗಿ -'ಊರಿಗೆ ಹೋಗುವ ವಿಚಾರದಲ್ಲಿ ಮಂತ್ರವು ಮರೆತುಹೋಯಿತು, ಮತ್ತೆ ಅನುಗ್ರಹಿಸಿ ಪಾದುಕೆಗಳನ್ನೂ ದಯಪಾಲಿಸಬೇಕೆಂದು ಪ್ರಾರ್ಥಿಸಲು, ಅವರು ಮೊದಲು ಗುರುಪರಂಪರೆಯನ್ನೂ ದ್ವಯವನ್ನೂ ಉಪದೇಶಿಸಿ ಪಾದುಕೆಗಳನ್ನು ಅನುಗ್ರಹಿಸಿದರು. ಆಗ ನಾನು ಯತಿರಾಜರನ್ನು ನೋಡಿದ್ದೆನು, ಮತ್ತೆ ಯಾವಾಗ ನೋಡುವೆನೋ?'- ಎಂದು ದುಃಖಿಸಿದಳು. ಆಗ ಆಚಾರ್ಯರು ಅವಳಿಗೆ ಅಡಿಗೆ ಮಾಡುವಂತೆ ಹೇಳಿ ವೈಷ್ಣವರಿಗೆ ಅವಳು ಹೇಗೆ ಅಡಿಗೆ ಮಾಡುವಳೆಂಬುದನ್ನು ಗಮನಿಸಬೇಕೆಂದು ಹೇಳಿದರು. ಅದರಂತೆ ವೈಷ್ಣವರು ಗಮನಿಸುತ್ತಿರಲು, ಆಕೆಯು ಸ್ನಾನಮಾಡಿ ಶುದ್ಧವಸ್ತ್ರಧಾರಿಣಿಯಾಗಿ 'ಮನ್ನಾಥ ಚರಣೌ ಶರಣಂ ಪ್ರಪದ್ಯೆ'- ಎಂದು ಭಕ್ತಿಯಿಂದ ಜಪಿಸುತ್ತ, ಯತೀಂದ್ರರ ಪಾದುಕೆಗಳನ್ನು ದೇವಸಾನಿಧ್ಯಕ್ಕೆ ತೆಗೆದುಕೊಂಡು ಹೋಗಿ ದ್ವಯಾನುಸಂಧಾನಪೂರ್ವಕವಾಗಿ ಪಾದುಕೆಗಳಿಗೆ ಅಭಿಷೇಕಮಾಡಿ ಗಂಧಪುಷ್ಪಾದಿಗಳಿಂದ ಯಥಾವಿಧಿಯಾಗಿ ಪೂಜಿಸಿ, ನೈವೇದ್ಯವನ್ನರ್ಪಿಸಿದಳು. ಅನಂತರ ಹೊರಗೆ ಬಂದು ವೈಷ್ಣವರೆಲ್ಲರನ್ನೂ ನಮಸ್ಕರಿಸಿ, ಅವರ ಪಾದಗಳನ್ನು ತೊಳೆದು, ಭೋಜನ ಮಾಡಬೇಕೆಂದು ಪ್ರೀತಿಯಿಂದಲೂ ಭಕ್ತಿಯಿಂದಲೂ ಪ್ರಾರ್ಥಿಸಿದಳು. ಇದೆಲ್ಲವನ್ನೂ ಕೇಳಿ ಸಂತುಷ್ಟರಾದ ಆಚಾರ್ಯರು ಆ ಪಾದುಕೆಗಳನ್ನು ತರುವಂತೆ ಹೇಳಿದರು. ಅವಳು ಆ ಪಾದುಕೆಗಳನ್ನು ತರಲು ನೋಡಿ ತೃಪ್ತರಾಗಿ, ಆಕೆಯನ್ನು ಕುರಿತು -'ಶ್ರೀರಂಗದಲ್ಲಿ ಆಚಾರ್ಯರು ನಿನಗೆ ಉಪದೇಶಿಸಿದ ಮಂತ್ರವನ್ನು ಈಗ ನನಗೆ ರಹಸ್ಯವಾಗಿ ಹೇಳದಿದ್ದರೆ ಈ ವೈಷ್ಣವರು ನಿನ್ನ ಮನೆಯಲ್ಲಿ ಊಟ ಮಾಡಲಾರರು. ಆದುದರಿಂದ ನೀನು ನನ್ನ ಕಿವಿಯಲ್ಲಿ ಆ ಮಂತ್ರವನ್ನು ಹೇಳು'- ಎನ್ನಲು ಅವಳು ಹೇಳಿದಳು. ಮತ್ತೆ ಆಚಾರ್ಯರು -'ಈ ವೈಷ್ಣವರ ಸಮೂಹದಲ್ಲಿ ನಿನ್ನ ಆಚಾರ್ಯರಿರುವರೇ ಇಲ್ಲವೇ? ಗುರುತಿಸು'- ಎಂದರು. ಸ್ವಲ್ಪ ಕತ್ತಲೆಯಾಗಿದ್ದುದರಿಂದ

ಆಕೆಯು ದೊಡ್ಡ ದೀಪವನ್ನು ತೆಗೆದುಕೊಂಡು ಎಲ್ಲರ ಪಾದಗಳನ್ನೂ ನೋಡುತ್ತ, ಕಡೆಗೆ ಆಚಾರ್ಯರ ಪಾದಗಳನ್ನು ಕಂಡು ಸಂತೋಷದಿಂದ 'ಈ ಪಾದಗಳು ಅವರ ಪಾದಗಳಂತೆಯೇ ಸುಂದರವಾಗಿವೇ, ಆದರೆ ದಂಡಕಾಷಾಯಗಳಿಲ್ಲದ್ದರಿಂದ ಇವರೇ ಆಚಾರ್ಯರೆಂದು ಹೇಗೆ ಹೇಳಲಿ?'- ಎಂದಳು. ಆಗ ಸಂತುಷ್ಟರಾದ ಆಚಾರ್ಯರು -'ನಾನೇ ಮನ್ನಾಥನು, ಯಾವುದೋ ಒಂದು ಕಾರಣದಿಂದ ಶ್ವೇತವಸ್ತ್ರಧರನಾಗಿ ಶ್ರೀರಂಗದಿಂದ ಬಂದಿದ್ದೇನೆ'- ಎಂದ ಕೂಡಲೇ, ಅವಳು ಪಾದಗಳಲ್ಲಿ ಬಿದ್ದು ಆನಂದಪರವಶಳಾದಳು. ಆಚಾರ್ಯರು ಅವಳನ್ನು ಸಮಾಧಾನಪಡಿಸುತ್ತ, ವೈಷ್ಣವರನ್ನು ಕುರಿತು -'ಹಿಂದೆ ಜಗತ್ಪತಿಯಾದ ಕೃಷ್ಣನು ದುರ್ಯೋಧನಾದಿ ರಾಜರುಗಳನ್ನು ಬಿಟ್ಟು, ಶುಚಿಯಾಗಿಯೂ ಸದ್ಗುಣವಿಶಿಷ್ಟವಾಗಿಯೂ ಕೂಡಲ್ಪಟ್ಟ ವಿದುರನ ಆತಿಥ್ಯವನ್ನು ಸ್ವೀಕರಿಸಿದನು. ಅದರಂತೆ ಭೋಗ್ಯತ್ವ ಪಾವನತ್ವಾದಿ ಗುಣಗಳಿಂದ ಕೂಡಿರುವ ಈ ಅನ್ನವನ್ನು ನೀವೆಲ್ಲರೂ ಭುಜಿಸುವುದರಲ್ಲಿ ಯಾವ ನ್ಯೂನತೆಯೂ ಇರುವುದಿಲ್ಲ'- ಎಂದರು. ಆಚಾರ್ಯರ ಅಪ್ಪಣೆಯಂತೆ ಎಲ್ಲರೂ ಊಟಮಾಡಿ ಸುಖವಾಗಿ ಆ ರಾತ್ರಿ ನಿದ್ರಿಸಿದರು.

ಆಕೆಯು ಶ್ರೀವೈಷ್ಣವರ ಉಚ್ಛಿಷ್ಟವನ್ನು ತೆಗೆದುಕೊಂಡು ಹೋಗಿ ಮಹಡಿಯ ಮೇಲಿದ್ದ ತನ್ನ ಪತಿಗೂ ಜ್ಞಾನಸಿದ್ಧಿಯಾಗಲೆಂಬ ಇಷ್ಟದಿಂದ ಬಡಿಸಿದಳು. ಅವನು ಊಟ ಮಾಡಿದಮೇಲೆ ತಾನು ಊಟಮಾಡದೆ ನೆಲದ ಮೇಲೆ ಮಲಗಿದಳು. ಪತಿಯು ಇದರ ಕಾರಣವನ್ನು ಕೇಳಲು ಅವಳು -'ಯಾವುದೋ ಒಂದು ಕಾರಣದಿಂದ ನಮ್ಮ ಗುರುಗಳಾದ ಯತಿರಾಜರು ಶ್ರೀರಂಗದಿಂದ ಈಗ ನಮ್ಮ ಮನೆಗೆ ಬಂದಿರುತ್ತಾರೆ. ನಾನು ಅವರನ್ನು ಭೋಜನಮಾಡಲು ಎಷ್ಟು ಪ್ರಾರ್ಥಿಸಿದರೂ ನನ್ನ ಪತಿಯು ವೈಷ್ಣವನಲ್ಲದ್ದರಿಂದ ಊಟಮಾಡಲಿಲ್ಲ, ನನ್ನ ಗುರುಗಳು ಉಪವಾಸದಿಂದಿರಲು ನಾನು ಹೇಗೆ ಊಟಮಾಡಲಿ?' ಎಂದಳು, 'ಹಾಗಾದರೆ ನಾನೇನು ಮಾಡಬೇಕು?' 'ನಾಳೆ ಬೆಳಗ್ಗೆ ಯತಿರಾಜರನ್ನು ಆಶ್ರಯಿಸಬೇಕು' 'ಆಗಲಿ, ಹಾಗೆಯೇ ಮಾಡುತ್ತೇನೆ, ಸಂಶಯವಿಲ್ಲ' ಎನ್ನಲು ಆಕೆಯು ಊಟಮಾಡಿ ಮಲಗಿದಳು.

ಬೆಳಗಾಗಲು ದಂಪತಿಗಳು ಶುಚಿಯಾಗಿ ಆಚಾರ್ಯರನ್ನು ವಂದಿಸಿ ಆಶ್ರಯಿಸಲು, ಆಚಾರ್ಯರು ಅವರ ಪ್ರಾರ್ಥನೆಯಂತೆ ಅವರಿಗೆ ಪಂಚಸಂಸ್ಕಾರಗಳನ್ನು ಮಾಡಿ ಆತನಿಗೆ 'ಶ್ರೀರಂಗದಾಸ' ನೆಂದು ನಾಮಕರಣ ಮಾಡಿದರು. ಶ್ರೀರಂಗದಾಸನು ಎಲ್ಲ ವೈಷ್ಣವರನ್ನೂ ವಸ್ತ್ರಾಭರಣಾಧಿಗಳಿಂದ ಸತ್ಕರಿಸಲು, ಆ ದಂಪತಿಗಳ ಪ್ರೀತಿ ಭಕ್ತಿಪೂರ್ವಕವಾದ ಸತ್ಕಾರದಿಂದ ಸಂತುಷ್ಟರಾದ ಆಚಾರ್ಯರು, ಮತ್ತೆ ತ್ರಿದಂಡ, ಕಮಂಡಲು, ಕಾಷಾಯಗಳನ್ನು ಹೊಂದಿಸಿಕೊಂಡು ಭಗವಂತನಾದ ವರದರಾಜನಿಗೆ ನಿವೇದಿಸಿ ಸ್ವೀಕರಿಸಿ, ಆಯಾಸ ಪರಿಹಾರಕ್ಕಾಗಿ ಅಲ್ಲಿಯೇ ಕೆಲವು ದಿನಗಳಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಚೇಲಾಂಚಲಾಂಬಾ ದಂಪತಿಗಳ ಪಂಚಸಂಸ್ಕಾರಸಂಪತ್ತಿ ಎಂಬ ನಲವತ್ತೈದನೆಯ ಅಧ್ಯಾಯವು ಮುಗಿದುದು.

ಈ ದಂಪತಿಗಳಿಂದ ಕಳುಹಿಸಲ್ಪಟ್ಟು ವಹ್ನಿಪುಷ್ಕರಿಣಿಗೆ ಹೋಗಿ ಅಲ್ಲಿ ಮೂರು ದಿನಗಳಿದ್ದು, ಮಿಥಿಲಾಪುರಿಗೆ ಹೋಗಿ ಕೆಲವು ದಿನಗಳಿದ್ದು, ಅಲ್ಲಿಂದ ಸಾಲಿಗ್ರಾಮಕ್ಕೆ ಹೋದರು. ಅಲ್ಲಿದ್ದವರೆಲ್ಲರೂ ಮಾಯಾವಾದಿಗಳಾಗಿದ್ದುದರಿಂದ ಆಚಾರ್ಯರನ್ನು ಯಾರು ಸತ್ಕರಿಸಲಿಲ್ಲ. ಆಗ ಆಚಾರ್ಯರು ದಾಶರಥಿಯನ್ನು 'ಈ ಊರಿನಲ್ಲಿ ಎಲ್ಲರೂ ನೀರನ್ನು ತೆಗೆದುಕೊಂಡು ಹೋಗುವ ಕೆರೆಯಲ್ಲಿ ನೀನು ನಿನ್ನ ಕಾಲನ್ನಿಟ್ಟುಕೊಂಡು ಕುಳಿತಿರು'-ಎಂದರು ಆತನು ಹಾಗೆಯೇ ಮಾಡಿರಲು ಶ್ರೀಪಾದತೀರ್ಥದ ಮಹಿಮೆಯಿಂದ ಆಬಾಲವೃದ್ಧರಾಗಿ ಎಲ್ಲರೂ ಆಚಾರ್ಯರನ್ನು ಆಶ್ರಯಿಸಿದರು. ಆಗ ಆಚಾರ್ಯರು ಆ ಗ್ರಾಮವನ್ನು 'ಸಾಲಗ್ರಾಮ' ವೆಂದು ಕರೆದು ಅಲ್ಲಿದ್ದವರಲ್ಲಿ 'ಅಂಧಪೂರ್ಣ'ನೆಂಬುವವನನ್ನು ವಿಶೇಷವಾಗಿ ಕಟಾಕ್ಷಿಸಿ, ದಶ್ರನಾರ್ಥಗಳನ್ನುಪದೇಶಿಸಿ ಆತನೊಡನೆ ನೃಸಿಂಹಕ್ಷೇತ್ರಕ್ಕೆ ಹೊರಟರು. ಅಲ್ಲಿಗೆ ಹೋಗಿ ನೃಸಿಂಹನನ್ನು ವಂದಿಸಿ, ಚೋಳನ ನಾಶಕ್ಕಾಗಿಯೂ, ಅವನು 'ಕ್ರಿಮಿಕಂಠ'ನಾಗಿ ಬೇಗ ಮರಣ ಹೊಂದುವುದಕ್ಕಾಗಿಯೂ, ಶಿಷ್ಟರಕ್ಷಣೆಗಾಗಿಯೂ ಅಲ್ಲಿಯೇ ಅಭಿಚಾರಕೃತ್ಯವನ್ನೂ ಮಾಡಿ, ತನ್ನ ಭಕ್ತನೂ ಶಿಷ್ಯನೂ ಆದ ಭಕ್ತಗ್ರಾಮಪೂರ್ಣನನ್ನು ನೋಡುವುದಕ್ಕಾಗಿ ಭಕ್ತಗ್ರಾಮಕ್ಕೆ (ತೊಂಡನೂರು) ಹೋದರು. ಆತನು ಆಚಾರ್ಯರನ್ನು ಭಕ್ತಿಯಿಂದ ಸತ್ಕರಿಸಲು ಅವರು ಅಲ್ಲಿಯೇ ಕೆಲವು ದಿನಗಳು ಸುಖವಾಗಿದ್ದರು.

ಆ ಸಮಯದಲ್ಲಿ ವಿಟ್ಠಲದೇವನೆಂಬ ರಾಜನು ಆ ದೇಶದ ರಾಜನಾಗಿದ್ದನು. ಆತನ ಮಗಳಿಗೆ ಬ್ರಹ್ಮರಾಕ್ಷಸವು ಹಿಡಿದಿತ್ತು. ಅದನ್ನು ಬಿಡಿಸಲು ರಾಜನು ಅನೇಕ ಮಾಂತ್ರಿಕರನ್ನು ಕರೆಸಿದ್ದನು. ಎಲ್ಲರೂ ಅಶಕ್ತರಾಗಿ ಹಿಂತಿರುಗಿದರು. ಆ ಸಮಯಕ್ಕೆ ಸರಿಯಾಗಿ ಆಚಾರ್ಯರು ವಿಟ್ಠಲಪುರಕ್ಕೆ ಬರಲು, ಅವರ ಕೈಂಕರ್ಯಕ್ಕಾಗಿ ಭಕ್ತಪೂರ್ಣನೂ ಬಂದಿದ್ದನು. ಆತನು ರಾಜ ಪುತ್ರಿಗೆ ಉಂಟಾಗಿರುವ ಸ್ಥಿತಿಯನ್ನು ಕೇಳಿ -'ಎಲೈ ರಾಜನೆ, ಯತಿರಾಜರು ನಮ್ಮ ಆಚಾರ್ಯರು ಇಲ್ಲಿಗೆ ದಯಮಾಡಿಸಿರುವರು. ಅವರು ಮಂತ್ರಜ್ಞರು, ಅವರ ಕಟಾಕ್ಷಮಾತ್ರದಿಂದಲೇ ಬ್ರಹ್ಮರಾಕ್ಷಸವೂ ತೊಲಗುವುದು. ಹಿಂದೆ ಒಂದು ಸಲ ಅವರು ಬ್ರಹ್ಮರಾಕ್ಷಸವನ್ನು ಓಡಿಸಿದ್ದರು'- ಎಂದು ಹಿಂದಿನ ಕಥೆಯನ್ನು ವಿಸ್ತಾರವಾಗಿ ಹೇಳಿದನು. ಆಗ ರಾಜನು 'ಬ್ರಹ್ಮರಾಕ್ಷಸವನ್ನು ಓಡಿಸಿದರೆ ನಿಜವಾಗಿಯೂ ಅವರ ಪಾದಗಳನ್ನು ಆಶ್ರಯಿಸುತ್ತೇನೆ, ಸಂಶಯವಿಲ್ಲ'ವೆಂದನು. ಭಕ್ತಗ್ರಾಮ ಪೂರ್ಣನು ಆಚಾರ್ಯರಿಗೆ ಎಲ್ಲವನ್ನೂ ತಿಳಿಸಿದನು.

ಒಂದು ಸಲ ರಾಜನು ತನ್ನ ಗುರುಗಳಾದ ಬೌದ್ಧರನ್ನು ಭೋಜನಕ್ಕೆ ಕರೆಯುವಂತೆ ಯೋಚಿಸಿದನು. ಅವನ ಪತ್ನಿಯು -'ನೀನು ಕರೆಯುವುದು ಮಾತ್ರವೇ ಹೊರತು ಅವರು ಮನೆಗೆ ಬರುವುದಿಲ್ಲ, ಆದುದರಿಂದ ಕರೆಯಬೇಡ'- ಎಂದಳು. 'ನನ್ನ ಗುರುಗಳು ನಾನು ಕರೆದರೆ ಬಂದೇ ಬರುವರು' ಎಂದು ನಿಶ್ಚಯಿಸಿ, ಗುರುಗಳ ಬಳಿಗೆ ದೂತರನ್ನು ಕಳುಹಿಸಿದನು. ಬೌದ್ಧರು 'ರಾಜನು ಹಿಂದೆ ಡಿಲ್ಲೀಶ್ವರನಿಂದ ಆಕ್ರಮಿಸಲ್ಪಟ್ಟು, ಅವನ ಬೆರಳು ಕತ್ತರಿಸಿ ಹೋಗಿದೆ. ಅವನು ಅಂಗಹೀನನು, ಅವನ ಮನೆಯಲ್ಲಿ ನಾವು ಹೇಗೇ ಊಟ ಮಾಡುವುದು ?'- ಎಂದು ಕಳುಹಿಸಿಬಿಟ್ಟರು. ಇದನ್ನು ಕೇಳಿದ ರಾಜನು ಅವರೆಲ್ಲರನ್ನೂ ತಿರಸ್ಕರಿಸಿದನು. ರಾಜಪತ್ನಿಯು ರಾಜನನ್ನು ನೋಡಿ -'ನೀವು ಲಕ್ಷ್ಮಣಾಚಾರ್ಯರನ್ನು ಏಕೆ

ಆಶ್ರಯಿಸಬಾರದು? ಅವರನ್ನಾಶ್ರಯಿಸಿದರೆ ಅತಿಶಯವಾದ ಫಲವುಂಟು'- ಎಂದಳು. ಅದರಂತೆ ರಾಜನು ತನ್ನ ಮನೆಗೆ ಬರಬೇಕೆಂದು ಆಚಾರ್ಯರನ್ನು ಭಕ್ತಿಯಿಂದ ಪ್ರಾರ್ಥಿಸಿದನು. ಆಚಾರ್ಯರು 'ನಾನು ಈಗ ನಗರಪ್ರವೇಶ ಮಾಡುವುದಿಲ್ಲ'ವೆಂದರು. ಆಗ ಭಕ್ತಗ್ರಾಮಪೂರ್ಣನೇ ಮೊದಲಾದ ವೈಷ್ಣವರಾದ ಶಿಷ್ಯರು -'ರಾಜನ ಪ್ರಾರ್ಥನೆಯನ್ನು ಅಂಗೀಕರಿಸಿ ದಯಮಾಡಿಸಿ, ರಾಜನನ್ನು ವಶಪಡಿಸಿಕೊಂಡರೆ ವಿಷ್ಣುದರ್ಶನವು ಚೆನ್ನಾಗಿ ನೆರವೇರುವುದು. ಆದುದರಿಂದ ನಗರಪ್ರವೇಶ ಮಾಡಬಹುದು' ಎಂದು ಪ್ರಾರ್ಥಿಸಿದ ಮೇಲೆ ಆಚಾರ್ಯರು ಹೊರಟರು. ರಾಜನು ಸಕಲ ರಾಜವೈಭವದಿಂದಲೂ ಎದುರುಗೊಂಡು ಕರೆದುಕೊಂಡು ಹೋಗಿ ಉನ್ನತಪೀಠದಲ್ಲಿ ಕುಳ್ಳಿರಿಸಿ ಸತ್ಕರಿಸಿದನು. ಆಚಾರ್ಯರು ಶಿಷ್ಯನ ಮುಖಾಂತರ ಶ್ರೀಪಾದ ತೀರ್ಥವನ್ನು ಕೊಡಿಸಿ, ರಾಜಪುತ್ರಿಯ ತಲೆಯಮೇಲೆ ತೀರ್ಥವನ್ನು ಪ್ರೋಕ್ಷಿಸುವಂತೆ ತಿಳಿಸಿದರು. ಶಿಷ್ಯರು ಹಾಗೆಯೇ ಮಾಡಲು ಬ್ರಹ್ಮರಾಕ್ಷಸವು ಬಿಟ್ಟುಹೋಯಿತು. ರಾಜನು ಸಂತುಷ್ಟನಾಗಿ ಯತಿರಾಜರಿಗೆ ದಂಡವತ್ಪ್ರಣಾಮಗಳನ್ನು ಮಾಡಿದನು. ರಾಜಪತ್ನಿಯ ಆನಂದಕ್ಕೆ ಪಾರವೇ ಇಲ್ಲ. ಪ್ರಜೆಗಳೆಲ್ಲರೂ ಆಚಾರ್ಯರನ್ನು ವಂದಿಸಿದರು, ಆಚಾರ್ಯರು ಅವರುಗಳ ಇಷ್ಟದಂತೆ ಎಲ್ಲರಿಗೂ ಪಂಚಸಂಸ್ಕಾರವನ್ನು ಮಾಡಿ ರಾಜನಿಗೆ 'ವಿಷ್ಣುವರ್ಧನರಾಜೇಂದ್ರ' ನೆಂದು ಹೆಸರಿಟ್ಟು, ಆತನ ಸತ್ಕಾರದಲ್ಲಿಯೇ ಕೆಲವು ದಿನ ಅಲ್ಲಿ ಸುಖವಾಗಿರುತ್ತಿದ್ದರು.

ಈ ವೃತ್ತಾಂತವನ್ನು ಕೇಳಿ ಕ್ರುದ್ಧರಾದ ಹತ್ತುಸಾವಿರ ಬೌದ್ಧಕ್ಷಪಣಕರು ಕೂಡಲೇ ಯತಿರಾಜರ ಬಳಿಗೆ ಬಂದು -'ಎಲೈ ವೈಷ್ಣವನೆ, ನೀನು ನಮ್ಮ ಶಿಷ್ಯನನ್ನು ನಿನ್ನ ಶಿಷ್ಯನನ್ನಾಗಿ ಮಾಡಿಕೊಂಡು ಎಲ್ಲಿಗೆ ಹೋಗುವುದು? ನಿಜವಾಗಿಯೂ ನೀನು ಪಂಡಿತನಾಗಿದ್ದರೆ ನಮ್ಮೊಡನೆ ವಾದಕ್ಕೆ ಬಾ. ನಮ್ಮನ್ನು ವಾದದಲ್ಲಿ ಸೋಲಿಸಿದರೆ ಆಗ ನೀನು ರಾಜನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಬಹುದು'- ಎಂದು ವಾದಕ್ಕೆ ಕರೆಯಲು, ಮನಸ್ಸಿನಲ್ಲಿ ಧೈರ್ಯವಿದ್ದರೂ ಮೇಲೆ ಭೀತರಂತೆ ಇರುತ್ತ -'ಎಲೈ ಹರಿಯೇ, ಏನು ಮಾಡಲಿ? ಎಲ್ಲಿಗೆ ಹೋಗಲಿ?'- ಎಂಬ ಮಾತುಗಳಿಂದ ಕ್ಷಪಣಿಕರನ್ನು ಮೋಹಗೊಳಿಸುತ್ತ, ಒಂದು ಎತ್ತರವಾದ ಮಂಟಪದಲ್ಲಿ ಒಂದು ಕೆರೆಯ ಹಿಂಬಾಗದಲ್ಲಿ ಕುಳಿತು ತಮ್ಮ ದಿವ್ಯಸ್ವರೂಪವಾದ ಸಹಸ್ರಫಣಾಮಂಡಿತವಾದ ಆದಿಶೇಷ ಸ್ವರೂಪವನ್ನೂ ಹೊಂದಿ, ಅಷ್ಟುಜನ ಕ್ಷಪಣಿಕರ ಪ್ರಶ್ನೆಗಳಿಗೂ ಒಂದೊಂದು ಬಾಯಿಂದಲೂ ಒಂದೊಂದು ಉತ್ತರವನ್ನು ಕೊಡುತ್ತ ವಾದದಲ್ಲಿ ಜಯಿಸಿದರು. ಅನಂತರ ಕೆಲವರು ಕ್ಷಪಣಿಕರು ಆಚಾರ್ಯರ ಶಿಷ್ಯರಾದರು, ಕೆಲವರು ಓಡಿಹೋದರು, ಮತ್ತೆ ಕೆಲವರು ಅವರಿಂದ ಶಿಕ್ಷಿಸಲ್ಪಟ್ಟರು.

ಆಚಾರ್ಯರು ಲೋಕಾನುಗ್ರಹಕ್ಕಾಗಿ ತಮ್ಮ ದಿವ್ಯಶಕ್ತಿಯನ್ನು ಶಿಷ್ಯರಿಗೆ ತೋರಿಸಿದರು. ವಿಷ್ಣುವರ್ಧನನೂ ಇದನ್ನು ಕಂಡು ಬಹಳ ಆಶ್ಚರ್ಯಪಟ್ಟು ಅವರಲ್ಲಿ ವಿಶೇಷವಾದ ಅಭಿಮಾನ ವಿಟ್ಟುಕೊಂಡನು.

ಹೀಗೆ ಯತಿಸಾರ್ವಭೌಮರು ಬೌದ್ಧರನ್ನು ವಾದದಲ್ಲಿ ಜಯಿಸಿ ತಮ್ಮ ಅವ್ಯಾಹತವಾದ ಕೀರ್ತಿಯಿಂದ ಬೆಳಗುತ್ತ ಅಲ್ಲಿಯೇ ಇನ್ನೂ ಕೆಲವು ದಿನ ಸುಖವಾಗಿರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ದಶಸಹಸ್ರ ಬೌದ್ಧಪರಾಜಯ ಕಥನವೆಂಬ ನಲವತ್ತಾರನೆಯ ಅಧ್ಯಾಯವು ಮುಗಿದುದು.

## ೪೭

ಆಚಾರ್ಯರು ಹೀಗೆ ಆ ವಿಷ್ಣುವರ್ಧನರಾಜನಿಂದ ಅನವರತವೂ ಪೂಜಿಸಲ್ಪಟ್ಟು ಭಕ್ತಗ್ರಾಮ (ತೊಂಡನೂರು)ದಲ್ಲಿಯೇ ಇರುತ್ತಿದ್ದರು. ಶ್ರೀರಂಗದಿಂದ ತಂದಿದ್ದ ಶ್ವೇತ ಮೃತ್ತಿಕೆಯು ಮುಗಿದುಹೋಗಿದ್ದುದರಿಂದ ಒಂದು ದಿನ ರಾತ್ರಿ ಚಿಂತಾಪರವಶರಾಗಿ ಮಲಗಿದ್ದರು. ಆಗ ಅವರ ಸ್ವಪ್ನದಲ್ಲಿ ಯಾದವಾದ್ರೀಶನಾದ ಶ್ರೀಹರಿಯು -'ಎಲೈ ಯತೀಂದ್ರ, ಯೋಚಿಸಬೇಡ. ಇಲ್ಲಿಯೇ ಸಮೀಪದಲ್ಲಿರುವ ಯಾದವಾಚಲದಲ್ಲಿ ಶ್ವೇತಮೃತ್ತಿಕೆಯು ಇರುವುದು. ಇಲ್ಲಿಗೆ ಬೇಗ ಬಾ. ನಾನೂ ಈ ಯಾದವಾದ್ರಿಯಲ್ಲಿಯೇ ವಾಸಮಾಡುತ್ತಿರುವೆನು. ನನ್ನನ್ನು ಪ್ರಕಟಗೊಳಿಸಿ ನನಗೊಂದು ದೇವಾಲಯವನ್ನು ಕಟ್ಟಿಸು'- ಎಂದು ಹೇಳಿದನು. ಆಚಾರ್ಯರು ಬೆಳಗಾದ ಮೇಲೆ ಶಿಷ್ಯರಿಗೆಲ್ಲ ಈ ವಿಚಾರವನ್ನು ತಿಳಿಸಿ, ಸಹಾಯಕ್ಕಾಗಿ ಜೊತೆಯಲ್ಲಿ ವಿಷ್ಣುವರ್ಧನ ರಾಜನನ್ನೂ ಕರೆದುಕೊಂಡು ಹೋಗಬೇಕೆಂದು ಇಷ್ಟಪಟ್ಟರು. ಇದನ್ನು ಕೇಳಿದ ರಾಜನೂ ಸಹ ಬಹು ಸಂತೋಷದಿಂದ ಕಾಡುಗಳನ್ನೆಲ್ಲಾ ಕತ್ತರಿಸಿ ದಾರಿಮಾಡಿ ಆಚಾರ್ಯರೊಡನೆ ಯಾದವಾಚಲಕ್ಕೆ ಹೊರಟನು.

ಹೀಗೆ ಯತಿರಾಜರು ಯಾದವಾದ್ರಿಗೆ ಹೋಗಿ ಬಹುಧಾನ್ಯ ಸಂವತ್ಸರದ ಪುಷ್ಯಮಾಸದಲ್ಲಿ ವೇದಪುಷ್ಕರಿಣಿಯಲ್ಲಿ ಸ್ನಾನಮಾಡಿ, ದತ್ತಾತ್ರೇಯನಂತೆ ಅಲ್ಲಿರುವ ಪರಿಧಾನಶಿಲಾತಲದಲ್ಲಿ ಕಾಷಾಯವನ್ನು ಪರಿಗ್ರಹಿಸಿ, ಭಗವಾನ್ ನಾರಾಯಣನನ್ನು ಅಲ್ಲಲ್ಲಿಯೇ ಹುಡುಕುತ್ತ ಎಲ್ಲಿಯೂ ಕಾಣದೆ ಆಯಾಸದಿಂದ ಮಲಗಲು, ಮತ್ತೆ ಈ ರೀತಿ ಸ್ವಪ್ನವಾಯಿತು 'ಎಲೈ ಯತಿಶ್ರೇಷ್ಠ, ಪರ್ವತಶ್ರೇಣಿಯ ಕೆಳಗಿರುವ ಕಲ್ಯಾಣತೀರ್ಥದ ದಕ್ಷಿಣದಲ್ಲಿ ಸಂಪಿಗೆಯ ಮರಗಳಿವೆ. ಅದಕ್ಕೆ ಉತ್ತರದಲ್ಲಿ ಒಂದು ದೊಡ್ಡ ತುಳಸಿಯ ಗಿಡವಿದೆ. ಅದರ ಕೆಳಗಿರುವ ಹುತ್ತದಲ್ಲಿಯೇ ನಾನಿರುವೆನು. ಮತ್ತು ಪಕ್ಷಿರಾಜನಾದ ಗರುಡನು ಶ್ವೇತದ್ವೀಪದಿಂದ ಶ್ವೇತಮೃತ್ತಿಕೆಯನ್ನು ತಂದು ಕಲ್ಯಾಣತೀರ್ಥದ ಉತ್ತರದಲ್ಲಿ ಬೆಟ್ಟದ ಬುಡದಲ್ಲಿ ಹಾಕಿರುವನು. ಅದು ನನ್ನ ಇಚ್ಛೆಯಿಂದ ಅಕ್ಷಯವಾಗಿರುವುದು'- ಹೀಗೆ ಪ್ರತ್ಯಕ್ಷವಾಗಿರುವಂತಹ ಸ್ವಪ್ನವಾಕ್ಯವನ್ನು ರಾಜನಿಗೆ ತಿಳಿಸಿ, ಅವನೊಡನೆ ತುಳಸಿಯ ಗಿಡದ ಹತ್ತಿರ ಹೋಗಿ ಹುತ್ತವನ್ನು ಅಗೆದು, ಅಪ್ರಾಕೃತವಾದ ಜ್ಯೋತಿಯನ್ನು ಕಂಡರು. ಶಕವರ್ಷಗಳಲ್ಲಿ ಒಂದು ಸಾವಿರದ ಇಪ್ಪತ್ತು ವರ್ಷಗಳು ಕಳೆದಿರಲು, ಬಹುಧಾನ್ಯ ಸಂವತ್ಸರದ ಪುಷ್ಯಮಾಸ, ಶುಕ್ಲಪಕ್ಷ, ಚತುರ್ದಶೀ ಗುರುವಾರ ಪುನರ್ವಸು ನಕ್ಷತ್ರದ ದಿವಸ ಶ್ರೀಮನ್ನಾರಾಯಣನು ಆ ಹುತ್ತದಲ್ಲಿ ಆಚಾರ್ಯರಿಗೆ ಕಾಣಿಸಿಕೊಂಡನು. ಆಚಾರ್ಯರು ರಾಜನೇ ಮೊದಲಾಗಿ ಎಲ್ಲರಿಗೂ ಭಗವಂತನನ್ನು ತೋರಿಸಲು ಎಲ್ಲರೂ ಜಯಜಯಕಾರ ಮಾಡಿದರು. ಭೇರಿಮೃದಂಗಾದಿ ಮಂಗಳವಾದ್ಯಗಳು ಘೋರ್ಘರೆದವು. ಆಚಾರ್ಯರು ತಾವೇ ಸ್ವತಃ ಪರಮಾತ್ಮನಿಗೆ ಕ್ಷೀರಾಭಿಷೇಕವನ್ನು ಮಾಡಿ ಮೂರು ದಿನಗಳವರೆಗೆ ಅಲ್ಲಿಯೇ ಆನಂದದಿಂದಿದ್ದರು.

ಅನಂತರ ಕಲ್ಯಾಣತೀರ್ಥದ ಉತ್ತರಭಾಗದಲ್ಲಿ ಶ್ವೇತಮೃತ್ತಿಕೆಯಿರುವ ಜಾಗಕ್ಕೆ ಹೋಗಿ ತ್ರಿದಂಡದಿಂದಲೇ ಕೆತ್ತಿ ನೋಡಿ ದಿವ್ಯವಾದ ಮೃತ್ತಿಕೆಯಿರುವುದನ್ನು ಕಂಡು ಅದರಿಂದ

ಊರ್ಧ್ವಪುಂಡ್ರಗಳನ್ನು ಧರಿಸಿ, ರಾಜನ ಸಹಾಯದಿಂದ ವನವನ್ನೆಲ್ಲಾ ಕತ್ತರಿಸಿ ಪಟ್ಟಣವನ್ನು ಕಟ್ಟಿಸಿ, ಅಲ್ಲಿ ಶ್ರೀಮನ್ನಾರಾಯಣಪುರ (ತಿರುನಾರಾಯಣಪುರ, ಮೇಲುಕೋಟೆ)ವೆಂದು ಹೆಸರಿಟ್ಟರು. ಮಂಟಪ, ಪ್ರಾಕಾರ, ಗೋಪುರಗಳಿಂದ ರಮ್ಯವಾದ ದೇವಾಲಯವನ್ನೂ ಕಟ್ಟಿಸಿ, ಅಲ್ಲಿ ಶ್ರೀರಂಗರಾಜಭಟ್ಟನೆಂಬ ಅರ್ಚಕನಿಂದ ಪಾಂಚರಾತ್ರಾಗಮದ ಸಾತ್ವತಸಂಹಿತೆಯಲ್ಲಿ ಹೇಳಿರುವಂತೆ ಯಥಾವಿಧಿಯಾಗಿ ಸಂಪ್ರೋಕ್ಷಣಾದಿಗಳನ್ನೂ ಮಾಡಿಸಿ ಶ್ರೀಮನ್ನಾರಾಯಣನ ನಿತ್ಯಾರ್ಚನಾದಿಗಳನ್ನು ಏರ್ಪಡಿಸಿದರು. ಕ್ರಮೇಣ ಆ ಕ್ಷೇತ್ರದಲ್ಲಿ ಬ್ರಾಹ್ಮಣಾದಿ ಚತುರ್ವರ್ಣ ದವರೂ ನೆಲಸಿ ಭಗವಂತನ ಕೈಂಕರ್ಯದಲ್ಲಿ ನಿರತರಾದರು. ಅನಂತರ ಆಚಾರ್ಯರು ಭಗವಂತನಿಗೆ ನಿತ್ಯೋತ್ಸವಾದಿ ಮಹೋತ್ಸವಗಳನ್ನು ನಡೆಸಬೇಕೆಂದು, ಅದಕ್ಕೆ ಬೇಕಾದ ಅರ್ಚಾರೂಪಿಯಾದ ಉತ್ಸವ ವಿಗ್ರಹವಿಲ್ಲದಿರುವುದರಿಂದ ಪರಮಾತ್ಮನನ್ನು ಧ್ಯಾನಿಸುತ್ತ ನಾರಾಯಣನ ಪಾದತಲದಲ್ಲಿ ಮಲಗಿದರು. ಆಗ ಭಗವಾನ್ ನಾರಾಯಣನು ಮತ್ತೆ ಅವರ ಸ್ವಪ್ನದಲ್ಲಿ -'ವತ್ಸ, ನನ್ನ ಉತ್ಸವಮೂರ್ತಿಯಾದ 'ರಾಮಪ್ರಿಯ'ನು ಡಿಲ್ಲೀಶ್ವರನ ಬಳಿಯಲ್ಲಿರುವನು. ನೀನು ಕೂಡಲೇ ಹೋಗಿ ಕರೆದುಕೊಂಡು ಬಾ'- ಎನ್ನಲು, ಆಚಾರ್ಯರು ರಾಜನಿಗೆ ತಿಳಿಸಿದರು. ಆತನು ಆಚಾರ್ಯರನ್ನು ವಂದಿಸಿ 'ತಾವೇ ಸಾಕ್ಷಾನ್ನಾರಾಯಣನು, ಜಗದ್ಗುರುಗಳು. ಮೂರುಲೋಕಗಳಲ್ಲಿಯಾದರೂ ತಮಗೆ ಅಸಾಧ್ಯವಾದುದಿಲ್ಲ, ತಾವೂ ಶಿಷ್ಯರೊಡನೆ ಡಿಲ್ಲಿಗೆ ಹೋಗುವುದಾದರೆ ನಿಜವಾಗಿಯೂ ರಾಮಪ್ರಿಯದೇವನನ್ನು ಅರ್ಪಿಸುವುದರಲ್ಲಿ ಸಂಶಯವಿಲ್ಲ, ರಾಮಪ್ರಿಯನ ಆರಾಧನಕ್ಕಾಗಿ ಬೇಕಾಗುವ ಧನವನ್ನು ಸ್ವೀಕರಿಸಬಹುದು. ಇದೆಲ್ಲವೂ ತಮ್ಮದೇ ಆಗಿರುವುದರಿಂದ ನನಗೇನು ಸ್ವಾತಂತ್ರ್ಯವಿಲ್ಲ'. ಇದನ್ನು ಕೇಳಿ ಸಂತುಷ್ಟರಾದ ಆಚಾರ್ಯರು ಚತುರ್ವರ್ಣಗಳಿಂದಲೂ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ರಾಜನೊಡನೆ ಸುಮುಹೂರ್ತದಲ್ಲಿ ಡಿಲ್ಲಿಗೆ ಹೊರಟರು. ಆಚಾರ್ಯರ ಅಪ್ಪಣೆಯಂತೆ ಎಲ್ಲರೂ ಊರ್ಧ್ವಪುಂಡ್ರಗಳನ್ನು ಧರಿಸಿ, ತುಳಸಿಮಾಲೆಗಳನ್ನು ಹಾಕಿಕೊಂಡು, ಶುಭ್ರವಾದ ರೂಮಾಲುಗಳನ್ನು ಸುತ್ತಿಕೊಂಡು, ಧಾಟೀಪಂಚಕ (ಸ್ತೋತ್ರ)ವನ್ನು ಪಠಿಸುತ್ತಲೂ, ಖಡ್ಗಗಳನ್ನು ಪ್ರಕಾಶಿಸುತ್ತಲೂ ಹೊರಟರು. ಅವರೊಡನೆ ಹನ್ನೆರಡು ಸಾವಿರ ಏಕಾಂತಿಗಳೂ, ಚತುಸ್ಸಪ್ತತಿ ಪೀಠದವರೂ ಇನ್ನೂ ಇತರ ವಿಷ್ಣುಭಕ್ತರೂ ಹೊರಟರು. ಧೀರರಾಗಿ ಹೊರಟು ಡಿಲ್ಲಿ ನಗರಕ್ಕೆ ಮುತ್ತಿಗೆ ಹಾಕಿದರು.

ಡಿಲ್ಲೀಶ್ವರನು ಈ ಅಸಂಖ್ಯಾತ ಸೈನ್ಯವನ್ನು ನೋಡಿ ಆಶ್ಚರ್ಯಗೊಂಡು, ನಗರಕ್ಕೆ ಯೋಗ್ಯವಾದ ಕಾವಲನ್ನಿಟ್ಟು, ಮಂತ್ರಿಗಳೊಡನೆ ಆಲೋಚಿಸಿ ಯುದ್ಧಮಾಡುವುದಕ್ಕೆ ಮೊದಲು ಈ ಸೈನ್ಯವು ಬಂದಿರುವ ಕಾರಣವೇನೆಂದು ತಿಳಿಯಲು ಚಾರರನ್ನು ಕಳುಹಿಸಿದನು. ಅವರು ಬರಲು ಆಚಾರ್ಯರು ಅವರನ್ನು ಯಥಾರ್ಹವಾಗಿ ಸತ್ಕರಿಸಿ ಅವರೊಡನೆ ತನ್ನ ಕೆಲವು ಶಿಷ್ಯರನ್ನು ರಾಜನ ಬಳಿಗೆ ಕಳುಹಿಸಿದರು. ಅವರು ಆಚಾರ್ಯರು ಬಂದಿರುವ ವಿಚಾರವನ್ನು ರಾಜನಿಗೆ ತಿಳಿಸಲು, ಅವನು ಮಹಾವೈಭವದಿಂದ ಎದುರುಗೊಂಡು ಕರೆದುಕೊಂಡು ಹೋಗಿ ಸತ್ಕರಿಸಿ ಬಂದ ಕಾರಣವನ್ನು ಕೇಳಿದನು. ಆಚಾರ್ಯರು 'ನಮ್ಮ ರಾಮಪ್ರಿಯ ದೇವನು ನಿನ್ನಲ್ಲಿರುವನು. ಅವನನ್ನು ನಮಗೆ ಕೊಡು'- ಎಂದರು. ಆತನು, ಹಿಂದೆ ಒಂದು ಕಾಲದಲ್ಲಿ ದಂಗೆಯಲ್ಲಿ ಅಪಹರಿಸಿ ತಂದಿದ್ದ ಅನೇಕ ವಿಷ್ಣುಮೂರ್ತಿಗಳನ್ನೂ

ಶಿವಮೂರ್ತಿಗಳನ್ನೂ ತೋರಿಸಿದನು. ಅವುಗಳಲ್ಲಿ ಒಂದೂ ರಾಮಪ್ರಿಯನಾಗಿರಲಿಲ್ಲ. ಇನ್ನು ಯಾವುದಾದರೂ ಬೇರೆ ಇದ್ದರೆ ತೋರಿಸೆನ್ನಲು ರಾಜನು -'ತಮ್ಮ ದೇವರು ಇಲ್ಲಿದ್ದರೆ ತಾವು ಕರೆಯಿರಿ, ತಮ್ಮವನಾಗಿದ್ದರೆ ತಾನೇ ಬರುವನು'-ಎಂದನು. ಇದನ್ನು ಕೇಳಿ ಆಚಾರ್ಯರು ಲಜ್ಜಿತರೂ ನಿರುತ್ತರರೂ ಆಗಿ ಅಲ್ಲಿಂದ ಹೊರಟು ಚಿಂತಾಕ್ರಾಂತರಾಗಿದ್ದರು. ಆ ದಿವಸ ರಾತ್ರಿ ಸ್ವಪ್ನದಲ್ಲಿ ರಾಮಪ್ರಿಯನು -'ಯೋಚಿಸಬೇಕಾದುದಿಲ್ಲ. ನಾನು ರಾಜಪುತ್ರಿಯ ಸತ್ಕಾರದಲ್ಲಿ ಅವಳ ಶಯನ ಮಂದಿರದಲ್ಲಿಯೇ ಇರುತ್ತಿರುವೆನು. ಬಂದು ಕರೆದುಕೊಂಡು ಹೋಗಬಹುದು'- ಎಂದು ಸೂಚಿಸಲು ಆಚಾರ್ಯರು ಮಾರನೆಯ ಬೆಳಿಗ್ಗೆ ಅರಮನೆಗೆ ಬಂದು ಈ ವೃತ್ತಾಂತವನ್ನು ರಾಜನಿಗೆ ತಿಳಿಸಲು, ಅವನು ಯತಿರಾಜರನ್ನು ಶಯನಮಂದಿರದ ಬಳಿಗೆ ಕರೆದುಕೊಂಡು ಹೋದನು. ಆಚಾರ್ಯರು ರಾಮಪ್ರಿಯನನ್ನು ಕರೆಯಲು ಆ ಮೂರ್ತಿಯು ಓಡಿಬಂದು ಆಚಾರ್ಯರ ತೊಡೆಯ ಮೇಲೆ ಕುಳಿತಿತು. ಅದರ ಸೌಂದರ್ಯವನ್ನು ಕೇಳಬೇಕೆ! ಪೀತಾಂಬರಧಾರಿ, ಕಸ್ತೂರಿ ತಿಲಕದಿಂದ ಉಜ್ವಲ,ಇಷ್ಟೇ ವಯಸ್ಸೆಂದು ಹೇಳಲಸದಳವಾದ ರೂಪ, ಪಾದಗಳಲ್ಲಿ ಶಬ್ದಮಾಡುತ್ತಿರುವ ಮನೋಹರ ವಾಗಿರುವ ಕಾಲುಗೆಜ್ಜೆ, ಮೋಹಕವಾದ ಮುಖಭಂಗಿ, ಹೀಗೆ ಸಂಭ್ರಮದಿಂದ ಓಡಿಬರಲು, ಆಚಾರ್ಯರು ಆನಂದಪರವಶರಾಗಿಯೂ, ರೋಮಾಂಚಿತರಾಗಿಯೂ ಆಗಿ -'ಅಸ್ಮತ್ಸಂಪತ್ಕುಮಾರ' (ನಮ್ಮ ಭಾಗ್ಯದ ಕುಮಾರ) ಎಂದು ಕರೆದರು. ಅಂದಿನಿಂದ 'ರಾಮಪ್ರಿಯ'ನಿಗೆ 'ಸಂಪತ್ಕುಮಾರ'ನೆಂದೂ, 'ಯತೀಂದ್ರಪುತ್ರ'ನೆಂದೂ ಹೆಸರು ಪ್ರಸಿದ್ಧವಾಯಿತು. ಆಚಾರ್ಯರಂತೂ 'ನಮ್ಮ ಭಾಗ್ಯದ ಕುಮಾರ'ನೆಂದು ಕರೆಯುತ್ತ ಮತ್ತೆ ಮತ್ತೆ ರಾಮಪ್ರಿಯನನ್ನು ಆಲಿಂಗಿಸಿದರು. ಈ ಆಶ್ಚರ್ಯವನ್ನು ಕಂಡು ರಾಜನು ಮಂತ್ರಿಗಳೊಡನೆ ಬಹುಭಕ್ತಿಯಿಂದ ಆಚಾರ್ಯರನ್ನು ವಂದಿಸಿ ಅನೇಕ ವಿಧವಾಗಿ ಸತ್ಕರಿಸಿದನು. ಆಚಾರ್ಯರು ರಾಜನ ಸತ್ಕಾರದಿಂದ ಸಂತುಷ್ಟರಾಗಿ, ಸಂಪತ್ಕುಮಾರನೊಡನೆ ಹೊರಡಲುದ್ಯುಕ್ತರಾದರು.

ಇಷ್ಟರಲ್ಲಿ ರಾಜಪುತ್ರಿಯು ಈ ವೃತ್ತಾಂತವನ್ನು ಕೇಳಿ ದುಃಖಿತಳಾದಳು. ಅವಳ ಸಖಿಯರು ರಾಜನಿಗೆ ಇದನ್ನು ತಿಳಿಸಲು, ಆತನು ಮಗಳನ್ನು ಬಹುವಾಗಿ ಸಮಾಧಾನಮಾಡಿದನು. ಆದರೂ ಅವಳು ಕೇಳದೆ 'ಈ ಸಂಪತ್ಕುಮಾರನನ್ನು ಕಳುಹಿಸುವುದಾದರೆ ನಾನು ಪ್ರಾಣ ಬಿಡುವೆನು. ಅವನ ವಿಯೋಗವನ್ನು ನಾನು ಸಹಿಸಲಾರೆ'- ಎಂದು ಹಟಹಿಡಿದಳು. ರಾಜನು ಮತ್ತೆ ಯತಿರಾಜರ ಬಳಿಗೆ ಹೋಗಿ ಅವರನ್ನು ಸತ್ಕರಿಸಿ -'ಎಲೈ ಯತಿರಾಜರೆ, ಈ ಸುಂದರವಾದ ಸಂಪತ್ಪುತ್ರನನ್ನು ನನ್ನ ಮಗಳಿಗೆ ಕೊಡಬೇಕು'- ಎಂದು ಪ್ರಾರ್ಥಿಸಿದನು. ಆಚಾರ್ಯರು -'ಎಲೈ ರಾಜನೆ, ಪ್ರೀತಿಯಿಂದ ತಾನಾಗಿಯೇ ಬಂದಿರುವ ಈ ಸುಂದರನಾದ ದೇವನನ್ನು ನಾನು ಹೇಗೆ ಕೊಡಲಿ? ಇದಕ್ಕಾಗಿ ನಾನು ಎಷ್ಟು ಕಷ್ಟಪಟ್ಟೆನು. ಎಷ್ಟು ಕೆಲಸ ಮಾಡಿದೆನು! ನೀನೇ ಹೇಳಿದ ಮಾತು ನಿನಗೆ ನೆನಪಿಲ್ಲವೇ?'ನಿಮ್ಮ ದೇವರು ನೀವು ಕರೆದರೆ ಬರುವುದಿಲ್ಲವೆ? ಬಂದರೆ ಕರೆದುಕೊಂಡು ಹೋಗಿ' ಎನ್ನಲಿಲ್ಲವೆ? ಹಾಗೆ ಕರೆಯಲು ನಮ್ಮ ದೇವರು ನಮ್ಮ ಬಳಿಗೆ ಬಂದಿರುವನು. ಇವನನ್ನು ಹೇಗೆ ಕೊಡಲಿ?'- ಎಂದರು.

ಇದಾದ ಮೇಲೆ ರಾಜನು ಮಂತ್ರಿಗಳೊಡನೆ ಆಲೋಚಿಸಿ ಒಂದು ತೀರ್ಮಾನಕ್ಕೆ

ಬಂದು, ಒಂದು ಪಲ್ಲಕ್ಕಿಯಲ್ಲಿ ತನ್ನ ಮಗಳನ್ನೂ ಅವಳೊಡನೆ ಸಂಪತ್ಕುಮಾರನನ್ನೂ ಕೂರಿಸಿ ಆಚಾರ್ಯರಿಗೆ ಒಪ್ಪಿಸಿದನು. ಮತ್ತು ಸಂತೋಷದಿಂದಲೂ ಪ್ರೀತಿಯಿಂದಲೂ ತನ್ನ ಒಬ್ಬ ಮಗನನ್ನು ಚತುರಂಗ ಬಲದೊಡನೆ ರಕ್ಷಣೆಗಾಗಿ ಕಳುಹಿಸಿದನು. ಆತನು ರಕ್ಷಣೆಗಾಗಿ ಆಚಾರ್ಯರೊಡನೆ ಯಾದವಾದ್ರಿಗೆ ಹೊರಟನು. ಹೀಗೆ ಆಚಾರ್ಯರು, ಹಿಂದೆ ಶ್ರೀರಾಮನು ಕೃತಕೃತ್ಯನಾಗಿ ಅಯೋಧ್ಯೆಗೆ ಹಿಂತಿರುಗಿದಂತೆ ಪತ್ನೀಸಹಿತನಾದ ಸಂಪತ್ಕುಮಾರನನ್ನು ಕರೆದುಕೊಂಡು ಯಾದವಾಚಲಕ್ಕೆ ಹಿಂತಿರುಗಿದರು.

ಇಲ್ಲಿಗೆ ಶೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಡಿಲ್ಲಿ ರಾಜಕುಮಾರಿಯೊಡನೆ ಸಂಪತ್ಕುಮಾರನ ಕರೆತರುವಿಕೆಯೆಂಬ ನಲವತ್ತೇಳನೆಯ ಅಧ್ಯಾಯವು ಮುಗಿದುದು.

## ೪೮

ಡಿಲ್ಲಿಯ ರಾಜಕುಮಾರನು ತಂದೆಯ ಅಪ್ಪಣೆಯಂತೆ ರಾಜವೈಭವದೊಡನೆಯೂ ಸೈನಿಕರೊಡನೆಯೂ ಯತಿರಾಜರನ್ನು ಅನುಸರಿಸಿ ಯಾದವಾಚಲದವರೆಗೆ ಬಂದು, ಪಲ್ಲಕ್ಕಿಯನ್ನು ಇಳಿಸಿ ನೋಡಲಾಗಿ ತಂಗಿಯು 'ರಾಮಪ್ರಿಯ'ನಲ್ಲಿ ಐಕ್ಯವಾಗಿದ್ದಳು. ಇದನ್ನು ಕಂಡು ಆಚಾರ್ಯರೇ ಮೊದಲಾಗಿ ಎಲ್ಲರಿಗೂ ಪರಮಾಶ್ಚರ್ಯವಾಯಿತು. ರಾಜಕುಮಾರನಿಗೆ ಮೊದಲು ದುಃಖವಾಯಿತು. ಆದರೂ ಕ್ರಮವಾಗಿ ಆತನಿಗೆ ಭಗವದ್ಭಕ್ತಿಯು ಹೆಚ್ಚಾಗಿ ಶ್ರೀಮನ್ನಾರಾಯಣನನ್ನು ಕೊಂಡಾಡಿದನು. ಅನಂತರ ಆಚಾರ್ಯರು ಅವನ ತಂಗಿಯನ್ನು ಅರ್ಚಾರೂಪದಿಂದ ಪರಮಾತ್ಮನ ಪಾದಪದ್ಮಗಳಲ್ಲಿ ಅರ್ಪಿಸಬೇಕೆಂದು ಸೂಚಿಸಲು, ಆತನು ಅದರಂತೆಯೇ ಮಾಡಿಸಿಕೊಟ್ಟನು. ಅದನ್ನು ಆಚಾರ್ಯರು ನಾರಾಯಣನ ಪಾದಗಳ ಮಧ್ಯದಲ್ಲಿ ವಿಧಿವತ್ತಾಗಿ ಪ್ರತಿಷ್ಠೆಮಾಡಿಸಲು ರಾಜಕುಮಾರನು ಆನಂದಪರವಶನಾದನು. ಆಚಾರ್ಯರ ಅನುಮತಿಯನ್ನು ಪಡೆದು ಡಿಲ್ಲಿಗೆ ಹೊರಟನು.

ರಾಜನು ಮಗನಿಂದ ಈ ವೃತ್ತಾಂತವನ್ನು ಕೇಳಿ ಆಶ್ಚರ್ಯ, ದುಃಖಗಳಿಂದ ಪರವಶನಾದನು. ಪಂಡಿತರ ಹಿತವಚನಗಳಿಂದ ಸಂತುಷ್ಟನಾದನಲ್ಲದೆ ಶ್ರೀಮನ್ನಾರಾಯಣನಲ್ಲಿಯೂ ಆಚಾರ್ಯರಲ್ಲಿಯೂ ಅತಿಶಯವಾದ ಭಕ್ತಿಯುಂಟಾಗಿ ಆಚಾರ್ಯರನ್ನು ಬಹುವಿಧವಾಗಿ ಸತ್ಕರಿಸಿ ಶ್ರೀಮನ್ನಾರಾಯಣನ ಉತ್ಸವಾದಿಗಳಿಗಾಗಿ ಅಪರಿಮಿತವಾದ ಧನವನ್ನು ಕೊಟ್ಟನು.

ರಾಜನ ಇನ್ನೊಬ್ಬ ಮಗ - ಕಬೀರನೆಂಬುವವನು ಈ ಸುದ್ದಿಯನ್ನು ಕೇಳಿ ಆನಂದದಿಂದ ನಾರಾಯಣಪುರಕ್ಕೆ ಹೋಗಿ ಭಗವಂತನ ಪಾದಗಳಲ್ಲಿರುವ ಅರ್ಚಾರೂಪಿಣಿಯಾದ ಸೋದರಿಯನ್ನು ನೋಡಿ ಆನಂದಮಗ್ನನಾಗಿ, ಆಚಾರ್ಯರನ್ನು ವಂದಿಸಿ, ದಿವ್ಯದೇಶಗಳ ಸಂಚಾರ ಮಾಡಬೇಕೆಂಬ ಉದ್ದೇಶದಿಂದ ಶ್ರೀರಂಗಕ್ಕೆ ಹೊರಟನು.

ಶ್ರೀರಂಗಕ್ಕೆ ಹೋಗಿ ರಂಗನಾಥನನ್ನು ಸಂದರ್ಶಿಸಿ, ಆ ರಂಗನಾಥನ ವೈಭವವನ್ನು ಮನದಣಿಯ ಅನುಭವಿಸಿ 'ರಂಗನಾಥನಿಗಿಂತಲೂ ಪರದೈವವಿಲ್ಲ'ವೆಂದು ನಿಶ್ಚಯಿಸಿಕೊಂಡು, ಪರಮಭಕ್ತಿಯಿಂದ ಪರಮಾತ್ಮನಲ್ಲಿ ಮುಕ್ತಿಯನ್ನು ಬೇಡಿದನು. ರಂಗನಾಥನು -'ನಾನು ಪ್ರಪನ್ನರಿಗೆ ಮಾತ್ರ ಮೋಕ್ಷಕೊಡಲು ಸಮರ್ಥನು. ಅಂದರೆ ನನ್ನ ಚಕ್ರದಿಂದ

ಅಂಕಿತರಾಗಿರುವವರಿಗೆ ಮಾತ್ರ ಮೋಕ್ಷಕೊಡಬಲ್ಲೆನು. ಅಂಥ ನನ್ನ ಚಕ್ರವನ್ನು ನೋಡಿರುವವರಾಗಲೀ, ನನ್ನ ಚಕ್ರದಿಂದ ಹತರಾದ ಶತ್ರುಗಳಿಗಾಗಲಿ ಮೋಕ್ಷವು ಸಿದ್ಧ. ಪತಿತರು ಮುಕ್ತಿಯನ್ನು ಹೊಂದಬೇಕಾದರೆ ಜಗನ್ನಾಥಕ್ಕೆ ಹೋಗಬೇಕು. ಆದುದರಿಂದ ನೀನು ಅಲ್ಲಿಗೆ ಹೋದರೆ ಮುಕ್ತಿಯು ಲಭಿಸುವುದು'- ಎಂದನು. ರಂಗನಾಥನಿಂದ ಹೀಗೆ ಅಪ್ಪಣೆಯನ್ನು ಹೊಂದಿ ಕಬೀರನು ಜಗನ್ನಾಥಕ್ಕೆ ಹೋಗಿ, ಕಳಿಂಗರಾಜನಿಂದ ಸತ್ಕಾರವನ್ನು ಹೊಂದಿ, ಪರಮಾತ್ಮನ ದರ್ಶನಭಾಗ್ಯದಿಂದ ಮೈಮರೆತು ಕುಣಿಯಲಾರಂಭಿಸಿದನು. ಸ್ವಲ್ಪ ಹೊತ್ತಿನ ಮೇಲೆ ಪ್ರಕೃತಿಸ್ಥನಾಗಿ ಜಗನ್ನಾಥನ ಸೇವಾತತ್ಪರನಾಗಿ ಅಲ್ಲಿಯೇ ಇರುತ್ತಿದ್ದನು.

ಒಂದು ಸಲ ಜಗನ್ನಾಥನು ಭಕ್ತನಾದ ಕಬೀರನಿಗೆ ಮೋಕ್ಷವನ್ನು ಕೊಡಲು ಇಚ್ಛಿಸಿ, ನಾಯಿಯ ರೂಪದಿಂದ ಕಬೀರನಿರುವ ಕಡೆಗೆ ಬಂದನು. ಕಬೀರನ ಹಿಂದುಗಡೆಯಿಂದ ಒಂದು ಮೆಲ್ಲಗೆ ಒಂದು ರೊಟ್ಟಿಯನ್ನು ಕಚ್ಚಿಕೊಂಡು ಅವನು ಕಾಣುತ್ತಿರುವಂತೆ ಓಡತೊಡಗಿದನು. ಅದನ್ನು ಕಂಡು ಭಕ್ತನಾದ ಕಬೀರನು 'ಎಲೈ ಸ್ವಾಮಿ, ಬರೀ ಬರರೊಟ್ಟಿಯನ್ನು ತಿಂದರೆ ಹೊಟ್ಟೆನೋವು ಬರುವುದಿಲ್ಲವೇ, ಇದೋ ತುಪ್ಪವನ್ನು ತೆಗೆದುಕೊ, ತೆಗೆದುಕೋ'- ಎಂದು ಹಿಂಬಾಲಿಸಿದನು. ನಾಯಿಯು ಕಬೀರನನ್ನು ನದಿಯವರೆಗೂ ಎಳೆದುಕೊಂಡು ಹೋಗಿ ಶಂಖಚಕ್ರಧರನಾದ ಪರಮಾತ್ಮನಾಗಿ ಪ್ರತ್ಯಕ್ಷನಾದನು. ಕಬೀರನು ಆನಂದಮಗ್ನನಾಗಿರಲು ಮುಕ್ತಿಯನ್ನು ಪರಮಾತ್ಮನು ಕರುಣಿಸಿದನು. ಇದನ್ನು ಕೇಳಿದ ಆ ನಗರದ ಜನರೆಲ್ಲರೂ ಪರಮಾಶ್ಚರ್ಯಪಟ್ಟರು. ಮತ್ತು ಕಬೀರನ ಅಂತ್ಯಸಂಸ್ಕಾರವನ್ನು ಮಾಡಿದರು. ಈಗಲೂ ಅಲ್ಲಿ ಕಬೀರನ ಮುಕ್ತಿಸ್ಥಾನವು ಅವನ ಕೀರ್ತಿಯನ್ನು ಸೂಚಿಸುವಂತಿದೆ.

ರಾಜನು ತನ್ನ ಮಗಳು ಮತ್ತು ಮಗನ ವೃತ್ತಾಂತವನ್ನು ಕೇಳಿ ಆಚಾರ್ಯರಲ್ಲಿ ಅತಿಶಯವಾದ ಭಕ್ತಿಯಿಂದ ಸಂಪತ್ಕುಮಾರನಿಗೂ ತನ್ನ ಮಗಳಿಗಾಗಿಯೂ ಅಪರಿಮಿತವಾದ ಹಣವನ್ನು ಮತ್ತೆ ಕೊಟ್ಟು ಆಚಾರ್ಯರನ್ನು ಸತ್ಕರಿಸಲು ಅವರು ಯಾದವಾಚಲದಲ್ಲಿಯೇ ಇನ್ನೂ ಕೆಲವು ಕಾಲ ಸುಖವಾಗಿರುತ್ತಿದ್ದರು. ಆಗ ಆಚಾರ್ಯರು ಡಿಲ್ಲಿಯಿಂದ ಸಂಪತ್ಪುತ್ರನನ್ನು ತರಲು ಸಹಾಯಮಾಡಿದ ವೈಷ್ಣವಾದಿಗಳಿಗೆ ಅತ್ಯಂತ ಮರ್ಯಾದೆಯನ್ನು ಮಾಡಿದರಲ್ಲದೆ ಅಂತ್ಯಜರಿಗೂ ಕೂಡ ತಿರುನಾರಾಯಣಪುರದ ಮಹೋತ್ಸವ ಸಮಯದಲ್ಲಿ ಮೂರು ದಿವಸಗಳು ಕಲ್ಯಾಣತೀರ್ಥದಲ್ಲಿ ಸ್ನಾನಕ್ಕೂ, ದೇವಾಲಯದಲ್ಲಿ ಬಲಿಪೀಠದವರೆಗೆ ಬಂದು ಭಗವಂತ ದರ್ಶನಮಾಡಬಹುದೆಂದೂ ಅನುಮತಿ ಕೊಟ್ಟರು. ಅಂತ್ಯಜರು ಅಂದಿನಿಂದ ಹಾಗೆಯೇ ದೇವಾಲಯಕ್ಕೆ ಬಂದು ಅಕ್ಕಿ, ಎಣ್ಣೆಯನ್ನು ಸಮರ್ಪಿಸಿ; ಭಗವತ್ಸೇವೆಯನ್ನು ಪಡೆದು ಹೋಗುತ್ತಿದ್ದಾರೆ. ಅದಾದ ಮೇಲೆ ಅರ್ಚಕರು ಸಂಪ್ರೋಕ್ಷಣಾದಿಗಳನ್ನು ನಡೆಸಿ ಮುಂದಿನ ಉತ್ಸವಗಳನ್ನು ನಡೆಸುವರು. ಯತಿರಾಜರ ಅಜ್ಞೆಯಂತೆ ಇಂದಿಗೂ ಈ ಪದ್ಧತಿಯು ರೂಢಿಯಲ್ಲಿದೆ. ಹೀಗೆ ಯತಿರಾಜರು ಎಲ್ಲರನ್ನೂ ಆನಂದಗೊಳಿಸುತ್ತ 'ಯತಿರಾಜಮಠ'ವೆಂಬ ಹೆಸರಿನಿಂದ ಒಂದು ಮಠವನ್ನು ಸ್ಥಾಪಿಸಿ ಅಲ್ಲಿಯೇ ಸುಖವಾಗಿರುತ್ತಿದ್ದರು.

ಕೃತಯುಗದಲ್ಲಿ ಸನತ್ಕುಮಾರನು ಶ್ರೀಮನ್ನಾರಾಯಣನನ್ನು ಪ್ರತಿಷ್ಠಿಸಿ ಅರ್ಚನೆ ಮಾಡುತ್ತಿರಲು, ಈ ಅದ್ರಿಗೆ 'ನಾರಾಯಣಾದ್ರಿ' ಎಂದೂ, ತ್ರೇತಾಯುಗದಲ್ಲಿ ದತ್ತಾತ್ರೇಯನು ವೇದಪುರುಷರನ್ನು ಶಿಷ್ಯರನ್ನಾಗಿ ಮಾಡಿಕೊಂಡು ವೇದಪುಷ್ಕರಿಣಿಯ ತೀರದಲ್ಲಿ ತಪಸ್ಸು

ಮಾಡುತ್ತಿರಲು 'ವೇದಾಚಲ'ವೆಂದೂ, ದ್ವಾಪರಯುಗದಲ್ಲಿ ಶ್ರೀಕೃಷ್ಣನು ಪೂಜಿಸುತ್ತಿರಲು 'ಯಾದವಾದ್ರಿ'ಯೆಂದೂ, ಕಲಿಯುಗದಲ್ಲಿ ಯತಿರಾಜರು ಶ್ರೀಮನ್ನಾರಾಯಣನನ್ನು ಪ್ರತಿಷ್ಠಿಸಿ ಆರಾಧಿಸುತ್ತಿರಲು 'ಯತಿಶೈಲ'ವೆಂದೂ ಪ್ರಸಿದ್ಧವಾಯಿತು.

ಆಚಾರ್ಯರು ಹೀಗೆ ಜಾತಿಭೇದಗಳಿಲ್ಲದೆ ಎಲ್ಲರಿಗೂ ಸದುಪದೇಶ ಮಾಡುತ್ತಲೂ ಎಲ್ಲರಿಂದಲೂ ಸೇವ್ಯರಾಗಿ ಶಿಷ್ಯರಿಗೆ ಶ್ರೀಭಾಷ್ಯಪ್ರವಚನವನ್ನು ನಡೆಸುತ್ತಲೂ, ಅವ್ಯಾಹತವಾದ ಭಗವತ್ಕೈಂಕರ್ಯವನ್ನೂ, ಉತ್ಸವಾದಿಗಳನ್ನೂ ನಡೆಸುತ್ತ ಸುಖವಾಗಿರುತ್ತಿದ್ದರು.

ರಂಗನಾಥನ ಪೂರ್ಣಕೃಪೆಯಿಂದಲೂ ಶ್ರೀರಂಗವಾಸದಿಂದಲೂ ಆಚಾರ್ಯರಿಗೆ ಉಂಟಾಗಿದ್ದ ಮಹಿಮೆಯು ಯಾದವಾಚಲದಲ್ಲಿ ಇಮ್ಮಡಿಯಾಯಿತು. ರಂಗನಾಥನ ಸೇವೆಯಿಲ್ಲದ್ದರಿಂದುಂಟಾದ ದುಃಖವು ಆಚಾರ್ಯರಿಗೆ 'ಸಂಪತ್ಕುತರತ್ನ' ಲಾಭದಿಂದ ಕಡಿಮೆಯಾಯಿತು. ರಂಗಾಧಿಪನಲ್ಲಿ ಇದ್ದ ಪ್ರೇಮವು 'ಸಂಪತ್ಸುತ'ನಲ್ಲಿ ಇಮ್ಮಡಿಯಾದುದು ನ್ಯಾಯವೇ ಸರಿ; ತಂದೆಯಲ್ಲಿರುವ ಪ್ರೇಮಕ್ಕಿಂತಲೂ ಮಗನಲ್ಲಿರುವ ಪ್ರೇಮವು ಅಧಿಕ ವಾಗಿರುವುದು ಲೋಕಸ್ವಭಾವವಷ್ಟೆ!

ಇತ್ತ ಶ್ರೀರಂಗದಲ್ಲಿ ಯತಿರಾಜರ ಸೇವೆಯಿಲ್ಲದ್ದರಿಂದಲೂ, ಚೋಳರಾಜನ ಕಾಟದಿಂದಲೂ ಪೀಡಿತರಾದ ವೈಷ್ಣವರೆಲ್ಲರೂ ನಾರಾಯಣಪುರಕ್ಕೆ ಓಡಿಬಂದರು. ಆಚಾರ್ಯರ ವಾಸದಿಂದ ನಾರಾಯಣಾಚಲರೂಪವಾದ ವನವು ನಗರಿಯಾಯಿತು. ಆಚಾರ್ಯರಿಲ್ಲದ್ದರಿಂದ ಶ್ರೀರಂಗವು ಅಡವಿಯಾಯಿತು. ಯಾವ ಆಚಾರ್ಯರಿಲ್ಲದ್ದರಿಂದ ಈ ವ್ಯತ್ಯಾಸವಾಯಿತೋ ಅದನ್ನು ಚಿಂತಿಸಿ, ರಂಗನಾಥನು ಕ್ರಿಮಿಕಂಠ ಚೋಳನನ್ನು ಸಂಹರಿಸಿ ಯತಿರಾಜರಿಗೆ ಸಂತೋಷವುಂಟು ಮಾಡಬೇಕೆಂದು ಸಂಕಲ್ಪಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಸಂಪತ್ಪುತ್ರ ಪ್ರತಿಷ್ಠಾಪನ ವೆಂಬ ನಲವತ್ತೆಂಟನೆಯ ಅಧ್ಯಾಯವು ಮುಗಿದುದು.

## ೪೯

ಆ ವೇಳೆಗೆ ಶ್ರೀರಂಗದಿಂದ ಒಬ್ಬ ಶ್ರೀವೈಷ್ಣವನು ಆಚಾರ್ಯರನ್ನು ನೋಡಬೇಕೆಂದು ಬಂದನು. ಅವನನ್ನು ಕೂರನಾಥ, ಪೂರ್ಣಾಚಾರ್ಯರ ವಿಚಾರವಾಗಿ ಕೇಳಲು ಅವನು ಹೀಗೆಂದನು -'ದೂತರ ಮುಖಾಂತರ ಅವರಿಬ್ಬರೂ ಚೋಳರಾಜನ ಬಳಿಗೆ ಹೋದರಷ್ಟೆ. ಅಲ್ಲಿ ಆ ದುಷ್ಟನು ಅವರಿಬ್ಬರನ್ನೂ 'ಶಿವಾತ್ಪರತರಂ ನಾಸ್ತಿ' ಎಂದು ಬರೆಯಲು ಹೇಳಿದನು. ಆಗ ಕೂರನಾಥನು ಎಲ್ಲರೂ ಕೇಳುವಂತೆ ಗಟ್ಟಿಯಾಗಿ -'ಎಲೈ ರಾಜನೆ, ಶ್ರುತಿಸ್ಮೃತಿ ಇತಿಹಾಸಗಳಲ್ಲೂ ಪುರಾಣಗಳಲ್ಲಿಯೂ ಶ್ರೀಮನ್ನಾರಾಯಣನೇ ಪರತತ್ವವೆಂದು ಘೋಷಿಸಲ್ಪಟ್ಟಿದೆ. ಅವನೇ ಜಗತ್ಕಾರಣಭೂತನೂ, ಧ್ಯೇಯನೂ ಅವನೇ. ಮೋಕ್ಷಪ್ರದನೂ ಅವನೇ. ಅವನ ಆಜ್ಞೆಯಿಂದಲೇ ಚಂದ್ರಸೂರ್ಯಾದಿಗ್ರಹಗಳೂ, ಇಂದ್ರಾದಿ ದಿಕ್ಪಾಲಕರೂ ಅವರವರ ಕರ್ತವ್ಯದಲ್ಲಿರುವರು. ಬ್ರಹ್ಮರುದ್ರಾದಿಗಳೆಲ್ಲರೂ ಆ ಶ್ರೀಹರಿಯ ಪುತ್ರಪೌತ್ರಾದಿಗಳು. ಎಲೈ ಚೋಳಭೂಪಾಲ, ಆ ಹರಿಯು ಒಂದು ಪಾದವನ್ನು ನೀಡಲು

ಒಬ್ಬನು (ಬ್ರಹ್ಮನು) ಭಕ್ತಿಯಿಂದ ಆ ಪಾದವನ್ನು ತೊಳೆದನು; ಇನ್ನೊಬ್ಬನು (ರುದ್ರನು) ಭಕ್ತಿಯಿಂದ ತಲೆಯಲ್ಲಿ ಧರಿಸಿದನು. ಈಗ ಈ ಮೂವರಲ್ಲಿ ಯಾರು ಶ್ರೇಷ್ಠರು? ನೀನೇ ಯೋಚಿಸು?'- ಎಂದನು. ಇದನ್ನು ಕೇಳಿದ ರಾಜನು ಸುಮ್ಮನಾದನು. ಆದರೆ ಮತ್ತೆ ಕೂರನಾಥರು -'ಶಂಕರನು ತ್ರಿವಿಕ್ರಮನ ಪಾದತೀರ್ಥದ ಸಂಪರ್ಕದಿಂದ ಕಪಾಲಿತ್ವ ಅಶಿವತ್ವಗಳನ್ನು ಬಿಟ್ಟು ಶಿವನಾದನು' ಎಂದರು. ಇದನ್ನು ಕೇಳಿ ಕ್ರುದ್ಧನಾದ ರಾಜನು 'ನೀನು ಪಂಡಿತನಾದುದರಿಂದ ಇಷ್ಟೆಲ್ಲಾ ಮಾತನಾಡುವೆ, ಆದಿರಲಿ, ನಾನು ಹೇಳಿದುದನ್ನು ಬೇಗ ಮಾಡು. 'ಶಿವಾತ್ಪರತರಂ ನಾಸ್ತಿ' - ಎಂದು ಬರೆ'- ಎನಲು, ಕೂರನಾಥರು ಅದನ್ನು ಬರೆದು ಮುಂದೆ 'ದ್ರೋಣಮಸ್ತಿ ತತಃ ಪರಂ' ಎಂದು ಬರೆದರು. ಈ ಹಾಸ್ಯವನ್ನು ಕಂಡು ಕುಪಿತನಾದ ರಾಜನು ಅವರಿಬ್ಬರ ಕಣ್ಣನ್ನು ಕೀಳಬೇಕೆಂದು ದೂತರಿಗೆ ಅಪ್ಪಣೆ ಮಾಡಿದನು. ಅವರು ಅದರಂತೆಯೇ ಮಾಡಿದರು. ಪೂರ್ಣಾಚಾರ್ಯರು ವೃದ್ಧರಾದುದರಿಂದ ಆ ವೇದನೆಯನ್ನು ತಡೆಯಲಾಗಲಿಲ್ಲ. ಕೂಡಲೇ ಇಬ್ಬರೂ ಶ್ರೀರಂಗಕ್ಕೆ ಹೊರಟರು. ಆದರೆ ಮಧ್ಯಮಾರ್ಗದಲ್ಲಿ ಒಂದು ಉಪವನದಲ್ಲಿ ಪೂರ್ಣಾಚಾರ್ಯರು ಕೂರನಾಥರ ತೊಡೆಯ ಮೇಲೆ ತಲೆಯನ್ನೂ, ತಮ್ಮ ಪತ್ನಿಯ ತೊಡೆಯ ಮೇಲೆ ಪಾದಗಳನ್ನೂ ಇಟ್ಟುಕೊಂಡು ಮಲಗಿದರು. ಆಗ ಪತ್ನೀಸಹಿತರಾದ ಕೂರನಾಥರು -'ಈ ಆಪತ್ಕಾಲದಲ್ಲಿ ಬೇಗ ಶ್ರೀರಂಗಕ್ಕೆ ಹೋಗೋಣ'ವೆಂದರು. ಆದರೆ ಪೂರ್ಣಾಚಾರ್ಯರು -'ಪ್ರಾಣಬಿಡುವುದಕ್ಕಾಗಿಯೇ ಶ್ರೀರಂಗಕ್ಕೆ ಹೋಗುವುದು ಅಷ್ಟೇನು ಯುಕ್ತವಾಗಿಲ್ಲ. ಜನರೂ ಆಡಿಕೊಳ್ಳುವರು. ಇಷ್ಟರ ಮೇಲೆ ಪ್ರಪನ್ನರಾದವರಿಗೆ ದೇಶಕಾಲಗಳ ನಿಯಮವಿಲ್ಲ'- ಎಂದು ಹೇಳುತ್ತ, ಯಾಮುನಾಚಾರ್ಯರ ಪದಪದ್ಮಗಳನ್ನು ಸ್ಮರಿಸುತ್ತ ಕಣ್ಣು ಮುಚ್ಚಿದರು. ಆಗ ಅವರಿಗೆ ೧೦೫ ವರ್ಷ ವಯಸ್ಸಾಗಿತ್ತು. ಅವರ ಮಕ್ಕಳೊಡನೆ ಕೆಲವರು ಶ್ರೀವೈಷ್ಣವರು ಅವರ ಅಂತ್ಯಸಂಸ್ಕಾರಗಳನ್ನು ಮಾಡಿದರು. ರಂಗನಾಥನು ಅವರಿಗೆ ಪರಮಪದವನ್ನು ಕರುಣಿಸಿದನು. ಕೂರನಾಥರು 'ಸರ್ವಜ್ಞನಾದ ರಂಗೇಶನು ನನಗೂ ಈಗಲೇ ಮುಕ್ತಿಯನ್ನು ಅನುಗ್ರಹಿಸಬಾರದೆ'- ಎಂದು ದುಃಖಿಸುತ್ತಿರುವರು'- ಎಂದು ಎಲ್ಲವನ್ನೂ ವಿವರಿಸಿದನು.

ಆಚಾರ್ಯರು ಇದೆಲ್ಲವನ್ನೂ ಕೇಳಿ ದುಃಖಿತರಾದರು. ಎಲ್ಲರೂ ಸಮಾಧಾನ ಮಾಡಿದ ಮೇಲೆ ತಮ್ಮ ಆಚಾರ್ಯರಾದ ಪೂರ್ಣಾಚಾರ್ಯರಿಗೆ ನಾರಾಯಣನ ಸನ್ನಿಧಿಯಲ್ಲಿ ಶ್ರೀಚೂರ್ಣಪರಿಪಾಲನವನ್ನು ಮಾಡಿ, ನಾಲ್ಕು ಸಾವಿರ ದಿವ್ಯಪ್ರಬಂಧಗಳನ್ನೂ, ಸಾಂಗವಾಗಿ ವೇದಗಳನ್ನೂ, ಶ್ರೀಮದ್ರಾಮಾಯಣ, ವಿಷ್ಣುಪುರಾಣ, ಶ್ರೀಭಾಷ್ಯ ಇವುಗಳನ್ನೆಲ್ಲಾ ಪಾರಾಯಣಮಾಡಿ, ಅಸಂಖ್ಯವಾದ ಪ್ರಪನ್ನರಾದ ಶ್ರೀವೈಷ್ಣವರನ್ನು ಷಡ್ರಸೋಪೇತವಾದ ಭೋಜನಮಾಡಿಸಿದರು.

ಅನಂತರ ಕೂರನಾಥರನ್ನು ತನ್ನ ಮಾತಿನಿಂದ ಸಮಾಧಾನ ಮಾಡಲು ಆಪ್ತನಾದ ಒಬ್ಬ ಶಿಷ್ಯನನ್ನು ಶ್ರೀರಂಗಕ್ಕೆ ಕಳುಹಿಸಿ, ಆಚಾರ್ಯರು ಯಾದವಾದ್ರಿಯಲ್ಲಿಯೇ ಭಗವತ್ಕೈಂಕರ್ಯದಲ್ಲಿ ನಿರತರಾಗಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕೂರನಾಥ - ಕ್ರಿಮಿಕಂಠರ ವಿವಾದವೆಂಬ ನಲವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

## ೫೦

ಕೂರನಾಥರು ಶ್ರೀರಂಗಕ್ಕೆ ಹೋದರು. ಆದರೆ ಅಲ್ಲಿ ಕೆಲವರು ದ್ವಾರಪಾಲಕರು ಅವರನ್ನು ತಡೆದರು. ಇನ್ನು ಕೆಲವರು -'ಇವನು ಸಾಧುವು, ಇವನನ್ನು ಬಿಡಬಹುದು'- ಎಂದರು. ಇದೆಲ್ಲವನ್ನೂ ಕೇಳಿದ ಕೂರನಾಥರು -'ನೀವು ನನ್ನನ್ನೇಕೆ ತಡೆಯುವಿರಿ ? ನಿಜವಾದ ಕಾರಣವನ್ನು ಹೇಳಿ'- ಎಂದು ಕೇಳಲು, ಅವರು 'ಚೋಳರಾಜನು ಯತಿರಾಜರೊಡನೆ ವಿರೋಧವನ್ನುಂಟುಮಾಡಲು ಅವರು ಶ್ರೀರಂಗವನ್ನು ಬಿಟ್ಟು ಎಲ್ಲಿಗೋ ಹೋದರು. ಈ ಸಂದರ್ಭವನ್ನು ನೋಡಿ ರಂಗನಾಥನ ಅರ್ಚಕರೆಲ್ಲರೂ ತಮಗೂ ಚೋಳರಾಜನಿಗೂ ವಿರೋಧವಿಲ್ಲವೆಂದೂ, ತಮಗೂ ಯತಿರಾಜರಿಗೂ ವಿರೋಧವೆಂದೂ, ಅವರ ಸಂಬಂಧದವರನ್ನು ಯಾರನ್ನೂ ಸೇರಿಸಬಾರದೆಂದು ನಿರ್ಣಯಿಸಿಕೊಂಡಿರುವನು. ಆದರೆ ನೀನು ಸಾಧುವಾದುದರಿಂದ ನಿನ್ನನ್ನು ಬಿಡುತ್ತೇವೆ, ಬರಬಹುದು'- ಎಂದರು. ಇದನ್ನು ಕೇಳಿ ದುಃಖಿತರಾದ ಕೂರನಾಥರು -'ನಾನು ಯತಿರಾಜರ ಸಂಬಂಧಿ ಎಂಬುದರಲ್ಲಿ ಸಂದೇಹವೇ ಇಲ್ಲ, ಆದುದರಿಂದ ರಂಗನಾಥನ ಸೇವೆಯು ನನಗೆ ಖಂಡಿತವಾಗಿಯೂ ಬೇಡ'- ಎಂದು ಹೇಳಿ ಹೆಂಡತಿ ಮಕ್ಕಳೊಡನೆ ಸುಂದರಾಚಲಕ್ಕೆ ಹೋಗಿ ಸುಂದರಬಾಹುವಿನ ಸೇವೆ ಮಾಡುತ್ತ ಅಲ್ಲಿಯೇ ಕೆಲವು ದಿವಸಗಳಿದ್ದರು. ಆಗ ಪಂಡಿತರಾದ ಕೂರನಾಥರು ಶ್ರೀಸ್ತವ, ಸುಂದರಬಾಹುಸ್ತವ, ಅತಿಮಾನುಷಸ್ತವ, ಶ್ರೀವೈಕುಂಠಸ್ತವವೆಂಬ ನಾಲ್ಕು ಸ್ತೋತ್ರಗಳನ್ನು ರಚಿಸಿದರು. ಅವುಗಳಲ್ಲಿ ಸುಂದರಬಾಹುಸ್ತವದಲ್ಲಿ -'ಎಲೈ ವನಗಿರೀಶ್ವರನೇ, ನನ್ನ ಸತ್ಯವಾದ ವಿಜ್ಞಾಪನೆಯನ್ನು ಅಂಗೀಕರಿಸು. ಶ್ರೀರಂಗದಲ್ಲಿ ನಾನು ಯತಿರಾಜರ ವಶವರ್ತಿಯಾಗಿರುವಂತೆ ಅನುಗ್ರಹಿಸು'- ಎಂದು ಪ್ರಾರ್ಥಿಸಿರುವರು.

ಇಷ್ಟರಲ್ಲಿ ಗೋಷ್ಠೀನಗರದಲ್ಲಿ ಗೋಷ್ಠೀಪೂರ್ಣರಿಗೆ ೧೦೫ ವರ್ಷ ವಯಸ್ಸಾಗಿ ಅಂತ್ಯಕಾಲವು ಒದಗಿತ್ತು. ಆಗ ಅವರ ಶಿಷ್ಯರು -'ತಮ್ಮ ಮನಸ್ಸಿನಲ್ಲಿರುವ ಯಾವುದಾದರೂ ಅಭಿಲಾಷೆಯನ್ನು ಸೂಚಿಸಬೇಕು'- ಎಂದು ಕೇಳಲು, 'ಎಲೈ ಭಾಗವತಶ್ರೇಷ್ಠರೆ, ಆಚಾರ್ಯರಲ್ಲಿ ನಿರ್ಭರನಾಗಿಯೂ ಪ್ರಪನ್ನನಾಗಿಯೂ ಇರುವವನಿಗೇನು ಚಿಂತೆ ?'- ಎಂದು ಹೇಳುತ್ತ ಯಾಮುನಾಚಾರ್ಯರ ಚರಣಗಳನ್ನು ಸ್ಮರಿಸುತ್ತ, ವಿಷ್ಣುಲೋಕವನ್ನು ಹೊಂದಿದರು. ಅವರ ಮಗನಾದ ನಾರಾಯಣನು ಬ್ರಹ್ಮಮೇಧದಿಂದ ಸಂಸ್ಕರಿಸಿದನು.

ಯತಿರಾಜರಿಂದ ಕಳುಹಿಸಲ್ಪಟ್ಟ ಶ್ರೀವೈಷ್ಣವನೊಬ್ಬನು ಶ್ರೀರಂಗಕ್ಕೆ ಬಂದು ಅವರ ವೃತ್ತಾಂತವನ್ನು ಕೂರನಾಥರಿಗೆ ತಿಳಿಸಬೇಕೆಂದು ನೋಡಿ, ಅವರು ಅಲ್ಲಿಲ್ಲದಿರಲು ಸುಂದರಾಚಲಕ್ಕೆ ಬಂದು ಎಲ್ಲ ವೃತ್ತಾಂತವನ್ನೂ ಹೇಳಿ ಆಚಾರ್ಯರು ಹೇಳಿಕಳುಹಿಸಿದ ಸಮಾಧಾನದ ಮಾತುಗಳನ್ನು ಹೇಳಲು, ಕೂರನಾಥರು 'ಜಗದ್ಗುರುವಾದ ಲಕ್ಷ್ಮಣಾಚಾರ್ಯರು ಕ್ಷೇಮವಾಗಿರುವುದೇ ನನಗೆ ಪರಮಸಂತೋಷವೆಂದು ಹೇಳಿ ಬಂದಿದ್ದ ಶ್ರೀವೈಷ್ಣವನನ್ನು ಯತಿರಾಜರ ಭಾವನೆಯಿಂದ, ಭಕ್ತಿಯಿಂದಲೂ, ಸಂತೋಷದಿಂದಲೂ ಸತ್ಕರಿಸಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕೂರನಾಥನ ಸುಂದರಾಚಲ

ನಿವಾಸವೆಂಬ ಐವತ್ತನೆಯ ಅಧ್ಯಾಯವು ಮುಗಿದುದು.

೫೧

ಅನಂತರ ಚೋಳರಾಜನು ಹಾಸ್ಯಮಾಡಿ ಬರೆದ -'ದ್ರೋಣಮಸ್ತಿ ತತಃಪರಂ'- ಎಂಬ ವಾಕ್ಯವನ್ನು ಸ್ಮರಿಸುತ್ತ, ಪೂರ್ಣಾಚಾರ್ಯ ಕೂರನಾಥರ ಕಣ್ಣುಗಳನ್ನು ಕೀಳಿಸಿದುದಲ್ಲದೆ ತನ್ನ ದೇಶದಲ್ಲಿರುವ ವಿಷ್ಣು ದೇವಾಲಯಗಳೆಲ್ಲವನ್ನೂ ಕ್ರಮವಾಗಿ ನಾಶಮಾಡುತ್ತ, ಶ್ರೀರಂಗವನ್ನು ನಾಶಮಾಡಬೇಕೆಂದು ಹೊರಟನು. ಅಷ್ಟರಲ್ಲಿ ಒಂದುದಿನ ರಾತ್ರಿ ಒಂದು ಊರಿನಲ್ಲಿ ತಂಗಿರಲು ಅವನ ಕಂಠದಲ್ಲಿ ಕ್ರಿಮಿಗಳು ಹುಟ್ಟಿದವು. ಉದರರೋಗವೂ ಉಂಟಾಗಿ ಆ ನೋವಿನಿಂದ ಮೃತನಾದನು. ಇದನ್ನು ಕೇಳಿದ ವರದಾಚಾರ್ಯ ಮೊದಲಾದ ಶಿಷ್ಯರು ಶ್ರೀರಂಗದಿಂದ ಯಾದವಾದ್ರಿಗೆ ಹೊರಟರು.

ಆಚಾರ್ಯರು ಕಲ್ಯಾಣತೀರ್ಥದಲ್ಲಿ ಸ್ನಾನಮಾಡಿ ಜಪಮಾಡುತ್ತಿದ್ದರು. ಶಿಷ್ಯರು ಅಲ್ಲಿಗೆ ಬಂದು ವಿಚಾರವನ್ನು ತಿಳಿಸಲು, ಆನಂದಪರವಶರಾದ ಆಚಾರ್ಯರು ತಮ್ಮ ಶಿಷ್ಯರನ್ನು ಗಾಢವಾಗಿ ಆಲಂಗಿಸಿ -'ಈ ನಿಮ್ಮ ಪ್ರಿಯಸಂದೇಶಕ್ಕೆ ಏನನ್ನು ಪ್ರತಿಯಾಗಿ ಕೊಡಲಿ? ಧನಧಾನ್ಯಗಳಾಗಲೀ, ಹೊನ್ನು ರನ್ನಗಳಾಗಲೀ, ರಾಜ್ಯಕೋಶಗಳೇ ಆಗಲಿ ಯಾವುದು ಈ ಮಾತಿಗೆ ಸಮನಾದುದಿಲ್ಲ'- ಎಂದು ಹೇಳುತ್ತ, ಹಿಂದೆ ಪವನತನಯನಿಂದ ಪ್ರಿಯವಚನವನ್ನು ಕೇಳಿದ ವೈದೇಹಿಯು ಚೂಡಾರತ್ನವನ್ನು ಕೊಟ್ಟಂತೆ, ಮೃದುಮಧುರವಾದ ಮಾತನಾಡಿ ಅವರಿಗೆ ಮಂತ್ರರತ್ನವನ್ನು ಅನುಗ್ರಹಿಸಿದರು. ಮತ್ತು ಈಗ ಈ ಕಲ್ಯಾಣತೀರ್ಥದ ಹೆಸರು ಅನ್ವರ್ಥವಾಯಿತು'- ಎಂದರು.

ಅನಂತರ ಆಚಾರ್ಯರು ನರಸಿಂಹನ ಸನ್ನಿಧಿಗೆ ಹೋಗಿ, ಪರಮಾತ್ಮನನ್ನು ವಂದಿಸಿ, ಬದ್ಧಾಂಜಲಿಪುಟರಾಗಿ -'ಹಿಂದೆ, ಪ್ರಹ್ಲಾದನಿಗೆ ದ್ರೋಹವನ್ನೆಸಗಿದ ಹಿರಣ್ಯಕಶಿಪುವನ್ನು ಕೊಂದು ಜಗದ್ರಕ್ಷಣಮಾಡಿದಂತೆ - ಎಲೈ ಪರಮಾತ್ಮನೆ, ಈಗಲೂ ವಿಷ್ಣುದ್ರೋಹಿಯೂ ದುಷ್ಟನೂ ಆದ ಚೋಳರಾಜನನ್ನು ಸಂಹರಿಸಿ ದಿವ್ಯ ದೇಶಗಳಲ್ಲಿ ಧರ್ಮಸಂಸ್ಥಾಪನೆಯನ್ನು ಮಾಡಿರುವೆ'- ಎಂದು ವಿಜ್ಞಾಪಿಸಿದರು. ಪ್ರಸನ್ನನಾದ ಭಗವಂತನು ತೀರ್ಥಪ್ರಸಾದ ಶಠಕೋಪಾದಿಗಳನ್ನು ಕೊಡಿಸಲು, ನಾರಾಯಣನ ಸನ್ನಿಧಿಗೆ ಹೋಗಿ ಶ್ರೀಮನ್ನಾರಾಯಣನನ್ನೂ, ಸಂಪತ್ಕುಮಾರನನ್ನೂ ಸಂದರ್ಶಿಸಿ ಅವರ ಅನುಮತಿಯಿಂದ ಶ್ರೀರಂಗಕ್ಕೆ ಹೊರಡಲು ಯೋಚಿಸಿದರು. ಮತ್ತು ಜ್ಞಾನಿಗಳೂ ಭಕ್ತರೂ ಆದ ತಮ್ಮ ಶಿಷ್ಯರನ್ನು ಕರೆದು -'ಎಲೈ ಶ್ರೀವೈಷ್ಣವರೇ, ನಾನು ಶ್ರೀರಂಗದಿಂದ ಇಲ್ಲಿಗೆ ಬಂದು ಹನ್ನೆರಡು ವರ್ಷಗಳಾದವು. ಈಗ ದೇಶವು ತೊಂದರೆಯಿಲ್ಲದಿರುವುದರಿಂದ ಮತ್ತೆ ಶ್ರೀರಂಗಕ್ಕೆ ರಂಗನಾಥನ ಕೈಂಕರ್ಯಕ್ಕಾಗಿ ಹೋಗುತ್ತಿರುವೆನು. ನೀವುಗಳೆಲ್ಲರೂ ಇಲ್ಲಿಯೇ ಪರಮಾತ್ಮನ ನಿತ್ಯೋತ್ಸವ ಮಹೋತ್ಸವಾದಿಗಳನ್ನು ಮಾಡಿಕೊಂಡು ಸುಖವಾಗಿ ವಾಸಮಾಡಿಕೊಂಡಿರಿ' ಎಂದರು. ಅದನ್ನು ಕೇಳಿ ಶಿಷ್ಯರು -'ತಾವಿಲ್ಲದೆ ನಾವು ಒಂದು ಗಳಿಗೆಯೂ ಜೀವಿಸಿರಲಾರೆವು. ನೀರಿನಿಂದ ಎತ್ತಿಹಾಕಿದ ಮೀನುಗಳು ಬದುಕುವುವೆ? ತಾವು ಹೋದಕಡೆಗೆಲ್ಲ ನಮ್ಮನ್ನೂ ಕರೆದುಕೊಂಡು ಹೋಗಿ'- ಎಂದು ಪ್ರಾರ್ಥಿಸಿಕೊಂಡರು. ಆಗ ಆಚಾರ್ಯರು ಯೋಚಿಸಿ, ತಮ್ಮಂತೆಯೇ

ಇರುವ ಒಂದು ಅರ್ಚಾವಿಗ್ರಹವನ್ನು ಮಾಡಿಸಿ ಅದರಲ್ಲಿ ತಮ್ಮ ಶಕ್ತಿಯನ್ನು ಆವಾಹನಮಾಡಿ, ಭಕ್ತರನ್ನು ಕುರಿತು -'ನಿಮಗೆ ನನ್ನಲ್ಲಿರುವ ಭಕ್ತಿಯು ಅಸಾಧಾರಣವಾದುದು. ಅದೇ ಭಕ್ತಿಯನ್ನು ಈ ವಿಗ್ರಹದಲ್ಲಿಟ್ಟು ಶ್ರದ್ಧಾ-ಭಕ್ತಿ- ಪ್ರೇಮಗಳಿಂದ ಪೂಜಿಸುತ್ತಿರಿ'- ಎಂದು ಅಪ್ಪಣೆಮಾಡಿ ಯಾದವಾಚಲಪತಿಯಿಂದ ಅಪ್ಪಣೆಯನ್ನು ಪಡೆದು ಸಂಪತ್ಪುತ್ರನ ವಿಯೋಗವನ್ನು ಬಹಳ ಕಷ್ಟದಿಂದ ನುಂಗಿಕೊಳ್ಳುತ್ತ ಶ್ರೀರಂಗಕ್ಕೆ ಹೊರಟರು.

ಹದಿನಾಲ್ಕು ವರ್ಷಗಳ ವನವಾಸದಲ್ಲಿದ್ದು ಅಯೋಧ್ಯೆಗೆ ಹಿಂತಿರುಗಿದ ಶ್ರೀರಾಮಚಂದ್ರನಂತೆ, ಆಚಾರ್ಯರು ಶ್ರೀರಂಗಕ್ಕೆ ಹಿಂತಿರುಗಿದುದನ್ನು ನೋಡಿದ ವೈಷ್ಣವರ ಆನಂದಕ್ಕೆ ಪಾರವೇ ಇಲ್ಲವಾಯಿತು. ದಾಶರಥಿಯು ಛತ್ರಿಯನ್ನು ಹಿಡಿದನು. ಗೋವಿಂದನೂ ಆವನ ತಮ್ಮನೂ ಬೀಸಣಿಗೆಯಿಂದ ಗಾಳಿ ಹಾಕುತ್ತಿದ್ದರು. ಮಂಗಳವಾದ್ಯವು ಭೋರ್ಗರೆಯುತ್ತಿರಲು, ಭಟರ ಜಯಶಬ್ದದಿಂದ ದಿಕ್ಕುಗಳು ತುಂಬಿರಲು, ಆಚಾರ್ಯರು ಶ್ರೀರಂಗನಾಥನ ಸನ್ನಿಧಿಗೆ ದಯಮಾಡಿಸಿದರು. ರಂಗನಾಥನನ್ನು ಕಂಡು ದರಿದ್ರನು ನಿಧಿಯನ್ನು ಕಂಡಂತೆ, ಆನಂದದಿಂದ ನಮಸ್ಕರಿಸಿ ನಿಂತಿರಲು, ರಂಗನಾಥನು -'ಯತಿಸಾರ್ವಭೌಮ, ಈ ಕ್ರಿಮಿಕಂಠನ ಕಾರಣದಿಂದ ನೀನು ಶಿಷ್ಯರೊಡನೆ ದೇಶದೇಶಗಳನ್ನೂ, ಗಿರಿ ಕಾನನಗಳನ್ನೂ ಅಲೆಯ ಬೇಕಾಯಿತು. ಬಹು ಕಷ್ಟಗಳನ್ನು ಅನುಭವಿಸಬೇಕಾಯಿತು. ನನ್ನನ್ನೂ ಬಿಟ್ಟು ಹೋಗಬೇಕಾಯಿತು'- ಎಂದನು. ಆಚಾರ್ಯರು -'ಪ್ರಣತಾರ್ತಿಹರನಾದ ನೀನಿರುತ್ತಿರಲು, ನನಗೇನು ಕಷ್ಟ?'- ಎಂದರು. ತೀರ್ಥಪ್ರಸಾದಗಳೆಲ್ಲವೂ ಆದಮೇಲೆ ಆಚಾರ್ಯರು ಅಲ್ಲಿಂದ ಹೊರಟು, ಶ್ರೀರಂಗವನ್ನೆಲ್ಲಾ ನೋಡಿ ಕೂರನಾಥರ ಮನೆಗೆ ಹೋದರು. ಆಚಾರ್ಯರು ಬಂದ ವೃತ್ತಾಂತವನ್ನು ಕೇಳಿ ಸಂತುಷ್ಟರಾದ ಕೂರನಾಥರು ಎದ್ದು ನಮಸ್ಕರಿಸಿದರು. ಆಚಾರ್ಯರು ಅವರನ್ನು ಹಿಡಿದೆತ್ತಿ ಆಲಂಗಿಸುತ್ತ ಕಣ್ಣಿನಲ್ಲಿ ನೀರನ್ನು ಸುರಿಸುತ್ತ -'ನಿನಗೆ ಇಂಥ ಮಹಾ ದುಃಖವು ಹೇಗೆ ಉಂಟಾಯಿತು?' ಎಂದು ದುಃಖಿಸಿದರು. ಕೂರನಾಥರು 'ಹಿಂದಿನ ಜನ್ಮದಲ್ಲಿ ನಾನು ವೈಷ್ಣವರ ಹಣೆಯಲ್ಲಿರುವ ನಾಮವನ್ನು ನೋಡಿ ಹಾಸ್ಯ ಮಾಡಿದೆನೊ ಏನೋ? ಆದರಿಂದಲೇ ನಾನು ಕುರುಡನಾದೆನು'- ಎಂದರು. ಆಚಾರ್ಯರು 'ಅದು ಹಾಗಲ್ಲ ನನ್ನ ದುಷ್ಕೃತ್ಯದಿಂದಲೇ ನಿನಗೆ ಇಂಥ ಗತಿಯುಂಟಾಯಿತು. ಸರ್ವಬಂಧುವೂ ದಯಾನಿಧಿಯೂ ಎಲ್ಲರಿಗೂ ಮಿತ್ರನೂ ಆದ ನಿನಗೆ ಹೀಗಾಗುವುದೆಂದರೇನು? ಎನ್ನುತ್ತ ಆತನನ್ನೂ ಜೊತೆಯಲ್ಲಿ ಕರೆದುಕೊಂಡು ಮಠಕ್ಕೆ ತೆರಳಿದರು.

ಆಚಾರ್ಯರು ಬಂದ ವೃತ್ತಾಂತವನ್ನು ಕೇಳಿ ಪೌರರೂ, ಇತರ ಭಾಗವತೋತ್ತಮರೂ ಮಠಕ್ಕೆ ಬಂದು ಆಚಾರ್ಯರನ್ನು ನಮಸ್ಕರಿಸಿ, -'ತಾವು ಪೂರ್ಣಾಚಾರ್ಯರಿಗೂ, ಕೂರನಾಥರಿಗೂ ಉಂಟಾದ ಸ್ಥಿತಿಗತಿಗಳನ್ನೇ ಯೋಚಿಸಬಾರದು. ತಾವು ಕ್ಷೇಮವಾಗಿ ಇಲ್ಲಿಗೆ ದಯಮಾಡಿಸಿದುದೇ ನಮ್ಮೆಲ್ಲರ ಭಾಗ್ಯ'ವೆಂದು ಸ್ತುತಿಸಿದರು. ಆಚಾರ್ಯರು ಅವರೆಲ್ಲರಿಗೂ, ಉಚಿತವಾದ ಮರ್ಯಾದೆಗಳನ್ನು ಮಾಡಿ ಕಳುಹಿಸಿಕೊಟ್ಟರು.

ಕೆಲವು ದಿನಗಳ ಮೇಲೆ ಕೆಲವು ಶ್ರೀವೈಷ್ಣವರು ಆಚಾರ್ಯರ ಬಳಿಗೆ ಬಂದು ಚೋಳರಾಜನಿಂದ ಶ್ರೀರಂಗಕ್ಕೆ ಆಗಬಹುದಾಗಿದ್ದ ವಿಪತ್ತನ್ನೂ ವಿವರಿಸಿ, ಚಿತ್ರಕೂಟದ ವಿಚಾರವಾಗಿ -'ಚೋಳರಾಜನು ಚಿತ್ರಕೂಟಕ್ಕೆ ಹೋಗಿ ಗೋವಿಂದರಾಜನನ್ನು, ಉತ್ಸವ

ಮೂರ್ತಿಗಳನ್ನು ಸಮುದ್ರಕ್ಕೆ ಎತ್ತಿ ಹಾಕಬೇಕೆಂದಿದ್ದನು. ಇದನ್ನು ತಿಳಿದ ಅರ್ಚಕರು ಅವನಿಗೆ ಗೋಚರವಾಗದಂತೆ ಉತ್ಸವ ವಿಗ್ರಹಗಳನ್ನು ವೇಂಕಟಾಚಲಕ್ಕೆ ಸಾಗಿಸಿದರು. ಮೂಲ ವಿಗ್ರಹವಾದ ಗೋವಿಂದರಾಜನನ್ನು ನಾಶಮಾಡಬೇಕೆನ್ನುವಷ್ಟರಲ್ಲಿ 'ತಿಲ್ಲಾ' ಎಂಬ ಒಬ್ಬ ವಾರಾಂಗನೆಯು ಮಾಯೆಯಿಂದ ರಾಜನನ್ನು ವಂಚಿಸಿ, ಆ ವಿಗ್ರಹವನ್ನು ವೇಂಕಟಾಚಲಕ್ಕೆ ಸಾಗಿಸುವಂತೆ ಮಾಡಿದಳು. ಚಿತ್ರಕೂಟವಂತೂ ವಿಷ್ಣುಸಂಬಂಧರಹಿತವಾಯಿತು'- ಎಂದು ಹೇಳಿದರು. ಆಚಾರ್ಯರು ಕೂಡಲೇ ವೇಂಕಟಾಚಲಕ್ಕೆ ಹೋಗಿ, ಅಲ್ಲಿ ವಿಧಿಪೂರ್ವಕವಾಗಿ ಗೋವಿಂದರಾಜನನ್ನು 'ತಿಲ್ಲ ಗೋವಿಂದರಾಜ'ನೆಂದು ಹೆಸರಿಟ್ಟು ಪ್ರತಿಷ್ಠೆ ಮಾಡಿಸಿ ಅಲ್ಲಿಂದ ಸತ್ಯವ್ರತಕ್ಷೇತ್ರ (ಕಾಂಚಿ)ಕ್ಕೂ ಹೋಗಿ, ಮತ್ತೆ ಶ್ರೀರಂಗಕ್ಕೆ ದಯಮಾಡಿಸಿ ಶಿಷ್ಯರಿಗೆ ವಿಶೇಷಾರ್ಥಗಳನ್ನು ಬೋಧನಮಾಡುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ತಿಲ್ಲ ಗೋವಿಂದರಾಜನ ಪ್ರತಿಷ್ಠಾಪನೆ ಎಂಬ ಐವತ್ತೊಂದನೆಯ ಅಧ್ಯಾಯವು ಮುಗಿದುದು.

೫೨

ಅನಂತರ ಆಚಾರ್ಯರು ಕೂರನಾಥರನ್ನು ಕುರಿತು -'ದೇವರಾಜನು ಅರ್ಥಿಗಳ ಇಷ್ಟವನ್ನು ಕೊಡುವುದರಲ್ಲಿ ಬದ್ಧಾದರನು. ಈಗ ನೀನು ಆ ದೇವನನ್ನು ಸ್ತುತಿಸು. ನಿಜವಾಗಿಯೂ ನಿನಗೆ ಕಣ್ಣುಗಳನ್ನು ಕೊಡುವನು'- ಎಂದರು. ಕೂರನಾಥರು ತನಗೆ ಕಣ್ಣುಗಳು ಬೇಡವೆಂದರು. ಆಚಾರ್ಯರು ಮತ್ತೆ ಮತ್ತೆ ನಿರ್ಬಂಧಪಡಿಸಲು ಕೂರನಾಥರು 'ಸ್ವಸ್ತಿ ಹಸ್ತಿಗಿರಿ ಮಸ್ತ ಶೇಖರಸ್ಸಂತನೋತು ಮಯಿ ಸಂತತಂ ಹರಿಃ। ನಿಸ್ಸಮಾಭ್ಯಧಿಕ ಮಭ್ಯದತ್ತ ಯಂ ದೇವ ಮೌಪನಿಷದೀ ಸರಸ್ವತೀ॥............ ನೀಲಮೇಘ ನಿಭಮಂಜನಪುಂಜ ಶ್ಯಾಮಕುಂತಲಮನಂತ ಶಯಂ ತ್ವಾಂ। ಅಬ್ಜಪಾಣಿ ಪದಮಂಬುಜನೇತ್ರಂ ನೇತ್ರ ಸಾತ್ಕುರು ಕರೀಶ ಸದಾ ಮೇ॥'- ಇದರಂತಹ ಅಭಿಪ್ರಾಯಗಳೇ ಬರುವಂತಹ ಕೆಲವು ಪದ್ಯಗಳನ್ನು ಮಾಡಿ ಪರಮಾತ್ಮನನ್ನು ದಿವ್ಯಚಕ್ಷುವನ್ನು ಪ್ರಾರ್ಥಿಸಿದರು. ಅದರಂತೆಯೇ ವರದರಾಜನು ಆ ದಿನ ರಾತ್ರಿ ಅವರ ಸ್ವಪ್ನದಲ್ಲಿ ದಿವ್ಯಚಕ್ಷುವನ್ನು ಅನುಗ್ರಹಿಸುವುದಾಗಿ ತಿಳಿಸಿದನು.

ಬೆಳಗಾದ ಮೇಲೆ ಸಂತುಷ್ಟನಾದ ಕೂರನಾಥರು ಸ್ತೋತ್ರವನ್ನು ಪೂರ್ತಿಮಾಡಿ ಆಚಾರ್ಯರ ಬಳಿಗೆ ಬಂದು ಎಲ್ಲವನ್ನೂ ಓದಿ ಹೇಳಿದರು. ಆಚಾರ್ಯರಿಗೆ ಬಹಳ ಆನಂದವಾಗಲು, ಕೂರನಾಥರು -'ಆಚಾರ್ಯರೆ, ನಾನು - ಎಲೈದೇವ, ವೈಕುಂಠದಲ್ಲಿ ನಿತ್ಯಸೂರಿಗಳೆಲ್ಲರೂ ನಿನ್ನನ್ನು ಯಾವ ಅಪ್ರಾಕೃತವಾದ ದಿವ್ಯಚಕ್ಷುಗಳಿಂದ ಯಾವಾಗಲೂ ನೋಡುತ್ತಿರುವರೋ ಅಂಥ ದಿವ್ಯಚಕ್ಷುಗಳನ್ನು ಅನುಗ್ರಹಿಸು ಎಂದು ಪ್ರಾರ್ಥಿಸಲು ಪರಮಾತ್ಮನು ಕರುಣಿಸಿರುವನು'- ಎಂದರು. ಆಚಾರ್ಯರು 'ಹಾಗಾದರೆ ಈಗಲೇ ಹೊರಡೋಣ'ವೆಂದು ಕೂರನಾಥರೊಡನೆ ಕಾಂಚೀನಗರಕ್ಕೆ ಹೊರಟರು.

ಅಲ್ಲಿ ಕೂರನಾಥರು ದೇವರಾಜನನ್ನು ವಂದಿಸಿ, ಸ್ತೋತ್ರಮಾಡಲು, ತುಷ್ಟನಾದ ಪರಮಾತ್ಮನು ಬೇಕಾದ ವರವನ್ನು ಕೇಳಿಕೊಳ್ಳಬೇಕೆಂದು ಅಪ್ಪಣೆ ಮಾಡಲು, ಕೂರನಾಥರು

ಯತಿರಾಜರಿಗೆ ಇಷ್ಟವಾದ ವರವನ್ನು ಕೇಳಿಕೊಳ್ಳದೆ 'ಎಲೈ ಪರಮಾತ್ಮನೆ, ನಿನ್ನ ಕರುಣೆಯಿಂದ ನನಗೆ ಯಾವ ಲೋಕವು ಲಭಿಸುವುದೋ ಅದು 'ಚತುರ್ಗ್ರಾಮ'ಕ್ಕೆ ಉಂಟಾಗಲಿ'- ಎಂದು ಕೇಳಿಕೊಳ್ಳಲು ವರದನು ಅದರಂತೆಯೇ ಅನುಗ್ರಹಿಸಿದನು.

ಈ ವೃತ್ತಾಂತವನ್ನು ಕೇಳಿದ ಯತಿರಾಜರು -'ದೇವ ದೇವ, ಅರವಿಂದಾಕ್ಷ, ಜಗದೀಶ್ವರ, ಸರ್ವಜ್ಞ ಹರೇ, ನೀನು ಕೂರನಾಥನಿಗೆ ಇದೇ ವರವನ್ನು ಕೊಡಬಹುದೆ?'- ಎಂದು ಹೇಳಿ, ಕುಪಿತರಾಗಿ ಕೂರನಾಥನನ್ನು ನೋಡಿ -'ಇದೇನು ನೀನು ಮಾಡಿದ ಕೆಲಸ? ನಾನು ಬರುವುದಕ್ಕೆ ಮುಂಚೆಯೇ ಏನನ್ನು ಕೇಳಿದೆ? ನನ್ನ ಅಪ್ಪಣೆಯನ್ನೂ ತಿರಸ್ಕರಿಸಿ ಹೀಗೆ ಅನ್ಯಾಯ ಮಾಡಬಹುದೇ?'- ಎಂದು ಹೆದರಿಸಿ, ಭ್ರಷ್ಟೈಶ್ವರ್ಯನಂತೆ ಏನುಮಾಡಬೇಕೆಂದು ತಿಳಿಯದೆ ದುಃಖಿಸುತ್ತ ಕುಳಿತರು. ಆಗ ಪ್ರಸನ್ನನಾದ ವರದರಾಜನು -'ಎಲೈ ಯೋಗೀಂದ್ರ, ಚಿಂತಿಸಬೇಡ, ನಿನ್ನ ಇಷ್ಟದಂತೆಯೇ ಮಾಡುವೆನು'- ಎಂದು ಕೂರನಾಥರಿಗೆ ಕಣ್ಣುಗಳನ್ನು ಕೊಟ್ಟನು. ಕೂರನಾಥರು ಪರಮಾತ್ಮನನ್ನು ಆಪಾದಮಸ್ತಕವಾಗಿ ನೋಡಿ ನೋಡಿ ತೃಪ್ತರಾಗಲಿಲ್ಲ. ಪರಮಾತ್ಮನನ್ನು ದರ್ಶನಮಾಡಿದ ಕೂಡಲೇ ಆಚಾರ್ಯರನ್ನು ಕಂಡರು. ಅವರ ಆ ಊರ್ಧ್ವಪುಂಡ್ರಗಳು, ಶಶಿಯಂತೆ ಶುಭ್ರವರ್ಣ, ಕಷಾಯವಸನ, ಕಮಲದಳದಂತೆ ವಿಶಾಲವಾದ ಕಣ್ಣುಗಳು, ಕೈಯಲ್ಲಿ ತ್ರಿದಂಡ, ಪರಿಶುದ್ಧವಾದ ಯಜ್ಞಸೂತ್ರ ಇಂತಹ ಸ್ವರೂಪವನ್ನು ಕಂಡು ಆನಂದ ಮಗ್ನರಾದರು. ಹೀಗೆ ಆಚಾರ್ಯರು ಕೂರನಾಥರಿಗೆ ಕಣ್ಣುಗಳನ್ನು ಕೊಡಿಸಿ, ವರದರಾಜನಿಂದ ಅನುಮತಿಯನ್ನು ಪಡೆದು ಕೂರನಾಥರೊಡನೆ ಮತ್ತೆ ಶ್ರೀರಂಗಕ್ಕೆ ಬಂದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕೂರನಾಥನ ನೇತ್ರಪ್ರಾಪ್ತಿ ಎಂಬ ಐವತ್ತೆರಡನೆಯ ಅಧ್ಯಯವು ಮುಗಿದುದು.

೫೩

ಹಿಂದೆ ಗೋದಾದೇವಿಯು ವನಗಿರೀಶ್ವರನಾದ ಸುಂದರಬಾಹುವನ್ನು ಕುರಿತು ನೂರ ನಲವತ್ತು (೧೪೦) ಪದ್ಯಪರಿಮಿತವಾದ ಸ್ತೋತ್ರವನ್ನು ಮಾಡಿದ್ದಳು. ಆ ಸ್ತವದ ಒಂದು ಪದ್ಯದಲ್ಲಿ -'ನೀನು ನನ್ನನ್ನು ಮದುವೆ ಮಾಡಿಕೊಂಡರೆ ಕ್ಷೀರಾನ್ನ-ಗುಡಾನ್ನಗಳನ್ನು ನೂರಾರು ಪಾತ್ರೆಗಳಲ್ಲಿ ಸಮರ್ಪಿಸುವೆನು. ನೂರಾರು ಪಾತ್ರೆಗಳಲ್ಲಿ ನವನೀತವನ್ನು ಅರ್ಪಿಸುವೆನು'- ಎಂದು ಪ್ರಾರ್ಥಿಸಿಕೊಂಡಿದ್ದಳು. ಅದನ್ನು ನೋಡಿ ಆಚಾರ್ಯರು ವನಾಚಲಕ್ಕೆಹೋಗಿ ಗೋದಾದೇವಿಯ ಈ ಪ್ರಾರ್ಥನೆಯನ್ನು ಪರಮಾತ್ಮನಿಗೆ ಸಲ್ಲಿಸಿದರು.

ಅಲ್ಲಿಂದ ಹೊರಟು ಶ್ರೀವಿಲ್ಲಿಪುತ್ತೂರಿಗೆ ಹೋದರು. ಅಲ್ಲಿ ವಟಪತ್ರಶಾಯಿಯನ್ನು ವಂದಿಸಿ, ಗೋದಾದೇವಿಯ ಸನ್ನಿಧಿಗೆ ಹೋದರು. ಗೋದಾದೇವಿಯು ತನ್ನ ಅಭೀಷ್ಟವನ್ನು ಸಲ್ಲಿಸಿದುದರಿಂದ ಆಚಾರ್ಯರಿಗೆ 'ಗೋದಾಗ್ರಜ'ನೆಂಬ ಹೆಸರನ್ನು ಕೊಟ್ಟು ಅನುಗ್ರಹಿಸಲು, ಆಚಾರ್ಯರು ತೀರ್ಥಪ್ರಸಾದಗಳನ್ನು ಸ್ವೀಕರಿಸಿ, ಅಲ್ಲಿಂದ ಕುರುಕಾನಗರಿಗೆ ಹೊರಟರು.

ಕುರುಕಾನಗರಿಗೆ ಹೋಗುತ್ತ ದಾರಿಯಲ್ಲಿ ಒಂದು ಹುಣಸೆಯ ಮರದ ಗುಂಪನ್ನು

ಕಂಡರು. ಸಮೀಪದಲ್ಲಿಯೇ ಸುಮಾರು ಹತ್ತುವರ್ಷ ವಯಸ್ಸಿನ ಒಬ್ಬ ವೈಷ್ಣವ ಬಾಲೆಯನ್ನು ಕಂಡು -'ಕುರುಕಾನಗರವು ಇನ್ನೆಷ್ಟು ದೂರದಲ್ಲಿದೆ?' ಎಂದು ಕೇಳಿದರು. ಬಾಲೆಯು 'ಎಲೈ ಬ್ರಾಹ್ಮಣನೆ, ನೀನು ಶಠಾರಿಸೂಕ್ತಿಯನ್ನು ಓದಿಲ್ಲವೇ?'- ಎಂದಳು. 'ಶಠಾರಿಸೂಕ್ತಿಯನ್ನು ಓದಿದರೆ ಕುರುಕಾನಗರವು ಇಷ್ಟೇ ದೂರದಲ್ಲಿದೆ ಎಂದು ತಿಳಿಯುವ ಬಗೆ ಹೇಗೆ?' ಎಂದು ಕೇಳಲಾಗಿ, ಆ ಬಾಲೆಯು -'ಹುಣಸೆಯ ಕುಟೀರಕ್ಕೂ ಕುರುಕಾನಗರಿಗೂ ಧ್ವನಿ ಕೇಳುವಷ್ಟು ದೂರವಿದೆಯೆಂದು' ಶಠಾರಿಸೂಕ್ತಿಯಲ್ಲಿ ಸ್ಪಷ್ಟವಾಗಿಲ್ಲವೆ?'- ಎಂದು ಹೇಳುತ್ತ, ಆ ಪದ್ಯವನ್ನು ಹೇಳಿದಳು. ಅದನ್ನು ಕೇಳಿ ಸಂತೋಷದಿಂದಲೂ ಆಶ್ಚರ್ಯದಿಂದಲೂ, ಆ ಬಾಲೆಯೊಡನೆ ಅವರ ಮನೆಗೆ ಹೋಗಿ, ನಡೆದ ವಿಚಾರವನ್ನು ತಿಳಿಸಿ, ತಾವು ಬೇರೆಯಾಗಿ ಸ್ವಯಂಪಾಕ ಮಾಡಿಕೊಳ್ಳಬೇಕೆಂದು ತಂದಿದ್ದ ಸಾಮಾಗ್ರಿಗಳೆಲ್ಲವನ್ನೂ ಬಿಟ್ಟು ಅವರ ಮನೆಯಲ್ಲಿಯೇ ಶಿಷ್ಯರೊಡನೆ ಊಟಮಾಡಿ, ಆ ಬಾಲಿಕೆಗೂ ಅವಳ ತಂದೆತಾಯಿಗಳಿಗೂ ಇತರ ಬಾಂಧವರಿಗೂ ವಿಶೇಷಾರ್ಥಗಳನ್ನು ಉಪದೇಶಿಸಿದರು.

ಅನಂತರ ಶಠಾರಿಯ ಸನ್ನಿಧಿಗೆ ಹೋಗಿ ಬಹುಕಾಲದಿಂದಿದ್ದ ಆ ಹುಣಸೆಯ ಮರವನ್ನೂ, ಅದರ ಬುಡದಲ್ಲಿರುವ ಶಠಾರಿಯನ್ನೂ ನೋಡಿ ಆಶ್ಚರ್ಯಚಕಿತರಾದರು. ಆನಂದಾತಿಶಯದಿಂದ ಎಲ್ಲರೂ ಕೇಳುವಂತೆ -'ಪ್ರಪನ್ನಜನಕೂಟಸ್ಥನಾದ ಈ ಮಹಾವ್ಯಕ್ತಿಯು ದ್ರಾವಿಡಪ್ರಬಂಧರೂಪದಿಂದ ವೇದಾರ್ಥಗಳನ್ನು ಉದ್ಧರಿಸಿ ಪ್ರಪಂಚಕ್ಕೆ ಮಹೋಪಕಾರವನ್ನು ಮಾಡಿದರು. ಈ ವ್ಯಕ್ತಿಯಿಂದಲೇ ವೈಷ್ಣವದರ್ಶನವು ಚೆನ್ನಾಗಿ ಪ್ರಕಾಶಗೊಳಿಸಲ್ಪಟ್ಟಿತು. ಲೋಕಸಂರಕ್ಷಕನಾದ ಈ ಮಹಾನುಭಾವನಿಗೆ ನಾನೇನು ಕೃತಜ್ಞತೆಯನ್ನು ಸೂಚಿಸಲಿ? ಮಕ್ಕಳಾದರೂ ಇದ್ದರೆ ಈ ಮಹಾನುಭಾವನ ಹೆಸರಿಟ್ಟು ಕೃತಾರ್ಥನಾಗುತ್ತಿದ್ದೆನು. ಸಂನ್ಯಾಸಿಯಾದ ನನಗೆ ಮಕ್ಕಳು ಎಲ್ಲಿಂದ ಬರಬೇಕು? ಎಂದು ಹೇಳುತ್ತ ಚಿಂತಾಕ್ರಾಂತರಾದರು. ಇದನ್ನು ನೋಡಿ ಭೂರಿಶ್ರೀಶೈಲಪೂರ್ಣರ ಮಗನಾದ ಶ್ರೀಶೈಲ ಪೂರ್ಣನು ಆಚಾರ್ಯರ ಬಳಿಗೆ ಬಂದು -'ಆಚಾರ್ಯರೆ, ದಾಸನಾದ ನನ್ನನ್ನು ಮಗನನ್ನಾಗಿ ಸ್ವೀಕರಿಸಿ ತಮ್ಮ ಇಷ್ಟಾರ್ಥವನ್ನು ಸಫಲವಾಗಿ ಮಾಡಿಕೊಳ್ಳಬಹುದು'- ಎನ್ನಲು, ಆಚಾರ್ಯರು ಅವನಿಗೆ 'ಕುರುಕೇಶ್ವರ'ನೆಂದು ನಾಮಕರಣ ಮಾಡಿದರು. ಶಠಾರಿಯು ಸಂತುಷ್ಟನಾಗಿ ಯತಿರಾಜರಿಗೆ -'ಶಠಚಿತ್ಪಾದ'ನೆಂದು ಹೆಸರಿಟ್ಟರು. ಆದುದರಿಂದ ಶಠಾರಿಯು 'ಭಗವತ್ಪಾದವೂ, ರಾಮಾನುಜಾಚಾರ್ಯರು ಶಠಾರಿಯ ಪಾದಸ್ಥಾನಾಪನ್ನರೂ, ದಾಶರಥಿಯು ರಾಮಾನುಜಾಚಾರ್ಯರ ಪಾದವೂ ಆಗಿ ವ್ಯವಹರಿಸಲ್ಪಟ್ಟರು. ಆದ್ದರಿಂದಲೇ ಭಗವತ್ಸನ್ನಿಧಿಯಲ್ಲಿ 'ಶಠಾರಿ'ಯನ್ನು ಅನುಗ್ರಹಿಸಬೇಕೆಂದೂ, ರಾಮಾನುಜಾಚಾರ್ಯರ ಸನ್ನಿಧಿಯಲ್ಲಿ 'ದಾಶರಥಿ'ಯನ್ನು ಅನುಗ್ರಹಿಸಬೇಕೆಂದೂ, ಶಠಾರಿಯ ಸನ್ನಿಧಿಯಲ್ಲಿ 'ರಾಮಾನುಜ'ರನ್ನು ಅನುಗ್ರಹಿಸಬೇಕೆಂದೂ ಪ್ರಾರ್ಥಿಸಬೇಕು. ಇದನ್ನು ತಿಳಿದಿರುವ ಶ್ರೀವೈಷ್ಣವನೇ ಮುಮುಕ್ಷುವೆಂಬುದರಲ್ಲಿ ಸಂಶಯವಿಲ್ಲ. ಹೀಗೆ ಆಚಾರ್ಯರು ಶಠಾರಿಯ ಸನ್ನಿಧಿಯಿಂದ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಶ್ರೀರಂಗಕ್ಕೆ ಹೊರಟರು.

ಶ್ರೀರಂಗದಲ್ಲಿ ತಮ್ಮ ಶಿಷ್ಯರಿಗೆಲ್ಲ ದರ್ಶನಾರ್ಥಗಳನ್ನು ಉಪದೇಶಿಸುತ್ತ ಪ್ರಚ್ಛನ್ನಬೌದ್ಧ (ಅದ್ವೈತಿ)ರೇ ಮೊದಲಾದವರ ಅಶುಭವಾದ ಮತಗಳನ್ನು ಜಯಿಸಿ, ಎಲ್ಲರನ್ನೂ ತಮ್ಮ

ಶಿಷ್ಯರನ್ನಾಗಿ ಮಾಡಿಕೊಂಡು ಪ್ರಪಂಚವನ್ನೇ ರಕ್ಷಿಸುತ್ತಿದ್ದರು. ಎಲ್ಲ ಶಿಷ್ಯರೂ ಊರ್ಧ್ವಪುಂಡ್ರವೇ ಮೊದಲಾದ ಶ್ರೀವೈಷ್ಣವ ಲಾಂಛನದಿಂದ ಶೋಭಿಸುತ್ತ, ಶ್ರೀಮನ್ನಾರಾಯಣನ ಸ್ಥಾನವನ್ನು ಹೊಂದುತ್ತಿದ್ದರು. ಹೀಗೆ ಆಚಾರ್ಯರು ಶ್ರೀರಂಗದಲ್ಲಿದ್ದರೂ ಸಹ ಸೇತುವಿನಿಂದ ಹಿಮಾಚಲದವರೆಗೆ ಅವರ ಕೀರ್ತಿಯು ಹರಡಿತು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೋದಾಭೀಷ್ಟ ಪ್ರಪೂರಣಾದಿ ಕಥನವೆಂಬ ಐವತ್ತಮೂರನೆಯ ಅಧ್ಯಾಯವು ಮುಗಿದುದು

೫೪

ಗೋವಿಂದ-ಕೂರೇಶರೇ ಮೊದಲಾದ ಶಿಷ್ಯರು ಆಚಾರ್ಯರ ಬಳಿಯಲ್ಲಿರಲು ಅಸಂಖ್ಯಾತ ರಾದ ಶಿಷ್ಯರು ಆಚಾರ್ಯರ ವಿವಿಧ ಕೈಂಕರ್ಯಗಳಲ್ಲಿ ನಿರತರಾಗಿರುತ್ತಿದ್ದರು. ಇವರಲ್ಲಿ ಚತುಸ್ಸಪ್ತತಿ (೭೪) ಪೀಠಗಳ ಆಚಾರ್ಯರು ಮುಖ್ಯ ಶಿಷ್ಯರಾಗಿಯೂ, ಅವರ ಶಿಷ್ಯ-ಪ್ರಶಿಷ್ಯರು ಅನೇಕರು ಆಗಿದ್ದರು. ವರದ ವಿಷ್ಣು ಮತ್ತು ಕೂರೇಶರು ಭಾಷ್ಯವನ್ನು ರಚಿಸುವುದರಲ್ಲಿಯೂ, ದೇವರಾಜಮುನಿಯು ವಿಷ್ಣುವಿನ ಆರಾಧನೆಯಲ್ಲಿಯೂ, ಪ್ರಣತಾರ್ತಿಹರಾಚಾರ್ಯನೂ ಆತನ ತಮ್ಮನೂ ಅಡಿಗೆಯಲ್ಲಿಯೂ, ಆಂಧ್ರಪೂರ್ಣನು ಅಭ್ಯಂಜನದಲ್ಲಿಯೂ, ಗೋಮಠವಂಶದ 'ಬಾಲಾರ್ಯ'ನು ಆಚಾರ್ಯರ ಕಮಂಡಲು ಮತ್ತು ಪಾದುಕೆಗಳನ್ನು ವಹಿಸುವುದರಲ್ಲಿಯೂ, ಧನುರ್ದಾಸನು ಹಸ್ತಲಾಘವದಲ್ಲಿಯೂ, ಅಮ್ಮಂಗಿಯು ರಾತ್ರಿಯಲ್ಲಿ ಹಾಲುಕಾಯಿಸಿ ಕೊಡುವುದರಲ್ಲಿಯೂ, ಉಕ್ಕಲನು ಊಟಮಾಡಿದ ಪಾತ್ರೆಯನ್ನು ತೆಗೆಯುವುದರಲ್ಲಿಯೂ ಹೀಗೆಯೇ ಒಬ್ಬನು ಪರಮತ ವಿಜಯದಲ್ಲಿಯೂ, ವಂಡ-ಶುಂಡರೆಂಬ ಜಟ್ಟಿಗಳು ದ್ರವ್ಯವನ್ನು ಒದಗಿಸುವುದರಲ್ಲಿಯೂ, ಸಹಾಯಕರಾಗಿ ನಿತ್ಯಕೈಂಕರ್ಯ ನಿರತರಾಗಿದ್ದರು. ಇವರೊಳಗೆ ಆಂಧ್ರಪೂರ್ಣನು ಗುರುಪಾದಾಬ್ಜವನ್ನೇ ಉಪಾಯವನ್ನಾಗಿಯೂ ಉಪೇಯವನ್ನಾಗಿಯೂ ತಿಳಿದು ಇಷ್ಟದೈವದಂತೆ ನಿತ್ಯವೂ, ತಾನು ರಚಿಸಿದ ರಾಮಾನುಜಾಷ್ಟೋತ್ತರದಿಂದ (ರಾಮಾನುಜಃ ಪುಷ್ಕರಾಕ್ಷೋ ಯತೀಂದ್ರ: ಕರುಣಾಕರ:............ಅವ್ಯಾಹತ ಮಹಾತ್ಮಾನ್ ಯತಿರಾಜೋ ಜಗದ್ಗುರುಃ) ಅರ್ಚಿಸುತ್ತ ಆಚಾರ್ಯರನ್ನು ಆರಾಧಿಸುತ್ತಿದ್ದನು. ಹೀಗೆ ಆಂಧ್ರಪೂರ್ಣನಿಂದ ರಚಿತವಾದ ಅಷ್ಟೋತ್ತರವು ಶ್ರೀವೈಷ್ಣವರಿಗೆ ಜೀವಪ್ರಾಯವಾಯಿತು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಜಾಷ್ಟೋತ್ತರ ಶತನಾಮವರ್ಣನವೆಂಬ ಐವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

೫೫

ಒಂದು ಸಲ ಆಚಾರ್ಯರು ಪ್ರಯಾಣ ಮಾಡಬೇಕಾಯಿತು. ಆಗ ಆಂಧ್ರಪೂರ್ಣನು ವಿಷ್ಣುವಿನ ಆರಾಧನದ ಜೊತೆಯಲ್ಲಿಯೇ ಆಚಾರ್ಯರ ಅರ್ಚನೆಯನ್ನೂ ಮಾಡಿ, ಆಚಾರ್ಯರನ್ನು ಹಿಂಬಾಲಿಸಿದನು. ಆಚಾರ್ಯರು ಇದನ್ನು ಗಮನಿಸಿ -'ಇದೇನು ನೀನು ಮಾಡಿದ ಕೆಲಸ?'

ಎನ್ನಲು, ಆಂಧ್ರಪೂರ್ಣನು 'ನಿಮ್ಮ ದೇವರಿಗಿಂತ ನನ್ನ ದೇವರೇನು ಕಡಿಮೆಯೆ?' ಎಂದನು. ಆಚಾರ್ಯರು ಇದನ್ನು ಕೇಳಿ ಸುಮ್ಮನಾದರು.

ಆಚಾರ್ಯರು ಆಂಧ್ರಪೂರ್ಣನೊಡನೆ ರಂಗನಾಥನ ದರ್ಶನಕ್ಕೆ ಹೋದರೆ ಆಂಧ್ರಪೂರ್ಣನು ಆಚಾರ್ಯರ ಶರೀರದರ್ಶನದ ಅನುಭವದಲ್ಲಿಯೇ ಇರುತ್ತಿದ್ದನು. ಇದ್ದಕ್ಕಿದ್ದಂತೆ ಆಚಾರ್ಯರು -'ರಂಗನಾಥನ ಕಣ್ಣುಗಳು ಎಷ್ಟು ಸುಂದರವಾಗಿವೆ, ನೋಡು' ಎನ್ನಲು, ಆಂಧ್ರಪೂರ್ಣನು -'ಯತಿರಾಜರ ನೇತ್ರ ಸೌಂದರ್ಯವನ್ನು ನೋಡುವ ನನ್ನ ಕಣ್ಣುಗಳು ಮತ್ತೊಂದನ್ನು ನೋಡುವುದಿಲ್ಲ'- ಎಂದನು. ಇದರಿಂದ ಆಚಾರ್ಯರಿಗೆ ಅವನಲ್ಲಿ ಬಹು ಕರುಣೆಯುಂಟಾಯಿತು.

ಇನ್ನೊಂದು ದಿನ ಆಚಾರ್ಯರು ಭೋಜನವಾದಮೇಲೆ ಉಳಿದುದನ್ನು ಆಂಧ್ರಪೂರ್ಣನಿಗೆ ಕೊಡಲು ಆತನುಭಕ್ತಿಯಿಂದ ಸ್ವೀಕರಿಸಿ ಕೈಯನ್ನು ತೊಳೆಯದೆಯೇ ತಲೆಯನ್ನು ಸವರಿಕೊಂಡನು. ಇದನ್ನು ಕಂಡು ಆಚಾರ್ಯರು ಕೈಯನ್ನು ತೊಳೆಯಬೇಕೆಂದು ಗದರಿಸಿದರು. ಆತನು ಹಾಗೆಯೇ ಮಾಡಿದನು. ಅದರಂತೆ ಮತ್ತೊಂದುದಿನ ರಂಗನಾಥನ ಸನ್ನಿಧಿಯಲ್ಲಿ ನೈವೇದ್ಯವನ್ನು ಕೊಡಲು, ಆಚಾರ್ಯರು ತಮಗೆ ಬಂದಿದ್ದುದನ್ನೂ ಆಂಧ್ರಪೂರ್ಣನಿಗೆ ಕೊಟ್ಟರು. ಅವನು ಅದನ್ನು ಸ್ವೀಕರಿಸಿ ಕೈತೊಳೆದುಕೊಂಡನು. ಈ ವೈಪರೀತ್ಯವನ್ನು ಕಂಡ ಆಚಾರ್ಯರು ಅವನನ್ನು ಕೇಳಲು -'ತಮ್ಮ ಅಪ್ಪಣೆ'ಯೆನ್ನಲು ಸುಮ್ಮನಾದರು.

ಒಂದು ದಿನ ರಾತ್ರಿ ರಂಗನಾಥನ ಉತ್ಸವವು ಬೀದಿಯಲ್ಲಿ ಬಹುವೈಭವದಿಂದ ನಡೆಯುತ್ತಿತ್ತು. ಆಗ ಆಂಧ್ರಪೂರ್ಣನು ಆಚಾರ್ಯರಿಗಾಗಿ ಹಾಲನ್ನು ಕಾಯಿಸುತ್ತಿದ್ದನು. ಆಚಾರ್ಯರು -'ದೇವರ ಸೇವೆಗೆ ಹೋಗೋಣ ಬಾ' ಎನ್ನಲು, ಆತನು -'ನಿಮ್ಮ ದೇವರ ಸೇವೆಗೆ ಹೋದರೆ ನನ್ನ ದೇವರಿಗಾಗಿ ಕಾಯಿಸುತ್ತಿರುವ ಹಾಲು ಉಕ್ಕಿ ಹೋಗುವುದು, ಆದುದರಿಂದ ನಾನು ಬರುವುದಿಲ್ಲ' ಎಂದನು.

ಒಂದು ದಿನ ಆಚಾರ್ಯಸಂಬಂಧವಿಲ್ಲದ ಆಂಧ್ರಪೂರ್ಣನ ಕೆಲವು ಬಾಂಧವರು ಅವನ ಮನೆಗೆ ಬಂದು ಒಂದು ದಿವಸವಿದ್ದು ಹೋದರು. ಆಂಧ್ರಪೂರ್ಣನು ಅವರು ಹೋದಕೂಡಲೇ ಮನೆಯನ್ನು ಶುದ್ಧಿಮಾಡಿ ಪಾತ್ರೆಗಳೆಲ್ಲವನ್ನೂ ಬಿಸುಟು ದಾಶರಥಿಯ ಮನೆಯ ಹಿತ್ತಲಿನಲ್ಲಿ ಬಿದ್ದಿದ್ದ ಕೆಲವು ಪಾತ್ರೆಗಳನ್ನು ತಂದಿಟ್ಟು ಕೊಂಡನು. ಗುರುಸಂಬಂಧ ರಹಿತವಾದುದೆಲ್ಲವೂ ಅಶುದ್ಧವೆಂದೂ, ಗುರುಸಂಬಂಧಸಹಿತವಾದುದೆಲ್ಲವೂ ಪರಿಶುದ್ಧ ವೆಂದೂ ಅವನ ದೃಢನಿಶ್ಚಯವಾಗಿತ್ತು.

ಆಂಧ್ರಪೂರ್ಣನು ಆಚಾರ್ಯರ ಶ್ರೀಪಾದತೀರ್ಥವಿಲ್ಲದೆ ಒಂದು ದಿನವೂ ಇರುತ್ತಿರಲಿಲ್ಲ. ಗುರುಭಕ್ತರಲ್ಲಿ ಅಗ್ರಗಣ್ಯನಾದ ಅತನನ್ನು ಬಿಟ್ಟರೆ ಈ ನಿಯಮವನ್ನು ಪಾಲಿಸುತ್ತಿದ್ದವರು ಬೇರೆ ಯಾರು ಇರಲಿಲ್ಲವೆನ್ನಬಹುದು. ಆತನು ಆಚಾರ್ಯರ ಪಾದುಕೆಗಳನ್ನಿಟ್ಟುಕೊಂಡು ಅನವರತವೂ ಅದರ ಆರಾಧನದಲ್ಲಿಯೇ ಇರುತ್ತಿದ್ದನು. ತನ್ನ ಅಂತ್ಯಕಾಲದಲ್ಲಿ ತನ್ನ ಅಂತರಂಗ ಶಿಷ್ಯನನ್ನು ಕರೆದು -'ಜಗದ್ಗುರುವಾದ ಯತಿರಾಜರ ಚರಣಗಳೇ ಶರಣ'-ವೆಂದು ದೃಢನಿಶ್ಚಯದಿಂದ ವರ್ತಿಸಬೇಕೆಂದು ಉಪದೇಶಿಸಿದನು.

ಹೀಗೆ ಆಂಧ್ರಪೂರ್ಣನ "ಆಚಾರ್ಯಪರತ್ವ"ವನ್ನು ಮನನಮಾಡಿಕೊಂಡವರೂ ಸಹ

ಆಚಾರ್ಯ ಭಕ್ತರಾಗುವುದರಲ್ಲಿ ಸಂದೇಹವೇ ಇಲ್ಲ.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಅಂಧ್ರಪೂರ್ಣ ಮಹಾತ್ಮ್ಯ ಕಥನವೆಂಬ ಐವತ್ತೈದನೆಯ ಅಧ್ಯಾಯವು ಮುಗಿದುದು.

೫೬

ಆಚಾರ್ಯರ ಅಪ್ಪಣೆಯಂತೆ ಅನಂತಾರ್ಯರು ವೇಂಕಟಾಚಲದಲ್ಲಿ ಕೈಂಕರ್ಯ ನಿರತರಾಗಿದ್ದರು. ಒಂದು ಸಲ ಅವರು ರಾಮಾನುಜಾಚಾರ್ಯರ ಹೆಸರಿನಲ್ಲಿ ಒಂದು ಕೆರೆಯನ್ನು ಕಟ್ಟಲು ಆರಂಭಿಸಿದರು. ಗರ್ಭಿಣಿಯಾದ ಅವರ ಪತ್ನಿಯು ಮಣ್ಣನ್ನು ಹೊತ್ತು ಸಹಾಯ ಮಾಡುತ್ತಿದ್ದಳು.

ಈ ಸಮಯದಲ್ಲಿ ಒಬ್ಬ ವಟುವು ಅನಂತಾರ್ಯನ ಎದುರಿಗೆ ಬಂದು ಮೊರವನ್ನು ತೆಗೆದುಕೊಂಡು ಹೋದನು. ಆಗ ಅವರು 'ಎಲೈ ಬಾಲಕನೆ, ನನ್ನ ಜೀವನವನ್ನು ಏಕೆ ಹಾಳು ಮಾಡುತ್ತಿಯೆ? ನಿನಗೆ ಕೈಂಕರ್ಯದಲ್ಲಿ ಇಷ್ಟವಿರುವುದಾದರೆ ಇನ್ನೊಂದು ಮೊರವನ್ನು ತೆಗೆದುಕೊಂಡು ಮಣ್ಣನ್ನು ತೆಗೆದುಕೊಂಡು ಬಾ' ಎಂದರು. ಆ ವೇಳೆಗೆ ಅನಂತಾರ್ಯರ ಪತ್ನಿಯು ಬರುತ್ತಿದ್ದುದನ್ನು ಕಂಡು ಅವಳ ಕೈಯಿಂದ ಮೊರವನ್ನು ತೆಗೆದುಕೊಂಡು ಅನಂತಾರ್ಯರಿಗೆ ತಿಳಿಯದಂತೆ ಸಹಾಯ ಮಾಡುತ್ತಿದ್ದನು. ಹೆಂಡತಿಯು ಈಗ ಬೇಗ ಬೇಗ ಬರುತ್ತಿರುವುದರ ಕಾರಣವನ್ನು ವಿಚಾರಿಸಲು ವಟುವಿನ ಕಾರ್ಯವು ತಿಳಿಯಿತು. ಅವನನ್ನು ಹಿಡಿಯಬೇಕೆಂದು ಅನಂತಾರ್ಯರು ಹುಡುಗನನ್ನು ಓಡಿಸಿಕೊಂಡು ಹೋಗಲು, ಬಾಲಕನು ಆನಂದನಿಲಯ (ವಿಮಾನ)ವನ್ನು ಪ್ರವೇಶಿಸಿದನು. ಇದನ್ನು ನೋಡಿ ಮೊದಲೇ ಸಂಶಯಗೊಂಡಿದ್ದ ಅನಂತಾರ್ಯರಿಗೆ ಈಗ ಆ ಬಾಲಕನು ವೇಂಕಟೇಶನೆಂದು ದೃಢನಿಶ್ಚಯವಾಯಿತು.

ಒಂದು ದಿನ ಅನಂತಾರ್ಯರು ಪುಷ್ಪವಾಟಿಕೆಯಲ್ಲಿ ಭಕ್ತಿಯಿಂದ ತುಳಸಿಯನ್ನು ಸಂಗ್ರಹಿಸುತ್ತಿರಲು ಒಂದು ಹಾವು ಅವರ ಕೈಯನ್ನು ಕಚ್ಚಿತು. ಅವರು ಸ್ವಾಮಿ ಪುಷ್ಕರಿಣಿಯಲ್ಲಿ ಸ್ನಾನಮಾಡಿ ಎಂದಿನಂತೆ ಕೈಂಕರ್ಯಪರರಾಗಿಯೇ ಇದ್ದರು. ಆಪ್ತರಾದ ಕೆಲವರು ಇವರನ್ನು ನೋಡಿ "ನಿನ್ನ ಶರೀರದಲ್ಲಿ ವಿಷವು ಕಾಣುತ್ತಿರುವುದು. ಇದನ್ನು ಹೋಗಲಾಡಿಸಲು ಪ್ರಯತ್ನಿಸುವುದಿಲ್ಲವೇ?" ಎಂದಾಗ, ಅವರು "ನನ್ನನ್ನು ಕಚ್ಚಿದ ಸರ್ಪವು ದುರ್ಬಲವಾಗಿದ್ದರೆ, ಇಲ್ಲಿಯೇ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡುತ್ತ, ವೇಂಕಟೇಶ್ವರನ ಸೇವೆಯನ್ನು ಮಾಡುತ್ತ ನಿಮ್ಮೊಡನೆ ಆನಂದವಾಗಿರುವೆನು. ಹಾಗಿಲ್ಲದೆ ಕಚ್ಚಿದ ಸರ್ಪವು ಪ್ರಬಲವಾಗಿದ್ದರೆ ವಿರಜಾನದಿಯಲ್ಲಿ ಸ್ನಾನಮಾಡಿ ವೈಕುಂಠನಾಯಕನನ್ನು ಸೇವಿಸುತ್ತೇನೆ" ಎಂದರು. ಈ ಮಾತನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು.

ಇನ್ನೊಂದು ಸಲ ಅನಂತಾರ್ಯರು ಕೋಸಲ ದೇಶಕ್ಕೆ ಪ್ರಯಾಣ ಮಾಡಿಬರಬೇಕೆಂದು ಯೋಚಿಸಿದರು. ಮೊಸರನ್ನದ ಬುತ್ತಿಯನ್ನು ಕಟ್ಟಿಕೊಂಡು ಹೊರಟರು. ಬಹಳ ದೂರ ದಾರಿ ನಡೆದು, ಆಯಾಸವಾದಮೇಲೆ ಒಂದು ಕಡೆ ಆಹ್ನಿಕಗಳನ್ನು ಮಾಡಿ, ಬುತ್ತಿಯನ್ನು

ಬಿಚ್ಚಲು ಇರುವೆಗಳು ತುಂಬಿಕೊಂಡಿದ್ದವು. ಇದನ್ನು ನೋಡಿದ ಕೂಡಲೆ "ಹಿಂದಿನವರು ವೇಂಕಟಾದ್ರಿಯಲ್ಲಿ ನಾವು ಯಾವುದಾದರೂ ಒಂದು ಜನ್ಮದಲ್ಲಿ ಹುಟ್ಟಬಾರದೆ?" ಎಂದು ಪ್ರಾರ್ಥಿಸಿಕೊಂಡಿರುವ ಭಾಗವು ನೆನಪಿಗೆ ಬಂದುದರಿಂದ ಅವುಗಳನ್ನು ಮತ್ತೆ ವೇಂಕಟಾಚಲಕ್ಕೆ ಸಾಗಿಸಿದರು.

ಮತ್ತೊಂದು ದಿನ ಅನಂತಾರ್ಯರು ಪುಷ್ಪಮಾಲಿಕೆಯನ್ನು ಕಟ್ಟುತ್ತಾ ಕೈಂಕರ್ಯ ಮಗ್ನರಾಗಿದ್ದರು. ವೇಂಕಟೇಶನು ಕೂಡಲೆ ಬರಬೇಕೆಂದು ಹೇಳಿ ಕಳುಹಿಸಿದರೂ ಲಕ್ಷಿಸದೇ, ಪುಷ್ಪಮಾಲಿಕೆಗಳನ್ನೆಲ್ಲಾ ಕಟ್ಟಿ ಮುಗಿಸಿ, ಅವುಗಳನ್ನು ಬುಟ್ಟಿಯಲ್ಲಿಟ್ಟುಕೊಂಡು ವೇಂಕಟೇಶನಲ್ಲಿ ಅರ್ಪಿಸಲು ಹೋದರು. ಆಗ ವೇಂಕಟೇಶನು "ನಾನು ಹೇಳಿ ಕಳುಹಿಸಿದರೆ ಏಕೆ ಬರಲಿಲ್ಲ?" ಎಂದಾಗ -'ಈಗ ಏನಾಗಬೇಕು, ಆಜ್ಞಾಪಿಸು'-ಎಂದು ಕೇಳಿದರು. ವೇಂಕಟೇಶನು "ನಿನ್ನನ್ನು ಈ ವೇಂಕಟಾಚಲದಿಂದ ಹೊರಕ್ಕೆ ಹೊರಡಿಸಿದರೆ ಏನು ಮಾಡುವೆ?"-ಎಂದನು. ಅನಂತಾರ್ಯರು "ಸ್ವಾಮಿ, ಮಾಯಾವಿಯೂ, ಪರಮಾನಂದ ವಿಶಿಷ್ಟನೂ ಆದ ನೀನು ಆಶ್ರಿತವಾತ್ಸಲ್ಯದಿಂದ ವೈಕುಂಠವನ್ನು ಬಿಟ್ಟು ಸ್ವಾಮಿಪುಷ್ಕರಿಣಿಯ ತೀರದಲ್ಲಿ ರಮೆಯೊಡನೆ ವಿಹರಿಸುತ್ತಿರುವೆ. ನಾನಾದರೋ ಆಚಾರ್ಯರ ಅಪ್ಪಣೆಯಿಂದ ಭಕ್ತಿಯಿಂದ ಇಲ್ಲಿಗೆ ಬಂದಿರುವೆನು. ಇಲ್ಲಿರುವ ವಿಚಾರದಲ್ಲಿ ನಾವಿಬ್ಬರೂ ಸಮಾನರಾಗಿರುವಾಗ ನೀನು ನನ್ನನ್ನು ಹೇಗೆ ಹೊರಡಿಸಲು ಸಾಧ್ಯ?"- ಎಂದರು. ಇದನ್ನು ಕೇಳಿ, ಅವರ ಆಚಾರ್ಯನಿಷ್ಠೆಯನ್ನು ಕಂಡು ಸಂತುಷ್ಟನಾದನು.

ಹೀಗೆ ಯತಿರಾಜರ ಶಿಷ್ಯರು ಆಚಾರ್ಯ ಕೈಂಕರ್ಯನಿರತರಾಗಿ ವಿಷ್ಣುಮಾಯೆಯನ್ನು ಜಯಿಸಿ ಆನಂದದಿಂದ ಇರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಅನಂತಾರ್ಯ ಪ್ರಭಾವ ವರ್ಣನೆಯೆಂಬ ಐವತ್ತಾರನೆಯ ಅಧ್ಯಾಯವು ಮುಗಿದುದು.

## ೫೭

ಆಚಾರ್ಯರು ಮಹಾವೈಭವದಿಂದ ಶ್ರೀವೈಷ್ಣವ ಗೋಷ್ಠಿಯಿಂದ ಮೆರೆಯುತ್ತಿರಲು, ಕೂರೇಶ್ವರರು ಆಚಾರ್ಯರಿಗೂ ತಿಳಿಸದೆ ಒಬ್ಬರೇ ರಂಗನಾಥನ ಸನ್ನಿಧಿಗೆ ಹೋಗಿ ಬದ್ಧಾಂಜಲಿಯಾಗಿ ನಿಂತರು. ರಂಗನಾಥನು "ವತ್ಸ, ನೀನೇನನ್ನೊ ಕೇಳಬೇಕೆಂದು ಬಂದಿರುವಂತೆ ತೋರುತ್ತದೆ. ಬೇಗ ನನಗೆ ಹೇಳು" ಎನ್ನಲು ಶ್ಲೋಕವನ್ನು ಪಠಿಸಿದರು. ಮತ್ತೆ ಸಂತುಷ್ಟನಾದ ರಂಗನಾಥನು "ನಿನಗೆ ಬೇಕಾಗ ವರವನ್ನು ಕೇಳು, ಕೊಡುವೆನು" ಎಂದನು. ಕೂರನಾಥರು "ನೀನು ನನಗೆ ಬೇಕಾದುದೆಲ್ಲವನ್ನೂ ಅನುಗ್ರಹಿಸಿರುವೆ, ಮತ್ತೇನನ್ನು ಕೇಳಲಿ?" ಎನಲು, "ಆದರೂ ಕೇಳು, ರಾಮಾನುಜನನ್ನು ಗುರಿಯಾಗಿಟ್ಟು ಪ್ರತಿಜ್ಞೆ ಮಾಡುವೆನು. ಕೇಳು, ಕೊಡಬಾರದಾದುದನ್ನಾದರೂ ಕೊಡುವೆನು" ಎಂದನು. ತೃಪ್ತನಾದ ಕೂರನಾಥರು-ಪರಮಪದವನ್ನು ಕೊಡು-ಎಂದು ಕೇಳಿದರು. ಭಕ್ತವತ್ಸಲನಾದ ರಂಗನಾಥನು 'ನಿನ್ನ ಸಂಬಂಧದಲ್ಲಿ ಸಂಬಂಧಿಗಳಾಗಿ ಎಲ್ಲಿಯವರೆಗೆ ಇರುವರೋ ಅವರೆಲ್ಲರಿಗೂ

ನಿಃಶ್ರೇಯಸವನ್ನು ಅನುಗ್ರಹಿಸಿರುವೆನು. ನಿನಗೆ ಕೊಡುವುದರಲ್ಲಿ ಸಂಶಯವಿಲ್ಲ'- ಎಂದು ಅನುಗ್ರಹಿಸಿದನು. ತೀರ್ಥತುಳಸೀ-ಮಾಲಾದಿಗಳನ್ನು ಸ್ವೀಕರಿಸಿ ಹೊರಟ ಗುರುತತ್ಪರರಾದ ಕೂರೇಶ್ವರರು ಅರ್ಚಿರಾದಿ ಮಾರ್ಗಕ್ಕೆ ಪ್ರಥಮರಾಗಿಯೂ ಅಲಂಕಾರಪ್ರಾಯರೂ ಆದರು.

ಈ ವೃತ್ತಾಂತವನ್ನು ಕೇಳಿದ ಕೂಡಲೇ ಆಚಾರ್ಯರು ಕಾಷಾಯವಸನವನ್ನು ಮೇಲಕ್ಕೆ ಎಸೆದು ಕುಣಿಯಲಾರಂಭಿಸಿದರು. ಆಶ್ಚರ್ಯಗೊಂಡ ಶಿಷ್ಯರಿಗೆ -'ಶ್ರೀವತ್ಸಚಿಹ್ನನ ಸಂಬಂಧವು ಇರುವುದರಿಂದ ನನಗೂ ಪರಮಪದವು ಲಭಿಸುವುದು'- ಎಂದು ಹೇಳಿದರು. ಸ್ವಲ್ಪಹೊತ್ತಿನಲ್ಲಿಯೇ ದುಃಖಿತರಾಗಿ ಶಿಷ್ಯರೊಡನೆ ಕೂರನಾಥರ ಬಳಿಗೆ ಬಂದರು. ಬಂದು 'ಗುರುಪ್ರಿಯ, ವತ್ಸ- ನನಗೂ ತಿಳಿಸದೆ ನೀನು ಹೀಗೆ ಮಾಡುವುದು ಉಚಿತವೇ?ಎನ್ನಲು ಕೂರನಾಥರು ಮೌನದಿಂದ ಸಮಾಧಿಯಲ್ಲಿಯೇ ಇದ್ದರು. ಮತ್ತೆ ಆಚಾರ್ಯರು, ನನ್ನೊಡನೆ ಮಾತನಾಡದಿರಲು ಕಾರಣವೇನು? ಎಂದು ಕೇಳಲು, ಅವರು -'ತಮ್ಮ ಧ್ಯಾನದಲ್ಲಿಯೇ ಆಸಕ್ತನಾಗಿದ್ದೆನು?.'ಎಂದು ಹೇಳಿದರು. ಆಚಾರ್ಯರು 'ನೀನು ಪದೇಪದೇ ಅನುಭವಿಸುತ್ತಿರುವ ವಿಚಾರವನ್ನು ಹೇಳು? ಎನಲು, ಕೂರನಾಥರೆಂದರು -'ನನಗಿಂತಲೂ ಹಿಂದೆಯೇ ಮುಕ್ತರಾಗಿ ಪರಮಪದವನ್ನು ಹೊಂದಿದವರೂ, ಅವರ ಹಿಂದೆ ನಿತ್ಯಸೂರಿಗಳೂ, ನನ್ನ ಅಭಿಮುಖವಾಗಿ ಬರುತ್ತಿರುವರು. ಈ ವಿಷ್ಣುಪುರದಲ್ಲಿರುವವರೂ ಶಾಸ್ತ್ರಮಾರ್ಗವನ್ನತಿಕ್ರಮಿಸಿರುವವರಂತೆ ಕಂಡುಬರುತ್ತಾರೆ. ಆದುದರಿಂದ ನಾನೀಗ ಮುಗ್ಧನಾಗಿರುವೆನು? ಆಚಾರ್ಯರು, 'ಕೂರನಾಥ, ಆ ವೈಕುಂಠದಲ್ಲಿ ಶಾಸ್ತ್ರವೂ ಇಲ್ಲ, ವ್ಯತಿಕ್ರಮವೂ ಇಲ್ಲ. ಈ ಭೋಗಭೂಮಿಯಲ್ಲಿ ಮಾತ್ರ ಶಾಸ್ತ್ರಮಾರ್ಗದ ಪ್ರವರ್ತನವು'. ಎಂದಮೇಲೆ, ಕೂರೇಶರು ಶೇಷತ್ವ(?)ವನ್ನು ಕಂಡು ವಿಸ್ಮಿತರಾದರು. ಆಚಾರ್ಯರು ಅವನ ಕಿವಿಯಲ್ಲಿ ದ್ವಯೋಪದೇಶವನ್ನು ಮಾಡಿದರು. ಆಗ ಅಲ್ಲಿದ್ದ ಶಂಕಿತರಾದ ವೈಷ್ಣವರು -'ಆಚಾರ್ಯರೆ, ಪ್ರಪನ್ನರಾದ ವೈಷ್ಣವರಿಗೆ ಅಂತಿಮ ಸ್ಮೃತಿಯನ್ನುಂಟು ಮಾಡಬಾರದೆಂದು ಶಾಸ್ತ್ರಪೂರ್ವಕವಾಗಿ ತಾವೇ ಹೇಳಿದ್ದಿರಲ್ಲವೆ? ಮತ್ತೆ ತಾವೇ ಹೀಗೆ ಮಾಡಬಹುದೆ? ಎಂದು ಕೇಳಿದರು. ಅದಕ್ಕೆ ಆಚಾರ್ಯರು ರಾಜಪುತ್ರನಿಗೆ ಕರ್ಪೂರಘಟಿಕೆಯು ಇಲ್ಲದ್ದರಿಂದ ನಾಲಿಗೆಯು ಒಣಗುವಂತೆ ಇವನಿಗೆ ದ್ವಯವಿಲ್ಲದಿದ್ದರೆ ಕಷ್ಟವಾಗುವುದು'- ಎಂದು ಸಮಾಧಾನ ಹೇಳಿದರು. ಮತ್ತೆ ಕೂರನಾಥರನ್ನು ಕುರಿತು 'ಇನ್ನು ಈ ಭೂಲೋಕದಲ್ಲಿ ನನಗೆ ನಿನ್ನ ಸಹವಾಸವು ದುರ್ಲಭವಾಯಿತೇ? ನನ್ನನ್ನೂ ಬಿಟ್ಟು, ನನ್ನ ಮತ್ತು ದೃಷ್ಟಿಚಿತ್ತಾಪಹಾರಕನಾದ ಜಗತ್ಪತಿಯಾದ ರಂಗನಾಥನನ್ನೂ ಬಿಟ್ಟು ಹೀಗೆ ನಿರ್ದಯನಾಗಿ ವೈಕುಂಠಕ್ಕೆ ಹೊರಟಿರುವೆಯಷ್ಟೆ? ಆ ವೈಕುಂಠನಾಥನೂ, ನಿತ್ಯಸೂರಿಗಳೂ, ಮುಕ್ತರೂ ಈಗ ಯಾವ ಸುಕೃತವನ್ನು ಮಾಡಿರುವರೋ? ಇಲ್ಲಿರುವ ಜನರೂ, ಜಗದೀಶ್ವರನಾದ ರಂಗನಾಥನೂ, ನಾವೂ ಕೂಡ ಏನು ಪಾಪವನ್ನು ಮಾಡಿದೆವೋ ಎಂದು ಖಿನ್ನರಾಗಿ, ಮತ್ತೆ ಎಲೈ ಕೂರನಾಥ, ಮನಸ್ಸು ತಳಮಳಗೊಳಿಸುವ ಮಾತನಾಡುವುದರಿಂದ ಪ್ರಯೋಜನವೇನು? ಹೀಗೆ ಮಾತನಾಡುತ್ತ ನಿನ್ನ ಸುಖಪ್ರಯಾಣಕ್ಕೆ ನಾನು ವಿಘ್ನಮಾಡುವುದಿಲ್ಲ, ನೀನು ಸುಖವಾಗಿ ಹೊರಡು', ಎಂದು ಹೇಳಿ, ಕೂರೇಶರಿಗೆ ಕೈಮುಗಿದು ಮಠಕ್ಕೆ ಹೊರಡಲು ಅನುವಾದರು. ಕೂಡಲೇ ಛಿನ್ನಮೂಲವಾದ ಪಾದಪದಂತೆ ಕೂರನಾಥರು ಆಚಾರ್ಯರ ಪಾದಗಳ ಮೇಲೆ ಬಿದ್ದರು. ಹೀಗೆ ಭಕ್ತಿಯಿಂದ ಬಿದ್ದ ಕೂರನಾಥರನ್ನು

ತೋಳುಗಳಿಂದ ಹಿಡಿದೆತ್ತಿದರು. ಮತ್ತೆ ಕೂರನಾಥರು ಸಾಷ್ಟಾಂಗ ಪ್ರಣಾಮ ಮಾಡಿ, ಶ್ರೀಪಾದ ತೀರ್ಥವನ್ನು ಗ್ರಹಣ ಮಾಡಿದರು. ಆಚಾರ್ಯರು ತಮ್ಮ ಕೈಯಿಂದಲೇ ಶ್ರೀಪಾದತೀರ್ಥವನ್ನು ಕೊಟ್ಟರು. ಅವರು ಅತ್ಯಂತ ಭಕ್ತಿಯಿಂದ ಸ್ವೀಕರಿಸಿ -'ಯೋ ನಿತ್ಯಮಚ್ಯುತಪದಾಂಬುಜ'. ಎಂಬ ಪದ್ಯ ವಿಜ್ಞಾಪಿಸಿ, ಅಂಜಲಿಬದ್ಧರಾಗಿ 'ತಾವು ಬಂದು ಬಹಳ ಹೊತ್ತಾಯಿತು, ಮಠಕ್ಕೆ ಬೇಗ ದಯಮಾಡಿಸಬೇಕು' ಎಂದು ಪ್ರಾರ್ಥಿಸಿದರು. ಅನೇಕವಾಗಿ ಪ್ರಾರ್ಥಿಸಿದರೂ ಶಿಷ್ಯವತ್ಸಲರಾದ ಆಚಾರ್ಯರಿಗೆ ಹೊರಡಲು ಮನಸ್ಸೇ ಬರಲಿಲ್ಲ. ಕಡೆಗೆ ಬಹುಕಷ್ಟದಿಂದ ಮಠಕ್ಕೆ ಹೊರಟರು. ಕೂರನಾಥರು ಬೀದಿಯಲ್ಲಿ ಕೈ ಮುಗಿದು ನಿಂತುಕೊಂಡು ಹೋಗುತ್ತಿರುವ ಆಚಾರ್ಯರನ್ನೇ ದೃಷ್ಟಿಸಿ ನೋಡುತ್ತಿದ್ದರು. ಹೆಜ್ಜೆ ಹೆಜ್ಜೆಗೂ ಆಚಾರ್ಯರು ಹಿಂತಿರುಗಿ ನೋಡುತ್ತ, ತಾವು ಕೈ ಮುಗಿದು 'ನಿಲ್ಲು,ನಿಲ್ಲು'- ಎಂದು ಹೇಳುತ್ತ, ಮೆಲ್ಲಮೆಲ್ಲಗೆ ಮಠವನ್ನು ತಲುಪಿದರು. ಅವರು ಮಠವನ್ನು ಪ್ರವೇಶಿಸುವವರೆಗೂ ಕೂರನಾಥರು ಬೀದಿಯಲ್ಲಿದ್ದು ಮನೆಗೆ ಹಿಂತಿರುಗಿದರು. ಆಚಾರ್ಯರು ಕರುಣೆಯಿಂದ ಕೂರೇಶರಿಗೆ ಹಿತೋಪದೇಶ ಮಾಡಿ ಮಠಕ್ಕೆ ಹೋಗಿ ಅವರ ಸುಗುಣವೆಲ್ಲವನ್ನೂ ಶಿಷ್ಯರಿಗೆ ವರ್ಣಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕೂರೇಶನ ಚರಮದಶಾವರ್ಣನೆಯೆಂಬ ಐವತ್ತೇಳನೆಯ ಅಧ್ಯಾಯವು ಮುಗಿದುದು.

## ೫೮

ಅನಂತರ ಕೂರನಾಥರು ದೃಢವ್ರತಳಾದ ಪತ್ನಿಯನ್ನು ಕರೆದು -'ನಿನ್ನ ಮನಸ್ಸಿನಲ್ಲಿ ಯಾವ ಯೋಚನೆಯಿರುವುದು ಹೇಳು'- ಎಂದರು. 'ಸ್ವಾಮಿ ತಮ್ಮ ಮನಸ್ಸಿನಲ್ಲಿರುವ ಅಭಿಪ್ರಾಯವೇ ನನ್ನ ಅಭಿಪ್ರಾಯವೂ ಆಗಿರುವುದು. ಮತ್ತೆ ಬೇರೆ ಏನು ಇಲ್ಲ. ತಮ್ಮ ಸಂಕಲ್ಪವಾದರೂ ಯಾವಾಗಲೂ ಅಮೋಘವಾದದ್ದು. ಅದಕ್ಕೆ ಯಾವ ವಿಘ್ನವೂ ಇರುವುದಿಲ್ಲ'- ಎಂದು ಆಕೆಯು ಆವರ ಪಾದಗಳಿಗೆ ನಮಸ್ಕರಿಸಿ ನಿಂತಳು.

ಕೂರನಾಥರು ಕುಮಾರರಾದ ಭಟ್ಟಾರ್ಯ, ರಾಮಪುತ್ರಕರನ್ನು ಸಮೀಪಕ್ಕೆ ಕರೆದು 'ಮಕ್ಕಳಿರಾ, ರಂಗನಾಥನೂ, ರಂಗನಾಯಕಿಯೂ ಇರುವಾಗ ನಮಗೆ ಯಾವುದಕ್ಕೂ ಕೊರತೆಯಿಲ್ಲ. ಜನಕನೂ ಪೋಷಕನೂ ರಂಗನಾಥನೆಂಬುದರಲ್ಲಿ ಯಾವ ಸಂಶಯವೂ ಬೇಡ. ಆದರೂ ಅವನನ್ನೇ ರಕ್ಷಕನೆಂದು ಮಾತ್ರ ತಿಳಿಯಬೇಡಿ. ಯತೀಂದ್ರರ ಪದಪಕಂಜವನ್ನು ರಕ್ಷಕವನ್ನಾಗಿ ನಂಬಿ ನಡೆದುಕೊಳ್ಳಿರಿ. ಯಾವಾಗಲೂ ನಿಮ್ಮ ತಾಯಿಯು ಹೇಳಿದಂತೆ ಕೇಳಿಕೊಂಡಿರಿ; ಪ್ರಮಾದದಿಂದಲಾದರೂ ಮಹಾತ್ಮರಾದ ವೈಷ್ಣವರಿಗೆ ಕರಣತ್ರಯದಿಂದಲೂ ಅಪರಾಧವನ್ನು ಎಂದಿಗೂ ಮಾಡಬೇಡಿ; ಯಾವಾಗಲೂ ಮಹಾಮಹಿಮರಾದ ಶ್ರೀವೈಷ್ಣವರನ್ನು ಅನುಸರಿಸಿಕೊಂಡು, ಭಕ್ತಿಯಿಂದ ಅವರ ಕೈಂಕರ್ಯ

ದಲ್ಲಿಯೇ ನಿರತರಾಗಿರಿ'- ಎಂದು ಉಪದೇಶ ಮಾಡಿದರು. ಮಕ್ಕಳು ನಮಸ್ಕರಿಸಲು ಅವರನ್ನು ಹಿಡಿದೆತ್ತಿ, ಆಲಂಗಿಸಿ ಸಮಾಧಾನ ಮಾಡಿ ಮತ್ತೆ -'ನೀವು ನನ್ನ ದೇಹ ಸಂಬಂಧವನ್ನು ಮಾತ್ರ ವಿಚಾರಿಸಿ ದುಃಖಿಸುವುದಾದರೆ ಯತಿರಾಜರ ಪಾದಪಂಕಜಗಳಿಂದ ದೂರವಾಗುವಿರಿ, ಹಾಗಾಗಬಾರದು ?'- ಎಂದು ಮಕ್ಕಳಿಗೆ ಸದುಪದೇಶ ಮಾಡಿ ಕೃತಕೃತ್ಯರಾದ ಕೂರನಾಥರು ಶರೀರವನ್ನು ಬಿಡುವ ಪ್ರಯತ್ನದಿಂದ ಶಿಷ್ಯನಾದ 'ಪುತ್ರ ಪುತ್ರಾರ್ಯ' ಯೋಗಿಯ ತೊಡೆಯ ಮೇಲೆ ತಲೆಯನ್ನೂ, ಪತ್ನಿಯ ತೊಡೆಯ ಮೇಲೆ ಪಾದಗಳನ್ನೂ ಇಟ್ಟುಕೊಂಡು ಯತಿರಾಜರ ಪದಪಂಕಜಗಳನ್ನೂ ಧ್ಯಾನಿಸುತ್ತಾ ಅನಾಯಾಸವಾಗಿ ಶರೀರವನ್ನು ಬಿಟ್ಟರು.

ಈ ವಿಚಾರವನ್ನು ಕೇಳಿದ ಕೂಡಲೆ ಯತಿರಾಜರು ಬಂದು -'ಭಟ್ಟಾರ್ಯ, ನಿಮ್ಮ ತಂದೆಯು ಮೃತರಾದರೆಂದು ಚಿಂತಿಸಬೇಡ. ಚಿಂತಿಸಲು ಕಾರಣವಿಲ್ಲ'- ಎಂದು ಸಮಾಧಾನ ಮಾಡಿ ಮುಂದಿನ ಕರ್ಮಗಳಿಗಾಗಿ ತ್ವರೆಗೊಳಿಸಿದರು. 'ಸರ್ವಕರ್ಮಾಣಿ ಸೂಕ್ತೇನ ಗಾಯತ್ರ್ಯಾ ವೈಷ್ಣವೇನಚ। ನಾರಾಯಣಾನುವಾಕೇನ ಸ್ನಾಪಯೇತ್ಪಿತರಂ ಸುತಃ'- ಎಂದು ಹೇಳಿರುವಂತೆ, ಸ್ನಾನಮಾಡಿಸಿ, ಊರ್ಧ್ವಪುಂಡ್ರಗಳನ್ನು ಧಾರಣಮಾಡಿಸಿ, ಶ್ರೀಚೂರ್ಣ ಪರಿಪಾಲನವನ್ನು ಮಾಡಿ -'ಕೇಶವಾರ್ಪಿತ ಸರ್ವಾಂಗಂ ಶರೀರಂ ಮಂಗಳಾವಹಂ। ನ ವೃಥಾ ದಾಹಯೇದ್ವಿಪ್ರೋ ಬ್ರಹ್ಮಮೇಧವಿಧಿಂ ವಿನಾ॥ ಬ್ರಹ್ಮಮೇಧ ವಿಧಿಃ ಪ್ರೋಕ್ತೋ ಮುನಿಭಿಬ್ರಹ್ಮ ತತ್ಪರೈಃ। ಮಹಾ ಭಾಗವತಾನಾಂ ಹಿ ಕರ್ತವ್ಯೋಽಹ್ಯಯಮುತ್ತಮಃ। ಹಾರೀತಾಯಾಂ ಸ್ಮೃತೌ ಪ್ರೋಕ್ತಂ..........'- ಎಂಬಂತೆ ಭಟ್ಟಾರ್ಯನು ಸಾಂಗವಾಗಿ ಸಂಸ್ಕರಿಸಿದನು. ಹೀಗೆ ಹನ್ನೆರಡನೆಯ ದಿವಸದ ಕಾರ್ಯಗಳೂ ಮುಗಿದ ಮೇಲೆ ಯತಿರಾಜರೊಡನೆ ಶ್ರೀವೈಷ್ಣವರನ್ನು ಕರೆದುಕೊಂಡು ಬಂದು -'ನಾತಃ ಪರತರಂ ತೀರ್ಥಂ ವೈಷ್ಣವಾಂಘ್ರಿ ಜಲಾಚ್ಛುಭಂ। ತೇಷಾಂ ಪಾದರಜಃ ಪುಣ್ಯಂ ಗಂಗಾಮಪಿ ಪುನಾತಿ ಹಿ'- ಎಂಬ ವೈಭವಯುಕ್ತವಾದ ಪಾದತೀರ್ಥ ಗ್ರಹಣವನ್ನು ಮಾಡಿ -ಶುಭಾದಿಯಲ್ಲೂ ಅಶುಭಾಂತದಲ್ಲೂ ದ್ರಾವಿಡ ಬ್ರಹ್ಮಸಂಹಿತೆಯು ಅಧ್ಯಯನ ಮಾಡಬೇಕಾದುದು (ಬ್ರಹ್ಮಾಂಡ ಪುರಾಣದಲ್ಲಿ ಹೇಳಿದೆ)' ಎಂದಿರುವುದರಿಂದ ಅದನ್ನೂ ನಡೆಸಿ, 'ಯಥಾತುಷ್ಯತಿ ದೇವೇಶೋ ಮಹಾ ಭಾಗವತಾರ್ಚನಾತ್। ನ ತುಷ್ಯತಿ ತಥಾ ವಿಷ್ಣುರ್ವಿದಿವತ್ಯಾರ್ಚನಾದಪಿ॥'- ಎಂಬಂತೆ ವೈಷ್ಣವರನ್ನು ಅನ್ನ, ಭೂಷಣ, ವಸ್ತ್ರಾದಿಗಳಿಂದ ಭಕ್ತಿಪೂರ್ವಕವಾಗಿ ಸತ್ಕರಿಸಿದನು. ವೈಷ್ಣವರು ಭಟ್ಟಾರ್ಯನಿಗೆ ಪುಷ್ಯಮಾಸದ ಹಸ್ತ ನಕ್ಷತ್ರವು ಕೂರೇಶರ ಜನ್ಮನಕ್ಷತ್ರವೆಂದು ತಿಳಿಸಿ -'ಶ್ರೀವತ್ಸಚಿಹ್ನಮಿಶ್ರೇಭ್ಯೋ ನಮ ಉಕ್ತಿ.........ಮಂಗಳ ಸೂತ್ರತಾಂ''- ಎಂಬ ಪದ್ಯವನ್ನು ಪಠಿಸಿದರು.

ಅನಂತರ ಯತಿರಾಜರು ಭಟ್ಟಾರ್ಯನನ್ನು ಜೊತೆಯಲ್ಲಿ ಕರೆದುಕೊಂಡು ಶ್ರೀರಂಗನಾಥನ ಸನ್ನಿಧಿಗೆ ಹೋದರು. ಭಕ್ತಿಪೂರ್ವಕ ನಮಸ್ಕರಿಸಿ ನಿಂತಿರಲು ರಂಗನಾಥನು ಅರ್ಚಕಮುಖದಿಂದ -'ನಿನ್ನ ತಂದೆಯು ಮೃತರಾದರೆಂದು ಚಿಂತಿಸಬೇಡ. ನನ್ನನ್ನೇ ನಿನ್ನ ತಂದೆಯೆಂದು ತಿಳಿ'- ಎಂದು ಹೇಳಿ ಪುತ್ರಸ್ವೀಕಾರ ಮಾಡಿದನು. ಮತ್ತೆ ಆಚಾರ್ಯರು 'ಈ ನಿನ್ನ ಮಗನಿಗೆ ಆಯುಸ್ಸನ್ನು ಕೊಡು. ಇವನನ್ನು ಸರ್ವಶಾಸ್ತ್ರಪಾರಂಗತನನ್ನಾಗಿ ಮಾಡುವೆನು'- ಎನಲು, ರಂಗನಾಥನು ಉತ್ತರಕೊಡದೆ ತೀರ್ಥಪ್ರಸಾದಗಳನ್ನು ಕೊಡಿಸಿ ಇಬ್ಬರನ್ನೂ ಕಳುಹಿಸಿದನು. ಆಚಾರ್ಯರು ಗೋವಿಂದನನ್ನು ಕರೆದು -'ಇವನನ್ನು ನಮ್ಮ ದರ್ಶನ

ನಿರ್ವಾಹಕನನ್ನಾಗಿಯೂ ಶಾಸ್ತ್ರವಿಶಾರದನನ್ನಾಗಿಯೂ ಮಾಡುವ ಹೊಣೆಯು ನಿನ್ನದು'- ಎಂದು ಭಟ್ಟಾರ್ಯನನ್ನು ಅವನ ವಶಕ್ಕೆ ಒಪ್ಪಿಸಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಚರಿತದಲ್ಲಿ ಕೂರನಾಥರ ಪರಮಪದಪ್ರಾಪ್ತಿ ವರ್ಣನವೆಂಬ ಐವತ್ತೆಂಟನೆಯ ಅಧ್ಯಾಯವು ಮುಗಿದುದು.

೫೯

ಶ್ರೀರಂಗದಲ್ಲಿ ಭಗವದ್ವಿಷಯವನ್ನು ಉಪದೇಶಿಸುತ್ತ ಆಚಾರ್ಯರು ಸುಖವಾಗಿರುತ್ತಿರಲು, ಅವರ ವೈಭವವನ್ನು ರಂಗನಾಥನೇ (ರಂಗೇಶೋ ವೇಂಕಟೇಶಶ್ಚ ವರದಸ್ಸಂಪದಾತ್ಮಜಃ। ದೇವಸ್ಸುಂದರ ಬಾಹುಶ್ಚ, ಕುರಂಗನಗರೀಶ್ವರಃ। ವಕುಳಾಭರಣಃ ಶ್ರೀಮಾನ್ ಧೀಮಾನ್ ನಾಥಮುನಿ ಮಹಾನ್। ಯಾಮುನಾರ್ಯೋ ಮಹಾಪೂರ್ಣೋ ಗೋಷ್ಠೀಪೂರ್ಣೋ ದೃಢವ್ರತಃ। ಭೂರಿ ಶ್ರೀಶೈಲಪೂರ್ಣಾರ್ಯೋ ಮಾಲಾಧರ ಗುರುರ್ಮಹಾನ್। ಶ್ರೀವತ್ಸ ಚಿಹ್ನಮಿಶ್ರಶ್ಚ ರಂಗದೇವಾಖ್ಯದೇಶಿಕಃ। ವರರಂಗೋ ಯತೀಂದ್ರಸ್ಯ ತಸ್ಯ ಶಿಷ್ಯಾ ದಯೋಽಖಿಲಾಃ। ಮೂಕಶ್ಚ ಬ್ರಹ್ಮರಕ್ಷಶ್ಚ ಯೇಚಾನ್ಯೇ ತತ್ವದರ್ಶಿನಃ) ಮೊದಲಾದವರು ಪ್ರಕಾಶಗೊಳಿಸಿದರು.

ರಂಗನಾಥನು ತಾನಾಗಿಯೇ ಜಗದ್ಗುರುವನ್ನು ಕರೆದು -'ನಿನ್ನ ಸಂಬಂಧ-ಸಂಬಂಧಿಗಳೆಲ್ಲರಿಗೂ ನಾನು ವಿಭೂತಿದ್ವಯವನ್ನು ಅನುಗ್ರಹಿಸಿರುವೆನು;, ಎಂದನು. ವೇಂಕಟೇಶನೂ ಅದರಂತೆಯೇ ಅನುಗ್ರಹಿಸಲು, ಒಂದು ದಿನ ಒಬ್ಬ ಗೊಲ್ಲಿತಿಯು ಮೊಸರನ್ನು ಕೊಟ್ಟು ದುಡ್ಡಿಗಾಗಿ ಕಾದಿದ್ದಳು. ಆ ಸಮಯದಲ್ಲಿ ಪ್ರಣತಾರ್ತಿಹರಾಚಾರ್ಯರು ದೇವಾರ್ಚನೆ ವೈಷ್ಣವ ಕೈಂಕರ್ಯವನ್ನು ಮುಗಿಸಿ ಗೊಲ್ಲಿತಿಗೂ ತೀರ್ಥಪ್ರಸಾದಗಳನ್ನು ಕೊಟ್ಟರು. ಅಷ್ಟರಿಂದಲೇ ಜ್ಞಾನ ವೈರಾಗ್ಯಗಳುಂಟಾದ ಗೊಲ್ಲತಿ ಯತಿರಾಜರ ಬಳಿಗೆ ಬಂದು,'ತನಗೆ ಮೊಸರಿಗೆ ದುಡ್ಡು ಬೇಡವೆಂದೂ ಮೋಕ್ಷವು ಬೇಕೆಂದೂ ಕೇಳಿದಳು. ಇದನ್ನು ಕೇಳಿ ವಿಸ್ಮಿತರಾದ ಆಚಾರ್ಯರು ವೇಂಕಟೇಶನ ಸಮೀಪಕ್ಕೆ ಹೋಗಬೇಕೆಂದೂ, ಅವನೇ ಮೋಕ್ಷವನ್ನು ಕೊಡುವವನೆಂದೂ ಹೇಳಿದರು. ಗೋಪಿಯು ವೇಂಕಟೇಶನಿಗೆ ಒಂದು ಪತ್ರಿಕೆಯನ್ನು ಬರೆದು ಕೊಡಬೇಕೆಂದು ಕೇಳಲು ಆಚಾರ್ಯರು ಎಲ್ಲರೂ ನೋಡುತ್ತಿರುವಂತೆಯೇ ಒಂದು ಕಾಗದವನ್ನು ಬರೆದುಕೊಟ್ಟರು. ಅವಳು ಅದನ್ನು ತೆಗೆದುಕೊಂಡು ಹೋಗಿ ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನಮಾಡಿ ಆನಂದನಿಲಯ (ದೇವಾಲಯ)ಕ್ಕೆ ಹೋಗಿ ಗರುಡಗಂಬದ ಬಳಿಯಲ್ಲಿ ಪತ್ರಿಕೆಯನ್ನು ಇಟ್ಟು ಮೋಕ್ಷವನ್ನು ಕರುಣಿಸಬೇಕೆಂದು ನಿಶ್ಚಲವಾಗಿ ಮಲಗಿದಳು. ಭಕ್ತಪರಾಧೀನನಾದ ವೇಂಕಟೇಶನು ಅವಳಿಗೆ ಪರಮಪದವನ್ನು ಅನುಗ್ರಹಿಸಿದನು. ಈ ಆಶ್ಚರ್ಯವನ್ನು ಕಂಡು ಅಲ್ಲಿದ್ದವರೆಲ್ಲರೂ ಆಚಾರ್ಯರ ಶಿಷ್ಯರಾದರು.

ಹಿಂದೆ ಯಜ್ಞಮೂರ್ತಿಗೂ ಆಚಾರ್ಯರಿಗೂ ಹದಿನೆಂಟು ದಿನಗಳು ವಾದವು ನಡೆದಾಗ ಕೊನೆಯ ದಿನ ಆಚಾರ್ಯರು ಚಿಂತಾಗ್ರಸ್ತರಾಗಿರಲು ಸ್ವಯಂ ವರದರಾಜನೇ ಜಯೋಪಾಯವನ್ನು (ಯಾಮುನಾಚಾರ್ಯರ 'ಮಾಯಾವಾದ ಖಂಡನ'ವೆಂಬ ಗ್ರಂಥವನ್ನು

ನೋಡಬೇಕೆಂದು) ಸ್ವಪ್ನದಲ್ಲಿ ಸೂಚಿಸಿದನು.

ಆಚಾರ್ಯರ ವಿಚಾರದಲ್ಲಿ ಯಾದವಪ್ರಕಾಶನು ಸಂಶಯಿತನಾಗಿರಲು, ಆತನ ಸ್ವಪ್ನದಲ್ಲಿ ವರದರಾಜನು -'ಯತಿರಾಜರ ಸಂಬಂಧವಿಲ್ಲದೇ ನಿನಗೆ ಮೋಕ್ಷವಿಲ್ಲವೆಂದೂ, ಆಚಾರ್ಯರನ್ನು ಪ್ರದಕ್ಷಿಣೆ ಮಾಡಿ, ತ್ರಿದಂಡ ಸಂನ್ಯಾಸವನ್ನು ಗ್ರಹಿಸುವುದರಿಂದಲೇ ಮೋಕ್ಷ'-ವೆಂದೂ ತಿಳಿಸಿದನು.

ಯಾದವಾಚಲಪತಿಯು ತೊಂಡನೂರಿನಲ್ಲಿ ಆಚಾರ್ಯರ ಸ್ವಪ್ನದಲ್ಲಿ ಕಾಣಿಸಿಕೊಂಡು, ಅವರನ್ನು ಕರೆಸಿಕೊಂಡು ಪ್ರತ್ಯಕ್ಷನಾದನು. ಸಂಪತ್ಕುಮಾರನಂತೂ ಆಚಾರ್ಯರಿಗೆ ಕುಮಾರನೇ ಆದನು.

ಒಂದು ಉತ್ಸವ ಕಾಲದಲ್ಲಿ ಸುಂದರಬಾಹುವು ರಾಮಾನುಜಾಚಾರ್ಯರ ಸಂಬಂಧವಿರುವ ಮಹಾತ್ಮರೆಲ್ಲರೂ ನನ್ನ ಬಳಿಗೆ ಬರಬಹುದೆನ್ನಲು, ಆಚಾರ್ಯರ ಶಿಷ್ಯರೆಲ್ಲರೂ ಬಂದರು. ಪೂರ್ಣಾಚಾರ್ಯರ ಶಿಷ್ಯರು ಕೆಲವರು ಬರಲಿಲ್ಲ, ಕಾರಣವನ್ನು ವಿಚಾರಿಸಲು -ನೀನು ರಾಮಾನುಜಾಚಾರ್ಯರ ಶಿಷ್ಯರನ್ನು ಕರೆದುದರಿಂದ ಅವರ ಆಚಾರ್ಯರ ಸಂಬಂಧಿಗಳಾದ ನಾವು ಬರಲಿಲ್ಲ; ಆಗ ಸುಂದರಬಾಹುವು -ದಶರಥನೇ ಮೊದಲಾದವರು ನನ್ನನ್ನು ಮಗನೆಂದು ಭಾವಿಸಿದಂತೆ, ಪೂರ್ಣಾಚಾರ್ಯರು ಯತಿರಾಜರನನ್ನು ಶಿಷ್ಯನೆಂದು ಭಾವಿಸಿದರು - ಎಂದನು.

ಇನ್ನೊಂದು ದಿನ ಪ್ರಣತಾರ್ತಿಹರಾಚಾರ್ಯರು ಸುಂದರಬಾಹುವಿನ ದರ್ಶನಾರ್ಥವಾಗಿ ವೃಷಾಚಲಕ್ಕೆ ಹೋಗಿ 'ಅಪರಾಧ ಸಹಸ್ರಭಾಜನಂ.......। ಅಗಂತಿಂ ಶರಣಾಗತಂ -ಎಂದು ಹೇಳುತ್ತ ನಮಸ್ಕಾರ ಮಾಡಲು -ಸರ್ವರಕ್ಷಕರಾದ ರಾಮಾನುಜಾಚಾರ್ಯರು ಪ್ರಕಾಶಿಸುತ್ತಿರಲು 'ಅಗತಿಂ ಎಂದೇಕೆ ಹೇಳುವೆ? ಆತನ ಸಂಬಂಧದಿಂದ ಪಾಪಿಯೂ ಮುಕ್ತನಾಗುವನು'-ಎಂದರು.

ಆಚಾರ್ಯರು ದಿಗ್ವಿಜಯಕ್ಕೆ ಹೊರಟು ಕುರಂಗನಗರಿಗೆ ಹೋಗಲು, ಅಲ್ಲಿ, ಕುರಂಗನಗರೀಪೂರ್ಣ (ಪರಮಾತ್ಮ)ನು ಚತುಸ್ಸಪ್ತತಿ ಪೀಠಗಳಲ್ಲಿ ಶಿಷ್ಯವೃಂದದಿಂದ ಕೂಡಿರುವ ಆಚಾರ್ಯರನ್ನು ಕಂಡು -'ಹಿಂದೆ ನಾನು ಶ್ರೀದೇವಿಯೊಡನೆ ಜನಗಳನ್ನು ರಕ್ಷಿಸಬೇಕೆಂದು ಭೂಲೋಕದಲ್ಲಿ ಅವತರಿಸಿರಲು, ರಾಜನೆಂದೂ, ಗೋಪಾಲನೆಂದೂ, ತಿಳಿದರೆ ಹೊರತು, ಅಸುರ ಪ್ರಕೃತಿಗಳಾದ ಜನರು ನನ್ನನು ಲಕ್ಷಿಸಲಿಲ್ಲ. ಈಗ ನೀನು ಯಾವ ಉಪಾಯದಿಂದ ಜಗತ್ತನ್ನೇ ವಶಪಡಿಸಿಕೊಂಡಿರುವೆ?'- ಎಂದು ಕೇಳಿದನು. ಪರಮಾತ್ಮನ ಮಾತನ್ನು ಕೇಳಿ ಆಚಾರ್ಯರು ವಿನಯದಿಂದ ವಿಜ್ಞಾಪಿಸತೊಡಗಲು ಪರಮಾತ್ಮನು ಆಚಾರ್ಯರನ್ನು ಉನ್ನತಪೀಠದಲ್ಲಿ ಕುಳ್ಳಿರಿಸಿ, ತಾನು ಅವರ ಮುಂದೆ ಶಿಷ್ಯನಂತೆ ನಿಂತುಕೊಂಡನು. ಆಚಾರ್ಯರು ಆ ಪೀಠದಲ್ಲಿ ಪೂರ್ಣಾಚಾರ್ಯರೇ ಇರುವರೆಂದು ಭಾವಿಸುತ್ತ ಬಲಗಿವಿಯಲ್ಲಿ -'ಎಲ್ಲ ಮಂತ್ರಗಳಿಗಿಂತಲೂ, ಮಂತ್ರರತ್ನವು ಶುಭಕರವೆಂದೂ, ಒಂದು ಸಲ ಸ್ಮರಿಸುವುದರಿಂದಲೇ ಪರಮಪದವುಂಟೆಂದೂ, ಮಂತ್ರರತ್ನ, ದ್ವಯ, ನ್ಯಾಸ, ಪ್ರಪತ್ತಿ, ಶರಣಾಗತಿ, ಲಕ್ಷ್ಮೀನಾರಾಯಣ ಇವೆಲ್ಲವೂ ಮಂತ್ರರತ್ನದ ಪ್ರಕಾರಾಂತರವಾದ ಹೆಸರುಗಳು''-ಎಂದು ಉಪದೇಶಿಸಿ 'ವೈಷ್ಣವಪೂರ್ಣನೆಂಬ ನಾಮಕರಣವನ್ನು ಮಾಡಿದರು. ಪರಮಾತ್ಮನೂ ಆಚಾರ್ಯರ ಶಿಷ್ಯನೆಂದು ಪ್ರಸಿದ್ಧನಾದನು. ಹೀಗೆ ರಂಗನಾಥನೇ ಮೊದಲಾಗಿ, ಅನೇಕ ದಿವ್ಯ ದೇಶಗಳಲ್ಲಿರುವ ಅರ್ಚಾರೂಪಿಯಾದ

ಹರಿಯು ಪಿತಾ, ಆಚಾರ್ಯ, ಮೊದಲಾಗಿ ಭಾವಿಸುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಂಗೇಶನೇ ಮೊದಲಾದವರಿಂದ ವರ್ಣಿತವಾದ ರಾಮಾನುಜ ವೈಭವವೆಂಬ ಐವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

೬೦

ಹಿಂದೆ ವೈಕುಂಠದಲ್ಲಿ ಜನಗಳನ್ನು ರಕ್ಷಿಸಲು ಅಸಮರ್ಥನಾದ ಪರಮಾತ್ಮನು ಚಿಂತಿಸುತ್ತಿರಲು, ಅದನ್ನು ಕಂಡು ಸೇನಾನಾಥರು (ವಿಶ್ವಕ್ಸೇನ) ನಗುತ್ತಾ ಇಂತೆಂದರು -'ನಾನು ಭೂಮಿಯಲ್ಲಿ ಅವತರಿಸಿ, ಎಲ್ಲರನ್ನೂ ವೈಕುಂಠಕ್ಕೆ ಕರೆತರುವೆನು, ಇದರಲ್ಲಿ ಯಾವ ಸಂಶಯವೂ ಬೇಡ'- ಎಂದು, ಅದರಂತೆ ಕುರುಕಾನಗರಿಯಲ್ಲಿ ಕಾರಿಸೂನುವಾಗಿ ಹುಟ್ಟಿದರು. ಹುಟ್ಟಿದ ಕೂಡಲೇ ಕಲಿಮಯವಾಗಿರುವ ಈ ಪ್ರಪಂಚವನ್ನು ಕಂಡು ಕಣ್ಣು ಮುಚ್ಚಿಕೊಂಡು, ತನ್ನ ಹದಿನಾರನೆಯ ವಯಸ್ಸಿನವರೆಗೂ ಹುಣಸೆಮರದ ಪೊಟರೆಯಲ್ಲಿಯೇ ಕುಳಿತಿದ್ದರು. ಕೆಲವು ದಿನಗಳ ಹಿಂದೆ ಶಠಾರಾಶಿಯು ನಾಚಿಕೆಯಿಂದ -'ಯಾವ ಮಹಾಮಹಿಮನು ಜಗತ್ತನ್ನುದ್ಧರಿಸಲು ಚಿಂತಿಸುತ್ತಿದ್ದನೋ ಅಂಥ ಕೆಲಸವನ್ನು ಮಾಡುವೆನೆಂದು ನಾನು ವ್ಯರ್ಥವಾಗಿ ಪ್ರತಿಜ್ಞೆ ಮಾಡಿದೆನಲ್ಲ ! ಇದು ಅಸಾಧ್ಯ ಈ ಕಲಿಯುಗದಲ್ಲಿ ನಾಲ್ಕುಸಾವಿರ ವರ್ಷಗಳು ಕಳೆದ ಮೇಲೆ ಶೇಷನು ರಾಮಾನುಜರಾಗಿ ಅವತರಿಸುವನು. ಆತನ ಸಂಬಂಧದಿಂದ ಎಲ್ಲರೂ ಪಾಪರಹಿತರಾಗಿ ಪುನರಾವೃತ್ತಿಯಿಲ್ಲದ ಲೋಕವನ್ನು ಹೊಂದುವರು' ಎಂದು ಹೇಳಿದುದಲ್ಲದೇ ತನ್ನ ಕೃತಿಯಲ್ಲಿಯೂ ಇದೇ ಅಭಿಪ್ರಾಯವನ್ನು ಯಮನು ನಿರ್ವ್ಯಾಪಾರನಾಗುವನೆಂದೂ, ಕಲಿಯು ನಷ್ಟನಾಗುವೆಂದೂ ಯೋಚಿಸಿ, ತಾನು ಬಂದಂತೆಯೇ ಸ್ವಸ್ಥಾನವನ್ನು ಹೊಂದಿದನು.

ನಾಥಮುನಿಗಳು ಒಂದು ದಿನ ಕೆರೆಯಲ್ಲಿ ಸ್ನಾನಮಾಡುತ್ತ 'ಈ ಕೆರೆಯ ನೀರು ಕಾಲುವೆಗಳ ಮೂಲಕ ಹರಿದು ಸಸ್ಯಗಳನ್ನು ಪೋಷಿಸುವಂತೆ, ಶ್ರೀಯಃಪತಿಯೆಂಬ ಮಹಾಸಾಗರದಿಂದ ಹೊರಟ ವೇದಾರ್ಥವೆಂಬ ನೀರು ರಾಮಾನುಜಾಚಾರ್ಯರೆಂಬ ಮಡುವಿಗೆ ಬಂದು ಚತುಸ್ಸಪ್ತತಿ ಪೀಠಗಳ ಆಚಾರ್ಯರೆಂಬ ಕಾಲುವೆಗಳ ಮೂಲಕ ಪ್ರಾಣಿ ಸಸ್ಯಗಳನ್ನು ಪೋಷಿಸುತ್ತದೆ'- ಎಂದರು.

ಯಾಮುನಾಚಾರ್ಯರು ರಾಮಾನುಜರ ವೈಭವವನ್ನು ಕೇಳಿ, ಶ್ರೀರಂಗದಿಂದ ಕಾಂಚಿಗೆ ಹೋಗಿ -'ಈ ಸುಂದರನೂ ಮಹಾತ್ಮನೂ ಆದ ವ್ಯಕ್ತಿಯು ವೈಷ್ಣವ ಮತದಲ್ಲಿ ಪ್ರವೇಶಿಸುವುದಾದರೆ ಜನಸಮುದಾಯವೇ ಮಹಾಭಾಗವತರಾಗುವುದರಲ್ಲಿ ಸಂಶಯವಿಲ್ಲ'- ಎಂದರು.

ಇನ್ನೊಂದು ದಿನ ರಾಮಾನುಜಾಚಾರ್ಯರು ಪೂರ್ಣಾಚಾರ್ಯರನ್ನು ನೋಡಲು ಅವರ ಮನೆಗೆ ಹೋದರು. ಪೂರ್ಣಾಚಾರ್ಯರು ಎದ್ದು ನಮಸ್ಕರಿಸಿದರು. ಇದನ್ನು ನೋಡಿಪೂರ್ಣಾಚಾರ್ಯರ ಮಗಳು -'ಆಚಾರ್ಯರಾದ ನೀವು ಶಿಷ್ಯರು ಬಂದರೆ ಹೀಗೆ

ಮಾಡಬಹುದೆ?'- ಎಂದು ಕೇಳಲು ಅವರು 'ಈ ಲೋಕದಲ್ಲಿ ರಾಮಾನುಜಾಚಾರ್ಯರಿಗೆ ಸಮನಾಗಲಿ, ಅಧಿಕವಾಗಲಿ, ಯಾರೂ ಇಲ್ಲ, ಆದುದರಿಂದ ನಮಸ್ಕರಿಸಿದೆನು'- ಎಂದರು.

ಮತ್ತೊಂದು ದಿನ ಆಚಾರ್ಯರು ಶಿಷ್ಯರೊಡನೆ ಬೀದಿಯಲ್ಲಿ ಬರುತ್ತಿರಲು, ಪೂರ್ಣಾಚಾರ್ಯರು ಅವರಿಗೆ ದಂಡವತ್ಪ್ರಣಾಮಮಾಡಿದರು. ಆಗ ಶಿಷ್ಯರು ರಾಮಾನುಜಾಚಾರ್ಯರನ್ನು ವಿಚಾರಿಸಲು, -'ಆಚಾರ್ಯರ ಅಪ್ಪಣೆಯಂತೆ ಶಿಷ್ಯರು ನಡೆದುಕೊಳ್ಳಬೇಕಾದುದು ಯುಕ್ತವಷ್ಟೆ. ಅದರಂತೆ ಅವರ ಪ್ರಣಾಮವನ್ನು ಸ್ವೀಕರಿಸಿ, ಪ್ರತಿ ಪ್ರಣಾಮ ಮಾಡಬೇಕಾಯಿತು'- ಎಂದರು. ಇಷ್ಟರಿಂದಲೇ ತೃಪ್ತರಾಗದೆ ಆ ವೈಷ್ಣವರು ಪೂರ್ಣಾಚಾರ್ಯರನ್ನು -'ನೀವು ಆಚಾರ್ಯರಾಗಿ ಶಿಷ್ಯನಿಗೆ ಬೀದಿಯಲ್ಲಿ ಹೀಗೆ ನಮಸ್ಕರಿಸಬಹುದೆ?'- ಎಂದು ಕೇಳಲು, ಅವರು -'ಈ ಯತಿರಾಜರಲ್ಲಿ ಯಾಮುನಾಚಾರ್ಯರ ಸಕಲ ಗುಣಗಳೂ ಕಂಡುಬರುತ್ತಿವೆ. ನೋಡಿದ ಕೂಡಲೇ ನಮ್ಮ ಆಚಾರ್ಯರನ್ನು ಕಂಡಂತೆಯೇ. ಆದುದರಿಂದ ನಮಸ್ಕರಿಸಿದೆನು. ಇಷ್ಟೇ ಅಲ್ಲದೆ ಯಾಮುನಾಚಾರ್ಯರ ಸ್ಥಾನದಲ್ಲಿ ಇವರಲ್ಲದೇ ಮತ್ತಾರೂ ಯೋಗ್ಯವಲ್ಲ'- ಎಂದರು.

ಗೋಷ್ಠೀಪೂರ್ಣರು ಮಂತ್ರಶ್ರವಣದ ಸಮಯದಲ್ಲಿ 'ಯಾರಿಗೂ ಹೇಳುವುದಿಲ್ಲ'ವೆಂದು ಆಚಾರ್ಯರಿಂದ ಪ್ರತಿಜ್ಞೆಯನ್ನು ಮಾಡಿಸಿಕೊಂಡು ರಹಸ್ಯವಾಗಿ ಮಂತ್ರವನ್ನು ಉಪದೇಶಿಸಿದರು. ಆಚಾರ್ಯರಾದರೋ ಒಂದು ಉತ್ಸವ ಪ್ರಸಂಗದಲ್ಲಿ ಬಂದಿದ್ದ ವೈಷ್ಣವರೆಲ್ಲರನ್ನೂ ಕರೆದು ಬಹಿರಂಗವಾಗಿ ಮಂತ್ರೋಪದೇಶಮಾಡಿದರು. ಇದನ್ನು ಕೇಳಿದ ಗೋಷ್ಠೀಪೂರ್ಣರು ಆಚಾರ್ಯರನ್ನು ಕರೆಸಿ, ವಿಚಾರಿಸಲಾಗಿ, ಈ ಆಜ್ಞೋಲ್ಲಂಘನೆಯ ಫಲವು ನರಕವೆಂದು ನನಗೆ ಗೊತ್ತು. ಆದರೂ ತಮ್ಮ ಕರುಣೆಯಿಂದ ಲಬ್ಧವಾದ ಮಂತ್ರವನ್ನು ಎಲ್ಲರಿಗೂ ತಿಳಿಸಿದ್ದರಿಂದ ಎಲ್ಲರೂ ಒಳ್ಳೆಯ ಗತಿಯನ್ನು ಹೊಂದಲಿ; ನಾನೊಬ್ಬ ಮಾತ್ರ ನರಕಕ್ಕೆ ಹೋದರೆ ಬಾಧಕವಿಲ್ಲ- ಎಂದರು. ಆಗ ಗೋಷ್ಠೀಪೂರ್ಣರು ಆಚಾರ್ಯರ ಔದಾರ್ಯವನ್ನು ಕಂಡು, -'ಲೋಕದಲ್ಲಿ ತನ್ನ ಅನರ್ಥವನ್ನೂ ಪರರ ಶ್ರೇಯಸನ್ನೂ ಅಪೇಕ್ಷಿಸುವವರೂ ಉಂಟೇ? ಈತನು ವೈಕುಂಠದಿಂದ ಅವತರಿಸಿರುವ ಪರಮಾತ್ಮನ ಅಂಶವೆಂದು ತಿಳಿದು-'ಮನ್ನಾಥ' (ಎಂಬೆರುಮಾನಾರ್) (ನನಗೆ ನೀನೇ ಶ್ರೀರಂಗನಾಥನು)'- ಎಂದು ನಾಮಕರಣ ಮಾಡಿದರು.

ಇನ್ನೊಂದು ಸಲ ಮಾಲಾಧರಗುರುವು ಆಚಾರ್ಯರಿಗೆ ಸಹಸ್ರಗೀತೆ (ತಿರುವಾಯ್ಮೊಳಿ)ಯ ಅರ್ಥವನ್ನು ವಿವರಿಸುತ್ತಿದ್ದರು. ಆಚಾರ್ಯರು ಸ್ವತಂತ್ರ್ಯಾನುಸಾರವಾಗಿ ಮತ್ತೊಂದು ಅರ್ಥವನ್ನು ಹೇಳಿದರು. ಈ ವಿಶ್ವಾಮಿತ್ರ ಸೃಷ್ಟಿಯು ನನ್ನ ಬಳಿ ನಡೆಯಲಾರದು. ಮಠವನ್ನು ಬಿಟ್ಟು ಹೊರಡು ಎನಲು, ಆಚಾರ್ಯರು ಹೊರಟು ಹೋದರು. ಇದನ್ನು ಕೇಳಿದ ಗೋಷ್ಠೀಪೂರ್ಣರು ಶ್ರೀರಂಗಕ್ಕೆ ಬಂದು, ಶ್ರೀಕೃಷ್ಣ ಸಾಂದೀಪನಿ ಇವರ ಗುರುಶಿಷ್ಯ ಭಾವವನ್ನು ನೆನಪಿಗೆ ತಂದುಕೊಟ್ಟು ಸಮಾಧಾನಮಾಡಲು, ಮತ್ತೆ ಕಾಲಕ್ಷೇಪವು ಆರಂಭವಾಯಿತು. ಹೀಗಿರುವಾಗ, ಒಂದು ಪದ್ಯಕ್ಕೆ ಯಾಮುನಾಚಾರ್ಯರ ಅಭಿಪ್ರಾಯವು ಹೀಗಿರಬೇಕೆನಲು, ಮಾಲಾಧರಗುರುವು - ನೀವು ಯಾಮುನಾಚಾರ್ಯರನ್ನು ಕಂಡಿದ್ದಿಲ್ಲ, ಕೇಳಿದ್ದಿಲ್ಲ, ಅವರ ಅಭಿಪ್ರಾಯವು ನಿಮಗೆ ಹೇಗೆ ಗೊತ್ತು? ಎನಲು, ಆಚಾರ್ಯರು - 'ನಾನು ಯಾಮುನಾಚಾರ್ಯರಿಗೆ ಏಕಲವ್ಯನು' ಎಂದರು.

ಕೊನೆಗೆ ಆಚಾರ್ಯರು, ಚರಮೋಪಾಯ ತತ್ವಾರ್ಥವನ್ನು ತಿಳಿಯಲು ಇಷ್ಟವುಳ್ಳವರಾಗಿ,

ಯಾಮುನಾಚಾರ್ಯರ ಮಗನಾದ ವರರಂಗನು ರಂಗನಾಥನ ಸನ್ನಿಧಿಯಲ್ಲಿ ನಾಟ್ಯಮಾಡಿಬರಲು, ಪ್ರತಿದಿನವೂ ಆತನ ಕೈಕಾಲುಗಳನ್ನು ಅಮುಕಿ, ಅಭ್ಯಂಜನಾದಿಗಳಿಂದ ಶುಶ್ರೂಷೆ ಮಾಡುತ್ತಿದ್ದರು. ಇದನ್ನು ಕಂಡ ವರರಂಗನು ನಗುತ್ತ -'ನನ್ನ ಸರ್ವಸ್ವವನ್ನೂ ಅಪಹರಿಸಬೇಕೆಂದಿರುವಿರೋ?'- ಎಂದು ಹೇಳುತ್ತ ತತ್ವಾರ್ಥವನ್ನು ಅನುಗ್ರಹಿಸಿದನು. ಮತ್ತು ತನಗೆ ಮಕ್ಕಳಿಲ್ಲದ್ದರಿಂದ ತಮ್ಮನಾದ ಚೊಟ್ಟನಂಬಿಯನ್ನು ಅವರ ಶಿಷ್ಯನನ್ನಾಗಿ ಮಾಡಿ ಕೃತಾರ್ಥನಾದನು.

ಹೀಗೆ ಪೂರ್ವಾಚಾರ್ಯರೆಲ್ಲರೂ ಆಚಾರ್ಯರ ವೈಭವವನ್ನು ಬೆಳಕಿಗೆ ತಂದರು -

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಪೂರ್ವಾಚಾರ್ಯ ಪ್ರಕಾಶಿತ ರಾಮಾನುಜ ವೈಭವ ವರ್ಣನವೆಂಬ ಅರವತ್ತನೆಯ ಅಧ್ಯಾಯವು ಮುಗಿದುದು.

## ೬೧

ಕಾಂಚೆಯಲ್ಲಿ ಶ್ರೀವೈಷ್ಣವಕುಲದಲ್ಲಿ ಒಬ್ಬ ಮೂಕನು ಹುಟ್ಟಿದನು. ಅವನು ಕೆಲವು ದಿನಗಳ ಕಾಲ ಅದೃಶ್ಯನಾಗಿದ್ದು ಮತ್ತೆ ಕಾಣಿಸಿಕೊಂಡನು. ಮೂಗುತನವೂ ಹೋಗಿತ್ತು. ಆಶ್ಚರ್ಯಚಕಿತರಾದ ಜನರು ಇದೇನೆಂದು ಕೇಳಲು ಆತನು -'ನಾನು ಕ್ಷೀರಸಾಗರಕ್ಕೆ ಹೋಗಿ ಶೇಷಶಯನನೂ, ಜಗತ್ಪತಿಯೂ ಆದ ಶ್ರೀಮನ್ನಾರಾಯಣನನ್ನು ನೋಡಿಕೊಂಡು ಬಂದೆನು' ಎಂದನು. ಮತ್ತು ಅಲ್ಲಿ ವಿಶೇಷವೇನು? ಎಂದು ಅವರು ಕೇಳಲು, ಕ್ಷೀರಸಾಗರ ನಿವಾಸಿಗಳು-ಜಗತ್ಸಂರಕ್ಷಣೆಗಾಗಿ ವಿಶ್ವಕ್ಸೇನನು ಭೂಲೋಕದಲ್ಲಿ ಶ್ರೀಪೆರಂಬೂದೂರಿನಲ್ಲಿ ರಾಮಾನುಜನಾಗಿ ಅವತರಿಸಿರುವನು - ಎಂದು ಹೇಳಿ ಮತ್ತೆ ಅದೃಶ್ಯನಾದನು.

ಹಿಂದೆ ಕಾಂಚೀನಗರದಲ್ಲಿ ಆಚಾರ್ಯರಿಂದ ಬಿಡಿಸಲ್ಪಟ್ಟ ಬ್ರಹ್ಮರಾಕ್ಷಸವು ಎಲ್ಲರೂ ಕೇಳುವಂತೆ, ಯಾದವಪ್ರಕಾಶರನ್ನು ಕುರಿತು:-'ಈ ಜಗತ್ತಿನಲ್ಲಿ ಲೀಲಾಮಾನುಷ-ವಿಗ್ರಹರಾದ ಈ ರಾಮಾನುಜರು ನಿತ್ಯಸೂರಿಗಳಲ್ಲಿ ಮುಖ್ಯರಾದವರು. ಈಗ ಭೂಲೋಕದಲ್ಲಿ ಜಗತ್ಸಂರಕ್ಷಣೆಗಾಗಿಯೇ ಅವತರಿಸಿರುವರು. ಇವರನ್ನು ಆಶ್ರಯಿಸಿ ವಿಷ್ಣುವಿನ ಪರಮಪದವನ್ನು ಹೊಂದು'- ಎಂದಿತು.

ಆಂಧ್ರಪೂರ್ಣರು ವೈಷ್ಣವರನ್ನು ಸಂಬೋಧಿಸಿ -'ಈ ಜಗತ್ತಿನಲ್ಲಿ ಆಚಾರ್ಯ ಪದವೆಂಬ ಮಹತ್ವವನ್ನು ಹೊಂದಿರುವುದಾದರೆ ಅದು ಈ ಯತಿಶ್ರೇಷ್ಠನಲ್ಲಿಯೇ. ಯತೀಂದ್ರನ ಪಾದಾಬ್ಜವನ್ನು ಬಿಟ್ಟರೆ ಮತ್ತೊಂದು ಉಪಾಯವಿಲ್ಲ. ಅದೇ ರಕ್ಷಕವೆಂದು ದೃಢವಾಗಿ ನಂಬಿಕೊಂಡಿರಿ'- ಎಂದರು.

ಕೃಷ್ಣಗ್ರಾಮಾಧಿಪತಿಯಾದ ಬಾಲಸ್ವಾಮಿಯು ಸಚೇಲಸ್ನಾನಮಾಡಿ -'ಆಚಾರ್ಯರ ಪಾದಾಬ್ಜವಲ್ಲದೇ ಮತ್ತೊಂದುಪಾಯವಿಲ್ಲ'ವೆಂದು ಪ್ರತಿಜ್ಞೆ ಮಾಡಿದನು.

ದೇವರಾಜಮುನಿಯು ಆಚಾರ್ಯರ ಅಪ್ಪಣೆಯಂತೆ, ಅನಂತಾರ್ಯರೇ ಮೊದಲಾದ ಶಿಷ್ಯರಿಗೆ ಪಂಚಸಂಸ್ಕಾರವನ್ನು ಮಾಡಿ, -'ನಾನು ಮಾಡಿದರೂ ರಾಮಾನುಜಾಚಾರ್ಯರೇ ಮಾಡಿದರೆಂದು ತಿಳಿಯಿರಿ ಮತ್ತು ಆಚಾರ್ಯರ ಪಾದಗಳೇ ರಕ್ಷಕವೆಂದು ತಿಳಿಯಿರಿ'- ಎಂದನು.

ಕೂರನಾಥರಿಗೆ ಪುತ್ರಪುತ್ರಾರ್ಯನೆಂಬ ಒಬ್ಬ ಶಿಷ್ಯನಿದ್ದನು. ಆತನು ಯಾವಾಗಲೂ, ಶ್ರೀವೈಷ್ಣವರಲ್ಲಿರುವ ದೋಷಗಳನ್ನು ಹುಡುಕುತ್ತಿದ್ದನು. ಇದು ಕೂರನಾಥರ ದೋಷವೇ ಎಂದು ಎಲ್ಲರೂ ಹೇಳುತ್ತಿದ್ದರು. ಇದನ್ನು ಕೇಳಿ ದುಃಖಿತರಾದ ಕೂರೇಶರು ಒಂದು ಪರ್ವಕಾಲದಲ್ಲಿ ಆ ಶಿಷ್ಯನಿಂದ ತಿಲೋದಕಪೂರ್ವಕವಾಗಿ ಅವನ ಕರಣತ್ರಯವನ್ನೂ ತೆಗೆದು ಕೊಂಡರು. ಅಂದಿನಿಂದ ಆ ಶಿಷ್ಯನು ಏಕಾಂತದಲ್ಲಿ ಕುಳಿತು,ತನ್ನ ಗುರುವಿನ ಪಾದಾಂಬುಜದ ಧ್ಯಾನದಲ್ಲಿಯೇ ಇರುತ್ತಿದ್ದನು. ಕೆಲವು ದಿನಗಳು ಕಳೆದಮೇಲೆ ಒಂದುದಿನ ಮನೆಯಿಂದ ಹೊರಗೆ ಬಂದು, ಅಲ್ಲಿ ಹೋಗುತ್ತಿದ್ದ ಶ್ರೀವೈಷ್ಣವನನ್ನು ನೋಡಿದನು. ನೋಡುತ್ತಲೇ, ಇವನ ಮನಸ್ಸಿನಲ್ಲಿ ಆತನ ದುರ್ಗುಣಗಳು ತೋರಿದವು. ಕೂಡಲೇ -ನಾನು ದಾನ ಮಾಡಿರುವ ಕರಣತ್ರಯದಲ್ಲಿ ನನಗೆ ಅಧಿಕಾರವಿಲ್ಲವಾದುದರಿಂದ ನಾನು ಮಾಡಿದುದು ತಪ್ಪು ಎಂದು ಚಿಂತಿಸಿ ಪ್ರಾಯೋಪವೇಶಕ್ಕಾರಂಭಿಸಿದನು. ಈ ವಿಚಾರವು ಕೂರನಾಥರಿಗೆ ತಿಳಿಯಲಾಗಿ ಇವನ ಮನೆಗೆ ಬಂದು -'ನಿನ್ನ ಕರಣತ್ರಯವನ್ನು ನಿನಗೆ ಹಿಂದಕ್ಕೆ ಕೊಟ್ಟಿರುತ್ತೇನೆ. ಪರಾಪವಾದವನ್ನು ಚಿಂತಿಸಿರುವುದಾದರೆ ಯತೀಂದ್ರರ ಪಾದಗಳನ್ನು ಸ್ಮರಿಸು. ಪರಾಪದವಾದವನ್ನು ಬಿಡು. ವಾಕ್ಕಾಯಗಳಿಂದ ತಪ್ಪು ಮಾಡಿದರೆ ರಾಜನು ಶಿಕ್ಷಿಸುತ್ತಾನೆ. ಮನಸ್ಸಿನಿಂದಾದ ತಪ್ಪಿಗೆ ಶಿಕ್ಷಕರು ಆಚಾರ್ಯರು. ಪ್ರಮಾದದಿಂದ ಸರ್ವಪಾಪಗಳಿಗೂ ಆಚಾರ್ಯರ ಪಾದಪಂಕಜ ಸ್ಮರಣಯೇ ಪ್ರಾಯಶ್ಚಿತ್ತವು.'- ಎಂದು ಉಪದೇಶಿಸಿದರು.

ಒಂದು ಪುಣ್ಯಕಾಲದಲ್ಲಿ ಶ್ರೀರಂಗದಲ್ಲಿ ಕಾವೇರಿಯ ತೀರದ ಮರಳಿನಲ್ಲಿ ವಿದ್ವಾಂಸ ರೆಲ್ಲರೂ ಸೇರಿದ್ದರು. ತತ್ವಾರ್ಥದ ಗೊಂದಲದಲ್ಲಿ ಮೋಕ್ಷೋಪಾಯವು ಯಾವುದೆಂದು ಭಾರಿ ಚರ್ಚೆಯಾಗುತ್ತಿತ್ತು. ಆಗ ಎರಡನೆಯ ವೇದವ್ಯಾಸನಂತೆ ಕೂರೇಶರು ಸಚೇಲ ಸ್ನಾನಮಾಡಿ,ಆ ಸಭಾಮಧ್ಯದಲ್ಲಿ ನಿಂತು ಕೈಯನ್ನು ಮೇಲಕ್ಕೆತ್ತಿ, 'ಸತ್ಯಂ ಸತ್ಯಂ ಪುನಸತ್ಯಂ ಯತಿರಾಜೋ ಜಗದ್ಗುರುಃ। ಸ ಏವ ಸರ್ವಲೋಕಾನಾಂ ಸಮುದ್ಧರ್ತಾ ನ ಸಂಶಯಃ'- ಎಂದರು.

ಮರೀಚನೆಂಬ ಶ್ರೀವೈಷ್ಣವನಿಗೂ ದಾಶರಥಿಗೂ ಒಂದು ಸಲ ವಾದವು ನಡೆಯಿತು. ಆ ವಾದದಲ್ಲಿ ಗೆದ್ದವರನ್ನು ಸೋತವರು ಹೊತ್ತು ಕೊಂಡು ಹೋಗಬೇಕೆಂದು ಪಂದ್ಯವಿತ್ತು. ದಾಶರಥಿಯಿಂದ ಮರೀಚನು ಸೋತುಹೋಗಲಾಗಿ, ಆತನು ದಾಶರಥಿಯನ್ನು ಭುಜದಮೇಲೆ ಹೊತ್ತುಕೊಂಡು ರಾಜಬೀದಿಗೆ ಬಂದು, ಅಲ್ಲಿ ಇಳಿಸಿ ಪ್ರದಕ್ಷಿಣೆ ಮಾಡಿ ಹಿತೋಪದೇಶ ಮಾಡಿ ಅನುಗ್ರಹಿಸು'- ಎಂದು ಪ್ರಾರ್ಥಿಸಿಕೊಂಡನು. ಆಗ ದಾಶರಥಿಯು ಆತನನ್ನು ಯತಿರಾಜರ ಸನ್ನಿಧಿಗೆ ಕರೆದುಕೊಂಡು ಹೋಗಿ, ಆಚಾರ್ಯರಿಗೆ ಪ್ರಣಾಮಮಾಡಿಸಿ -'ರಾಮಾನುಜ ಪಾದಾಂಬುಜವನ್ನೇ ಶರಣವನ್ನಾಗಿ ಹೊಂದು'- ಎಂದು ಹಿತವನ್ನು ಉಪದೇಶಿಸಿದನು.

ಲೋಕಾರ್ಯನೆಂಬ ಶ್ರೀವೈಷ್ಣವನು,ಮಹಾತ್ಮನಾದ ಗೋವಿಂದನನ್ನು ಕುರಿತು 'ಎಲೈ ಗೋವಿಂದ ಭಗವದ್ವಿಷಯದ ಅರ್ಥವು ನನಗೆ ಚೆನ್ನಾಗಿ ಗೊತ್ತಿದೆಯೆಂದೂ ಶಿಷ್ಯರಿಗೆಲ್ಲ ಸಕಲಶಾಸ್ತ್ರಾರ್ಥಗಳ ಪ್ರವಚನ ನಡೆಸುವೆನೆಂದೂ ಗರ್ವಪಡಬೇಡ. ಯೋಗೀಂದ್ರರ ಪಾದಾಂಬುಜವನ್ನೇ ಶರಣವನ್ನಾಗಿ ಆಶ್ರಯಿಸು'- ಎಂದು ಹಿತವನ್ನು ನುಡಿದನು.

ಗೋವಿಂದನು ಪರಾಶರಭಟ್ಟರನ್ನು ಕುರಿತು -'ಎಲೈ ವತ್ಸ, ಮೋಕ್ಷಕ್ಕೆ ಒಂದೇ ಒಂದಾದ ಕಾರಣವನ್ನು ತಿಳಿಸುವೆನು ಕೇಳು. ರಂಗನಾಥನೇ ನನ್ನನ್ನು ಪುತ್ರನನ್ನಾಗಿ ಅಂಗೀಕರಿಸಿರುವನು. ನಾನು ಕೂರೇಶ್ವರನ ಮಗನು. ಸಕಲ ಶಾಸ್ತ್ರಗಳನ್ನು ಓದಿರುತ್ತೇನೆ. ವಿದ್ವಾಂಸ, ಮಹಾಕುಲೀನ ಶ್ರೀಮಂತನೆಂದು, ಅಹಂಕಾರ ಪಡಬೇಡ. ಅವುಗಳೆಲ್ಲವೂ ರಕ್ಷಕಗಳಲ್ಲ. ಯತೀಂದ್ರರ ಪದಪಂಕಜವೇ ರಕ್ಷಕವೆಂದು ನಂಬಿಕೆಯಿಡು. ಇದಲ್ಲದೇ ಬೇರೆ ಉಪಾಯವಿಲ್ಲ-' ಎಂದು ಹೇಳಿದನು.

ಶ್ರೀಪರಾಶರಭಟ್ಟನು ತನ್ನ ಶಿಷ್ಯನಾದ ವೇದಾಂತಿಗೆ -'ನಾನು ರಂಗನಾಥನ ಪುತ್ರನಾದ ಭಟ್ಟಾರ್ಯನನ್ನು ಆಶ್ರಯಿಸಿರುವೆನೆಂದೂ, ಗುರುವಿಗೆ ಅಪರಿಮಿತವಾದ ಗುರುದಕ್ಷಿಣೆಯನ್ನು ಕೊಟ್ಟಿರುವೆನೆಂದೂ, ಕೃತಕೃತ್ಯನಾದೆನೆಂದೂ, ನಿಶ್ಚಿಂತವಾಗಿರಬೇಡ. ಎಲೈ ವಿದ್ವಾಂಸನೇ, ಮನ್ನಾಥನ ದಿವ್ಯಚರಣಗಳೇ ರಕ್ಷಕವೆಂದು ತಿಳಿದು ಅದರಂತೆ ನಡೆದುಕೋ'- ಎಂದು ತಿಳಿಸಿದನು.

ಶ್ರೀರಾಮಕ್ರತುನಾಥಾರ್ಯ(ಸೋಮಯಾಜಿಯಾಂಡಾನ್)ರು ಕೂರನಾಥರಲ್ಲಿ ಶ್ರೀಭಾಷ್ಯ ವನ್ನು ಮೂರುಸಾರಿ ಅಧ್ಯಯನ ಮಾಡಿದರು. ಕೊನೆಗೆ ತನ್ನ ಊರಿಗೆ ಹೋಗುವಾಗ -'ಎಲೈ ಗುರುವೆ, ಜ್ಞಾನ, ಭಕ್ತಿ ಮೊದಲಾದುವುಗಳಿಂದ ಕೂಡಿಯೂ, ಸುಲಭವೂ ಆದ ಮೋಕ್ಷೋಪಾಯವು ಯಾವುದು?'- ಎಂದು ಕೂರನಾಥರನ್ನು ಪ್ರಾರ್ಥಿಸಲು, ಅವರು -'ನಾನು ಪ್ರಾಭಾಕರಾದಿ ಶಾಸ್ತ್ರಗಳೆಲ್ಲವನ್ನೂ ಓದಿರುವೆನೆಂದು ಗರ್ವಿಸಬೇಡ. ಯತೀಂದ್ರರ ಪದಪಂಕಜವೇ ಉಪಾಯವೆಂದು ತಿಳಿ'- ಎಂದು ಅರುಹಿದರು.

ನಾರಾಯಣಪುರದಲ್ಲಿ ವ್ಯಾಸಭಟ್ಟನೆಂಬ ಶ್ರೀವೈಷ್ಣವನು ಯತೀಂದ್ರರ ಸನ್ನಿಧಿಯಲ್ಲಿಯೇ ಶಿಷ್ಯರಿಗೆ ಶ್ರೀಭಾಷ್ಯಪ್ರವಚನವನ್ನು ನಡೆಸುತ್ತಿದ್ದನು. ಅದರ ಅರ್ಥವನ್ನು ಕೇಳಿ ಆಶ್ಚರ್ಯಗೊಂಡ ಶಿಷ್ಯರು - ಶ್ರೀಭಾಷ್ಯದ ಅರ್ಥವು ಗಂಗಾಪ್ರವಾಹದಂತಿದೆ. ಇದನ್ನು ಮನನ ಮಾಡುವುದು ಸುಲಭವಲ್ಲ. ಇದಕ್ಕಿಂತಲೂ ಸುಲಭೋಪಾಯವೇನಾದರೂ ಉಂಟೆ? ಎನಲು ಆತನು ಎಲ್ಲರೂ ತಿಳಿಸಿದಂತೆಯೇ ತಿಳಿಸಿದನು.

ಹೀಗೆ ಚತುಸ್ಸಪ್ತತಿ ಪೀಠಗಳ ಆಚಾರ್ಯರಿಂದಲೂ, ಬೆಳಗಿಸಲ್ಪಟ್ಟ ವೈಭವವುಳ್ಳ ಆಚಾರ್ಯರು ಶ್ರೀರಂಗದಲ್ಲಿಯೇ ಇದ್ದು ಜಗದ್ರಕ್ಷಣ ಪರರಾಗಿರುತ್ತಿದ್ದರು.

ಶಾಶ್ವತವಾಗಿಯೂ ನಿಖಿಲವೇದಾಂತಸಾರವೂ, ವಿದ್ವಾಂಸರಿಗೆ ಜೀವಭೂತವೂ ಆದ ವಿಚಾರವನ್ನು ತಿಳಿದು ಆಚಾರ್ಯರಲ್ಲಿ ಭಕ್ತಿಯುಳ್ಳವರು ವಿಷ್ಣುಪದವನ್ನು ಹೊಂದುವರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಮೂಕ, ಕೂರೇಶಾದಿಗಳಿಂದ ಪ್ರಕಾಶಿತವಾದ, ರಾಮಾನುಜನ ವೈಭವ ವರ್ಣನೆ ಎಂಬ ಅರವತ್ತೊಂದನೆಯ ಅಧ್ಯಾಯವು ಮುಗಿದುದು.

## ೬೨

ರಂಗೇಶನೇ ಮೊದಲಾದವರಿಂದ ಪ್ರಕಾಶಿತವಾದ ವೈಭವವುಳ್ಳ ಆಚಾರ್ಯರು ನಾಥಮುನಿಯೇ ಮೊದಲಾದ ಪೂರ್ವಾಚಾರ್ಯರಿಗಿಂತಲೂ, ಶ್ರೇಷ್ಠರೆಂದು ಹೇಳುವುದರಲ್ಲಿ

ಸಂಶಯವಿಲ್ಲ.

ವಿಷ್ಣುವಿನ ಅಪರಿಮಿತವಾದ ಅವತಾರಗಳಿದ್ದರೂ, ದಶಾವತಾರಗಳೂ, ಅವುಗಳಲ್ಲಿಯೂ ನೃಸಿಂಹ, ರಾಮ, ಕೃಷ್ಣಾವತಾರಗಳೂ ಹೇಗೆ ಮುಖ್ಯವೋ, ತಪೋನಿಷ್ಠರಾದ ಋಷಿಗಳಲ್ಲಿ ವ್ಯಾಸನೇ ಮೊದಲಾದವರು ಹೇಗೆ ಮುಖ್ಯರೋ, ಅಷ್ಟೋತ್ತರ (೧೦೮) ದಿವ್ಯದೇಶಗಳಲ್ಲಿ ಶ್ರೀರಂಗ, ವೇಂಕಟಾದ್ರಿ, ಹಸ್ತಿಗಿರಿ, ಯಾದವಾಚಲಗಳು ಹೇಗೆ ಮುಖ್ಯವೋ, ಸರೋಯೋಗಿಯೇ ಮೊದಲಾದವರಲ್ಲಿ ಶಠಕೋಪನು ಹೇಗೆ ಮುಖ್ಯವೋ ಹಾಗೆ, ನಾಥಮುನಿಯೇ ಮೊದಲಾದ ಶ್ರೇಷ್ಠರಾದ ಪೂರ್ವಾಚಾರ್ಯರಲ್ಲಿ ಲಕ್ಷ್ಮಣಾಚಾರ್ಯರೇ ಮುಖ್ಯರಾದರು.

ಸ್ತಂಭದಲ್ಲಿ ಹುಟ್ಟಿದುದೂ ವಾತ್ಸಲ್ಯದಿಂದ ಪ್ರಹ್ಲಾದನಿಗೆ ವರಕೊಟ್ಟಿದುದೂ ಹಿರಣ್ಯ ಕಶಿಪುವನ್ನು ಕೊಂದುದೂ, ಮೊದಲಾದವು ನೃಸಿಂಹನಿಂದ ನಡೆದವಾದ್ದರಿಂದ ನೃಸಿಂಹವತಾರಕ್ಕೆ ಪ್ರಾಧಾನ್ಯವುಂಟಾಯಿತು. ಇದ್ದಕ್ಕಿದ್ದಂತೆ ರಾಕ್ಷಸರಾಜ, ಕಪಿರಾಜರಿಗೆ ಅಭಯಕೊಟ್ಟುದೂ, ನಿಷಾಧಾಧಿಪತಿಯಾದ ಗುಹನೊಡನೆ ಸ್ನೇಹಮಾಡಿಕೊಂಡುದೂ, ಜಟಾಯುವನ್ನು ಬ್ರಹ್ಮಮೇಧಸಂಸ್ಕಾರದಿಂದ ಸಂಸ್ಕರಿಸಿದುದೂ, ಶಬರಿಯ ಕೈಯಿಂದ ಪ್ರೀತಿಪೂರ್ವಕವಾಗಿ ಭುಂಜಿಸಿದುದೂ, ಶ್ರೀರಾಮನಿಂದಲೇ ಆದುದರಿಂದ, ರಾಮಾವತಾರವೂ ಮುಖ್ಯವಾಯಿತು. ಶ್ರೀಕೃಷ್ಣನು ಗೀತೋಪನಿಷತ್ತನ್ನೂ, ಚರಮಾರ್ಥೋಪದೇಶವನ್ನೂ, ಜಗತ್ತಿಗೆ ಕರುಣಿಸಿದನು. ಭೀಷ್ಮ, ದ್ರೋಣ, ಕೃಪ ಮೊದಲಾದವರ ಮನೆಯನ್ನು ಬಿಟ್ಟು ಜ್ಞಾನಿಯಾದ ವಿಧುರನ ಮನೆಯಲ್ಲಿ ಊಟಮಾಡಿದನು. ಅಷ್ಟೇ ಅಲ್ಲದೇ 'ದ್ವಿಷದನ್ನಂ ನಭೋಕ್ತವ್ಯಂ....... ಎಂಬುದಾಗಿ ದುರ್ಯೋಧನನ ಮನೆಯಲ್ಲಿ ಊಟವನ್ನು ತಿರಸ್ಕರಿಸಿದನು. ಆದುದರಿಂದಲೇ ಶ್ರೀಕೃಷ್ಣಾವತಾರವು ಮುಖ್ಯವೆಂದು ಎಣಿಸಲ್ಪಟ್ಟಿತು.

ಶ್ರೀರಂಗನಾಥನು ಮುನಿವಾಹನವನ್ನು ಕರುಣೆಯಿಂದ ತನ್ನ ಮಂದಿರಕ್ಕೆ ಕರೆಸಿ ಕೊಂಡುದರಿಂದ ಶ್ರೀರಂಗಕ್ಕೆ ಪ್ರಾಧಾನ್ಯವುಂಟಾಯಿತು. ಶ್ರೀವೇಂಕಟೇಶನು ಕುರಂಗಪೂರ್ಣ ನೊಡನೆಯೂ, ತೊಂಡಮಾನ್ ಚಕ್ರವರ್ತಿಯೊಡನೆಯೂ, ಯಾವಾಗಲೂ ಮಾತಾಡುತ್ತಿದ್ದ ರಿಂದ ವೇಂಕಟಾಚಲಕ್ಕೆ ಪ್ರಾಧಾನ್ಯವುಂಟಾಯಿತು. ಹಸ್ತಿಗಿರಿನಾಯಕನಾದ ವರದರಾಜನು ಕಾಂಚೀಪೂರ್ಣರೊಡನೆ ಸರಸವಾಗಿ ಸಂಭಾಷಣೆ ಮಾಡುತ್ತಿದ್ದರಿಂದ, ಕಾಂಚಿಯು ಪ್ರಸಿದ್ಧವಾಯಿತು. ವಿಷ್ಣುವರ್ಧನನಲ್ಲಿ ದಯೆಯಿಟ್ಟು ಅವನ ರಾಜ್ಯವು ತೊಂದರೆಯಿಲ್ಲದಿರಲು ಪ್ರೀತಿಯಿಂದ ಆಚಾರ್ಯರು ಅವನ ಆತಿಥ್ಯವನ್ನು ಸ್ವೀಕರಿಸಿ, ಸಂಪತ್ಕುಮಾರನನ್ನು ಕರೆತಂದರು. ಪರಮಾತ್ಮನೂ, ಆಚಾರ್ಯರ ಪುತ್ರನಾದನು. ಇದರಿಂದಲೇ ಎಲ್ಲ ವಿಷ್ಣುಸ್ಥಾನಗಳಿಗಿಂತಲೂ, ನಾರಾಯಣಗಿರಿಯು ಶ್ರೇಷ್ಠವೆನಿಸಿತು.

ವ್ಯಾಸಮಹರ್ಷಿಯು ಋಗಾದಿಚತುರ್ವೇದಗಳನ್ನು ವಿಸ್ತರಿಸಿ ಹೇಳಿ, ಕರ್ಮಕಾಂಡ, ಬ್ರಹ್ಮಕಾಂಡಗಳೆಂದು ಎರಡು ವಿಧವಾಗಿ ವಿಭಾಗಿಸಿ, ಬ್ರಹ್ಮಕಾಂಡದಲ್ಲಿಯೇ ತಾತ್ಪರ್ಯವನ್ನು ನಿಲ್ಲಿಸಿದರು. ಪುರುಷಸೂಕ್ತ ಛಾಂದೋಗ್ಯ, ವಾಜಸನೇಯ, ಶ್ವೇತಾಶ್ವ, ತೈತ್ತಿರೀಯ, ಮಹೋಪ ನಿಷತ್ತು, ಮೊದಲಾದ ಉಪನಿಷತ್ತುಗಳನ್ನೂ ವೇದೋಪಬೃಂಹಣಗಳಾದ ಇತಿಹಾಸ ಪುರಾಣಾದಿಗಳನ್ನೂ ರಚಿಸಿದರು. ಮತ್ತು "ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯಭುಜಮುಚ್ಯತೆ।

ವೇದಶಾಸ್ತ್ರಂ ಪರಂನಾಸ್ತಿ ನ ದೈವಂ ಕೇಶವಾತ್ಪರಂ॥''- ಎಂಬ ತತ್ವನಿರ್ಣಯವನ್ನು ಮಾಡಿದನು. ಆದ್ದರಿಂದ ಮಹರ್ಷಿಗಳಲ್ಲೆಲ್ಲಾ ವ್ಯಾಸನಿಗೆ ಪ್ರಾಧಾನ್ಯ ಉಂಟಾಯಿತು.

ಪರಾಶರಮುನಿಯು ಪುರಾಣರತ್ನ (ವಿಷ್ಣುಪುರಾಣ)ವನ್ನು ರಚಿಸಿ, ಅದರಲ್ಲಿ ಚಿತ್, ಅಚಿತ್, ಈಶ್ವರ ರೂಪವಾದ ತತ್ವತ್ರಯವನ್ನು ವಿಷದಪಡಿಸಿರುವರು. ಇದನ್ನು ನೋಡಿ, ಯಾಮುನಾಚಾರ್ಯರು ಅವರನ್ನು ನಮಸ್ಕರಿಸಿ, ಪ್ರಶಂಸೆ ಮಾಡಿದರು. ಇದರಿಂದ ಮುನಿಗಳಲ್ಲಿ ಪರಾಶರರು ಮುಖ್ಯರು.

ಬ್ರಹ್ಮರ್ಷಿಯಾದ ಶುಕನು ಗಂಗಾತೀರದಲ್ಲಿ ಪರೀಕ್ಷಿದ್ರಾಜನಿಗೆ, ಶ್ರೀಮದ್ಭಾಗವತದ ಮೂಲಕ ತತ್ವನಿರ್ಣಯವನ್ನು ಉಪದೇಶಿಸಿ, ಮುಕ್ತಿಯನ್ನು ದೊರಕಿಸಿದುದರಿಂದ ಈ ಮುನಿಗೆ ಹೆಚ್ಚುಗಾರಿಕೆ.

ಪೂಜ್ಯನಾದ ಶೌನಕನು ವಿಷ್ಣುಧರ್ಮೋತ್ತರದಲ್ಲಿ ಶ್ರೀಹರಿಯೇ ಜಗಜ್ಜನ್ಮಾದಿ ಕಾರಣನು. ಆತನೇ ಬ್ರಹ್ಮರುದ್ರಾದಿಗಳ ನಿಯಂತ್ರವು. ಅವನೇ ಮೋಕ್ಷಪ್ರದನು.-ಎಂದು ತತ್ವನಿರ್ಣಯ ಮಾಡಿರುವುದರಿಂದ ಶೌನಕನಿಗೆ ಶ್ರೇಷ್ಠತೆಯು ಬಂದಿರುವುದು.

ಯಾರ ಭುಜಯುಗ್ಮವು ಶ್ರೀಮನ್ನಾರಾಯಣನ ದಿವ್ಯಾಯುಧಗಳಿಂದ ಲಾಂಛಿತವಾಗಿರುವುದೋ, ಯಾರ ಬಾಯಲ್ಲಿ ಪರಮಪುರುಷನ ನಾಮಸಂಕೀರ್ತನ ಇರುವುದೋ, ಹಣೆಯಲ್ಲಿ ಊರ್ಧ್ವಪುಂಡ್ರವೂ, ಕೊರಳಿನಲ್ಲಿ ತುಳಸಿಯ ಮಣಿಮಾಲೆಯೂ, ಯಾರಿಗಿರುವುದೋ ಅಂಥ ಶ್ರೀವೈಷ್ಣವರ ದಾಸನು ನಾನು- ಎಂದು ದೇವರ್ಷಿಯಾದ ನಾರದನು ಸ್ಫುಟವಾಗಿ ಹೇಳಿರುವುದರಿಂದ ಆತನಿಗೆ ಮಾನ್ಯತೆ.

ಗ್ರಹಿಸಲಸಾಧ್ಯವಾದ ಸಹಸ್ರಶಾಖಾಯುಕ್ತವಾದ ವೇದಗಳ ಅರ್ಥವನ್ನು ಸಂಗ್ರಹಿಸಿ, ನಾಲ್ಕು ದ್ರಾವಿಡ ಪ್ರಬಂಧಗಳನ್ನು ರಚಿಸಿ, ಸರ್ವರಿಗೂ ಅಧಿಕಾರವಿರುವಂತೆ ಮಾಡಿದುದರಿಂದಲೂ, ಅದೆಲ್ಲವನ್ನೂ ನಾಥಮುನಿಗೆ, ಉಪದೇಶಿಸಿ, ಸರ್ವದರ್ಶನ ತಾತ್ಪರ್ಯವನ್ನು ಅಭಿವೃದ್ಧಿಗೊಳಿಸಿದ ರಿಂದ ಶಠಕೋಪನಿಗೆ ಪ್ರಧಾನತೆಯುಂತಾಯಿತು.

ಶ್ರೀರಂಗನಾಥನೇ ಮೊದಲಾದವರು ಅಲ್ಲಲ್ಲಿಯೇ ಶ್ರೇಷ್ಠರಾದರು. ಜಗದ್ಗುರುವಾದ ಲಕ್ಷ್ಮಣಾಚಾರ್ಯರು ಸರ್ವಶ್ರೇಷ್ಠರಾದರು. ಆಚಾರ್ಯರು ಶ್ರೀರಾಮನ ಅಭಯಪ್ರದಾನವನ್ನು ವಿಶದಗೊಳಿಸಿದರು. ಗೀತಾಚಾರ್ಯನಿಂದ ಉಪದಿಷ್ಟವಾದ ಚರಮಾರ್ಥವನ್ನು ಪ್ರಕಾಶಗೊಳಿಸಿದರು. ಋಷಿಪ್ರೋಕ್ತವಾದ ಪ್ರಮಾಣಗಳಿಗೆಲ್ಲ ಸ್ಫುಟವಾದ ವ್ಯಾಖ್ಯಾನವನ್ನೂ ರಚಿಸಿದರು. ಶಠಕೋಪನೇ ಮೊದಲಾದವರಿಂದ ರಚಿತವಾದ ದಿವ್ಯ ಪ್ರಬಂಧಗಳನ್ನು ಲೋಕಕ್ಕೆ ಅರ್ಥವತ್ತಾಗಿ ವಿವರಿಸಿದರು. ವ್ಯಾಸಸೂತ್ರಗಳಿಗೆ ಅನುರೂಪವಾದ ಅರ್ಥವನ್ನು ಲೋಕಕ್ಕೆ ತಿಳಿಸಲು ಕರುಣೆಯಿಂದ ಶ್ರೀಭಾಷ್ಯವನ್ನು ಪ್ರಕಟಿಸಿದರು. ಇದರಲ್ಲಿ ಅಶುಭವಾದ ಇತರ ಮತಗಳನ್ನು ಜಯಿಸಿ, ವಿಷ್ಣುದರ್ಶನವನ್ನು ತಮ್ಮ ಹೆಸರಿನಿಂದ 'ರಾಮಾನುಜ ಸಿದ್ಧಾಂತ' ವೆಂದು ಸ್ಥಿರಗೊಳಿಸಿದರು. ಇವೇ ಮೊದಲಾದ ಲೋಕಹಿತಕರಗಳಾದ ಕಾರ್ಯಗಳಿಂದ ನಾಥಮುನಿಯೇ ಮೊದಲಾದ ಆಚಾರ್ಯರಿಗಿಂತಲೂ, ಹಾಗೆಯೇ ದಾಶರಥಿಯೇ ಮೊದಲಾದ ಶಿಷ್ಯರಿಗಿಂತಲೂ ಶ್ರೇಷ್ಠರೆಂಬುವುದರಲ್ಲಿ ವಿವಾದವೇ ಇಲ್ಲ, ಆದುದರಿಂದ ಯತಿರಾಜರೇ ಸಾಕ್ಷಾತ್ ಹರಿಸ್ವರೂಪರಾದುದರಿಂದ, ಅವರ ಸಂಬಂಧ ಬಲದಿಂದಲೇ ಸಕಲ ಪ್ರಾಣಿಗಳಿಗೂ

ಮೋಕ್ಷವು ಸಿದ್ಧವು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಆಚಾರ್ಯರ ಸರ್ವಮುಖ್ಯತ್ವ ವರ್ಣನೆಯೆಂಬ ಅರವತ್ತೆರಡನೆಯ ಅಧ್ಯಾಯವು ಮುಗಿದುದು.

೬೩

ಶ್ರೀಹರಿಯ ಆಜ್ಞೆಯಂತೆ, ಅನಂತನು ಭಗವದ್ರಾಮಾನುಜರಾಗಿ ಅವತರಿಸಲು, ಈ ಆಚಾರ್ಯ ಸಂಬಂಧದಿಂದಲೇ ಕಲಿಯುಗದಲ್ಲಿಯೂ ಸಮಸ್ತರೂ ಪಾಪಗಳನ್ನು ನೀಗಿ ಮುಕ್ತಿಯನ್ನು ಹೊಂದುವರು.

ಪಾಪಿಯಾದ ದುಷ್ಟಕ್ಷತ್ರಿಯನೂ, ಪುಣ್ಯಶಾಲಿಯಾದ ಪುಂಡರೀಕನೂ ಆಚಾರ್ಯರ ಸಂಬಂಧದಿಂದಲೇ ಮುಕ್ತರಾದರು. ಆದುದರಿಂದ ಆಚಾರ್ಯರನ್ನು ಆಶ್ರಯಿಸಬೇಕು. ಆಚಾರ್ಯರೇ ಪ್ರತ್ಯಕ್ಷರಾದ ಹರಿ ಎನ್ನುವುದರಲ್ಲಿ ಸಂಶಯವೇ ಇಲ್ಲ, ಇಂಥ ಆಚಾರ್ಯರು ಶಾಸ್ತ್ರವೆಂಬ ಕೈಯಿಂದ ಸಂಸಾರ ಮಗ್ನರಾದ ಪ್ರಾಣಿಗಳನ್ನು ಉದ್ಧರಿಸುವರು. ಶಾಸ್ತ್ರಾರ್ಥಗಳನ್ನು ಸಂಗ್ರಹಿಸುವವರೂ, ಅದನ್ನು ಆಚಾರದಲ್ಲಿ ತರುವವರೂ, ಮುಖ್ಯವಾಗಿ ತಾವು ಅದರಂತೆ ನಡೆಯುವವರೂ ಆಚಾರ್ಯರು. "ಗು"ಎಂದರೆ, ಅಂಧಕಾರ. "ರು"ಎಂದರೆ, ಅದನ್ನು ಹೋಗಲಾಡಿಸುವವನು. ಹೀಗೆ ಅಂಧಕಾರವನ್ನು ಹೋಗಲಾಡಿಸುವುದರಿಂದ "ಗುರು"ವೆಂಬ ಹೆಸರು ಬರುವುದು. ಗುರುವೇ ಪರಬ್ರಹ್ಮನು; ಗುರುವೇ ಪರಗತಿಯು; ಗುರುವೇ ಪರವಿದ್ಯೆಯು; ಗುರುವೇ ಶ್ರೇಷ್ಠನಾದವನು. ಪರಮಾತ್ಮನೇ ಕರುಣೆಯಿಂದ ಗುರುವಾಗಿ, ಇಂತಹ ಧರ್ಮೋಪದೇಶ ಮಾಡುವುದರಿಂದಲೂ, ಶಿಷ್ಯರನ್ನು ರಕ್ಷಿಸುವುದರಿಂದಲೂ, ಗುರುವಿಗಿಂತ ಬೇರೆ ಬಂಧುವಿಲ್ಲ, ದಿವ್ಯದೇಶಗಳಲ್ಲಿಯೂ ಇತರವಾದ ಭೂಭಾಗದಲ್ಲಿಯೂ ಪರದಲ್ಲಿಯೂ ಸಹ ಗುರುವೇ ರಕ್ಷಕನು. ಇಂತಹ ಆಚಾರ್ಯಪೂರ್ತಿಯು ಯತಿರಾಜರಲ್ಲಿಯೇ ಸಿದ್ಧವಾದುದರಿಂದ ಅವರ ಪಾದಕೈಂಕರ್ಯವೇ ಪರಮ ಶ್ರೇಯಸ್ಕರವು. ಆದ್ದರಿಂದಲೇ ಗೋವಿಂದ-ದಾಶರಥಿಯೇ ಮೊದಲಾದ ಶಿಷ್ಯರು, ಪರಾಶರಭಟ್ಟನೇ ಮೊದಲಾದ ಶಿಷ್ಯರಿಗೆ ಈ ರೀತಿಯಾಗಿ ಹಿತವನ್ನು ಉಪದೇಶಿಸಿದರು. ಶಠಕೋಪನಿಗೂ ಆಚಾರ್ಯರಿಗೂ ಮಧ್ಯೆಯಿದ್ದ ನಾಥಮುನಿಯೇ ಮೊದಲಾದವರು ಕೇವಲ ಕಾರಣವಾಗಿದ್ದುದರಿಂದ, ಆಚಾರ್ಯರಿಗೆ ಶಠಕೋಪನೇ ಸಾಕ್ಷಾದಾಚಾರ್ಯನಾದಂತಾಯಿತು. ಅದರಿಂದಲೇ ಶಠಾರಿಯು ರಾಮಾನುಜಾವತಾರದಲ್ಲಿ ಕಲಿಯು ನಷ್ಟನಾಗುವನೆಂದು ಸೂಚಿಸಿದುದು ಸಂಗತವಾಗಿದೆ. ಶಠಕೋಪನು ಪ್ರವರ್ತಮಾನಾವಸ್ಥೆಗೆ ತಂದ ವಿಷ್ಣುದರ್ಶನವನ್ನು ಆಚಾರ್ಯರು ರೂಢಮೂಲವಾಗುವಂತೆ ಮಾಡಿದುದರಿಂದಲೂ, ಮಹಾಪೂರ್ಣನೇ ಮೊದಲಾದವರು ಆಚಾರ್ಯರಿಗೆ ಆಚಾರ್ಯ ಸಂಬಂಧದಿಂದ ಮತ್ತು ದಾಶರಥಿಯೇ ಮೊದಲಾದವರು ಶಿಷ್ಯರಾಗಿ, ಮುಕ್ತಿಯನ್ನು ಹೊಂದಿದ್ದರಿಂದಲೂ ಆಚಾರ್ಯರಲ್ಲಿ ಆಚಾರ್ಯಪೂರ್ತಿಯುಂಟಾಯಿತು. ಈ ವಿಷಯವನ್ನು ಯಾಮುನಾಚಾರ್ಯರು ಸ್ತೋತ್ರರತ್ನದಲ್ಲಿ -'ಪಿತಾಮಹಂ ನಾಥಮುನಿಂವಿಲೋಕ್ಯ'.......... .'ನಾಥಾಯ ನಾಥಮುವಯೇऽತ್ರ ಪರತ್ರ ಚಾಪಿ?'- ಎನ್ನುವುದರಿಂದಲೂ ಪ್ರಕಾಶ

ಪಡಿಸಿರುವರು.

ಆತ್ಮಹಿತವನ್ನು ಬಯಸುವ ಶಿಷ್ಯನು ತಾನು ಬದುಕಿರುವವರೆಗೂ ಆಚಾರ್ಯರಲ್ಲಿ ಕೃತಜ್ಞನಾಗಿರಬೇಕು. ತನ್ನ ಸ್ವರೂಪವನ್ನು ಉಳಿಸಿಕೊಳ್ಳಬೇಕಾದರೆ ಗುರುವೇ ಕಾರಣ; ಅದಿಲ್ಲದೆ ಮತ್ತೊಂದುಪಾಯವಿಲ್ಲ. ಈ ವಿಚಾರವು ಮಧುರಕವಿಯೇ ಮೊದಲಾದವರಲ್ಲಿ ನಿದರ್ಶನಕ್ಕೆ ಬಂದಿದೆ.

ಕ್ರಿಮಿಕಂಠಚೋಳನ ನೆಪದಿಂದ ಪಶ್ಚಿಮ ದಿಗ್ಭಾಗಕ್ಕೆ ಬಂದ ಆಚಾರ್ಯರು ವೈಷ್ಣವರಿಗೆ ಶಾಸ್ತ್ರಪ್ರವಚನವನ್ನು ಮಾಡಿಸಲು, ಅತ್ಯಾಶ್ಚರ್ಯಗೊಂಡು ಆಚಾರ್ಯರನ್ನು ಸ್ತುತಿಸಲು,ಆಚಾರ್ಯರು -'ಈಗ ನಾನೇನು ದೊಡ್ಡ ಕೆಲಸವನ್ನು ಮಾಡಲಿಲ್ಲ, ಪರಮಾಚಾರ್ಯರ ಗ್ರಂಥಗಳನ್ನು ನೋಡಿ, ಅವುಗಳ ತತ್ತ್ವವನ್ನು ಸಂಗ್ರಹಿಸಿ,ನಿರ್ಣಯಿಸಿ ತಿಳಿಸಿದೆನು. ಮಹಾತ್ಮರಾದ ಯಾಮುನಾಚಾರ್ಯರೊಡನೆ ಒಂದೇ ಒಂದು ದಿವಸವಾದರೂ ನನಗೆ ಸಹವಾಸವು ದೊರೆತ್ತಿದ್ದರೆ ವೈಕುಂಠಕ್ಕೆ ಸೋಪಾನವನ್ನು ಕಟ್ಟಿ,ಅದರ ಮೂಲಕ ಇನ್ನು ಮುಂದೆ ನಿರಂತರವಾಗಿ ಎಲ್ಲರನ್ನೂ ಪರಮಪದಕ್ಕೆ ಕಳುಹಿಸುತ್ತಿದ್ದೆನು'-ಎಂದರು. ಆದುದರಿಂದ ಯತೀಂದ್ರರ ಸಾಮರ್ಥ್ಯವು ಸಾಕ್ಷಾತ್ಪರಮಾತ್ಮನಿಗೂ ಇರುವುದಿಲ್ಲ.

ಯಾವನು ಈ ಪಂಚಮೋಪಾಯವನ್ನು ತಿಳಿದು ಯತಿರಾಜರಲ್ಲಿ ದೃಢಭಕ್ತಿಯುಳ್ಳನೋ ಅವನೇ ಅಖಿಲತತ್ತ್ವವೇತ್ತನು; ಅವನೇ ವಂದ್ಯನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಆಚಾರ್ಯ ವೈಭವ ವರ್ಣನೆ ಎಂಬ ಅರವತ್ಮೂರನೆಯ ಅಧ್ಯಾಯವು ಮುಗಿದುದು.

೬೪

ಒಂದು ಸಲ ಆಚಾರ್ಯರು ಶ್ರೀರಂಗದಲ್ಲಿ ತಮ್ಮ ಮಠದಲ್ಲಿ ಶ್ರೀಮದ್ರಾಮಾಯಣದ ಪ್ರವಚನವನ್ನು ನಡೆಸುತ್ತಿರಲು, ವಿಭೀಷಣನ ಶರಣಾಗತಿಯ ಪ್ರಸಂಗವು ಬಂದಿತು. ಅದನ್ನು ಕೇಳಿದ ಕೂಡಲೇ ಧನುರ್ದಾಸನು ಆ ಗ್ರಂಥದಲ್ಲಿ ವಿರಕ್ತಿ ಹುಟ್ಟಿ ಅಲ್ಲಿಂದ ಎದ್ದು ಹೊರಡಲಾರಂಭಿಸಿದನು. ಆಚಾರ್ಯರು ಕಾರಣವೇನೆಂದು ವಿಚಾರಿಸಿದರು. ಧನುರ್ದಾಸನು 'ವಿಭೀಷಣನು, ಪುತ್ರಮಿತ್ರಕಳತ್ರಾದಿಗಳನ್ನೂ ತ್ಯಜಿಸಿ ಶ್ರೀರಾಮನನ್ನು ರಕ್ಷಕನನ್ನಾಗಿ ಆಶ್ರಯಿಸಿದನಷ್ಟೆ. ಆದರಿಂದ ಪುತ್ರಮಿತ್ರಾದಿಗಳೆಲ್ಲರೂ ಪರಮಾತ್ಮನಾದ ಶ್ರೀಹರಿಯನ್ನು ಆಶ್ರಯಿಸುವುದರಲ್ಲಿ ವಿಘ್ನಪ್ರಾಯರು. ಇದನ್ನು ತಿಳಿದೇ ವಿಭೀಷಣನು ಎಲ್ಲವನ್ನೂ ತ್ಯಜಿಸಿ, ಅನನ್ಯಗತಿಕನಾಗಿ, ಶ್ರೀರಾಮನನ್ನೇ ಗತಿಯಾಗಿ ಆಶ್ರಯಿಸಲು ನೆಲದ ಮೇಲೆ ಹೆಜ್ಜೆಯನ್ನು ಇಡದೆ, ಅಂತರಿಕ್ಷದಲ್ಲಿ ನಿರಾಶ್ರಯನಾಗಿ ನಿಂತನು. ಆತನನ್ನು ನೋಡಿ ವಾನರ ಪ್ರಮುಖರು ಕಲ್ಲು, ಗುಂಡು ಮರಗಳನ್ನೇ ಕಿತ್ತು -'ಇವನನ್ನು ಹೊಡೆಯಿರಿ,ಕೊಲ್ಲಿರಿ'- ಎಂಬುದಾಗಿ ನುಗ್ಗಿದರು. ಶ್ರೀರಾಮನ ಆಶ್ರಯವನ್ನು ಹೊಂದಿದ ವಿಭೀಷಣನಿಗೆ ಏನು ತೊಂದರೆಯಾಗಲಿಲ್ಲ, ಅಷ್ಟೇ ಅಲ್ಲದೆ ನಿತ್ಯಸುಖವನ್ನೂ ಹೊಂದಿದನು. ಆದುದರಿಂದ ನನಗೂ ಅಂಥ ರಾಮನ ಸನ್ನಿಧಿಯೇ

ಸಾಕು'- ಎಂದನು.

ಆಗ ಆಚಾರ್ಯರು ಎಲ್ಲರಿಗೂ ಕೇಳುವಂತೆ -'ಎಲೈ ವತ್ಸ, ಕೇಳು ನಿನಗೆ ಹಿತವನ್ನು ಹೇಳುವೆನು. ನನಗೆ ಮುಕ್ತಿಯು ದೊರಕುವುದಾದರೆ ನಿನಗೂ ಮುಕ್ತಿಯುಂಟು. ಮಹಾಪೂರ್ಣರಿಗೆ ಮೋಕ್ಷವುಂಟಾದರೆ ನನಗೂ ಉಂಟು. ಯಾಮುನಾಚಾರ್ಯರಿಗೆ ಮೋಕ್ಷವು ಲಭಿಸಿದರೆ ಮಹಾಪೂರ್ಣನಿಗೂ ಸಿದ್ಧ. ಹೀಗೆ ಹಿಂದಿನ ಆಚಾರ್ಯರು ಪರಮಪದವನ್ನು ಹೊಂದಿದ್ದರೆ ಅವರ ಶಿಷ್ಯರೂ ಆ ಪರಮಪದವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ನಮ್ಮ ಆಚಾರ್ಯರಾದ ಶಠಾರಿಯು, ತಮ್ಮ ಗ್ರಂಥದಲ್ಲಿ ಪರಮಪದವು ಸಿದ್ಧವಾಗಿರುವ ವಿಚಾರವನ್ನು ತಿಳಿಸಿರುವುದರಿಂದ ನಮಗೂ ಸಿದ್ಧವಾಗಿಯೇ ಇರುವುದೆಂದು ನಿಶ್ಚಯದಿಂದಿರು.

'ಶ್ರೀದೇವಿ (ಲಕ್ಷ್ಮಿ) ಯ ಪುರುಷಕಾರದಿಂದ ಸಕಲಜೀವಿಗಳಿಗೂ ಮೋಕ್ಷವು ಸಿದ್ಧ. ಆದುದರಿಂದಲೇ ಶ್ರೀದೇವಿಯು ಹರಿಯೊಡನೆ ನಿತ್ಯಸಂಬಂಧದಿಂದಿರುವಳು. ನಾವಾದರೂ ಜಗನ್ಮಾತೆಯಾದ ಲಕ್ಷ್ಮಿಯೊಡನೆ ಸಂಬಂಧವಿಟ್ಟುಕೊಂಡಿರುವವರು. ಸಂಸಾರಿಗಳಾದ ಜೀವಿಗಳಿಗೂ ಲಕ್ಷ್ಮಿಗೂ ಮಧ್ಯೆ ಇರುವ ಯಾವನೊಬ್ಬ ಮಹಾತ್ಮನಿಗೆ ಮೋಕ್ಷವು ಲಭಿಸಿದರೂ ನಮ್ಮೆಲ್ಲರಿಗೂ ಮೋಕ್ಷವು ಲಭಿಸುವುದು. ಇದರಲ್ಲಿ ಯಾವ ಸಂಶಯವು ಇಲ್ಲ.

'ವಿಭೀಷಣನ ನಾಲ್ವರು ಮಂತ್ರಿಗಳಲ್ಲಿ ಒಬ್ಬನಾದರೂ ಪ್ರತ್ಯೇಕವಾಗಿಯಾದರೂ ಶ್ರೀರಾಮನನ್ನು ರಕ್ಷಕನನ್ನಾಗಿ ಆಶ್ರಯಿಸಲಿಲ್ಲ. ಆದರೂ ಶ್ರೀರಾಮಚಂದ್ರನು ಅವರೆಲ್ಲರನ್ನೂ ರಕ್ಷಿಸಿದನು. ಆದುದರಿಂದ ನನಗೆ ಮುಕ್ತಿಯು ದೊರತಲ್ಲಿ ನೀನೇನು ಚಿಂತಿಸಬೇಕಾದುದಿಲ್ಲ. ಇದನ್ನು ನಿಶ್ಚಯಮಾಡಿಕೊಂಡು ಸುಖವಾಗಿ ಇಲ್ಲಿಯೇ ಇರು'. 'ಶತ್ರುಘ್ನನು ಭರತನನ್ನು ಮಾತ್ರವೇ ಆಶ್ರಯಿಸಿಕೊಂಡಿದ್ದನು. ಮಧುರಕವಿಯು ಶಠಕೋಪನನ್ನು ಮಾತ್ರವೇ ಅನುಸರಿಸಿ ಕೊಂಡಿದ್ದನು. ದೇವಿಯು (ಆಂಡಾಳ್) ವಿಷ್ಣುಚಿತ್ತ (ಪೆರಿಯಾಳ್ವಾರ್)ರನ್ನು ಮಾತ್ರವೇ ನಂಬಿಕೊಂಡಿದ್ದಳು. ಇದರಂತೆ ಅನೇಕ ಮಹಾತ್ಮರು ಗುರುಗಳನ್ನೇ ಆಶ್ರಯಿಸಿಕೊಂಡಿದ್ದರು. ಆದುದರಿಂದ ಭಗವತ್ಪ್ರಾಪ್ತಿಗೆ ಸದ್ಗುರುಗಳ ಅನುವರ್ತನವೇ ಕಾರಣವು. ಎಲ್ಲಿ ಆಚಾರ್ಯ ರಿರುವರೋ ಅಲ್ಲಿಯೇ ಶ್ರೀಯಃಪತಿಯಾದ ಪರಮಾತ್ಮನಿರುವನು'- ಎಂದರು. ಇದನ್ನು ಕೇಳಿ ಧನುರ್ದಾಸನೂ ಅಲ್ಲಿದ್ದ ಇತರರೂ ಬಹು ಸಂತುಷ್ಟರಾದರು.

ಆದುದರಿಂದ ಯತಿರಾಜರ ಸಂಬಂಧವೇ ಮೋಕ್ಷಕ್ಕೆ ಕಾರಣವು. ಅವರ ಕೈಂಕರ್ಯವೇ ಪರಮಪ್ರಾಪ್ಯವಾದುದು.

'ಸರ್ವಾತ್ಮಕನಾದ ವಿಷ್ಣುವಿನ ಸ್ಥಾನಗಳಲ್ಲಿ ವೈಕುಂಠ, ವೇಂಕಟಾದ್ರಿ, ವನಾದ್ರಿಗಳೇ ಮುಖ್ಯವಾದವು. ಈ ಸ್ಥಾನಗಳಲ್ಲಿ ವಾಸಿಸುವ ವಾಸುದೇವನೇ ಮೊದಲಾದ ಸ್ವಾಮಿಯು ಶ್ರೀಭಾಷ್ಯಕಾರರ ಹೃದಯದಲ್ಲಿ ನೆಲೆಸಿರುವನು. ಆದುದರಿಂದ ಭಾಷ್ಯಕಾರರ ಕೈಂಕರ್ಯಕ್ಕಿಂತಲೂ, ಮಿಗಲಾದುದಿಲ್ಲ. ಅಷ್ಟೋತ್ತರ ದಿವ್ಯದೇಶಗಳಲ್ಲಿರುವ, ಪರಮಾತ್ಮನನ್ನು ಪೂಜಿಸಿದರೆ, ಯಾವ ಫಲವುಂಟೋ ಶ್ರೀಭಾಷ್ಯಕಾರರನ್ನು ಪೂಜಿಸಿದರೂ, ಅದೇ ಫಲವುಂಟು. ಕರ್ಮ-ಜ್ಞಾನಾದಿಗಳೆಲ್ಲವೂ, ಮೋಕ್ಷಸಾಧಕವಲ್ಲ. ಯತಿಶ್ರೇಷ್ಠರೊಬ್ಬರೇ ಮೋಕ್ಷಕ್ಕೆ ಕಾರಣ ಭೂತರು. ಉಪಾಯವೂ ಉಪೇಯವೂ ಜಗದ್ಗುರುವಾದ ಲಕ್ಷ್ಮಣಾಚಾರ್ಯರೇ, ಅವರ

ನಾಮಸಂಕೀರ್ತನ ಮಾತ್ರದಿಂದಲೇ ಸಮಸ್ತ ಪಾತಕಗಳೂ ನಾಶವಾಗುವವು 'ರಾಮಾನುಜ' ವೆಂಬ ಚತುರಕ್ಷರೀ ಮಂತ್ರವನ್ನು ಬಿಟ್ಟರೆ ಭವಬಂಧನ ಮೋಚಕವಾದುದು ಮತ್ತೊಂದಿಲ್ಲ. ರಾಮಾನುಜ ಕೈಂಕರ್ಯವೇ ಪುರುಷಾರ್ಥವು. ಇದೇ ಸಿದ್ಧಾಂತವೂ' ಎಂದು ಶ್ರೀರಂಗದಲ್ಲಿ ವಿದ್ವಾಂಸರ ಮತ್ತು ಗುರುಗಳ, ಸಮೂಹದಲ್ಲಿ ಸರ್ವಶಾಸ್ತ್ರವಿಶಾರದನಾದ 'ವರದವಿಷ್ಣುವೆಂಬ ಮಹಾತ್ಮನೂ, ಯಾವಾಗಲೂ ಹೇಳುತ್ತಿದ್ದನು. ಇದೇ ಅಭಿಪ್ರಾಯದಂತೆ ಕೂರನಾಥನು ಸಹ 'ರಾಮಾನುಜ'ನೆಂಬ ಚತುರವಾದ ಚತುರಾಕ್ಷರಿಯು ಇಲ್ಲದಿದ್ದರೆ ಅಯ್ಯೋ ನಮ್ಮಂಥ ಜಂತುಗಳಿಗೆ ಯಾವ ಗತಿಯಾಗುತ್ತಿತ್ತೋ!' ಎಂದಿರುತ್ತಾನೆ.

ಶ್ರೀರಂಗನೆಂಬ ವೈಷ್ಣವನು ಪ್ರಪನ್ನಗಾಯತ್ರಿಯಲ್ಲಿ -'ಆಚಾರ್ಯರೇ ತಾವು ನನಗೆ ಕರತಲಾಮಲಕದಂತೆ, ದೇವನ ದರ್ಶನವನ್ನು ಮಾಡಿಸಿದರೂ ಸಹ, ತಮ್ಮ ಪಾದಪಂಕಜ ವನ್ನಾಶ್ರಯಿಸಿರುವ ಮಹಾತ್ಮರಿರುವ ಸ್ಥಾನವೇ ನನಗೆ ಪರಮಪ್ರಾಪ್ಯವಾದುದು. ನಿಮ್ಮ ಭಕ್ತರಲ್ಲಿ ಭಕ್ತಿಯು ಹುಟ್ಟುವಂತೆ ಅನುಗ್ರಹಿಸಬೇಕು. ಮತ್ತು ವಿಷ್ಣುಭಕ್ತರ ದಾಸನನ್ನಾಗಿ ಅಂಗೀಕರಿಸ ಬೇಕು ?'- ಎಂದು ಪ್ರಾರ್ಥಿಸಲು, ಆಚಾರ್ಯರು ಅಂಗೀಕರಿಸಿದರು. ಮತ್ತು ಅದೇ ಶ್ರೀರಂಗನಿಂದ ಕಳುಹಿಸಲ್ಪಟ್ಟ 'ಮಹಾಲಕ್ಷ್ಮಿ, ಶ್ರೀಯಃಪತಿ ಮತ್ತು ಭಾಷ್ಯಕಾರರು ಇವರ ಪಾದಗಳೇ ರಕ್ಷಕಗಳು' ಎಂಬ ನಿಶ್ಚಿತವಾದ ತತ್ವಾರ್ಥವನ್ನು ತಿಳಿದವನು ವಿಷ್ಣುವಿನ ಪರಮಪದವನ್ನು ಹೊಂದುವನು. ಶ್ರೀರಾಮನ ಚರಿತ್ರೆಯಂತೆ ರಾಮಾನುಜಾಚಾರ್ಯರಚರಿತವೂ ಅಗಾಧವಾದುದು. ಬಾಹುಗಳಿಂದ ಮಹಾಸಾಗರವನ್ನು ದಾಟಬಹುದು. ಯತಿರಾಜರ ಚರಿತೆಯನ್ನು ಪೂರ್ಣವಾಗಿ ಹೇಳುವುದು ಅಸಾಧ್ಯ. ನಾನು ಕೇಳಿರುವಂತೆ ಮತ್ತು ಶಕ್ತಿಯಿರುವಂತೆ ಭಕ್ತಿಯಿಂದ ಇದನ್ನು ಬರೆದಿರುವೆನು. ಬುದ್ಧಿವಂತರಾದವರು ವಿಸ್ತರಿಸಲಿ.

ಅಯೋಧ್ಯೆಯಲ್ಲಿ ಶ್ರೀರಾಮನು ತಮ್ಮಂದಿರೊಡನೆ ರಾಜ್ಯವನ್ನು ಪಾಲಿಸುತ್ತಿದ್ದಂತೆ ಶ್ರೀರಂಗದಲ್ಲಿ ರಾಮಾನುಜಾಚಾರ್ಯರೊಡನೆ ಸಮಸ್ತ ಜಗತ್ತನ್ನೂ ರಕ್ಷಿಸುತ್ತಿದ್ದರು. ರಾಮರಾಜ್ಯ ದಲ್ಲಿದ್ದಂತೆ ಇವರ ಕಾಲದಲ್ಲಿಯೂ ಪ್ರಜೆಗಳೆಲ್ಲರೂ ಸುಖಿಗಳೂ, ತೊಂದರೆಯಿಲ್ಲದವರೂ, ಧರ್ಮಾಸಕ್ತರಾಗಿಯೂ, ಶಾಂತರಾಗಿಯೂ, ಆಯುಷ್ಮಂತರಾಗಿಯೂ ಇರುತ್ತಿದ್ದರು. ಲಕ್ಷ್ಮಣಾ ಚಾರ್ಯರು ಜಗತ್ತನ್ನು ರಕ್ಷಿಸುತ್ತಿರಲು, ಭೂಲೋಕವೇ ಶಾಂತವಾಗಿಯೂ, ಸರ್ವಧರ್ಮ ಸಮದೃಷ್ಟಿಯುಳ್ಳದ್ದಾಗಿಯೂ, ತಾರತಮ್ಯವಿಲ್ಲದಯೂ ಇತ್ತು.

ಶ್ಲೋ|| (ಲೀಲಾಮಾನುಷರೂಪಿಣೋ ಯತಿಪತೇರ್ದಿವ್ಯಂ ಚರಿತ್ರಂಶುಭಂ
ಶ್ರೋತ್ರ್ಯಕಾಮಘನಾಶನಂ| ಭವಹರಂ ಚಿತ್ರಂ ವಿಚಿತ್ರಾರ್ಥದಂ|
ಯೇ ಶೃಣ್ವಂತಿ, ಪಠಂತಿ ಸೌಮ್ಯಹೃದಯಾ ಭಕ್ತ್ಯಾನಿವಸೀಶಂ ಧೀಯುತಾ-
ಸ್ತೇಗಚ್ಛನ್ತಾ ಭವಾದ್ಯಗಮ್ಯ ಮಕುಲಂ ವಿಷ್ಣೋಃ ಪದಂ ಶಾಶ್ವತಂ||

ರಾಮಾನುಜಾಯ ಮಹತೇ ನಿಗಮಾಂತ ಶಾಸ್ತ್ರಪಾರಂಗತಾಯ ಪರಮಾರ್ಥವಿಶಾರದಾಯ| ವಿಖ್ಯಾತ ಲೋಕಗುರುವೇ ಯತಿಪುಂಗವಾಯ ಭೂಯೋ ನಮೋಭುವನಮಂಗಳ ವಿಗ್ರಹಾಯ||

ಎಂಬಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಜ ಮಂತ್ರಪ್ರಭಾವಾದಿ ವರ್ಣನವೆಂಬ ಅರವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

೬೫

ಶೇಷಾಂಶದಿಂದ ಅವತರಿಸಿ, ಮಹಾವೈಭವದಿಂದ ಆಚಾರ್ಯರು ಶ್ರೀರಂಗದಲ್ಲಿ ವಾಸ ಮಾಡುತ್ತ ಸಮಸ್ತ ವೇದಾಂತವನ್ನು ವಿಷ್ಣುಮಯವನ್ನಾಗಿ ತೋರಿಸುತ್ತಿರುವಲ್ಲಿ, ಅವರ ಜೀವನಕ್ರಿಯದಲ್ಲಿ ನೂರಿಪ್ಪತ್ತು (೧೨೦) ವರ್ಷಗಳು ಕಳೆದವು. ಇಷ್ಟು ವರ್ಷಗಳಲ್ಲಿ ೬೦ ವರ್ಷಕಾಲ ಶ್ರೀರಂಗದಲ್ಲಿ ಸುಖವಾಸವೂ, ೬೦ವರ್ಷಗಳು ಯಾದವಾದ್ರಿ, ಕಾಂಚಿ, ಪೆರುಂಬೂದೂರುಗಳ ವಾಸವೂ ನಡೆಯಿತು. ಚತುಸ್ಸಮುದ್ರಪರ್ಯಂತವಾಗಿರುವ ಭೂಭಾಗದಲ್ಲಿ ಆಚಾರ್ಯರ ಶಿಷ್ಯರಾಗದ ಜನವಿಲ್ಲ. ಸಮಸ್ತ ಜಂತುಜಾತವೂ ವಿಷ್ಣುಮಾಯೆಯನ್ನು ದಾಟಿ ಮುಕ್ತಿಯನ್ನು ಹೊಂದಿತು. ಈ ವೇಳೆಗೆ ವೈಕುಂಠನಾಥನಿಗೂ ಹಿಂದಿನ ಯೋಚನೆಗಳು ಹೋದುದಲ್ಲದೇ ಆದಿಶೇಷನ ಆದರ್ಶದಿಂದ ಮನಸ್ಸಿನಲ್ಲಿ ವಿಚಾರವಾರಂಭವಾಯಿತು. ಆಚಾರ್ಯರೂ ಸಹ ವೈಕುಂಠನಾಥನ ಸೇವೆಯನ್ನು ಸ್ಮರಿಸಿಕೊಂಡು ಲೀಲಾವಿಭೂತಿಯನ್ನು ಬಿಟ್ಟುಹೋಗಬೇಕೆಂದು ಚಿಂತಿಸಿ, ರಂಗನಾಥನನ್ನು ಕುರಿತು ಆ ವಿಧವಾದ ಪ್ರಪತ್ತಿಯನ್ನು ಮಾಡಿದರು.

ಆಗ ಶ್ರೀರಂಗನಾಥನು 'ವತ್ಸ, ಇದೇನು ಹೀಗೆ ಯೋಚಿಸಿದೆ?' ಎನ್ನಲು, ಯತಿರಾಜರು 'ದೇವ, ನೀನೇ ಮನುಷ್ಯನಿಗೆ ಒಂದು ನೂರು ವರ್ಷಗಳ ವಯಸ್ಸು ಪರಿಮಿತವೆಂದು ಮಾಡಿರುವೆ. ಅಂಥದರಲ್ಲಿ ನನಗೆ ಕಾಲವು ಮೀರಿಹೋಗಿದೆ'- ಎಂದರು. ರಂಗನಾಥನು -'ಈ ಕಾಲದ ಪರಿಮಿತಿಗೆ ನಾನೇ ಕಾರಣನು. ಆದುದರಿಂದ ನನ್ನ ಆಜ್ಞೆಯಿಂದಲೇ ಈ ಭೂಲೋಕದಲ್ಲಿ ಇನ್ನೂ ಕೆಲವು ಕಾಲವಿದ್ದು, ನನ್ನ ಮಾಯೆಯಿಂದ ಮುಗ್ಧರಾದ ಜನರನ್ನು ಉದ್ಧರಿಸುತ್ತಲೂ, ನನ್ನ ಕೈಂಕರ್ಯವನ್ನು ನಡೆಸುತ್ತಲೂ ಇಲ್ಲಿಯೇ ಸುಖವಾಗಿರು' ಎಂದನು. ಆಚಾರ್ಯರು ಹರಿಯಿಂದ ಪ್ರಾರ್ಥಿಸಲ್ಪಟ್ಟರೂ ಮೋಕ್ಷವನ್ನೇ ಬಯಸಲಾಗಿ ರಂಗನಾಥನು ಅದಕ್ಕೆ ಒಪ್ಪಿ ಇನ್ನೂ ಯಾವುದಾದರೂ ವರವನ್ನೂ ಕೇಳಿಕೊಳ್ಳು ವಂತೆ ಹೇಳಿದರು. ಆಚಾರ್ಯರು -'ಪ್ರಭುವೇ ನಿನ್ನ ಕೃಪೆಯಿಂದ ನನಗೆ ಯಾವ ಲೋಕವು ಲಭಿಸುವುದೋ ಅದು ನನ್ನ ಸಂಬಂಧದಿಂದ ಇರತಕ್ಕ ಮತ್ತು ಕೊನೆಯವರೆಗೆ ನನ್ನ ಸಂಬಂಧವಿಟ್ಟುಕೊಂಡಿರುವವರಿಗೆಲ್ಲ ಲಭಿಸಲಿ'- ಎಂದು ಕೇಳಿಕೊಂಡರು. ರಂಗನಾಥನು ಆಗಲೆಂದು ಒಪ್ಪಿ, ಆಚಾರ್ಯರಿಗೆ ತೀರ್ಥ, ಪ್ರಸಾದ, ಮಾಲೆ, ಪರಿವಟ್ಟ, ಶಠಾರಿಗಳನ್ನು ಕೊಡಿಸಿ ಮರ್ಯಾದೆ ಮಾಡಿದನು. ಆಚಾರ್ಯರು ರಂಗನಾಥನ ಅನುಮತಿ ಯನ್ನು ಪಡೆದು ಶ್ರೀವೈಷ್ಣವರಿಂದ ಕೂಡಿದ ತಮ್ಮ ಮಠಕ್ಕೆ ಹೋದರು.

ಅಲ್ಲಿದ್ದ ಎಲ್ಲ ಶ್ರೀವೈಷ್ಣವರನ್ನೂ ಕರೆದು ಪರಮದಯಾಳುಗಳಾದ ಆಚಾರ್ಯರು ಎಲ್ಲರಿಗೂ ಎಪ್ಪತ್ತೆರಡು ವಾಕ್ಯಗಳ ಉಪದೇಶವನ್ನು ಮಾಡಿದರು:-

ತನ್ನ ಆಚಾರ್ಯರ ಮತ್ತು ವೈಷ್ಣವರ ಕೈಂಕರ್ಯವನ್ನು ಸಮಾನವಾಗಿ ತಿಳಿದು ಅವರ ಕೈಂಕರ್ಯವನ್ನು ಮಾಡಬೇಕು. ಪೂರ್ವಾಚಾರ್ಯರ ವಾಕ್ಯಗಳಲ್ಲಿ ನಂಬಿಕೆಯನ್ನಿಡಬೇಕು. ಅಹೋರಾತ್ರಿಯಾಗಿ ಇಂದ್ರಿಯಗಳಿಗೆ ಅಧೀನನಾಗಿರಬೇಕು. ಯಾವಾಗಲೂ ಸಾಮಾನ್ಯ ಶಾಸ್ತ್ರದಲ್ಲಿಯೇ

ಆಸಕ್ತನಾಗಿರಬಾರದು; ಭಗವದ್ವಿಷಯವಾದ ಶಾಸ್ತ್ರದಲ್ಲಿ ಆಸಕ್ತನಾಗಿರಬೇಕು. ಆಚಾರ್ಯರ ಕೃಪೆಯಿಂದ ಜ್ಞಾನವನ್ನು ಹೊಂದಿ ಮತ್ತೆ ಶಬ್ದಾದಿ ವಿಷಯಗಳ ಕಿಂಕರನಾಗಬಾರದು. ಶಬ್ದಾದಿವಿಷಯಗಳು ಸಮಾನವಾಗಿ ಕಾಣುವುದಲ್ಲದೆ, ಅವುಗಳಲ್ಲಿ ಸೌರಭ, ರುಚಿ ಮೊದಲಾದ ಕಾರ್ಯಗಳನ್ನು ಮಾಡಬಾರದು. ಭಗವನ್ನಾಮ ಕೀರ್ತನದಲ್ಲಿ ಇರುವ ಪ್ರೀತಿಯು ಭಗವದ್ಭಕ್ತರ ನಾಮಸಂಕೀರ್ತನೆಯಲ್ಲಿಯೂ ಇರಬೇಕು. ಭಗವತ್ಪ್ರಾಪ್ತಿಗೆ ಮಹಾಭಾಗವತಾಶ್ರಯಣವೇ ಕಾರಣವೆಂದು ತಿಳಿದು ಯಾವಾಗಲೂ ಅವರ ಅಪ್ಪಣೆಯಂತೆ ನಡೆದುಕೊಳ್ಳಬೇಕು. ಪ್ರಾಜ್ಞನಾದರೂ ರಾಗಾದಿ ಪ್ರೇರಿತನಾಗಿ ವಿಷ್ಣುಕೈಂಕರ್ಯವನ್ನೂ, ವೈಷ್ಣವ ಕೈಂಕರ್ಯವನ್ನೂ ಬಿಟ್ಟರೆ ಹಾಳಾಗುವನು. ವೈಷ್ಣವರ ಅನುಷ್ಠಾನವನ್ನು ಉಪಾಯವೆಂದು ತಿಳಿಯದೆ ಉಪೇಯವೆಂದೇ ತಿಳಿಯಬೇಕು. ಮಹಾಭಾಗವತರನ್ನು ಏಕವಚನದಿಂದ ಕರೆಯಬಾರದು. ಭಾಗವತರನ್ನು ಕಂಡಕೂಡಲೇ ನಮಸ್ಕರಿಸಬೇಕು. ಪರಮಾತ್ಮನಾದ ಶ್ರೀಹರಿಯ ಸನ್ನಿಧಿಯಲ್ಲೂ, ಭಾಗವತರ ಸನ್ನಿಧಾನದಲ್ಲಿ ಎಂದೂ ಕಾಲನ್ನು ನೀಡಿಕೊಂಡು ಕುಳಿತುಕೊಳ್ಳಬಾರದು. ವಿಷ್ಣುಮಂದಿರ, ಗುರುಗಳ ಮಠ, ವೈಷ್ಣವರ ಮನೆಗಳ ಕಡೆಗೆ ಕಾಲನ್ನು ನೀಡಿಕೊಂಡು ಯಾವಾಗಲೂ ಮಲಗಬಾರದು. ನಿದ್ರೆಯಿಂದ ಎದ್ದಕೂಡಲೇ ಗುರುಪರಂಪರೆಯನ್ನು ಪಠಿಸಬೇಕು. ವಿಷ್ಣುಸನ್ನಿಧಿಯಲ್ಲಿರುವ ಮಹಾಭಾಗವತರನ್ನು ಕಂಡು ದ್ವಯಾನುಸಂಧಾನ ಪೂರ್ವಕವಾಗಿ ದಂಡವತ್ಪ್ರಣಾಮವನ್ನು ಮಾಡಬೇಕು. ಶ್ರೀವೈಷ್ಣವರು ಭಗವಂತನ ಮತ್ತು ಭಾಗವತರ ನಾಮಸಂಕೀರ್ತನ ಮಾಡುತ್ತಿರಲು ಅವರನ್ನು ಗೌರವಿಸದೆ ಮಧ್ಯ ಎದ್ದು ಹೋಗುವುದು ಅತ್ಯಂತ ಅಪಚಾರವು. ವೈಷ್ಣವನ ಆಗಮನವನ್ನು ಕೇಳಿ ಎದುರುಗೊಂಡು ಹೋಗಬೇಕು; ಅವರು ಹೊರಡುವಾಗ ಭಕ್ತಿಯಿಂದ ಸ್ವಲ್ಪದೂರ ಅವರನ್ನು ಅನುಸರಿಸಬೇಕು. ಇವೆರಡನ್ನೂ ಮಾಡದಿದ್ದರೆ ಮಹಾದೋಷವು. ಆತ್ಮೋಜ್ಜೀವನಕ್ಕಾಗಿ ಯಾವಾಗಲೂ ಮಹಾತ್ಮರಾದ ವೈಷ್ಣವರನ್ನು ಅನುಸರಿಸದೆ, ಕೇವಲ ದೇಹಪೋಷಣೆಗಾಗಿ ನೀಚರ ಮನೆಗೆ ಆಗಾಗ ಹೋಗುತ್ತ ಅವರ ನಾಮಸಂಕೀರ್ತನ ಮಾಡುತ್ತ ನಿಯಮ ಬಾಹಿರನಾಗಿರುವುದು ವೈಷ್ಣವರ ಸ್ವರೂಪಕ್ಕೆ ಹಾನಿಕರ. ವಿಷ್ಣುಮಂದಿರದ ವಿಮಾನಗಳನ್ನೂ, ಗೋಪುರಗಳನ್ನೂ ಕಂಡ ಮಾತ್ರದಿಂದಲೇ ನಮಸ್ಕರಿಸಬೇಕು. ಇತರ ವಿಮಾನಗಳನ್ನು ಕಂಡು ಆಶ್ಚರ್ಯಪಡಬಾರದು. ಭಗವದ್ಭಾಗವತರ ನಾಮಸಂಕೀರ್ತನ ಮಾಡುವವರ ವಿಚಾರವನ್ನು ಕೇಳಿ ಸಂತೋಷಪಡದೆ ನಿಂದಿಸುವುದು ಮಹಾಪಾಪ. ಶ್ರೀವೈಷ್ಣವರ ನೆರಳನ್ನು ತುಳಿಯಬಾರದು. ತಮ್ಮ ನೆರಳನ್ನು ಅದರೊಡನೆ ಬೆರಸಬಾರದು. ಸಂಸಾರಮಗ್ನರಾಗಿರುವವರನ್ನು ಮುಟ್ಟಿ ಶ್ರೀವೈಷ್ಣವರನ್ನು ಮುಟ್ಟಬಾರದು. ದರಿದ್ರನಾದ ವೈಷ್ಣವನು ಮೊದಲು ನಮಸ್ಕರಿಸಿದರೆ ಅನಾದರಿಸುವುದು ಮಹಾಪಾತಕ. ಆಕಸ್ಮಿಕವಾಗಿ ಉಂಟಾದ ಶ್ರೀವೈಷ್ಣವನ ದೋಷಗಳನ್ನು ಜನಗಳೆದುರಿಗೆ ಪ್ರಕಟಿಸಬಾರದು. ದೋಷಗಳನ್ನು ಬಿಟ್ಟು ಗುಣಗಳನ್ನೇ ಎತ್ತಿಹೇಳಬೇಕು. ವಿಷ್ಣುವಿನ ಪಾದತೀರ್ಥವನ್ನಾಗಲಿ, ತದ್ಭಕ್ತರಪಾದೋದಕವನ್ನಾಗಲಿ, ನೀಚರು ನೋಡುತ್ತಿರುವಂತೆ ಗ್ರಹಿಸಬಾರದು.

ತತ್ತ್ವತ್ರಯ ಮತ್ತು ರಹಸ್ಯ ತ್ರಯಗಳ ಜ್ಞಾನವಿಲ್ಲದವನ ಪಾದೋದಕವನ್ನು ಎಂದಿಗೂ ಗ್ರಹಿಸಬಾರದು. ಜ್ಞಾನಾನುಷ್ಠಾನಪರನೂ ಸದಾಚಾರಯುಕ್ತನೂ ಆದ ಶ್ರೀವೈಷ್ಣವನ ಪಾದ

ತೀರ್ಥವನ್ನು ಪ್ರತಿದಿನವೂ ಪ್ರಯತ್ನದಿಂದ ಸ್ವೀಕರಿಸಬೇಕು. ನನ್ನಲ್ಲಿ ಮಹಾಭಾಗವತನೆಂಬ ಬುದ್ಧಿಯನ್ನಾಡಬಾರದು. ನೀಚರ ಸ್ಪರ್ಶವು ಆಕಸ್ಮಿಕವಾಗಿ ಉಂಟಾದರೆ ಸಚೇಲಸ್ನಾನಮಾಡಿ ವೈಷ್ಣವನ ಪಾದತೀರ್ಥವನ್ನು ತೆಗೆದುಕೊಳ್ಳಬೇಕು. ವೈರಾಗ್ಯ, ಜ್ಞಾನ, ಭಕ್ತಿ ಮೊದಲಾದ ಗುಣಗಳುಳ್ಳ ಮಹಾತ್ಮರಾದ, ವೈಷ್ಣವರಲ್ಲಿ ತಮ್ಮ ಉದ್ದೇಶ್ಯವೇ ಅವರೆಂದು ತಿಳಿಯಬೇಕು. ಪ್ರಾಕೃತರ ಮನೆಯಲ್ಲಿ ವಿಷ್ಣುತೀರ್ಥವನ್ನು ಗ್ರಹಿಸಬಾರದು. ಅಂತೆಯೇ ಪ್ರಾಕೃತರ ಮನೆಯಲ್ಲಿರುವ ವಿಷ್ಣುವಿಗ್ರಹಗಳನ್ನು ಸೇವಿಸಬಾರದು, ಶ್ರೀಹರಿಯ ದಿವ್ಯದೇಶಗಳಲ್ಲಿ ಪ್ರಾಕೃತರು ನೋಡುತ್ತಿದ್ದರೂ ತೀರ್ಥಪ್ರಸಾದಗಳನ್ನು ಸ್ವೀಕರಿಸಬಹುದು. ದೇವಾಲಯಗಳಲ್ಲಿ ಶ್ರೀವೈಷ್ಣವರಿಂದ ಕೊಡಲ್ಪಟ್ಟ ಪ್ರಸಾದವನ್ನು ಉಪವಾಸಾದಿ ನಿಯಮವುಳ್ಳವನೆಂದೂ ತಿರಸ್ಕರಿಸಬಾರದು. ಸರ್ವಪಾಪರಹಿತವಾಗಿಯೂ ಪಾವನವಾಗಿಯೂ ಇರುವ ಶ್ರೀಹರಿಯ ಪ್ರಸಾದದಲ್ಲಿ ಎಂದಿಗೂ ಉಚ್ಛಿಷ್ಟವೆಂಬ ಜ್ಞಾನವಿಡಬಾರದು. ವೈಷ್ಣವಸನ್ನಿಧಿಯಲ್ಲಿ ತನ್ನ ಗುಣಗಳನ್ನು ಹೊಗಳಿಕೊಳ್ಳಬಾರದು; ಇತರರನ್ನು ಅವಮಾನಪಡಿಸಲೂಬಾರದು. ಭಾಗವತಗುಣಾನುಭವವಿಲ್ಲದೆ ಯಾವುದೊಂದು ಕೆಲಸವನ್ನೂ ಮಾಡಬಾರದು. ದಿನದಲ್ಲಿ ಒಂದು ಘಳಿಗೆಯಾದರೂ ಆಚಾರ್ಯರ ಸದ್ಗುಣಗಳನ್ನು ಕೀರ್ತಿಸಬೇಕು. ಶಠಾರಿಯೇ ಮೊದಲಾದವರ ಪ್ರಬಂಧಗಳನ್ನು ಪಠಿಸಬೇಕು. ದೇಹಾಭಿಮಾನಿಗಳೊಡನೆ ಸಹವಾಸ ಮಾಡಬಾರದು. ಶ್ರೀವೈಷ್ಣವಚಿಹ್ನೆಗಳಿಂದ ಕೂಡಿದ್ದರೂ ವಿಷಯಾಸಕ್ತರಾಗಿದ್ದರೆ ಅಂಥ ವಂಚಕರ ಸಹವಾಸದಲ್ಲಿರಬಾರದು. ಪರದೂಷಣ ತತ್ಪರರೊಡನೆ ಹೆಚ್ಚು ಮಾತಾಡಬಾರದು. ದೇವತಾಂತರಭಕ್ತರ ಸಂಗದೋಷವನ್ನು ಹೋಗಲಾಡಿಸಲು ಮಹಾಭಾಗವತರೊಡನೆ ಸಂಭಾಷಿಸುತ್ತಿರಬೇಕು. ಭಾಗವತದೂಷಕರಾದ ಪುರುಷಾಧಮರನ್ನೂ, ಗುರುಗಳ ಅಪಚಾರ ಮಾಡುವ ಕ್ರೂರಿಗಳನ್ನು ನೋಡಬಾರದು. ಯಾವಾಗಲೂ ದ್ವಯೈಕನಿಷ್ಠರಾದವರೊಡನೆ ವಾಸಮಾಡುತ್ತಿರಬೇಕು. ಪ್ರಪತ್ತಿಧರ್ಮನಿರತರೂ, ರಹಸ್ಯತ್ರಯಸಾರಜ್ಞರೂ ಆದವರೊಡನೆ ಆದರದಿಂದ ಇರಬೇಕು. ಭಗವದ್ಭಕ್ತಿನಿಷ್ಠರೊಡನೆ ಇರಬೇಕೇ ಹೊರತು ಅರ್ಥಕಾಮಪರರಾದವರೊಡನೆ ಇರಬಾರದು. ವೈಷ್ಣವನು ತಿರಸ್ಕರಿಸಿದರೇ ಅವಮಾನವೆಂದು ಭಾವಿಸದೆ ಮೌನದಿಂದ ಇರಬೇಕು. ಧರ್ಮಬಾಹಿರವಾದ ಕೆಲಸವನ್ನು ಮಾಡಬಾರದು. ಹರಿಗೆ ಅರ್ಪಣ ಮಾಡದ ಅನ್ನವನ್ನು ತಿನ್ನಬಾರದು. ಹರಿಗೆ ಅರ್ಪಿಸದೇ ಇರುವ ಪುಷ್ಪ, ಚಂದನ ತಾಂಬೂಲಾದಿಗಳನ್ನು ಧರಿಸಬಾರದು. ಕಾರಣಾಂತರದಿಂದ ತಾನಾಗಿಯೇ ಬಂದುದಾದರೂ, ಅರ್ಥಕಾಮಗಳನ್ನು ಎಂದಿಗೂ ಸ್ವೀಕರಿಸಬಾರದು. ಜಾತ್ಯಾದ್ಯದುಷ್ಟವಾದ ಅನ್ನಾದಿಗಳನ್ನು ಪ್ರೀತಿಯಿಂದ ಸ್ವೀಕರಿಸಬೇಕು. ತನ್ನ ದೇಹಕ್ಕೆ ಪ್ರಿಯವಾದುದಾದರೂ ಅಶಾಸ್ತ್ರೀಯವಾದ ಭೋಗವನ್ನು ಪರಮಾತ್ಮನಿಗೆ ಅರ್ಪಿಸಬಾರದು. ಶಾಸ್ತ್ರೀಯವಾದ ಸರ್ವಭೋಗಗಳನ್ನು ಅರ್ಪಿಸಬಹುದು. ವಿಷ್ಣುವಿಗೆ ಅರ್ಪಿತವಾದ ಅನ್ನಪಾನೀಯಗಳಲ್ಲಿ ಪ್ರಸಾದಬುದ್ಧಿಯಿರಬೇಕೇ ವಿನಾ, ಭೋಗಬುದ್ಧಿಯಿರಬಾರದು. ಶಾಸ್ತ್ರೀಯವಾದ ಕರ್ಮಗಳನ್ನು ಕೈಂಕರ್ಯದಿಂದಲೇ ಮಾಡಬೇಕು. ಮಂತ್ರತ್ರಯಾರ್ಥನಿಷ್ಠರಾದ ಮಹಾಭಾಗವತರ ಅಪಚಾರಕ್ಕಿಂತಲೂ ಆತ್ಮವಿನಾಶಕ್ಕೆ ಮತ್ತೊಂದು ಕಾರಣವಿಲ್ಲ. ವಿಷ್ಣುಭಕ್ತರ ಪೂಜೆಗಿಂತಲೂ ಬೇರೆ ಪುರುಷಾರ್ಥವಿಲ್ಲ, ಅವರ ದ್ವೇಷಕ್ಕಿಂತಲೂ ನಾಶಕಾರಣವು ಮತ್ತೊಂದಿಲ್ಲ.

ಶ್ಲೋ॥ ಅರ್ಚಾವಿಷ್ಣೋ ಶಿಲಾಧೀರ್ಗುರುಷು ನರಮತಿ ವೈಷ್ಣವೇಜಾತಿಬುದ್ಧಿಃ
ವಿಷ್ಣೋರ್ವಾ ವೈಷ್ಣವಾನಾಂ ಕಲಿಮಲಮಥನೇ ಪಾದತೀರ್ಥೇಕಬುದ್ಧಿಃ।
ಸಿದ್ಧೇ ತನ್ನಾಮಮಂತ್ರೇ ಕಲಿಕಲುಷಹರೇ ಶಬ್ದಸಾಮಾನ್ಯ ಬುದ್ಧಿಃ।
ಶ್ರೀಶೇ ಸರ್ವೇಶ್ವರೇಶೇ ತದಿ ತರಸಮಧೀರ್ಯಸ್ಯವಾ ನಾರಕೀಸಃ।
ಶ್ರೀಮದ್ಭಾಗವತಾರ್ಚನಂ ಭಗವತಃ ಪೂಜಾವಿಧೇರುತ್ತಮಂ
ಶ್ರೀವಿಷ್ಣೋರವಮಾನನಾದ್ಗುರುತರಂ ಶ್ರೀವೈಷ್ಣವೋಲ್ಲಂಘನಂ।
ತೀರ್ಥಾದಚ್ಯುತ ಪಾದಜಾದ್ಗುರುತರಂ ತೀರ್ಥಂ ತದೀಯಾಂಘ್ರಿಜಂ
ತಸ್ಮಾನ್ನಿತ್ಯ ಮತಂದ್ರಿತೋಭವಸತಾಂತೇಷಾಂ ಸಮಾರಾಧನೇ॥

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶಿಷ್ಯಜನರಿಗೆ ಚತುಸ್ಸಪ್ತತಿ ವಾಕ್ಯೋಪದೇಶವೆಂಬ ಅರವತ್ತೈದನೆಯ ಅಧ್ಯಾಯವು ಮುಗಿದುದು.

೬೬

ಹೀಗೆ ಪರಮಕರುಣಾಕರರಾದ ಯತಿರಾಜರು ಶಿಷ್ಯರಿಗೆ ಅಹೋರಾತ್ರಿಯಾಗಿ ಮೂರುದಿನ ತತ್ವಾರ್ಥಗಳನ್ನು ಉಪದೇಶಿಸಿದರು. ಅಪೂರ್ವವಾಗಿ ಉಪದೇಶಿಸಿದಂತಹ ತತ್ವಾರ್ಥಗಳನ್ನು ಕೇಳಿ ಆಶ್ಚರ್ಯಗೊಂಡ ಶಿಷ್ಯರು 'ಎಂದೂ ತಿಳಿಸದ ತತ್ವಗಳನ್ನು ಇಂದು ತಿಳಿಸಲು ಕಾರಣವೇನು? ನಮಗೆ ಬಹಳ ಸಂಶಯವುಂಟಾಗಿರುವುದು'- ಎಂದು ಕೇಳಲು, ಆಚಾರ್ಯರು ತಮಗೆ ರಂಗನಾಥನು ಪರಮಪದವನ್ನು ಕರುಣಿಸಿರುವುದಾಗಿಯೂ ನಾಲ್ಕನೆಯ ದಿವಸ ತಾವು ಹೊರಟು ಹೋಗುವುದಾಗಿಯೂ ತಿಳಿಸಿದರು. ಇದನ್ನು ಕೇಳಿದ ಕೂಡಲೇ ಬುಡ ಕತ್ತರಿಸಿದ ಮರದಂತೆ ಬಿದ್ದು ಎಲ್ಲರೂ ನಿಶ್ಚೇತನರಾದರು. ಸ್ವಲ್ಪ ಹೊತ್ತಿನ ಮೇಲೆ ಎಚ್ಚರಗೊಂಡು ಅವರೂ ದೇಹತ್ಯಾಗ ಮಾಡುವುದಾಗಿ ತಿಳಿಸಿದರು. ಆಗ ಆಚಾರ್ಯರು 'ನೀವೆಲ್ಲರೂ ಹೀಗೆ ಪ್ರಾಣಬಿಡಬಾರದು. ನೀವು ಪ್ರಾಣಬಿಡುವುದಾದರೆ ಶಠಾರಿ, ಮಹಾಪೂರ್ಣ, ಯಾಮುನಾಚಾರ್ಯರೇ ಮೊದಲಾದವರ ಹೆಸರಿನಲ್ಲಿ ನಿಮ್ಮನ್ನು ಶಪಿಸುತ್ತೇನೆ. ನಿಮಗೆ ಮಹಾದುರ್ಗತಿಯುಂಟಾಗುವುದು'- ಎಂದರು. ಇದನ್ನು ಕೇಳಿ ಹೆದರಿದ ಶಿಷ್ಯರು ಉಪಾಯವೇನೆಂದು ಕೇಳಿದರು. ಆಚಾರ್ಯರು ಯೋಚಿಸಿ, ಒಂದು ಅರ್ಚಾವಿಗ್ರಹವನ್ನು ಮಾಡಿಸಿ, ಆಲಿಂಗಿಸಿ, ತಮ್ಮ ಶಕ್ತಿಯನ್ನು ಅದರಲ್ಲಿ ಆವಾಹಿಸಿದರು. ಶಿಷ್ಯರನ್ನು ಕುರಿತು 'ನನ್ನಲ್ಲಿರುವ ಭಕ್ತಿಯನ್ನು ಈ ವಿಗ್ರಹದಲ್ಲಿರಿಸಿ ಸೇವಾ ನಿರತರಾಗಿರಿ'- ಎಂದು ಸಮಾಧಾನ ಮಾಡಲು, ಆ ಸುಂದರವಾದ ವಿಗ್ರಹದಲ್ಲಿ ಅಧಿಕವಾದ ಭಕ್ತಿಯನ್ನಿಟ್ಟು ಸಂತುಷ್ಟರಾದರು. ಅಲ್ಲಿಂದ ಮೊದಲಾಗಿ ಎಲ್ಲ ವಿಷ್ಣುಕ್ಷೇತ್ರಗಳಲ್ಲಿಯೂ ಆಚಾರ್ಯರ ಅರ್ಚಾವಿಗ್ರಹಗಳಾದವು. ಅವುಗಳಲ್ಲಿ ಶ್ರೀರಂಗ, ಶ್ರೀಪೆರುಂಬೂದೂರು, ತಿರುನಾರಾಯಣಪುರ(ಮೇಲುಕೋಟೆ) ಈ ಮೂರು ದಿವ್ಯದೇಶಗಳಲ್ಲಿ ಆಚಾರ್ಯರಿಂದ ಸ್ವತಃ ಪ್ರತಿಷ್ಠಿತವಾದ ವಿಗ್ರಹಗಳಿರುವುವು. ಅದರಲ್ಲಿ ಆಚಾರ್ಯರಿಗೆ ತಮ್ಮ ಜನ್ಮಸ್ಥಳವಾದ ಶ್ರೀಪೆರುಂಬೂದೂರಿನಲ್ಲಿ ಅತಿಶಯವಾದ ಕೃಪೆಯುಂಟು.

ಹಿಂದೆ ಒಂದು ಸಲ ದಾಶರಥಿಯ ಮಗನಾದ ಶ್ರೀರಾಮಾನುಜದಾಸನು ಆಚಾರ್ಯರನ್ನು ಕುರಿತು -'ತಮ್ಮ ಅವತಾರ ಸ್ಥಳವಾದ ಭೂತಪುರಿಯಲ್ಲಿ ನಮ್ಮ ಸಂರಕ್ಷಣೆಗಾಗಿ ಒಂದು ಅರ್ಚಾವಿಗ್ರಹವನ್ನು ಕರುಣಿಸಬೇಕು'- ಎಂದು ಪ್ರಾರ್ಥಿಸಲು, ಅದರಂತೇ ಆಚಾರ್ಯರು ಸುಂದರವಾದ ವಿಗ್ರಹವನ್ನು ಮಾಡಿಸಿ ಉಚ್ಛ್ವಾಸರೂಪದಿಂದ ತಮ್ಮ ತೇಜಸ್ಸನ್ನು ಆ ವಿಗ್ರಹದಲ್ಲಿ ಸೇರಿಸಿದರು. ಅದನ್ನು ನೋಡಿ ಜನರೆಲ್ಲರೂ ಸಂತುಷ್ಟರಾದರು. ಆ ವಿಗ್ರಹವನ್ನು ಯತಿರಾಜರು ರಾಮಾನುಜ ದಾಸನಿಗೆ ಕೊಟ್ಟು, ಭೂತನಗರಿಯಲ್ಲಿ ಇಂಥ ದಿವಸವೇ ಪ್ರತಿಷ್ಠಾಪಿಸಬೇಕೆಂದೂ ತಿಳಿಸಿದರು. ತುಷ್ಟನಾದ ರಾಮಾನುಜದಾಸನು ಮಹಾಗೋಷ್ಠಿಯೊಡನೆಯೂ, ಸರ್ವಮಂಗಳ ವಾದ್ಯಗಳೊಡನೆಯೂ, ಶ್ರೀರಂಗದಿಂದ ಭೂತನಗರಿಗೆ ಹೊರಟನು. ಅಲ್ಲಿ ಶ್ರೀಕೇಶವ ಸ್ವಾಮಿಯವರ ಸನ್ನಿಧಿಯಲ್ಲಿ ಆಚಾರ್ಯರು ತಿಳಿಸಿದ್ದ ದಿವಸ ಆ ವಿಗ್ರಹವನ್ನು ಯಥಾವಿಧಿಯಾಗಿ ಜಲವಾಸ, ಮಹಾಭಿಷೇಕ ಮೊದಲಾದುವುಗಳನ್ನು ಮಾಡಿಸಿ ಪ್ರತಿಷ್ಠಿಸಿದನು. ಇದೇ ಸಮಯದಲ್ಲಿ ಶ್ರೀರಂಗದಲ್ಲಿ ಆಚಾರ್ಯರಿಗೆ ಶರೀರದಲ್ಲಿ ಬಹಳ ಆಯಾಸವಾಯಿತು. ಭೂತನಗರಿಯಲ್ಲಿ ವಿಗ್ರಹದ ನೇತ್ರೋನ್ಮೀಲನವಾಗುವಾಗ ಶ್ರೀರಂಗದಲ್ಲಿ ಆಚಾರ್ಯರ ಕಣ್ಣಿನಿಂದ ರಕ್ತವು ಸುರಿಯಲಾರಂಭವಾಯಿತು. ಆಕಸ್ಮಿಕವಾಗಿ ಹೀಗಾದುದು ಎಲ್ಲರಿಗೂ ಗಾಬರಿಯಾಯಿತು. ಸ್ವಲ್ಪ ಹೊತ್ತಿನಲ್ಲಿ ಭೂತನಗರಿಯಲ್ಲಿ ಪ್ರತಿಷ್ಠೆ ಮಾಡಿದ ವೃತ್ತಾಂತವು ತಿಳಿಯಲು ಎಲ್ಲರಿಗೂ ಸಮಾಧಾನವಾಯಿತು. ಹೀಗೆ ಭೂತನಗರಿಯಲ್ಲಿರುವ ವಿಗ್ರಹದಲ್ಲಿ ಆಚಾರ್ಯರ ಪೂರ್ಣವಾದ ಕಲೆಯು ಇರುವುದರಿಂದ ಅದಕ್ಕಿಂತಲೂ ಪುಣ್ಯಕ್ಷೇತ್ರವು ಮತ್ತೊಂದಿಲ್ಲ. ಅನೇಕ ದಿವ್ಯದೇಶಗಳ ವಾಸದಫಲವು, ಅದೊಂದು ನಗರದಲ್ಲಿ ವಾಸಮಾಡುವುದರಿಂದಲೇ ದೊರಕುವುದರಿಂದ ಅಲ್ಲಿ ಒಂದು ಗುಡಿಸಲು ಕಟ್ಟಿಕೊಂಡು ವಾಸಮಾಡುವುದಕ್ಕಾದರೂ ಪ್ರಯತ್ನಿಸಬೇಕು. ಮುಮುಕ್ಷುವಾದ ವೈಷ್ಣವನು ಮಹಾಪಾತಕಿಯಾಗಿದ್ದರೂ ಆಚಾರ್ಯರನ್ನು ವಂದಿಸಿದರೆ ಮುಕ್ತನಾಗುವುದರಲ್ಲಿ ಸಂಶಯವಿಲ್ಲ. ಚೈತ್ರಮಾಸದ ಆರಿದ್ರಾ ನಕ್ಷತ್ರದಲ್ಲಿ ಯಾರು ಆಚಾರ್ಯರಿಗೆ ಅಭಿಷೇಕ ಮಾಡುವರೋ ಅವರು ಸರ್ವಪಾಪ ವಿಮುಕ್ತರಾಗಿ ವಿಷ್ಣುವಿನ ಪರಮಪದವನ್ನು ಹೊಂದುವರು. ಆಚಾರ್ಯರ ಭಕ್ತಿಯುಳ್ಳವರೇ ಪೂಜ್ಯತಮರು. ಆಚಾರ್ಯರ ಕೈಂಕರ್ಯವೇ ಪರಮಪ್ರಾಪ್ಯವಾದುದು. ಶ್ರೀಭೂತಪುರಿಯ ಅರ್ಚಾವತಾರದ ಮಹಿಮೆಯನ್ನು ತಿಳಿದವನೇ ಕೃತಾರ್ಥನು. "ಸಕಲನಿಗಮಸಾರಂ ಸಾಧುಲೋಕೈಕಸಾರಂ ನಿರುಪಮನವದ್ಯಂ ಭೋಗ ಮೋಕ್ಷೈಕ ಹೇತುಂ। ಹರಿಮತಮಿವಚಾದ್ಯಂ ಯೋನುಸೇವೇತ ಧೀರಃ ಸಕಲನಿಗಮವೇದೀ ಬ್ರಹ್ಮವೇತ್ತಾ ಸ ಏವ"-

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀಭೂತನಗರಿಯ ರಾಮಾನುಜಾಚಾರ್ಯವತಾರ ಮಹಾತ್ಮ್ಯವರ್ಣನೆಯೆಂಬ ಅರವತ್ತಾರನೆಯ ಅಧ್ಯಾಯವು ಮುಗಿದುದು.

೬೭

ಅನಂತರ ಶ್ರೀವೈಷ್ಣವರು ಆಚಾರ್ಯರನ್ನು ಕುರಿತು-'ನಮ್ಮ ಕರ್ತವ್ಯವನ್ನು ಆಜ್ಞಾಪಿಸಬೇಕು'- ಎಂದು ಪ್ರಾರ್ಥಿಸಿದರು. ಅದಕ್ಕೆ ಆಚಾರ್ಯರು -'ಪ್ರಪನ್ನನಾದವನಿಗೆ 'ದೃಷ್ಟ'ವು ಕರ್ಮಾಧೀನವಾದುದು. ಆದುದರಿಂದ ದೃಷ್ಟಾದೃಷ್ಟಗಳ ಸಂಶಯವುಂಟಾದಲ್ಲಿ (ದ್ವಯಾನುಸಂಧಾನದಲ್ಲಿ) ನಿರ್ಭರನಾಗಿರುವುದೇ ಕರ್ತವ್ಯವು?'-ಎಂದರು. 'ನಾವು ದೇಹಪತನದವರೆಗೆ ಹೇಗಿರಬೇಕು?- ಎಂದು ಮತ್ತೆ ಕೇಳಿದುದಕ್ಕೆ '-ಉಪಾಯ ಬುದ್ಧಿಯಿಂದ ಕರ್ಮಗಳನ್ನು ಮಾಡಬೇಡಿ; ಕರ್ಮಗಳಲ್ಲಿಯೂ ಕೈಂಕರ್ಯಬುದ್ಧಿಯಿರಲಿ. ಅವನ ಕೈಂಕರ್ಯವೆಂದೇ ತಿಳಿದು ಶ್ರೀಭಾಷ್ಯವನ್ನು ಆದರದಿಂದ ಕೇಳಿ ಲೋಕದಲ್ಲಿ ಪ್ರಚಾರಮಾಡಿರಿ. ಇದರಲ್ಲಿ ನಿಮಗೆ ಆಸಕ್ತಿಯಿಲ್ಲದಿದ್ದರೆ ಪರಾಂಕುಶಾದಿ ದಶಮುನಿಗಳಿಂದ ರಚಿಸಲ್ಪಟ್ಟ ಪ್ರಬಂಧಗಳನ್ನು ಶಿಷ್ಯರಿಗೆ ಅಹೋ ರಾತ್ರಿಯಾಗಿ ಉಪದೇಶಿಸಿ; ಅದರಲ್ಲಿಯೂ ನಿಮಗೆ ಶಕ್ತಿಯಿಲ್ಲದಿದ್ದರೆ ದಿವ್ಯದೇಶಗಳಲ್ಲಿ ಯಾವಾಗಲೂ ವಿಷ್ಣುವಿನ ಕೈಂಕರ್ಯವನ್ನು ಮಾಡಿ. ಅದೂ ಆಗದಿದ್ದರೆ ನನಗೆ ಪ್ರಿಯವಾಗಿರುವ ಯಾದವಾಚಲದಲ್ಲಿ ಒಂದು ಗುಡಿಸಲನ್ನಾದರೂ ಕಟ್ಟಿಕೊಂಡು ನಿರಹಂಕಾರಿಗಳಾಗಿ ವಾಸಮಾಡಿ; ಇದೂ ನಿಮಗೆ ರುಚಿಸದಿದ್ದರೆ ಯಾವಜ್ಜೀವವೂ ಸೋಮಾರಿತನವಿಲ್ಲದೇ 'ದ್ವಯ'ದ ಅರ್ಥಾನುಸಂಧಾನದಲ್ಲಿ ನಿರತರಾಗಿ ನಿರ್ಭರರಾಗಿರಿ. ಇದೂ ಆಗದಿದ್ದರೆ, ಕೊನೆಯದಾಗಿ ನಿಮಗೆ ಹಿತವನ್ನು ಹೇಳುವೆನು ಕೇಳಿ. ಜ್ಞಾನವೈರಾಗ್ಯಭಕ್ತಿಗಳಿಂದ ಕೂಡಿರುವ ವೈಷ್ಣವನ ಅಪ್ಪಣೆಯಂತೆ ಯಾವಾಗಲೂ ನಡೆದುಕೊಳ್ಳಿ. ಇದಕ್ಕಿಂತಲೂ ಮತ್ತೊಂದುಪಾಯವಿಲ್ಲ. ಈ ಲೋಕದಲ್ಲಿ ವಾಸಮಾಡುವವರಿಗೆ ಮೂರು ವಿಧವಾದ ವಿಷಯಗಳುಂಟು. ವಿರೋಧಿಗಳು, ಅನುಕೂಲರು, ಸಮರು (ಅನುಭಯರು) ಎಂದು. ವಿಷ್ಣುದ್ವೇಷಿಗಳು ವಿರೋಧಿಗಳು. ವೈಷ್ಣವರು ಅನುಕೂಲರು. ಬದ್ಧರು ಉಭಯಾತ್ಮಕರು. ವಿರೋಧಿಗಳು ಬೆಂಕಿ, ಸರ್ಪಗಳಂತೆ ತ್ಯಾಜ್ಯರು; ವೈಷ್ಣವರು (ಅನುಕೂಲರು)ಪ್ರಿಯವಸ್ತುವಿನಂತೆ ಆದರಕ್ಕೆ ಪಾತ್ರರು. ಕೇವಲ ಸಂಸಾರಿಗಳು ಕಸ-ಕಡ್ಡಿಗಳಂತೆ ಅನಾದರಣೀಯರು. ಧನಲೋಭದಿಂದ ಅನುಕೂಲರಾದವರನ್ನು ಅನಾದರಿಸಿ ವಿರೋಧಿಗಳನ್ನು ಆದರಿಸಿದರೆ, ಸಾರ್ವಭೌಮನಾದ ನೃಪತಿಯ ಮುಂದೆಯೇ ರಾಜಕುಮಾರನನ್ನು ನಿಂದಿಸಿದರೆ ರಾಜನ ಮನಸ್ಸು ವ್ಯಾಕುಲಗೊಳ್ಳು ವಂತೆ ಅನುಕೂಲನ ಅನಾದರಣೆಯಿಂದ ದೇವದೇವನಾದ ವಿಷ್ಣುವು ಖಿನ್ನನಾಗುವನು. ಅರ್ಥಕಾಮಗಳ ದೆಸೆಯಿಂದಲೂ ವಿರೋಧಿಗಳನ್ನು ಪೂಜಿಸಬಾರದು. ವಿರೋಧಿಗಳ ಆ ದ್ರವ್ಯವು ವಿರೋಧಕ್ಕಾಗಿಯೇ ಪರಿಣಮಿಸುವುದು. ಸರ್ವಾಭೀಷ್ಟಫಲಪ್ರದನಾದ ವಿಷ್ಣುವಿರುವಲ್ಲಿ ಅವನನ್ನು ಬಿಟ್ಟು ವಿರೋಧಿಗಳಲ್ಲಿ ಯಾಚಿಸುವುದು-ಸಾರ್ವಭೌಮನ ಪಟ್ಟಮಹಿಷಿಯು ದುಷ್ಟ ಕ್ಷತ್ರಿಯರಲ್ಲಿ ಯಾಚಿಸುವುದಾದರೆ ಸಾರ್ವಭೌಮನಿಗೆ ಅವಮಾನ ವಾಗುವಂತೆ ಭಗವಂತನಿಗೂ ಅವಮಾನವಾಗುವುದರಲ್ಲಿ ಸಂಶಯವಿಲ್ಲ. ಅನುಭಯರನ್ನೂ ಧನಾದಿಲೋಭಗಳಿಂದ ಅನುವರ್ತಿಸಬಾರದು. ಆದುದರಿಂದ ಶ್ರೀವೈಷ್ಣವರು ಅಹಂಕಾರವನ್ನು ಬಿಟ್ಟು ಆಶೆಯನ್ನು ತೊರೆದು, ಮೇಲೆ ಹೇಳಿದ ಉಪಾಯವನ್ನರಿತು ಕಾಲಯಾಪನ ಮಾಡುವುದರಿಂದ ಸಮಸ್ತ

ಫಲಗಳೂ ಉಂಟಾಗುವುವು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀವೈಷ್ಣವ ಲಕ್ಷಣಾನುವರ್ಣನವೆಂಬ ಅರವತ್ತೇಳನೆಯ ಅಧ್ಯಾಯವು ಮುಗಿದುದು.

೬೮

ಹೀಗೆ ಆಚಾರ್ಯರು ಶಿಷ್ಯರಿಗೆ ಶಾಸ್ತ್ರಗಳಸಾರವನ್ನುಪದೇಶಿಸಿ ಬಹು ಸಂತೋಷ ಗೊಂಡರು. ಅನಂತರ ಆಚಾರ್ಯರು ರಂಗಪುತ್ರನಾದ ಪರಾಶರಭಟ್ಟನನ್ನು ಜೊತೆಯಲ್ಲಿ ಕರೆದುಕೊಂಡು ರಂಗನಾಥನ ಸನ್ನಿಧಿಗೆ ಹೋಗಿ, ಆತನಿಗೆ ತೀರ್ಥಪ್ರಸಾದಗಳನ್ನು ಕೊಡಿಸಿ, ಅಲ್ಲಿದ್ದ ಶ್ರೀವೈಷ್ಣವರನ್ನು ಸಂಬೋಧಿಸಿ -'ಈ ರಂಗಕುಮಾರನಾದ ಭಟ್ಟಾಚಾರ್ಯನು ವೈಷ್ಣವದರ್ಶನದ ವರ್ಧಕನು, ಮತ್ತು ನಿಮ್ಮೆಲ್ಲರ ಸಂರಕ್ಷಕನು. ಇನ್ನು ಮುಂದೆ ಈತನ ಅಪ್ಪಣೆಯಂತೆ ನಡೆದುಕೊಳ್ಳಿರಿ'- ಎಂದು ಹೇಳಿ, ರಂಗನಾಥನ ದಾಸ್ಯಸಾಮ್ರಾಜ್ಯದಲ್ಲಿ ಆತನಿಗೆ ಪಟ್ಟಕಟ್ಟಿದರು. ರಂಗನಾಥನಿಗೂ ಸಂತೋಷವಾದುದರಿಂದ ಸಾಮಾನ್ಯ ಜನರಿಗೆ ಆನಂದ ವಾಗುವುದರಲ್ಲಿ ಸಂಶಯವೇನು ?.

ಆಚಾರ್ಯರು ರಂಗನಾಥನ ಅನುಮತಿಯನ್ನು ಪಡೆದು ಹೊರಡುತ್ತ ದಾಶರಥಿಯ ಮಗನ ಕೈಹಿಡಿದುಕೊಂಡು -'ಎಲೈ ದಾಶರಥಿಕುಮಾರನೇ, ಪಶ್ಚಿಮ ದಿಕ್ಕಿನಲ್ಲಿ 'ವೇದಾಂತಿ' ಎಂಬ ಪ್ರಸಿದ್ಧ ಪಂಡಿತನೊಬ್ಬನಿರುವನು. ವಾದದಲ್ಲಿ ಅವನನ್ನು ಜಯಿಸಿ ನಮ್ಮ ಮತಕ್ಕೆ ಸೇರುವಂತೆ ಮಾಡು'- ಎಂದು ಹೇಳಿ ಎಲ್ಲರೊಡನೆಯೂ ಮಠಕ್ಕೆ ತೆರಳಿದರು. ಅಲ್ಲಿ ಎಲ್ಲ ಶಿಷ್ಯರನ್ನು ಕರೆದು -'ನನ್ನ ವಿಯೋಗ ದುಃಖದಿಂದ ದೇಹತ್ಯಾಗ ಮಾಡಬಾರದು'- ಎಂದು ಹೇಳಿ, ಅವರಿಂದ ಅದರಂತೆ ಶಪಥ ಮಾಡಿಸಿದರು.

ಅವರು ವೈಕುಂಠಕ್ಕೆ ಹೊರಡುವ ದಿವಸ ರಂಗನಾಥನ ಪರಿಚಾರಕರನ್ನೆಲ್ಲಾ ಕರೆದು 'ನಾನು ಮಾಡಿರುವ ತಪ್ಪುಗಳನ್ನೆಲ್ಲ ಕ್ಷಮಿಸಬೇಕು'- ಎಂದು ಕೇಳಿಕೊಂಡರು. ಅಂಜಲಿಬದ್ಧರಾದ ಪರಿಚಾರಕರು -'ಜಗದ್ರಕ್ಷಕರಾದ ತಮ್ಮಲ್ಲಿ ಯಾವ ತಪ್ಪಿರಬಹುದು. ನಮ್ಮೆಲ್ಲರನ್ನೂ ಮಕ್ಕಳಂತೆ ಇಲ್ಲಿಯವರೆಗೆ ಪಾಲಿಸಿಕೊಂಡು ಬಂದಿರಿ. ಮುಂದೆ ನಮಗಿನ್ನೇನು ಗತಿ ?'- ಎಂದು ದುಃಖಿಸಿದರು. ಆಚಾರ್ಯರು -'ನೀವು ರಂಗನಾಥನ ಕೈಂಕರ್ಯವನ್ನು ಮಾಡಿಕೊಂಡು ವೈಷ್ಣವರಲ್ಲಿ ಸ್ನೇಹದಿಂದ ಸುಖವಾಗಿರಿ'- ಎಂದು ಸಮಾಧಾನ ಹೇಳಿ, ಇತರರಿಗೂ ಯಥೋಚಿತವಾದ ಹಿತೋಪದೇಶವನ್ನು ಮಾಡಿದರು.

ಅನಂತರ ಆಚಾರ್ಯರು ಗೋವಿಂದನ ತೊಡೆಯಮೇಲೆ ತಲೆಯನ್ನೂ, ಆಂಧ್ರಪೂರ್ಣರ ತೊಡೆಯಮೇಲೆ ಪಾದವನ್ನೂ ಇಟ್ಟುಕೊಂಡು ಮಲಗಿದರು. ಕೆಲವರು ಶಿಷ್ಯರು ಭೃಗುವಲ್ಲಿ, ಆನಂದವಲ್ಲಿಗಳನ್ನು ಪಾರಾಯಣ ಮಾಡುತ್ತಿದ್ದರು. ಮತ್ತೆ ಕೆಲವರು ದಿವ್ಯಪ್ರಬಂಧಗಳನ್ನು ಪಠಿಸುತ್ತಿದ್ದರು. ವಾದ್ಯಗಳೆಲ್ಲವೂ ಘೋರ್ಗರೆಯುತ್ತಿರಲು, ಮುಂಭಾಗದಲ್ಲಿ ಮಹಾಪೂರ್ಣರ ಪಾದುಕೆಗಳನ್ನಿಟ್ಟುಕೊಂಡು ನೋಡುತ್ತಲೂ, ಮನಸ್ಸಿನಲ್ಲಿ ಯಾಮುನಾಚಾರ್ಯರ ಪಾದಪಂಕಜಗಳನ್ನು ಧ್ಯಾನಿಸುತ್ತಲೂ ಬ್ರಹ್ಮರಂಧ್ರವನ್ನು ಭೇದಿಸಿಕೊಂಡು

ರಾಮಾನುಜಾಚಾರ್ಯರು ವಿಷ್ಣುವಿನ ಪರಮಪದವನ್ನು ಹೊಂದಿದರು. ಮಾಘ ಶುಕ್ಲ ದಶಮಿ ಶನಿವಾರ ಮಧ್ಯಾಹ್ನದಲ್ಲಿ ಶೇಷಾವತಾರಿಯಾದ ಆಚಾರ್ಯರು ಆದಿಶೇಷನ ಸ್ವರೂಪವನ್ನು ಹೊಂದಿದರು. "ಧರ್ಮವು ಮುಳುಗಿತು"-ಎಂದು ಆಕಾಶವಾಣಿಯು ಕೇಳಿಸಿತು. ಅಚಿಂತ್ಯವಾದ ಆ ಘಟನೆಯಿಂದ ಎಲ್ಲರೂ ದುಃಖಿತರಾಗಿ ಕ್ಷಣಕಾಲ ಚಿತ್ರದಲ್ಲಿ ಬರೆದಂತೆ ಇದ್ದರು. ಮುಂದಿನ ಕಾರ್ಯಗಳಲೆಲ್ಲ ದಾಶರಥಿ, ಆಂಧ್ರಪೂರ್ಣ, ಗೋವಿಂದ, ಕುರುಕೇಶ್ವರರು ಮುಂದಾಳಾಗಿದ್ದರು. ಕುರುಕೇಶನು ಆಚಾರ್ಯರ ಪುತ್ರಾಭಿಮಾನಿಯಾಗಿದ್ದುದರಿಂದ ಆತನೇ ಸಾಂಗವಾಗಿ ಚರಮಕೈಂಕರ್ಯ ನಡೆಸಿದನು.

ಆಚಾರ್ಯರ ಪದಾಶ್ರಯನೂ ಯತಿಶ್ರೇಷ್ಠನೂ ಆದ ಗೋವಿಂದನು ಆಚಾರ್ಯರ ಅನಂತರ ಪರಾಶರಭಟ್ಟನಿಂದ ರಾಮಾನುಜಸಿದ್ಧಾಂತವನ್ನು ಕೆಲವುಕಾಲ ಅಭಿವೃದ್ಧಿ ಗೊಳಿಸಿದನು. ಆದರೆ ಆಚಾರ್ಯರ ವಿಯೋಗವನ್ನು ಸಹಿಸಲಾರದೆ ಆತನು ವಿಷ್ಣುಪದವನ್ನು ಹೊಂದಿದನು. ಭಟ್ಟಾಚಾರ್ಯನು ತನ್ನ ಆಚಾರ್ಯರಿಗೆ ಚರಮ 'ಕೈಂಕರ್ಯವನ್ನೂ ಯಥಾವಿಧಿಯಾಗಿ ನಡೆಸಿದನು.

ಅನಂತರ ಯತಿರಾಜರಂತೆ ಪರಾಶರಭಟ್ಟನೂ ರಾಮಾನುಜಸಿದ್ಧಾಂತವನ್ನು ಅವ್ಯಾಹತವಾಗಿ ಅಭಿವೃದ್ಧಿಗೊಳಿಸುತ್ತ, ಶ್ರೀರಂಗದಲ್ಲಿ ವಾಸ ಮಾಡುತ್ತಿದ್ದರೂ ಜಗದ್ವಿಖ್ಯಾತನಾಗಿ ಮೆರೆಯುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಾಮಾನುಚಾರ್ಯಚರಮ ದಶಾದಿ ವರ್ಣನವೆಂಬ ಅರವತ್ತೆಂಟನೆಯ ಅಧ್ಯಾಯವು ಮುಗಿದುದು.

## ೬೯

ಆಶ್ರಿತ ಕಲ್ಪತರುವಾದ ಭಾಷ್ಯಕಾರರು, ಸಾಧ್ಯಸಾಧನೆಗಳನ್ನು ಪ್ರತಿಪಾದಿಸುವ ಅಧಿಕಾರಾನುಗುಣವಾಗಿ ವೇದಾಂತಸಾರ, ವೇದಾಂತದೀಪ, ವೇದಾರ್ಥಸಂಗ್ರಹವೆಂಬ ಮೂರು ಗ್ರಂಥಗಳನ್ನು ರಚಿಸಿದರು. ಇವೆಲ್ಲಗಳ ವಿವರಣರೂಪವಾಗಿ ಶ್ರೀಭಾಷ್ಯವನ್ನು ರಚಿಸಿ,ಅದರಲ್ಲಿ ಶ್ರೀಶನ ಅಂಘ್ರಿಪದ್ಮಗಳ ಭಕ್ತಿಯನ್ನು ಪ್ರತಿಪಾದಿಸಿರುವರು. ಅದನ್ನು ಗ್ರಹಿಸುವುದು ಕಷ್ಟಕರ ವೆಂದು ತಿಳಿದು ಪ್ರಪತ್ತಿ ಪ್ರತಿಪಾದಕವಾದ ಗದ್ಯತ್ರಯವನ್ನು ರಚಿಸಿದರು. ಆ ಪ್ರಪತ್ತಿ ಯಲ್ಲಿಯೂ ಅಧಿಕಾರವಿಲ್ಲದವರಿಗೆ ತಮ್ಮ ಪಾದವನ್ನೇ ರಕ್ಷಕವನ್ನಾಗಿ ಹಿತವನ್ನುಪದೇಶಿಸಿ ಲೀಲಾವಿಭೂತಿಯನ್ನು ಬಿಟ್ಟು ನಿತ್ಯವಿಭೂತಿಗೆ ಹೊರಟರು.

ಕೂರನಾಥರ ಸುತನಾದ ಭಟ್ಟಾಚಾರ್ಯನು ಗೋವಿಂದನ ಸಮೀಪದಲ್ಲಿ ವೇದಾಂತ ದ್ವಯವನ್ನು ಅಧ್ಯಯನ ಮಾಡಿ ದರ್ಶನವನ್ನು ನಿರ್ವಹಿಸಿದನು.

ಒಬ್ಬ ಬ್ರಾಹ್ಮಣನು ದಿವ್ಯದೇಶಗಳ ಯಾತ್ರೆಮಾಡುತ್ತ, ಯಾದವಾಚಲಕ್ಕೆ ಬಂದನು. ಅಲ್ಲಿ ಸಂಪತ್ಕುಮಾರನ ದರ್ಶನಮಾಡಿಕೊಂಡು ಶ್ರೀರಂಗಕ್ಕೆ ಬಂದನು. ರಂಗನಾಥನ ದರ್ಶನಮಾಡಿ, ಪರಾಶರಭಟ್ಟನ ಮನೆಯಲ್ಲಿ ಊಟಮಾಡಿದನು. ಭಟ್ಟನು ಆ ಬ್ರಾಹ್ಮಣನು ವಿಶ್ರಾಂತನಾಗಿದ್ದಾಗ -'ಎಲೈ ವಿಪ್ರೋತ್ತಮನೆ, ಯಾವ ಯಾವ ದೇಶಗಳಲ್ಲಿ ಸಂಚರಿಸಿರುವೆ?

ಶಾಸ್ತ್ರ ಪಾರಂಗತರಾದ ಯಾವಯಾವ ಪಂಡಿತರು ಎಲ್ಲೆಲ್ಲಿರುವರು? ನಿನಗೆ ತಿಳಿದಿರುವಂತೆ ಹೇಳು'- ಎಂದು ಕೇಳಿದನು. ಆಗ ಬ್ರಾಹ್ಮಣನು ತಾನು ಎಲ್ಲ ದೇಶಗಳಲ್ಲೂ ಸಂಚರಿಸಿರುವುದಾಗಿಯೂ, ಶ್ರೀರಂಗಪಟ್ಟಣದಲ್ಲಿ "ವೇದಾಂತಿ" ಎಂಬ ಒಬ್ಬ ಮಹಾಪಂಡಿತನಿರುವುದಾಗಿಯೂ, ಆತನು ಶಾಸ್ತ್ರವಾದದಿಂದ ಷಣ್ಮತಗಳನ್ನು ಜಯಿಸಿರುವುದಾಗಿಯೂ ಅವನನ್ನು ನೋಡಿ ಮಾತಾಡಿ, ಭಟ್ಟರನ್ನು ನೋಡಬೇಕೆಂದು ಶ್ರೀರಂಗಕ್ಕೆ ಬಂದುದಾಗಿಯೂ, ಮತ್ತೆ ಸಂಪತ್ಪುತ್ರನ ದರ್ಶನಾರ್ಥವಾಗಿ ಯಾದವಾಚಲಕ್ಕೆ ಹೋಗುವುದಾಗಿಯೂ ತಿಳಿಸಿ, ಅಲ್ಲಿಂದ ಹೊರಟನು. ಶ್ರೀರಂಗಪಟ್ಟಣಕ್ಕೆ ಹೋಗಿ, ಭಟ್ಟರ ವಿಚಾರವೆಲ್ಲವನ್ನೂ ವೇದಾಂತಿಗೆ ತಿಳಿಸಿ, ಮತ್ತೆ ಶ್ರೀರಂಗಕ್ಕೆ ಬಂದನು. ಬಂದು ಭಟ್ಟರನ್ನು ನೋಡಿ,'ಎಲೈ ವಿಬುಧಶ್ರೇಷ್ಠ ಇಲ್ಲಿಂದ ನಾನು ಶ್ರೀರಂಗಪಟ್ಟಣಕ್ಕೆ ಹೋದೆನು. ಅಲ್ಲಿ ವೇದಾಂತಿಯನ್ನು ಕಂಡು, -'ಶ್ರೀರಂಗದಲ್ಲಿ ಕೂರನಾಥರ ಪುತ್ರನೂ, ರಂಗೇಶಪುರೋಹಿತನೂ ಆದ ಪರಾಶರಭಟ್ಟನೆಂದು ಪ್ರಸಿದ್ಧನಾದ ಓಬ್ಬ ಪಂಡಿತನಿರುವನು. ಆತನು ಸಕಲಶಾಸ್ತ್ರವೇತ್ತನು. ವಾದದಲ್ಲಿ ಅವನನ್ನು ಯಾರೂ ಸೋಲಿಸಲಾರರು'- ಎಂಬುದಾಗಿ ಮಾಯಾವಾದಿಯಾದ ಆತನನ್ನು ಹೆದರಿಸಿರುವೆನು. ಇದನ್ನು ಹೇಳುವುದಕ್ಕಾಗಿಯೇ ಮತ್ತೆ ಇಲ್ಲಿಗೆ ಬಂದೆನು'- ಎಂದನು. ಅದನ್ನು ಕೇಳಿದ ಭಟ್ಟನೂ ಸಹ ವೇದಾಂತಿಯನ್ನು ವಾದದಲ್ಲಿ ಜಯಿಸಬೇಕೆಂದು ನಿಶ್ಚಯಿಸಿದನು. ಅನಂತರ ಭಟ್ಟಾಚಾರ್ಯನು ರಂಗನಾಥನ ಸನ್ನಿಧಿಯಲ್ಲಿ ವಿಜ್ಞಾಪಿಸಲು, ಸಂತುಷ್ಟನಾದ ರಂಗನಾಥನು ಪಲ್ಲಕ್ಕಿ, ಛತ್ರ, ಚಾಮರ, ದಂಡಧಾರಿಗಳಾದ ಭಟರು, ಭಕ್ತವೃಂದ ಇತರ ಪರಿವಾರದೊಡನೆ ಕಳುಹಿಸಿಕೊಡಲು, ಆಚಾರ್ಯರ ಅಪ್ಪಣೆ ಮತ್ತು ಪರಮಾತ್ಮನ ಅನುಗ್ರಹವನ್ನು ಹೊಂದಿ ವೇದಾಂತಿಯನ್ನು ಜಯಿಸುವುದಕ್ಕಾಗಿ ಹೊರಟನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ವೇದಾಂತಿವೃತ್ತಕಥನವೆಂಬ ಅರವತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

## ೭೦

ವೇದಾಂತಿಯ ಊರಿನ ಸಮೀಪಕ್ಕೆ ಭಟ್ಟಾಚಾರ್ಯನು ಬರುತ್ತಿರಲು ಎದುರಿಗೆ ಒಬ್ಬ ಬ್ರಾಹ್ಮಣನು ಬಂದು -'ಭಟ್ಟಾಚಾರ್ಯರೆ, ತಾವು ಈ ಮಹಾ ವೈಭವದಿಂದ ಬರುವುದು ಆ ವೇದಾಂತಿಗೆ ತಿಳಿದರೆ ಆತನು ನಿಮಗೆ ಕಾಣಿಸಿಕೊಳ್ಳುವುದೇ ಇಲ್ಲ. ಆದುದರಿಂದ ಒಂದು ಉಪಾಯವನ್ನು ಹೇಳುವೆನು. ಆತನು ಒಂದು ಅನ್ನಸತ್ರವನ್ನೇರ್ಪಡಿಸಿ ನಿತ್ಯವೂ ಅನೇಕರಿಗೆ ಭೋಜನ ಮಾಡಿಸುತ್ತಿರುವನು. ತಾವೂ ಭೋಜನ ಮಾಡುವವರಂತೆ ಹೋದರೆ ಆತನನ್ನು ಕಾಣಬಹುದು'- ಎಂದು ಸೂಚಿಸಿದನು. ಅದರಂತೆಯೇ ಸತ್ರಕ್ಕೆ ಹೋಗಿ, ವೇದಾಂತಿಯನ್ನು ಕಂಡು ವಾದಭಿಕ್ಷೆಯನ್ನು ಬೇಡಿದನು. ವೇದಾಂತಿಯೂ ಈ ವಿಚಿತ್ರವಾದ ಬೇಡಿಕೆಯನ್ನೂ ಅವನ ರೂಪಾತಿಶಯವನ್ನೂ ನೋಡಿ -'ತಾವು ಪರಾಶರಭಟ್ಟರೋ?'- ಎಂದು ಕೇಳಿದನು. 'ಹೌದು, ನಾನೇ ಕೂರನಾಥರ ಮಗನಾದ ಪರಾಶರಭಟ್ಟನು'- ಎಂದು ಭಟ್ಟನು ಉತ್ತರವಿತ್ತನು. ವೇದಾಂತಿಯು 'ಈ ಸ್ವರೂಪವೇ ವೈಭವವನ್ನು ತೋರಿಸುತ್ತದೆ.

ಭಟ್ಟಚಾರ್ಯರಲ್ಲದೇ ನನ್ನೆದುರಿಗೆ ವಾದಕ್ಕಾಗಿ ಮತ್ತೆ ಯಾರು ಬಂದು ನಿಂತಾರು?'- ಎಂದು ಹೇಳಿ, ಪೂಜ್ಯನಾದ ಭಟ್ಟನನ್ನು ಪೂಜಿಸಿ, ತತ್ವಾರ್ಥವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಿದನು. ಭಟ್ಟಾಚಾರ್ಯನು ಶ್ರೀಭಾಷ್ಯಸಾರಾರ್ಥವನ್ನು ಉಪದೇಶಿಸಲು ಸಂತುಷ್ಟನಾದ ವೇದಾಂತಿಯು ಆತನ ಶಿಷ್ಯನಾದನು.

ಅನಂತರ ಭಟ್ಟಾಚಾರ್ಯನು ಆತನಿಗೆ ಪಂಚಸಂಸ್ಕಾರವನ್ನು ಮಾಡಿ, 'ಮಾಧವದಾಸ'ನೆಂದು ನಾಮಕರಣ ಮಾಡಿ -'ಎಲೈ ವೇದಾಂತಿಯೇ ಈಗ ನಿನ್ನಲ್ಲಿ ರಂಗರಾಜನ ಕರುಣೆಯುಂಟಾಗಿದೆ. ಇನ್ನು ಮುಂದೆ ಯಾವಾಗಲೂ ಈ ಲೋಕದಲ್ಲಿಯಾಗಲಿ, ಪರಲೋಕದಲ್ಲಿಯಾಗಲಿ, ನಿನಗೆ ಯಾವ ನ್ಯೂನತೆಯೂ ಇರುವುದಿಲ್ಲ. ಶ್ರೀವೈಷ್ಣವ ಶ್ರೇಷ್ಠನೂ ವಿಶಿಷ್ಟಾದ್ವೈತಪಾಲಕನೂ ಆಗಿ ಶೋಭಿಸುತ್ತಿಯೇ'- ಎಂದು ಹೇಳಿರುವುದಲ್ಲದೇ 'ಚಿದಚಿದ್ವಿಶಿಷ್ಟವಾದ ಬ್ರಹ್ಮವೇ ಜಗತ್ತಿಗೆ ಕಾರಣವು. ಸಮಸ್ತ ವೇದಾಂತ ಶಾಸ್ತ್ರಗಳಲ್ಲಿಯೂ ಇದೇ ಪ್ರತಿಪಾದಿಸಲ್ಪಟ್ಟಿರುವುದು. ಬ್ರಹ್ಮಶಬ್ದವಾಚ್ಯನಾಗಿಯೂ, ವಿಷ್ಣು, ಹರಿ, ನಾರಾಯಣ, ಲಕ್ಷ್ಮೀಶ, ಪುಂಡರೀಕಾಕ್ಷನೆಂದು ಕರೆಯಲ್ಪಡುವವನೂ ಆದ ಆತನೇ ಬ್ರಹ್ಮರುದ್ರಾದಿಗಳಿಗೆ ಆದಿದೈವವು. ಜಗತ್ಕರ್ತೃವೂ ಚತುರ್ವರ್ಗ ಫಲಪ್ರದನೂ ಆದ ಆತನು ಅನೀಶ್ವರನು. ಆ ಭಗವಂತನ ದಾಸ್ಯವೇ ಆತ್ಮೋಜ್ಜೀವನಕ್ಕೆ ಕಾರಣವು'- ಎಂದೂ ಉಪದೇಶಿಸಿ ಆತನಿಂದ ಕಳುಹಿಸಲ್ಪಟ್ಟವನಾಗಿ ಶ್ರೀರಂಗಕ್ಕೆ ಹೊರಟು ರಂಗನಾಥನಲ್ಲಿ ವಿಜ್ಞಾಪಿಸಿ ಸುಖವಾಗಿರುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಭಟ್ಟಾರ್ಯಕೃತ ವೇದಾಂತಿ ವಿಜಯವೆಂಬ ಎಪ್ಪತ್ತನೆಯ ಅಧ್ಯಾಯವು ಮುಗಿದುದು.

## ೭೧

ಹರಿಭಕ್ತಿ ಪರಾಯಣನಾದ ಮಾಧವದಾಸನು -'ಮಾಯಾವಾದಿಗಳ ಈ ಸಮೂಹದಲ್ಲಿ ನಾನು ಹೇಗಿರಲಿ? ಕೂಡಲೇ ಭಟ್ಟಾಚಾರ್ಯರ ಆಶ್ರಯದಲ್ಲಿಯೇ ಇರುವೆನು ಎಂದು ಯೋಚಿಸಿ, ತನ್ನ ಅಪರಿಮಿತವಾದ ಐಶ್ವರ್ಯವನ್ನು ಮೂರು ವಿಭಾಗವಾಗಿ ವಿಭಾಗಿಸಿ, ಎರಡು ಭಾಗವನ್ನು ತನ್ನ ಕುಟುಂಬಕ್ಕಾಗಿ ಕೊಟ್ಟು ಉಳಿದ ಒಂದು ಭಾಗವನ್ನು ತೆಗೆದುಕೊಂಡು, ಸಂಸಾರ ಬಂಧನವನ್ನು ಬಿಟ್ಟು ರಂಗನಗರಿಗೆ ತಲುಪಿ ಗುರುವಿಗೆ ಅದೆಲ್ಲವನ್ನೂ ಗುರುದಕ್ಷಿಣೆಯಾಗಿ ಅರ್ಪಿಸಿ, ಸಂನ್ಯಾಸವನ್ನು ಸ್ವೀಕರಿಸಿ ಕೃತಾಂಜಲಿಯಾಗಿ ನಿಂತನು. ಆಗ ಭಟ್ಟಾಚಾರ್ಯನು ಈತನ ವಿಚಾರದಲ್ಲಿ ಸಂಶಯರಹಿತನಾಗಿ, ರಂಗರಾಜನ ಪ್ರೇರಣೆಯಂತೆ "ನಂಜೀಯರ್" (ನಮ್ಮಯತಿ) ಎಂದು ನಾಮಕರಣ ಮಾಡಿದನು. ಮತ್ತೆ ಮಾಧವದಾಸನು ನಮಸ್ಕರಿಸಿ -'ಶರೀರಮರ್ಥಂ ಪ್ರಾಣಾಂಶ್ಚ ಸದ್ಗುರುಭ್ಯೋ ನಿವೇದಯತ್'- ಎಂಬಂತೆ ಸಮಸ್ತವೂ ತಮ್ಮ ಅಧೀನವಾಗಿರುವುದು. ದಾಸನನ್ನು ಅನುಗ್ರಹಿಸಬೇಕು'- ಎಂದು ಮತ್ತೆ ಪ್ರಾರ್ಥಿಸಿದನು. ಆಗ ಭಟ್ಟಾಚಾರ್ಯನು "ನಮ್ಮಯತಿ"ಗೆ ದ್ರಾವಿಡ ವೇದಸರ್ವಸ್ವವನ್ನೂ ಶಾಸ್ತ್ರಾರ್ಥಗಳಿಗೆ ವಿರೋಧವಿಲ್ಲದಂತೆ ರಹಸ್ಯ ಸಂಪ್ರದಾಯಾರ್ಥಗಳನ್ನೂ, ಚರಮಾರ್ಥವನ್ನೂ ಉಪದೇಶಿಸಿ ಆತನನ್ನು ಶ್ರೀವೈಷ್ಣವ ಶ್ರೇಷ್ಠರನ್ನಾಗಿ ಮಾಡಿದನು.

ಅನಂತರ ಸರ್ವಶಾಸ್ತ್ರವಿಶಾರದನಾದ ಭಟ್ಟಾಚಾರ್ಯನು ಮುಮುಕ್ಷುಗಳಿಗೆ ಉಪಯೋಗಿಯಾದ ಸಹಸ್ರನಾಮಭಾಷ್ಯ, ವಿಷ್ಣುಪೂಜಾಕ್ರಮ, ಅಷ್ಟಶ್ಲೋಕೀ, ಶ್ರೀಶಸ್ತವ, ಶ್ರೀಗುಣರತ್ನಕೋಶ ಎಂಬ ಐದು ಗ್ರಂಥಗಳನ್ನು ರಚಿಸಿದನು. ಈ ರೀತಿ ಕೃತಕೃತ್ಯನಾದ ಭಟ್ಟನು ವೈಕುಂಠಾಗಮನಾಭಿಲಾಷೆಯಿಂದ "ನಮ್ಮಯತಿ"ಯನ್ನು ಕರೆದು ರಹಸ್ಯವಾಗಿ ಹೇಳಿದನು."ನಾನು ಸರ್ವಶಾಸ್ತ್ರಗಳನ್ನೂ, ವೇದಾಂತ ತತ್ವಗಳನ್ನೂ ತಿಳಿದಿರುವೆನು. ಗುರುವಿಗೆ ಅಪರಿಮಿತವಾದ ಗುರುದಕ್ಷಿಣೆಯನ್ನು ಕೊಟ್ಟಿರುವೆನು. ಶ್ರೀವತ್ಸಚಿಹ್ನಮಿಶ್ರನ ಮಗನೂ, ಶ್ರೀರಂಗೇಶ ಪುರೋಹಿತನೂ, ಸರ್ವಶಾಸ್ತ್ರಾರ್ಥತತ್ವಜ್ಞನೂ ಆದ ಭಟ್ಟಾಚಾರ್ಯನನ್ನು ನಾನು ಆಶ್ರಯಿಸಿದೆನು"- ಎಂಬ ಗರ್ವಮಾತ್ರ ಇರಬಾರದು. ಮನ್ನಾಥನ (ರಾಮಾನುಜಾಚಾರ್ಯರ) ಪಾದಪಂಕಜಗಳನ್ನೇ ರಕ್ಷಕಗಳನ್ನಾಗಿ ನಂಬಿಕೊಂಡಿರು. ಇದೇ ಸತ್ಯ, ಸತ್ಯ. ಶಠಾರಿ, ಯತಿರಾಜರ ಪ್ರೀತಿಗಾಗಿಯೂ ಲೋಕರಕ್ಷಣೆಗಾಗಿಯೂ ಸಹಸ್ರಗೀತೆಯ ವ್ಯಾಖ್ಯಾನವನ್ನು ದ್ರಾವಿಡ ಭಾಷೆಯಲ್ಲಿ ಬರೆ. ಹಿಂದೆ ಯತಿರಾಜರ ಅಪ್ಪಣೆಯಂತೆ ಕುರುಕೇಶನು ಆರುಸಾವಿರ ಗ್ರಂಥಗಳಿಂದ ಸಹಸ್ರಗೀತೆಯ ವ್ಯಾಖ್ಯಾನವನ್ನು ಬರೆದಿರುವನು. ಅದರಿಂದ ನಮ್ಮ ಆಚಾರ್ಯರು ಸಂತುಷ್ಟರಾದರು. ಈಗ ನಾನು ಹೇಳುವಂತೆ ನೀನು ಒಂಬತ್ತು ಸಾವಿರ ಗ್ರಂಥಗಳಿಂದ ವ್ಯಾಖ್ಯಾನವನ್ನು ಬರೆ. ದ್ರಾವಿಡವೇದದ ಪ್ರವಚನವನ್ನು ಒಂದೇ ಸಮನಾಗಿ ನಡೆಸು. ನಮ್ಮ ರಾಮಾನುಜಾಚಾರ್ಯರ ಸಿದ್ಧಾಂತವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಸಂಶಯವಿಲ್ಲ, ನೀನು ಇನ್ನೂ ಬಹುಕಾಲ ಶ್ರೀರಂಗದಲ್ಲಿ ವಾಸಿಸುವ ಯೋಗವಿದೆ'-

ಈ ಮಾತುಗಳನ್ನು ಕೇಳಿ ಸತ್ಯವೂ, ಪ್ರಿಯವೂ ಮೋಕ್ಷಕ್ಕೆ ಮುಖ್ಯ ಆಶ್ರಯವೂ ಆದುದಕ್ಕಾಗಿ ಸಂತೋಷಿಸಿ, ಗ್ರಂಥವನ್ನು ರಚಿಸುವುದಾಗಿ ಮಾತುಕೊಟ್ಟು ನಮಸ್ಕರಿಸಿದನು.

ಭಟ್ಟಾಚಾರ್ಯನು ವೇದಾಂತಿಯನ್ನು ವಿಷ್ಣುಮತ ಸಾಮ್ರಾಜ್ಯದಲ್ಲಿ ಸ್ಥಿರಗೊಳಿಸಿ ವೈಕುಂಠ ಗಮನದ ಬುದ್ಧಿಯಲ್ಲಿಯೇ ನಿರತನಾದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ವೇದಾಂತಿಗೆ ಭಟ್ಟಾರ್ಯನಿಂದ ನಿಖಿಲಾರ್ಥೋಪದೇಶ ಎಂಬ ಎಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

## ೭೨

ಭಟ್ಟಾಚಾರ್ಯರಿಂದ ಎಲ್ಲ ತತ್ವಾರ್ಥಗಳನ್ನೂ ತಿಳಿದ ವೇದಾಂತಿಯು ಮತ್ತೆ ಶಠಕೋಪನೇ ಮೊದಲಾದ ದಿವ್ಯಸೂರಿಗಳು ಭೂಲೋಕದಲ್ಲಿ ಏಕೆ ಹುಟ್ಟಿದರು? ದೇವಭಾಷೆಯಾದ ಸಂಸ್ಕೃತವನ್ನು ಬಿಟ್ಟು ದ್ರಾವಿಡಭಾಷೆಯಲ್ಲಿ ಪ್ರಬಂಧಗಳನ್ನು ಏತಕ್ಕೆ ರಚಿಸಿದರು? ಈ ವಿಚಾರವನ್ನು ತಿಳಿಯಲು ನಾನು ಯೋಗ್ಯನಾಗಿದ್ದರೆ ನನಗೆ ತಿಳಿಸಬೇಕು'- ಎಂದು ಪ್ರಾರ್ಥಿಸಿದನು. ಆಗ ಭಟ್ಟಚಾರ್ಯನು ಹೇಳತೊಡಗಿದನು-

ಹಿಂದೆ ಕೈಲಾಸದಲ್ಲಿ ಪಾರ್ವತೀ ಪರಮೇಶ್ವರರಿಗೆ ವಿವಾಹವು ನಡೆಯಿತು. ಅದನ್ನು ನೋಡಲು ಸಮಸ್ತದೇವತೆಗಳೂ ಇತರರೂ ಕೈಲಾಸಕ್ಕೆ ಹೊರಟರು. ಆಗ

ಭೂಮಿಯು, ಉತ್ತರದಿಕ್ಕಿನಲ್ಲಿ ನಾವೆಯು ನೀರಿನಲ್ಲಿ ಮುಳುಗುವಂತೆ ಮುಳುಗುತ್ತಿರಲು, ದೇವತೆಗಳು ಗಾಬರಿಗೊಂಡರು. ವಿಶ್ವಕರ್ಮನು ದೇವತೆಗಳನ್ನು ಕುರಿತು:-'ನಾನು ಒಂದು ಉಪಾಯವನ್ನು ಹೇಳುವೆನು. ಮೂರುಲೋಕಗಳೂ ಒಂದು ಭಾರ; ಅಗಸ್ತ್ಯನೊಬ್ಬನೇ ಅಷ್ಟು ಭಾರ. ಆದುದರಿಂದ ಆತನನ್ನು ದಕ್ಷಿಣದಿಕ್ಕಿಗೆ ಹೋಗುವಂತೆ ಪ್ರಾರ್ಥಿಸಿದರೆ ಲೋಕವು ಸುರಕ್ಷಿತವಾಗಿರುವುದು'- ಎಂದನು. ಈ ಸಮಾಚಾರವು ಅಗಸ್ತ್ಯನಿಗೆ ತಿಳಿದ ಕೂಡಲೇ ಕೋಪದಿಂದ -'ಎಲಾ ವಿಶ್ವಕರ್ಮ ನಾನು ಬಹುಸಂಭ್ರಮದಿಂದ ಈ ಮಹೋತ್ಸವವನ್ನು ನೋಡಲು ಬಂದಿದ್ದರೆ ನೀನು ಅದನ್ನು ತಪ್ಪಿಸುವೆಯಾ? ನೀನು ಬಹು ನಿಕೃಷ್ಟನಾಗು; ನಿನ್ನ ಜಾತಿಯವರೆಲ್ಲರೂ ನಿನ್ನಂತೆಯೇ ನೀಚರಾಗಲಿ, ಅವರಿಗೆ ಹೆಚ್ಚು ಕೆಲಸವೂ ಅದಕ್ಕೆ ತಕ್ಕ ಫಲವಿಲ್ಲದೆಯೂ ಹೋಗಲಿ'- ಎಂದು ಶಪಿಸಿದನು. ಇದನ್ನು ಕೇಳಿದ ವಿಶ್ವಕರ್ಮನು -'ಇನ್ನು ಮುಂದೆ ರಚಿಸಲ್ಪಡುವ ದ್ರಾವಿಡ ಭಾಷೆಯು ಪಿಶಾಚಭಾಷೆಗೆ ಸಮಾನವಾಗಲಿ. ಅದರ ವ್ಯಾಕರಣವು ಸಹ ತುಚ್ಛವಾಗಲಿ; ಮ್ಲೇಚ್ಛಭಾಷೆಯಂತೆ ಆ ಭಾಷೆಯು ಶೂದ್ರಜಾತಿಗೆ ಯೋಗ್ಯವಾದುದಾಗಲಿ; ದ್ರಾವಿಡದೇಶ ಚೋರದೇಶವಾಗಲಿ; ನನ್ನ ಶಾಪದಿಂದ ದ್ರಾವಿಡದೇಶದಲ್ಲಿ ಬ್ರಾಹ್ಮಣರಿಗೆ ಅವಕಾಶವೇ ಇಲ್ಲದೆ ಹೋಗಲಿ; ದ್ರಾವಿಡರೆಲ್ಲರೂ ಮಂದಬುದ್ಧಿಗಳಾಗಲಿ; ಮಾಯಾವಿಗಳೂ, ದುರ್ಜನರೂ ಆಗಿ ಕಲಿಪ್ರಿಯರಾಗಲಿ'- ಎಂಬ ಇವೇ ಮೊದಲಾದ ಮಾತುಗಳಿಂದ ಅಗಸ್ತ್ಯನನ್ನು ಶಪಿಸಿದನು. ಹೀಗೆ ಇಬ್ಬರಿಗೂ ಜಗಳವಾಗುತ್ತಿರಲು ದೇವತೆಗಳು ಇಬ್ಬರನ್ನೂ ಸಮಾಧಾನಗೊಳಿಸಿ ಅಗಸ್ತ್ಯನನ್ನು ವಿನಯದಿಂದ ಪ್ರಾರ್ಥಿಸಿಕೊಳ್ಳಲು, ಆತನು ಲೋಕಹಿತಕ್ಕಾಗಿ ದಕ್ಷಿಣ ದಿಕ್ಕಿನಲ್ಲಿ ನಿಂತನು. ಮದುವೆಯು ನಡೆಯಿತು.

'ಅನಂತರ ಅಗಸ್ತ್ಯನು ಶಾಪದುಃಖದಿಂದ ಶ್ರೀಮನ್ನಾರಾಯಣನನ್ನು ಕುರಿತು ಹತ್ತುಸಾವಿರ ವರ್ಷಗಳು ತಪಸ್ಸು ಮಾಡಲು, ಪ್ರತ್ಯಕ್ಷನಾದ ವಿಷ್ಣುವು ಬೇಕಾದ ವರವನ್ನು ಕೇಳಿಕೊಳ್ಳುವಂತೆ ಹೇಳಿದನು. ಅಗಸ್ತ್ಯನು ಪರಮಾತ್ಮನನ್ನು ಕಂಡು ತೃಪ್ತನಾಗಿ ಈ ರೀತಿ ಸ್ತುತಿಸಿದನು:-ನಮೋ ನಮಃ ಕಾರಣ ಕಾರಣಾಯ ನಿಷ್ಕಾರಣಾಯಾದ್ಭುತಕಾರಣಾಯ। ನಮೋನಮಸ್ತೇऽಖಿಲ ಸತ್ವಧಾಮನ್ನಮೋ ನಮಸ್ತೇ ಜಲಜಾತ ನೇತ್ರ ॥ ನಂದಾತ್ಮಜಾದ್ಯ ಪುರುಷಾಖಿಲ ಲೋಕನಾಥ ನಾಳೀಕಸದ್ಮ ಜನಕಾರ್ಯಮನೋऽಬ್ಜಭೃಂಗ। ನವ್ಯಾಂಭುಜಾಕ್ಷ ನವನೀತಹರಾಪ್ರಮೇಯ ನಾರಾಯಣಾಖಿಲಗುರೋ ಭಗವನ್ನಮಸ್ತೇ॥ಶ್ರೀಪದ್ಮನಾಭ ಪರಮಾತ್ಮಕ ಪಾಲಿತಾರ್ಯ ಕಲ್ಕ್ಯಾವತಾರ ಕಲಿಭಂಜನ ವಾಜಿವಕ್ತ್ರ। ಮ್ಲೇಚ್ಛಾಂಶಕಾದಿ ಯುಗಧರ್ಮರತೈಕ ತಾನ ನಾರಾಯಣಾಖಿಲ ಗುರೋಭಗವನ್ನಮಸ್ತೇ'' ಹೀಗೆ ಅನೇಕವಾಗಿ ಸ್ತೋತ್ರಮಾಡಿ ಬದ್ಧಾಂಜಲಿಯಾಗಿ ನಿಂತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಅಗ [illegible] ಕರ್ಮರಿಗೆ ಪರಸ್ಪರ ಶಾಪದಾನ ಎಂಬ ಎಪ್ಪತ್ತೆರಡನೆಯ ಅಧ್ಯಾಯವು ಮುಗಿ

"ಪ್ರಸನ್ನನಾದ ವಿಷ್ಣುವು 'ಎಲೈ ಅಗಸ್ತ್ಯನೇ ದುಃಖಿಸಬೇಡ. ನಾನೂ ಶಂಖ ಚಕ್ರವೇ ಮೊದಲಾದ ಆಯುಧಗಳೂ, ವಿಶ್ವಕ್ಸೇನನೇ ಮೊದಲಾದ ನಿತ್ಯಸೂರಿಗಳೂ ದ್ರಾವಿಡ ದೇಶದಲ್ಲಿ ಅವತರಿಸುವೆವು. ದ್ರಾವಿಡಭಾಷೆಯು ದೇಶದಲೆಲ್ಲಾ ಹರಡಿ ಪೂಜ್ಯವಾಗುವುದು. ನಮ್ಮ ಹುಟ್ಟುವಿಕೆಯಿಂದ ಶಿಷ್ಟಪರಿಪಾಲನವು ಆಗುವುದರಲ್ಲಿ ಸಂಶಯವೇ ಇಲ್ಲ. ತಾಮ್ರಪರ್ಣಿ ನದೀತೀರದಲ್ಲಿ ಕುರುಕಾನಗರಿಯಲ್ಲಿ ಶ್ರುತಿಯನ್ನು ದ್ರಾವಿಡಭಾಷೆಯಲ್ಲಿ ರಚಿಸಲು ನಾನೇ ನನ್ನ ಭಕ್ತನಾಗಿ ಅವತರಿಸುವೆನು. ನಾನೂ, ನನ್ನ ಅನುಚರರಾದ ದಿವ್ಯಯೋಗಿಗಳೂ ನಾಲ್ಕುಸಾವಿರ ದಿವ್ಯಪ್ರಬಂಧಗಳನ್ನು ದ್ರಾವಿಡಭಾಷೆಯಲ್ಲಿ ಬರೆಯುವುದರಿಂದ ಅದರಲ್ಲಿ ಭಕ್ತಿಯುಳ್ಳವರು ಮೋಕ್ಷವನ್ನು ಹೊಂದುವರು. ಶಠಕೋಪನಿಂದ ರಚಿತವಾಗುವ ಸಹಸ್ರಗೀತೆಯ ಶ್ರವಣವೇ ಅನಂತ ಫಲಪ್ರದವು. ಸಹಸ್ರಗೀತೆಯನ್ನು ತಿಳಿದಿರುವವನ ದರ್ಶನದಿಂದ ಪಾಪಿಯೂ ಮುಕ್ತನಾಗುವನು, ನಾನು ದ್ರಾವಿಡದೇಶದಲ್ಲಿ ಸಮಸ್ತಪ್ರಾಣಿಗಳಿಗೂ ಮುಕ್ತಿಯನ್ನು ಕೊಡಲು ಚರಾಚರರೂಪಗಳಿಂದ ಎಲ್ಲ ಕಡೆಯೂ ವಾಸಮಾಡುವೆನು. ಚತುರ್ವೇದವಿದನೇ ಆಗಲಿ, ಸರ್ವಶಾಸ್ತ್ರವಿಶಾರದನೇ ಆಗಲಿ, ದ್ವಯಾರ್ಥೈಕನಿಷ್ಠನೇ ಆಗಲಿ, ಮಂತ್ರರತ್ನದ ಅರ್ಥವನ್ನು ತಿಳಿದವನೇ ಆಗಲಿ, ಶಮದಮಾದಿಗುಣಯುತನೇ ಆಗಲಿ, ಚರಮೋಪಾಯದಲ್ಲಿ ವಿಶ್ವಾಸವುಳ್ಳವನೇ ಆಗಲಿ ದಿವ್ಯಪ್ರಬಂಧವನ್ನು ತಿಳಿಯದಿದ್ದರೆ, ವೈಷ್ಣವನಾಗಲಾರನು. ಜಾತಕರ್ಮಾದಿ ಸಂಸ್ಕಾರಗಳಿಂದಲೂ, ವೇದಾಧ್ಯಯನದಿಂದಲೂ, ಬ್ರಾಹ್ಮಣನಿಗೆ ಬ್ರಾಹ್ಮಣ್ಯವು ಬರುವಂತೆ, ದ್ರಾವಿಡ ವೇದಪಠನದಿಂದಲೂ, ಪಂಚಸಂಸ್ಕಾರ ಗಳಿಂದಲೂ, ಆಚಾರ್ಯಸೇವೆಯಿಂದಲೂ, ವೈಷ್ಣವತ್ವವು ಸಿದ್ಧಿಸುವುದು. ಹೀಗೆ ನನ್ನ ಮತವನ್ನು ಭೂಲೋಕದಲ್ಲಿ ಸ್ಥಾಪಿಸಿ, ನಿನ್ನ ದುಃಖವನ್ನು ಹೋಗಲಾಡಿಸುವೆನು. ಯಯಾತಿಯ ಶಾಪದಿಂದ ಖಿನ್ನವಾದ ಯದುವಂಶವು ಪಾಲಿಸಲ್ಪಟ್ಟಂತೆಯೂ, ಗಂಗೆಗಿಂತಲೂ ಕಾವೇರಿಯು ಶ್ರೇಷ್ಠವಾದಂತೆಯೂ ದ್ರಾವಿಡಭಾಷೆಯು ಉತ್ತಮವೆನಿಸುವುದು. ನನ್ನ ಅಪ್ಪಣೆಯಂತೆ ನಿತ್ಯಸೂರಿಗಳೆಲ್ಲರೂ ದ್ರಾವಿಡದೇಶದಲ್ಲಿ ಹುಟ್ಟಿ ದ್ರಾವಿಡವೇದನಿರತರಾಗಿ, ಎಲ್ಲರಿಗೂ ಪ್ರಪತ್ತಿ ಮಾರ್ಗವನ್ನು ಉಪದೇಶಿಸುವರು. ಈ ವಿಚಾರವು ಬ್ರಹ್ಮಾಂಡಪುರಾಣ, ಬ್ರಾಹ್ಮಪುರಾಣ, ಶ್ರೀಮದ್ಭಾಗವತ, ವೃದ್ಧಪಾದ್ಮ, ಭವಿಷ್ಯತ್, ಭಾರ್ಗವ ಮೊದಲಾದ ಪುರಾಣಗಳಲ್ಲಿಯೂ ಪ್ರಸಿದ್ಧವಾಗಿರುವುದಷ್ಟೆ. ಆದುದರಿಂದ ಕಲಿಯುಗದಲ್ಲಿ ಮನುಷ್ಯರೆಲ್ಲರೂ ಪ್ರಪತ್ತಿಮಾರ್ಗ ನಿರತರಾಗಿ ನನ್ನನ್ನೇ ಹೊಂದುವರು". ಹೀಗೆ ವರವನ್ನು ಕೊಟ್ಟು ಶ್ರೀಯಃಪತಿಯಾದ ನಾರಾಯಣನು, ಮರೆಯಾದನು. ಅಗಸ್ತ್ಯನೂ ತನ್ನ ಆಶ್ರಮವನ್ನು ಹೊಂದಿ ಹರಿಪರಾಯಣ ನಾಗಿದ್ದನು.

ಸತ್ಯಸಂಕಲ್ಪನಾದ ನಾರಾಯಣನು ದಿವ್ಯಸೂರಿಗಳನ್ನು ಭೂಲೋಕದಲ್ಲಿ ಅವತರಿಸುವಂತೆ ಪ್ರೇರಿಸಲು, ವಿಶ್ವಕ್ಸೇನನೇ ಮೊದಲಾದವರು ಅವತರಿಸಿ, ನಾಲ್ಕು ಸಾವಿರ ಪ್ರಬಂಧಗಳನ್ನು ರಚಿಸಿ, ಸರ್ವರಿಗೂ ಅದರಲ್ಲಿ ಅಧಿಕಾರವಿರುವಂತೆ ಮಾಡಿ, ಕೃತಕೃತ್ಯರಾಗಿ ಮತ್ತೆ ಹರಿಯ ಸಮೀಪಕ್ಕೆ ಹೋದರು. ಅವರಲ್ಲಿ ಪ್ರಪನ್ನಜನಕೂಟಸ್ಥರಾದ ಶಠಕೋಪರಿಂದ ಈ ವೈಷ್ಣವ ಮತವು ರಕ್ಷಿತವಾಯಿತು. ಅನಂತರ ನಾಥಮುನಿಯಾದ ಆಚಾರ್ಯರಿಂದಲೂ, ಶೇಷಾವತಾರಿಗಳಾದ ಆಚಾರ್ಯರಿಂದಲೂ, ಆಸೇತುಹಿಮಾಚಲ ಪರ್ಯಂತವಾಗಿ

ಪ್ರಕಾಶಿತವಾಯಿತು. ಇನ್ನು ಮುಂದೆ ಈ ರಾಮಾನುಜಸಿದ್ಧಾಂತವು ನಿಮ್ಮಿಂದ ಉಜ್ವಲವಾಗಿ ಖ್ಯಾತಿಯನ್ನು ಪಡೆಯುವುದು. ಶ್ರೀವಿಷ್ಣುವಿನ ಆಜ್ಞೆಯಂತೆ ನಾಲ್ಕುಸಾವಿರ ದಿವ್ಯಪ್ರಬಂಧಗಳನ್ನು ಶ್ರೀವೈಷ್ಣವನು ಪಾರಾಯಣ ಮಾಡಬೇಕು. ಸ್ತ್ರೀಶೂದ್ರಾದಿಗಳಾದಿಯಾಗಿ ಎಲ್ಲರಿಗೂ ಇದಕ್ಕೆ ಅಧಿಕಾರವುಂಟು. ಎಲ್ಲ ವೈದಿಕ ಕರ್ಮಗಳಲ್ಲಿಯೂ ಸಂಸ್ಕೃತವು ವ್ಯವಹರಿಸಲ್ಪಡುವಂತೆ, ವಿಷ್ಣುವಿನ ಅರ್ಚನಾದಿಗಳಲ್ಲಿಯೂ ದ್ರಾವಿಡಭಾಷೆಯ ವ್ಯವಹಾರವಿಟ್ಟುಕೊಳ್ಳಬೇಕು. ಭಗವದಾರಾಧನ ಕ್ರಮದಲ್ಲಿಯೂ, ಆದಿ ಮಧ್ಯಾವಸಾನಗಳಲ್ಲಿಯೂ, ಅಲ್ಲಲ್ಲಿಗೆ ಯೋಗ್ಯವಾದ ದ್ರಾವಿಡಪ್ರಬಂಧವನ್ನು ಪಾರಾಯಣ ಮಾಡಬೇಕು. ಶ್ರೀವೈಷ್ಣವನಾದವನು ಮೊದಲು ದ್ರಾವಿಡಭಾಷೆಯನ್ನು ಕಲಿತು, ತಾಪಾದಿ ಸಂಸ್ಕಾರಗಳಿಂದ ಸಂಸ್ಕೃತನಾಗಿ ದಿವ್ಯಪ್ರಬಂಧವನ್ನು ಅಭ್ಯಾಸ ಮಾಡಬೇಕು. ಪ್ರತಿದಿನವೂ ಅರವತ್ತು ಗಾಥೆಗಳಿಂದ ಕೂಡಿದ ನಿತ್ಯಾನುಸಂಧಾನವನ್ನು, ಹತ್ತುಗಾಥೆಗಳಿಂದ ಕೂಡಿದ ಪ್ರಾಬೋಧಕ ಸ್ತವವನ್ನು, ಮೂವತ್ತು ಗಾಥೆಗಳಿಂದ ಕೂಡಿದ ಗೋದಾ (ಆಂಡಾಳ್) ವಿರಚಿತವಾದ ಸ್ತುತಿಯನ್ನೂ, ಅನಂತರ ಯತಿರಾಜರ ವಿಷಯವಾದ ಪ್ರಪನ್ನಗಾಯತ್ರಿಯನ್ನೂ, ಅದಾದ ಮೇಲೆ ಸಹಸ್ರಗೀತೆಯನ್ನೂ ಗುರುಸನ್ನಿಧಿಯಲ್ಲಿ ಅಧ್ಯಯನ ಮಾಡಬೇಕು. ಸಹಸ್ರಗೀತೆಗೆ ಅವಕಾಶವಿಲ್ಲದಿದ್ದರೆ ಅದರ ಸಂಗ್ರಹವನ್ನಾದರೂ ಪಾರಾಯಣ ಮಾಡಬೇಕು. ಹೀಗಿರುವ ವೈಷ್ಣವರೊಡನೆ ಸಹಭೋಜನ ಮಾಡಬಹುದು. ಹೆಚ್ಚು ಹೇಳುವುದೇನು? ಎಲೈ ಯತಿಯೆ, ದಿವ್ಯದ್ರಾವಿಡ ವೇದಾಂತಶ್ರವಣವಿಲ್ಲದೆ ಈ ಕಲಿಯುಗದಲ್ಲಿ ಜ್ಞಾನವುಂಟಾಗುವುದಿಲ್ಲ. ಮುಮುಕ್ಷುವಾದವನಿಗೆ ಸರ್ವಥಾ ಇದು ಅವಶ್ಯವು. ಪೂರ್ವಾಚಾರ್ಯರಿಂದಲೂ ಇದೇ ಅಭಿಪ್ರಾಯವು ಪ್ರಕಟಿಸಲ್ಪಟ್ಟಿದೆ. ಇನ್ನು ಮುಂದೆ ನೀವೂ ಇದನ್ನೇ ಪ್ರಚಾರಮಾಡುವಿರಿ.ಇದರಿಂದಲೆ ವೈಷ್ಣವರು "ತದ್ವಿಷ್ಣು ಪರಮಪದ"ವನ್ನು ಹೊಂದುವುದರಲ್ಲಿ ಸಂಶಯವಿಲ್ಲ. ಎಲೈ ಮಾಧವದಾಸನೆ, ನೀನು ಕೇಳಿದುದರಿಂದ ಇದನ್ನು ತಿಳಿಸಿರುವೆನು'-. ಎನಲು ವೇದಾಂತಿಯು ಸಂತುಷ್ಟನಾಗಿ, ಮುಂದೆ ಸಚ್ಚರಿತ್ರೆಗಳನ್ನು ಕೇಳಲು ಇಷ್ಟಪಟ್ಟನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಭಟ್ಟಾರ್ಯವೇದಾಂತಿ ಸಂವಾದದಲ್ಲಿ ದ್ರಾವಿಡಾಮ್ನಾಯ ವೈಭವ ಕಥನವೆಂಬ ಎಪ್ಪತ್ತ್ಮೂರನೆಯ ಅಧ್ಯಾಯವು ಮುಗಿದುದು.

೭೪

ಮತ್ತೆ ವೇದಾಂತಿಯು ಭಟ್ಟಾಚಾರ್ಯರನ್ನು ಕುರಿತು,-'ಎಲೈ ಭಟ್ಟಾಚಾರ್ಯರೇ, ತಾವು ಆಚಾರ್ಯಶ್ರೇಷ್ಠರೂ, ಸಮಸ್ತ ಶಾಸ್ತ್ರೋಪದೇಶಕರೂ, ಪುಂಡರೀಕಾಕ್ಷನ ನಯನೋತ್ಪನ್ನರೂ ಆಗಿರುವಿರಿ. ಆದುದರಿಂದ ತಮಗೆ ಎಲ್ಲರ ಚರಿತ್ರೆಯೂ ತಿಳಿದಿರುವುದು. ನಿತ್ಯಸೂರಿಗಳು ಯಾವ ಕಾಲದಲ್ಲಿ ಅವತರಿಸಿದರು? ಅವರಲ್ಲಿ ಗುರುಗಳು ಯಾರು? ಶಿಷ್ಯರು ಯಾರು? ಈ ಭೂಲೋಕದಲ್ಲಿ ಎಷ್ಟು ಕಾಲ ಇದ್ದರು? ಅವರು ರಚಿಸಿದ ಪ್ರಬಂಧಗಳಾವುವು?'- ಎಂದು ವಿನಯದಿಂದ ಪ್ರಾರ್ಥಿಸಲು, ಭಟ್ಟಾಚಾರ್ಯರು ಆಚಾರ್ಯರನ್ನು ವಂದಿಸಿ ಹೇಳಲಾರಂಭಿಸಿದರು.

'ಎಲೈ ವೇದಾಂತಿಯೇ, ಈ ಚರಿತ್ರೆಯು ಅದ್ಭುತವೂ, ಶ್ರೇಯಸ್ಕರವೂ ಆದುದು.

ಕೇಳು. ನಾಥಮುನಿ, ಪುಂಡರೀಕಾಕ್ಷ, ರಾಮಮಿಶ್ರ, ಯಾಮುನಾಚಾರ್ಯರು, ಗೋಷ್ಠೀಪೂರ್ಣ, ಮಹಾಪೂರ್ಣ, ಮಾಲಾಧರಗುರು, ಭೂರಿಶ್ರೀಶೈಲಪೂರ್ಣ, ವರರಂಗ ಮತ್ತು ಕಾಂಚೀಪೂರ್ಣ ಇವರೆಲ್ಲರೂ ಪೂರ್ವಾಚಾರ್ಯರು. ರಾಮಾನುಜಾಚಾರ್ಯರಿಗೆ ಹಿಂದಿನ ಆಚಾರ್ಯರೆಲ್ಲರೂ ಪೂರ್ವಾಚಾರ್ಯರೆನಿಸಿಕೊಂಡರು. ಕಾಸಾರಯೋಗಿ, ಭೂತಯೋಗಿ, ಮಹದಾಹ್ವಯರು, ಭಕ್ತಿಸಾರರು, ಶ್ರೀಶಠಾರಿ, ಕುಲಶೇಖರ, ವಿಷ್ಣುಚಿತ್ತರು, ಭಕ್ತಾಂಘ್ರಿರೇಣು, ಮುನಿವಾಹನ, ಚತುಷ್ಕವೀಂದ್ರ, ಇವರು ದಿವ್ಯಸೂರಿಗಳು. ಗೋದಾದೇವಿಯನ್ನೂ, ಯತಿರಾಜರನ್ನೂ ಕೆಲವರು ಇವರ ಜೊತೆಗೆ ಸೇರಿಸುವರು. ಮತ್ತೆ ಕೆಲವರು ಗೋದಾದೇವಿಯನ್ನು ಬಿಟ್ಟು ಮಧುರಕವಿಯನ್ನು ಸೇರಿಸುವರು. ಏಕೆಂದರೆ ಇವರೆಲ್ಲರಿಗೂ ಲಕ್ಷ್ಮಿಯ ಅವತಾರವಾದ ಗೋದಾದೇವಿಯೂ ಆರಾಧ್ಯಳು. ಲಕ್ಷ್ಮಿಯು ಪುರುಷಕಾರದಿಂದಲೇ ಹರಿಯು ಜಗತ್ತನ್ನು ರಕ್ಷಿಸುವನು. ಜಗತ್ಕಾರಣ ಕರ್ತೃತ್ವವು ಲಕ್ಷ್ಮಿಗೆ ವಿನಾ ಹರಿಗೆ ಇಲ್ಲ. ಲಕ್ಷ್ಮಿಯ ಸಹಾಯವಿಲ್ಲದೇ ಹರಿಯು ಸ್ವತಂತ್ರನಾಗಿ ಜಗತ್ತನ್ನು ಸೃಷ್ಟಿಸುವುದಿಲ್ಲ. ಆದುದರಿಂದಲೇ ಲಕ್ಷ್ಮಿಯ ಜಗತ್ಕಾರಣ ಕರ್ತೃತ್ವವು ಶ್ರುತಿಸಿದ್ಧವಾಗಿದೆ. (ಅಸ್ಯೇಶಾನಾ ಜಗತೋ ವಿಷ್ಣು ಪತ್ನೀ)'- ಹೀಗೆ ಹೇಳುತ್ತಿರಲು, ವೇದಾಂತಿಯು 'ಕಾಸಾರಯೋಗಿ, ಯತಿರಾಜರು ಇವರೆಲ್ಲರಿಗಿಂತಲೂ ವಿಷ್ಣುಚಿತ್ತರ ಮಗಳಾದ ಗೋದಾದೇವಿಗೆ ಇಷ್ಟು ಮಹತ್ವ ಬರಲು ಕಾರಣವೇನು?' ಎಂದು ಕೇಳಿದನು. ಅದಕ್ಕೆ ಭಟ್ಟಾಚಾರ್ಯರು 'ಸಾಕ್ಷಾಲ್ಲಕ್ಷ್ಮಿಯೇ ಜಗತ್ಸಂರಕ್ಷಣೆಗಾಗಿ ನಿತ್ಯಸೂರಿಗಳೊಡನೆ ಈ ಭೂಲೋಕದಲ್ಲಿ ಅವತರಿಸಿದಳು. ಗೋದಾದೇವಿಯು ಲಕ್ಷ್ಮಿ , ಶಠಾರಿಯು ಸೇನಾನಾಥ, ಯತಿರಾಜರು ಆದಿಶೇಷನು. ಅವರಲ್ಲಿ ಗೋದಾದೇವಿಯು ಸಾಕ್ಷಾಲ್ಲಕ್ಷ್ಮಿಯಾದುದರಿಂದ ಪಶಸ್ತಳಾದಳು'.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೋದಾದಿ ದಿವ್ಯಸೂರಿ ಪೂರ್ವಾಚಾರ್ಯವರ್ಣನೆ ಎಂಬ ಎಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

೭೫

ವೇದಾಂತಿಯು ಮತ್ತೆ ಲೋಕಹಿತಕ್ಕಾಗಿ 'ನಿತ್ಯಾನಪಾಯಿನಿಯಾದ ಲಕ್ಷ್ಮಿಯು ತನ್ನ ಪತಿಯನ್ನೂ, ಅಪ್ರಾಕೃತವಾದ ವೈಕುಂಠವನ್ನೂ, ಆ ಪರಬ್ರಹ್ಮಾನುಭವವನ್ನೂ ಬಿಟ್ಟು ಭೂಮಿಯಲ್ಲಿ ಹೇಗೆ ಅವತರಿಸಿದಳು. ಎಲ್ಲವನ್ನೂ ವಿಶದವಾಗಿ ಹೇಳಬೇಕು' ಎಂದು ಪ್ರಾರ್ಥಿಸಿದನು.

ಭಟ್ಟಾಚಾರ್ಯನು -'ಎಲೈ ವೇದಾಂತಿಯೇ ಕೇಳು. ಶ್ರುತಿ, ಸ್ಮೃತಿ, ಪುರಾಣ, ಇತಿಹಾಸಗಳೂ ಪೂರ್ವಾಚಾರ್ಯರ ಕೃತಿಗಳೂ, ದ್ರಾವಿಡ ವೇದಗಳೂ, ಎಲ್ಲವೂ ಹೇಳುತ್ತಿರುವ ವಿಚಾರವನ್ನು ಹೇಳುವೆನು' ಎಂದು ಮೊದಲು ವೈಕುಂಠನಗರವನ್ನು ವರ್ಣಿಸಿದನು. (ಇದರ ವರ್ಣನೆಯು ವಿಸ್ತಾರವಾಗಿ ಸಾಧಾರವಾಗಿದೆ).

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ವೈಕುಂಠಪುರ ವರ್ಣನೆ ಎಂಬ ಎಪ್ಪತ್ತೈದನೆಯ ಅಧ್ಯಾಯವು ಮುಗಿದುದು.

೭೬

ಎಲೈ ವೇದಾಂತಿಯೆ, ಪರಮಪುರುಷನಾದ ನಾರಾಯಣನು ಈ ರೀತಿಯಾಗಿ ವೈಕುಂಠ ನಗರದಲ್ಲಿ ಲಕ್ಷ್ಮಿಯೊಡನೆಯೂ, ಭಕ್ತರೊಡನೆಯೂ ಭಾಗವತರೊಡನೆಯೂ, ಇರುತ್ತಿರುವನು. ಒಂದು ಸಲ ಲಕ್ಷ್ಮಿಯು ಅವ್ಯಾಜವಾದ ದಯಾಲೇಶದಿಂದ ಜಗತ್ತನ್ನು ನೋಡಿದಳು. ಬ್ರಹ್ಮಾನುಭವದಲ್ಲಿರುವ ನಿತ್ಯಸೂರಿಗಳೇ ಮೊದಲಾದವರನ್ನು ನೋಡಿ ಸಂತುಷ್ಟಳಾದರೂ, ಸಂಸಾರನಿಮಗ್ನರಾಗಿರುವ ಬದ್ಧರಾದ ಜೀವರಾಶಿಗಳನ್ನು ಕಂಡು ಬಹು ದುಃಖಿತಳಾಗಿ ನಾರಾಯಣನನ್ನು ಕುರಿತು ಹೀಗೆಂದಳು -'ಅಪಾರ ಕರುಣಾಸಿಂಧು ದೇವದೇವ ಜಗತ್ಪತೇ' ಈ ಬದ್ಧಜೀವರನ್ನು ನೋಡು. ನೀನು ಸಮದರ್ಶಿಯಲ್ಲವೇ? ಶಾಸ್ತ್ರಗಳೆಲ್ಲಿಲ್ಲ 'ಸರ್ವಭೂತಗಳಲ್ಲಿಯೂ ಸಮನು, ಕಲ್ಯಾಣ ಗುಣಸಾಗರನು, ಅವ್ಯಾಜ ಬಂಧುವು, ಜಗತ್ತಿಗೆ ಮಾತಾ-ಪಿತೃವು'- ಎಂದು ನೀನು ಕರೆಯಲ್ಪಟ್ಟಿರುವೆಯಷ್ಟೆ. ಆದರೆ, ನಿನ್ನಲ್ಲಿ ಇಷ್ಟು ವೈಷಮ್ಯವೂ, ಕಠಿನತೆಯೂ ಇರಲಾಗಿ ಕೆಲವರು ದುಃಖಿಗಳೂ ಹಲವರು ಸುಖಿಗಳೂ ಆಗಿರುವರು. ಇದರಿಂದ ನಿನಗೇನು ಲಾಭ? ಅವಿದ್ಯೆಯು ನಿನ್ನ ಅಧೀನವೋ? ನೀನು ಅವಿದ್ಯೆಗೆ ಅಧೀನನೋ ಹೇಳು? ನಿನ್ನ ಕಟಾಕ್ಷಕ್ಕೆ ಗೋಚರಿಸಿದ ಜೀವರೆಲ್ಲ ಈ ಪರಮಪದದಲ್ಲಿ ಮುಕ್ತಾತ್ಮರೊಡನೆ ಆನಂದದಿಂದ ಇರಬಹುದಲ್ಲವೇ? ಎಲ್ಲರೂ ಹೀಗಿದ್ದರೆ ಹಾನಿಯೇನು? ಇದನ್ನು ಕೇಳಿ ಮಂದಸ್ಮಿತದಿಂದ ಮನೋಹರನಾದ ನಾರಾಯಣನು ಲಕ್ಷ್ಮಿಯನ್ನು ಕುರಿತು-

'ದೇವಿ, ಎಲ್ಲ ಜೀವಗಳೂ ಮೊದಲು ರೆಕ್ಕೆಗಳನ್ನು ಕತ್ತರಿಸಿದ ಪಕ್ಷಿಗಳಂತೆ ಕರಣ ಕಳೇಬರಗಳಿಲ್ಲದೆ ನಿಶ್ಚೇಷ್ಟರಾಗಿದ್ದರು. ನನಗೆ ದಯೆಯುಂಟಾಗಲು ಅವರ ಹಿತಕ್ಕಾಗಿ ನಾನೇ ಕರಣ ಕಳೇಬರಗಳನ್ನು ಕೊಟ್ಟೆನು. ಆದರೆ ಮಾನವರು ನನ್ನ ಕೈಂಕರ್ಯಕ್ಕಾಗಿ ಕೊಟ್ಟಿದ್ದ ಇಂದ್ರಿಯಗಳನ್ನು, ಶರೀರವನ್ನೂ ಬೇರೆ ವಿಷಯ ಸುಖಗಳಿಗಾಗಿ ಉಪಯೋಗಿಸಿಕೊಂಡರು; ನನ್ನನ್ನು ಮರೆತರು. ಸಮಿತ್ತನ್ನು ತರುವುದಕ್ಕೆಂದು ಕೊಟ್ಟ ಕತ್ತಿಯನ್ನು ಹಸುವಿನ ಬಾಲವನ್ನು ಕೊಯ್ಯುವುದಕ್ಕೆ ಉಪಯೋಗಿಸುವಂತೆಯೂ, ನದಿಯನ್ನು ದಾಟುವುದಕ್ಕೆ ಒದಗಿಸಿದ ದೋಣಿಯನ್ನು ಸುಳಿಯಲ್ಲಿ ಸಿಕ್ಕಿಸಿ ಆತ್ಮಘಾತ ಮಾಡಿಕೊಳ್ಳುವಂತೆಯೂ, ಜನರೆಲ್ಲರೂ ನನ್ನನ್ನು ಮರೆತು ಶಬ್ದಾದಿ ವಿಷಯಗಳಲ್ಲಿ ಆಸಕ್ತರಾದರು. ಕುಮಾರ್ಗದಲ್ಲಿ ಹೋಗುವ ಅವರಿಗೆ ಕರಾವಲಂಬನವಿರಲೆಂದು ಶಾಸ್ತ್ರಗಳನ್ನು ಅನುಗ್ರಹಿಸಿದೆ. ಅವರು ಶಾಸ್ತ್ರಗಳನ್ನು ನೋಡಿಯೂ ನೋಡದೆ 'ನಾನೇ ಪ್ರಭು, ನಾನೇ ಭೋಗಿ, ನಾನೇ ಬಲಶಾಲಿ, ನನಗೆ ಎದುರಾರು?' ಇದೇ ಮೊದಲಾಗಿ ಅಹಂಕಾರಿಗಳಾದರು. ಪರತಂತ್ರನಾದವನು ತಾನು ಸ್ವತಂತ್ರನೆಂದು ತಿಳಿದುಕೊಳ್ಳುವುದಕ್ಕಿಂತ ಆತ್ಮಾಪಹಾರವು ಮತ್ತಾವುದು? ಸಮಸ್ತ ಪಾಪಬೀಜವಾದ ಆ ಸ್ವಾತಂತ್ರ್ಯದಿಂದಲೇ ಅವರು ಆತ್ಮಾಪಹಾರಿಗಳೂ, ಸಂಸಾರವರ್ಧಕರೂ ಆದರು. ಅಪ್ಪಣೆಯನ್ನು ಉಲ್ಲಂಘಿಸಿದರೆ ಕಡೆಗೆ ರಾಜನೇ ಸ್ವತಃ ಹೋಗಿ ವಿಚಾರಿಸುವಂತೆ ಅವರನ್ನು ತಿದ್ದಲು ನಾನು ರಾಮ, ಕೃಷ್ಣ ಮೊದಲಾದ ರೂಪಗಳಿಂದ ಅವತರಿಸಿದ್ದೆನಷ್ಟೆ. ಆದರೆ ಅಸುರಪ್ರಕೃತಿಗಳಾದ ಅವರು ನನ್ನನ್ನು ಹೊಂದದೆ ಅಧಮಗತಿಯನ್ನೇ ಹೊಂದುತ್ತಿರುವರು. ನನ್ನ ಮಹಿಮೆಯನ್ನು ತಿಳಿಯದೆ ಮನುಷ್ಯನೆಂದು ತಿಳಿದು

ತಿರಸ್ಕರಿಸುವರು. ಹೀಗೆ, ಮೊದಲು ಅವರಿಗೆ ಕರಣ ಕಳೇಬರಗಳನ್ನು ಕೊಟ್ಟೆ; ಆಮೇಲೆ ಶಾಸ್ತ್ರಪ್ರದಾನಮಾಡಿದೆ; ದಶಾವತಾರಗಳನ್ನು ಮಾಡಿದೆ; ಇನ್ನು ಮಾಡಬೇಕಾದುದೇನು ? ಹೇಳು ನೋಡೋಣ' ಎಂದನು. ಇದನ್ನು ಕೇಳಿದ ಲಕ್ಷ್ಮಿಯು ದುಃಖದಿಂದ ಸ್ವಲ್ಪಹೊತ್ತು ಸುಮ್ಮನಿದ್ದಳು. ಅನಂತರ ಜಗನ್ಮಾತೆಯಾದ ಲಕ್ಷ್ಮಿಯು ಪತಿಯ ಅನುಭವವನ್ನೂ, ಬದ್ಧಜೀವರ ದುಃಖವನ್ನೂ ಚಿಂತಿಸಿ -'ಎಲೈ ನಾಥನೆ, ನನಗೆ ಅನುಮತಿಯನ್ನು ಕೊಡು. ನಿನ್ನ ಅನುಗ್ರಹ ವಿಶೇಷದಿಂದ ನಿತ್ಯಸೂರಿಗಳೊಡನೆ ಭೂಲೋಕದಲ್ಲಿ ಹುಟ್ಟಿ ಎಲ್ಲರನ್ನೂ ನಿನ್ನ ಕೈಂಕರ್ಯಾಭಿಮುಖರಾಗುವಂತೆ ಮಾಡುವೆನು'- ಎಂದು ಪ್ರಾರ್ಥಿಸಲು, ನಾರಾಯಣನು ಅಗಸ್ತ್ಯ ಮಹರ್ಷಿಗೆ ಕೊಟ್ಟಿದ್ದ ಶಾಪದ ಪರಿಹಾರೋಪಾಯವನ್ನು ನೆನೆದು ಅನುಮತಿಯನ್ನು ಕೊಟ್ಟನು. ಲಕ್ಷ್ಮಿಯು, ವನಮಾಲ, ವೈಜಯಂತೀ, ಪಂಚಾಯುಧಗಳು, ಶ್ರೀವತ್ಸ, ಕೌಸ್ತುಭ, ಸೇನಾನಾಥ, ಗರುಡ, ಆದಿಶೇಷನೇ ಮೊದಲಾದವರನ್ನು ಕರೆದುಕೊಂಡು ಭೂಮಿಯಲ್ಲಿ ಅವತರಿಸುವಂತೆ ನಿಶ್ಚಯಿಸಿದಳು. ಕಲಿಯುಗದಲ್ಲಿ ಎಲ್ಲರೂ ನಾರಾಯಣ ಪರರಾಗುವರು, ದ್ರಾವಿಡದೇಶದಲ್ಲಿ ತಾಮ್ರಪರ್ಣೀ, ಕಾವೇರಿ ಮೊದಲಾದ ನದಿಗಳ ತೀರದಲ್ಲಿ ನಿತ್ಯಸೂರಿಗಳು ಅವತರಿಸಿದರು. ಮತ್ತೇನು ಬೇಕು, ಕೇಳು'-

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಲಕ್ಷ್ಮೀವೈಕುಂಠನಾಥ ಸಂವಾದ, ಗೋದಾವತಾರ ಪ್ರಕಾರವೆಂಬ ಎಪ್ಪತ್ತಾರನೆಯ ಅಧ್ಯಾಯವು ಮುಗಿದುದು.

೭೭

ಮತ್ತೆ "ನಮ್ಮಯತಿ" (ವೇದಾಂತಿಯು) ಸರೋಯೋಗಿ, ಭೂತಯೋಗಿ, ಮಹಾಯೋಗಿಗಳ ಅವತಾರ ಸ್ಥಳಾದಿಗಳನ್ನು ಹೇಳಬೇಕೆಂದು ಕೇಳಲು, ಕೂರೇಶಸುತನಾದ ಭಟ್ಟಾಚಾರ್ಯನು ಹೇಳಲು ಉಪಕ್ರಮಿಸಿದನು.

ಅಯೋಧ್ಯಾ, ಮಥುರಾ, ಮಾಯಾ, ಕಾಶೀ, ಕಾಂಚೀ, ಅವಂತಿಕಾ, ದ್ವಾರಾವತಿ -ಈ ಏಳು ನಗರಗಳು ಮೋಕ್ಷದಾಯಕವಾದುವು. ಇವುಗಳಲ್ಲಿ ಕಾಂಚಿಯಲ್ಲಿ ಬ್ರಹ್ಮನು ಅಶ್ವಮೇಧಯಾಗದಿಂದ ಹರಿಯನ್ನು ಸಂತೋಷಪಡಿಸಿದನು. 'ಕ' ಎಂದರೆ ಬ್ರಹ್ಮ; ಅವನಿಂದ ಅಂಚಿತ (ಪೂಜ್ಯ)ವಾದುದರಿಂದ 'ಕಾಂಚಿ' ಎಂದು ಪ್ರಸಿದ್ಧವಾಯಿತು. ಮತ್ತು ಕಾಂಚಿಯು ಹದಿನೆಂಟು ದಿವ್ಯದೇಶಗಳಿಂದ ಕೂಡಿರುವುದು. ಕಾಂಚಿಯಲ್ಲಿ ಅಷ್ಟಭುಜವೆಂಬ ಸ್ಥಳವು ಪ್ರಸಿದ್ಧವಾದುದು. ಅದಕ್ಕೆ ಉತ್ತರದಲ್ಲಿ "ಯಥೋಕ್ತಕಾರಿ"ಯು ಪ್ರಸಿದ್ಧವಾಗಿರುವುದು. ಅದಕ್ಕೆ ಉತ್ತರದಲ್ಲಿ ಸುವರ್ಣಕಮಲಗಳಿಂದ ಶೋಭಿತವಾದ ಸರೋವರವಿದೆ. ದ್ವಾಪರಯುಗದಲ್ಲಿ ಎಂಟು ಲಕ್ಷದ ಅರವತ್ತು ಸಾವಿರದ ಒಂಬೈನೂರು ವರ್ಷಗಳು ಕಳೆಯಲು, ಸಿದ್ಧಾರ್ಥಿನಾಮ ಸಂವತ್ಸರದ ತುಲಾಮಾಸ, ಶುಕ್ಲಪಕ್ಷ, ಅಷ್ಟಮೀ, ಶ್ರವಣ, ಮಂಗಳವಾರದಲ್ಲಿ ಆ ಸರೋವರದಲ್ಲಿ ಸರೋಯೋಗಿಯು ಶಂಖಾಂಶದಿಂದ ಅವತರಿಸಿದನು.

ಕಾಂಚ್ಯಾಂ ಸರಸಿ ಹೇಮಾಬ್ಜೆ ಜಾತಂ ಕಾಸಾರಯೋಗಿನಂ।
ಕಲಯೇ ಯಃ ಶ್ರಿಯಃ ಪತ್ಯುಃ ರವಿಂ ದೀಪಮಕಲ್ಪಯತ್॥

ಮುಕುಂದಸ್ಯ ಮುಖೋಲ್ಲಾಸ ಮೂಲವಾಗ್ಜಾಲ ಮೂರ್ಧಿತಂ।
ಮುನಿಮುಖ್ಯಂ ಸರೋಜಾತಂ ಮುಕ್ತಿಮೂಲ ಮುಪಾಸ್ಮಹೇ॥
ಹೇಮಾಬ್ಜಿನೀ ಹೇಮ ಸರೋಜಗರ್ಭಾಚ್ಛೀ ಪಾಂಚಜನ್ಯೋಽಜನಿ ತತ್ರಯೋಗೀ।
ತಾರೆಹರೇರಾಶ್ವಯುಜಾಖ್ಯಮಾಸೇ ಸಮಸ್ತ ಜೀವಾವನ ಕರ್ಮಹೇತುಃ॥

ಸಂಜೀವನತ್ವಾದ್ಬಹು ಸತ್ವಯೋಗಾತ್ಸಂಸಾರ ದಾವಾಗ್ನಿ ವಿನಾಶಕತ್ವಾತ್।
ಶೈತ್ಯೋದಯಾತ್ಸೂಕ್ಷ್ಮಮೃತಪ್ರವಾಹಾತ್ಸರೋಽಭಿಧಾನಂ ಯಮುದಾಹರಂತಿ॥

ಮಾರನೆಯದಿನ ಭೂತಯೋಗಿಯು ಸಮುದ್ರತೀರದಲ್ಲಿ ಪ್ರಸಿದ್ಧವಾದ ಮಲ್ಲಾಪುರದಲ್ಲಿ ದಿವ್ಯವಾದ ಮಾಧವೀಕುಸುಮದಲ್ಲಿ ಗದಾಂಶದಿಂದ ಅವತರಿಸಿದನು.

ಮಲ್ಲಾಪುರವರಾಧೀಶಂ ಮಾಧವೀಕುಸುಮೋದ್ಭವಂ।
ಭೂತಂನಮಾಮಿ ಯೋವಿಷ್ಣೋಃ ಜ್ಞಾನದೀಪ ಮಕಲ್ಪಯತ್॥
ವಂದೇ ಭೂತಾಖ್ಯಯೋಗೀಂದ್ರಂ ವರೇಣ್ಯಂ ಗುಣಸಂಪದಂ।
ಲಕ್ಷ್ಮೀಸಹಾಯ ಕರುಣಾಪಾತ್ರಮಪ್ರತಿವೈಭವಂ॥
ಮಾಸೇಥ ತಸ್ಮಿನ್ ವಸುಭೇಽಜನಿಷ್ಟ ಪಾರೇ ಸಮುದ್ರಂ ಪುರಿಮಲ್ಲ ನಾಮ್ನ್ಯಾಂ।
ಲತಾಗೃಹಾದ್ವೈಷ್ಣವ ಭೂತನಾಮಾ ಕೌಮೋದಕೀ ಶಕ್ತಿಮಯೋ ಮುನೀಂದ್ರಃ॥

ಇದರ ಮಾರನೆಯ ದಿವಸ ಮಯೂರ ನಗರದಲ್ಲಿ ಶ್ರೀಕೇಶವನ ಸಮೀಪದಲ್ಲಿರುವ ಒಂದು ಕೂಪದಲ್ಲಿ ರಕ್ತೋತ್ಪಲದಲ್ಲಿ ನಂದಕಾಂಶದಿಂದ "ಮಹದಾಹ್ವಯ" ಯೋಗಿಯು ಅವತರಿಸಿದನು.

ಪದ್ಮಾಕ್ರಮಣ ಪಾದಾಬ್ಜ ಪ್ರೇಮಭ್ರಾಂತ್ಯಾ ಮನೋಜ್ಞಯಾ।
ಭ್ರಾಂತ ಯೋಗೀತಿ ವಿಖ್ಯಾತಂ ಮುನಿಂ ವಂದೇ ಗುಣಾಂಬುಧಿಂ॥

ಅಷ್ಟರಲ್ಲಿ ಭಗವಾನ್ ವಿಶ್ವಕ್ಸೇನನು ವೈಕುಂಠದಿಂದ ಅವತರಿಸಿ ಮೂವರಿಗೂ ಪಂಚಸಂಸ್ಕಾರಗಳನ್ನು ಮಾಡಿ, ನಿಖಿಲತತ್ವಾರ್ಥಗಳನ್ನೂ ಉಪದೇಶಿಸಿ ಮತ್ತೆ ವೈಕುಂಠಕ್ಕೆ ತೆರಳಿದನು. ಆಗ ವಿಷ್ಣುಭಕ್ತಿಯು ಅಪ್ರತಿಹತವಾಗಿ ಹರಡಿತು. ಅತಿಶಯವಾದ ಭಕ್ತಿಯಿಂದ ಮಹಾಯೋಗಿಯು ನಗುತ್ತಲೂ, ಅಳುತ್ತಲೂ, ಹಾಡುತ್ತಲೂ, ಭ್ರಾಂತರಂತೆ ಇದ್ದುದರಿಂದ ಭ್ರಾಂತಯೋಗಿ ಎಂಬ ಹೆಸರಾಯಿತು. ಆ ಮೂವರಲ್ಲಿ ಭ್ರಾಂತಯೋಗಿಗೆ ಭಕ್ತಿಯು ವಿಶೇಷವಾಗಿದ್ದುದರಿಂದ "ಮಹಾಯೋಗಿ"ಎಂದೂ ಹೆಸರಾಯಿತು. ಹರಿಕಟಾಕ್ಷದಿಂದ ಅಯೋನಿಜರಾಗಿ ಅವತರಿಸಿದುದರಿಂದ ಮೂವರೂ ಸತ್ವಗುಣ ನಿಷ್ಠರಾಗಿರುತ್ತಿದ್ದರು. ದಾಸಭೂತರಾಗಿದ್ದುದೇ ಅವರ ಲಕ್ಷಣವೇ ಹೊರತು ಮತ್ತೆ ಯಾವುದೂ ಇಲ್ಲ.

ಸತ್ವಮಾತ್ರನಿ ಸಂಜಾತಂ ಸ್ವಾಮಿತ್ವಂ ಬ್ರಹ್ಮಣಿ ಸ್ಥಿತಂ।
ಆತ್ಮದಾಸ್ಯಂ ಹರೇಃ ಸ್ವಾಮ್ಯಂ ಸ್ವಭಾವಂ ಚ ಸದಾಸ್ಮರ॥
ಜ್ಞಾನಾನಂದಮಯಸ್ತ್ವಾತ್ಮಾಶೇಷೋ ಹಿ ಪರಮಾತ್ಮನಃ।
ತತ್ಸ್ವತಸಿದ್ಧ ಭಗವದ್ದಾಸ್ಯೈಕರಸ ಭೋಗಿನಃ।
ಸದ್ವೈರಾಗ್ಯ ಜ್ಞಾನಭಕ್ತಿ ಸಹಿತಾಸ್ಸರ್ವದಾಽಭವನ್॥

ಬಾಲ್ಯದಿಂದಲೂ ಆ ಮೂವರು ರುಚಿಕರವಾದ ಅನ್ನಪಾನಾದಿಗಳಲ್ಲಿ ಇಷ್ಟವಿಲ್ಲದೆ. ಭಗವದ್ಗುಣಾನುಭವದಲ್ಲಿಯೇ ನಿರತರಾಗಿದ್ದರು. ಸಂಸಾರಿಗಳ ಧರ್ಮವೇ ತಿಳಿಯದ ಇವರು ಗ್ರಾಮೈಕ ರಾತ್ರಿಯಾಗಿ ತಿರುಗುತ್ತಿದ್ದರು.

ಹೀಗಿರುತ್ತಿರಲು ಪರಮಕಾರುಣಿಕನಾದ ಶ್ರೀಯಃಪತಿಯು ಇಂತಹ ಮಹಾವಿರಕ್ತರೂ, ಜ್ಞಾನಿಶ್ರೇಷ್ಠರೂ ಆದ ಇವರಿಂದ ಅನಾದ್ಯ ವಿದ್ಯಾ ಸಂಬಂಧದಿಂದ ದೂಷಿತರಾದ ಸಂಸಾರಿಗಳಿಗೆ ಜ್ಞಾನವನ್ನುಂಟು ಮಾಡಿಸಬೇಕೆಂಬ ಉದ್ದೇಶದಿಂದ ಬೇರೆ ಬೇರೆಯಾಗಿ ತಿರುಗುತ್ತಿರುವ ಮೂವರನ್ನೂ ದೆಹಲಿ ನಗರದಲ್ಲಿ ಒಂದೇ ಕಡೆ ಸೇರಿಸಬೇಕೆಂದು ಯೋಚಿಸಿದನು.

ಒಂದು ದಿನ ಸಂಜೆ ದೆಹಲಿನಗರದಲ್ಲಿ ಕಾಸಾರಯೋಗಿಯು ಅಲೆಯುತ್ತಾ ಮಳೆಯಲ್ಲಿ ಒಬ್ಬ ಬ್ರಾಹ್ಮಣನ ಮನೆಯ ಹೊಸ್ತಿಲಿಗೆ ಬಂದನು. ಅಲ್ಲಿ ಒಬ್ಬನೇ ಮಲಗುವಷ್ಟು ಜಾಗವಿದ್ದುದರಿಂದ ಅಲ್ಲಿಯೇ ಮಲಗಿದನು. ಸ್ವಲ್ಪ ಹೊತ್ತಿನಲ್ಲಿ ಭೂತಯೋಗಿಯೂ (ಪೂದತ್ತಾಳ್ವಾರ್) ಅಲ್ಲಿಗೆ ಬಂದು ಜಾಗವನ್ನು ಕೇಳಿದನು. ಕರುಣಾಳುವಾದ ಕಾಸಾರಯೋಗಿಯು ಅವಕಾಶಕೊಟ್ಟನು. ಇಬ್ಬರು ಮಲಗಲು ಜಾಗವಿಲ್ಲದ್ದರಿಂದ ಇಬ್ಬರು ಕುಳಿತುಕೊಂಡರು. ಅಷ್ಟುಹೊತ್ತಿಗೆ ಭ್ರಾಂತಯೋಗಿಯು ಅದೇಜಾಗಕ್ಕೆ ಬಂದು ಸ್ಥಳವನ್ನು ಕೇಳಲು, ಪರಸ್ಪರ ಸೌಹಾರ್ದದಿಂದ ಅವಕಾಶವಾಯಿತು. ಮೂವರಿಗೂ ಕುಳಿತುಕೊಳ್ಳಲು ಜಾಗಸಾಲದ್ದರಿಂದ ಎಲ್ಲರೂ ಎದ್ದುನಿಂತುಕೊಂಡರು. 'ವೈಷ್ಣವೋ ವೈಷ್ಣವಂ ದೃಷ್ಟ್ವಾದಂಡವತ್ಪ್ರಣಮೇದ್ಭುವಿ'- ಎಂಬಂತೆ, ಅವರು ಒಬ್ಬರಿಗೊಬ್ಬರು ನಮಸ್ಕರಿಸಲು (ತುಲಸಿ ಕಾನ ನಂಯತ್ರ ಯತ್ರಪದ್ಮವನಾನಿ ಚ। ವಸಂತಿ ವೈಷ್ಣವಾಯತ್ರ ತತ್ರಸನ್ನಿಹಿತೋ ಹರಿಃ॥) ಅವರ ಮಧ್ಯೆ ಅವರ ಅನುಗ್ರಹಾರ್ಥವಾಗಿ ಶ್ರೀಮನ್ನಾರಾಯಣನು ಶಂಖಚಕ್ರಧರನಾಗಿ ಸೂಕ್ಷ್ಮನಾಗಿದ್ದವನು ಬೃಹದಾಕಾರವನ್ನು ಧರಿಸಿದನು. ಮೂವರಿಗೂ ಸ್ಥಳವು ಸಾಲದೆ ನಿರ್ಬಂಧವಾಗಲು ಅವರು ತಮ್ಮ ತಮ್ಮಲ್ಲಿಯೇ ಹೇಳತೊಡಗಿದರು - ಮತ್ತೇ ಯಾರೂ ಇರಲಿಲ್ಲ, ನಾವು ಮೂವರಲ್ಲದೇ ಇಲ್ಲಿ ಯಾರು ಇಲ್ಲದಿರಲು ಯಾರು ಬಂದರು?-ಎಂದು ಕತ್ತಲಿನಲ್ಲಿ ಹುಡುಕಿದರು. ದಿವ್ಯಜ್ಞಾನಿಗಳಾದ ಆ ಯೋಗಿಗಳು ಭೂಮಿಯನ್ನೇ ಪಾತ್ರೆಯಾಗಿಯೂ, ಸಮುದ್ರಗಳನ್ನೇ ತುಪ್ಪವನ್ನಾಗಿಯೂ, ಸೂರ್ಯನನ್ನೇ ಸೊಡರನ್ನಾಗಿ ಮಾಡಿ ಜ್ಞಾನದೀಪವನ್ನು ಹೊತ್ತಿಸಿ ಪರಮಾತ್ಮನನ್ನು ನೋಡಿದರು. ಆ ಪರಮಾತ್ಮನ ಸೌಂದರ್ಯವನ್ನು ಕೇಳಬೇಕೆ? ವಿಹಗವಾಹನನು ಮಿಂಚಿನೊಡನೆ ಕೂಡಿದ ಮೇಘದಂತೆ ಶ್ಯಾಮನು; ಎದೆಯಲ್ಲಿ ಲಕ್ಷ್ಮಿ; ಪುಂಡರೀಕನಯನನು; ಎರಡು ಕೈಗಳಲ್ಲಿ ಶಂಖಚಕ್ರಗಳು; ಅಜಾನುಬಾಹುವು; ಪುರುಷರಿಗೂ ಮೋಹಕವಾದ ಅವಕಯಗಳು; ಎರಡು ಪಾರ್ಶ್ವಗಳಲ್ಲಿ ಭೂದೇವಿ ನೀಳಾದೇವಿಯರು; ಪೀತಾಂಬರನು; ಚತುರ್ಭುಜನು; ದಿವ್ಯಭೂಷಣಗಳಿಂದ ಭೂಷಿತನು. ಇಂತಹ ಶ್ರೀಮನ್ನಾರಾಯಣನನ್ನು ಜ್ಞಾನದೃಷ್ಟಿಯಿಂದ ಕಂಡು, ಬ್ರಹ್ಮಾನುಭವದಲ್ಲಿ ಮುಳುಗಿದರು. ಅವರಿಗುಂಟಾದ ಆನಂದವು ಅವರ ಶರೀರದಲ್ಲಿಯೇ ಹಿಡಿಸಲಿಲ್ಲ, ಆ ಬ್ರಹ್ಮಾನುಭವದಿಂದಲೇ ಉಂಟಾದ ಜ್ಞಾನದಿಂದ ಮೂವರು ನೂರು ಪದ್ಯಗಳುಳ್ಳ ಮೂರು ದಿವ್ಯದ್ರಾವಿಡ ಪ್ರಬಂಧಗಳನ್ನು ರಚಿಸಿದರು. ಮೋಕ್ಷಪ್ರಾಪಕವಾದುದರಿಂದ ಅವು ಲೋಕೋಪಕಾರಕ

ವಾದುವು. ಒಂದೊಂದರಲ್ಲಿಯೂ ವಿಷ್ಣುಕ್ಷೇತ್ರಗಳಾದ ಅಷ್ಟೋತ್ತರ ಶತ ದಿವ್ಯದೇಶಗಳ ಮಹಿಮೆಯು ವರ್ಣಿಸಲ್ಪಟ್ಟಿದೆ. ಅದರಲ್ಲಿ ಕಾಸಾರಯೋಗಿಯು ಮುಖ್ಯವಾಗಿ ಶ್ರೀರಂಗ, ವೆಂಕಟಾಚಲ, ಕಾಂಚಿ, ದೆಹಲಿನಗರ ಇವು ನಾಲ್ಕನ್ನು ಹೊಗಳಿರುವನು. ಭೂತಯೋಗಿಯು ಸಹ ಶ್ರೀರಂಗ, ವೆಂಕಟಾಚಲ, ದೆಹಲಿ, ಮಲ್ಲನಗರವನ್ನು ಹೊಗಳಿರುತ್ತಾನೆ. ಮಹದಾಹ್ವ ಯನು ಶ್ರೀರಂಗ, ವೆಂಕಟಾಚಲ, ದೆಹಲಿ ಮಯೂರ ನಗರದ ಕೈರವಿಣೀತೀರಗಳನ್ನು ಪ್ರಶಂಸೆ ಮಾಡಿರುವನು. ಭಗವತ್ಪರವಾದ ಈ ಪ್ರಬಂಧಗಳನ್ನು ಓದಿದರೆ "ವಿಷ್ಣುವಿನ ಪರಮಪದ"ಕ್ಕೆ ಚ್ಯುತಿಯಿಲ್ಲ. ಹೀಗೆ ಮೂವರು ಪ್ರಬಂಧಗಳನ್ನು ರಚಿಸಿ ಮೊದಲಿನಂತೆಯೇ ಲೋಕಾನುಗ್ರಹಕ್ಕಾಗಿ ದೇಶಾಟನ ಮಾಡುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕಾಸಾರಾದಿಯೋಗಿಗಳ ಅವತಾರ ಕಥನವೆಂಬ ಎಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

## ೭೮

ಮತ್ತೆ ವೇದಾಂತಿಯು ಭಕ್ತಿಸಾರನ ಚರಿತ್ರೆಯನ್ನು ಕೇಳಲು, ಭಟ್ಟಾಚಾರ್ಯನು ಹೇಳಲಾರಂಭಿಸಿದನು-

"ಹಿಂದೆ ಲೋಕಸಂರಕ್ಷಣಾರ್ಥವಾಗಿ ಶ್ರೀಕೃಷ್ಣನು ಒಂದು ಕಡೆ ಹುಟ್ಟಿ ಮತ್ತೊಂದು ಕಡೆ ಬೆಳೆದಂತೆ, ಭಕ್ತಿಸಾರನೂ ಕೂಡ ಮಹೀಸಾರ ಕ್ಷೇತ್ರದಲ್ಲಿ ಕನಕಾಂಗಿ (ಅಪ್ಸರೆ) ಭಾರ್ಗವ (ಮುನಿ)ರಲ್ಲಿ ಹುಟ್ಟಿ ಮೇದರವನ ಮನೆಯಲ್ಲಿ ಬೆಳೆದನು. ಶ್ರೀಕೃಷ್ಣನ ಅವತಾರ ಸಮಯದಲ್ಲಿ ಭೂಮಿಯು ಸರ್ವಸಂಪತ್ಸಮೃದ್ಧವಾದಂತೆ ಈತನು ಹುಟ್ಟಿದಾಗಲೂ ಭೂಮಿಯು ರಂಜಿಸುತ್ತಿತ್ತು.

ಒಂದು ಸಾರಿ ಅತ್ರಿ, ವಸಿಷ್ಠ, ಭೃಗು, ಭಾರ್ಗವ, ಪುಲಸ್ತ್ಯ, ಆಂಗೀರಸನೇ ಮೊದಲಾದ ಬ್ರಹ್ಮರ್ಷಿಗಳು ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮನನ್ನು ನಮಸ್ಕರಿಸಿ-"ಎಲೈ ವಿಧಾತನೇ, ನಾವು ತಪಸ್ಸು ಮಾಡಲು ಭೂಲೋಕದಲ್ಲಿ ಉತ್ತಮವಾದ ಕ್ಷೇತ್ರವು ಯಾವುದು? ವಿಚಾರಿಸಿ ಹೇಳಬೇಕು'-ಎಂದು ಪ್ರಾರ್ಥಿಸಿದರು. ಆಗ ಬ್ರಹ್ಮನು ಋಷಿಗಳಿಗೆ ಯಥಾರ್ಥವನ್ನು ತಿಳಿಸುವ ಉದ್ದೇಶದಿಂದ ವಿಶ್ವಕರ್ಮನನ್ನು ಕರೆದು - ಪಂಚಾಶತ್ಕೋಟಿ ವಿಸ್ತೀರ್ಣವುಳ್ಳ ಭೂಮಂಡಲವನ್ನು ಒಂದು ಕಡೆಯೂ ಮಹೀಸಾರಕ್ಷೇತ್ರವನ್ನು ಒಂದು ಕಡೆಯೂ ಇಟ್ಟುತೂಕ ಮಾಡಬೇಕೆಂದು ತಿಳಿಸಲು ಅವನು ಅದರಂತೆಯೇ ಮಾಡಿದನು. ಸಮಸ್ತಪೃಥ್ವಿಯು ಮೇಲಕ್ಕೂ ಮಹೀಸಾರಕ್ಷೇತ್ರವು ಕೆಳಕ್ಕೂ ತೂಗಿತು. ಆಗ ಆ ಕ್ಷೇತ್ರವು ಅನ್ವರ್ಥವಾಗಿ ಮಹೀಸಾರಕ್ಷೇತ್ರವಾಯಿತು. ಮಹರ್ಷಿಗಳು ಬ್ರಹ್ಮನ ಅನುಮತಿಯನ್ನು ಪಡೆದು ಮಹೀಸಾರ ಕ್ಷೇತ್ರದಲ್ಲಿ ಸುಖವಾಗಿ ತಪಸ್ಸು ಮಾಡುತ್ತಿದ್ದರು.

ಅವರಲ್ಲಿ ಭಾರ್ಗವಮುನಿಯು ಭಗವಂತನಾದ ವಾಸುದೇವನನ್ನು ಕುರಿತು ಘೋರತಪಸ್ಸನ್ನು ಮಾಡುತ್ತಿದ್ದನು. ಆತನ ತಪಸ್ಸಿನಿಂದ ಹೆದರಿದ ದೇವತೆಗಳು ರೂಪಲಾವಣ್ಯ ವತಿಯರಾದ ಅನೇಕ ಅಪ್ಸರೆಯರನ್ನು ಕಳುಹಿಸಲು ಅವರು ಮಹರ್ಷಿಯ ಬಳಿಗೆ ಬಂದು

ನೋಡಿ, ಆತನ ಉಗ್ರತಪಸ್ಸಿನಿಂದ ಹೆದರಿದರು. ಆದರೂ ಅವರಲ್ಲಿ ಚತುರೆಯಾದ ಕನಕಾಂಗಿಯು ಭಾರ್ಗವನನ್ನು ಮೋಹಗೊಳಿಸಲು ಅವರಿಬ್ಬರೂ ವಿಚಿತ್ರವಾದ ಸ್ವರ್ಗ ಸುಖದಲ್ಲಿಯೇ ಕೆಲವುಕಾಲ ಕಳೆದರು. ಕ್ರಮೇಣ ಕನಕಾಂಗಿಯು ಗರ್ಭಿಣಿಯಾಗಿ ಭಕ್ತಿಸಾರಯೋಗಿಯನ್ನು ಹಡೆದಳು.(ದ್ವಾಪರೇ ಸಪ್ತಪಂಚಾಶತ್ಸಹಸ್ರೇಚಾಷ್ಟಲಕ್ಷತೇ। ತಥೈತೋನವ ವತ್ಸಬ್ದೇ ಗತೇ ನವಶತೇಸತಿ॥ ವಿಭವಾಬ್ದೇ ಪುಷ್ಯಮಾಸೇ ದಶಮ್ಯಾಂ ಕೃಷ್ಣಪಕ್ಷಕೇ। ತುಲಾಲಗ್ನೇ ಭಕ್ತಿಸಾರೋ ಮಖಾಯಾಂ ಗುರುವಾಸರೇ। ಕನಕಾಂಗ್ಯಾಂ ಭಾರ್ಗವಸ್ಯ ಜಜ್ಞೆ ಚರಕ್ರಾಂಶತೋ ಮಹಾನ್) ಈ ಶಿಶುವು ಚಕ್ರಾಂಶದಿಂದ, ಮಖಾ ನಕ್ಷತ್ರದಲ್ಲಿ ಪಿಂಡಾ ಕೃತಿಯಲ್ಲಿತ್ತು. ಕನಕಾಂಗಿಯು ಅದನ್ನು ವೇಣುವನದಲ್ಲಿ ಬಿಟ್ಟು ತನ್ನ ದಾರಿಹಿಡಿದಳು. ಲಜ್ಜಿತನಾದ ಭಾರ್ಗವ ಮುನಿಯೂ ಸಹ ಮತ್ತೊಂದು ವನಕ್ಕೆ ಹೊರಟು ಹೋದನು.

ಕಾಲಕ್ರಮದಲ್ಲಿ ಆ ಪಿಂಡವು ಶಿಶುವಿನ ರೂಪವನ್ನು ಹೊಂದಿ ಅಳಲಾರಂಭಿಸಿತು. ಆಗ ಮಹೀಸಾರಕ್ಷೇತ್ರದ ಅಧಿಪತಿಯಾದ ಮಂಗವಲ್ಲೀ ಮನೋಹರನಾದ ಭಗವಾನ್ ಶ್ರೀಜಗನ್ನಾಥನು ಬೇಗ ಅಲ್ಲಿಗೆ ಬಂದು ಶಿಶುವಿಗೆ ದಿವ್ಯಾಮೃತವನ್ನು ಕೊಟ್ಟು ಹಸಿವು ಬಾಯಾರಿಕೆಗಳನ್ನು ಹೋಗಲಾಡಿಸಿ, ತನ್ನ ದಿವ್ಯ ಮಂಗಳ ವಿಗ್ರಹವನ್ನು ತೋರಿಸಿ ಸಮಾಧಾನಗೊಳಿಸಿ ಅದೃಶ್ಯನಾದನು.

ಅಷ್ಟರಲ್ಲಿ ಖಡ್ಗನೆಂಬ ಮೇದರವನು ಬಿದಿರನ್ನು ತರಲು ಆ ವನಕ್ಕೆ ಬಂದನು.. ಅಲ್ಲಿ ಸುಂದರವಾದ ಆ ಮಗುವನ್ನು ಕಂಡು ಆಶ್ಚರ್ಯದಿಂದಲೂ, ಆನಂದದಿಂದಲೂ, ಅದನ್ನು ತೆಗೆದುಕೊಂಡು ಹೋಗಿ ತನ್ನ ಹೆಂಡತಿಯಾದ ಪಂಕಜವಲ್ಲಿಗೆ ಕೊಟ್ಟನು. ಆಕೆಯೂ ಮಕ್ಕಳಿಲ್ಲದಿದ್ದುದರಿಂದ ಪ್ರೀತಿಯಿಂದ ಪೋಷಿಸಿದಳು. ಆದರೆ ಆ ಶಿಶುವು ಭಗವದನುಭವ ಮಾತ್ರದಿಂದಲೇ ತೃಪ್ತವಾಗಿ ಸ್ತನ್ಯಪಾನ ಮಾಡುತ್ತಿರಲಿಲ್ಲ, ಇತರ ವಿಧವಾದ ಲೋಕ ವ್ಯಾಪಾರವೇ ಇಲ್ಲದಿದ್ದರೂ ದಿನೇ ದಿನೇ ಪರಿಪೂರ್ಣವಾದ ಸರ್ವಾವಯವವುಳ್ಳದ್ದಾಗಿ ಶೋಭಿಸುತ್ತಿತ್ತು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಭಕ್ತಿಸಾರವತಾರ ಕಥನವೆಂಬ ಎಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು.

## ೭೯

ಆ ಮಹೀಸಾರಕ್ಷೇತ್ರದಲ್ಲಿ ಪ್ರಾಜ್ಞನೆಂಬ ವೃದ್ಧಶೂದ್ರನೊಬ್ಬನಿದ್ದನು. ಆತನು ಈ ಶಿಶುವಿನ ಅದ್ಭುತ ಚರಿತವನ್ನು ಕೇಳಿ, ಹಾಲನ್ನು ಚೆನ್ನಾಗಿ ಕಾಯಿಸಿ ಅದರ ಬಳಿಗೆ ತೆಗೆದುಕೊಂಡು ಬಂದು ಭಕ್ತಿಯಿಂದ ಅದನ್ನು ಕುಡಿಯಬೇಕೆಂದು ಪ್ರಾರ್ಥಿಸಿದನು. ಭಕ್ತಿಗೆ ವಶನಾದ ಶಿಶುವು ಅದನ್ನು ಕುಡಿಯಲು ಆ ಮುದುಕನು ನಿತ್ಯವೂ ಹಾಗೆ ಮಾಡಲಾರಂಭಿಸಿದನು. ಮಗುವು ಆತನ ಅಭಿಪ್ರಾಯವನ್ನು ತಿಳಿದು -'ನಾನು ಕುಡಿದು ಮಿಕ್ಕ ಹಾಲನ್ನು ನೀವು ಕುಡಿಯಿರಿ; ನಿಮಗೆ ಮಕ್ಕಳಾಗುವುದು'- ಎಂದು ಆ ವೃದ್ಧದಂಪತಿಗಳಿಗೆ ಕೊಟ್ಟಿತು. ಅವರು ಅದನ್ನು ಕುಡಿಯಲು ನವಯೌವನ ಉಂಟಾಯಿತು. ಭಕ್ತಿಸಾರನ ಕಟಾಕ್ಷದಿಂದ

ಆ ದಂಪತಿಗಳಿಗೆ ಕೆಲವು ದಿನಗಳಲ್ಲಿಯೇ ವಿದುರನಂತೆ ಭಕ್ತಾಗ್ರೇಸರನಾದ ಮಗುವು ಹುಟ್ಟಿದನು. ಅವನಿಗೆ ಕಣಿಕೃಷ್ಣನೆಂದು ಹೆಸರಿಟ್ಟರು. ಕಾಲಕ್ರಮದಲ್ಲಿ ಅವನು ವಿದ್ಯಾಭ್ಯಾಸವನ್ನು ಮುಗಿಸಿ ಭಗವತ್ಕವಿಯಾದನು. ಮತ್ತು ಭಕ್ತಿಸಾರನ ಸೇವೆಯನ್ನು ಮಾಡಿ ಮುಕುಂದನ ಪಾದಪದ್ಮ ಪ್ರವಣನಾದನು.

ಭಕ್ತಿಸಾರನು ನಾಲ್ಕುವರ್ಷಗಳವರೆಗೆ ಭಗವತ್ಕಟಾಕ್ಷದಿಂದ ನಿರಾಹಾರನಾಗಿದ್ದನು. ಅದಾದ ಮೇಲೆ ಏಳುವರ್ಷ ವಯಸ್ಸಿನವರೆಗೂ ಮೊರ, ಮಂಕರಿಗಳನ್ನು ಮಾರುತ್ತಾ ಅನ್ನಪಾನಾದಿಗಳ ಆಸಕ್ತಿಯುಳ್ಳವನಾಗಿ ಅಲ್ಲಿಯೇ ಇರುತ್ತಿದ್ದನು. ಅನಂತರ ತೀರ್ಥಯಾತ್ರಾ ಪರನಾಗಿರಲು ಆತನ ಮನಸ್ಸು ಅಷ್ಟಾಂಗಯೋಗದ ಕಡೆಗೆ ತಿರುಗಿತು. ಜಗತ್ತಿಗೆ ಕಾರಣವಾದ ವಸ್ತುವು ಯಾವುದೆಂಬ ಚಿಂತೆಯು ಅನವರತವೂ ಬಾಧಿಸತೊಡಗಿತು. ಈ ವಸ್ತುವನ್ನು ತಿಳಿಯಲು ಇರುವ ಅನೇಕ ಮತಗಳನ್ನು ತಿಳಿಯುವ ಪ್ರಯತ್ನ ಮಾಡಿದನು. ಶಾಕ್ಯ, ಉಲೂಕ್ಯ, ಅಕ್ಷಪಾದ, ಕಪಿಲ, ಪತಂಜಲಿ,-ಇವರ ಮತಗಳೆಲ್ಲವೂ ಬಾಹ್ಯವಾದುವು. ಮಾಯಾವಾದ, ಶೈವ, ನ್ಯಾಯ, ವೈಶೇಷಿಕ, ಭಾಟ್ಟ, ಪ್ರಾಭಾಕರ,-ಈ ಮತಗಳೆಲ್ಲವೂ ಕುದೃಷ್ಟಿ ಸಿದ್ಧಾಂತಗಳು-ಎಂದು ಆತನು ಭಕ್ತಿಯಿಂದ ಎಲ್ಲ ಶಾಸ್ತ್ರಗಳನ್ನು ಕೂಲಂಕಷವಾಗಿ ನೋಡಿ ಸಿದ್ಧಾಂತವನ್ನು ತಿಳಿಯಲಾರದ ಭ್ರಾಂತನಾದನು. ಅನಂತರ ಭಕ್ತಿಸಾರನು ಶೈವಮತದಲ್ಲಿ ನಿರತನಾಗಿ 'ಶಿವವಾಕ್ಯ'ನೆಂಬ ಹೆಸರಿನಿಂದ, ದ್ರಾವಿಡಭಾಷೆಯಲ್ಲಿ ಶಿವಪರವಾದ ಅನೇಕ ಗ್ರಂಥಗಳನ್ನು ಬರೆದನು. ಶಿವನೇ ಪರತತ್ತ್ವವೆಂಬ ಭಾವನೆಯು ಮನಸ್ಸಿನಲ್ಲಿ ಸ್ಥಿರವಾಗಲು ಇತರ ಸಿದ್ಧಾಂತಗಳನ್ನು ತುಚ್ಛೀಕರಿಸಿ ಮೌನವ್ರತ ಪರನಾಗಿ ಶಿವಭಕ್ತನಾಗಿರುತ್ತಿದ್ದನು.

ಈ ವೇಳೆಗೆ ಮಹದಾಹ್ವಯ ಯೋಗಿಯು ಭಕ್ತಿಸಾರನ ವಿಚಾರವನ್ನು ಕೇಳಿ ಭಗವತ್ಪ್ರೇರಣೆಯಿಂದ ಅವನಿಗೆ ಉಪದೇಶ ಮಾಡಬೇಕೆಂದು ಅವನ ಬಳಿಗೆ ಬಂದನು. ವ್ರತನಿಷ್ಠನಾದರೂ ಭಕ್ತಿಸಾರನು ಮಹದಾಹ್ವಯನ ದಿವ್ಯತೇಜಸ್ಸನ್ನೂ ರೂಪವನ್ನೂ ನೋಡಿ ವಿವಶನಾದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕಣಿಕೃಷ್ಣಾವತಾರದಿ ಕಥನವೆಂಬ ಎಪ್ಪತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

## ೮೦

ಅನಂತರ ಮಹದಾಹ್ವಯನು ಶಿವವಾಕ್ಯನೊಡನೆ ಸಂಭಾಷಣೆ ನಡೆಸಲು ಒಂದು ಉಪಾಯವನ್ನು ಮಾಡಿದನು. ಶಿವವಾಕ್ಯನ ಉಪವನದ ಪಕ್ಕದಲ್ಲಿಯೇ ಮತ್ತೊಂದು ಉಪವನವನ್ನು ಮಾಡಿಕೊಂಡು ಗಿಡಗಳನ್ನು ತಲೆಕೆಳಗು ಮಾಡಿ ನೆಟ್ಟು, ಒಡಕು ಮಡಕೆಯಿಂದ ನೀರನ್ನು ತಂದು ಹಾಕುತ್ತಿದ್ದನು. ಇದನ್ನು ನೋಡಿದ ಶಿವವಾಕ್ಯ(ಭಕ್ತಿಸಾರ)ನಿಗೆ ಆಶ್ಚರ್ಯವಾಗಲು ಮುಂದೆ ಅವರಿಬ್ಬರಿಗೂ ಈ ರೀತಿ ಸಂಭಾಷಣೆ ನಡೆಯಿತು.

ಶಿವವಾಕ್ಯ:- ಇದೇನಯ್ಯಾ ವಿಷ್ಣುದಾಸ, ಈ ರೀತಿಯಾಗಿ ಭ್ರಾಂತನಾಗಿರುವೆ?
ಮಹದಾಹ್ವಯ:- ನಾನು ಭ್ರಾಂತನಲ್ಲ, ನೀನೇ ಭ್ರಾಂತನು. ಯೋಚಿಸಿ ನೋಡು.

ಶಿವವಾಕ್ಯ:- ಇದೇನಯ್ಯಾ ಪ್ರತ್ಯಕ್ಷಾಪಲಾಪ ಮಾಡುತ್ತಿರುವೆ. ನಿನ್ನನ್ನು ನೋಡಿದರೆ, ನಿನ್ನ ಕೆಲಸದಿಂದಲೇ ಭ್ರಾಂತನಾಗಿರುವುದು ಕಾಣುತ್ತದೆ. ಆದರೂ ನನ್ನನ್ನು ಭ್ರಾಂತನೆಂದು ಹೇಳುತ್ತಿರುವೆಯಲ್ಲಾ.

ಮಹದಾಹ್ವಯ:- ಎಲೈ ಶಿವವಾಕ್ಯ, ಜಗತ್ಕಾರಣವಾದ ವಸ್ತು ಯಾವುದೆಂಬುದು ನಿನಗೆ ತಿಳಿದಿಲ್ಲ,ಆದುದರಿಂದಲೇ ನೀನು ಭ್ರಾಂತನಾಗಿರುವೆ.

ಸಂಶಯವಿಲ್ಲ, ನನಗೆ ಆ ತತ್ವವು ತಿಳಿದಿದೆ. ನಾನು ಭ್ರಾಂತನಲ್ಲ, ಏಕಧರ್ಮನಿಷ್ಠನಾಗಿರುವೆನು. ನೀನೆ ಭ್ರಾಂತನು, ಚೆನ್ನಾಗಿ ವಿಚಾರ ಮಾಡಿ ನೋಡು.

ಶಿವವಾಕ್ಯ:- (ತತ್ವವಿಚಾರವನ್ನು ಕೇಳಿ, ಸಂತುಷ್ಟನಾಗಿ) ನಿನಗಿಂತಲೂ ನನಗೆ ತತ್ವಾರ್ಥವು ಚೆನ್ನಾಗಿ ತಿಳಿದಿದೆ. ಹೇಳುವೆನು ಕೇಳು.'ಈ ಜಗತ್ತಿಗೆ ಕಾರಣವಾಗಿಯೂ, ವೇದಾಂತ ಪ್ರತಿಪಾದಿತವಾಗಿಯೂ, ವ್ಯಾಸಾದಿ ಮುನಿಗಳಿಂದ ನಿರ್ಣೀತವಾಗಿಯೂ, ಹರಿಬ್ರಹ್ಮಾದಿಗಳಿಂದ ವಂದ್ಯನಾಗಿಯೂ ಇರುವ ಆ ವಸ್ತುವೇ ಪರಮಶಿವನು. 'ಶಿವಾತ್ಪರತರಂ ನಾಸ್ತಿ'-ಎಂಬುದೇ ತತ್ವವೆಂದು ತಿಳಿ.

ಮಹದಾಹ್ವಯ:- ಶಿವವಾಕ್ಯ, ನೀನು ಹೇಳುವುದು ಸಾಧುಸಮ್ಮತವೇ ಸರಿ; ಆದರೂ ಆಲೋಚಿಸಿ ನೋಡು. ಯಾವ ವಸ್ತುವು ಮತ್ತೊಂದರಿಂದ ಅರಕ್ಷ್ಯವೋ ಇತರ ವಸ್ತುಗಳಿಗೂ ರಕ್ಷಕವೋ, ಯಾವುದು ಉತ್ಪತ್ತಿರಹಿತವಾದುದೋ ಅದೇ ಜಗತ್ಕಾರಣವಾದುದು. ಆಶಿವನಿಗಾದರೋ ವೇದ, ವೇದಾಂತ, ಪುರಾಣ, ಭಾರತ, ಸ್ಮೃತಿಗಳಲ್ಲಿಯೂ ಉತ್ಪತ್ತಿಯುಂಟೆಂದೂ ಕಂಡು ಬರುತ್ತದೆ. ಮತ್ತು ಅನೇಕ ಸಾರಿ ಆತನು ವಿಷ್ಣುವಿನಿಂದ ಸಂರಕ್ಷಿತನಾದನಲ್ಲವೇ! ಎಲೈ ಶಿವವಾಕ್ಯನೆ, ನಿನಗೆ ಹಿತವನ್ನು ಹೇಳುವೆನು ಕೇಳು. ದೇವತೆಗಳಲ್ಲಿ

ಬ್ರಹ್ಮ ವಿಷ್ಣು ಶಿವನೆಂದು, ಮೂವರು ಪ್ರಸಿದ್ಧರಾದವರು. ಕ್ರಮವಾಗಿ, ರಜಸ್ಸು, ಸತ್ವ, ತಮೋಗುಣಗಳಿಗೆ ಆಶ್ರಯವಾದವರು. ವಿಷ್ಣುವು ಶುದ್ಧ ಸತ್ವಮಯನು. ತಮೋಗುಣಮಯನಾದವನು ರುದ್ರನು. ಇದೇ ಶಾಸ್ತ್ರಪದ್ಧತಿಯು.ಹೀಗಿರುವಲ್ಲಿ ಮೋಕ್ಷಪ್ರದನು ಯಾರೆಂದು ಯೋಚಿಸು. ಒಬ್ಬನು ತನ್ನ ಪಾದಕಮಲವನ್ನು ನೀಡಿದನು. ಮತ್ತೊಬ್ಬನು ಅದನ್ನು ತೊಳೆಯಲು ಆ ಪಾದ ತೀರ್ಥವನ್ನು ಮತ್ತೊಬ್ಬನು ಭಕ್ತಿಯಿಂದ ತಲೆಯಲ್ಲಿ ಧರಿಸಿದನು. ಈ ಮೂವರಲ್ಲಿ ದೊಡ್ಡವನು ಯಾರೆಂಬುದನ್ನು ಯೋಚಿಸು. ಮತ್ತು ಈ ಮೂವರ ರೂಪಗಳನ್ನು ಭೂಷಣಗಳನ್ನೂ ನೋಡು; ಅವುಗಳ ಸ್ವರೂಪವೇ ಪರತತ್ವವನ್ನು ಸೂಚಿಸುತ್ತವೆ. ಶಿವಾಕೃತಿಯು ಭಸ್ಮದಿಗ್ಧವಾದುದಾಗಿಯೂ, ಚರ್ಮಾಂಬರ ವೃತ್ತವಾಗಿಯೂ, ಇರುವುದು. ಬ್ರಹ್ಮಕಪಾಲಮಾಲೆ,

ಕೈಯಲ್ಲಿ ಅಕ್ಷಮಾಲೇ; ವಾಸವು ಸ್ಮಶಾನದಲ್ಲಿ; ತಲೆಯಲ್ಲಿ ಜಟೆ; ಸ್ವಯಂದಿಗಂಬರ; ಇಷ್ಟು ಶಿವಾಕೃತಿಯ ಸ್ವರೂಪವು.

ಬ್ರಹ್ಮನು ಸ್ರುಕ್ಕು, ಸ್ರುವ, ದರ್ಭೆಗಳನ್ನು ಕೈಯಲ್ಲಿ ಹಿಡಿದು, ವೇದವನ್ನು ಪಠಿಸುತ್ತಾ ಶ್ರೀರಂಗನಾಥನನ್ನು ಆರಾಧಿಸುತ್ತಿರುವನು. ಕೈಯಲ್ಲಿ ಅಕ್ಷಮಾಲೆಯನ್ನೂ, ಕಮಂಡಲುವನ್ನೂ ಹಿಡಿದು, ತನಗಿಂತಲೂ ಬೇರೆಯಾದ ಶ್ರೇಷ್ಠವಾದ ತತ್ವವನ್ನು ಚಿಂತಿಸುತ್ತಿರುವನು.

ವಿಷ್ಣುವಿನ ಆಕೃತಿಯನ್ನು ನೋಡು. ದಿವ್ಯಗಂಧಲಿಪ್ತವಾದ ಶರೀರ; ಎರಡು ಪಕ್ಕಗಳಲ್ಲಿಯೂ ಶೋಭಿಸುತ್ತಿರುವ ದಿವ್ಯನಾರಿಯರು; ಎದೆಯಲ್ಲಿ ಶ್ರೀಮಹಾಲಕ್ಷ್ಮಿ; ಕಿರೀಟಕುಂಡಲಾದಿ ಭೂಷಣಗಳು ಅವಯವಗಳಲ್ಲಿ; ಮಂದಾರಮಾಲೆಯಿಂದ ರಮ್ಯವಾದ ಕಂಠ; ಪೀತಾಂಬರದಿಂದ ಶೋಭಿಸುತ್ತಿರುವ ನೀಲವಾದ ಶರೀರ; ನೋಡಿದಕೂಡಲೇ ಅವಾಪ್ತಸಮಸ್ತಕಾಮನೆಂದು ತೋರುವ ರೂಪ-ಇದು ಮತ್ತಾರಿಗುಂಟು? ಆದುದರಿಂದ ವಿರಿಂಚಿ ರುದ್ರರಿಬ್ಬರಿಗೂ ವಿಷ್ಣುವೇ ಪ್ರಭುವು. ಅವರಿಬ್ಬರಿಗೂ ಅಸುರರಿಂದ ತೊಂದರೆ ಬಂದಾಗಲೆಲ್ಲಾ, ಅದನ್ನು ಪರಿಹರಿಸಿ ಅವರ ಇಷ್ಟಾರ್ಥವನ್ನು ಒದಗಿಸಿದನಲ್ಲವೆ? ಆದ್ದರಿಂದಲೇ -'ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯಚ ಪುನಃ ಪುನಃ। ಇದಮೇಕಂಸುನಿಷ್ಪನ್ನಂಧ್ಯೇಯೋ ನಾರಾಯಣಸ್ಸದಾ॥'-ಎಂಬ ತತ್ವವು ಪ್ರಸಿದ್ಧವಾಗಿಯೂ ಶಾಸ್ತ್ರಸಮ್ಮತವಾಗಿಯೂ ಇರುವುದು. ಇವೇ ಮೊದಲಾದ ಸತ್ಪ್ರಮಾಣಗಳಿಂದ ತತ್ವನಿರ್ಣಯವನ್ನು ಮಾಡಿದನು.

ಆಗ ಸಂತುಷ್ಟನಾದ ಭಕ್ತಿಸಾರನು ಮಹದಾಹ್ವಯನ ಶಿಷ್ಯನಾದನು. ಮಹದಾಹ್ವಯ ಯೋಗಿಯೂ ಸಹ ವಿಶ್ವಕ್ಸೇನನ ಕೃಪೆಯಿಂದ ಭಕ್ತಿಸಾರನಿಗೆ ಪಂಚಸಂಸ್ಕಾರಗಳನ್ನು ಮಾಡಿ, ತತ್ವೋಪದೇಶ ಮಾಡಿದನು.

ಅನಂತರ ಭಕ್ತಿಸಾರನು ಶ್ರೀಮನ್ನಾರಾಯಣನ ವಿಭೂತಿದ್ವಯಗಳ ಆದಿಪತ್ಯವನ್ನೂ, ಜಗತ್ಸೃಷ್ಟಿಕರ್ತನಾದ ಬ್ರಹ್ಮನು ಶ್ರೀಮನ್ನಾರಾಯಣನ ನಾಭಿಕಮಲದಲ್ಲಿ ಹುಟ್ಟಿದುದನ್ನೂ, ಅವನಿಗೆ ಶಂಕರನು ಹಿರಿಯ ಮಗನಾಗಿ ಹುಟ್ಟಿದುದನ್ನೂ ಇವೇ ಮೊದಲಾದ ನಾರಾಯಣಪರತತ್ವದ ಪ್ರತಿಪಾದಕವಾದ ಗ್ರಂಥಗಳನ್ನು ದ್ರಾವಿಡಭಾಷೆಯಲ್ಲಿ ರಚಿಸಿದನು. ಭಕ್ತಿಸಾರನಿಂದ ಸತ್ಕರಿಸಲ್ಪಟ್ಟ ಮಹದಾಹ್ವಯ ಯೋಗಿಯು ತೀರ್ಥಯಾತ್ರೆಯ ನೆಪದಿಂದ ಉತ್ತರ ದಿಕ್ಕಿಗೆ ಹೊರಟನು.

ಭಕ್ತಿಸಾರನು ಸಹ ಶ್ರೀಮನ್ನಾರಾಯಣನನ್ನೇ ಪರತತ್ವವನ್ನಾಗಿ ನಿಶ್ಚಯಿಸಿ ಅಷ್ಟಾಂಗಯೋಗದಿಂದ ಸರ್ವದಾ ಆ ಪರಮಾತ್ಮನನ್ನೇ ಧ್ಯಾನಿಸುತ್ತಲೂ ತನ್ನ ಆಚಾರ್ಯರಾದ ಮಹಾಯೋಗಿಯ ಚರಣಾರವಿಂದಗಳನ್ನು ನೆನೆಯುತ್ತಲೂ ಕೈರವಿಣೀ ನದಿಯ ತೀರದಲ್ಲಿ ವಾಸಿಸುತ್ತಿದ್ದನು. ಅಲ್ಲಿಯೇ ಆತನಿಗೆ ಏಳುನೂರು ವರ್ಷಗಳು ಕಳೆದವು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಮಹದಾಹ್ವಯ ತತ್ತ್ವೋಪದೇಶ ಕಥನವೆಂಬ ಎಂಬತ್ತನೆಯ ಅಧ್ಯಾಯವು ಮುಗಿದುದು.

೮೧

ಮತ್ತೆ ವೇದಾಂತಿಯು ಭಕ್ತಿಸಾರನ ವೈಭವವನ್ನು ವಿಸ್ತಾರವಾಗಿ ಹೇಳಬೇಕೆಂದು ಪ್ರಾರ್ಥಿಸಲು ಪರಾಶರಭಟ್ಟನು ಹೇಳಲು ಉಪಕ್ರಮಿಸಿದನು-

ಹೀಗೆ ಭಕ್ತಿಸಾರನು ಕೈರವಿಣೀ ತೀರದಲ್ಲಿ ವಾಸಿಸುತ್ತಿರಲು ಆಕಸ್ಮಿಕವಾಗಿ ಆಕಾಶದಲ್ಲಿ ಪಾರ್ವತಿಸಹಿತನಾದ ಶೂಲಪಾಣಿಯು ಕಾಣಿಸಿಕೊಂಡನು. ಅದನ್ನು ಕಂಡು ಪರಮ ವೈಧಿಕನಾದ ಭಕ್ತಿಸಾರನು ಆ ಛಾಯೆಯು ಅಸ್ಪೃಶ್ಯವಾದುದೆಂದೇ ಭಾವಿಸಿ ಮರೆಯಾಗಿ ಕುಳಿತನು. ಈ ವಿಚಿತ್ರವಾದ ರೀತಿಯನ್ನು ಗಮನಿಸಿದ ಪಾರ್ವತಿಯು 'ಈ ಚಿಂದೀಬಟ್ಟೆಯನ್ನು ಉಟ್ಟಿರುವವನು ಯಾರು? ಇವನ ಮಹಿಮೆಯು ಎಂತಹುದು? ಹೋಗಿ ನೋಡೋಣವೇ? ಎಂದು ಪತಿಯೊಡನೆ ಸಮೀಪಕ್ಕೆ ಬಂದಳು. ಆಗ ರುದ್ರನು 'ಈತನೊಬ್ಬ ಭಗವದ್ಭಕ್ತನು; ಇವನು ನನ್ನನ್ನು ಲಕ್ಷಿಸುವುದಿಲ್ಲ, ನನ್ನಿಂದ ಇವನಿಗೆ ಆಗಬೇಕಾದುದೇನೂ ಇಲ್ಲ'ವೆಂದನು. ಆದರೂ ಅಂತಹ ಹರಿಭಕ್ತನನ್ನು ನೋಡಬೇಕೆಂದು ಪಾರ್ವತಿಯು ನಿಬಂಧರ್ಪಡಿಸಿದಾಗ ಸೂರ್ಯಸಮಾನವಾದ ಕಾಂತಿಯನ್ನುಳ್ಳ ಶಂಕರನು ಭಕ್ತಿಸಾರನ ಬಳಿಯಲ್ಲಿ ಬಂದು ನಿಂತನು. ಆದರೂ ಭಕ್ತಿಸಾರನು ಶಂಕರನನ್ನು ಗಮನಿಸದೇ ತನ್ನ ಚಿಂದಿಯನ್ನು ಹೊಲಿಯುತ್ತ ಸುಮ್ಮನಿರಲು-

ಶಂಕರ :--ಎಲೈ ಯೋಗಿಯೆ ಇದು ನ್ಯಾಯವೆ? ಎದುರಿಗೆ ಬಂದು ನಿಂತವರನ್ನು ಮಾತನಾಡಿಸದೆ ಆ ಮೂರು ದೇವತೆಗಳಲ್ಲಿ ಶ್ರೇಷ್ಠನೂ ಪೂಜಾ ರ್ಹನೂ ಆದ ಶಿವನನ್ನು ಗೌರವಿಸದೆ ಇರುವುದು ನ್ಯಾಯವೆ?

ಭಕ್ತಿಸಾರ:--ಎಲೈ ಗಿರಿಸುತಾಕಾಂತಾ, ನಿನ್ನಿಂದ ನನಗೆ ಸ್ವಲ್ಪವೂ ಪ್ರಯೋಜನವಿಲ್ಲ, ಏತಕ್ಕಾಗಿ ಗೌರವಿಸಬೇಕು?

ಶಂಕರ :--ನಾನು ನಿನಗೆ ವರವನ್ನು ಕೊಡಬೇಕೆಂದು ಬಂದಿರುವೆನು. ಎಂತಹ ದುರ್ಲಭವಾದ ವರವನ್ನು ಬೇಕಾದರೂ ಕೊಡುವೆನು ಕೇಳು.

ಭಕ್ತಿಸಾರ:--(ಹಾಸ್ಯದಿಂದ) ಹಾಗಾದರೆ-ಎಲೈ ಭಕ್ತಾಭೀಷ್ಟಪ್ರದಾಯಕನೇ, ನಾನು ಹೊಲೆಯುತ್ತಿರುವ ಈ ಚಿಂದಿಯಲ್ಲಿ ಸೂಜಿಯು ಹೋಗುತ್ತಿರುವಂತೆ ಅದರ ಹಿಂದೆಯೇ ದಾರವೂ ಹೋಗುವಂತೆ ವರವನ್ನು ಕೊಡು.

ಇಂತಹ ಹಾಸ್ಯದಿಂದ ಕ್ರುದ್ಧನಾದ ರುದ್ರನು, ಹಿಂದೆ ತಾನು ಮನ್ಮಥನನ್ನು ಸುಟ್ಟಂತೆ ಸುಡುವೆನೆಂದು ಪ್ರಯತ್ನಿಸಲು, ಅವನ ಫಾಲನೇತ್ರದಿಂದ ಹೊರಟ ಪ್ರಳಯಕಾರಕವಾದ ಅಗ್ನಿಯು ಭುವನವನ್ನೆಲ್ಲಾ ಧಗಧಗನೆ ದಹಿಸತೊಡಗಿತು. ಭಕ್ತಿಸಾರನು ಇದನ್ನು ಕಂಡು ತನ್ನ ಪಾದಾಂಗುಷ್ಠದ ನೇತ್ರವನ್ನು ತೆರೆಯಲು, ಅದರಿಂದ ಹೊರಚಿಮ್ಮಿದ್ದ ಜ್ವಾಲೆಯಿಂದ ಶಂಭುವಿನ ತೇಜಸ್ಸು ಸೂರ್ಯನ ಮುಂದೆ ಪತಂಗದಂತಾಯಿತು. ಪ್ರಪಂಚವೇ ತಲ್ಲಣಿಸಿತು.

ಆಗ ಶಂಕರನು ಪುಷ್ಕಲಾವರ್ತಕಾದಿ ಮೇಘಗಳನ್ನುಂಟು ಮಾಡಿ ಧಾರಾಕಾರವಾದ ಮಳೆಯನ್ನು ಸುರಿಸಿದನು. ಅಗ್ನಿಯು ಶಾಂತವಾಯಿತು. ಆದರೆ ಅಂತಹ ಮಳೆಯಲ್ಲಿಯೂ ಭಕ್ತಿಸಾರನು ಅಚಲನಾಗಿ ಕುಳಿತಿದ್ದುದನ್ನು ನೋಡಿ, ಶಂಕರನು ಪಾರ್ವತಿಯನ್ನು ಕುರಿತು-'ನೋಡು ಹಿಂದೆ ಅಂಬರೀಷನಿಂದ ದುರ್ವಾಸ ಮಹರ್ಷಿಯು ಅವಮಾನಿತನಿಂದಂತೆ ನಾವೂ ಈತನಿಂದ ತಿರಸ್ಕೃತರಾದೆವು?'-ಎಂದುಕೊಳ್ಳುತ್ತ ಭಕ್ತಿಸಾರನನ್ನೂ, ಭಗವದ್ಭಕ್ತನ ಮಹಿಮೆಯನ್ನೂ ಹೊಗಳುತ್ತ ಕೈಲಾಸಕ್ಕೆ ಹೊರಟು ಹೋದನು. ಭಕ್ತಿಸಾರನಾದರೋ ಎಂದಿನಂತೆ ಅಲ್ಲಿಯೇ ವಾಸಿಸುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರುದ್ರಪರಾಜಯವೆಂಬ ಎಂಬತ್ತೊಂದನೆಯ ಅಧ್ಯಾಯವು ಮುಗಿದುದು.

## ೮೨

ಒಂದು ದಿನ ಭಕ್ತಿಸಾರನು ಕುಳಿತಿರಲು, ಆಕಾಶದಲ್ಲಿ ಸಿದ್ಧಪುರುಷನಾದ ಶುಕ್ತಿಹಾರನು ಹುಲಿಯಮೇಲೆ ಕುಳಿತು ಹೋಗುತ್ತಿರಲು, ಹುಲಿಯ ಗಮನವು ನಿಂತು ಹೋಯಿತು. ದಿಗ್ಭ್ರಮೆಯಿಂದ ಸಿದ್ಧನು ಎಲ್ಲ ಕಡೆಯೂ ನೋಡಿ ಯಾವುದೂ ತಿಳಿಯದೆ ಕೆಳಗಿಳಿದು ಬಂದು ಕೊನೆಗೆ ನೆಲದ ಮೇಲೆ ಕುಳಿತಿರುವ ಭಕ್ತಿಸಾರಯೋಗಿಯನ್ನು ಕಂಡು-'ಎಲೈ ಪುರುಷನೇ, ನೀನು ಯಾರು? ಇದೇಕೆ ಚಿಂದಿಬಟ್ಟೆಯನ್ನುಟ್ಟುಕೊಂಡಿರುವೆ? ಇದೋ ಈ ದಿವ್ಯವಾದ ಕವಚವನ್ನು ತೆಗೆದುಕೋ'-ಎಂದನು. ಆಗ ಭಕ್ತಿಸಾರನು, ತನ್ನ ಯೋಗಶಕ್ತಿಯಿಂದ ದಿವ್ಯವಾಗಿಯೂ, ರತ್ನಖಚಿತವಾಗಿಯೂ ಇರುವ ಒಂದು ಕವಚವನ್ನು ಮಾಡಿ, ಅವನಿಗೆ ಕೊಟ್ಟನು. ಶುಕ್ತಿಹಾರನು ಆಗ ತನ್ನ ಕೊರಳಲ್ಲಿ ಇದ್ದ ಉತ್ತಮವಾದ ಮಣಿಮಾಲೆಯನ್ನು ತೆಗೆದುಕೊಂಡು-'ಎಲೈ ಮಹಾಮಹಿಮನೆ, ಇದೋ ಇದನ್ನು ತೆಗೆದುಕೊಂಡು ಅಕ್ಷಮಾಲೆ ಯನ್ನಾಗಿ ಉಪಯೋಗಿಸಿಕೋ'-ಎನ್ನಲು, ಭಕ್ತಿಸಾರನು ತನ್ನ ತುಲಸೀಮಾಲೆಯನ್ನು ಕೈಯಲ್ಲಿ ಹಿಡಿದು-'ಎಲೈ ಸಿದ್ಧನೇ, ಇದನ್ನು ನೋಡು ಎನ್ನಲು ಅದು ಅನರ್ಘ್ಯವಾದ ರತ್ನಹಾರವಾಗಿದ್ದುದನ್ನು ಕಂಡು ಶುಕ್ತಿಹಾರನು ಬೆರಗಾಗಿ ಇವನನ್ನು ಜಯಿಸಲಾಗುವುದಿಲ್ಲ ವೆಂದು ತಿಳಿದು ಹೊರಟುಹೋದನು.

ಅನಂತರ ಕೊಂಕಣಸಿದ್ಧನೆಂಬ ಒಬ್ಬ ಸಿದ್ಧಪುರುಷನು ಭಕ್ತಿಸಾರನ ಮಹಿಮೆಯನ್ನು ಕೇಳಿ ಅವನ ಬಳಿಗೆ ಬಂದನು. ಬಂದು, ತಾನೊಬ್ಬ ರಸವಾದಿಯೆಂದೂ ತಮ್ಮ ಮಹಿಮೆಯನ್ನು ಕೇಳಿ ನೋಡಬೇಕೆಂದೂ ಹೇಳಿ ಒಂದು ಗುಳಿಗೆಯನ್ನು ಭಕ್ತಿಸಾರನಿಗೆ ಕೊಟ್ಟನು. ಅದರಿಂದ ಪ್ರಯೋಜನವೇನೆಂದು ಕೇಳಲು ಸಿದ್ಧನು -'ಇದರ ಸ್ಪರ್ಶದಿಂದಲೇ ಕಬ್ಬಿಣವು ಬಂಗಾರ ವಾಗುವುದು. ನಾನು ಇದನ್ನು ಪ್ರಾಣದಂತೆ ರಕ್ಷಿಸುತ್ತಿರುವೆನು. ಇದನ್ನು ಯಾರಿಗೂ ಕೊಡಬಾರದು'-ಎಂದು ಉತ್ತರವಿತ್ತನು. ಭಕ್ತಿಸಾರನು ಅದನ್ನು ತಿರಸ್ಕರಿಸಿ, ತನ್ನ ಮೈಯನ್ನು ತೀಡಿ ಅದರಿಂದ ಒಂದು ಗುಳಿಗೆಯನ್ನು ಮಾಡಿ-'ಇದನ್ನು ಸೋಕಿಸುವುದರಿಂದ ಕಲ್ಲೂ ಸುವರ್ಣವಾಗುವುದು'-ಎಂದನು. ಸಿದ್ಧನು ಇದನ್ನು ಪರೀಕ್ಷಿಸಲು ಒಂದು ಬೆಟ್ಟದ ಕಡೆಗೆ

ಎಸೆದಾಗ ಅದು ಸುವರ್ಣಮಯವಾಗಿ ರಂಜಿಸಿತು. ಆಗ ಸಿದ್ಧನು ಆಶ್ಚರ್ಯಚಕಿತನಾಗಿ ಹಿಂತಿರುಗಿದನು.

ಇದಾದ ಕೆಲವು ದಿನಗಳ ಮೇಲೆ ಯಾತ್ರಿಕರಾದ ಸರೋಯೋಗಿ, ಭೂತಯೋಗಿ, ಮಹದಾಹ್ವಯರು ಇಲ್ಲಿಗೆ ಬರಲು, ನಾಲ್ವರು ಭಗವದ್ಧ್ಯಾನು ಭವದಲ್ಲಿ ಕೆಲವು ದಿನ ಇಲ್ಲಿಯೇ ಇದ್ದರು. ಕಾಲಕ್ರಮದಲ್ಲಿ ಆ ಮೂವರು ಯೋಗಿಗಳೂ ಮುಂದೆ ಹೊರಟು ಯಾತ್ರೆಯನ್ನು ಮಾಡುತ್ತಲೇ ಸಾವಿರಾರು ವರುಷಗಳನ್ನು ಕಳೆದರು ಮತ್ತು ವಿಷ್ಣುಸಾಲೋಕ್ಯವನ್ನು ಹೊಂದಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಸರೋಯೋಗಾದಿಗಳ ವೈಕುಂಠಪ್ರಾಪ್ತಿಯೆಂಬ ಎಂಬತ್ತೆರಡನೆಯ ಅಧ್ಯಾಯವು ಮುಗಿದುದು.

೮೩

ಬಳಿಕ ಭಕ್ತಿಸಾರನು ತನ್ನ ಜನ್ಮಭೂಮಿಯಾದ ಮಹೀಸಾರಕ್ಷೇತ್ರಕ್ಕೆ ಹೋದನು. ಅಲ್ಲಿ ಶ್ವೇತಮೃತ್ತಿಕೆಯ ಅಭಾವದಿಂದ ಚಿಂತಿಸುತ್ತಿರಲು ಶ್ರೀವೇಂಕಟೇಶ್ವರನು ಸ್ವಪ್ನದಲ್ಲಿ ಕಾಣಿಸಿಕೊಂಡು ಸತ್ಯವ್ರತ ಕ್ಷೇತ್ರ (ಕಾಂಚಿ)ದಲ್ಲಿ ಮೃತ್ತಿಕೆಯು ದೊರಕುವುದೆಂದೂ, ಆದರಿಂದ ಊರ್ಧ್ವಪುಂಡ್ರವನ್ನು ಧರಿಸಬಹುದೆಂದೂ ಸೂಚಿಸಿದ ಮೇಲೆ ಅಲ್ಲಿಗೆ ಹೋಗಿ ಅದನ್ನು ತಂದು, ಮಹೀಸಾರಪುರಿಯಲ್ಲಿಯೇ ಕೆಲವು ದಿನಗಳಿದ್ದನು. ಸತ್ಯವ್ರತಕ್ಷೇತ್ರದಲ್ಲಿಯೇ ನಿತ್ಯವಾಸಮಾಡಬೇಕೆಂದೆನ್ನಿಸಲು ಅಲ್ಲಿಗೇ ಹೋಗಿ ವಾಸಮಾಡುತ್ತಿದ್ದನು.

ಅಲ್ಲಿ ಆತನು ಅಷ್ಟಾಂಗ ಯೋಗದಿಂದಿರುತ್ತಿರಲು ಕಣಿಕೃಷ್ಣನು ಆತನ ಅತ್ಯಂತ ಭಕ್ತನಾದನು. ಮತ್ತೊಬ್ಬ ಮುದುಕಿಯು ಆತನ ಯೋಗ ಸ್ಥಾನವನ್ನು ಶುಚಿಯಾಗಿಡುವುದೇ ಮೊದಲಾಗಿ ಸೇವೆ ಮಾಡತೊಡಗಿದಳು. ಆಕೆಯ ಸೇವೆಯಿಂದ ಸಂತುಷ್ಟನಾದ ಯೋಗಿಯು ಆಕೆಯ ಬೇಡಿಕೆಯಂತೆ ದಿವ್ಯವೂ ನಿತ್ಯವೂ ಆದ ತಾರುಣ್ಯವನ್ನು ಅನುಗ್ರಹಿಸಿದನು.

ಕಾಂಚಿದೊರೆಯು (ಪಲ್ಲವ) ಆ ಸುಂದರಿಯನ್ನು ನೋಡಿ ಮೋಹಗೊಂಡು, ತನ್ನ ಪಟ್ಟಮಹಿಷಿಯಾಗಬೇಕೆಂದು ಆಕೆಯನ್ನು ಅನೇಕ ವಿಧವಾಗಿ ಪ್ರಾರ್ಥಿಸಿಕೊಳ್ಳಲು ಆಕೆಯೂ ಒಪ್ಪಿದಳು. ಇಬ್ಬರಿಗೂ ವಿವಾಹವಾಗಿ ಅನೇಕ ವರ್ಷಗಳು ಸುಖವಾಗಿರಲು ರಾಜನಿಗೆ ದಿನದಿನಕ್ಕೂ ಮುಪ್ಪು ಹೆಚ್ಚುತ್ತಲೂ, ಆಕೆಯ ತಾರುಣ್ಯವು ನಿತ್ಯವೂ ಉಜ್ವಲವಾಗಿಯೇ ಇತ್ತು. ಇದನ್ನು ಕಂಡ ರಾಜನು ತಾನೂ ಅವಳಂತೆ ಆಗಬೇಕೆಂದು ಅದಕ್ಕೆ ಉಪಾಯವೇನೆಂದು ಕೇಳಲು ಅವಳು ಹೀಗೆಂದಳು -'ಈ ಊರಿನಲ್ಲಿಯೇ ಭಗವತ್ಸಾನಿಧ್ಯದಲ್ಲಿ ಭಕ್ತಿಸಾರನೆಂಬ ಯೋಗಿಶ್ರೇಷ್ಠನಿರುವನು. ನಾನು ಆತನನ್ನು ಭಕ್ತಿಯಿಂದ ಸೇವಿಸಲು ನನಗೆ ಇಂತಹ ಭಾಗ್ಯವು ದೊರಕಿತು. ನೀವೂ ಆ ರೀತಿಸೇವೆ ಮಾಡಿದರೆ ದೊರಕಬಹುದು. ಆದರೆ ರಾಜರಾದವರು ಆ ರೀತಿಸೇವೆ ಮಾಡುವುದು ಸಾಧ್ಯವಲ್ಲ. ಆದುದರಿಂದ ಆತನ ಅಂತರಂಗಭಕ್ತನಾದ ಕಣಿಕೃಷ್ಣನ ಮೂಲಕ ಆತನನ್ನು ಕಂಡರೆ ಕೆಲಸವಾಗ ಬಹುದು'.

ಈ ಮಾತನ್ನು ಕೇಳಿದ ರಾಜನು ಕಣಿಕೃಷ್ಣನನ್ನು ಕರೆಸಿ ಭಕ್ತಿಸಾರನನ್ನು ಕರೆದುಕೊಂಡು

ಬರುವಂತೆ ಹೇಳಿದನು. ಅದಕ್ಕೆ ಕಣಿಕೃಷ್ಣನು 'ಅವರು ಎಲ್ಲಿಗೂ ಬರತಕ್ಕವರಲ್ಲ; ಯಾವುದನ್ನೂ ಲಕ್ಷಿಸತಕ್ಕವರಲ್ಲ, ನಿನ್ನಂತಹವರಿಂದ ಯಾವ ಪ್ರಯೋಜನವೂ ಇಲ್ಲ, ಆದುದರಿಂದ ನಿನ್ನ ಈ ಪ್ರಯತ್ನವು ವ್ಯರ್ಥವಾದುದು' ಎಂದು ಹೇಳಿ ಹೊರಟನು. ದೊರೆಯ ಸಮೀಪದಲ್ಲಿರುವ ಕೆಲವರು ದೊರೆಯನ್ನು ಕುರಿತು 'ಭಕ್ತಿಸಾರನು ಬಾರದಿದ್ದರೆ ಚಿಂತೆಯಿಲ್ಲ. ಕಣಿಕೃಷ್ಣನು ಮಹಾಕವಿ; ಆತನು ವರ್ಣಿಸಿದನೆಂದರೆ ಒರಡುಮರವೂ ಚಿಗುರಿ ಕಂಗೊಳಿಸುವುದು. ಅಂತಹ ಕಣಿಕೃಷ್ಣನು ನಿನ್ನನ್ನು ಹೊಗಳಿದರೆ ನಿನಗೆ ನಿತ್ಯ ಯೌವನ ಬರುವುದರಲ್ಲಿ ಸಂಶಯವೇ ಇಲ್ಲ' ಎಂದರು. ಆಗ ದೊರೆಯು ಕಣಿಕೃಷ್ಣನನ್ನು ಕರೆಸಿ ತನ್ನನ್ನು ಹೊಗಳಬೇಕೆಂದು ಹೇಳಲು, "ಎಲೈ ರಾಜನೇ, ಪರಮಾತ್ಮನನ್ನು ಸ್ತುತಿಸಬೇಕು; ಅಥವಾ ಅವನ ಭಕ್ತನನ್ನಾದರೂ ಸ್ತುತಿಸಬೇಕೆಂಬುದು ಶಾಸ್ತ್ರಸಿದ್ಧವಾದ ವಿಷಯ. ಹೀಗಿರುವಲ್ಲಿ ನಾನು ನರಸ್ತುತಿಯನ್ನು ಮಾಡುವುದಿಲ್ಲ"- ಎಂದು ಉತ್ತರವಿತ್ತನು. ಈ ಮಾತನ್ನು ಕೇಳಿ ಸಿಟ್ಟುಗೊಂಡ ರಾಜನು 'ನೀನು ನನ್ನ ದೇಶದಲ್ಲಿರಕೂಡದು' ಎಂದನು. ಕಣಿಕೃಷ್ಣನು ಅದನ್ನು ಒಪ್ಪಿಕೊಂಡು ಭಕ್ತಿಸಾರನಿಗೆ ನಡೆದುದೆಲ್ಲವನ್ನೂ ತಿಳಿಸಿದನು. ಮತ್ತು ತಾನು ಆ ದೇಶವನ್ನು ಬಿಟ್ಟು ಹೊರಡಲನುವಾದನು. ಭಕ್ತಿಸಾರನೂ ಸಹ-'ಸ್ವಲ್ಪಇರು. ಪರಮಾತ್ಮನಲ್ಲಿ ತಿಳಿಸಿ ನೀನು ಹೋಗುವುದೆಲ್ಲಿಗೆ ನಾನೂ ಬರುವೆನು' ಎಂದು ಹೇಳಿ ನಡೆದುದೆಲ್ಲವನ್ನೂ ಶೇಷಶಾಯಿಯಾದ ಪರಮಾತ್ಮನಲ್ಲಿ ವಿಜ್ಞಾಪಿಸಲು-'ನೀನೇ ಇಲ್ಲದಿದ್ದರೆ ನನಗೆ ಇಲ್ಲೇನು ಕೆಲಸ? ನಾನೂ ನಿನ್ನ ಹಿಂದೆಯೇ ಹೊರಡುವೆನು'-ಎಂದು ಹರಿಯು ನುಡಿದನು. ಕೂಡಲೇ ಭಕ್ತಿಸಾರನು 'ಹಾಗಾದರೆ ಏಳು, ನಿನ್ನ ಶೇಷಶಯನವನ್ನು ಕಟ್ಟಿಕೊಂಡು ಹೊರಡು'- ಎಂದು ನಿರ್ದಾಕ್ಷಿಣ್ಯವಾಗಿ ಹೇಳಿದನು. ಭಕ್ತಪರಾಧೀನನಾದ ಶೇಷಶಯನನು ಭಕ್ತನ ಇಂತಹ ಒರಟು ಮಾತನ್ನು ಕೇಳಿ ಮರುಮಾತಾಡದೆ ಅವನು ಹೇಳಿದಂತೆಯೇ ಹಿಂದೆಯೇ ಹೊರಟನು. ಈ ಆಶ್ಚರ್ಯವನ್ನು ಕಂಡು, ಅಲ್ಲಿರುವ ವರದರಾಜನೇ ಮೊದಲಾದ ಅರ್ಚಾರೂಪಿಗಳಾದ ವಿಷ್ಣುಗಳೂ, ಏಕಾಮ್ರೇಶ್ವರನೂ, ಇತರ ಪೌರರೂ ಎಲ್ಲರೂ ಆ ದೇಶವನ್ನು ಬಿಟ್ಟು ಹೊರಟರು. ರಾಮನು ಅಯೋಧ್ಯೆಯನ್ನು ಬಿಟ್ಟಾಗ ಶೂನ್ಯವಾಗಿದ್ದಂತೆ ಕಾಂಚೀನಗರವೇ ಶೂನ್ಯವಾಯಿತು. ಎಲ್ಲರೂ ಸ್ವಲ್ಪದೂರ ಹೋಗಿ ಒಂದು ದಿವಸ ಇರುತ್ತಿರಲು, ದೊರೆಯು ಹೋಗಿ ಊರಿಗೆ ಬರಬೇಕೆಂದು ವರದರಾಜನನ್ನು ಪ್ರಾರ್ಥಿಸಿದನು. ವರದರಾಜನು 'ಶೇಷಶಾಯಿಯನ್ನು ಕೇಳು' ಎಂದೂ, ಶೇಷಶಯನನು ಭಕ್ತಿಸಾರನನ್ನು ಪ್ರಾರ್ಥಿಸು ಎಂದೂ, ಭಕ್ತಿಸಾರನು ಕಣಿಕೃಷ್ಣನನ್ನು ಬೇಡಿಕೋ'- ಎಂದೂ ಹೇಳಲು, ಕಣಿಕೃಷ್ಣನನ್ನು ವಂದಿಸಿ ಕ್ಷಮಿಸಬೇಕೆಂದು ಕೇಳಿಕೊಂಡನು. ಕೂಡಲೆ ಕಣಿಕೃಷ್ಣನು ಸಂತೋಷವನ್ನು ಹೊಂದಲು ಎಲ್ಲರೂ ಮೊದಲಿನಂತೆ ಕಾಂಚಿನಗರಿಗೆ ಬಂದು ಸುಖದಿಂದಿರುತ್ತಿದ್ದರು. ಭಕ್ತಿಸಾರನೂ ಯೋಗಾಸಕ್ತನಾಗಿ ಇನ್ನೂ ಕೆಲವು ಕಾಲ ಅಲ್ಲಿಯೇ ಇರುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಭಕ್ತಿಸಾರ ವೈಭವವೆಂಬ ಎಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

೮೪

ಕುಂಭಕೋಣವು ಪವಿತ್ರವಾದ ತೀರ್ಥಕ್ಷೇತ್ರ. ಅಲ್ಲಿ ಅರ್ಧಘಳಿಗೆಯಿದ್ದರೂ ಕೈವಲ್ಯವು ಸಿದ್ಧ. ಈ ವಿಚಾರವನ್ನು ತಿಳಿದು ಭಕ್ತಿಸಾರನು ಅಲ್ಲಿಗೆ ಹೋಗಿ ಶಾರ್ಙಪಾಣಿಯ ಸೇವೆಯಲ್ಲಿದ್ದು ಅಲ್ಲಿಯೇ ನಿತ್ಯವಾಸವನ್ನು ಮಾಡಬೇಕೆಂದು ಇಚ್ಛಿಸಿದನು. ಅದರಂತೆ ಪ್ರಯಾಣ ಹೊರಟು ಮಧ್ಯ "ಮಹಾವ್ಯಾಘ್ರಪುರ"ವೆಂಬ ಊರನ್ನು ತಲುಪಿ ಅಲ್ಲೊಂದು ಮನೆಯ ಹತ್ತಿರ ನಿಂತನು. ಆ ಮನೆಯ ಜಗುಲಿಯ ಮೇಲೆ ಕೆಲವು ಜನ ಬ್ರಾಹ್ಮಣರು ವೇದವನ್ನು ಪಠಿಸುತ್ತಿದ್ದರು. ಭಕ್ತಿಸಾರನನ್ನು ಕಂಡಕೂಡಲೇ ಯಾವನೋ ಎಂದು ವೇದಪಠನವನ್ನು ನಿಲ್ಲಿಸಿದರು. ಇಂಗಿತಜ್ಞನಾದ ಭಕ್ತಿಸಾರನು ಸ್ವಲ್ಪದೂರಕ್ಕೆ ಹೋಗಿ ಕುಳಿತುಕೊಳ್ಳಲು, ಬ್ರಾಹ್ಮಣರು ಮತ್ತೆ ವೇದವನ್ನು ಪಠಿಸಲು ಯತ್ನಿಸಿದರು. ಆದರೆ ಯಾರಿಗೂ ನೆನೆಪಿಗೆ ಬರಲಿಲ್ಲ. ಇದೇನಾಶ್ಚರ್ಯವೆಂದು ಎಲ್ಲರೂ ಚಿಂತಿಸುತ್ತಿರಲು, ಸ್ವಲ್ಪದೂರದಲ್ಲಿದ್ದ ಭಕ್ತಿಸಾರನು ಕರಿಯ ಭತ್ತವನ್ನು ಕೈಯ್ಯಿನಲ್ಲಿ ಸೀಳುತ್ತಿರಲು ಅದನ್ನು ಕಂಡ ವಿಪ್ರರಿಗೆ ವೇದವಾಕ್ಯವು ನೆನೆಪಿಗೆ ಬಂದಿತು. ಆಗ ಅವರು ಭಕ್ತಿಸಾರನನ್ನು ಮಹಾತ್ಮನೆಂದು ತಿಳಿದು ಗೌರವಿಸಿದರು. ಆದರಿಂದ ಅವರು

"ನ ಶೂದ್ರಾ ಭಗವದ್ಭಕ್ತಾ ವಿಪ್ರಾಭಾಗವತಾಃ ಸ್ಮೃತಾಃ।
ಸರ್ವವರ್ಣೇಷುತೇ ಶೂದ್ರಾ ಯೇಹ್ಯ ಭಕ್ತಾಜನಾರ್ದನೇ॥"

ಎಂದು ಅರಿತರು.

ಆ ನಗರದಲ್ಲಿ ಭಕ್ತಿಸಾರನು ಭಿಕ್ಷೆಗಾಗಿ ಹೋಗುವ ಬೀದಿಗಳಲ್ಲೆಲ್ಲಾ ಅರ್ಚಾವತಾರಿಯಾದ ಪರಮಾತ್ಮನು ಪ್ರತ್ಯಕ್ಷನಾಗಿ ಅಭಿಮುಖವಾಗಿಯೇ ಬರುತ್ತಿದ್ದನು. ಈ ಆಶ್ಚರ್ಯವನ್ನು ಕಂಡ ಅನೇಕರು ಆ ಸಮಯದಲ್ಲಿ ಯಾಗಶಾಲೆಯಲ್ಲಿ ದೀಕ್ಷಿತನಾಗಿದ್ದ ಹರಿಪಾದನೆಂಬ ಸೋಮಯಾಜಿಗೆ ಈ ವಿಷಯವನ್ನು ತಿಳಿಸಿದರು. ಈ ಮಹಾತ್ಮರ ವೈಭವವನ್ನು ಕೇಳಿ ತಾನೇ ಧನ್ಯನೆಂದೂ, ತನ್ನ ಯಾಗವು ಸಾರ್ಥಕವಾಯಿತೆಂದೂ ಭಾವಿಸಿ, ಆತನು ಭಕ್ತಿಸಾರನ ಬಳಿಗೆ ಬಂದು, ವಂದಿಸಿ ಆನಂದದಿಂದ ಅವನನ್ನು ಯಾಗಶಾಲೆಗೆ ಕರೆದುಕೊಂಡು ಹೋಗಿ, ಹಿಂದೆ ಯುಧಿಷ್ಠಿರನು ಶ್ರೀಕೃಷ್ಣನಿಗೆ ಸನ್ಮಾನ ಮಾಡಿದಂತೆ ಅಗ್ರಪೂಜೆಯನ್ನು ಮಾಡಿದನು. ಮತ್ತೆ ಹೇಳಬೇಕಾದುದೇನು? ಅಲ್ಲಿ ನೆರೆದಿದ್ದ ವೇದವೇದಾಂತ ಪಾರಂಗತರಾದ ಬ್ರಾಹ್ಮಣರೆಲ್ಲರೂ ಶಿಶುಪಾಲನೇ ಮೊದಲಾದವರು ನಿಂದಿಸಿದಂತೆ 'ಎಲೈ ಮೂಢ, ಈಗ ಸಾರ್ಥಕವಾಯಿತು. ಈ ನೆರೆದಿರುವ ಸಭೆಯಲ್ಲಿ ಪೂಜ್ಯರೂ, ಸದಾ ಚಾರಪರರೂ, ವೇದಾಂತಿಗಳೂ ಆಗಿರುವವರನ್ನೆಲ್ಲ ಬಿಟ್ಟು, ಯಾವನೋ ಒಬ್ಬ ಶೂದ್ರನನ್ನು ಕರೆತಂದು ಅವನಿಗೆ ಅಗ್ರಪೂಜೆಯನ್ನು ಸಲ್ಲಿಸುವರೆ? ಅಯ್ಯೋ! ಅವಿವೇಕಿ, ಮಾಡಿದ ಯಾಗವೆಲ್ಲವೂ ವ್ಯರ್ಥವಾಯಿತಲ್ಲವೇ!'- ಎಂದು ಇದೇ ಮೊದಲಾಗಿ ನಿಂದಿಸಿದರು. ಹರಿಪಾದನು ಭಕ್ತಿಸಾರನನ್ನು ನಿಂದಿಸುತ್ತಿರುವುದನ್ನು ಕೇಳಿ ತಾನೇ ಭಕ್ತಿಸಾರನನ್ನು ಪ್ರಾರ್ಥಿಸಿದನು. ಆಗ ಭಕ್ತಿಸಾರನು ತನ್ನ ಯೋಗಮಹಿಮೆಯಿಂದ ಎಲ್ಲರಿಗೂ ದರ್ಶನವನ್ನು ಕೊಡುವಂತೆ ಪರಮಾತ್ಮನನ್ನು ಧ್ಯಾನಿಸಲು, ಆತನ ಮುಖದಲ್ಲಿ ಅನಂತಶಯನನು 'ಅನಂತಶಯನ'ನಾಗಿಯೇ

ಪ್ರತ್ಯಕ್ಷನಾದನು. ಅದನ್ನು ಕಂಡು ಅವರೆಲ್ಲರಿಗೂ ಆನಂದವಾದುದಲ್ಲದೇ ತಮ್ಮತಪ್ಪೂ ತಿಳಿಯಿತು. ಆಗ ಅವರೆಲ್ಲರೂ ಭಕ್ತಿಸಾರನನ್ನು ಭಕ್ತಿಪೂರ್ವಕವಾಗಿ ವಂದಿಸಿ, ಬ್ರಹ್ಮರಥದಲ್ಲಿ ಕುಳ್ಳರಿಸಿ ಮಹಾವೈಭವದಿಂದ ಸತ್ಕರಿಸಿದರು. ಆಗ ಭಕ್ತಿಸಾರನು ಕರುಣೆಯಿಂದ ಅವರಿಗೆ ಜ್ಞಾನೋಪದೇಶಮಾಡಿ ಅಲ್ಲಿಂದ ಕುಂಭಕೋಣಕ್ಕೆ ತೆರಳಿದನು.

ಅಲ್ಲಿ ಶಾರ್ಙಪಾಣಿಯ ದರ್ಶನವನ್ನುಮಾಡಿ ಸ್ತೋತ್ರಮಾಡುತ್ತಿರಲು ಶೇಷಶಾಯಿಯಾಗಿದ್ದ ಭಕ್ತವತ್ಸಲನಾದ ಪರಮಾತ್ಮನು ಎದ್ದುಬರಲು ಪ್ರಯತ್ನಿಸಿದನು. ಆದರೆ ಭಕ್ತಿಸಾರನ ಪ್ರಾರ್ಥನೆಯಂತೆ ಮತ್ತೆ ಉತ್ತಾನಶಯನನಾಗಿಯೇ ಮಲಗಿದನು. ಇಂತಹ ಪರಮಾತ್ಮನ ಸೇವೆಯಿಂದ ತೃಪ್ತನಾಗಿ"ಚತುರ್ಸ್ತರ್ಮುಖಾಂತಾದಿ" "ಶ್ರೀಚಂದವೃತ್ತ" (ತಿರುಚಂದವಿರುತ್ತಂ) ಮೊದಲಾದ ದಿವ್ಯದ್ರಾವಿಡ ಪ್ರಬಂಧಗಳನ್ನು ರಚಿಸಿ, ೧೧ ದಿವ್ಯದೇಶಗಳನ್ನು ವರ್ಣಿಸಿ ಹಾಡುತ್ತ, ಕುಂಭಕೋಣದಲ್ಲಿಯೇ ನಿತ್ಯವಾಸಮಾಡುತ್ತ (ಸಾವಿರಾರು ವರ್ಷಗಳು ಬದುಕಿದ್ದು-ಒಟ್ಟು ಅವರ ಜೀವಿತ ಕಾಲ ೨೦೦೦ ವರ್ಷಗಳು) ಅಲ್ಲಿಯೇ ಮುಕ್ತಿಯನ್ನೂ ಹೊಂದಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜರಿತದಲ್ಲಿ ಭಕ್ತಿಸಾರ ವೈಭವ ಕಥನವೆಂಬ ಎಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು.

೮೫

ಮತ್ತೆ ಆ ಮಾಧವನು (ವೇದಾಂತಿಯು) ಭಟ್ಟಾಚಾರ್ಯರನ್ನು ಕುರಿತು ಶಠಾರಿಯ ವೈಭವವನ್ನು ಹೇಳಬೇಕೆಂದು ಪ್ರಾರ್ಥಿಸಿದನು. ಆಗ ಭಟ್ಟಾಚಾರ್ಯನು 'ಅವತಾರ ಕ್ರಮದಿಂದ ಶಠಾರಿಯ ಚರಿತೆಯನ್ನೂ ಹೇಳಬೇಕಾದುದೇನೋ ಸರಿ; ಆದರೆ ಮೊದಲು ಅವಯವಗಳನ್ನು ಹೇಳಿ ಆಮೇಲೆ ಅವಯವಿಯನ್ನು ನಿರೂಪಣ ಮಾಡಬೇಕಾದುದು ಶಾಸ್ತ್ರಸಮ್ಮತವಾದುದು. ಶಠಾರಿಯೇ ಅವಯವಿ; ಕಾಸಾರಯೋಗಿಯೇ ಮೊದಲಾದ ನಾಲ್ವರ ಚರಿತೆಯನ್ನು ಹೇಳಿದೆನಲ್ಲವೆ. ಈಗ ಕುಲಶೇಖರನ ವೈಭವವನ್ನು ಹೇಳುವೆನು'ಎಂದು ಹೇಳಲಾರಂಭಿಸಿದನು.

ಕೇರಳ ದೇಶದಲ್ಲಿ ಕೋಳಿಪಟ್ಟಣವೆಂಬುದು ಒಂದೂರು. ಅಲ್ಲಿ ಧೃಢವ್ರತನೆಂಬ ಒಬ್ಬ ಧರ್ಮಾತ್ಮನಾದ ರಾಜನು ಧರ್ಮದಿಂದ ಪ್ರಜೆಗಳನ್ನು ಪಾಲಿಸುತ್ತಿದ್ದನು. ದಶರಥನಂತೆ ಧರ್ಮಾತ್ಮನಾಗಿ ಅನೇಕಕಾಲ ರಾಜ್ಯಭಾರ ಮಾಡಿದರೂ. ಮಕ್ಕಳೇ ಆಗದಿದ್ದುದರಿಂದ ಆತನು ಪುತ್ರಾರ್ಥಿಗಾಗಿ ಯಾಗಮಾಡಿದಂತೆ ಈತನೂ ಶ್ರೀಹರಿಯ ಉಪಾಸನೆಯನ್ನು ಮಾಡಿದನು. ಪರಮಾತ್ಮನು ಪ್ರಸನ್ನನಾಗಿ ಈತನಿಗೆ ಪುತ್ರಲಾಭವನ್ನು ಕರುಣಿಸಿದನು(ಕಲೌಯುಗೇಸಪ್ತ ವಿಂಶೇ ವತ್ಸರೇತು ಗತೇಸತಿ) ಪರಾಭವ ಸಂವತ್ಸರದ ಕುಂಭ ಮಾಸದ ಶುಕ್ಲಪಕ್ಷದಲ್ಲಿ ಪುನರ್ವಸೂ ನಕ್ಷತ್ರ ದಶಮೀ ಗುರುವಾರ ಶುಭದಿವಸದಲ್ಲಿ ಕೌಸ್ತುಭಾಂಶದಿಂದ ಒಂದು ಪುತ್ರರತ್ನವು ಜನಿಸಿತು.ರಾಜನು ಆ ಶಿಶುವಿಗೆ ಕುಲಶೇಖರನೆಂದು ನಾಮಕರಣ ಮಾಡಿದನು. ಕಾಲಕಾಲಕ್ಕೆ ಚೌಲಾದಿ ಸಂಸ್ಕಾರಗಳನ್ನೂ, ವಿದ್ಯಾಭ್ಯಾಸವನ್ನೂ ಮಾಡಿಸಿದುದಲ್ಲದೇ ಧನುರ್ವೇದವನ್ನೂ ಕಲಿಸಿದನು. ಪ್ರಾಪ್ತ ವಯಸ್ಕನಾಗಲು ರಾಜನು ಮಗನಿಗೆ ಯುವರಾಜಪಟ್ಟವನ್ನು ಕಟ್ಟಿದನು. ಈತನ ದಿಗ್ವಿಜಯದಿಂದ ರಾಜ್ಯವು ಶಾಂತಿಯಿಂದಲೂ

ಶಿಸ್ತಿನಿಂದಲೂ ರಂಜಿಸಿತು. ಶ್ರೀರಾಮನು ರಾಜ್ಯವನ್ನು ಪಾಲಿಸಿದಂತೆ ಈತನ ಪ್ರಭುತ್ವದಿಂದಲೂ ಪ್ರಜೆಯು ಏನೊಂದೂ ತೊಂದರೆಯಿಲ್ಲದೆ ನೆಮ್ಮದಿಯಿಂದಿತ್ತು. ಇಂತಹ ದಕ್ಷನಾದ ಕುಮಾರನನ್ನು ಕಂಡು ದೃಢವ್ರತನು ರಾಜ್ಯವನ್ನು ಪರಿಪೂರ್ಣವಾಗಿ ಕುಮಾರನಿಗೆ ಒಪ್ಪಿಸಿ ತಾನು ವಾನಪ್ರಸ್ಥಾಶ್ರಮವನ್ನು ಅಂಗೀಕರಿಸಿದನು. ಈತನ ಧರ್ಮನಿಷ್ಠೆಯೇ ಮೊದಲಾದವುಗಳಿಂದ ಪ್ರಸನ್ನನಾದ ಹರಿಯು ವಿಭೂತಿದ್ವಯ ನಿರ್ವಾಹನ ಸಾಮರ್ಥ್ಯವನ್ನೂ ಅನುಗ್ರಹಿಸಿದನು. ಮತ್ತು ಆದಿಶೇಷನನ್ನು ಕುಲಶೇಖರನ ಬಳಿಗೆ ಕಳುಹಿಸಿ ಪಂಚಸಂಸ್ಕಾರಗಳನ್ನು ಮಾಡಿಸಿ, ಜ್ಞಾನೋಪದೇಶ ಮಾಡಿಸಿದನು.

ಈಗ ಕುಲಶೇಖರನು ರಾಜನಾದರೂ ಕೂಡ ಭಗವದ್ಗುಣಾನುಭವದಲ್ಲಿ ಹುಚ್ಚನಂತೆ ಇರುವನು. ಅವನ ಜ್ಞಾನ ಭಕ್ತಿ ವೈರಾಗ್ಯಗಳು ಅತಿಶಯವಾಗಿದೆ. ಆತನ ಮನಸ್ಸಿನಲ್ಲಿ -'ಕೇವಲ ದೇಹಾತ್ಮಾಭಿಮಾನಿಗಳೂ, ಶಬ್ದಾದಿ ವಿಷಯಗಳಲ್ಲಿ ಕಾತರರೂ ಆದ ಈ ನಿತ್ಯಸಂಸಾರಿಗಳೊಡನೆ ವಾಸಮಾಡುವುದು ಯುಕ್ತವಲ್ಲ. ಇದು ನನಗೆ ಕಾರಾಗ್ರಹದಂತಿರುವುದು. ಇದನ್ನು ರಾಜ್ಯವೆಂದೂ ಭೋಗವೆಂದೂ ತಿಳಿದಿರುವುದು ಅಗ್ನಿಜ್ವಾಲೆಯ ಮಧ್ಯವಾಸ ಮಾಡಿದಂತಾಗಿರುವುದು'- ಎಂಬುದಾಗಿ ಚಿಂತೆಯುಂಟಾಯಿತು. ಕಡೆಗೆ ಇದೆಲ್ಲವನ್ನೂ ಬಿಡಬೇಕೆಂದು ಯೋಚಿಸಿ, ಹಿಂದೆ ವಿಭೀಷಣನು ತನ್ನ ದೇಶ, ರಾಜ್ಯ, ಬಂಧುಗಳು, ಮಿತ್ರರು, ಸರ್ವಸ್ವವನ್ನೂ ಬಿಟ್ಟು ಶ್ರೀರಾಮನನ್ನು ಶರಣು ಹೊಂದಿದಂತೆ-ಈತನೂ ಸಹ ರಾಜ್ಯವೂ, ಕೋಶವೂ, ಭಗವದಾಯುತ್ತವೆಂದೂ ಸಮಸ್ತವಾದ ಐಶ್ವರ್ಯವೂ ಭಗವತ್ಭಾಗವತರ ಕೈಂಕರ್ಯೋಪಯೋಗಿಯೆಂದೂ ನಿಶ್ಚಯಿಸಿದನು. ಅರ್ಚಾವತಾರಗಳಲ್ಲಿ ಶ್ರೀವೆಂಕಟೇಶ್ವರನಲ್ಲಿಯೂ, ವಿಭವಾವತಾರಗಳಲ್ಲಿ ಶ್ರೀರಾಮನಲ್ಲಿಯೂ ಈತನಿಗೆ ಭಕ್ತಿಯು ಹುಟ್ಟಿತು. ವೆಂಕಟೇಶ್ವರನ ಸನ್ನಿಧಿಯಲ್ಲಿ ಹೊಸಲಿನ ರೂಪದಿಂದ ಇದ್ದು ಸತತವಾಗಿಯೂ ಆ ಪರಮಾತ್ಮನ ಪ್ರವಾಳಾಧರವನ್ನು ಸಂದರ್ಶಿಸುತ್ತಿರುವಂತಹ ಕೈಂಕರ್ಯಪ್ರಾರ್ಥನೆಯು ಆತನ ಮನಸ್ಸನ್ನು ನಾಟಿತು.

ಒಂದು ಸಲ ಕುಲಶೇಖರನು ಶ್ರೀರಂಗಮಹಾತ್ಮ್ಯವನ್ನು ಕೇಳಿದನು. 'ಶ್ರೀರಂಗಯಾತ್ರೆ ಅಥವಾ ಹೋಗಬೇಕೆಂಬ ಇಚ್ಛೆಯೇ ಸಂಸಾರೋತ್ತಾರಕವಾದುದು;ಅಲ್ಲಿ ನಿತ್ಯವಾಸವು ಲಭಿಸುವುದಾದರೆ ಹೇಳತಕ್ಕದೇನು?'- ಎಂಬ ವಿಚಾರವು ಈತನ ಮನಸ್ಸನ್ನು ಕೊರೆಯತೊಡಗಿತು. ಶ್ರೀರಂಗಕ್ಕೆ ಹೋಗಿ ನಿತ್ಯವಾಸಮಾಡಬೇಕೆಂದೂ, ಶ್ರೀರಂಗರಾಜನ ಕೈಂಕರ್ಯದಲ್ಲಿ ನಿರತನಾಗಿರಬೇಕೆಂದ್ದು ನಿಶ್ಚಯಿಸಿದನು. ನಿಶ್ಚಯಿಸಿ ಮಾರನೇ ಬೆಳಿಗ್ಗೆಯೇ ಶ್ರೀರಂಗಯಾತ್ರೆ ಮಾಡುವುದಾಗಿ ನಗರದಲ್ಲಿ ಡಂಗುರಹಾಕಿದನು.

ಆಗ ಮಂತ್ರಿಗಳು -'ಈ ನಮ್ಮ ರಾಜನು ಶ್ರೀರಂಗಕ್ಕೆ ಹೋಗಿ ದಿವ್ಯಸುಂದರ ವಿಗ್ರಹನಾದ ಶ್ರೀರಂಗನಾಥನನ್ನು ಸಂದರ್ಶಿಸಿ ಮತ್ತೆ ಹಿಂತಿರುಗುವನೆ? ನಮ್ಮ ರಾಜ್ಯವು ಅನಾಥವಾಗುವುದರಲ್ಲಿ ಸಂಶಯವಿಲ್ಲ. ಇಂತಹ ರಾಜನು ನಮಗೆಲ್ಲಿ ಸಿಗುವನು? ಪ್ರಜೆಗಳ ಈ ಸುಖಶಾಂತಿಗಳು ಮತ್ತೆ ಹೇಗೆ ಉಂಟಾಗುವುವು! ಆದುದರಿಂದ ಹೇಗಾದರೂ ಮಾಡಿ ರಾಜನ ಯಾತ್ರೆಯನ್ನು ತಪ್ಪಿಸಬೇಕೆಂದು ಆಲೋಚಿಸಿ, ಕೆಲವರು ಶ್ರೀವೈಷ್ಣವರ ಬಳಿಗೆ ಹೋಗಿ 'ಎಲೈ ಭಾಗವತ ಶಿಖಾಮಣಿಗಳೇ, ಇದೋ ನಮ್ಮ ರಾಜನು ಶ್ರೀರಂಗಯಾತ್ರೆಗೆಗಾಗಿ

ಹೊರಟಿರುವನು, ಇಂತಹ ರಾಜನು ಹೊರಟರೆ ಮತ್ತೆ ಬರಲಾರನು. ರಾಜನು ಶ್ರೀವೈಷ್ಣವ ಪ್ರಿಯನೆಂದೂ ನಿಮಗೆ ತಿಳಿದೇ ಇರುವುದು. ಆದುದರಿಂದ ಹೇಗಾದರೂ ಮಾಡಿ ಯಾತ್ರೆಯನ್ನು ತಪ್ಪಿಸುವುದು ನಿಮ್ಮ ಭಾರ'-ವೆಂದು ಕೇಳಿಕೊಂಡರು.

ಮಾರನೆಯ ಬೆಳಿಗ್ಗೆ ದೊರೆಯು ಪರಿವಾರದೊಡನೆ ಶ್ರೀರಂಗಯಾತ್ರೆಗೆ ಹೊರಟಿರಲು, ಅನೇಕ ಶ್ರೀವೈಷ್ಣವರು ಅವನೆದುರಿಗೆ ಕಾಣಿಸಿಕೊಂಡರು. 'ಪೂಜನಾದ್ವಿಷ್ಣು ಭಕ್ತಾನಾಂ ಪುರುಷಾರ್ಥೋಽಸ್ತಿನೇತರಃ। ತೇನ ತದ್ದ್ವೇಷತಃ ಕಿಂಚಿನ್ನಾಸ್ತಿನಾಶ ನಮಾತ್ಮನಃ॥'-ಇತ್ಯಾದಿಯಾದ ಶಾಸ್ತ್ರಸಿದ್ಧಾಂತಗಳನ್ನು ತಿಳಿದಿದ್ದ ದೊರೆಯು ಭಕ್ತಿಯಿಂದ ಅವರಿಗೆ ಪ್ರಣಾಮ ಮಾಡಿ ಅರಮನೆಗೆ ಕರೆದುಕೊಂಡು ಬಂದು, ಮಹಾವೈಭವದಿಂದ ಅವರನ್ನು ಉಪಚರಿಸಿ, ಭಕ್ಷ್ಯಭೋಜ್ಯಾದಿಗಳಿಂದ ಸಂತೋಷಪಡಿಸಿದನು. ಭಗವದಾರಾಧನವೂ ಭಾಗವತಸತ್ಕಾರವೂ ಮುಗಿಯುವವರೆಗೂ ಉಪವಾಸವಿದ್ದು ಶ್ರೀಪಾದ ತೀರ್ಥವನ್ನು ಸ್ವೀಕರಿಸಿ ಭಾಗವತೋಚ್ಛಿಷ್ಟವನ್ನೂ ತಾನೂ ಸ್ವೀಕರಿಸಿ ಸಂಜೆಯವರೆವಿಗೂ ಅವರಿಂದ ಭಗವದ್ಗುಣಗಳನ್ನು ಕೇಳುತ್ತಲಿದ್ದನು. ಇದೇ ರೀತಿಯಾಗಿ ಅನೇಕ ದಿನಗಳು ನಡೆದು ಅವನ ಶ್ರೀರಂಗಯಾತ್ರೆಯು ದಿನ ದಿನಕ್ಕೂ ಮುಂದುವರಿಯುತ್ತಿತ್ತು. ಒಂದು ದಿನ ಆ ವಿಪ್ರದಿಂದ ಶ್ರೀವೇಂಕಟಾಚಲ ಮಹಾತ್ಮ್ಯವನ್ನು ಕೇಳುತ್ತ ಅಲ್ಲಿನ ಸ್ವಾಮಿ ಪುಷ್ಕರಿಣೀತೀರ್ಥದ ಮಹಿಮೆಯನ್ನು ಕೇಳಿ, ವೆಂಕಟಾಚಲದಲ್ಲಿ ಕ್ರಿಮಿಕೀಟವಾಗಿಯೋ, ಚಲಿಸಲಾರದ ಬೆಟ್ಟಗುಡ್ಡವಾಗಿಯೋ ಹುಟ್ಟುವ ಯೋಗವು ತನಗೆ ಬರಬಾರದೇಕೆ?'- ಎಂದು ಚಿಂತಿಸುತ್ತಾ ವೇದವೇದಾಂತ ತತ್ವಗಳಲ್ಲಿಯೇ ಆಸಕ್ತವಾಗಿರುತ್ತಿದ್ದನು. ಇದರ ಫಲವಾಗಿ ಮುಕುಂದನೇ ಪರತತ್ವವೆಂದು ನಂಬಿ 'ಮುಕುಂದಮಾಲೆ' ಎಂಬ ಸ್ತೋತ್ರವನ್ನು ರಚಿಸಿ, ಲೋಕಕ್ಕೆ ಒಂದು ಉಪಕಾರವನ್ನು ಮಾಡಿರುವನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕುಲಶೇಖರ ಅವತಾರ ವರ್ಣನೆಯೆಂಬ ಎಂಬತ್ತೈದನೆಯ ಅಧ್ಯಾಯವು ಮುಗಿದುದು.

## ೮೬

ಅನಂತರ ಲೀಲಾಮಾನುಷರೂಪಿಯಾದ ಆ ಮಹಾಮಹಿಮನು ವೇದವೇದ್ಯನಾದ ಪರಮಪುರುಷನು ದಾಶರಥಿಯಾಗಿ ಹುಟ್ಟಲು ಶ್ರೀಮದ್ರಾಮಾಯಣದ ರೂಪವಾಗಿ ವೇದವೂ ಹುಟ್ಟಿದುದರಿಂದ ಮನುಷ್ಯನು ಬದುಕಿರುವವರೆಗೂ ಶ್ರೀಮದ್ರಾಮಾಯಣ ಶ್ರವಣವನ್ನು ಶ್ರವಣ ಮಾಡಬೇಕು. ಅದನ್ನು ಬಿಟ್ಟರೆ ಮುಕ್ತಿಗೆ ಬೇರೊಂದು ಸಾಧನವಿಲ್ಲವೆಂದು ನಿಶ್ಚಯಿಸಿದನು. ಅಂತೆಯೇ ಶ್ರೀರಾಮನಲ್ಲಿ "ದೃಢಭಕ್ತಿಯುಳ್ಳವನಾಗಿ ರಾಮಾಯಣ ಕಾಲಕ್ಷೇಪದಿಂದ ಸುಖವಾಗಿ ಕಾಲವನ್ನು ಕಳೆಯುತ್ತಿದ್ದನು. ಹೀಗಿರುತ್ತಿರಲು ಒಂದುಸಲ ರಾಮಾಯಣದಲ್ಲಿ ಖರದೂಷಣರ ಯುದ್ಧಪ್ರಸಂಗದಲ್ಲಿ "ಭಯಂಕರವಾದ ಹದಿನಾಲ್ಕು ಸಾವಿರ ರಾಕ್ಷಸರೊಡನೆ ಶ್ರೀರಾಮನೊಬ್ಬನೇ ಯುದ್ಧಮಾಡುವನು. ಅದನ್ನು ನೋಡಲು ಋಷಿಗಳೆಲ್ಲರೂ ಬಂದರು"ಎಂಬ ವಿಚಾರವನ್ನು ಕೇಳಿಕೂಡಲೇ ಈ ಅಧರ್ಮ ಯುದ್ಧವಾಗ

ಬಾರದೆಂದು ಪ್ರೇಮ ಪರವಶನಾಗಿ ಧನುರ್ಧಾರಿಯಾಗಿ ಚತುರ್ಬಲಗಳನ್ನು ಯುದ್ಧಕ್ಕೆ ಹೊರಡಬೇಕೆಂದು ಆಜ್ಞಾಪಿಸಿ, ತಾನೂ ಬೇಗ ಹೊರಟನು. ಇದನ್ನು ಕಂಡು ಆಶ್ಚರ್ಯಗೊಂಡ ಅವನ ಮಂತ್ರಿಗಳು ಅವನನ್ನು ತಡೆಯುವುದಕ್ಕಾಗಿ ಕೆಲವರು ಶ್ರೀವೈಷ್ಣವರನ್ನು ಆತನ ಎದುರಿಗೆ ಕಳುಹಿಸಿದನು. ಅವರು ರಾಜನ ಎದುರಿಗೆ ಬಂದು 'ಒಂದೂವರೆ ಗಳಿಗೆಯಲ್ಲಿಯೇ ಶ್ರೀರಾಮನು ಎಲ್ಲ ರಾಕ್ಷಸರನ್ನು ಕೊಂದು ಹಿಂತಿರುಗಲು ಆನಂದಪರವಶಳಾದ ಜಾನಕಿಯು ಆತನನ್ನು ಆಲಂಗಿಸಿದಳು' ಎಂದು ಹೇಳಿದರು. ಇದನ್ನು ಕೇಳಿ ಪರಮಸಂತುಷ್ಟನಾದ ರಾಜನು ತನ್ನ ಆಭರಣಗಳನ್ನೆಲ್ಲ ಅವರಿಗೆ ಬಹುಮಾನವಾಗಿ ಕೊಟ್ಟು ಅವರನ್ನು ಕರೆದುಕೊಂಡು ಅರಮನೆಗೆ ಹಿಂತಿರುಗಿದನು. ಮತ್ತೆ ಶ್ರೀಮದ್ರಾಮಾಯಣವನ್ನು ಕೇಳುತ್ತಾ ಭಕ್ತಿ ಪರವಶನಾಗಿ ಕಾಲವನ್ನು ಕಳೆಯುತ್ತಿರಲು, ಅವನ ಅತಿಶಯವಾದ ಭಕ್ತಿಯನ್ನು ಕಂಡ ದಕ್ಷನಾದ ಪೌರಾಣಿಕನು ಶ್ರೀರಾಮನ ಅಪಜಯದ ವಿಚಾರಗಳನ್ನು ಬಿಟ್ಟು ಉಳಿದ ಕಥೆಗಳನ್ನು ಹೇಳುತ್ತಿದ್ದನು. ಆದರೆ ಒಂದು ದಿನ ಆ ಪೌರಾಣಿಕನು ಬೇರೆ ಕೆಲಸವಿದ್ದುದರಿಂದ ತನ್ನ ಮಗನನ್ನು ಕಳುಹಿಸಿದನು. ಮಗನಿಗೆ ರಾಜನ ವಿಚಾರವಾಗಿ ಅಷ್ಟು ಗಮನವಿಲ್ಲದ್ದಿದುದ ರಿಂದ ಅವನು ಸೀತಾಪಹರಣದ ವಿಚಾರವನ್ನು ತಿಳಿಸಿದನು. ಕೂಡಲೇ ರಾಜನು 'ಆ ನಮ್ಮ ತಾಯಿಯನ್ನು ಶ್ರೀರಾಮನ ಪತ್ನಿಯನ್ನು ದುರಾತ್ಮನಾದ ರಾವಣನು ಹೇಗೆ ತಾನೇ ಅಪಹರಿಸಬಲ್ಲನು. ನಾನು ಈಗಲೇ ಹೊರಟು ಸಮುದ್ರವನ್ನು ದಾಟಿ ಲಂಕೆಯನ್ನು ಸುಟ್ಟು ಸಮಸ್ತ ಪರಿವಾರದಿಂದ ಕೂಡಿದ ರಾವಣನನ್ನು ಕೊಂದು ಸೀತೆಯನ್ನು ಕರೆತರುವೆನೆಂದು' ಹೇಳುತ್ತ ಹೊರಟೇಬಿಟ್ಟನು. ಆ ವೇಗದಲ್ಲಿ ಅವನನ್ನು ಯಾರೂ ತಡೆಯಲಾಗಲಿಲ್ಲ ಸರಿ, ಹಿಂದೆ ಸೈನ್ಯವೂ ಹೊರಟಿತು. ಈ ಆಶ್ಚರ್ಯವನ್ನು ನೋಡಲು ಭೂಮಿಯಲ್ಲಿ ಮನುಷ್ಯರು ಆಕಾಶದಲ್ಲಿ ದೇವತೆಗಳೂ ನೆರೆದರು. ಕುಲಶೇಖರನು ಸಮುದ್ರದಲ್ಲಿ ನುಗ್ಗುತ್ತಿರಲು ಭಕ್ತಿಪರಾಧೀನನಾದ ಶ್ರೀರಾಮನು ಸೀತಾ ಲಕ್ಷ್ಮಣರೊಡನೆ ಪ್ರತ್ಯಕ್ಷನಾಗಿ -'ವತ್ಸ, ಕುಲಶೇಖರ ನಾನಿರುತ್ತಿರಲು ನಿನಗೇತಕ್ಕೆ ಈ ಕಷ್ಟ? ಇದೋ ನಿನ್ನ ಮಾತೆಯನ್ನು ನೋಡು, ನಾನು ರಾವಣನನ್ನು ಪರಿವಾರನಾಗಿ ಕೊಂದು ಸೀತೆಯನ್ನು ಬಂದಿರುವೆನು ನೋಡು.'- ಎಂದನು. ಆಗ ಅವರನ್ನು ಕಂಡು ಸಂತುಷ್ಟನಾದ ಕುಲಶೇಖರನು ನಮಸ್ಕರಿಸಿ ಎಲ್ಲರೊಡನೆ ಹಿಂತಿರುಗುತ್ತಿರಲು ಶ್ರೀರಾಮನು ಮರೆಯಾದನು. ಅನಂತರ ಶ್ರೀರಾಮನನ್ನು ಕಾಣದೇ ಕುಲಶೇಖರನು ಚಿಂತಿಸುತ್ತಿರಲು ಪೌರಣಿಕರು ನಡೆದ ವಿಚಾರವೆಲ್ಲವನ್ನೂ ವಿವರಿಸಿದರು. ಆಗ ರಾಜನ ಮನಸ್ಸಿಗೆ ಸಮಾಧಾನ ತಂದುಕೊಂಡು ನಗರಿಗೆ ಹಿಂತಿರುಗಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕುಲಶೇಖರನಿಗೆ ಶ್ರೀರಾಮ ಪ್ರತ್ಯಕ್ಷವೆಂಬ ಎಂಬತ್ತಾರನೆಯ ಅಧ್ಯಾಯವು ಮುಗಿದುದು.

## ೮೭

ಎಲೈ ವೇದಾಂತಿಯೇ - ಆ ರಾಮಭಕ್ತನ ಚರಿತ್ರೆಯನ್ನು ಸಂಪೂರ್ಣವಾಗಿ ಯಾರು ಹೇಳಬಲ್ಲರು? ಆದರೂ ಸಂಕ್ಷೇಪವಾಗಿ ಹೇಳುವುದಾದರೆ ಆತನು ಪ್ರತಿದಿನವೂ ಕೋಟ್ಯಂತರ

ಶ್ರೀವೈಷ್ಣವರಿಗೆ ಷಡ್ರಸೋಪೇತವಾದ ಭೋಜನವನ್ನು ಮಾಡಿಸುತ್ತ ಕೊನೆಗೆ ರಾಜ್ಯವನ್ನು ಶ್ರೀವೈಷ್ಣವರಿಗೆ ಅಧೀನಮಾಡಿ ತಾನು ಅವರ ದಾಸನಾಗಿ ಶ್ರೀಹರಿಯ ಕೈಂಕರ್ಯ ನಿರತನಾಗಿದ್ದನು. ಇದನ್ನು ನೋಡಿ ಅವನ ಮಂತ್ರಿಗಳು 'ನೀತಿಜ್ಞನಾದರೂ ಈ ರಾಜನು ಈ ರೀತಿ ಭ್ರಾಂತನಾಗಿರುವನು. ರಾಜ್ಯದ ಚಿಂತೆಯೇ ಇವನಿಗಿಲ್ಲ. ಶ್ರೀಹರಿಗಿಂತಲೂ ಹರಿಭಕ್ತರನ್ನು ದೊಡ್ಡವರೆಂದು ತಿಳಿಯುತ್ತಿರುವನು. ಹೇಗಾದರೂ ಮಾಡಿ ಕಾಲಾಕಾಲವಿಲ್ಲದೆ ಬರುವ ಈ ಶ್ರೀವೈಷ್ಣವರನ್ನು ತಪ್ಪಿಸಬೇಕು. ರಾಜನಿಗೆ ಅವರಲ್ಲಿ ನಂಬಿಕೆಯಿಲ್ಲದಂತೆ ಮಾಡಬೇಕು'- ಎಂದು ತಮ್ಮ ತಮ್ಮಲ್ಲಿ ಆಲೋಚಿಸಿಕೊಂಡರು. ಹೀಗೆ ಯೋಚಿಸಿ ಕಾಲವನ್ನು ನಿರೀಕ್ಷಿಸುತ್ತಿರಲು ಶ್ರೀರಾಮನವಮಿಯು ಬಂದಿತು. ಅರಮನೆಯಲ್ಲಿ ರಾಮೋತ್ಸವವು ಸಂಭ್ರಮವಾಗಿ ನಡೆಯುತ್ತಿತ್ತು. ಪರಮಾತ್ಮನ ಆಭರಣಗಳನ್ನೆಲ್ಲ ತೆಗೆದಿಟ್ಟು 'ತಿರುಮಂಜನ (ಅಭಿಷೇಕ)' ಮಾಡಲು ಏರ್ಪಾಡು ನಡೆದಿತ್ತು. ಮಂತ್ರಿಗಳು ಇದೇ ಸಮಯವೆಂದು ಒಂದು ಸೊಗಸಾದ ಮುತ್ತಿನಹಾರವನ್ನು ಬಚ್ಚಿಟ್ಟು ಶ್ರೀವೈಷ್ಣವರ ಮೇಲೆ ದೂರು ಹೇಳಿದರು. ಪರಮಭಕ್ತನಾದ ಕುಲಶೇಖರನು ಭಗವಂತನ ಮತ್ತು ಭಗವದ್ಭಕ್ತರ ನಿಂದೆಯನ್ನು ಕೇಳಿಯೂ ಆ ಸ್ಥಳದಿಂದ ಹೋಗದೇ ಇರುವವರು ಸುಕೃತದಿಂದ ಚ್ಯುತನಾಗುವನೆಂದು ತಿಳಿದು 'ಮಹಾಭಾಗವತರು ಎಂದೂ ಚೋರರಾಗುವುದಿಲ್ಲವೆಂದು ಶಪಥಮಾಡುತ್ತ ರಾಜಗೋಪಾಲ ರೂಪಿಯಾದ ಪರಮಾತ್ಮನ ಸನ್ನಿಧಿಯಲ್ಲಿ ಭಯಂಕರವಾದ ಸರ್ಪವನ್ನು ಹಿಡಿದುಕೊಂಡನು. ಆಗ ಮಂತ್ರಿಗಳು ಹೆದರಿ ತಮ್ಮ ತಪ್ಪನ್ನು ಒಪ್ಪಿಕೊಂಡು ರಾಜನಲ್ಲಿಯೂ ಶ್ರೀವೈಷ್ಣವರಲ್ಲಿಯೂ ಕ್ಷಮೆಬೇಡುತ್ತ ಅವರ ಪಾದಗಳಿಗೆರಗಿದರು'. ಆಗ ರಾಜನು -'ವರಂ ಹುತವಹ ಜ್ವಾಲಾಪಂಜ ರಾಂತರ್ವ್ಯವಸ್ಥಿತಿಃ। ನಶೌರಿ ಚಿಂತಾವಿಮುಖ ಜನ ಮಧ್ಯಸ್ಥಿತಿಃ॥'- ಎಂದು ಆಲೋಚಿಸಿ, ದೃಢವ್ರತನೆಂಬ ತನ್ನ ಮಗನನ್ನು ರಾಜನನ್ನಾಗಿ ಮಾಡಿ ತನಗೆ ಆಪ್ತರಾದ ಶ್ರೀವೈಷ್ಣವರೊಡನೆ ಶ್ರೀರಂಗಕ್ಕೆ ಹೊರಟನು. ಅಲ್ಲಿಗೆ ಹೋಗಿ ದರಿದ್ರನು ಐಶ್ವರ್ಯವನ್ನು ಹೊಂದುವಂತೆ ಶ್ರೀರಂಗನಾಥನನ್ನು ಕಂಡು ಆನಂದಭರಿತನಾದನು. ಮತ್ತೆ ರಂಗನಾಥನಲ್ಲಿ ನೀಳಾದೇವಿಯ ಅಂಶದಿಂದ ಹುಟ್ಟಿದ ತನ್ನ ಮಗಳನ್ನು ಆತನಿಗೆ ಅರ್ಪಿಸಿ ತನ್ನ ಸಮಸ್ತ ಐಶ್ವರ್ಯವನ್ನು ಪರಮಾತ್ಮನಿಗೆ ಅರ್ಪಿಸಿದನು. ದ್ರಾವಿಡಭಾಷೆಯಲ್ಲಿ ದೇವಗೀತೆ (ಪೆರಿಮಾಳ್ ತಿರುಮೊಳಿ) ಯನ್ನು ಲೋಕಹಿತಕ್ಕಾಗಿ ರಚಿಸಿದನು. ಇದರಲ್ಲಿ ಭಗವದ್ವೈಭವವೂ ಭಾಗವತ ವೈಭವವೂ ಪ್ರತಿಪಾದಿಸಲ್ಪಟ್ಟಿರುತ್ತದೆ. ಹೀಗೆ ಕೆಲವು ಕಾಲ ಶ್ರೀರಂಗದಲ್ಲಿದ್ದು ದಿವ್ಯದೇಶಗಳನ್ನು ನೋಡುವುದಕ್ಕಾಗಿ ಹೊರಟನು. ಹೊರಟು ಬ್ರಹ್ಮದೇಶದಲ್ಲಿ ರಾಜಗೋಪಾಲಸ್ವಾಮಿಯನ್ನು ಕಂಡು ಹೃಷ್ಟಚಿತ್ತನಾಗಿ ಅಲ್ಲಿಯೇ ಇದ್ದು ತನ್ನ ಐಹಿಕ ಜೀವನವನ್ನು ಮುಗಿಸಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಕುಲಶೇಖರ ಚರಿತವೆಂಬ ಎಂಬತ್ತೇಳನೆಯ ಅಧ್ಯಾಯವು ಮುಗಿದುದು.

೮೮

ಅನಂತರ ವೇದಾಂತಿಯು ಭಟ್ಟಾರ್ಯನನ್ನು ಕುರಿತು ವಿಷ್ಣುಚಿತ್ತನ ಚರಿತೆಯನ್ನು

ಕೇಳಲು ಆತನು ಆದರದಿಂದ ಹೇಳಲಾರಂಭಿಸಿದನು. ಪಾಂಡ್ಯದೇಶದಲ್ಲಿ ಧ್ವನಿಪುರ (ವಿಲ್ಲಿಪುತ್ತೂರು) ಒಂದು ಪ್ರಸಿದ್ಧವಾದ ಕ್ಷೇತ್ರ. ವಟಪತ್ರಶಾಯಿಯು ಕ್ಷೀರಾಬ್ಧಿಯನ್ನು ಬಿಟ್ಟು ಇಲ್ಲಿಗೆ ಬರಲು ಸಮಸ್ತ ದೇವತಾಸಾನಿಧ್ಯವೂ ಇಲ್ಲಿಯೇ ಇರಲು ವಿಖ್ಯಾತವಾಯಿತು. ಅಲ್ಲಿ ಮುಕುಂದಾರ್ಯನೆಂಬ ಒಬ್ಬ ಭಗವದ್ಭಕ್ತನಿದ್ದನು. ಆತನ ಪತ್ನಿ ಪದ್ಮಾ ಅವರಿಬ್ಬರಿಗೂ ಭಗವದನುಗ್ರಹದಿಂದ ವಿಷ್ಣುಚಿತ್ತನು ಮಗನಾಗಿ ಹುಟ್ಟಿದನು. ಆತನು ಗರುಡನ ಅಂಶದಿಂದ ಹುಟ್ಟಿದನೆಂದು ಆಚಾರ್ಯರು ಹೇಳುತ್ತಾರೆ. ಆತನಿಗೆ ಭಗವದ್ಭಕ್ತರಾದ ನಾಲ್ವರು ತಮ್ಮಂದಿರಿದ್ದರು. ಪರಮಾತ್ಮನ ನಿರ್ಹೇತುಕವಾದ ಕೃಪಾಕಟಾಕ್ಷದಿಂದ ಜನ್ಮದಿಂದಲೇ ವೈಷ್ಣವನಾದ ಭಟ್ಟನಾಥ (ವಿಷ್ಣುಚಿತ್ತ )ನು ಏನಾದರೂ ಭಗವತ್ಕೈಂಕರ್ಯವನ್ನು ಮಾಡಬೇಕೆಂದು ನಿಶ್ಚಯಿಸಿ, ಶ್ರೀಹರಿಯ ದಶಾವತಾರಗಳನ್ನು ಆಲೋಚಿಸಿದನು. ಅದರಲ್ಲಿ -'ಏಷನಾರಾಯಣಃ ಶ್ರೀಮಾನ್' ಎಂಬ ಪದ್ಯವನ್ನು ನೋಡಿ ಶ್ರೀಕೃಷ್ಣನಲ್ಲಿ ಅತ್ಯಂತ ಭಕ್ತಿಯುಳ್ಳವನಾಗಿ (ಪುಷ್ಪ) ಮಾಲಾ ಕೈಂಕರ್ಯದಲ್ಲಿ ಆಸಕ್ತನಾಗಿ ಇರುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ವಿಷ್ಣುಚಿತ್ತಾವತಾರವೆಂಬ ಎಂಬತ್ತೆಂಟನೆಯ ಅಧ್ಯಾಯವು ಮುಗಿದುದು.

೮೯

ಶೀವಿಲ್ಲಿಪುತ್ತೂರಿಗೆ ಉತ್ತರದಲ್ಲಿ ಮಧುರಾನಗರವುಂಟು. ಅಲ್ಲಿಗೆ ಧಾರ್ಮಿಕನೂ ವಿದ್ವತ್ಪ್ರಿಯನೂ ಪಾಂಡ್ಯದೇಶಾಧಿಪನೂ ಆದ ವಲ್ಲಭದೇವನು ರಾಜನು.

ಆತನು ಒಂದು ದಿನ ರಾತ್ರಿ ನಗರ ಪರಿಶೋಧನೆಗಾಗಿ ರಸೆಯಲ್ಲಿ ಹೋಗುತ್ತಿರಲು ಒಂದು ಮನೆಯ ಜಗುಲಿಯಮೇಲೆ ಮಲಗಿದ್ದ ಒಬ್ಬ ಬ್ರಾಹ್ಮಣನನ್ನು ಕಂಡನು. ಕೂಡಲೇ ಅವನನ್ನು ವಿಚಾರಿಸಿದನು. ತೀರ್ಥಯಾತ್ರೆಗಾಗಿ ಹೊರಟು ಸೇತುಸ್ನಾನಕ್ಕೆ ಹೋಗುವುದಕ್ಕಾಗಿ ಅಲ್ಲಿ ತಂಗಿದ್ದನು.ಈ ವಿಚಾರವು ತಿಳಿದು ಬಹಳ ಸಂತುಷ್ಟನಾಗಿ ರಾಜನು ಆತ್ಮಹಿತವನ್ನು ಬೋಧಿಸಬೇಕೆಂದು ಕೇಳಲು ಆ ಬ್ರಾಹ್ಮಣನು 'ವರ್ಷಾರ್ಥಮಷ್ಟೌ ಪ್ರಯತೇತ ಮಾಸಾನ್ ನಿಶಾರ್ಥ ಮರ್ಧಂ ದಿವಸಂಯತೇತ। ವಾರ್ಧಕ್ಯಹೇತೋರ್ವಯಸಾ ನವೇನ ಪರತ್ರ ಹೇತೋರಿಹ ಜನ್ಮನಾಚ॥"- ಎಂದು ಹೇಳಿದನು. ಅದನ್ನು ಕೇಳಿ ಮನುಷ್ಯನು ದೃಷ್ಟಾದೃಷ್ಟ ಗಳನ್ನು ಸಾಧಿಸಬೇಕು. ಅದರಲ್ಲಿ ದೃಷ್ಟದ ವಿಚಾರವಾಗಿ ಯಾವ ತೊಂದರೆಯೂ ಇಲ್ಲ, ಅದೃಷ್ಟವನ್ನು ಹೇಗೆ ಸಾಧಿಸಬೇಕು? ಎಂದು ಯೋಚಿಸಿ ಸಂಪತ್ಪುತ್ರನೆಂಬ ತನ್ನ ಪುರೋಹಿತನನ್ನು ಕರೆಸಿ ಕೇಳಿದನು. ಆತನು 'ಸಮಸ್ತ ದೇಶಗಳಿಂದಲೂ ವಿದ್ವಾಂಸರನ್ನು ಕರೆಸಿ ವಿದ್ವತ್ಸಭೆಯನ್ನು ಏರ್ಪಡಿಸಿ ಪರತತ್ತ್ವವನ್ನು ನಿರ್ಣಯಿಸಿ ಅದನ್ನು ಸಾಧಿಸಬೇಕು' ಎಂದನು. ಆಗ ರಾಜನು ಎಲ್ಲ ದೇಶಗಳಿಂದಲೂ ಪಂಡಿತರನ್ನು ತೋರಣಸ್ತಂಭದ ಮೇಲೆ ವಿದ್ಯಾಶುಲ್ಕವನ್ನು ಕಟ್ಟಿಸಿ ಯಾರು ಪರತತ್ತ್ವವನ್ನು ನಿರ್ಣಯಿಸುವವರೋ ಅವರು ಈ ವಿದ್ಯಾಶುಲ್ಕವನ್ನು ಪಡೆಯಬಹುದು ಎಂದು ತಿಳಿಸಿದನು.

ಆಗ ವಿಲ್ಲಿಪುತ್ತೂರಿನ ವಟಪತ್ರಶಾಯಿಯಾದ ದೇವನು ಯೋಚಿಸಿದನು

"ಪ್ರಪಂಚವು ಪರತತ್ತ್ವವನ್ನು ತಿಳಿಯದೇ ಅಜ್ಞಾನದಲ್ಲಿ ಮುಳುಗಿ ತೊಳಲುತ್ತಿರುವುದು. ಆದುದರಿಂದ ಭಟ್ಟನಾಥನಿಂದ ವಿಷ್ಣುಪರತತ್ತ್ವವನ್ನು ಜಗತ್ತಿಗೆ ತೋರಿಸಿ ಜಗತ್ತನ್ನು ಉದ್ಧರಿಸಬೇಕು' ಎಂದು ಯೋಚಿಸಿ ಭಟ್ಟನಾಥನಿಗೆ ಕನಸ್ಸಿನಲ್ಲಿ ಕಾಣಿಸಿಕೊಂಡು 'ಎಲೈ ಭಟ್ಟನಾಥನೆ ಮಧುರಾನಗರಿಯಲ್ಲಿ ನಡೆಯುವ ವಿದ್ವತ್ಸಭೆಗೆ ನೀನು ಹೋಗು. ವಿಷ್ಣುವೇ ಪರತತ್ತ್ವವೆಂದು ಪ್ರತಿಪಾದಿಸು. ತೋರಣಸ್ತಂಭಕ್ಕೆ ಕಟ್ಟಿರುವ ವಿದ್ಯಾಶುಲ್ಕವನ್ನು ಗೆದ್ದುಕೊಂಡು ಬಾ' ಎಂದು ಅಪ್ಪಣೆ ಮಾಡಿದನು. ಭಟ್ಟನಾಥನು 'ಅದು ವಿದ್ಯಾಶುಲ್ಕ, ನನಗೆ ವಿದ್ಯೆಯೆಂದರೇನೋ ಗೊತ್ತಿಲ್ಲ, ನಾನು ಹೇಗೆ ಹೋಗಲಿ' ಎಂದನು. ಪರಮಾತ್ಮನು ಇದಕ್ಕಾಗಿ ನೀನು ಚಿಂತಿಸಬೇಡ. ಕರ್ತೃವು ನಾನು. ನೀನು ಹೋಗು ಇದು ನನ್ನ ಇಷ್ಟ'- ಎನಲು ಭಟ್ಟನಾಥನು ಭಗವಂತನ ಆಜ್ಞೆಯನ್ನು ಶಿರಸಾವಹಿಸಿ ಬ್ರಾಹ್ಮಮುಹೂರ್ತದಲ್ಲಿ ಎದ್ದು ತನ್ನ ಆಹ್ನಿಕಗಳನ್ನು ಮುಗಿಸಿಕೊಂಡು ಮಧುರಾನಗರಿಗೆ ಬಂದು ವಿದ್ವದ್ಗೋಷ್ಠಿಯ ಸಮೀಪಕ್ಕೆ ಬರುತ್ತಿದ್ದನು. ದೂರದಿಂದಲೇ ರಾಜನೂ ಪುರೋಹಿತನೂ ಬರುತ್ತಿರುವ ಈತನ ತೇಜಸ್ಸನ್ನು ಕಂಡು ಭಕ್ತಿಪುರಸ್ಸರವಾಗಿ ಸ್ವಾಗತಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿ ಉಪಚರಿಸಿದರು. ಅವನ ಈ ಗೌರವವನ್ನು ಕಂಡು ಸಹಿಸಲಾರದ ಪಂಡಿತರು'ಎಲೈ ರಾಜನೇ ಇವನಿಗೇಕಿಷ್ಟು ಗೌರವ? ವೇದದ ಅಕ್ಷರಗಳಾದರೂ ಇವನ ಕಿವಿಗೆ ಬಿದ್ದಿವೆಯೋ ಇಲ್ಲವೋ. ಇವನು ಎಂದೂ ಸಂಧ್ಯಾದಿಕ್ರಿಯೆಗಳನ್ನು ಮಾಡಿದವನಲ್ಲ, ನಿರಕ್ಷರನಾದ ಇವನಿಗೆ ಗಾಯತ್ರಿ ಎಂದರೆ ಏನೆಂಬುದೂ ಗೊತ್ತಿರಲಾರದು. ಇವನ ವೃತ್ತಿಯನ್ನಂತೂ ಕೇಳಬೇಕಾದುದೇ ಇಲ್ಲ, ಶೂದ್ರನಂತೆ ತೋಟದಲ್ಲಿ ಹೂವನ್ನು ಬೆಳೆದು ಮಾಲೆಯನ್ನು ಮಾಡುತ್ತ ಅದನ್ನು ಶೌರಿಗೆ ಒದಗಿಸುತ್ತ ಜೀವಿಸುತ್ತಾನೆ. ಬ್ರಾಹ್ಮಣರಿಗೆ ಮುಂಜುಟ್ಟು ನಿಕೃಷ್ಟವಾದುದು. ಇಂತಹವನನ್ನು ಈ ನೆರೆದ ಸಭೆಯಲ್ಲಿ ವಿದ್ವದ್ಗೋಷ್ಠಿಯಲ್ಲಿ ಸಿಂಹಾಸನದಲ್ಲಿ ಕುಳ್ಳಿರಿಸಿ ಪೂಜಿಸುವುದೆಂದರೆ ಇದಕ್ಕಿಂತಲೂ ಬೇರೆ ಅನ್ಯಾಯವು ಮತ್ತಾವುದು? ಎಂದು ಮೂದಲಿಸಿದರು. ಆದರೆ ಪುರೋಹಿತನಾದ ಸಂಪತ್ಪುತ್ರನು ಎಲ್ಲರನ್ನೂ ಗದರಿಸಿ ಭಟ್ಟನಾಥನಿಗೆ ನಮಸ್ಕರಿಸಿ 'ಎಲೈ ಜ್ಞಾನಿಯೇ ಈ ಪಂಡಿತರ ಇದಿರಿನಲ್ಲಿಯೇ ಶಿಷ್ಯನಾದ ನನಗೆ ವೇದಾಂತದ ಪ್ರತಿಪಾದ್ಯವಾದ ಪರತತ್ತ್ವವನ್ನು ಉಪದೇಶಿಸಬೇಕು' ಎಂದು ಪ್ರಾರ್ಥಿಸಿದನು. ಭಟ್ಟನಾಥನು ಮನಸ್ಸಿನಲ್ಲಿ ಮುಕುಂದನನ್ನು ನೆನೆಯಲು ಎಲ್ಲ ವಿಚಾರಗಳು ಹಸ್ತಾಮಲಕದಂತೆ ಗೋಚರಿಸಿದವು. ಹಿಂದೆ ಬ್ರಹ್ಮನ ಅನುಗ್ರಹದಿಂದ ವಾಲ್ಮೀಕಿ ಮಹರ್ಷಿಗೆ ಶ್ರೀರಾಮನ ಸಮಸ್ತ ವಿಚಾರಗಳು ತಿಳಿದಂತೆಯೂ ಶ್ರೀಮನ್ನಾರಾಯಣನ ಶಂಖಸ್ಪರ್ಶದಿಂದ ಧ್ರುವನು ಪರಮಜ್ಞಾನಿ ಯಾದಂತೆಯೂ ಭಟ್ಟನಾಥನಿಗೆ ಪರಮಾತ್ಮನ ಸ್ಮೃತಿಯೇ ಸರ್ವಾರ್ಥ ಪ್ರಕಾಶಕವಾಯಿತು. ಭಟ್ಟನಾಥನು ಸಾಕ್ಷಾದ್ವೇದಸ್ವರೂಪನಾದ ಗರುಡನ ಅಂಶದಿಂದ ಹುಟ್ಟಿದವನು. ಇದರ ಮೇಲೆ ಪರಮಾತ್ಮನ ಅನುಗ್ರಹ. ಇವೆರಡೂ ಸೇರಿದ ಮೇಲೆ ಹೇಳುವುದೇನಿರುವುದು. ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಾದಿಗಳಿಗೆ ವಿರೋಧವಿಲ್ಲದಂತೆ ಅವ್ಯಾಹತವಾಗಿ ವಾಗ್ಧಾರೆಯು ಹೊರಟಿತು. ಎಲ್ಲರೂ ಚಿತ್ರದಲ್ಲಿ ಬರೆದವರಂತೆ ಇದ್ದರು. ಅದೆಲ್ಲವನ್ನೂ ಹೇಳುವುದೆಲ್ಲಿ ಸಾಧ್ಯ? ಆದರೂ ಗುರುಕಟಾಕ್ಷದಿಂದ ಒಂದೆರೆಡು ಮಾತುಗಳನ್ನು ಹೇಳುವೆನೆಂದು ಪರಾಶರಭಟ್ಟರು ಹೇಳಲಾರಂಭಿಸಿದರು.-'ಸರ್ವಾರ್ಥಾವೇದ ಗರ್ಭಸ್ಥಾ ವೇದಶ್ಚಾಷ್ಟಾಕ್ಷರೇಸ್ಥಿತಃ।

ಅಷ್ಟಾಕ್ಷರಸ್ತು ಪ್ರಣವೇ ಅಕಾರೆ ಪ್ರಣವಃಸ್ಥಿತಃ॥ ಯೋವೇದಾದೌಸ್ವರಃ ಪ್ರೋಕ್ತೋ ವೇದಾಂತೇ ಚ ಪ್ರತಿಷ್ಠಿತಃ। ತಸ್ಯ ಪ್ರಕೃತಿಲೀನಸ್ಯ ಯಃ ಪರಸ್ಸಮೇಶ್ವರಃ॥ ಸಮಸ್ತಶಬ್ದಮೂಲತ್ವಾದಕಾರಸ್ಯ ಸ್ವಭಾವತಃ। ಸಮಸ್ತ ವಾಚ್ಯಮೂಲತ್ವಾಬ್ರಹ್ಮಣೋಽಪಿ ಸ್ವಭಾವತಃ। ವಾಚ್ಯವಾಚಕ ಸಂಬಂಧಸ್ತಯೋರರ್ಥಾ ತ್ಪ್ರತೀಯತೇ॥ ಅಕ್ಷರಾಣಾಂಮಕಾರೋಸ್ಮಿ ಗೀತಾಚಾರ್ಯೇಣ ಭಾಷಿತಮ್। ಅಕಾರಏವ ಸರ್ವಾತ್ಮಾಹ್ಯಕಾರೋ ವಿಷ್ಣುವಾಚಕಃ। ಅಕಾರ ವಾಚ್ಯಸ್ತ್ರೈವಂ ವಿಷ್ಣುರೇವೇತಿ ಗೀಯತೇ। ಅಕಾರ ವಾಚ್ಯೋ ಭಗವಾನ್‌ವಿಷ್ಣುರ್ನಾರಾಯಣಃ ಪರಃ। ಸರ್ವ ವೇದಾಂತ ವಾಕ್ಯೈಶ್ಚ ಸರ್ವಸ್ಮಾತ್ ಪರಉಚ್ಯತೇ॥ ಜಗಜ್ಜನ್ಮಸ್ಥಿತಿಲಯಾಃ ಪರತತ್ವಸ್ಯ ಸೂಚಕಾಃ। ಅತೋವಧಾರಣದ್ವೈಶ್ಚ ಧಾತ್ವರ್ಥೈಃ ಶ್ರೀಪತೇಸ್ಸ್ಫುಟಮ್। ಯತೋವೇತ್ಯಾದಿ ವಾಕ್ಯಾನಿ ತಸ್ಯೈವಾಪಾದಕಾನಿಚ। ಏವಂ ಜನ್ಮಾದಿಹೇತುತ್ವಂ ಶ್ರುತಿಸಿದ್ಧಂ ಹರೇಃ ಕಿಲ। ನಾರಾಯಣಾ ನುವಾತಾದಿ ವೇದಾಂತ ವಚನೈಸ್ತತಃ। ನಿಶ್ರೇಯಸ ಪ್ರದಾತೃತ್ವಂ ಮುಮುಕ್ಷೋಪಾಸ್ಯತಾನಘ। ತಸ್ಯೈವಾಕಾರ ವಾಚ್ಯಸ್ಯ ಶ್ರೀಹರೇಃ ಪ್ರತಿಪಾದಿತಾ॥ ವಿಷ್ಣೋಸ್ಸಕಾಶಾದುದ್ಭೂತಂ ಜಗತ್ತತ್ರೈವಚಸ್ಥಿತಮ್। ಸ್ಥಿತಿಸಂಯಮ ಕರ್ತಾಽಸೌ ಜಗತೋಽಸ್ಯ ಜಗಚ್ಚಸಃ। ನಾರಾಯಣಾತ್ಪರೋ ದೇವೋ ನಭೂತೋ ನಭವಿಷ್ಯತಿ। ಏತದ್ರಹಸ್ಯಂ ವೇದಾನಾಂ ಪುರಾಣಾಂ ಚ ಸಮ್ಮತಂ॥ ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯಭುಜಮುಚ್ಯತೇ॥ ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ।

ಈ ರೀತಿಯಾಗಿ ಸಪ್ರಮಾಣವಾದಿ ಮಾತುಗಳನ್ನಾಡುತ್ತಿರಲು ವಿದ್ಯಾಶುಲ್ಕವು ತಾನಾಗಿಯೇ ಕಳಚಿ ಬಿದ್ದಿತು. ಭಟ್ಟನು ಸಂತುಷ್ಟನಾಗಿ ಅದನ್ನು ಸ್ವೀಕರಿಸಿದನು. ಮೊದಲು ದ್ವೇಷಿಸುತ್ತಿದ್ದವರೂ ಕೂಡ ಆತನನ್ನು ಭಕ್ತಿಯಿಂದ ನಮಸ್ಕರಿಸಿದರು. ಆಗ ರಾಜನು ಭಟ್ಟನಾಥನ ಹೃದಯದಲ್ಲಿ ವಿಷ್ಣುವಿದ್ದುದರಿಂದ 'ವಿಷ್ಣುಚಿತ್ತ'ನೆಂದು ಅವನಿಗೆ ಹೆಸರಿಟ್ಟನು ಮತ್ತು ಆನೆಯಮೇಲೆ ಕುಳ್ಳಿರಿಸಿ ದಿವ್ಯವಾದ ಛತ್ರ ಚಾಮರಾದಿಗಳಿಂದ ಸೇವಿಸುತ್ತ ಮೆರೆವಣಿಗೆ ಮಾಡಿಸುತ್ತಿದ್ದನು. ಬ್ರಹದ್ರಥಾರೂಢನಾದ ಪುತ್ರನನ್ನು ತಂದೆತಾಯಿಗಳು ನೋಡಿ ಆನಂದ ಪಡುವಂತೆ, ವಿಷ್ಣುಚಿತ್ತನನ್ನು ನೋಡಲು ಜಗಜ್ಜನನೀಜನಕರಾದ ಲಕ್ಷ್ಮೀನಾರಾಯಣರು ದಿವ್ಯಾಭರಣಗಳಿಂದ ಶೋಭಿಸುತ್ತ ಗರುಡನನ್ನೇರಿ ಅಂತರಿಕ್ಷದಲ್ಲಿ ಕಾಣಿಸಿಕೊಂಡರು. ಆತನ ಕೃಪೆಯಿಂದ ಸಂಪತ್ಪುತ್ರನೇ ಮೊದಲಾದವರು ಭಗವದ್ದರ್ಶನವನ್ನು ಹೊಂದಿ ಕೃತಾರ್ಥರಾದರು. ಭಟ್ಟನಾಥನು ಆ ದಿವ್ಯಮಂಗಳವಿಗ್ರಹವನ್ನು ಕಂಡು ಯಾವ ರೂಪರಾಶಿ ಯನ್ನು ಸೂರಿಗಳು ಯಾವಾಗಲೂ ಪರಮಪದದಲ್ಲಿ ಕಾಣುವರೋ ಅಂತಹ ರೂಪವು ಕಲಿಭೂಯಿಷ್ಟವಾದ ನರಕಸಮಾನವಾದ ಈ ಲೋಕದಲ್ಲಿ ಎಲ್ಲಿ ನಾಶಹೊಂದುವುದೋ ಎಂಬ ಚಿಂತೆಯಿಂದ ಪ್ರೇಮಪರವಶನಾಗಿ ಪರಮಾತ್ಮನಿಗೆ ವಂದನೆಯನ್ನು ಮಾಡದೆ ಪರಮಾತ್ಮನಿಗೆ ಮಂಗಳಾಶಾಸನ ಮಾಡತೊಡಗಿದನು. ಅದಕ್ಕಾಗಿ ಆನೆಗೆ ಕಟ್ಟಿದ್ದ ಎರಡು ಘಂಟೆಗಳನ್ನೇ ತಾಳವನ್ನಾಗಿ ಉಪಯೋಗಿಸಿಕೊಂಡನು. ಲೋಕಹಿತಾರ್ಥವಾದ ಆ ಮಂಗಳಾಶಾಸನ (೧೨) ಪದ್ಯಗಳು ಇಂದಿಗೂ ಲೋಕದಲ್ಲಿ ರೂಢಿಯಲ್ಲಿವೆ. ಈ ರೀತಿಯಾಗಿ ವಿಷ್ಣುಚಿತ್ತನಿಂದ ಆಶೀರ್ವಾದವನ್ನು ಪಡೆದು ಶ್ರೀಮನ್ನಾರಾಯಣನು ಪರಮಪದಕ್ಕೆ ತೆರಳಿದನು.

ಇತ್ತ ವಿಷ್ಣುಚಿತ್ತನು ತನ್ನ ಶಿಷ್ಯತ್ವವನ್ನು ವಹಿಸಿದ ರಾಜನೇ ಮೊದಲಾದವರಿಂದ ಸತ್ಕರಿಸಲ್ಪಟ್ಟು ವಿಲ್ಲಿಪುತ್ತೂರಿಗೆ ಹೊರಟನು. ವಟಪತ್ರಶಾಯಿಯು ಆತನನ್ನು ಎದುರು

ಗೊಳ್ಳಲು ಸಮಸ್ತವೈಭವವನ್ನು ಕಳುಹಿಸಲು ಅದರೊಡನೆ ದೇವಾಲಯಕ್ಕೆ ಬಂದು ತೀರ್ಥಪ್ರಸಾದವನ್ನು ಸ್ವೀಕರಿಸಿ, ತಾನು ಗೆದ್ದು ತಂದಿದ್ದ ಶುಲ್ಕವನ್ನು ಪರಮಾತ್ಮನಿಗೆ ಅರ್ಪಿಸಿ ಎಂದಿನಂತೆ ಮಾಲಾಕೈಂಕರ್ಯನಿರತನಾಗಿದ್ದನು. ಮತ್ತು ಕೃಷ್ಣನ ಸೌಂದರ್ಯ ಸೌಕುಮಾರ್ಯ ಸೌಲಭ್ಯಾದಿಗಳನ್ನು ನೆನೆಯುತ್ತ ಗೋಪಿಯು ಕೃಷ್ಣನನ್ನು ನೆನೆಯುವಂತೆ ತದೇಕಚಿತ್ತನಾಗಿ ಅನುಭವಿಸಿ ಲೋಕೋಜ್ಜೀವನಕ್ಕಾಗಿ "ಭಟ್ಟನಾಥಗೀತೆ" ಎಂಬ ದ್ರಾವಿಡ ಪ್ರಬಂಧವನ್ನು ರಚಿಸಿದನು.

ಅನಂತರ ವೇದಾಂತಿಯು 'ಭಟ್ಟನಾಥನಿಗೆ ಇಂತಹ ಮಹತ್ವವು ಹೇಗೆ ಬಂದಿತೆಂದು' ಕೇಳಲು, ಭಟ್ಟರು 'ಆತನು ಯಾವಾಗಲೂ ಪರಾತ್ಪರ ವಸ್ತುವಿನಲ್ಲಿಯೇ ಪ್ರೇಮಪರವಶನಾಗಿ ದ್ದುದರಿಂದಲೂ ಆ ಮಹತ್ವವು ಬಂದಿತು. ಅವನಿಂದ ರಚಿತವಾದ ಮಂಗಳಾಶಾಸನ ಪದ್ಯಗಳು ಪ್ರಣವದಂತೆ ಶ್ರೇಷ್ಠವಾದುದು. ಶ್ರೀವೈಷ್ಣವತ್ವಸಿದ್ಧಿಗೆ ಅದು ಮೂಲವಾದುದು. ಅದನ್ನು ಅವಶ್ಯವಾಗಿಯೂ ಮೊದಲು ಪಠಿಸಬೇಕಾದುದು ಯುಕ್ತವು'- ಎಂದು ಹೇಳಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ವಿಷ್ಣುಪರತತ್ವ ನಿರ್ಣಯವೆಂಬ ಎಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

## ೯೦

ಜನಕನು ಉಳುತ್ತಿದ್ದಾಗ ಸೀತೆಯು ಸಿಕ್ಕಿದಂತೆ ಒಂದು ದಿನ ವಿಷ್ಣುಚಿತ್ತನು ಹೂವುಗಳನ್ನು ಆರಿಸುತ್ತ ಒಂದು ತುಲಸಿ ಗಿಡ್ಡೆಯನ್ನು ಅಗೆಯುತ್ತಿರಲು ದಿವ್ಯವಾದ ಒಂದು ಹೆಣ್ಣುಮಗುವು ಸಿಕ್ಕಿತು. ಅದನ್ನು ಮನೆಗೆ ತಂದು ವಾತ್ಸಲ್ಯದಿಂದ ಸಲಹಿದನು. ಭೂಸುರರನ್ನು ಕರೆಸಿ ಗೋದಾದೇವಿಯೆಂದು (ಆಂಡಾಳ್) ನಾಮಕರಣವನ್ನು ಮಾಡಿಸಿದನು. ಈಕೆಯೇ ಲಕ್ಷ್ಮಿಯ ಅಂಶದಿಂದ ಹುಟ್ಟಿದ ಗೋದಾದೇವಿ.

ಗೋದಾದೇವಿಯು ಹುಟ್ಟಿನಿಂದಲೇ ನಿರತಿಶಯವಾದ ಜ್ಞಾನ ಭಕ್ತ್ಯಾದಿ ಗುಣಗಳುಳ್ಳವಳು ಹಾಗೂ ಅಲಂಕಾರ ಪ್ರಿಯಳು. ತನ್ನ ತಂದೆಯು ಶೌರಿಗಾಗಿ ಕಟ್ಟಿ ಬುಟ್ಟಿಯಲ್ಲಿಡುವ ಹೂಮಾಲೆಗಳನ್ನು ಗೋದೆಯು ಪ್ರತಿದಿನವೂ ತನ್ನ ತಂದೆಗೆ ತಿಳಿಯದಂತೆ ಮುಡಿದು ಮೊದಲಿನಂತೆಯೇ ಅದರಲ್ಲಿ ಇಟ್ಟುಬಿಡುತ್ತಿದ್ದಳು. ಒಂದು ದಿನ ತಂದೆಗೆ ಇದು ತಿಳಿಯಿತು. ಮೃದು ಮಾತುಗಳಿಂದಲೇ ಆಕೆಯನ್ನು ಸಮಾಧಾನಪಡಿಸಿ ಇನ್ನು ಮುಂದೆ ಹೀಗೆಮಾಡಬಾರದೆಂದು ಎಚ್ಚರಿಸಿದನು. ಆ ದಿನ ಆ ಮಾಲಿಕೆಗಳನ್ನು ಶೌರಿಗೆ ಅರ್ಪಿಸಲು ಅವನಿಗೆ ಮನಸ್ಸು ಬರಲಿಲ್ಲ. ಆದರೆ ರಾತ್ರಿ ಕನಸಿನಲ್ಲಿ ಪರಮಾತ್ಮನಿಗೂ ಭಟ್ಟನಾಥನಿಗೂ ಈ ರೀತಿ ಸಂಭಾಷಣೆ ನಡೆಯಿತು

ಭಗವಾನ್:-- ವಿಷ್ಣುಚಿತ್ತಾ, ನೀನು ನಿತ್ಯವೂ ಭಕ್ತಿಯಿಂದ ಅರ್ಪಿಸುತ್ತಿದ್ದ ಮಾಲೆಗಳನ್ನು ಇಂದೇಕೆ ಅರ್ಪಿಸಲಿಲ್ಲ?

**ವಿಷ್ಣುಚಿತ್ತ:--** ಅವುಗಳನ್ನು ನನ್ನ ಮಗಳು ಮುಡಿದು ತೆಗೆದಿಟ್ಟಿದ್ದಳು. ಆದುದರಿಂದ

ಅವುಗಳನ್ನು ಅರ್ಪಿಸಲಿಲ್ಲ.
ಭಗವಾನ್:-- ಇದಕ್ಕಾಗಿ ನೀನು ಹಾಗೆ ಮಾಡಬಾರದು. ಅದನ್ನೇ ನನಗೆ ಅರ್ಪಿಸು. ಅವಳು ಮುಡಿದ ಹೂವುಗಳಾದರೆ ನನಗೆ ಅತ್ಯಂತ ಪ್ರಿಯವಾಗಿರುತ್ತದೆ. ಅದನ್ನೇ ನನಗೆ ದಿನವೂ ಅರ್ಪಿಸು.

ಈ ಮಾತುಗಳನ್ನು ಕೇಳಿ ವಿಷ್ಣುಚಿತ್ತನು ಗೋದಾದೇವಿಯು ಸಾಕ್ಷಾಲ್ಲಕ್ಷ್ಮಿಯೆಂದು ತಿಳಿದು, ಮೊದಲಿನಿಂದಲೇ ಅವಳ ಜ್ಞಾನ, ಭಕ್ತಿಗಳಿಗೆ ಬೆರಗಾಗಿದ್ದವನು ಈಗ ಅವಳಲ್ಲಿ ಅತ್ಯಂತ ಪೂಜ್ಯಭಾವನೆಯನ್ನಿಟ್ಟು ಮತ್ತು 'ಶೂಡಿ ಕೊಡುತ್ತ ನಾಚ್ಚಿಯಾರ್'ಎಂದು (ಅಂದರೆ ಮುಡಿದಹೂವು ಕೊಟ್ಟ ದೇವಿ) ಅವಳ ಹೆಸರು ಅಂದಿನಿಂದ ಪ್ರಸಿದ್ಧವಾಯಿತು.

ಗೋದಾದೇವಿಯು ಸೌಂದರ್ಯ ಲಾವಣ್ಯಾದಿಗಳೊಡನೆ ದಿನೇದಿನೇ ಬೆಳೆಯುತ್ತಿದ್ದಂತೆ ಶ್ರೀಕೃಷ್ಣನಲ್ಲಿ ಆಕೆಯ ಪ್ರೇಮವೂ ಹೆಚ್ಚುತ್ತಿತ್ತು. ಇದು ನ್ಯಾಯವೇ ಆಗಿತ್ತು. 'ಪುರುಷರಿಗಿಂತಲೂ ಸ್ತ್ರೀಯರಿಗೆ ಶ್ರೀವಿಷ್ಣುವಿನಲ್ಲಿ ಪ್ರೀತಿಯು ಹೆಚ್ಚು. ನಂದನೇ ಮೊದಲಾದವರಿಗಿಂತಲೂ ಗೋಪಿಯರಿಗೆ ಪ್ರೇಮವು ಹೆಚ್ಚು' ಎಂದು ವ್ಯಾಸರು ಹೇಳಿರುತ್ತಾರೆ. ಗೋಪಕುಮಾರಿಯು ಹೇಮಂತ ಋತುವಿನ ಮೊದಲನೆಯ ಮಾಸದಲ್ಲಿ ಶ್ರೀಕೃಷ್ಣನನ್ನು ಕುರಿತು ವ್ರತ ಆಚರಿಸಿದಂತೆ ಗೋದಾದೇವಿಯು ವ್ರತವನ್ನು ಆಚರಿಸುತ್ತಿದ್ದಳು. ಹಾಗೆಯೇ ಭಗವದ್ಭಕ್ತಿಯಲ್ಲಿ ಪರವಶಳಾಗಿ 'ಲಕ್ಷ್ಮೀಗೀತೆ' (ನಾಚ್ಚಿಯಾರ್ ತಿರುಮೊಳಿ)'ತಿರುಪ್ಪಾವೈ' ಎಂಬ ಎರಡು ಸ್ತೋತ್ರ ಗ್ರಂಥಗಳನ್ನು ರಚಿಸಿದಳು.

ಹೀಗೆ ಭಗವದ್ಭಕ್ತಿವಿವಶಳಾಗಿಯೂ ಯೌವನವತಿಯೂ ಆದ ಮಗಳನ್ನು ನೋಡಿ ವಿಷ್ಣುಚಿತ್ತನು ವಿವಾಹ ಚಿಂತೆಗೊಳಗಾದನು. ಚಿಂತೆಯನ್ನು ಮಾಡುತ್ತಿರುವ ತಂದೆಯನ್ನು ಕುರಿತು ಗೋದಾದೇವಿಯು ಚಿಂತಿಸಬೇಕಾದುದಿಲ್ಲವೆಂದೂ ಪರಮಾತ್ಮನೇ ತನ್ನ ಪತಿಯೆಂದೂ ಅವನನ್ನು ಹೊರತು ಯಾರನ್ನೂ ತಾನು ಮದುವೆಯಾಗುವುದಿಲ್ಲವೆಂದೂ ಆ ಭಾರವು ಕೃಷ್ಣನಿಗೆ ಸೇರಿದುದೆಂದೂ ತಿಳಿಸಿದಳು. ಆಗ ವಿಷ್ಣುಚಿತ್ತನು ಈ ಲೋಕದಲ್ಲಿ ಭಕ್ತರ ಅನುಗ್ರಹಕ್ಕಾಗಿಯೇ ೧೦೮ ದಿವ್ಯದೇಶಗಳಲ್ಲಿ ಅರ್ಚಾರೂಪದಿಂದ ಅವತರಿಸಿರುವ ಶ್ರೀವಿಷ್ಣುವಿನ ರೂಪಾಂತರಗಳನ್ನೂ, ಅವರ ಮಹಿಮೆಗಳನ್ನೂ, ವರ್ಣಿಸಿದನು. ಎಲ್ಲವನ್ನೂ ಕೇಳಿ ಆನಂದಭರಿತಳಾಗಿ ಕೊನೆಗೆ ಶ್ರೀರಂಗದಲ್ಲಿರುವ ಶ್ರೀರಂಗನಾಥನಲ್ಲಿಯೇ ನಟ್ಟ ಮನಸ್ಸುಳ್ಳವಳಾದಳು. ಮಗಳ ಸ್ಥೈರ್ಯವನ್ನು ಕಂಡು ವಿಷ್ಣುಚಿತ್ತನು ಗೋದಾಸ್ವಯಂವರವನ್ನು ಏರ್ಪಡಿಸಿದನು. ಅದಕ್ಕಾಗಿ ೧೦೮ ದಿವ್ಯದೇಶಗಳ ಪ್ರಭು(ವಿಷ್ಣುವಿನ ಬೇರೆ ಬೇರೆ ಅವತಾರ)ಗಳು ದಯಮಾಡಿಸಿದ್ದರು. ಅವರಲ್ಲಿ ರಂಗನಾಥನನ್ನೇ ಆಕೆಯು ವರಿಸಿದಳು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಧ್ವನಿಪುರಕ್ಕೆ ಶ್ರೀರಂಗೇಶಾದಿಗಳ ಆಗಮನವೆಂಬ ತೊಂಬತ್ತನೆಯ ಅಧ್ಯಾಯವು ಮುಗಿದುದು.

## ೯೧

ಮತ್ತೆ ಭಟ್ಟರು ಹೇಳತೊಡಗಿದರು. ಏಲೈ ವೇದಾಂತಿಯೇ ವಿಷ್ಣುಚಿತ್ತನು ತನ್ನ

ಮಗಳನ್ನು ರಂಗನಾಥನಲ್ಲಿಯೇ ಆಸಕ್ತಳಾಗಿರುವುದನ್ನು ಕಂಡು- 'ಅಲ್ಪನೂ ಮಾಲಾಕಾರನೂ ಆದ ನಾನೆಲ್ಲಿ? ಪರಾತ್ಪರನಾದ ಶ್ರೀಮನ್ನಾರಾಯಣನೆಲ್ಲಿ? ನನ್ನ ಮಗಳಾದರೋ ಆತನನ್ನು ಬಿಟ್ಟು ಬೇರೆ ಯಾರನ್ನೂ ಸ್ಮರಿಸುವುದಿಲ್ಲ. ಇದು ಹೇಗೆ ಸಾಧ್ಯ''- ಎಂದು ಚಿಂತಿಸುತ್ತಾ ಶ್ರೀಮನ್ನಾರಾಯಣನಲ್ಲಿಯೇ ಶರಣಾಗತನಾಗಿ ಮಲಗಿದ್ದನು. ಆಗ ಶ್ರೀರಂಗನಾಥನು ಸ್ವಪ್ನದಲ್ಲಿ ಕಾಣಿಸಿಕೊಂಡು -'ಎಲೈ ವಿಷ್ಣುಚಿತ್ತನೇ, ನೀನು ಚಿಂತಿಸಬೇಡ. ನೀನು ನಿನ್ನ ಮಗಳನ್ನು ಇಲ್ಲಿಗೆ ಕರೆದುಕೊಂಡು ಬಾ. ಎಲ್ಲರೂ ನೋಡುವಂತೆಯೇ ನಾನು ಆಕೆಯ ಪಾಣಿಗ್ರಹಣ ಮಾಡುವೆನು'-ಎಂದನು. ಇಂತಹ ಕನಸನ್ನು ಕಂಡು ಸಂತುಷ್ಟನಾದ ವಿಷ್ಣುಚಿತ್ತನು, ಗೋದಾದೇವಿಗೆ ಈ ವಿಚಾರವನ್ನು ತಿಳಿಸಿದನು. ಆಗ ಗೋದಾದೇವಿಯು ಕೃಷ್ಣನನ್ನು ರಾಧೆಯು ಭಾವಿಸುವಂತೆ, ಧನುರ್ಮಾಸದ ಬ್ರಾಹ್ಮಮುಹೂರ್ತದಲ್ಲಿ ಎದ್ದು ರಂಗನಾಥನನ್ನು ಹುಗ್ಗಿ ಮೊದಲಾದ ನೈವೇದ್ಯಗಳಿಂದಲೂ, ಅರ್ಚನೆ, ಆರತಿಗಳಿಂದಲೂ ಪೂಜಿಸುತ್ತಿದ್ದಳು. ಆ ಧನುರ್ಮಾಸದ ಒಂದೊಂದು ದಿನವೂ ಒಂದೊಂದು ಪಾಶುರ (ಪದ್ಯ)ದಂತೆ, ಮೂವತ್ತು ಪದ್ಯಗಳನ್ನು (ತಿರುಪ್ಪಾವೈ) ರಚಿಸಿ ಹಾಡಿದಳು. ಕೊನೆಯ ದಿನ ದೇವಿಗೆ ರಂಗನಾಥನು ಪ್ರತ್ಯಕ್ಷನಾಗಿ ಸಮಸ್ತ ಭೋಗಗಳನ್ನು ಅನುಗ್ರಹಿಸಿದನು. ಆದುದರಿಂದಲೇ ಅಂದಿನಿಂದ ಧನುರ್ಮಾಸದ ಕೊನೆಯ ದಿವಸ 'ಭೋಗಿ'- ಎಂದು ಕರೆಯಲ್ಪಟ್ಟಿತು. ಎಲ್ಲರೂ ''ಭೋಗಿ ಹಬ್ಬ''ವನ್ನು ಆಚರಿಸತೊಡಗಿದರು. ಪ್ರಸಿದ್ಧವಾದ ಹಬ್ಬದ ದಿನವಾಯಿತು. ಯಾರು ಗೋದಾದೇವಿ ಶ್ರೀರಂಗನಾಥರ ಈ ಕಲ್ಯಾಣ ಮಹೋತ್ಸವವನ್ನು ನಡೆಸುವವರೋ ಅವರು ಶ್ರೀಮಂತರಾಗುವರು. ಅವರಿಗೆ ನಿತ್ಯಕಲ್ಯಾಣವುಂಟಾಗುವುದು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೋದಾದೇವಿಗೆ ರಂಗೇಶ ಪ್ರತ್ಯಕ್ಷವೆಂಬ ತೊಂಬತ್ತೊಂದನೆಯ ಅಧ್ಯಾಯವು ಮುಗಿದುದು.

೯೨

## ಶ್ರೀರಂಗೇಶ ಗೋದಾಕಲ್ಯಾಣಮ್

ಅರ್ಚಾರೂಪಿಯಾದ ರಂಗನಾಥನಿಗೂ, ಮಾನವಿಯಾದ ಗೋದಾದೇವಿಗೂ ಮದುವೆಯ ವಿಚಾರದಲ್ಲಿ ಸಂದೇಹವನ್ನು ಪರಿಹರಿಸುತ್ತ ಭಟ್ಟಾಚಾರ್ಯರೆಂದರು-

ರಂಗನಾಥನ ಪ್ರತ್ಯಕ್ಷದಿಂದಲೂ, ಆತನಲ್ಲಿದ್ದ ನಿಶ್ಚಲವಾದ ಪ್ರೇಮದಿಂದಲೂ, ಗೋದಾದೇವಿಯು ನಿಶ್ಚಿಂತಳಾಗಿದ್ದಳು. ಒಂದು ದಿನ ರಂಗನಾಥನ ಪ್ರೇರಣೆಯಂತೆ ದೇವಾಲಯದ ಅಧಿಕಾರಿಗಳು ಛತ್ರಚಾಮರಾದಿ ಸಕಲ ವೈಭವಗಳಿಂದಲೂ, ಪಲ್ಲಕ್ಕಿಯನ್ನು ತೆಗೆಸಿಕೊಂಡು ವಿಲ್ಲಿಪುತ್ತೂರಿಗೆ ಹೋದರು. ಭಟ್ಟನಾಥನನ್ನು ಕಂಡರು; ಗೋದಾದೇವಿಯನ್ನು ಕರೆತರಬೇಕೆಂಬ ರಂಗನಾಥನ ಅಪ್ಪಣೆಯನ್ನು ಬಿನ್ನವಿಸಿದರು. ಆಶ್ಚರ್ಯಭರಿತನಾದ ಭಟ್ಟನಾಥನು ಎಲ್ಲರನ್ನೂ ಸ್ವಾಗತಿಸಿ ತನ್ನ ಶಿಷ್ಯನಾದ ಮಧುರಾಧಿಪತಿ ವಲ್ಲಭನಿಗೆ ಹೇಳಿ ಕಳುಹಿಸಿದನು. ಆತನು ಚತುರಂಗ ಬಲದೊಡನೆ ಹೊರಟು ಬರಲು, ಸಂಭ್ರಮದಿಂದ

ಎಲ್ಲರೂ ಶ್ರೀರಂಗಕ್ಕೆ ಹೊರಟರು. ಶ್ರೀರಂಗದಲ್ಲಿ ಸಂಭ್ರಮವೋ ಸಂಭ್ರಮ. ಸಪ್ತಪ್ರಾಕಾರಗಳಲ್ಲಿಯೂ ತಳಿರು ತೋರಣಗಳ ಅಲಂಕಾರ. ಶ್ರೀರಂಗವನ್ನು ಪ್ರವೇಶಿಸಿ ಗೋದಾದೇವಿಯು ಬರುತ್ತಿರಲು ಉತ್ಸವಮೂರ್ತಿಯಾದ 'ಸುಂದರವರ'ನು ಶಂತನು ಮಂಟಪದಲ್ಲಿ ಸಕಲ ಸನ್ಮಂಗಳಗಳಿಂದಲೂ ಶೋಭಿತನಾಗಿದ್ದು ಗೋದಾದೇವಿಯ ಪಾಣಿಗ್ರಹಣ ಮಾಡಿಕೊಂಡನು. ಅಲ್ಲಿಂದ ಮುಂದೆ ಆಕೆಯು ಶೇಷಶಾಯಿಯಾದ ಶ್ರೀರಂಗನಾಥನನ್ನು ನೋಡಲು ಅಂತಃಪುರಕ್ಕೆ ಹೋಗಿ ಮೋಹನಾಕಾರನಾದ ಶ್ರೀರಂಗನಾಥನನ್ನು ನೋಡಿ ನೋಡಿ ತೃಪ್ತಿಪಡಲೇ ಇಲ್ಲ. ಶೇಷಶಯನವನ್ನೇರಿ ರಂಗನಾಥನ ಪಾದಗಳ ಬಳಿಗೆ ಹೋದಳು. ಮುಂದೆ ಅವಳನ್ನು ಯಾರೂ ಕಾಣಲಿಲ್ಲ.

ರಂಗನಾಥನು ಭಟ್ಟನಾಥನನ್ನು ಕರೆದು 'ಸಮುದ್ರ ರಾಜನಂತೆ ನೀನೂ ನನಗೆ ಮಾವನು' ಎಂದು ಹೇಳಿ ತೀರ್ಥಪ್ರಸಾದಗಳಿಂದಲೂ, ಬಹುಮಾನಗಳಿಂದಲೂ, ಸತ್ಕರಿಸಿ ಎಂದಿನಂತೆ ವಿಲ್ಲಿಪುತ್ತೂರಿನಲ್ಲಿ ವಟಪತ್ರಶಾಯಿಯ ಕೈಂಕರ್ಯದಲ್ಲಿರಬೇಕೆಂದು ನಿಯಮಿಸಿ ಕಳುಹಿಸಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ರಂಗೇಶ ಗೋದಾಕಲ್ಯಾಣವೆಂಬ ತೊಂಬತ್ತೆರಡನೆಯ ಅಧ್ಯಾಯವು ಮುಗಿದುದು.

೯೩

ಅನಂತರ ವೇದಾಂತಿಯ ಇಚ್ಛೆಯಂತೆ ಭಟ್ಟರು ಭಕ್ತಾಂಘ್ರಿರೇಣುವಿನ (ತೊಂಡರಡಿಪ್ಪೊಡಿಯಾಳ್ವಾರ್) ಚರಿತ್ರೆಯನ್ನು ಹೇಳತೊಡಗಿದರು.

ಚೋಳಮಂಡಲದಲ್ಲಿ ಕಾವೇರಿ ತೀರದಲ್ಲಿ ಮಂಡಂಗುಡಿಯೆಂದು ಒಂದು ಪಟ್ಟಣ. ಅಲ್ಲ "ವೇದವಿಶಾರದ"ನೆಂಬ ಒಬ್ಬ ಬ್ರಾಹ್ಮಣ. ಆತನು ಪುತ್ರಾರ್ಥಿಯಾಗಿ ಮೇಲುಕೋಟೆಗೆ ಹೋಗಿ ಶ್ರೀಮನ್ನಾರಾಯಣನನ್ನು ಪ್ರಾರ್ಥಿಸಲು, ಆತನಿಗೆ ಕಾಲಕ್ರಮದಲ್ಲಿ ಒಂದು ಗಂಡು ಶಿಶುವು ಹುಟ್ಟಿತು. ಆತನು ನಾರಾಯಣನ ಅನುಗ್ರಹವೆಂದು ತಿಳಿದು ಕುಮಾರನಿಗೆ 'ವಿಪ್ರನಾರಾಯಣ'ನೆಂದು ನಾಮಕರಣ ಮಾಡಿದನು. ಚೌಲೋಪನಯನಾದಿ ಸಂಸ್ಕಾರಗಳೂ, ಪಂಚಸಂಸ್ಕಾರಗಳೂ ನಡೆದವು. ವಿಪ್ರನಾರಾಯಣನು ಕೇವಲ ವಿರಕ್ತನಾಗಿ ಶ್ರೀರಂಗನಾಥನ ದರ್ಶನಾಕಾಂಕ್ಷಿಯಾಗಿ ಶ್ರೀರಂಗಕ್ಕೆ ಹೊರಟನು.

ಅಲ್ಲಿಗೆ ಹೋಗಿ ಶ್ರೀರಂಗನಾಥನ ದರ್ಶನ ಮಾಡಿದ ಕೂಡಲೇ ಆತನ ಸೌಂದರ್ಯ ಲಾವಣ್ಯಾದಿಗಳಿಗೆ ಮುಗ್ಧನಾಗಿ ಒಂದು ಹೂದೋಟವನ್ನು ಮಾಡಿಕೊಂಡು, ಹೂವು, ತುಲಸೀ ಮಾಲಿಕೆಗಳಿಂದ ಭಗವತ್ಕೈಂಕರ್ಯವನ್ನು ನಿರಂತರವಾಗಿ ಮಾಡುತ್ತ ಬ್ರಹ್ಮಚರ್ಯಾಶ್ರಮದಲ್ಲಿಯೇ ಇದ್ದುಬಿಟ್ಟನು.

ಕರಂಬ ನಗರದಲ್ಲಿ ಅಳಿವೇಣಿ, ದೇವದೇವಿ ಎಂಬ ಇಬ್ಬರು ಅಕ್ಕತಂಗಿಯರಾದ ವೇಶ್ಯಾತರುಣಿಯರಿದ್ದರು. ದೇವದೇವಿಯು ತನ್ನ ಅಕ್ಕನೊಡನೆ ಒಂದು ಸಲ ಚೋಳರಾಜನನ್ನು ನೋಡುವುದಕ್ಕೆಂದು ಬಂದಳು. ನೋಡಿದ ಮಾತ್ರದಿಂದಲೇ ಮುಗ್ಧನಾದ ರಾಜನು ಅಪರಿಮಿತ

ವಾದ ಧನವನ್ನು ಕೊಟ್ಟನು. ದೇವದೇವಿಯು ಅಪರಿಮಿತವಾದ ಹಣವನ್ನು ಹೊಂದಿ ತನ್ನ ಊರಿಗೆ ಹೊರಟಳು. ಬರುತ್ತಾ ದಾರಿಯಲ್ಲಿ ವಿಶ್ರಮಿಸಿಕೊಳ್ಳಬೇಕೆಂದು ಯೋಚಿಸಿ ಕಾವೇರಿ ತೀರದಲ್ಲಿರುವ ವಿಪ್ರನಾರಾಯಣನ ರಮ್ಯವಾದ ಉಪವನವನ್ನು ಕಂಡಳು. ಅಲ್ಲಿಯೇ ಇಬ್ಬರೂ ನಿಂತರು. ಉಪವನದೊಳಕ್ಕೆ ಬರುತ್ತಲೇ ಅದರ ಕಂಪು ತಂಪುಗಳಿಂದ ಸರ್ವೇಂದ್ರಿಯಗಳೂ ತೃಪ್ತಿಪಟ್ಟವು. ಅದರ ಸೌಂದರ್ಯಾನುಭವದಲ್ಲಿಯೇ ದೇವದೇವಿಯು ತನ್ನನ್ನು ತಾನು ಮರೆತಿರಲು ಸುಂದರನಾದ ತರುಣನೊಬ್ಬನು ಕಂಡುಬಂದನು. ಆತನು ಊರ್ಧ್ವತ್ರಿಪುಂಡ್ರಗಳನ್ನು ಧರಿಸಿದ್ದನು. ಚಿಗುರಿನಂತಹ ಗಂಡು ಮೀಸೆಗಳು ಮುಖಕ್ಕೆ ಒಂದು ಸೌಂದರ್ಯವನ್ನು ಕೊಡುತ್ತಿದ್ದವು. ಕಂಠದಲ್ಲಿ ತುಲಸೀಮಣಿಯಹಾರ, ವಿಶಾಲವಾದ ಎದೆ, ಅಜಾನುಬಾಹು, ದಿವ್ಯವಾದ ತೇಜಸ್ವಿಯಾದ ಮುಖಮಂಡಲ. ಆ ತರುಣನು ಗಿಡಗಳಿಗೆ ಪಾತಿಯನ್ನು ಮಾಡಿ ನೀರೆರೆಯುತ್ತಿದ್ದನು. ಆತನ ಇಂತಹ ಸೌಂದರ್ಯವನ್ನು ಕಂಡು ಮನಸೋತ ದೇವದೇವಿಯು, ಆತನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಆತನ ಎದುರಿಗೆ ಹೋಗಿ ನಿಂತಳು. ಆತನು ಇದಾವುದನ್ನೂ ಗಮನಿಸದೆ ತನ್ನ ಕೆಲಸದಲ್ಲಿ ನಿರತನಾಗಿದ್ದನು. ಆಗ ದೇವದೇವಿಯು ಅಳಿವೇಣಿಯೊಡನೆ -'ನೋಡಕ್ಕ, ಇವನೇನು ಷಂಡನೋ? ಹುಚ್ಚನೋ? ನಾನು ಬಂದು ಎದುರಿಗೆ ನಿಂತರೂ ನೋಡದೇ ಇರುವ ಇವನನ್ನು ಏನೆಂದು ಹೇಳಬೇಕು'- ಎಂದು ಗರ್ವದಿಂದ ನುಡಿದಳು. ಅಳಿವೇಣಿಯು - ಈತನು ಷಂಡನೂ ಅಲ್ಲ, ಹುಚ್ಚನೂ ಅಲ್ಲ. ಕೇವಲ ಅಲ್ಪ ಮನುಷ್ಯನೂ ಅಲ್ಲ. ಮಹಾವಿರಕ್ತನೂ ರಂಗೇಶ ಕೈಂಕರ್ಯದಲ್ಲಿ ನಿರತನೂ ಆದ ಭಾಗವತೋತ್ತಮನು. ಲಕ್ಷಕೊಟ್ಟರೂ ನಿನ್ನಂತಹವರ ಕಡೆಗೆ ಈತನು ತಿರುಗಿ ನೋಡುವುದೇ ಇಲ್ಲ. ನಿನ್ನ ಬಲೆಗೆ ಬೀಳಲು ಚೋಳಭೂಪಾಲನಲ್ಲವಲ್ಲ?'-ಎಂದಳು. ಇದನ್ನು ಕೇಳಿ ಕುಪಿತಳಾದ ದೇವದೇವಿಯು 'ಹಾಗಾದರೆ ನನ್ನ ಸಾಮರ್ಥ್ಯವನ್ನು ನೋಡು. ನಿನಗೆ ತಿಳಿಯದೇ? ವಾತಾಹಾರ, ಪರ್ಣಾಹಾರಾದಿಗಳನ್ನು ಸೇವಿಸುವ ಮಹಾಯೋಗಿಗಳೇ ನನ್ನ ಮುಖವನ್ನು ನೋಡಿದ ಮಾತ್ರದಿಂದ ವಿಕಲೇಂದ್ರಿಯರಾಗುತ್ತಾರೆ. ಈತನು ಯುವಕನು; ಸುಂದರನು; ಕೋಮಲಾಂಗನು; ಯೌವನದ ಮೆಟ್ಟಿಲನ್ನು ಏರುತ್ತಿರುವವನು; ರಮ್ಯವಾದ ಈ ಉಪವನದಲ್ಲಿ ಏಕಾಕಿಯಾಗಿ ಇರುತ್ತಿರುವನು. ಇವನನ್ನು ವಶಪಡಿಸಿಕೊಳ್ಳುವುದು ನನಗಿದೆಷ್ಟರ ಕೆಲಸ!'- ಎಂದಳು. ಅಳಿವೇಣಿಯು - ನಿನ್ನ ಬೆಡಗು ಬಿನ್ನಾಣಗಳು ಈತನಲ್ಲಿ ನಡೆಯಲಾರವು. ಇದೋ ನೋಡು ಪ್ರತಿಜ್ಞೆಮಾಡಿ ಹೇಳುತ್ತೇನೆ. ಒಂದುವೇಳೆ ನೀನು ಅವನನ್ನು ವಶಪಡಿಸಿಕೊಳ್ಳುವಂತಾದರೆ, ನೀನು ನಮ್ಮ ವಾರಾಂಗನೆಯರಿಗೆಲ್ಲ ಮುಖ್ಯಸ್ಥಳೆಂದು ಒಪ್ಪಿಕೊಳ್ಳುವುದಲ್ಲದೆ ನಾನೇ ನಿನಗೆ ಆರು ತಿಂಗಳು ದಾಸಿಯಾಗಿರುವೆನು' ಎಂದಳು. ಅದಕ್ಕೆ ಪ್ರತಿಯಾಗಿ ದೇವದೇವಿಯೂ ಸಹ ತನ್ನ ಕಾರ್ಯದಲ್ಲಿ ತಾನು ವಿಫಲಳಾದರೆ ತಾನೇ ಆಕೆಯ ದಾಸಿಯಾಗಿ ಆರುತಿಂಗಳ ಕಾಲ ಇರುವುದಾಗಿ ಶಪಥ ಮಾಡಿದಳು. ಇದಾದ ಮೇಲೆ ತನ್ನ ಅಕ್ಕನನ್ನೂ ಇತರ ಪರಿವಾರವನ್ನೂ ತನ್ನ ಊರಿಗೆ ಕಳುಹಿಸಿ, ತಾನು ಮಾತ್ರ ಅಲ್ಲಿಯೇ ಉಳಿದಳು. ತನ್ನ ಎಲ್ಲ ಅಲಂಕಾರಗಳನ್ನು ತೆಗೆದಳು. ಕಾವಿಯ ಬಟ್ಟೆಯನ್ನುಟ್ಟು ಊರ್ಧ್ವಪುಂಡ್ರಗಳನ್ನು ಧರಿಸಿದಳು. ಮಹಾವಿರಕ್ತಳಂತೆ, ಆತನೆದುರಿಗೆ ಬಂದು ನಿಂತಳು.

ವಿಪ್ರನಾರಾಯಣನು ಆಕೆಯನ್ನು ಕಂಡು-'ನೀನು ಯಾರು? ಏತಕ್ಕೆ ಇಲ್ಲಿಗೆ ಬಂದಿರುವೆ?'- ಎಂದು ಕೇಳಿದನು. ಅದಕ್ಕೆ ಅವಳು-'ಎಲೈ ಮಹಾತ್ಮನೆ, ಅನೇಕ ಪಾಪದ ಫಲವಾಗಿ ನಾನು ವೇಶ್ಯೆಯರ ವಂಶದಲ್ಲಿ ಹುಟ್ಟಿರುತ್ತೇನೆ. ದಶಸೂನಿಸಮಶ್ಚ ಕ್ರೀ ದಶಚಕ್ರಿ ಸಮೋಧ್ವಜೀ। ದಶಧ್ವಜಿ ಸಮಾವೇಶ್ಯೇತ್ಯೇವಂ ಸಚ್ಛಾಸ್ತ್ರ ನಿರ್ಣಯಃ॥ ಎಂಬಂತೆ ನಾನು ಮಹಾ ನೀಚಳು. ಆದರೆ ಇಂತಹ ವಂಶದಲ್ಲಿ ಹುಟ್ಟಿದರೂ ಯಾವುದೋ ಒಂದು ಭಾಗ್ಯದಿಂದ ತಮ್ಮ ದರ್ಶನವಾಯಿತು. ನಮ್ಮ ವೃತ್ತಿಯನ್ನು ಬಿಟ್ಟು ಭಗವತ್ಕೈಂಕರ್ಯದಲ್ಲಿಯೂ ತಮ್ಮಂತಹ ಭಾಗವತರ ಕೈಂಕರ್ಯದಲ್ಲಿಯೂ ನಿರತಳಾಗಿರಬೇಕೆಂದು ನನ್ನ ಇಚ್ಛೆ. ನನ್ನ ತಾಯಿಯು ಮಾತ್ರ ನನ್ನನ್ನು ಕೆಟ್ಟದಾರಿಗೆ ಎಳೆಯಲು ಹಿಂಸಿಸುತ್ತಾಳೆ. ಆದುದರಿಂದ ನಮ್ಮ ಮನೆಯ ಸಂಬಂಧವನ್ನು ಬಿಟ್ಟು ತಮ್ಮ ಶಿಷ್ಯಳಾಗಿದ್ದು ಜನ್ಮವನ್ನು ಸಾರ್ಥಕಪಡಿಸಬೇಕೆಂದಿದ್ದೇನೆ. ತಾವು ಅಪ್ಪಣೆ ಮಾಡಿದಂತೆ ನಡೆದುಕೊಳ್ಳುತ್ತ, ಈ ಉಪವನವನ್ನು ರಕ್ಷಿಸುತ್ತ, ಇಲ್ಲಿ ದೊರಕುವ ಎಲೆಗಳನ್ನೋ ಕಾಯಿಗಳನ್ನೋ ತಿಂದು ಜೀವಿಸುತ್ತ, ತಾವು ಭುಜಿಸಿ ಉಳಿದುದೇನಾದರೂ ಅನುಗ್ರಹವಾಗಿ ದೊರೆತರೆ ಅದರಿಂದ ನನ್ನ ಜನ್ಮವನ್ನು ಪವಿತ್ರಗೊಳಿಸುತ್ತ ರಂಗನಾಥನ ಕೈಂಕರ್ಯದಲ್ಲಿಯೇ ಕಾಲವನ್ನು ಕಳೆಯಬೇಕೆಂದು ಇರುವೆನು.' ಎಂದೂ ಇನ್ನೂ ಅನೇಕ ರೀತಿಯಿಂದ ಮುನಿಯ ಮನಕರಗುವಂತೆ ಮಾತನಾಡಿದಳು. ಕೃತ್ರಿಮವನ್ನು ತಿಳಿಯಲಾರದ ಋಜು ಸ್ವಭಾವದವನೂ, ಪರಮಸಾತ್ವಿಕನೂ, ಆದ ವಿಪ್ರನಾರಾಯಣನು ಅವಳ ಇಷ್ಟದಂತೆ ಇರಬಹುದೆಂದು ಅಂದಿನಿಂದ ಆಕೆಯನ್ನು ವನಪಾಲಿಕೆಯನ್ನಾಗಿ ಮಾಡಿದನು. ದೇವದೇವಿಯು ತನ್ನ ಇಷ್ಟಾರ್ಥವು ಸಿದ್ಧಿಸಿತೆಂದು ಮನಸ್ಸಿನಲ್ಲಿ ಸಂತೋಷಪಡುತ್ತ ಮೇಲೆ ಮಾತ್ರ ಮಹಾವಿರಕ್ತಳಂತೆ ನಡೆದು ಕೊಳ್ಳುತ್ತಿದ್ದಳು. ಆದರೆ ಹಗಲೇನೋ ಕೈಂಕರ್ಯದಿಂದ ಅವಳಿಗೆ ಸುಖವಾಗಿ ಕಳೆಯುತ್ತಿತ್ತು. ರಾತ್ರಿಯು ಮಾತ್ರ ಬಹಳ ಕಷ್ಟಕರವಾಗಿ ತೋರುತ್ತಿತ್ತು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಭಕ್ತಾಂಘ್ರಿರೇಣುವಿನ ಅವತಾರಾದಿ ಕಥನವೆಂಬ ತೊಂಬತ್ತೊಂದನೆಯ ಅಧ್ಯಾಯವು ಮುಗಿದುದು.

## ೯೪

ಈ ರೀತಿಯಾಗಿ ದೇವದೇವಿಯು ಸರ್ವಭೋಗಗಳನ್ನು ಬಿಟ್ಟು ವ್ರತದಿಂದ ಕೃಶಳಾಗಿ ಅಹೋರಾತ್ರಿಯಾಗಿ ರಂಗನಾಥನನ್ನು ಕುರಿತು ಪ್ರಾರ್ಥನೆ ಮಾಡುತ್ತ ಅನನ್ಯಗತಿಕಳಾಗಿ ಶರಣಾಗತಳಾದಳು. -'ಎಲೈ ದೇವದೇವನೇ, ಈ ವಿಪ್ರನಾರಾಯಣನು ಇಷ್ಟು ನಿಷ್ಠುರನೆಂದು ನಾನು ತಿಳಿದಿರಲಿಲ್ಲ, ಆರು ತಿಂಗಳಿಂದ ಒಂದು ದಿನವಾದರೂ ನನ್ನ ಕಡೆ ತಿರುಗಿ ನೋಡಲೂ ಇಲ್ಲ. ಎಲ್ಲಿ ಮಲಗುತ್ತೀಯೇ? ಏನು ತಿಂದೆಯೆಂದು ಒಂದು ಮಾತನ್ನೂ ಆಡುವುದಿಲ್ಲ. ಹೋಗಲಿ ನನ್ನ ಶರೀರದ ವಿಚಾರವಿಲ್ಲದಿದ್ದರೂ ನಿನ್ನ ಕೈಂಕರ್ಯಕ್ಕಾಗಿ ನಾನು ಇರುವೆನೆಂದು ತಿಳಿದಾದರೂ 'ನೀನು ಏನು ಕೆಲಸ ಮಾಡಿದೆ? ರಂಗೇಶನಿಗೆ ಪ್ರಿಯವಾದ ಯಾವ ಕೈಂಕರ್ಯವನ್ನು ಮಾಡುತ್ತಿರುವೆ?'- ಎಂದು ಕೇಳಬಹುದಿತ್ತು. ಅದೂ ಕೂಡ ಇಲ್ಲ. ಇಂತಹವನೆಂದು ನಾನು ತಿಳಿದಿದ್ದರೆ ಮೂರ್ಖಳಾಗಿ ಈ ರೀತಿಯಾದ ಪ್ರತಿಜ್ಞೆಯನ್ನು

ಮಾಡುತ್ತಿರಲಿಲ್ಲ ದೇವ, ಅನಾಥರಕ್ಷಕ, ಅನನ್ಯಶರಣಳಾದ ನನ್ನನ್ನು ರಕ್ಷಿಸು; ನನ್ನ ಪ್ರತಿಜ್ಞೆಯನ್ನು ಸಫಲವನ್ನಾಗಿ ಮಾಡು'. ಇದೇ ಮೊದಲಾಗಿ ತದೇಕಚಿತ್ತಳಾಗಿ ಮೊರೆಯಿಟ್ಟು ಕೊರಗುತ್ತಿದ್ದಳು. ಅವಳ ಭಕ್ತಿಗೆ ಮೆಚ್ಚಿ ರಂಗನಾಥನು, ಅವಳ ಮನೋಭೀಷ್ಟವನ್ನು ಸಫಲಗೊಳಿಸಿದನು.

ಮಳೆಗಾಲ; ರಾತ್ರಿ ಗಾಢಾಂಧಕಾರ. ಆಕಾಶವೇ ಕರಗಿದಂತೆ ಧಾರಾಕಾರವಾಗಿ ಮಳೆ ಸುರಿಯುತ್ತಿತ್ತು. ಉಪವನದಲ್ಲಿರುವ ಪರ್ಣಶಾಲೆಯೂ ಕೊಚ್ಚಿಹೋಗುವಂತಿತ್ತು. ಹೊರಗೆ ದೇವದೇವಿಯು ಮಳೆಯಲ್ಲಿ ನೆನೆದು ಹೋಗಿದ್ದಾಳೆ. ಆಗ ಆಕಸ್ಮಿಕವಾಗಿ ವಿಪ್ರನಾರಾಯಣನು ದೇವದೇವಿಯನ್ನು ಕಂಡು ಒಳಗೆ ಬರುವಂತೆ ಹೇಳಿದನು. ತಾನು ಧನ್ಯಳಾದೆನೆಂದು ತಿಳಿಯುತ್ತ ದೇವದೇವಿಯು ಒಳಗೆ ಬಂದಳು. ವಿಪ್ರನಾರಾಯಣನನ್ನು ಭಕ್ತಿಯಿಂದ ವಂದಿಸಿ ತನಗೆ ಉಪದೇಶ ಮಾಡಬೇಕೆಂದು ಪ್ರಾರ್ಥಿಸುತ್ತ ಆತನ ಕೈಂಕರ್ಯವನ್ನು ಮಾಡುವುದಾಗಿ ಹೇಳಿ, ಅವನ ಪಾದಗಳನ್ನು ಕೈಗಳಿಂದ ಒತ್ತಲಾರಂಭಿಸಿದಳು. ಇದರ ಫಲವಾಗಿ ಮುನಿಯ ಮನಸ್ಸು ಚಲಿಸಿ ಇಬ್ಬರೂ ಶೃಂಗಾರಿಗಳಾದರು. ರಾಧ-ಮಾಧವರಂತೆ ವಿಹರಿಸತೊಡಗಿದರು. ಇದನ್ನು ಕೇಳಿದ ವೇದಾಂತಿಗೆ ಬಹು ಆಶ್ಚರ್ಯವಾಯಿತು. ಇಂತಹ ಭಾಗವತ ಶಿರೋಮಣಿಯೂ ಪರಮವಿರಕ್ತನೂ ಹೀಗೆ ವೇಶ್ಯಾಸಕ್ತನಾಗಬಹುದೇ? ಎಂಬ ಸಂದೇಹ ವುಂಟಾಯಿತು. ಪರಾಶರಭಟ್ಟರು ವೇದಾಂತಿಗೆ ಸಮಾಧಾನ ಹೇಳುತ್ತಾ ಹೀಗೆಂದರು -'ಇದೇನೂ ಆಶ್ಚರ್ಯಕರವಲ್ಲ. ಹಿಂದೆ ಕೃಷ್ಣನು ಮಥುರಾ ನಗರಿಗೆ ಹೋದಾಗ ಸೈರಂಧ್ರಿಯಾದ ಕುಬ್ಜೆಯು ಆತನಿಗೆ ಗಂಧವನ್ನು ಅರ್ಪಿಸಿದಳು. ಶ್ರೀಕೃಷ್ಣನ ಚಾತುರ್ಯದಿಂದ ಅವಳ ಆ ಕುಬ್ಜಾವತಾರವು ಹೋಗಿ ದಿವ್ಯಸುಂದರಿಯಾದಳು. ಶ್ರೀಕೃಷ್ಣನು ಅವಳನ್ನು ವರವನ್ನು ಕೇಳಲು ಸೂಚಿಸಿದಾಗ ಮುಕ್ತಿಪ್ರದನಾದ ಕೃಷ್ಣನನ್ನು ಮುಕ್ತಿಯನ್ನು ಕೇಳಿಕೊಳ್ಳದೇ ಕಾಮೋಪಭೋಗವನ್ನು ಕೇಳಿಕೊಂಡಳು. ಕೃಷ್ಣನು ಕೆಲವುಕಾಲ ಅವಳೊಡನೆ ಇದ್ದು ತನ್ನ ಕಾರ್ಯದಿಂದ ಹೊರಡಲುದ್ಯುಕ್ತನಾದನು. ಕುಬ್ಜೆಯು ರಾಧೆಯಂತೇ ವಿರಹಖಿನ್ನಳಾದಳು. ಆಗ ಕೃಷ್ಣನು 'ಚಿಂತಿಸಬೇಡ, ನೀನು ಮುಂದಿನ ಜನ್ಮದಲ್ಲಿ ಶ್ರೀರಂಗದಲ್ಲಿ ವೇಶ್ಯಾಜನ್ಮದಲ್ಲಿ ಹುಟ್ಟುವೆ. ನಾನು ವಿಪ್ರನಾರಾಯಣನಾಗಿ ಹುಟ್ಟಿ ತುಲಸೀಮಾಲೆಯೇ ಮೊದಲಾದ ಭಗವತ್ಕೈಂಕರ್ಯವನ್ನು ಲೋಕಕ್ಕೆ ತಿಳಿಸುವುದಕ್ಕಾಗಿ ಅದೇ ಕೈಂಕರ್ಯದಲ್ಲಿಯೇ ನಿರತನಾಗಿರುವೆನು. ಆಗ ನಿನ್ನ ಮನೋರಥವು ಪೂರ್ಣವಾಗುವುದು ಮತ್ತು ಮುಕ್ತಿ ದೊರಕುವುದು.' ಎಂದು ಅನುಗ್ರಹಿಸಿದನು. ಅದರಂತೆ ಈಗ ವಿಪ್ರನಾರಾಯಣನೂ ದೇವದೇವಿಯೂ ರಾಧಾ-ಮಾಧವರಂತೆ ವಿಹರಿಸುತ್ತಿರು ವುದರಲ್ಲಿ ಆಶ್ಚರ್ಯವೇನೂ ಇಲ್ಲವೆಂದರು. ಈ ಉಪಮಾನದಿಂದ ಚಕಿತನಾದ ವೇದಾಂತಿಯು -'ಆ ರಾಧೆಯು ಯಾರು? ಅವಳಲ್ಲಿ ಅಷ್ಟು ಪ್ರೇಮವುಂಟಾಗಲು ಕಾರಣವೇನು?'- ಎಂದುಕೇಳಿದನು. ಆ ಸಂಶಯವನ್ನು ನಿವಾರಿಸುತ್ತ ಭಟ್ಟರು -'ರಾಮಾವತಾರದಲ್ಲಿ ಶೂರ್ಪಣ ಖಿಯು ಶ್ರೀರಾಮನಲ್ಲಿ ಮೋಹಗೊಂಡಿದ್ದಳು. ಆದರೆ ಅದು ಕೃಷ್ಣಾವತಾರದಲ್ಲಿ ಫಲಿಸಿತು. ಶ್ರೀರಾಮನೇ ಕೃಷ್ಣನು ಮತ್ತು ಶೂರ್ಪಣಖಿಯೇ ರಾಧೆಯು ಎಂದರು. ಅದರಿಂದ ವೇದಾಂತಿಯು ಮತ್ತೂ ಆಶ್ಚರ್ಯಪಡಲು ಭಟ್ಟರು ಹೇಳಿದರು -'ವೇದಾಂತಿಯೇ ಕೇಳು, ಶ್ರೀರಾಮನ ಸ್ಮರಣೆಯು ಪಾಪಾತ್ಮನಿಗೂ ಮುಕ್ತಿಯನ್ನು ಕೊಡಬಲ್ಲುದು. ಹೀಗಿರುವಲ್ಲಿ ಅವನ ದರ್ಶನ, ಅವನೊಡನೆ ಸಂಭಾಷಣೆ, ಅವನ

ಅಂಗಾಗಗಳ ದರ್ಶನಾನುಭವಗಳಿಂದ ಮನೋರಥವು ಈಡೇರುವುದರಲ್ಲಿ ಸಂಶಯವುಂಟೇ? ಇಷ್ಟು ಮಾತ್ರವಲ್ಲ ;ರಾಮಾವತಾರದಲ್ಲಿ ಯಾರು ಯಾರು ಶ್ರೀರಾಮನಿಂದ ಪರಿಪೂರ್ಣವಾದ ಫಲವನ್ನು ಪಡೆಯಲಿಲ್ಲವೋ, ಅವರೆಲ್ಲರೂ ಶ್ರೀಕೃಷ್ಣಾವತಾರದಲ್ಲಿ ಪರಿಪೂರ್ಣ ಮನೋರಥರಾದರು. ಹೀಗೆ ಕುಬ್ಜೆಯು ದೇವದೇವಿಯ ಜನ್ಮದಲ್ಲಿಯೂ, ಶೂರ್ಪಣಖಿಯು ರಾಧೆಯ ಜನ್ಮದಲ್ಲಿಯೂ ತಮ್ಮ ಇಷ್ಟಾರ್ಥಗಳನ್ನು ಪಡೆದುದಲ್ಲದೆ ಪರಮಾತ್ಮನ ವಾತ್ಸಲ್ಯದಿಂದ ಮುಕ್ತಿಯನ್ನೂ ಹೊಂದಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಭಕ್ತಾಂಘ್ರಿರೇಣು ದೇವದೇವಿ ವಿಹಾರವೆಂಬ ತೊಂಬತ್ತನಾಲ್ಕನೆಯ ಅಧ್ಯಾಯವು ಮುಗಿದುದು.

೯೫

ಮತ್ತೆ ವೇದಾಂತಿಯು -'ವಿಪ್ರನಾರಾಯಣನು ಹೀಗೆ ಎಷ್ಟು ದಿನಗಳಿದ್ದನು? ಕೊನೆಗೆ ಇದರ ಫಲವೇನಾಯಿತು? ಅವನ ಪರಸ್ಪರ ವಿಯೋಗವುಂಟಾದುದು ಹೇಗೆ?'- ಎಂದು ಕೇಳಿದನು. ಭಟ್ಟರು ಹೇಳಲಾರಂಭಿಸಿದರು. ವಿಪ್ರನಾರಾಯಣನು ಅವಳಲ್ಲಿ ಅತ್ಯಾಸಕ್ತನಾಗಿ ತನ್ನ ಸಂಧ್ಯಾದಿ ನಿತ್ಯಕರ್ಮಗಳನ್ನು ಬಿಟ್ಟು, ಕೆಲವು ದಿನಗಳವರೆಗೆ ಅವಳ ಮನೆಯಲ್ಲಿಯೇ ಇದ್ದುಬಿಟ್ಟನು. ದೇವದೇವಿಯು ಆತನನ್ನು ಸಾಕ್ಷಾದ್ರಂಗನೆಂದು ತಿಳಿದು ಆತನ ಪಾದಸಂವಾಹನಾದಿಗಳನ್ನು ಮಾಡುತ್ತ ಅತ್ಯಂತ ಅನುರುಕ್ತಳಾಗಿ ಇದ್ದುಬಿಟ್ಟಳು. ಆದರೆ ಅವಳ ತಾಯಿಯು ಮಾತ್ರ ಕೇವಲ ವೇಶ್ಯಾಸಹಜವಾದ ದ್ರವ್ಯಾಪೇಕ್ಷಿಣಿಯಾಗಿದ್ದಳು. ಧನದಾಸೆಯಿಂದ ತನ್ನ ಮಗಳ ಅನುರಾಗವನ್ನು ಗಮನಿಸದೇ ಒಂದು ದಿನ ಆತನನ್ನು ಹೊರಕ್ಕೆ ಅಟ್ಟಿದಳು. ಆತನು ಲಜ್ಜಿತನಾದರೂ ಅವಳ ವ್ಯಾಮೋಹದಿಂದ ಆ ಮನೆ ಜಗುಲಿಯ ಮೇಲೆಯೇ ಉಟ್ಟಿದ್ದ ಬಟ್ಟೆಯನ್ನೇ ಹೊದಿಕೆಯನ್ನಾಗಿ ಮಾಡಿಕೊಂಡು ಮುದುರಿಕೊಂಡಿದ್ದನು.

ಅರ್ಧರಾತ್ರಿಯಾಗಿತ್ತು. ಶ್ರೀರಂಗನಾಥನು ರಂಗನಾಯಕಿಯೊಡನೆ ಅದೇ ಬೀದಿಯಲ್ಲಿ ಹೊರಟ್ಟಿದ್ದನು. ರಂಗನಾಯಕಿಗೆ ಈ ರಂಗೇಶನ ಸಂಚಾರದ ಉದ್ದೇಶವು ತಿಳಿಯಲಿಲ್ಲ. ಆ ಮನೆಯ ಬಳಿಗೆ ಬಂದ ಕೂಡಲೇ ಅರ್ಧರಾತ್ರಿಯಲ್ಲಿ ಹೀಗೆ ಛಳಿಯಲ್ಲಿ ಬಿದ್ದು ನಡುಗುತ್ತಿರುವ ಮನುಷ್ಯನ ವಿಚಾರವಾಗಿ ಅವಳಿಗೆ ಬಹಳ ವ್ಯಥೆಯಾಯಿತು. ಪತಿಯನ್ನು ಕೇಳಿದಮೇಲೆ ಆತನ ಭಕ್ತನೆಂಬ ವಿಚಾರವು ತಿಳಿಯಿತು. ಆಗ ಆಕೆಯು ನಿಮ್ಮ ಭಕ್ತನಿಗೆ ಈ ಸ್ಥಿತಿಯು ಬರಬಹುದೆ? ಆತನಲ್ಲಿ ಕರುಣೆಯಿಟ್ಟು ರಕ್ಷಿಸಬೇಕೆಂದು ಕೇಳಿಕೊಂಡಳು. ಹೀಗೆ ಮಾತನಾಡುತ್ತ ಇಬ್ಬರೂ ತಮ್ಮ ಆಲಯವನ್ನು ಹೊಕ್ಕು ಶೇಷಶಯನದಲ್ಲಿ ಪವಡಿಸಿದರು.

ಸ್ವಲ್ಪಹೊತ್ತಿನಲ್ಲಿ ದೇವದೇವಿಯ ಮನೆಯ ಬಾಗಿಲಿನಲ್ಲಿ ಒಬ್ಬನು ನಿಂತು ಬಾಗಿಲನ್ನು ತಟ್ಟುತ್ತಿದ್ದಾನೆ. ಈ ಹೊತ್ತಿನಲ್ಲಿ ಯಾರು ಇರಬಹುದೆಂದು ಒಳಗಿನಿಂದಲೇ ವಿಚಾರಮಾಡಲಾಗಿ ಆತನ ಹೆಸರು ರಂಗೇಶನೆಂದೂ, ವಿಪ್ರನಾರಾಯಣನ ದೂತನೆಂದೂ, ಅಗತ್ಯವಾಗಿ ಮಾತ ನಾಡುವ ವಿಚಾರ ಇರುವುದಾಗಿಯೂ ತಿಳಿಯಿತು. ಬಾಗಿಲನ್ನು ತೆರೆಯಲು ಆತನು ಒಂದು

ಚಿನ್ನದ ಬಟ್ಟಲನ್ನು ಆಕೆಗೆ ಕೊಟ್ಟು ವಿಪ್ರನಾರಾಯಣನು ಇದನ್ನು ಕಳುಹಿಸಿರುವುದಾಗಿ ಹೇಳಿ ಹೊರಟುಹೋದನು. ಕೂಡಲೇ ದೇವದೇವಿಯು ವಿಪ್ರನಾರಾಯಣನನ್ನು ಅತ್ಯಾದರದಿಂದ ಬರಮಾಡಿಕೊಂಡಳು. ಹೀಗೆ ಭಕ್ತವತ್ಸಲನಾದ ಭಕ್ತನ ಉದ್ಧಾರಕ್ಕೆ ಒಂದು ದಾರಿಯನ್ನು ಮಾಡಿಕೊಟ್ಟನು.

ಬೆಳಗಾಯಿತು. ಅರ್ಚಕರೇ ಮೊದಲಾದವರು ಎಂದಿನಂತೆ ದೇವಾಲಯಕ್ಕೆ ತಮ್ಮ ಕೈಂಕರ್ಯಕ್ಕಾಗಿ ಹೋದರು. ನೋಡಿದರೆ ಶುದ್ಧೋದಕದ ದೊಡ್ಡ ಸುವರ್ಣಪಾತ್ರೆಯು ಮಾಯವಾಗಿತ್ತು, ಈ ವಿಚಾರವು ಅಧಿಕಾರಿಗಳಿಗೆ ತಿಳಿಯಿತು. ಚೋಳರಾಜನವರೆಗೂ ಮುಟ್ಟಿತು. ಫಲವಾಗಿ ಅರ್ಚಕರೇ ಮೊದಲಾದವರ ಕೈಂಕರ್ಯಪರರಿಗೆ ಬಂಧನವಾಯಿತು.

ಬೀದಿಗಳೆಲ್ಲೆಲ್ಲ ಇದೇ ವಿಚಾರವು ನಡೆಯುತ್ತಿತ್ತು. ಗುಂಪು ಗುಂಪಾಗಿ ಜನರು ಮಾತನಾಡಿಕೊಳ್ಳುತ್ತಿದ್ದರು. ಇದೇ ಸಮಯದಲ್ಲಿ ದೇವದೇವಿಯ ಪರಿಚಾರಿಕೆಯೊಬ್ಬಳು ನೀರಿಗೆ ಹೋಗುತ್ತ ಈ ವಿಚಾರವನ್ನು ತಿಳಿದು ರಾತ್ರಿ ನಡೆದ ವಿಚಾರವನ್ನೆಲ್ಲ ಹೇಳಿದಳು. ಈ ಕಾರಣದಿಂದ ರಾಜನು ದೇವದೇವಿ, ವಿಪ್ರನಾರಾಯಣರನ್ನು ಕರೆಸಿ ವಿಚಾರಣೆ ನಡೆಸಿದನು.

ದೇವದೇವಿಯು ಈ ಪಾತ್ರೆಯು ದೇವರದೆಂದು ನನಗೆ ತಿಳಿಯದು. ಈ ವಿಪ್ರನಾರಾಯಣನು ತನ್ನ ದೂತನಾದ ರಂಗೇಶನೆಂಬುವನ ಮುಖಾಂತರ ತನ್ನದೆಂದೂ, ನನಗಾಗಿ ಅದನ್ನು ಕಳುಹಿಸುತ್ತಿರುವುದಾಗಿಯೂ, ನಿಜವಾಗಿಯೂ ತಾನು ಕದಿಯಲಿಲ್ಲ ವೆಂದೂ'- ತಿಳಿಸಿದಳು. ಅದಕ್ಕೆ ವಿಪ್ರನಾರಾಯಣನು ತನಗೆ ದೂತರೇ ಯಾರೂ ಇಲ್ಲವೆಂದೂ ತನ್ನಲ್ಲಿ ಅಂತಹ ಪಾತ್ರೆಯು ಇಲ್ಲವೆಂದೂ, ತಾನು ಅವಳಿಗಾಗಿ ಯಾವ ಪಾತ್ರೆಯನ್ನೂ ಕಳುಹಿಸಲಿಲ್ಲ, ಅಷ್ಟೆ ಅಲ್ಲದೆ ಈ ಪ್ರಸಂಗವೇ ತನಗೆ ತಿಳಿಯದೆಂದೂ ನುಡಿದನು. ರಾಜನು ಇವರ ವಿವಾದವನ್ನು ಕಂಡು ಪಾತ್ರೆಯನ್ನು ತೆಗೆದುಕೊಂಡು ಸ್ವರ್ಣಸ್ತೇಯಕ್ಕೆ ಸರಿಯಾದ ಶಿಕ್ಷೆಯನ್ನು ದಂಡಾಧಿಕಾರಿಗಳಿಂದ ವಿಚಾರಿಸಿ ವಿಧಿಸಬೇಕೆಂದೂ ಅಲ್ಲಿಯವರೆಗೂ ಇಬ್ಬರೂ ಬಂಧನದಲ್ಲಿರಬೇಕೆಂದೂ ಹೇಳಿ ಹೊರಟುಹೋದನು.

ರಾತ್ರಿಯಾಯಿತು. ಶ್ರೀರಂಗನಾಯಕಿಯು ವಿಪ್ರನಾರಾಯಣನ ಸ್ಥಿತಿಯನ್ನು ಆಲೋಚಿಸಿ, ರಂಗನಾಥನನ್ನು ಕುರಿತು-'ನಿನ್ನ ಭಕ್ತನಿಗೆ ಬಂದಿರುವ ಸ್ಥಿತಿಯನ್ನಾದರೂ ನೋಡು. ಅನ್ಯಾಯವಾಗಿ ಅಪರಾಧಿಯಲ್ಲದ ಆತನಿಗೆ ರಾಜನು ಇನ್ನಾವ ಶಿಕ್ಷೆಯನ್ನು ವಿಧಿಸುವನೋ! ಸಾಕು, ಇನ್ನು ಅವನನ್ನು ಪರೀಕ್ಷಿಸುವ ಕಾಲವು ಮುಗಿಯಿತು. ಆದುದರಿಂದ ಅವನನ್ನು ಬಂಧನದಿಂದ ಬಿಡಿಸಿ ಎಂದಿನಂತೆ ಆತನು ನಿನ್ನ ಕೈಂಕರ್ಯದಲ್ಲಿ ಆಸಕ್ತನಾಗಿರುವಂತೆ ಮಾಡು'- ಎಂದು ಪ್ರಾರ್ಥಿಸಿದಳು.

ಪುತ್ರವಾತ್ಸಲ್ಯದಿಂದ ರಂಗನಾಥನೂ ಕೂಡ ಅದೇ ರಾತ್ರಿ ರಾಜನ ಸ್ವಪ್ನದಲ್ಲಿ ಇಂತೆಂದನು-'ವಿಪ್ರನಾರಾಯಣನು ನಿರಪರಾಧಿ. ನಾನೇ ಅವನ ದೂತನಾಗಿ 'ರಂಗೇಶದಾಸ' ನಾಗಿ ದೇವದೇವಿಗೆ ಪಾತ್ರೆಯನ್ನು ಕೊಟ್ಟವನು. ನನ್ನ ಮಗನಿಗೆ ನಾನು ಪಾತ್ರೆಯನ್ನು ಕೊಟ್ಟರೆ ಮತ್ತೆ ಯಾರೂ ತಡೆಯಬೇಕಾದುದಿಲ್ಲ, ಆದುದರಿಂದ ಈಗ ಆ ವೇಶ್ಯೆಗೆ ಸಂಬಂಧಿಸಿದ ಪಾತ್ರೆಯು ನನಗೆ ಬೇಕಾದುದಿಲ್ಲ, ಅದನ್ನು ಅವಳಿಗೇ ಕೊಟ್ಟುಬಿಡು. ನನ್ನ ಪುತ್ರನೂ ಭಕ್ತನೂ ಆದ ಈತನನ್ನು ಬಂಧನದಿಂದ ಬಿಟ್ಟು ಎಂದಿನಂತೆ ನನ್ನ ಕೈಂಕರ್ಯದಲ್ಲಿ ಆತನು

ನಿರತನಾಗಿರಲು ಅನುಕೂಲಮಾಡಿ ಕೊಡು.

ಇಂತಹ ಆಶ್ಚರ್ಯಕರವಾದ ಸಂಗತಿಯನ್ನು ಅನುಭವಿಸಿ, ಬೆಳಗಾದಮೇಲೆ ವಿಪ್ರನಾರಾಯಣನಿಗೆ ವಂದಿಸಿ, ಅವನನ್ನು ಸತ್ಕರಿಸಿ, ಬೀಳ್ಕೊಟ್ಟನು. ಆತನಾದರೋ ತನ್ನ ಅಕಾರ್ಯಕ್ಕೆ ಪಶ್ಚಾತ್ತಾಪಪಟ್ಟು ಪ್ರಾಯಶ್ಚಿತ್ತ ರೂಪವಾಗಿ, ಶ್ರೀಪಾದತೀರ್ಥವನ್ನು ಸ್ವೀಕರಿಸಿದನು. 'ವಿಪ್ರನಾರಾಯಣನೆಂಬ ಹೆಸರು ತನಗೆ ಸರಿಯಾದುದಲ್ಲವೆಂದು ತಿಳಿದು 'ಭಕ್ತಾಂಘ್ರಿರೇಣು' ಎಂದರೆ ಭಕ್ತರ ಪಾದಧೂ, ಎಂದು ಹೆಸರಿಟ್ಟುಕೊಳ್ಳಬೇಕೆಂದು ನಿಶ್ಚಯಿಸಿದನು. ಭಕ್ತವತ್ಸಲ ನಾದ ರಂಗೇಶನು ಒಬ್ಬ ಬಾಲಕನ ಮೂಲಕ -'ನೀನು ಚಿಂತಿಸಬೇಡ, ಎಂದಿನಂತೆಯೇ ಇಲ್ಲಿಯೇ ಇದ್ದು ನನ್ನ ಕೈಂಕರ್ಯದಲ್ಲಿ ಆಸಕ್ತನಾಗಿರು'- ಎಂದು ಹೇಳಿಸಿ, ಏನಾದರೂ ವರವನ್ನು ಕೇಳಿಕೋ'-ಎಂದನು. ಆಗ ಭಕ್ತನು ನಿನ್ನ ದರ್ಶನಕ್ಕಿಂತಲೂ ಬೇರೆ ನನಗೆ ಬೇಕಾದುದೇನಿರುವುದು; ಆದರೂ ಒಂದು ವರವನ್ನು ಕೇಳುತ್ತೇನೆ. ಇನ್ನು ಮುಂದೆ ನನ್ನ ಹೆಸರು 'ಭಕ್ತಾಂಘ್ರಿರೇಣು' ಎಂದು ಇರಲಿ ಎಂದು ಕೇಳಿಕೊಳ್ಳಲು ಲೋಕದಲ್ಲಿ ಆ ಹೆಸರು ಪ್ರಸಿದ್ಧವಾಯಿತು.

ಹೀಗೆ ಭಕ್ತಾಂಘ್ರಿರೇಣುವು ರಂಗನಾಥನಿಂದ ಅನುಗ್ರಹೀತವಾಗಿ 'ಶ್ರೀಮಾಲೆ' (ತಿರುಮಾಲೈ) ಎಂಬ ದಿವ್ಯ ಪ್ರಬಂಧವನ್ನು ರಚಿಸಿ ಲೋಕೋಪಕಾರಮಾಡಿದನು. ಇದರಲ್ಲಿ ಮಂತ್ರಾರ್ಥವು ಅಡಗಿರುವುದು. ಇದನ್ನು ತಿಳಿಯದಿದ್ದರೆ ಜನ್ಮವೇ ವ್ಯರ್ಥವೆಂದು ಪ್ರಪನ್ನರ ನಂಬಿಕೆ.

ಈ ಚರಿತ್ರೆಯನ್ನು ಕೇಳಿದ ಮೇಲೆ ಯಾವ ಯಾವ ಆಳ್ವಾರರು ಯಾವ ಯಾವ ದಿವ್ಯದೇಶಗಳನ್ನು ಕೊಂಡಾಡಿರುವರೆಂಬುದನ್ನು ವೇದಾಂತಿಯು ಭಟ್ಟರ ಮೂಲಕ ವಿಶದವಾಗಿ ತಿಳಿದುಕೊಂಡನು. (ಈ ವಿವರವನ್ನು ಪ್ರಪನ್ನಾಮೃತದ ಮೂಲದಲ್ಲಿ ಕಾಣಬಹುದು)

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜರಿತದಲ್ಲಿ ದಿವ್ಯದೇಶ ವಿವರವೆಂಬ ತೊಂಬತ್ತೈದನೆಯ ಅಧ್ಯಾಯವು ಮುಗಿದುದು.

೯೬

ವೇದಾಂತಿಯು ಪಾಣಚರಿತ್ರೆಯನ್ನು ಕೇಳಲು ಭಟ್ಟರು ಪಾಣರನ್ನು ವಂದಿಸಿ -'ಕಾವೇರಿತೋಯಮಾಶ್ರಿತ್ಯ ವಾತೋಯತ್ರ ಪ್ರವರ್ತತೇ। ತದ್ದೇಶವಾಸಿನಾಂ ಮುಕ್ತಿಃ ಕಿಮುತತ್ತೀರವಾಸಿನಾಮ್॥'- ಎಂದು ಹೇಳಲು ಉಪಕ್ರಮಿಸಿದರು.

ನಿಚುಳಾನಗರಿ. ಧರ್ಮವರ್ಮರಾಜ. ರಾಜನ ಮಗಳು ನಿಚುಳಾನಾಯಕೀ. ಆಕೆಗೆ ರಂಗೇಶನಲ್ಲಿ ಪರಮಪ್ರೇಮ. ರಂಗೇಶನು ಅಲ್ಲಿಯೇ ಪ್ರೇಮಪೂರ್ವಕವಾಗಿದ್ದನು. ಈ ಮಾತಿನಿಂದ ಅವರಿಬ್ಬರ ಕಲ್ಯಾಣವನ್ನು ವೇದಾಂತಿಯು ಕೇಳಲು, ಭಟ್ಟರು ಅದನ್ನು ಹೇಳುವರು.

ನಿಚುಳಾನಾಯಕೀ ನೀಳಾಂಶ ಸಂಭೂತಳು. ಅವಳು ಬಾಲ್ಯದಿಂದಲೇ ಯಾವಾಗಲೂ 'ರಂಗ, ರಂಗ,' ಎನ್ನುತ್ತ ಯಾವಾಗಲೂ ಅದೇ ಆಟದಲ್ಲಿಯೇ ಮಗ್ನಳಾಗಿರುತ್ತ

ರಂಗೇಶನಿಗೆ ಬಾಲ್ಯೋಚಿತವಾದ ವಿವಿಧವಾದ ಉತ್ಸವಗಳನ್ನು ಮಾಡುತ್ತಿದ್ದಳು. ಕ್ರಮೇಣ ಯೌವನವುಂಟಾಗಲು ರಂಗೇಶನಿಗೆ ಡೋಲೋತ್ಸವವನ್ನು ಮಾಡುತ್ತೇನೆಂದು ಸಖಿಯರೊಡನೆ ವನದಲ್ಲಿ (ಉಪವನದಲ್ಲಿ) ವಿಹರಿಸುತ್ತಿರಲು, ರಂಗೇಶನು ಮೃಗಯಾ ವಿಹಾರಕ್ಕೆಂದು ಅಲ್ಲಿಗೆ ಬಂದು ವಿಶ್ರಾಂತಿಯನ್ನು ಪಡೆದನು. ಅವರಿಬ್ಬರ ಪರಸ್ಪರ ಕಣ್ಣುಗಳು ಒಂದಾಗಲು ಇಬ್ಬರೂ ಪ್ರೇಮ ಮುಗ್ಧರಾಗಿ ಅವರವರ ವಸತಿಗೆ ತೆರಳಿದರು. ಧರ್ಮವರ್ಮನಿಗೆ ಈ ವಿಚಾರವು ತಿಳಿಯಲು, ಅವನು ರಂಗೇಶನಲ್ಲಿಗೆ ಹೋಗಿ, ಈ ವಿಚಾರವನ್ನು ವಿಜ್ಞಾಪಿಸಿ ತನ್ನ ಊರಿಗೆ ಕರೆಸಿಕೊಂಡು ಸಂಭ್ರಮದಿಂದ ವಿವಾಹವನ್ನು ನೆರವೇರಿಸಿದನು. ಅಂದಿನಿಂದ ರಂಗೇಶನು ನಿಚುಳಾನಗರಿಯಲ್ಲಿ ನಿಚುಳಾನಾಯಕೀಯೊಡನೆ ಸುಖವಾಗಿರುತ್ತಿರುವನು.

ಅನಂತರ ಭಟ್ಟರು ಶ್ರೀಪಾಣ(ಮುನಿವಾಹನ)ರ ಚರಿತ್ರೆಯನ್ನು ಹೇಳಲು ಉಪಕ್ರಮಿಸಿದರು.

ನಿಚುಳಾನಗರಿಯಲ್ಲಿ ಒಬ್ಬ ಬ್ರಾಹ್ಮಣನ ಭತ್ತದಗದ್ದೆ. ಅದರಲ್ಲೊಂದು ತೆನೆಯಲ್ಲಿ ಶ್ರೀವತ್ಸಾಂಶದಿಂದ ಕಾರ್ತಿಕ ಪೂರ್ಣಿಮಾ, ರೋಹಿಣಿ (ದುರ್ಮತಿ ಸಂವತ್ಸರ) ನಕ್ಷತ್ರದಲ್ಲಿ ಶ್ರೀಪಾಣರು ಅವತರಿಸಿದರು. ಈ ಮಗುವು ಬಾಲಭಾವದಿಂದ ಪಂಚಮವರ್ಣದಲ್ಲಿ ಬೆಳೆಯಿತು. "ಜಾಯ ಮಾನಂ ಹಿ ಪುರುಷಂ ಯಂಪಶ್ಯೇನ್ಮಧುಸೂದನಃ। ಸಾತ್ವಿಕಸ್ಸತು ವಿಜ್ಞೇಯಃ ಸವ್ವೈ ಮೋಕ್ಷಾರ್ಥಚಿಂತಕಃ।"-ಅದರಂತೆಯೇ ಮುನಿವಾಹನನು ಬಾಲ್ಯದಿಂದಲೇ ಪ್ರಹ್ಲಾದನಂತೆ ಜನ್ಮವೈಷ್ಣವನಾಗಿಯೂ, ಮಹಾಭಾಗವತೋತ್ತಮನಾಗಿಯೂ, ಇದ್ದನು. ಪಂಚಮವರ್ಣದವರೊಡನೆ ಇರುತ್ತಿದ್ದರಿಂದ ಪಾಣನು ಸಾಮಗಾನದಿಂದ ರಂಗನಾಥನನ್ನು ಯಾವಾಗಲೂ ಹಾಡುತ್ತಾ, ಧ್ಯಾನಿಸುತ್ತಾ ಪರಮಭಕ್ತನಾಗಿದ್ದರೂ ಶ್ರೀರಂಗಕ್ಕೆ ಹೋಗುವುದು ತನಗೆ ಯೋಗವಿಲ್ಲವೆಂದು ತಿಳಿದು ಮನಸ್ಸಿನಲ್ಲಿಯೇ ಸಪ್ತಪ್ರಾಕಾರ ಮಧ್ಯದಲ್ಲಿರುವ ಶ್ರೀರಂಗನಾಥನನ್ನು ಕಲ್ಪಿಸಿಕೊಂಡು ಧ್ಯಾನಿಸುತ್ತ ತದೇಕಚಿತ್ತನಾಗಿ ಆನಂದ ಮಗ್ನನಾಗಿರುತ್ತಿದ್ದನು.

ಶ್ರೀರಂಗದಲ್ಲಿ ಸಾರಂಗಯೋಗಿ ಎಂಬ ಯೋಗಿಯೊಬ್ಬನು ಇದ್ದನು. ಆತನು ಶ್ರೀರಂಗದಲ್ಲಿ ಶ್ರೀರಂಗರಾಜನ ಕೈಂಕರ್ಯನಿರತನಾಗಿದ್ದನು. ಒಂದು ದಿನ ಆತನು ಕಾವೇರಿ ಯಿಂದ ಸುವರ್ಣಕುಂಭದಲ್ಲಿ ದೇವಾಲಯಕ್ಕೆ ತೀರ್ಥವನ್ನು ತರುತ್ತಿದ್ದನು. ಆ ಸಮಯದಲ್ಲಿ ಶ್ರೀಪಾಣನು ಕಾವೇರಿ ತೀರದಲ್ಲಿ ರಂಗೇಶಾಭಿಮುಖವಾಗಿ ಬಾಹ್ಯವ್ಯಾಪಾರಗಳೆಲ್ಲ ಮರೆತು, ಭಗವದ್ಗುಣಾನುಭವನಿರತನಾಗಿ ಹಾಡುತ್ತಿದ್ದನು. ಯೋಗಿಯು ಆತನನ್ನು ಕಂಡು ಮಾತಂಗ(ಹೊಲೆಯ)ನೆಂದು ತಿಳಿದು ದೂರಹೋಗಬೇಕೆಂದು ತಿಳಿಸಿದನು. ಆದರೆ ಆತನು ಬಾಹ್ಯಜ್ಞಾನವಿಲ್ಲದ್ದರಿಂದ ಸುಮ್ಮನಿದ್ದನು. ವರ್ಣಧರ್ಮಪರರಾದ ಕೆಲವರು ಪಾಣನನ್ನು ಓಡಿಸಲು ಪ್ರಯತ್ನಿಸಿದರು. ಆತನು ಹೋಗದಿರಲು, ಕಲ್ಲುಗಳಿಂದ ಚೆನ್ನಾಗಿ ಹೊಡೆದರು. ಆದರೂ ಅತನು ಎಂದಿನಂತೆಯೇ ಇದ್ದು ಧ್ಯಾನದಿಂದ ಪರಾಙ್ಮುಖನಾದ ಮೇಲೆ ತನ್ನ ಗುಡಿಸಿಲಿಗೆ ಹೋದನು. ಆತನಿಗೆ ಕಲ್ಲು ಹೊಡೆದುದು ತಿಳಿಯಲೇ ಇಲ್ಲ. ಇದನ್ನು ನೋಡಿ ಎಲ್ಲರೂ ಆಶ್ಚರ್ಯಚಕಿತರಾದರು.

ಈ ಘಟನೆಯಿಂದ ಭಕ್ತನಿಗೆ ನೋವು ತಿಳಿಯದಿದ್ದರೂ ರಂಗೇಶನ ಹಣೆಯಲ್ಲಿ ರಕ್ತವು ಕಾಣಿಸುತ್ತಿತ್ತು. ದೇವರದರ್ಶನಕ್ಕೆ ಹೋದವರೆಲ್ಲರೂ ಗಾಬರಿಗೊಂಡರು. ಆ

ದೇಶದ ರಾಜನು ಸಭೆಯಲ್ಲಿ ಎಲ್ಲರನ್ನೂ ವಿಚಾರಿಸಿದನು. ಆದರೂ ಏನೂ ಪ್ರಯೋಜನ ವಾಗಲಿಲ್ಲ. ಕೊನೆಗೆ ಶ್ರೀರಂಗನಾಯಕಿಯು ರಂಗನಾಥನನ್ನು ಪ್ರೇರಿಸಲು, ಆತನು ಸಾರಂಗಯೋಗಿಯ ಕನಸ್ಸಿನಲ್ಲಿ ಕಾಣಿಸಿಕೊಂಡು -'ಎಲೈ ಯೋಗೀಂದ್ರ, ಶ್ರೀಪಾಣನು ನನ್ನ ಅಂತರಂಗಭಕ್ತನು. ಅವನು ಮಾತಂಗನೆಂದು ತಿಳಿಯಬೇಡ. ಆತನನ್ನು ನಿನ್ನ ಭುಜದಮೇಲೆ ಹೊತ್ತುಕೊಂಡು ನನ್ನಲ್ಲಿಗೆ ಕರೆದುಕೊಂಡು ಬಾ'- ಎಂದು ಆಜ್ಞಾಪಿಸಿದನು. ಯೋಗಿಯು ಅದ್ಭುತವಾದ ಕನಸನ್ನು ಕಂಡು ಸಮಸ್ತವೈಭವದೊಡನೆ -'ಸುದೂರಮಪಿ ಗಂತವ್ಯಂ ಯತ್ರ ಭಾಗವತಃ ಸ್ಥಿತಃ'- ಎಂಬಂತೆ ಪಾಣನಿರುವಲ್ಲಿಗೆ ಹೋಗಿ ದಂಡವತ್ಪ್ರಣಾಮವನ್ನು ಮಾಡಿ, ರಂಗನಾಥನ ಆಜ್ಞೆಯನ್ನು ತಿಳಿಸಿದನು. ಪಾಣನು ತಾನು ಅಯೋಗ್ಯನೆಂದು ಬಹಳವಾಗಿ ಹೇಳಿಕೊಂಡನು. ಆದರೆ ಯೋಗಿಯು ಭಗವದಾಜ್ಞೆಯು ಇಬ್ಬರಿಂದಲೂ ನಡೆಸಬೇಕಾದುದೇ ಸರಿ. ಎನ್ನಲು ವಿವಶನಾಗಿ ಆತನ ಭುಜವನ್ನೇರಿದನು. ಆಗ ಮುಂದೆ ಪ್ರಬಂಧಪಾರಾಯಣವೂ ಹಿಂದೆ ವೇದಘೋಷವೂ ನಡೆಯುತ್ತಿರಲು, ಮುನಿವಾಹನ ರಂಗರಾಜನ ಸನ್ನಿಧಿಗೆ ಬಂದನು. ಬಂದು ಶ್ರೀರಂಗನಾಥನನ್ನು ಆಪಾದಕೇಶಾಂತವಾಗಿ ಸಂದರ್ಶಿಸಿ, ಮಾಡಿದ ಅನುಭವವನ್ನು ಕುರಿತು -'ಅಮಲನಾದಿಪಿರಾನ್' ಎಂಬ ಹತ್ತು ಪದ್ಯಗಳುಳ್ಳ ಸ್ತೋತ್ರವನ್ನು ಹಾಡಿದನು. ಈ ರೀತಿ ಶ್ರೀಪಾಣನು "ಮುನಿವಾಹನ"ನಾಗಿ ಭಗವದ್ಗುಣಾನುಭವದಲ್ಲಿ ಮೈಮರೆತು ಶ್ರೀರಂಗನಾಥನ ಪಾದಪದ್ಮಗಳಲ್ಲಿಯೇ (ಸೇವಾಕಾಂಕ್ಷಿಯಾಗಿ) ಐಕ್ಯವಾದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಪಾಣ ಚರಿತವೆಂಬ ತೊಂಬತ್ತಾರನೆಯ ಅಧ್ಯಾಯವು ಮುಗಿದುದು.

## ೯೭

ಮತ್ತೆ ವೇದಾಂತಿಯು ಕಲಿವೈರಿ(ತಿರುಮಂಗೈಯಾಳ್ವಾರ್)ಯ ಕಥೆಯನ್ನು ಕೇಳಬೇಕೆಂದು ಇಷ್ಟಪಡಲು ಭಟ್ಟರು ಹೇಳಲಾರಂಭಿಸಿದರು-

ಶ್ರೀಮನ್ನಾರಾಯಣನ ಆಜ್ಞೆಯಿಂದ ಶ್ರೀಮನ್ನಾರಾಯಣನಂತೆಯೇ ಕಲಿವೈರಿಯೂ ಸಹ (ಶಾರ್ಙ್ಗಾಂಶ). ಪ್ರತಿಯೊಂದು ಯುಗದಲ್ಲಿಯೂ ಬೇರೆ ಬೇರೆ ರೂಪದಿಂದ ಅವತರಿಸಿ ಲೋಕಸಂರಕ್ಷಣವನ್ನು ಮಾಡುತ್ತಿರುವನು. ಕೃತಯುಗದಲ್ಲಿ 'ಕರ್ದಮ'ನೆಂಬ ಬ್ರಾಹ್ಮಣ ನಾಗಿಯೂ, ತ್ರೇತಾಯುಗದಲ್ಲಿ 'ಉಪರಿಚರ' ಎಂಬ ಹೆಸರಿನಿಂದ ಕ್ಷತ್ರಿಯನಾಗಿಯೂ, ದ್ವಾಪರಯುಗದಲ್ಲಿ 'ಶಂಖಪಾಲ'ನೆಂಬ ವೈಶ್ಯನಾಗಿಯೂ, ಕಲಿಯುಗದಲ್ಲಿ 'ಪರಕಾಲ'ನೆಂಬ ಹೆಸರಿನಿಂದ ಚತುರ್ಥವರ್ಣದವನಾಗಿಯೂ ಹುಟ್ಟಿ, ಲೋಕಸಂರಕ್ಷಣವನ್ನು ಮಾಡಿದನು.

ಅದರಂತೆ ಪರಕಾಲನು ನಾಗಪುರ ಹತ್ತಿರ "ಆವಿನಾಡುದಯ"ರೆಂಬ ಚತುರ್ಥ ವರ್ಣದ ರಾಜನ ಪುತ್ರನಾಗಿ ಜನಿಸಿದನು. ಈತನಿಗೆ 'ನೀಲ'ನೆಂಬ ನಾಮಕರಣವಾಯಿತು. ತಂದೆಯು ಶಿವನಲ್ಲಿ ಭಕ್ತನೂ, ಧಾರ್ಮಿಕನೂ ಲೋಕರಕ್ಷಣಾಧುರೀಣನೂ ಆಗಿದ್ದನು.. ಮಗನೂ ತಂದೆಯಂತೆಯೇ ಅಜಾನುಬಾಹುವಾಗಿಯೂ, ನೀತಿಶಾಸ್ತ್ರ ವಿಶಾರದನಾಗಿಯೂ, ತಾಯಿತಂದೆಗಳಿಗೆ ಆನಂದವನ್ನುಂಟು ಮಾಡುತ್ತಿದ್ದನು. ಚೋಳ ಭೂಪತಿ ಇವನ

ಸಾಮರ್ಥ್ಯವನ್ನು ಕಂಡು ರಾಜ್ಯದ ಆಡಳಿತವನ್ನು ಕೊಟ್ಟನು. ಆತನು ಧರ್ಮದಿಂದ ರಾಜ್ಯವನ್ನು ಪರಿಪಾಲನೆ ಮಾಡುತ್ತಿದ್ದನು. ಆದರೂ ಸಹ ಸಂಗೀತ, ನಾಟ್ಯ ಮೊದಲಾದುವು ಗಳಲ್ಲಿ ಅತ್ಯಂತ ಆಸಕ್ತಿಯನ್ನು ವಹಿಸಿ ಕಾಲವನ್ನು ಕಳೆಯುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಪರಕಾಲಾವತಾರ ಕಥನವೆಂಬ ತೊಂಬತ್ತೇಳನೆಯ ಅಧ್ಯಾಯವು ಮುಗಿದುದು.

## ೯೮

ಹೀಗೆ ಪರಕಾಲನು ಚೋಳಭೂಪತಿಯ ಅನುಮತಿಯಂತೆ ರಾಜಕಾರ್ಯಗಳನ್ನು ನೋಡಿಕೊಳ್ಳುತ್ತ ನಾಗಪುರದ ಹತ್ತಿರ ಕಮಲಾಪುರದಲ್ಲಿ ಇರುತ್ತಿದ್ದನು.

ನಾಗಪುರದ ಹತ್ತಿರ ಶ್ವೇತಹ್ರದವೆಂಬ ಒಂದು ಮನೋಹರವಾದ ಸರೋವರ. ಕಮಲಗಳಿಂದಲೂ, ಕುಮುದ (ನೈದಿಲೆ)ಗಳಿಂದಲೂ ಅದು ರಂಜಿಸುತ್ತಿತ್ತು. ಜಲವಿಹಾರಕ್ಕೆ ಅದು ಬಹು ಅಪರೂಪವಾಗಿದ್ದು ದೇವಾಂಗನೆಯರೂ ಬರುವರೆಂದು ಪ್ರಸಿದ್ಧಿ ಇತ್ತು. ಒಂದು ಸಲ ಅನೇಕ ದಿವ್ಯಾಂಗನೆಯರು ಅಲ್ಲಿಗೆ ಬಂದು ಜಲವಿಹಾರವನ್ನನುಭವಿಸಿ ಹೂವುಗಳನ್ನು ಬಿಡಿಸುತ್ತಿದ್ದರು. ಹೂವುಗಳನ್ನು ಬಿಡಿಸುತ್ತಲೇ ಒಬ್ಬಳನ್ನು ಅಲ್ಲಿಯೇ ಬಿಟ್ಟು ಎಲ್ಲರೂ ಹೊರಟುಹೋದರು. ಆ ದಿವ್ಯಕನ್ಯೆಯು ಮನುಷ್ಯ ರೂಪಿನಿಂದಲೇ ಸರೋವರದ ತೀರದಲ್ಲಿ ಒಂಟಿಯಾಗಿ ತಿರುಗುತ್ತಿದ್ದಳು. ಅಷ್ಟರಲ್ಲಿ ಒಬ್ಬ ವೈಷ್ಣವನೂ ಪರಮಭಾಗವತೋತ್ತಮನೂ ಆದ ವೈದ್ಯನೊಬ್ಬನು ಅಲ್ಲಿಗೆ ಬಂದನು. ಏಕಾಕಿನಿಯಾಗಿಯೂ ರೂಪವತಿಯೂ ಆದ ಕನ್ಯೆಯನ್ನು ಕಂಡನು. ತನಗೆ ಮಕ್ಕಳಿಲ್ಲದ್ದರಿಂದ ಅವಳನ್ನು ಕಂಡಕೂಡಲೇ ಒಂದು ವಿಧವಾದ ವಾತ್ಸಲ್ಯವುಂಟಾಗಿ ವಿಚಾರಿಸಿದನು. ಆಕೆಯು ತನಗೆ ತಂದೆ ತಾಯಿಗಳಿಲ್ಲವೆಂದೂ ಸಖಿಯರೊಡನೆ ಬಂದಿದ್ದಾಗಿಯೂ ತನಗೆ ಯಾರೂ ಪರಿಚಿತರಿಲ್ಲದ್ದರಿಂದ ಯಾರಾದರೂ ಕರೆದುಕೊಂಡು ಹೋದರೆ ಬರುವುದಾಗಿಯೂ ತಿಳಿಸಿದಳು. ವೈದ್ಯನು ತನ್ನೊಡನೆ ಬಂದರೆ ಮಗಳಂತೆ ನೋಡಿಕೊಳ್ಳುವುದಾಗಿ ತಿಳಿಸಿದನು. ಆಕೆಯು ಒಪ್ಪಲು ಮನೆಗೆ ಕರೆದುಕೊಂಡು ಹೋದನು. ಮಗಳಂತೆ ನೋಡಿಕೊಳ್ಳುತ್ತಿದ್ದನು. ದಂಪತಿಗಳಿಗೆ ಆ ಕನ್ಯೆಯನ್ನು ನೋಡಿ ಆನಂದವಾಗುತ್ತಿತ್ತು. ಕುಮುದವಲ್ಲಿ ಎಂದು ಹೆಸರಿಟ್ಟರು.

ಕಾಲಕ್ರಮೇಣ ಕುಮುದವಲ್ಲಿಯು ಯೌವನವತಿಯಾಗಲು ತಂದೆಗೆ ವಿವಾಹದ ಚಿಂತೆಯುಂಟಾಯಿತು. ಅಜ್ಞಾತ ಕುಲ ಗೋತ್ರದ ಕನ್ಯೆಯನ್ನು ಯಾರಿಗೆ ಕೊಟ್ಟು ಮದುವೆ ಮಾಡಬೇಕೆಂಬುದೇ ದೊಡ್ಡಸಮಸ್ಯೆಯಾಗಿತ್ತು.

ಇತ್ತ ಪರಕಾಲನಿಗೆ ತನ್ನ ಪರಿವಾರದವರಿಂದ ಕುಮುದ್ವತಿಯ ಸೌಂದರ್ಯದ ವಿಚಾರವು ಅರಿವಾಯಿತು. ಒಂದುದಿನ ಪರಕಾಲನು ವೈದ್ಯನ ಮನೆಗೆ ಬಂದು ಮಾತು ಮಾತಿನಲ್ಲಿಯೇ ಎಲ್ಲ ವಿಚಾರಗಳನ್ನೂ ತಿಳಿದುಕೊಂಡನು. ವೈದ್ಯನ ಸಮಸ್ಯೆಯನ್ನು ಬಿಡಿಸುವ ನೆಪದಿಂದ ತಾನೇ ಕುಮುದ್ವತಿಯನ್ನು ಮದುವೆಯಾಗುವುದಾಗಿ ತಿಳಿಸಿದನು. ಆದರೆ

ಕುಮುದ್ವತಿಯು 'ತಾಪಃ ಪುಂಡ್ರಸ್ತಥಾನಾಮ ಮಂತ್ರೋಯಾಗಶ್ಚ ಪಂಚಮಃ। ಅಮೀ ಪರಮಸಂಸ್ಕಾರಾಃ ಪಾರಮ್ಯೈಕಾಂತ್ಯ ಹೇತವಃ॥' ಎಂಬಂತೆ ಪಂಚಸಂಸ್ಕಾರ ಸಂಸ್ಕೃತನಾದ ಶ್ರೀವೈಷ್ಣವನನ್ನಲ್ಲದೆ ಮತ್ತೆ ಯಾರನ್ನೂ ವರಿಸಲಾರೆನು ಎಂದು ತಿಳಿಸಿದಳು. ಅದರಂತೆ ಪರಕಾಲನು ಪಂಚಸಂಸ್ಕಾರಸಂಸ್ಕೃತನಾಗಿ ಬಂದನು. ಕುಮುದ್ವತಿಯು ಮತ್ತೊಂದು ನಿಯಮ ವನ್ನು ಹಾಕಿದಳು. -'ನೀನು ಒಂದುವರ್ಷಕಾಲ ಒಂದು ಸಾವಿರದ ಎಂಟು ಜನ ಶ್ರೀವೈಷ್ಣವರಿಗೆ ಪ್ರತಿ ದಿನವೂ ಷಡ್ರಸೋಪೇತವಾದ ಭೋಜನ(ತದೀಯಾರಾಧನ)ವನ್ನು ನಡೆಸಬೇಕು. ಅವರಿಗೆ ತಾಂಬೂಲ ದಕ್ಷಿಣೆಗಳನ್ನು ಕೊಡಬೇಕು'. ಪರಕಾಲನು ಈ ಷರತ್ತನ್ನೂ ಒಪ್ಪಿದನು. ಪ್ರತಿದಿನವೂ ಶ್ರೀಪಾದ ತೀರ್ಥಗ್ರಹಣವನ್ನು ಮಾಡಿ ಭಾಗವತ ಶೇಷನನ್ನು ಭುಜಿಸುತ್ತಿದ್ದರಿಂದ ಪರಕಾಲನಿಗೆ ಭಗವಂತನಲ್ಲಿ ಪರಮಭಕ್ತಿಯೂ ದಿವ್ಯತೇಜಸ್ಸೂ ಉಂಟಾಯಿತು. ಆದರೆ ಈ ಖರ್ಚಿಗಾಗಿ ರಾಜ್ಯದ ಹಣವೆಲ್ಲವೂ ಖರ್ಚಾಗಿ ಹೋಗುತ್ತಿತ್ತು. ಇದನ್ನು ತಿಳಿದು ಅವನಿಗಾಗದ ಕೆಲವರು ಚೋಳರಾಜನಲ್ಲಿ ದೂರು ಹೇಳಿದರು. ರಾಜನು ದೂತರನ್ನಟ್ಟಿ, ಹಣವನ್ನು ವಸೂಲು ಮಾಡಿಕೊಂಡು ಬರಬೇಕೆಂದು ಹೇಳಿದನು. ದೂತರು ಬರಲು ಪರಕಾಲನು ಅವರನ್ನು ಸತ್ಕರಿಸಿದನು. ಹಣದ ವಿಚಾರಕ್ಕೆ ಮಾತ್ರ 'ನಾಳೆ, ನಾಳಿದ್ದು;ಬೆಳಿಗ್ಗೆ; ಮದ್ಯಾಹ್ನ' ಈಗ ವಿರಾಮವಿಲ್ಲ ಆಮೇಲೆ ಬಾ'- ಎಂದು ಸತಾಯಿಸುತ್ತಿದ್ದನು. ಇದನ್ನು ನೋಡಿ ಬೇಸರಗೊಂಡ ದೂತರು ಹಿಂತಿರುಗಿದರು. ಮತ್ತೆ ರಾಜನು ಕೆಲವು ಸೈನಿಕರನ್ನು ಕಳುಹಿಸಿದನು. ಪರಕಾಲನು, ಹನುಮಂತನು ರಾಕ್ಷಸರನ್ನು ಪುಡಿಪುಡಿಮಾಡಿದಂತೆ, ಸೈನಿಕರನ್ನೆಲ್ಲಾ ಧೂಳೆಬ್ಬಿಸಿದನು. ಈ ವೃತ್ತಾಂತವನ್ನು ಕೇಳಿ ಕುಪಿತನಾದ ರಾಜನು, ಆಲೋಚಿಸಿ ಶ್ರೀಧರನೆಂಬ ಸೇನಾಪತಿಯ ನೇತೃತ್ವದಲ್ಲಿ ಮತ್ತೊಂದು ಬಾರಿ ಸೈನ್ಯವನ್ನು ಕಳುಹಿಸಿದನು. ಪರಕಾಲನಿಗದೇನು ಆಶ್ಚರ್ಯವೆನಿಸಲಿಲ್ಲ. ಖಡ್ಗಸಹಾಯನಾಗಿ ಸೈನಿಕರಲ್ಲನೇಕರನ್ನು ಯಮಲೋಕಕ್ಕೆ ಅತಿಥಿಗಳನ್ನಾಗಿ ಕಳುಹಿಸಿದನು. ಸೇನಾಪತಿ ಶ್ರೀಧರನು ಪತ್ತೆಯಿಲ್ಲದಂತೆ ಓಡಿದನು. ಆಳಿದುಳಿದ ಅಲ್ಪಸ್ವಲ್ಪ ಸೈನಿಕರು ರಾಜನಿಗೆ ಸಮಾಚಾರವನ್ನು ತಲುಪಿಸಿದರು. ಸಮಾಚಾರ ತಿಳಿಯುತ್ತಲೇ ರಾಜನು ಕಿಡಿಕಿಡಿಯಾದನು. ಸೈನಿಕರೊಡನೆ ಈ ಸಾರಿ ತಾನೇ ಹೊರಟನು. ಪರಕಾಲನು ಈಗಲೂ ಹಿಂಜರಿಯಲಿಲ್ಲ. ಕತ್ತಿಯನ್ನು ಹಿಡಿದು ಸೈನಿಕರನ್ನು ಎದುರಿಸಿದನು. ಹಿಂದಿನ ಸೈನಿಕರ ದಾರಿಯನ್ನೇ ಇವರೂ ಅನುಸರಿಸಬೇಕಾಯಿತು. ಕೊನೆಗೆ ರಾಜನೇ ಎದುರಿಗೆ ಬಂದು ನಿಂತನು. ಆದರೆ ಆತನು ಪರಮಧಾರ್ಮಿಕ, ಭಗವದ್ಭಕ್ತ. ಇವನನ್ನು ನೋಡಿ ಪರಕಾಲನು ಭಗವದ್ಭಕ್ತನನ್ನು ಕೊಲ್ಲಬಾರದೆಂದು ಕತ್ತಿಯನ್ನು ಕೆಳಗಿಟ್ಟು ನಿಂತುಕೊಂಡನು. ರಾಜನು ಆಶ್ಚರ್ಯಗೊಂಡು-'ಹಣವನ್ನು ಕೇಳಿದರೆ ಏಕೆ ಹೀಗೆ ಮಾಡಿದೆ?" ಎಂದು ಕೇಳಿದನು. "ಹಾಗೇನು ಹಣದ ವಿಚಾರವು ನನಗೆ ತಿಳಿಯಲೇ ಇಲ್ಲ. ಇದ್ದಕ್ಕಿದ್ದಂತೆ ಸೈನಿಕರು ನನ್ನ ಮೇಲೆ ಬೀಳಲು, ಆತ್ಮರಕ್ಷಣೆಗೆ ಯುದ್ಧಮಾಡಬೇಕಾಯಿತು"-ಎಂದು ಪರಕಾಲನು ಹೇಳಿದನು. 'ಹಾಗಾದರೆ ಈಗ ಹಣವನ್ನು ಕೊಡುವೆಯೋ? 'ಅಗತ್ಯವಾಗಿ' ಹೀಗೆ ಮಾತು ಮುಗಿಯಲು, ರಾಜನು ಕೆಲವರು ರಾಜಭಟರನ್ನು ಆತನ ಕಾವಲಿಗಿಟ್ಟು ಹಣವನ್ನು ತೆಗೆದುಕೊಂಡು ಬರುವಂತೆ ಹೇಳಿ ಹೊರಟುಹೋದನು.

ಪರಕಾಲನು ಕೊಡಲು ಹಣವನ್ನು ಎಲ್ಲಿಂದ ತರಬೇಕು? ಅವನ ಹತ್ತಿರ ಬಿಡಿಗಾಸೂ

ಇರಲಿಲ್ಲ. ಮೂರುದಿನಗಳು ಕಳೆದವು. ಅನ್ನಹಾರಗಳಿಲ್ಲದೇ ಪರಕಾಲನು ತಪಿಸುತ್ತಿರುವನು. ಅಂದು ರಾತ್ರಿ ವರದರಾಜನು (ದೇವರು) ಕನಸ್ಸಿನಲ್ಲಿ ಕಾಣಿಸಿಕೊಂಡು -'ನೀಲ (ಪರಕಾಲನ ಇನ್ನೊಂದು ಹೆಸರು) ಕಾಂಚಿಯಲ್ಲಿ ವೇಗವತಿ ನದಿಯಲ್ಲಿ ಹಣವಿರುವುದು. ನೀನು ಅಲ್ಲಿಗೆ ಹೋಗಿ ತೆಗೆದುಕೊಂಡು ಕೊಡಬೇಕಾದುದನ್ನು ಕೊಡು'- ಎಂದು ತಿಳಿಸಿದನು. ಪರಕಾಲನು ರಾಜಭಟರೊಡನೆ 'ಕಾಂಚಿಯಲ್ಲಿ ನನ್ನ ಆಪದ್ಧನ ಸ್ವಲ್ಪಮಟ್ಟಿಗಿದೆ. ಅಲ್ಲಿಗೆ ಬಂದರೆ ಕೊಡುತ್ತೇನೆ. ಎಂದನು. ಅದರಂತೆ ಎಲ್ಲರೂ ಅಲ್ಲಿಗೆ ಹೋದರು. ನೋಡಿದರೆ ಹಣವಿಲ್ಲ. ಚಿಂತಾಗ್ರಾಂತನಾಗಿ ಕಾಲವನ್ನು ಕಳೆಯಲು ರಾತ್ರಿ ಕನಸ್ಸಿನಲ್ಲಿ ಹಣವಿರುವ ಜಾಗವು ಸ್ಪಷ್ಟವಾಗಿ ಗೋಚರಿಸಿದಂತೆ ಆಯಿತು. ಬೆಳಿಗ್ಗೆ ನದಿಯ ತೀರದಲ್ಲಿ ಅಗೆದು ನೋಡಲಾಗಿ ಹೇರಳವಾಗಿ ಹಣವು ದೊರಕಿತು. ಅದನ್ನು ಭಟರಿಗೆ ಕೊಡಲು ಅವರು ರಾಜನಿಗೆ ಒಪ್ಪಿಸಿ ಪರಕಾಲನ ಮಹಿಮೆ ಯನ್ನು ವರ್ಣಿಸಿದರು. ರಾಜನು ಅವನ ಅಲೌಕಿಕ ಮಹಿಂಮೆಯನ್ನು ತಿಳಿದು ಮೂರು ದಿವಸಗಳ ಉಪವಾಸಕ್ಕಾಗಿ ಮರುಗಿ ಅವನು ಕೊಟ್ಟಿದ್ದ ಹಣವನ್ನು ತದೀಯಾರಾಧನಕ್ಕಾಗಿಯೇ ವಿನಿಯೋಗಿಸಿ ಅವನ ಕ್ಷಮೆ ಬೇಡಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಪರಕಾಲ ಚೋಳ ಪರಾಜಯವೆಂಬ ತೊಂಬತ್ತೆಂಟನೆಯ ಅಧ್ಯಾಯವು ಮುಗಿದುದು.

## ೯೯

ಹೀಗೆ ಪರಕಾಲನು ಚೋಳರಾಜನಿಂದ ಸತ್ಕೃತನಾಗಿ ಭಾಗವತಾರಾಧನದಲ್ಲಿಯೇ ಆಸಕ್ತನಾಗಿರುತ್ತಿದ್ದನು. ಹಣವಿಲ್ಲದಿದ್ದರೆ ಅದಕ್ಕಾಗಿ ಕಳ್ಳತನವನ್ನಾದರು ಮಾಡಿತ್ತಿದ್ದನು. ಆತನಿಗೆ ಅದ್ಭುತಶಕ್ತಿಯುಳ್ಳ (ಐದುಜನ) ಐವರು ಶಿಷ್ಯರಿದ್ದರು. ನೀರಿನ ಮೇಲೆ ನಡೆಯುವವನೊಬ್ಬ; ನೆರಳಿನಲ್ಲಿಯೇ ಮರೆಯಾಗಿ ನಡೆಯುವವನು ಇನೊಬ್ಬ; ಮರವನ್ನು ಹತ್ತುವುದರಲ್ಲಿ ನಿಪುಣನಾದವನು ಮತ್ತೊಬ್ಬ; ವ್ಯವಹಾರದಲ್ಲಿ ಯಾರಿಗೂ ಸೋಲದಂತಹವನೊಬ್ಬನಾದರೆ, ಮಗದೊಬ್ಬನು 'ಅರ್ಗಳ ಪೂತ್ಕಾರಕಾರಕ' ಇವರಲ್ಲದೇ ಪರಕಾಲನೆಂಬ ಹೆಸರಿನ ಭಾವಮೈದುನನೊಬ್ಬ. ಇವರು ಆರು ಜನರು ಪರಕಾಲನಿಗೆ ಬಹಿಃ ಪ್ರಾಣದಂತೆ ಇರುತ್ತಿದ್ದರು.

ಒಂದು ದಿನ ಪರಕಾಲನು ದುಡ್ಡಿಲ್ಲದೇ ಕದಿಯಲು ಯಾವುದೋ ಊರಿಗೆ ಹೋದನು. ರಾತ್ರಿಯಾಗಿತ್ತು. ಕತ್ತಲೆ ಮಳೆ ಸುರಿಯುತ್ತಿತ್ತು. ಒಂದು ಮನೆಯ ಜಗುಲಿಯ ಮೇಲೆ ಪರಕಾಲನು ನಿಂತಿದ್ದನು. ಮನೆಯ ಬಾಗಿಲು ಅರ್ಧತೆರೆದಿತ್ತು. ಪರಕಾಲನು ಮಳೆಯ ಹೊಡೆತವನ್ನು ತಡೆಯಲಾರದೆ ಅಲ್ಲಿಯೇ ನಿಂತಿದ್ದನು. ಸ್ವಲ್ಪಹೊತ್ತಿನಲ್ಲಿ ಬಾಗಿಲ ಒಳಗೆ ಹೆಂಗಸೊಬ್ಬಳು ಪಾತ್ರೆಯನ್ನು ತೊಳೆಯುವ ಶಬ್ಧವು ಕೇಳಿಸಿತು. ಪರಕಾಲನು ಪಾತ್ರೆಯನ್ನು ಕಿತ್ತುಕೊಂಡನು. ನೋಡಿದರೆ ಚಿನ್ನದ ತಟ್ಟೆ. ಪರಕಾಲನು ತೆಗೆದುಕೊಂಡ ಕೂಡಲೇ ಆ ಹೆಂಗಸು 'ಅಸ್ಮದ್ಗುರುಭ್ಯೋ ನಮಃ' (ನಮ್ಮ ಗುರುಗಳಿಗೆ ಅರ್ಪಿತವಾಗಲಿ) ಎಂದಳು. ಆಕೆಯ ಭಕ್ತಿಪ್ರಪತ್ತಿಯನ್ನು ಕಂಡು ಪರಕಾಲನು ಅದನ್ನು ಅಲ್ಲಯೇ ಬಿಟ್ಟು

ಹೋದನು.ಮನೆಯ ಯಜಮಾನನಿಗೆ ಈ ವೃತ್ತಾಂತವನ್ನು ತಿಳಿಸಲು ತಾನು ಭಗವದ್ಭಾಗವತ ಸೇವೆಯಿಂದ ವಂಚಿತನಾದನೆಂದು ಭಾವಿಸಿದನು.

ಇನ್ನೊಂದು ದಿನ ಪರಕಾಲನು ತನ್ನ ವೃತ್ತಿಗಾಗಿ ಬಿಲ್ವಾರಣ್ಯದಲ್ಲಿ ಜನಸಂಚಾರವನ್ನು ನಿರೀಕ್ಷಿಸುತ್ತಿದ್ದನು. ಮದ್ಯಾಹ್ನವು ಕಳೆದು ಹೋಗುತ್ತಿತ್ತು. ಭಾಗವತರೆಲ್ಲರೂ ಹಸಿವಿನಿಂದ ಪೀಡಿತರಾಗುತ್ತಿದ್ದುದನ್ನು ಯೋಚಿಸಿ ಪರಕಾಲನು ವ್ಯಥೆಪಡುತ್ತಿದ್ದನು. ಕೊನೆಗೆ ಬೇಸರದಿಂದ ಮರಹತ್ತುವ ಶಿಷ್ಯನನ್ನು ಕರೆದು, "ಇನ್ನೊಂದು ಸಲ ನೋಡಲು ಹೇಳಿದನು. ಆತನು ಮರವನ್ನು ಹತ್ತಿ ನೋಡಿ, 'ಬೇಗ, ಬೇಗ, ಎಲ್ಲರೂ ಶಸ್ತ್ರಾಧಾರಿಗಳಾಗಿ ಸಿದ್ಧರಾಗಿರಿ"- ಎಂದು ಸೂಚನೆ ಕೊಟ್ಟನು. ಆತನು ನೋಡಿದಾದರೂ ಏನು? ಮದುವೆ ಮನೆಯವರ ಗುಂಪೊಂದು ಸ್ವಲ್ಪ ದೂರದಲ್ಲಿ ಬರುತ್ತಿತ್ತು. ಮದುವಣಿಗನು ಅತಿಮಾನುಷ ತೇಜಸ್ವಿಯಾಗಿಯೂ (ಸಂಪದ್ಯುಕ್ತನಾಗಿಯೂ) ಶ್ರೀಮಂತನೂ ಆದ ವಿಪ್ರನಾಗಿ ಕಂಡು ಬರುತ್ತಿದ್ದನು. ಸರ್ವಾವಯಗಳಲ್ಲಿಯೂ ಅನರ್ಘವೂ ಉಜ್ವಲವೂ ಆದ ದಿವ್ಯಾಭರಣಗಳನ್ನು ಧರಿಸಿದ್ದನು. ತನಗೆ ಯೋಗ್ಯವಾದ ಪರಿವಾರದೊಡನೆ ದಿವ್ಯವಾದ ಕುದುರೆಯನ್ನೇರಿ ಬರುತ್ತಿದ್ದನು. ಆತನ ಪತ್ನಿಯು ಸರ್ವಾಭರಣ ಭೂಷಿತೆಯಾಗಿ ಪಲ್ಲಕ್ಕಿಯಲ್ಲಿ ಶೋಭಿಸುತ್ತಿದ್ದಳು. ಇಂತಹ ಮನಮೋಹಕವಾದ ದೃಶ್ಯವನ್ನು ಕಂಡು ವೃಕ್ಷಾಗ್ರಾರೋಹಿಯು 'ಇದೋ ಪಶ್ಚಿಮದಿಕ್ಕಿನಿಂದ ಸಾಕ್ಷಾತ್ ರಂಗೇಶ್ವರನಂತೆಯೇ ಬರುತ್ತಿರುವ ಈತನನ್ನು ನೋಡಿ'- ಎಂದು ಮತ್ತೊಮ್ಮೆ ಎಲ್ಲರನ್ನೂ ಎಚ್ಚರಿಸಿದನು. ಆತನು ಎಚ್ಚರಿಸಲು ತಿಳಿಸಿದಂತೆ -"ಸಾಕ್ಷಾನ್ನಾರಾಯಣೋ ದೇವಃ ಕೃತ್ವಾ ಮರ್ತ್ಯಮಯೀಂ ತನೂಂ। ಮಗ್ನಾನುದ್ಧರತೇ ಲೋಕಾನ್ ಕಾರುಣ್ಯಾಚ್ಛಾಸ್ತ್ರಪಾಣಿನಾ॥" ಎಂಬ ವಾಣಿಯನ್ನು ಸಾರ್ಥಕಪಡಿಸು ವುದಕ್ಕಾಗಿಯೂ, ತನ್ನ ಭಕ್ತನನ್ನು ಅನುಗ್ರಹಿಸುವುದಕ್ಕಾಗಿ ರಂಗನಾಥನು ಈ ರೂಪದಲ್ಲಿ ಬರುತ್ತಿದ್ದನು. ಯಾವ ಐಶ್ವರ್ಯವನ್ನು ಹೊಂದಿದರೆ ಮತ್ತೊಂದನ್ನು ಹೊಂದಬೇಕಾದುದೇ ಇಲ್ಲವೋ, ಅದನ್ನು ಅನುಗ್ರಹಿಸಲು ಬರುತ್ತಿದ್ದನು.

ಪರಕಾಲನು ಗುಂಪನ್ನು ತಡೆದು ನಿಲ್ಲಿಸಿದನು. ಸರ್ವಸ್ವವನ್ನೂ ಅಪಹರಿಸಿದ್ದನು. ವಿಪ್ರನ ಕಾಲಿನಲ್ಲಿ ಒಂದು ಉಂಗುರವು ಮಾತ್ರ ಉಳಿದಿತ್ತು. ಅದನ್ನು ತೆಗೆಯಲು ಹೋದನು. ಆಗ ವಿಪ್ರನು -'ಅಯ್ಯಾ, ನೀನು ಸರ್ವಸ್ವವನ್ನು ತೆಗೆದುಕೊಂಡಿದ್ದೀಯೆ. ಇದೊಂದು ಉಂಗುರವನ್ನು ಬಿಟ್ಟರೆ ನಿನಗೇನು ನಷ್ಟ? ಇದೋ ನೋಡು ನನ್ನ ಸಾಮಾಗ್ರಿಗಳೆಲ್ಲವೂ ಬೆಟ್ಟದಂತಿದೆ. ನಿನಗೆ ಸಾಗಿಸುವುದೇ ಕಷ್ಟವಾಗಿರಬಹುದಲ್ಲವೇ?'- ಎಂದನು. ಅದಕ್ಕೆ ಕಲಿವೈರಿ ಯು 'ಒಂದು ಉಂಗುರವನ್ನು ತಾನೆ ಏತಕ್ಕೆ ಬಿಡಲಿ. ಅದೂ ಸಹ ಒಬ್ಬ ಭಾಗವತನ ಊಟದ ಖರ್ಚಿಗಾಗುತ್ತದೆ'- ಎಂದನು. ಹೀಗೆ ಹೇಳುತ್ತಲೇ ತೆಗೆಯಹೋದನು. ಎಷ್ಟು ಕಷ್ಟಪಟ್ಟರೂ ಬರದೇ ಇರಲು ಹಲ್ಲಿನಿಂದ ಕಚ್ಚಿ ಕೀಳಲು ಹೋದನು. ಅದರೂ ಸಾಧ್ಯವಾಗಲಿಲ್ಲ. ಆಗ ಕೋಪದಿಂದ ಕತ್ತಿಯನ್ನು ಹಿಡಿದು 'ಎಲ ಬ್ರಾಹ್ಮಣ, ಮಂತ್ರವನ್ನು ಹಾಕಿರುವೆಯೋ ಏನು? ಬೇಗ ಮಂತ್ರವನ್ನು ಉಪಸಂಹರಿಸು. ಇಲ್ಲದಿದ್ದರೆ ಇದೋ ನೋಡು' ಎಂದು ಕತ್ತಿಯನ್ನು ತೋರಿಸಿದನು. ವಿಪ್ರನು ನಸುನಗುತ್ತ -'ಅಯ್ಯಾ, ಈ ಮಂತ್ರವು ಬಹು ರಹಸ್ಯವಾದುದು. ನಿನಗೂ ತಿಳಿಯಬೇಕೆಂದು ಕುತೂಹಲವಿದ್ದರೆ ವಿನೀತನಾಗಿ

ಕೇಳು, ಹೇಳುವೆನು'-ಎಂದನು. ಕಲಿವೈರಿಯು ಕೈ ಮುಗಿದು ವಿನೀತನಾಗಿ ನಿಂತುಕೊಂಡಿರಲು ವಿಪ್ರನು ಆಚಾರ್ಯನಾಗಿ ಸಮಸ್ತ ವೇದವೇದಾಂತಗಳೂ ಅಡಕವಾಗಿರುವ ಅಷ್ಟಾಕ್ಷರೀ ಮಂತ್ರವನ್ನು ಉಪದೇಶಿಸಿದನು. ಪುಲಕಾಂಚಿತನಾದ ಕಲಿವೈರಿಯು ಎದ್ದು ನೋಡುವ ವೇಳೆಗೆ ಶ್ರೀಯಃ ಪತಿಯಾದ ಶ್ರೀಮನ್ನಾರಾಯಣನು ಗರುಡವಾಹನನಾಗಿ ಕಂಗೊಳಿಸುತ್ತಿದ್ದನು. ಮಂತ್ರದಿಂದ ಪ್ರಭಾವಿತನೂ, ಪ್ರತಿಭಾಶಾಲಿಯೂ ಆದ ಆತನು ರಂಗೇಶನನ್ನು ಪರಮಭಕ್ತಿಯಿಂದ ಸ್ತುತಿಸಿದನು.

ಆತನ ದ್ರಾವಿಡಭಾಷೆಯ ಆ ಸ್ತೋತ್ರಗಳು ಆಶುಕವನ, ಚಿತ್ರಕವನ, ಮಧುರಕವನ ಮತ್ತು ವಿಸ್ತೃತಕವನರೂಪಗಳಲ್ಲಿರುವುದರಿಂದ, ಆತನಿಗೆ ಚತುಷ್ಕವೀಂದ್ರನೆಂಬ ಹೆಸರಾಯಿತು. ರಂಗನಾಥನು ಆತನ ಭಕ್ತಿಗೆ ಮೆಚ್ಚಿ ವರವನ್ನು ಕೇಳುವಂತೆ ಪ್ರೇರಿಸಲು ಆತನು ಪರಮಾತ್ಮನ ಸಾಕ್ಷಾತ್ಕಾರದಿಂದಲೇ ತೃಪ್ತನಾಗಿದ್ದರೂ ಸಹ ಲೋಕೋಜ್ಜೀವನಕ್ಕಾಗಿ ಬಿಲ್ವಾರಣ್ಯದಲ್ಲಿ ಪರಮಾತ್ಮನ ಸಾನಿಧ್ಯವನ್ನು ಬೇಡಿದನು. ಇಂದಿಗೂ ಅಲ್ಲಿ ಅರ್ಚಾರೂಪದಿಂದ ಪರಮಾತ್ಮನ ದರ್ಶನವನ್ನು ಪಡೆಯಬಹುದು. ಹೀಗೆ ರಂಗೇಶನು ಅನುಗ್ರಹಿಸಿ, ಶ್ರೀರಂಗಕ್ಕೆ ಬಂದು ನನ್ನ ಕೈಂಕರ್ಯವನ್ನು ಮಾಡಬೇಕೆಂದೂ, ಪ್ರಾಕಾರಗೋಪುರಗಳನ್ನೂ ನಿರ್ಮಿಸಬೇಕೆಂದೂ ಆಜ್ಞಾಪಿಸಲು ಕಲಿವೈರಿಯು ಅದನ್ನು ಪರಮಭಕ್ತಿಯಿಂದ ಸ್ವೀಕರಿಸಿದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀರಂಗೇಶ್ವರ ಪ್ರತ್ಯಕ್ಷವೆಂಬ ತೊಂಬತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

## ೧೦೦

ಚತುಷ್ಕವಿಯು ಶ್ರೀರಂಗಕ್ಕೆ ಹೋಗಿ ರಂಗನಾಥನ ಕೈಂಕರ್ಯದಲ್ಲಿ ಮಗ್ನನಾಗಿ ತನ್ನ ಆಪ್ತ ಶಿಷ್ಯರಲ್ಲಿ ಕೈಂಕರ್ಯಕ್ಕಾಗಿ ದ್ರವ್ಯಾರ್ಜನೆಯ ವಿಚಾರವಾಗಿ ಉಪಾಯವನ್ನು ಯೋಚಿಸುತ್ತಿದ್ದನು. ಕೆಲವರೆಂದರು -'ನಾಗಪಟ್ಟಣವೆಂಬ ಊರು; ಅಲ್ಲಿ ದೊಡ್ಡದಾದ ಸುವರ್ಣದ ಬೌದ್ಧಪ್ರತಿಮೆ ಇದೆ. ಹೇಗಾದರೂ ಅದನ್ನು ತಂದರೆ ಕೈಂಕರ್ಯವು ನಿರ್ವಿಘ್ನವಾಗಿ ನೆರವೇರುವುದು'. ಇದನ್ನು ಕೇಳಿ ನಾಗಪಟ್ಟಣಕ್ಕೆ ಹೋಗಿ ಸೌಂದರ್ಯಾರಣ್ಯ ನಾಯಕನಾದ ಸಾರಪುಷ್ಕರಿಣೀ ತೀರವಾಸಿಯಾದ ಭಗವಾನ್ ಸುಂದರರಾಜನನ್ನು ನಮಿಸಿ, ಬೌದ್ಧಾಲಯವನ್ನು ಹುಡುಕುತ್ತ ಹೊರಟನು. ಉನ್ನತವಾದ ಗೋಪುರದಿಂದ ಕೂಡಿದ ಬೌದ್ಧಾಲಯವು ಕಂಡು ಬಂದರೂ ಒಳಗೆ ಹೋಗುವ ಮಾರ್ಗವೇ ಕಾಣಲಿಲ್ಲ. ಇಂತಹ ಅತ್ಯದ್ಭುತಾಲಯವನ್ನು ನಿರ್ಮಿಸಿದ ಶಿಲ್ಪಿಯು ವೇಪಾಣವೆಂಬ ದ್ವೀಪದಲ್ಲಿರುವನೆಂದು ತಿಳಿಯಿತು. ಕೂಡಲೇ ಅಲ್ಲಿಗೆ ಹೋಗಿ ವ್ಯಾಪಾರಿಯಂತೆ ಇರುತ್ತ ಆ ಶಿಲ್ಪಿಯೊಡನೆಯೂ, ಅಕ್ಕಪಕ್ಕದವರೊಡನೆಯೂ ಸ್ನೇಹವನ್ನುಗಳಿಸಿ ಹಿತೈಷಿಯಂತೆ ಪರಕಾಲನು ಕೆಲವು ದಿನಗಳನ್ನು ಕಳೆದನು.

ಹೀಗಿರಲು ಒಂದು ದಿನ ರಹಸ್ಯವನ್ನು ತಿಳಿಯುವ ಉದ್ದೇಶದಿಂದ ಪರಕಾಲನು ಶಿಲ್ಪಿಯೊಡನೆ ಮಾತನಾಡುತ್ತ 'ಶಿಲ್ಪಿವರ್ಯ, ನೀನು ಇದೊಂದು ಆಶ್ಚರ್ಯಕರವಾದ ಸಂಗತಿಯನ್ನು ಕೇಳಿಲ್ಲವೆ? ನಾಗಪಟ್ಟಣದಲ್ಲಿ ಅದ್ಭುತವಾದುದೊಂದು ಬೌದ್ಧಾಲಯ

ವಿರುವುದಷ್ಟೆ? ಅದೂ ಅಲ್ಲಿದ್ದ ಸ್ವರ್ಣಪ್ರತಿಮೆ ಇವುಗಳ ಶಿಲ್ಪವು ಅಮಾನುಷವಾದುದೆಂದೇ ಹೇಳಬೇಕು. ಅಂತಹ ದಿವ್ಯಪ್ರತಿಮೆಯನ್ನು ಯಾರೋ ದುರಾತ್ಮರು ಅಪಹರಿಸಿಕೊಂಡು ಹೋದರಂತೆ' ಎನ್ನಲು, ಅದನ್ನು ರಚಿಸಿದವನು ತಾನೇ ಆದುದರಿಂದಲೂ ಅದರ ರಹಸ್ಯವು ಮತ್ತಾರಿಗೂ ತಿಳಿಯದೇ ಇದ್ದುದರಿಂದಲೂ ಶಿಲ್ಪಿಯು ಮೊದಲು ನಂಬಲಿಲ್ಲ, ಪರಕಾಲನ ವಾಕ್ಚಾತುರ್ಯದಿಂದ ನಂಬಿಕೆಯಾದಮೇಲೆ -'ಆಹಾ! ಇನ್ನೂ ಇದು ನನಗೆ ಕನಸೆಂದೇ ಕಾಣುತ್ತದೆ. ನಿಜವಾಗಿ ಯಾರೂ ಅಪಹರಿಸಲಾರರು.

ಆ ಮಂದಿರದ ಮೇಲುಭಾಗದಲ್ಲಿ ಎಡದಿಂದ ಬಲಕ್ಕೂ, ಬಲದಿಂದ ಎಡಕ್ಕೂ ತಿರುಗುವ ಚಕ್ರಗಳು ಒಂದರ ಮೇಲೊಂದು ರಚಿತವಾಗಿದೆ. ಅವೆರಡೂ ಒಂದೇ ಸಮನಾಗಿ ತಿರುಗುತ್ತಿರುತ್ತವೆ. ಬಾಳೆಯ ಕಂಬವನ್ನು ಕೊಟ್ಟು ಅವುಗಳು ತಿರುಗುವುದನ್ನು ನಿಲ್ಲಿಸಿ ಒಳಗೆ ಇಳಿಯಬೇಕು. ಇದನ್ನು ಬಿಟ್ಟರೆ ಬೇರೆ ದಾರಿಯೇ ಇಲ್ಲ. ಇದನ್ನು ತಿಳಿದು ಅಪಹರಿಸ ಬಲ್ಲವರಾರು?'- ಎಂದು ಶಿಲ್ಪಿಯು ತನ್ನ ಆಶ್ಚರ್ಯವನ್ನು ವ್ಯಕ್ತಪಡಿಸಿದನು. ತಿಳಿಯಬೇಕಾದು ದೆಲ್ಲವನ್ನು ತಿಳಿದ ಪರಕಾಲನು, ಶಿಲ್ಪಿಯನ್ನು ಸಮಾಧಾನ ಮಾಡಿ ತನ್ನ ಮನೆಗೆ ತೆರಳಿದನು. ಹಾಗೂ ರಾತ್ರಿಯು ಕಳೆಯುತ್ತಲೇ ದ್ವೀಪದಿಂದ ಹೊರಡುವ ಸಿದ್ಧತೆಯನ್ನು ಮಾಡಿದನು.

ಮಾರನೆಯ ದಿನ ಬೆಳಗ್ಗೆ ಅಡಿಕೆಯ ವರ್ತಕನೊಬ್ಬನು ಅದೇ ದ್ವೀಪದಿಂದ ನಾಗಪಟ್ಟಣಕ್ಕೆ ಹೊರಟ್ಟಿದ್ದನು. ತನ್ನ ನೌಕೆಯಲ್ಲಿ ಭರ್ತಿಯಾಗಿ ಅಡಿಕೆಯು ತುಂಬಿತ್ತು. ಅದೇ ದೋಣಿಯಲ್ಲಿ ಪರಕಾಲನೂ ತನ್ನ ಸ್ನೇಹಿತರೊಡನೆ ಕುಳಿತು ಪ್ರಯಾಣ ಮಾಡುತ್ತ ಒಂದು ಅಡಿಕೆಯನ್ನು ತೆಗೆದು ಅರ್ಧಕ್ಕೆ ಮುರಿದು, ಎಲ್ಲರಿಗೂ ತೋರಿಸಿ, ವರ್ತಕನನ್ನು ಕುರಿತು 'ಮಿತ್ರನೇ ನನ್ನ ಅರ್ಧ ಅಡಿಕೆಯು ನೀರಿನಲ್ಲಿ ಬಿದ್ದುಹೋಯಿತು. ನೌಕೆಯು ತೀರವನ್ನು ಮುಟ್ಟಿದ ಕೂಡಲೇ ನನ್ನ ಅರ್ಧಅಡಿಕೆಯನ್ನು ಕೊಡುವುದಾಗಿ ಬರೆದುಕೊಡು'- ಎಂದು ಕೇಳಿದನು. ವರ್ತಕನು -'ಇದಕ್ಕೆ ಪತ್ರವೇನು? ಎಷ್ಟು ಬೇಕೋ ತೆಗೆದುಕೋ'- ಎಂದನು. ಆದರೂ ನಿರ್ಬಂಧಿಸಿ ಪತ್ರವನ್ನು ಬರೆಸಿಕೊಂಡನು. ತೀರವನ್ನು ತಲುಪಿದ ಮೇಲೆ (ಒಂದು ಅಡಿಕೆಯ ಅರ್ಧ) ಅಡಿಕೆಯ ಅರ್ಧವನ್ನು ಕೊಡಹೋಗಲು ಪರಕಾಲನು ನೌಕೆಯಲ್ಲಿರುವ ಅರ್ಧಭಾಗವನ್ನು ಕೊಡಬೇಕೆಂದು ಕೇಳಿದನು. ಇದಕ್ಕಾಗಿ ಇಬ್ಬರಿಗೂ ವಿವಾದವುಂಟಾಗಿ, ಕೊನೆಗೆ ರಾಜನ ಸಮ್ಮುಖದಲ್ಲಿ ಪತ್ರದಂತೆ ವಿಚಾರಣೆಯು ನಡೆದು ನೌಕೆಯ ಅರ್ಧ ಅಡಿಕೆಯನ್ನು ಕೊಡಬೇಕೆಂದು ತೀರ್ಪಾಗಲು, ಪರಕಾಲನು ಅದನ್ನು ತೆಗೆದುಕೊಂಡು ಮನಸಾ ರಂಗನಾಥನನ್ನು ವಂದಿಸಿ ಕೈಂಕರ್ಯಾಕಾಂಕ್ಷೆಯಿಂದಲೂ, ಬೌದ್ಧ ಪ್ರತಿಮೆಯ ಅಪಹರಣದ ಕುತೂಹಲದಿಂದಲೂ ಅಲ್ಲಿಂದ ಹೊರಟನು.

ರಾತ್ರಿ ನಗರವೇ ನಿದ್ದೆ ಮಾಡುವಂತಿದೆ. ಈ ಸಮಯದಲ್ಲಿ ಪರಕಾಲನು ತನ್ನ ಭಾವಮೈದುನ ಪರಕಾಲನೊಡನೆ ಬೌದ್ಧಾಲಯಕ್ಕೆ ಹೋದನು. ರಹಸ್ಯವು ತಿಳಿದಿದ್ದುದರಿಂದ ಚಾತುರ್ಯದಿಂದ ಚಕ್ರವನ್ನು ನಿಲ್ಲಿಸಿ ಶಿಖರವನ್ನು ಮುರಿದು ಪ್ರತಿಮೆಯನ್ನು ಕೀಳಲು ಭಾವಮೈದುನನನ್ನು ಒಳಕ್ಕೆ ಇಳಿಸಿದನು. ಪರಕಾಲನು ಪ್ರತಿಮೆಯನ್ನು ಹೆದರಿಸುವಂತೆ -'ಈ ಅಲ್ಪತೇಜಸ್ಸಿನ ಬೌದ್ಧವಿಗ್ರಹಕ್ಕೆ ಸುವರ್ಣವೇಕೆ? ಕಲ್ಲೋ ಮಣ್ಣೋ ಮತ್ತೆ ಯಾವುದಾದರೂ ಮರವೋ ಆದರೂ ಸಾಕಾಗಿತ್ತು'-ಎನ್ನಲು ಮೂರ್ತಿಯು ನಡುಗಿತಂತೆ.

ಆದರೂ ಮಂತ್ರಮೂರ್ತಿಯಾಗಿದ್ದುದರಿಂದ ಅದನ್ನು ಸುಲಭವಾಗಿ ಕೀಳಲು ಸಾಧ್ಯವಾಗಲಿಲ್ಲವಂತೆ. ಅದಕ್ಕಾಗಿ ಅಲ್ಲಿ ಅಪವಿತ್ರತೆಯನ್ನುಂಟು ಮಾಡಿದ ಮೇಲೆ ಮೂರ್ತಿಯು ಕರಗತವಾಯಿತು. ಈ ಆನಂದದ ಭರದಲ್ಲಿ ಭಾವಮೈದುನನಾದ ಪರಕಾಲನ ಮೈ ಉಬ್ಬಿಹೋದುದರಿಂದ ಮೇಲಕ್ಕೆ ಬರಲು ಆಗಲಿಲ್ಲ. ಸಾವಾಕಾಶವಾದರೆ ಬೆಳಗಾಗಿ ಕೆಲಸವು ಕೆಟ್ಟುಹೋಗಬಹುದೆಂಬ ಭೀತಿಯಿಂದ, ಆತನ ಪ್ರಾರ್ಥನೆಯಂತೆಯೇ ಆತನನ್ನು ಛೇದಿಸಿ ವಿಗ್ರಹದೊಡನೆ ಆ ಊರನ್ನು ಬಿಟ್ಟು ಹೊರಟನು. ಹೊರಟು ಕೃಷ್ಣಕುಟೀರಪುರವನ್ನು ತಲುಪಿ ರಾತ್ರಿಯನ್ನು ಅಲ್ಲಿಯೇ ಕಳೆಯಲು ಯೋಚಿಸಿದನು. ಹೀಗೆ ಚಿಂತಿಸಿದ ಪರಕಾಲನು ಒಂದು ಭತ್ತದಗದ್ದೆಯ ಸಮೀಪದಲ್ಲಿ ನಿಂತನು. ಕೆಸರಿನಿಂದಲೂ, ನೀರಿನಿಂದಲೂ ಸುಮಾರು ಸೊಂಟದುದ್ದ ಆಳವಾದ ನೀರಿನಲ್ಲಿ ಪ್ರತಿಮೆಯನ್ನಿಟ್ಟು ಹುಣಸೆಯಮರದ ಕೆಳಗೆ ಕುಳಿತಕೂಡಲೇ ಆತನು ನಿದ್ರಾಪರವಶನಾದನು.

ಬೆಳಗಾಯಿತು. ಆ ಗದ್ದೆಯ ರೈತನು ಅಲ್ಲಿಗೆ ಕೆಲಸಕ್ಕೆ ಬರಲು ಪರಕಾಲನು ಜಮೀನು ತನ್ನದೆಂದೂ ಅದರಲ್ಲಿ ರೈತನು ಕೈಹಾಕಬಾರದೆಂದೂ ತಿಳಿಸಿದನು. ರೈತನಿಗೂ ಪರಕಾಲನಿಗೂ ಜಗಳವಾಗಿ ವ್ಯವಹಾರವು ರಾಜನವರೆಗೂ ಹೋಯಿತು. ಪಂಚಾಯಿತರು ಪರಕಾಲನನ್ನು ನೋಡಿ-' ಜಮೀನಿನ ಒಡೆಯನಾಗಲು ಮೂರು ಕಾರಣಗಳಲ್ಲಿ ಒಂದಾದರೂ ಇರಬೇಕು. ಮೊದಲನೆಯದು ಅನುಭವ, ಎರಡನೆಯದು ಸಾಕ್ಷಿಗಳು, ಮೂರನೆಯದು ಪತ್ರ. ನಿನಗೆ ಜಮೀನಿನ ಅನುಭವವಿಲ್ಲ, ಸಾಕ್ಷಿಗಳು ಇರುವಂತಿಲ್ಲ, ಪತ್ರವೇನಾದರೂ ಇದ್ದರೆ ತೋರಿಸು ?'- ಎಂದರು. ಪರಕಾಲನು ದೇವರನ್ನು ಮನಸಾಧ್ಯಾನಿಸಿ ಇಂತೆಂದನು. 'ನೀವು ಹೇಳಿದ ಮೂರು ಕಾರಣಗಳಲ್ಲಿ ಮೊದಲನೆಯದೇ ಸರಿ. ಈ ಊರಿನ ಪ್ರಭುವಾದ ದಾಮೋದರ (ದೇವರು)ನು ನನ್ನ ತಂದೆ. ಈ ಜಮೀನು ನನ್ನದೇ ಸರಿ'. ಈ ವಾದವನ್ನು ಕೇಳಿ ಪ್ರಭಾವಿತರಾದ ಪಂಚಾಯಿತರು ಸುಮ್ಮನಾದರು. ಹೀಗೆ ಜಯವನ್ನು ಪಡೆದರೂ ಸಹ ಪರಕಾಲನು ಆ ಊರಿನವರು ಕೈಂಕರ್ಯಕ್ಕೆ ವಿಘ್ನಮಾಡಿದರೆಂದು ಆ ಊರಿನಲ್ಲಿ ಎಂದೆಂದಿಗೂ ವ್ಯವಹಾರದಲ್ಲಿ ಜಯವು ಸಿಗದಿರಲೆಂದು ಶಪಿಸಿದನಂತೆ. ಇಂದಿಗೂ ಅಲ್ಲಿ ವ್ಯವಹಾರದಲ್ಲಿ ಜಯವು ದೊರಕುತ್ತಿಲ್ಲವಂತೆ. ಹಾಗೆಯೇ ದೇವರ ಪೂಜೆ ಮಾಡಲು ವಕುಳ ಪುಷ್ಪವನ್ನು ಸ್ವೀಕರಿಸುತ್ತ ಈ ಮರದಲ್ಲಿ ಕಾಯಿಗಳೇ ಬಿಡಬಾರದೆಂದೂ, ದಾರಿಯಲ್ಲಿ ಹೋಗುತ್ತಿರುವಾಗ ಬಾಯಾರಿಕೆಯಿಂದ ಜನರನ್ನು ನೀರು ಕೇಳಲು ನೀರು ಕೊಡದೇ ಇದ್ದುದರಿಂದ ಈ ಊರಿನ ಭಾವಿಗಳಲ್ಲಿ ನೀರು ಇಲ್ಲದೇ ಹೋಗಲಿ ಎಂದೂ ಶಪಿಸ್ಸಿದ್ದರಿಂದ ಈಗಲೂ ಆ ಊರಿನಲ್ಲಿ ವಕುಳದ್ರುಮವು ಶಲಾಟುರಹಿತವಾಗಿಯೂ, ಬಾವಿಗಳು ನೀರಿಲ್ಲದವುಗಳಾಗಿಯೂ ಇವೆಯಂತೆ. ಹಗಲೆಲ್ಲವೂ ಹೀಗೆ ತಿರುಗುತ್ತ ರಾತ್ರಿಯಾಗಲು ಪ್ರತಿಮೆಯನ್ನು ತೆಗೆದುಕೊಂಡು ಮುಂದೆ ಹೊರಟನು. ಅರ್ಧರಾತ್ರಿಯಲ್ಲಿ ಒಬ್ಬನೇ ಹೋಗುತ್ತಿರಲು ಅವನ ಹಿಂದೆ ಯಾರೋ ಬರುತ್ತಿರುವುದು ತಿಳಿಯಿತು. ಯಾರೆಂದು ವಿಚಾರಿಸಲು, ಆತನು ನಗರರಕ್ಷಕನೆಂದೂ, ಪರಕಾಲನ ರಕ್ಷಣೆಗಾಗಿ ಬರುತ್ತಿರುವುದಾಗಿಯೂ ತಿಳಿಸಿದನು. ಆಗ ಪರಕಾಲನು ತನಗೆ ಭಯವಿಲ್ಲವೆಂದೂ, ಊರಿನಲ್ಲಿರುವವರ ರಕ್ಷಣೆಯು ಮುಖ್ಯವಾದುದರಿಂದ ಹೊರಟು ಹೋಗಬೇಕೆಂದೂ ಎರಡು ಮೂರು ಸಲ ಹೇಳಿದನು.

ಆದರೂ ಆತನು ಹೋಗದೇ ಹಿಂದೆಯೇ ಬರುತ್ತಿದ್ದರಿಂದ, ಪರಕಾಲನಿಗೆ ಮತ್ತೊಂದು ಯೋಚನೆಗಿಟ್ಟುಕೊಂಡಿತು. ನಾನೇ ಪ್ರಸಿದ್ಧನಾದ ಕಳ್ಳನೆಂದರೆ ನನ್ನನ್ನೂ ಮೀರಿಸಿದ ಇವನು ಭಾರಿ ಕಳ್ಳನೇ ಇರಬೇಕು. ಇಷ್ಟು ಹೊತ್ತಿನಲ್ಲಿ ಜೊತೆಗೆ ಯಾರೂ ಇಲ್ಲದೆ ನನ್ನನ್ನು ಅನುಸರಿಸುವ ಈತನು ತಿಮಿಂಗಿಲದಂತೆ ಕಾಣುತ್ತಾನೆ. ಇವನನ್ನು ಇಲ್ಲಿಯೇ ಮುಗಿಸಿ ಬಿಡಬೇಕೆಂದು ಕತ್ತಿಯನ್ನು ಹಿಡಿಯಲು, ಶಂಖಚಕ್ರಧಾರಿಯಾದ ಶ್ರೀಮನ್ನಾರಾಯಣನು ಮೈದೋರಿದನು. ಆಗ ಪರಕಾಲನು ಪುಳಕಿತನಾಗಿ -'ದೇವ, ರಂಗನಾಥನೇನು? ನೀನೇನು? ಇಲ್ಲಿಯೇ ನಿನ್ನ ಕೈಂಕರ್ಯದಲ್ಲಿಯೇ ಇರುವೆನು, ಕ್ಷಮಿಸು'- ಎಂದು ಬೇಡಿದನು. ಆದರೆ ಭಕ್ತವತ್ಸಲನಾದ ಶ್ರೀಮನ್ನಾರಾಯಣನು -'ವತ್ಸ, ನಾನು ನಿನ್ನ ರಕ್ಷಣೆಗೆ ಮಾತ್ರ ಬಂದೆನಷ್ಟೆ. ನೀನು ನಿನ್ನ ಇಷ್ಟದಂತೆ ಶ್ರೀರಂಗಕ್ಕೆ ಹೋಗು. ಅಲ್ಲಿಯೇ ಕೈಂಕರ್ಯವನ್ನು ನೆರವೇರಿಸು'- ಎಂದು ಆಜ್ಞಾಪಿಸಿ ಮರೆಯಾಗಲು, ಪರಕಾಲನು ತೃಪ್ತನಾಗಿ ಹೊರಟು ಶ್ರೀರಂಗವನ್ನು ಸೇರಿ ಪ್ರತಿಮೆಯ ಕಿರುಬೆರಳನ್ನು ಬಿಟ್ಟು ಮಿಕ್ಕಭಾಗವನ್ನೆಲ್ಲ ಕರಗಿಸಿ ರೂಪಾಂತರವನ್ನು ಮಾಡಿ, ಶ್ರೀರಂಗೇಶನ ಕೈಂಕರ್ಯದಲ್ಲಿ ಆಸಕ್ತನಾಗಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಬೌದ್ಧಸ್ವರ್ಣ ಪ್ರತಿಮಾ ಹರಣವೆಂಬ ನೂರನೆಯ ಅಧ್ಯಾಯವು ಮುಗಿದುದು.

೧೦೧

ವೇದಾಂತಿಯು ಈ ಕಥೆಯಿಂದ ಆಶ್ಚರ್ಯಭರಿತನಾಗಿ ಪ್ರತಿಮಾಹರಣದಿಂದ ಸೌಗತರೇನು ಮಾಡಿದರೆಂಬುದನ್ನು ಕೇಳಲು ಭಟ್ಟರು ಹೇಳಲು ಉಪಕ್ರಮಿಸಿದರು-

ಮಾರನೆಯ ಬೆಳಿಗ್ಗೆ ಪೂಜಾರಿಯು ಎಂದಿನಂತೆ ಪೂಜೆಗಾಗಿ ಬೌದ್ಧಾಲಯವನ್ನು ಪ್ರವೇಶಿಸಿದನು. ಆದರೆ, ಅವನು ನೋಡಿದ್ದೇನು? ಕತ್ತರಿಸಿ ಒಂದು ಮುಂಡವು ಬಿದ್ದಿದೆ. ಬೌದ್ಧವಿಗ್ರಹವು ಮಾಯವಾಗಿದೆ. ಸ್ವಲ್ಪ ಹೊತ್ತಿನಲ್ಲಿಯೇ ಊರಿನಲ್ಲೆಲ್ಲ ಈ ಸಮಾಚಾರವು ಹಬ್ಬಿತು. ಸೌಗತರು (ಬೌದ್ಧರು) ಕಳ್ಳನನ್ನು ಪತ್ತೆಹಚ್ಚಲು ಅನೇಕ ದೂತರನ್ನಟ್ಟಿದರು. ಕಡೆಗೆ ಕಲಿವೈರಿಯೇ ಕಳ್ಳನೆಂದು ಪತ್ತೆಯಾಗಲು ಶ್ರೀರಂಗದಲ್ಲಿ ಸೌಗತರಿಗೂ ಕಲಿವೈರಿಗೂ ಭಯಂಕರವಾದ ಕದನವಾಯಿತು. ಇದನ್ನು ಕಂಡು ಕೆಲವರು ಮಧ್ಯಸ್ಥಗಾರರು ಇಬ್ಬರಿಗೂ ಒಂದು ಒಪ್ಪಂದವನ್ನು ಮಾಡಿಸಿದರು. ಕಲಿವೈರಿಯು 'ಇನ್ನು ಒಂದು ವರ್ಷದ ಕೊನೆಯಲ್ಲಿ ವಿಗ್ರಹದ ಕನಿಷ್ಠಾಂಗುಳಿ(ಕಿರುಬೆರಳು)ಯೂ ನ್ಯೂನವಾಗದಂತೆ ಕೊಡುವೆನು' ಎಂದು ಪತ್ರವನ್ನು ಬರೆದುಕೊಟ್ಟನು. ಸೌಗತರು ಹೊರಟುಹೋದರು.

ಇತ್ತ ಕಲಿವೈರಿಯು ವಿಗ್ರಹದ ಕಿರುಬೆರಳೊಂದನ್ನು ಕತ್ತರಿಸಿ ಜೋಪಾನವಾಗಿಟ್ಟು ಉಳಿದಭಾಗವನ್ನೆಲ್ಲಾ ಕರಗಿಸಿ ರಂಗೇಶನ ಕೈಂಕರ್ಯಕ್ಕೆ ವಿನಿಯೋಗಿಸಿಬಿಟ್ಟನು.

ಒಂದು ವರ್ಷವಾಯಿತು. ಸೌಗತರು ಬಂದರು. ಕಲಿವೈರಿಯು ಕಿರುಬೆರಳನ್ನು ಮಾತ್ರಕೊಟ್ಟನು. ಅದನ್ನು ನೋಡಿ 'ಕಿರುಬೆರಳೂ ಕಡಿಮೆಯಾಗದಂತೆ ಕೊಡುವೆನೆಂದು ಹೇಳಿ ಕಿರುಬೆರಳನ್ನು ಮಾತ್ರ ಕೊಟ್ಟಿರುವೆಯಲ್ಲ?'- ಎಂದು ಸೌಗತರು ಮತ್ತೆ ಕಲಹವನ್ನು

ಆರಂಭಿಸಲು ಪತ್ರವನ್ನು ತೋರಿಸಿದನು. ಆಗ ಅವರು ಚೋಳರಾಜನಲ್ಲಿ ದೂರು ಹೇಳಿ ಕೊಂಡರು. ರಾಜನು ವ್ಯವಹಾರಪಟುವಾದ ಕಲಿವೈರಿಯನ್ನು ವ್ಯವಹಾರದಂತೆ ಜಯಿಸಲು ಸಾಧ್ಯವಿಲ್ಲವೆಂದು ತಿಳಿದು, ಆತನನ್ನು ರಹಸ್ಯವಾಗಿ ಕರೆದು,-'ನೀನು ಅವರ ಪ್ರತಿಮೆಯನ್ನು ತೆಗೆದುಕೊಂಡಿರುವುದು ಸ್ಪಷ್ಟವಾಗಿದೆ. ಅವರನ್ನು ಏಕೆ ಪೀಡಿಸುತ್ತೀಯೆ? ಅವರ ಪ್ರತಿಮೆಯನ್ನು ಅವರಿಗೆ ಕೊಟ್ಟುಬಿಡು'- ಎಂದು ಮೃದುವಾಗಿ ಹೇಳಿದನು. ಕಲಿವೈರಿಯು -'ರಾಜನೇ, ನಾನು ಧರ್ಮಕ್ಕಾಗಿ ಈ ರೀತಿ ಮಾಡಿರುತ್ತೇನೆ. ಸೌಗತರು ನಾಸ್ತಿಕರು; ವೈದಿಕ ಮತವನ್ನು ದೂಷಿಸುವವರು. ಆದ್ದರಿಂದ ಅವರಿಗೆ ಉತ್ತೇಜನ ಕೊಡಬಾರದು. ಅವರನ್ನು ಮಟ್ಟಹಾಕಬೇಕು'- ಎಂದು ಬೋಧಿಸಿದನು. ಇದನ್ನು ಕೇಳಿದ ರಾಜನು ಸೌಗತರನ್ನು ಉದ್ದೇಶಿಸಿ -'ಯಾವುದೊಂದು ವ್ಯವಹಾರಕ್ಕೂ ಮೊದಲನೆಯದು ಪತ್ರವೇ ಸಹಕಾರಿ. ಅದಿಲ್ಲದಿದ್ದರೆ ಮಧ್ಯೆ ರಾಜನು ಪ್ರವೇಶಿಸಿ ನ್ಯಾಯವನ್ನು ನಿರ್ಣಯಿಸಬೇಕಾಗಿತ್ತು. ಈಗ ಪತ್ರದಲ್ಲಿ ನಮೂದಿಸಿರುವಂತೆಯೇ ನಡೆದಿರುವುದರಿಂದ ಪತ್ರವೇ ನ್ಯಾಯವನ್ನು ದೊರಕಿಸಿಕೊಟ್ಟಿದೆ. ಇದಕ್ಕಾಗಿ ಮತ್ತೆ ನಾನೇನು ಹೊಸದಾಗಿ ಕೊಡಬೇಕಾದುದಿಲ್ಲ'- ಎಂದು ಹೇಳಿ ಕಳುಹಿಸಿಬಿಟ್ಟನು.

ಹೀಗೆ ಈ ವಿವಾದವು ಮುಗಿಯಲು ಸ್ವರ್ಣಪ್ರತಿಮೆಯಿಂದಲೂ ಇತರ ಸಾಮಾಗ್ರಿಗಳಿಂದಲೂ ಕಲಿವೈರಿಯು ಪ್ರಾಕಾರ ಗೋಪುರಾದಿ ನಿರ್ಮಾಣ ಮಾಡುವ ಕೈಂಕರ್ಯವನ್ನು ಉತ್ತಮವಾದ ಶಿಲ್ಪಿಗಳಿಂದ ನೆರವೇರಿಸಿದನು. ಕೆಲಸವೇನೋ ಆಯಿತು. ಶಿಲ್ಪಿಗಳಿಗೆ ವೇತನವನ್ನು ಕೊಡಬೇಕು. ಅವರೆಲ್ಲರೂ ಕೇಳಿದರು. ಕಲಿವೈರಿಯ ಬಳಿ ಹಣವೆಲ್ಲಿದೆ? ಆತನು ಯೋಚಿಸಿದನು.'ಇವರೆಲ್ಲರಿಗೂ ಪರಮಪದವನ್ನು ಕರುಣಿಸಬೇಕು'. ಅಂತೆಯೇ ಅವರನ್ನು ಕರೆದು ಹೇಳಿದನು -'ನಿಮಗಾಗಿಯೇ ಶ್ವೇತದ್ವೀಪದಲ್ಲಿ ಅಪಾರವಾದ ಹಣವನ್ನು ಇಟ್ಟಿದ್ದೇನೆ. ನೀವು ಅಲ್ಲಿಗೆ ಬಂದರೆ ಕೊಡುತ್ತೇನೆ'. ಎಲ್ಲರೂ ಒಪ್ಪಿದರು. ಕಲಿವೈರಿಯು ನಿಪುಣನಾದ ನಾವಿಕನನ್ನು ಕರೆದು ಹೀಗೆಂದನು-'ನನ್ನೊಡನೆ ಅನೇಕ ಶಿಲ್ಪಿಗಳು ಬರುವರು. ಅವರೆಲ್ಲರನ್ನೂ ಶ್ವೇತದ್ವೀಪಕ್ಕೆ ಕರೆದುಕೊಂಡು ಹೋಗುವಂತೆ ಹೇಳಿದ್ದೇನೆ. ಕಾವೇರಿ ನದಿಯನ್ನು ದಾಟುವಾಗ ಅವರನ್ನು ಹೇಗಾದರೂ ಮಾಡಿ ಮುಳುಗಿಸಿ ಬಿಡು. ಇದು ಪಾಪಕರವೆಂದು ತಿಳಿಯಬೇಡ. 'ಮನ್ನಿಮಿತ್ತಂ ಕೃತಂ ಪಾಪಮಪಿ ಪುಣ್ಯಾಯ ಕಲ್ಪ್ಯತೇ। ಮಮನಾದೃಸ್ಯ ಪುಣ್ಯಂಚಾಪ್ಯತಿ ಪಾಪಾಯ ಕಲ್ಪತೇ॥'-ಎಂದು ಭಗವಂತನೇ ಹೇಳಿರುತ್ತಾನೆ. ಹೀಗೆ ನಾವಿಕನನ್ನು ಒಪ್ಪಿಸಿ ಕೆಲಸವನ್ನು ಮುಗಿಸಿದನು. ಮುಳುಗಿ ಸತ್ತವರನ್ನು ತೆಗೆಸಿ ಅಂತ್ಯಕ್ರಿಯೆಗೂ ಏರ್ಪಡಿಸಿದನು. ಅವರ ಸಂಬಂಧಿಕರಿಗೆ ಹೇಳಿ ಕಳುಹಿಸಿದನು. ಎಲ್ಲರೂ ಬಂದು ಹಣಕ್ಕಾಗಿ ಮತ್ತೆ ಜಗಳವಾಡಲು, ತಾನು ಹಣವನ್ನು ಕೊಟ್ಟಿರುವುದಾಗಿಯೂ, ಬೇಕಾದರೆ ಸತ್ತವರ ಮುಖಾಂತರವೇ ಅದನ್ನು ರುಜುವಾತು ಮಾಡಿಕೊಡುವುದಾಗಿಯೂ ತಿಳಿಸಿದನು. ಅದರಂತೆ ಮೃತರು ಆಕಾಶದಲ್ಲಿ ಕಾಣಿಸಿಕೊಂಡು -'ಈ ಮಹಾಭಾಗವತ ಶ್ರೇಷ್ಠನು ನಮಗೆ ಕೊಡಬೇಕಾದುದಕ್ಕಿಂತಲೂ ಸಹಸ್ರಾರುಪಾಲು ಹೆಚ್ಚಾಗಿ ಕರುಣಿಸಿರುವನು. ಇದಕ್ಕಾಗಿ ನೀವು ಯಾರೂ ಆತನಿಗೆ ತೊಂದರೆಕೊಡಬೇಡಿ.'-ಎಂದು ಹೇಳಿದರಂತೆ. ಇದನ್ನು ಕೇಳಿ ಎಲ್ಲರೂ ಕಲಿವೈರಿಯನ್ನು ದ್ವೇಷಿಸದೆ ಮಹಾಭಾಗವತ ಶ್ರೇಷ್ಠನೆಂದು ತಿಳಿದು ಅವನನ್ನು

ಗೌರವಿಸಿದರು.

ಅನಂತರ ಕಲಿವೈರಿಯು ಶ್ರೀರಂಗದಲ್ಲಿಯೇ ಇರುತ್ತಾ ಶ್ರೀರಂಗೇಶನಿಗೆ ಅನವರತವೂ ಅನೇಕ ವಿಧವಾದ ಕೈಂಕರ್ಯಗಳನ್ನು ಮಾಡಿಯೂ ಸಹ ಒಂದು ದಿನ ರಂಗೇಶನನ್ನು ಕುರಿತು-'ರಂಗೇಶ, ಅಜ್ಞನೂ, ಅಶಕ್ತನೂ, ಆದ ನಾನು ಮಾಡಿದ ಸಂಕಲ್ಪಮಾತ್ರ ದೊಡ್ಡದು. ಎಲ್ಲವನ್ನೂ ಸುವರ್ಣಮಯವನ್ನಾಗಿ ಮಾಡಬೇಕೆಂಬ ಹಂಬಲವು ನನ್ನನು ಬಹುವಾಗಿ ಕಾಡಿಸುತ್ತಿತ್ತು. ಆದರೆ ಕೆಲವು ಭಾಗವು ಹಾಗೆಯೇ ನಡೆಯಿತು. ಇನ್ನೂ ಎಷ್ಟೋ ಭಾಗ ಕೇವಲ ಕಲ್ಲು-ಮಣ್ಣಾಗಿಯೇ ಉಳಿಯಿತು'- ಎಂದು ದೀನನಾಗಿ ಬೇಡಿಕೊಂಡನು. ಆದರೆ, ರಂಗೇಶನ ಅನುಗ್ರಹದಿಂದ ಅವನು ಕಣ್ಣುಮುಚ್ಚಿ ತೆಗೆಯುವುದರೊಳಗಾಗಿ ಎಲ್ಲವೂ ಆತನಿಗೆ ಸ್ವರ್ಣಮಯವಾಗಿಯೇ ಕಂಡು ಬಂದಿತಂತೆ. ಅದನ್ನು ನೋಡಿ ಆನಂದದಿಂದ ಕಲಿವೈರಿಯು ತನ್ನನ್ನೇ ತಾನು ನಂಬದವನಾದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನಜಚರಿತದಲ್ಲಿ ಶಿಲ್ಪಕಾರಮೋಕ್ಷವೆಂಬ ನೂರೊಂದನೆಯ ಅಧ್ಯಾಯವು ಮುಗಿದುದು.

## ೧೦೨

ಅನಂತರ ಪರಕಾಲನು ಶ್ರೀರಂಗೇಶನ ಕೈಂಕರ್ಯವನ್ನು ಮಾಡುತ್ತಾ ತ್ರಿವಿಕ್ರಮಪುರದಿಂದ ಬ್ರಹ್ಮಪುರಕ್ಕೆ ಹೋಗುತ್ತಿದ್ದನು. ಕಹಳೆಯ ಧ್ವನಿಯಿಂದಲೂ, ಕೀರ್ತಿಯನ್ನು ಘೋಷಿಸುತ್ತಿರುವ ಶಿಷ್ಯರ ಮುಖದಿಂದಲೂ ಪರಕಾಲನ ಅಪ್ರತಿಹತವಾದ ವೈಭವವು ಗೋಚರಿಸುತ್ತಿತ್ತು.

ಬ್ರಹ್ಮಪುರದಲ್ಲಿ ಶಮಂಧರನೆಂಬ ಒಬ್ಬ ಶೈವ ವಿದ್ವಾಂಸನಿದ್ದನು. ಅವನು ಅನೇಕ ವಿದ್ವಾಂಸರನ್ನು ಜಯಿಸಿ ತಾನೇ ದೊಡ್ಡವನೆಂದೂ ತನ್ನ ಮುಂದೆ ನಿಲ್ಲುವವರು ಯಾರೂ ಇಲ್ಲವೆಂದೂ ತಿಳಿದಿದ್ದನು. ಆತನ ಶಿಷ್ಯರಲ್ಲಿ ಕೆಲವರು ಪರಕಾಲನ ಕೀರ್ತಿಯನ್ನು ಕೇಳಿ ಸಹಿಸಲಾರದೇ ತಮ್ಮ ಗುರುಗಳಲ್ಲಿ ವಾದಮಾಡಿ ಗೆದ್ದರೆ ಆಗ ಈ ಕೀರ್ತಿಯು ಸಲ್ಲುವುದೆಂದೂ, ಇಲ್ಲದಿದ್ದರೆ ಈ ರೀತಿ ಘೋಷಿಸಕೂಡದೆಂದೂ ತಡೆದರು. ಅವರ ಮಾತನ್ನು ಕೇಳಿ ಪರಾಕಲನು ವಾದಕ್ಕೆ ಸಿದ್ಧನಾಗಿ ಹೊರಟನು. ಶೈವಭೂಯಿಷ್ಠವಾದ ಆ ಪ್ರದೇಶದಲ್ಲಿ ವೃದ್ಧ ವೈಷ್ಣವಿಯೊಬ್ಬಳು ಪರಕಾಲನ ದೃಷ್ಟಿಗೆ ಗೋಚರಳಾದಳು. ಅವಳಲ್ಲಿದ್ದ ಶ್ರೀಕೃಷ್ಣನ ವಿಗ್ರಹವನ್ನು ಕಂಡು ಪರಕಾಲನಿಗೆ ಅದ್ಭುತವಾದ ಕವಿತಾಶಕ್ತಿಯುಂಟಾಯಿತು. ಕವನದ ವಿಚಾರವಾಗಿಯೇ ಇಬ್ಬರಿಗೂ ವಾದವುಂಟಾಗಲು, ಪರಕಾಲನ ಅದ್ಭುತವಾದ ಶಕ್ತಿಯನ್ನು ಕಂಡು ಶಮಂಧರನು ಬೆರಗಾಗಿ ಅವನನ್ನು ಗೌರವಿಸಿ ಕಳುಹಿಸಿಕೊಟ್ಟನು. ಅನಂತರ ಪರಕಾಲನು ಎಲ್ಲ ದಿವ್ಯದೇಶಗಳಲ್ಲಿಯೂ ಯಾತ್ರೆ ಮಾಡಿ ಆಯಾಯ ಹರಿವಿಗ್ರಹಗಳನ್ನು ಸಂದರ್ಶಿಸಿ, ಸ್ತುತಿಸಿ ಕೃತಕೃತ್ಯನಾದನು.

ಒಂದು ಸಲ ಶ್ರೀರಂಗದಲ್ಲಿ ಶ್ರೀರಂಗೇಶನು ದಿವ್ಯಸೂರಿಗಳನ್ನುದ್ದೇಶಿಸಿ ಕಾರ್ತಿಕಮಾಸ, ಕೃತಿಕಾನಕ್ಷತ್ರದ ದಿವಸ ಕಲಿವೈರಿಗೆ (ಪರಕಾಲ) ವಿಶೇಷ ಪೂಜೆಯನ್ನು ಸಲ್ಲಿಸಬೇಕೆಂದೂ, ಆ ದಿನದಿಂದ ಪುಷ್ಯಮಾಸ ಹಸ್ತ ನಕ್ಷತ್ರದವರೆಗೆ ದ್ರಾವಿಡವೇದ

(ಪ್ರಬಂಧ)ವನ್ನು ಅಧ್ಯಯನ ಮಾಡಬಾರದೆಂದೂ ಅದು ಅನಧ್ಯಯನ ಕಾಲವೆಂದೂ ವೇದಕ್ಕೆ ಉತ್ಸರ್ಜನೋಪಾಕರ್ಮಗಳಿರುವಂತೆ ದ್ರಾವಿಡವೇದವಾದ ಈ ಪ್ರಬಂಧಕ್ಕೂ ಉತ್ಸರ್ಜನೋಪಕ್ರಮಗಳುಂಟೆಂದೂ ವಿಧಿಸಿದನು. ಅದರಂತೆ ಈಗಲೂ ಅಧ್ಯಯನೋತ್ಸವವೂ ಅನಧ್ಯಯನವೂ ರೂಢಿಯಲ್ಲಿರುತ್ತದೆ.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ದ್ರಾವಿಡವೇದದ ಅಧ್ಯಯನೋಪಕ್ರಮೋತ್ಸರ್ಜನ ಕ್ರಮವೆಂಬ ನೂರೆರಡನೆಯ ಅಧ್ಯಾಯವು ಮುಗಿದುದು.

## ೧೦೩

ವೇದಾಂತಿಯು ಶಠಾರಿಯ ಚರಿತೆಯನ್ನು ಕೇಳಲು ಭಟ್ಟರು ಹೇಳಲು ಉಪಕ್ರಮಿಸಿದರು.

ನದಿಗಳಲ್ಲೆಲ್ಲ ತಾಮ್ರಪರ್ಣಿಯು ಶ್ರೇಷ್ಠವಾದುದು. ಅದರ ತೀರದಲ್ಲಿ ಕುರುಕಾನಗರವೆಂದು ಪ್ರಸಿದ್ಧವಾದುದೊಂದು ನಗರ. ಅಲ್ಲಿ ಭೂತನಾಥನೆಂದು ಹೆಸರು ವಾಸಿಯಾದ ಚತುರ್ಥವರ್ಣೋತ್ಪನ್ನನಾದ ರಾಜನಿದ್ದನು. ಅವನೂ ಅವನಿಂದ ಮುಂದಿನ ಏಳು ತಲೆಮಾರಿನವರೆಗಿನ ಪೋತ್ಕಾರಿಯವರೆಗೆ ಎಲ್ಲರೂ ಭಗವದ್ಭಕ್ತರೂ ಶುದ್ಧರೂ ಆಗಿದ್ದರು. ಆ ಪೋತ್ಕಾರಿಗೆ ಕಾರಿ ಎಂಬ ಮಗನು ಹುಟ್ಟಿದನು. ವಿದ್ಯೆ, ವಯಸ್ಸು, ರೂಪ ಯೌವನಾದಿಗಳಿಂದ ರಂಜಿಸುತ್ತಿದ್ದ ಆತನಿಗೆ ಮದುವೆ ಮಾಡುವುದು ತಂದೆಯ ಆಶೆಯಾಗಿದ್ದಿತು. ಪರಿಶಾರವೆಂಬ ಪುರದಲ್ಲಿ ಅನುರೂಪಳಾದ ಕನ್ಯೆಯೊಬ್ಬಳು ದೊರಕಿದಳು. ಆಕೆಯ ಹೆಸರು ನಾಥನಾಯಕೀ. ಸಂಭ್ರಮದಿಂದ ಮದುವೆಯು ನಡೆಯಿತು. ವಿವಾಹಿತನಾದ ಶ್ರೀರಾಮಚಂದ್ರನು ಸೀತಾದೇವಿಯೊಡನೆ ಅಯೋಧ್ಯೆಯನ್ನು ಪ್ರವೇಶಿಸುವಂತೆ, ಕಾರಿಯು ನಾಥನಾಯಕಿಯೊಡನೆ ಕುರುಕಾನಗರಿಯನ್ನು ಪ್ರವೇಶಿಸಿದನು. ಸಮಸ್ತ ರಾಜವೈಭವಗಳೂ ಪ್ರಕಾಶಿಸುತ್ತಿರಲು ಕಾರಿಯು ಗೃಹಸ್ಥಾಶ್ರಮವನ್ನು ವಹಿಸಿ ಸುಖದಿಂದಿರುತ್ತಿದ್ದನು.

ಹೀಗೆಯೇ ಕೆಲವು ದಿನಗಳು ಕಳೆದವು. ಅತ್ತೆಮಾವಂದಿರ ಆಹ್ವಾನ ಅಂಗೀಕರಿಸಿ ಕಾರಿಯು ಪತ್ನಿಯೊಡನೆ ಶ್ವಶುರ ಗೃಹಕ್ಕೆ ತೆರಳಿದನು. ಅಲ್ಲಿ ಕೆಲವು ದಿನಗಳಿದ್ದು ತನ್ನ ಊರಿಗೆ ಹಿಂತಿರುಗಿದನು. ಬರುತ್ತಾ ದಾರಿಯಲ್ಲಿ ಕುರಂಗನಗರವನ್ನು ಕಂಡನು. ಅಲ್ಲಿ ಕುರಂಗನಾಥನನ್ನು (ವಿಷ್ಣುದೇವರು) ಸಂದರ್ಶಿಸಿ ಪುತ್ರರೂಪವಾದ ವರವನ್ನು ಬೇಡಿದನು. ಕುರಂಗನಾಥನು ತಾನೇ ಅವನ ಪುತ್ರನಾಗಿ ಹುಟ್ಟುವುದಾಗಿ ಅನುಗ್ರಹಿಸಲು ಸಂತೋಷದಿಂದ ಊರಿಗೆ ಬಂದು ಸುಖವಾಗಿರುತ್ತಿದ್ದನು.

ವರದ ಮಹಿಮೆಯೆಂಬಂತೆ ನಾಥನಾಯಕಿಯು ಗರ್ಭವತಿಯಾದಳು. ದಿನಗಳು ತುಂಬಲು ವೈಶಾಖಮಾಸದ ವಿಶಾಖ ನಕ್ಷತ್ರದಲ್ಲಿ ಸುಂದರವಾದ ಗಂಡು ಮಗುವು ಜನಿಸಿತು. ಆದರೆ, ಜನಿಸಿದ ಮಾತ್ರದಿಂದಲೇ ಲೋಕದಲ್ಲಿ ಕಲಿಯು ಆವಿರ್ಭವಿಸಿರುವುದನ್ನು ನೋಡಿ ಕಣ್ಣು ಮುಚ್ಚಿಕೊಂಡೇ ಇದ್ದಿತು. ಹಾಲು ಸಹ ಕುಡಿಯುತ್ತಿರಲಿಲ್ಲ. ಆದರೂ ಶರೀರದಲ್ಲಿ ಯಾವುದೊಂದು ವಿಧವಾದ ಮಾಲಿನ್ಯವಾಗಲಿ ವಕ್ರತೆಯಾಗಲಿ ಇಲ್ಲದೇ ಮಗುವು

ಕೋಮಲವಾಗಿಯೂ ತೇಜಸ್ವಿಯಾಗಿಯೂ ಇತ್ತು. ಇದನ್ನು ನೋಡಿ ತಾಯಿತಂದೆಗಳು ಮಾತ್ರವೇ ಅಲ್ಲದೇ ಊರಿನವರೆಲ್ಲರೂ ಆಶ್ಚರ್ಯಚಕಿತರಾಗಿದ್ದರು. ಆಶೌಚದ ದಿನಗಳು ಕಳೆದಮೇಲೆ ತಾಯಿತಂದೆಗಳು ಸ್ನಾನ ಮಾಡಿ ಮಗುವನ್ನು ಎತ್ತಿಕೊಂಡು ನದಿಯ ತೀರದಲ್ಲಿರುವ ದೇವಸ್ಥಾನಕ್ಕೆ ಹೋದರು. ಅಲ್ಲಿ ಭಗವತ್ಸೇವೆಯನ್ನು ಮಾಡಿ-'ನಾವುಕಷ್ಟಪಟ್ಟರೂ ಫಲವು ದೊರಕಲಿಲ್ಲ. ಮಗುವು ಹುಟ್ಟಿದರೂ ಮಗನ ಸೌಖ್ಯವು ನಮಗೆ ಉಂಟಾಗಲಿಲ್ಲ'- ಎಂದು ಚಿಂತಿಸುತ್ತಾ ಸಮೀಪದಲ್ಲಿಯೇ ಇದ್ದ ಒಂದು ಹುಣಸೇಮರದ ಬುಡದಲ್ಲಿ ಆ ಮಗುವನ್ನು ಇಟ್ಟು ಮಗುವಿನಲ್ಲಿಯೂ ಭಗವದಂಶವನ್ನೇ ನೆನೆಯುತ್ತಾ 'ಮಾರ'ನೆಂದು ಅದಕ್ಕೆ ನಾಮಕರಣ ಮಾಡಿ ಮನೆಗೆ ಹೋದರು. (ಆ ಹುಣಸೇಮರವು ಆದಿಶೇಷನ ರೂಪವೆಂದೂ, ಮಾರ(ಆ ಮಗುವು) ವಿಶ್ವಕ್ಸೇನನ ಅಂಶದಿಂದ ಹುಟ್ಟಿದವನೆಂದೂ ಹೇಳುತ್ತಾರೆ)

ಇದೇ ಸಮಯದಲ್ಲಿ ನೆನೆಪಿಡಬೇಕಾದ ವಿಷಯವೆಂದರೆ ಮಧುರಕವಿಯ ವಿಚಾರ. ಕುರುಕಾನಗರಿಗೆ ಪೂರ್ವಭಾಗದಲ್ಲಿ ಕೋಳೂರು ಎಂಬ ಒಂದು ಊರು. ಅಲ್ಲಿ ಸಾಮಶಾಖಾ ಧ್ಯಾಯಿಯಾಗಿಯೂ ಪೂರ್ವಶಿಖೆಯುಳ್ಳವನಾಗಿಯೂ ವೇದವೇದಾಂತ ಪಾರಂಗತನಾಗಿಯೂ ಇದ್ದ ನಾರಾಯಣನೆಂಬ ಒಬ್ಬ ವಿಪ್ರನಿದ್ದನು. ಆತನಿಗೆ ಚೈತ್ರಮಾಸದ ಚಿತ್ತಾ ನಕ್ಷತ್ರದಲ್ಲಿ ಮಧುರಕವಿಯು ಜನಿಸಿದನು. ಆತನೂ ತಂದೆಯಂತೆಯೇ ಪರಮಜ್ಞಾನಿಯಾಗಿ ದಿವ್ಯದೇಶಗಳನ್ನು ಸಂಚರಿಸುತ್ತಾ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ಅಷ್ಟಾಂಗಯೋಗನಿರತ ನಾಗಿದ್ದನು.

ಇತ್ತ ಮಾರನು ಹುಣಸೇಮರದ ಬುಡದಲ್ಲಿಯೇ ಒಂದೇ ಸಮನಾಗಿ ನಿದ್ರಾಹಾರ ಗಲ್ಲದೆ ಅರ್ಚಾವಿಗ್ರಹದಂತೆ ಇರುತ್ತಿದ್ದನು. ಹೀಗೆ ಹದಿನಾರು ವರ್ಷಗಳು ಕಳೆದವು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶಠಕೋಪವತಾರವೆಂಬ ನೂರಮೂರನೆಯ ಅಧ್ಯಾಯವು ಮುಗಿದುದು.

## ೧೦೪

ಮಧುರಕವಿಯು ಬದರೀಕಾಶ್ರಮದಿಂದ ಹೊರಟು ಅಯೋಧ್ಯೆಗೆ ಬಂದನು. ಸರಯೂ ನದಿಯಲ್ಲಿ ಸ್ನಾನಮಾಡಿ ಶ್ರೀರಾಮಚಂದ್ರನನ್ನು ಸೇವಿಸುತ್ತ ಅಲ್ಲಿಯೇ ಇರುತ್ತಿದ್ದನು. ಒಂದು ದಿನ ರಾತ್ರಿ ಜಲಶಂಕೆಗೆ ಎದ್ದು ನೋಡಲು ದಕ್ಷಿಣ ದಿಕ್ಕಿನಲ್ಲಿ ಅತ್ಯದ್ಭುತವಾದ ತೇಜಸ್ಸನ್ನು ಕಂಡನು. ಯಾವುದಾದರೂ ಹಳ್ಳಿಯೋ ಪಟ್ಟಣವೋ ಹತ್ತಿಕೊಂಡು ಉರಿಯುವಂತೆ ದೂರದಲ್ಲಿ ಕಾಣಿಸುತ್ತಿತ್ತು. ಆದರೆ ಉರಿಯಂತೆ ಕಾಣುತ್ತಿರಲಿಲ್ಲ, ಎರಡು ಮೂರು ದಿನಗಳು ಪರೀಕ್ಷಿಸಿದರೂ ಇದೇ ರೀತಿ ಕಾಣುತ್ತಿದ್ದುದರಿಂದ ಅದು ಬೆಂಕಿಯಲ್ಲವೆಂದೂ ಯಾವುದೋ ಒಂದು ಅಪ್ರಾಕೃತವಾದ ದಿವ್ಯತೇಜಸ್ಸೆಂದೂ ತಿಳಿದುಕೊಂಡು ಅದನ್ನು ಪತ್ತೆಮಾಡ ಬೇಕೆಂದು ನಿಶ್ಚಯಿಸಿದನು. ಮಾರನೆಯ ದಿನವೇ ದಕ್ಷಿಣ ದಿಕ್ಕಿನ ಕಡೆಗೆ ಹೊರಟನು. ಸಂಜೆಯವರೆಗೆ ಯಾವುದಾದರೂ ಒಂದು ಸ್ಥಾನದಲ್ಲಿ ತಂಗಿರುವುದು. ಸಂಜೆಯಾದ ಮೇಲೆ ಆತೇಜಸ್ಸು ಕಾಣುವ ದಿಕ್ಕಿನಲ್ಲಿ ಪ್ರಯಾಣವನ್ನು ಮುಂದುವರೆಸುವುದು. ಇದೇ ರೀತಿ

ಮಧುರಕವಿಯು ಶ್ರೀರಂಗಕ್ಕೆ ಬಂದನು. ಅಲ್ಲಿಗೂ ದಕ್ಷಿಣದಿಕ್ಕಿನಲ್ಲಿ ಆ ತೇಜಸ್ಸು ಕಾಣಲು ಮುಂದೆ ಕುರುಕಾನಗರಿಯನ್ನು ಸೇರಿದನು. ಅಲ್ಲಿ ನೋಡಲು ಆ ತೇಜಸ್ಸು ಕಾಣಲಿಲ್ಲ. ಆದುದರಿಂದ ಇಲ್ಲಿಯೇ ತೇಜಸ್ಸಿಗೆ ಕಾರಣವಾದ ವಸ್ತುವಿರಬೇಕೆಂದು ಹುಡುಕಲಾರಂಭಿಸಿದನು. ಕಡೆಗೆ ಹುಣಸೇಮರದ ಬುಡದಲ್ಲಿ ಮಾರನನ್ನು ಕಂಡು ಅದೇ ಆ ವಸ್ತುವೆಂದು ಊಹಿಸಿದನು. ಮಾರನನ್ನು ಕಂಡು -'ಪದ್ಮಾಸನೋಪವಿಷ್ಟಂ ಪರಪದಯುಗಳೀ ನಿವಿಷ್ಟಚೈತನ್ಯಂ। ಪರತತ್ತ್ವ ಬೋಧಮುದ್ರಂ ಪರಮಾಚಾರ್ಯಂ ಪರಾಂಕುಶಂ ವಂದೇ'' ಎಂದು ಧ್ಯಾನಿಸಿದನು. ಕಣ್ಣುಮುಚ್ಚಿ ಮೌನವಾಗಿ ಕುಳಿತಿರುವುದನ್ನು ನೋಡಿ ಕವಿಗೆ ಈತನು ಕುರುಡನೋ ಮೂಗನೋ ಎಂಬ ಸಂಶಯವುಂಟಾಯಿತು. ಪರೀಕ್ಷಿಸಲು ಒಂದು ದೊಡ್ಡಕಲ್ಲನ್ನು ಮಾರನ ಮುಂಭಾಗದಲ್ಲಿ ಶಬ್ದವಾಗುವಂತೆ ಎತ್ತಿಹಾಕಿದನು. ಆಗ ಮಾರನು ಕಣ್ಣುಬಿಟ್ಟು ನೋಡಲು ಆತನು ಕುರುಡನಲ್ಲವೆಂದು ಕವಿಗೆ ತಿಳಿಯಿತು. ಆಗ ಸ್ವಲ್ಪ ಧೈರ್ಯದಿಂದ -'ಈ ಜೀವವು ಪ್ರಕೃತಿಯ ಉದರದಲ್ಲಿ ಜನಿಸಿದ್ದರೆ ಯಾವುದನ್ನು ತಿಂದು ಹೇಗೆ ಜೀವಿಸುತ್ತಿದೆ?'-ಎಂದು ಪ್ರಶ್ನಿಸಲು, ಮಾರನು -'ಅದನ್ನೇ ತಿಂದು ಅಲ್ಲಿಯೇ ಜೀವಿಸುತ್ತಿದೆ'- ಎಂದು ಉತ್ತರಕೊಟ್ಟು ಸುಮ್ಮನಾದನು. ಆಗ ಕವಿಯು ಆತನೇ ಶಠಕೋಪನೆಂದೂ ಪರಮಾಚಾರ್ಯನೆಂದೂ ತಿಳಿದು ಆಶ್ರಯಿಸಿ ಅವನ ಶುಶ್ರೂಷೆಯಲ್ಲೇ ನಿರತನಾಗಿದ್ದನು. ಈ ಸಮಯಕ್ಕೆ ಸರಿಯಾಗಿ ಪರವಾಸುದೇವನೇ ಮೊದಲಾಗಿ ದಿವ್ಯದೇಶಗಳಲ್ಲಿರುವ ವಿಷ್ಣುಮೂರ್ತಿಗಳೆಲ್ಲರೂ ಶಠಕೋಪನಿಗೆ ಪ್ರತ್ಯಕ್ಷರಾದರು. ಆಗ ಶಠಕೋಪನು (ಮಾರನು) ಎಲ್ಲ ದಿವ್ಯದೇಶಗಳಲ್ಲಿರುವ ಅರ್ಚಾರೂಪದ ವಿಷ್ಣು ಮೂರ್ತಿಗಳನ್ನು ಪರಿಪರಿಯಾಗಿ ಸ್ತುತಿಸಿರುವನು. ಈ ಸ್ತೋತ್ರಗಳು ದಿವ್ಯಪ್ರಬಂಧಗಳಲ್ಲಿ ಅತಿ ಮುಖ್ಯವಾದವು. ಶಠಾರಿಯು "ಶ್ರೀವೃತ್ತಂ" (ತಿರುವಿರುತ್ತಮ್) ಎಂಬ ಪ್ರಬಂಧದಲ್ಲಿ ಋಗ್ವೇದದ ಅರ್ಥವನ್ನೂ, 'ಆಶೀರಿ' ಪ್ರಬಂಧದಲ್ಲಿ ಯಜುರ್ವೇದದ ಅಭಿಪ್ರಾಯವನ್ನು 'ತಿರುವಂದಾದಿ'-ಪ್ರಬಂಧದಲ್ಲಿ ಅಥರ್ವಣದ ವೇದದ ಸಾರವನ್ನೂ, ಸಹಸ್ರಗೀತೆ (ತಿರುವಾಯ್‌ಮೊಳಿ) ಯಲ್ಲಿ ಸಾಮವೇದ ಸಾರವನ್ನು ನಿರೂಪಿಸಿದ್ದಾನೆ. ಈ ನಾಲ್ಕನೆಯ ಪ್ರಬಂಧದಲ್ಲಿ ಪ್ರಾಪ್ಯನಾದ ಪರಬ್ರಹ್ಮನ ಸ್ವರೂಪವೂ ಪ್ರಾಪ್ತೃವಾದ ಪ್ರತ್ಯಗಾತ್ಮನ (ಜೀವ) ಸ್ವರೂಪವೂ, ಪ್ರಾಪ್ತ್ಯುಪಾಯ ಫಲವೂ, ಪ್ರಾಪ್ತಿಯೂ, ಪ್ರಾಪ್ತಿ ವಿರೋಧಿಯ ಸ್ವರೂಪವೂ (ಅರ್ಥಪಂಚಕ) ವಿವರಿಸಲ್ಪಟ್ಟಿದೆ. ಎಲ್ಲ ವೇದವೇದಾಂತ ಶಾಸ್ತ್ರಸಾರವಾಗಿರುವ ಶುಭಕರವಾದ ದ್ವಯಕ್ಕಿಂತಲೂ ಬೇರೆ ಯಾವ ಮಂತ್ರವು ಮತ್ತೊಂದಿಲ್ಲ-ಎಂಬ ದ್ವಯಾರ್ಥವನ್ನು ನಿರೂಪಿಸಿ ಲೋಕರಕ್ಷಣವನ್ನು ಮಾಡಿರುತ್ತಾನೆ. ಹೀಗೆ ಭಗವದ್ವಿಷಯವಾದ ನಾಲ್ಕು ದಿವ್ಯ ಪ್ರಬಂಧಗಳನ್ನು ರಚಿಸಿ, ಲೋಕಹಿತಕ್ಕಾಗಿ ಅವುಗಳನ್ನು ಮಧುರಕವಿಯೇ ಮೊದಲಾದ ಸಜ್ಜನರಿಗೆ ಉಪದೇಶಿಸಿ ಎಂದಿನಂತೆಯೇ ಮೂವತ್ತೈದು ವರ್ಷಗಳು ಮಾತ್ರ ಈ ಲೋಕದಲ್ಲಿ ಇದ್ದನು. ಈತನ ಗ್ರಂಥಗಳಲ್ಲಿ -'ದರ್ಶನಂ ಪರಭಕ್ತಿಸ್ಸ್ಯಾತ್ ಪರಜ್ಞಾನಂತುಸಂಗಮಃ। ಪುನಃ ವಿಶ್ಲೇಷಭೀರುತ್ವಂ ಪರಮಾ ಭಕ್ತಿರುಚ್ಯತೇ॥'- ಎಂಬಂತೆ ಶಠಾರಿಯು ಪರಭಕ್ತಿ, ಪರಜ್ಞಾನ, ಪರಮಭಕ್ತಿಯುಕ್ತನಾಗಿ ಚಿಂಚಾ(ಹುಣಸೇಮರ)ಮೂಲದಲ್ಲಿಯೇ ಪದ್ಮಾಸನಾಸೀನನಾಗಿದ್ದು ಪರಮ ಪದವನ್ನು ಹೊಂದಿದನು. ಈತನಿಂದಲೇ ಶ್ರೀವೈಷ್ಣವ ಮತವು ಪ್ರಕಾಶಿತವಾಯಿತು. ಪ್ರಪನ್ನಜನಕೂಟಸ್ಥನಾದ ಶಠಾರಿಗಿಂತಲೂ ಪರಮಗುರುವಾಗಲಿ, ಪರಮಯೋಗಿಯಾದ

ಮಧುರಕವಿಗಿಂತಲೂ ಹೆಚ್ಚಿನ ಗುರುಭಕ್ತರಾಗಲಿ ಮತ್ತೊಬ್ಬರಿಲ್ಲ.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶಠಕೋಪನಿಗೆ ಶ್ರೀರಂಗನಾಥಾದಿ ಪ್ರತ್ಯಕ್ಷವೆಂಬ ನೂರನಾಲ್ಕನೆಯ ಅಧ್ಯಾಯವು ಮುಗಿದುದು.

೧೦೫

ಮತ್ತೆ ವೇದಾಂತಿಯು, ಮಧುರಕವಿಯು ಗುರುವಿಗೆ (ಶಠಾರಿಗೆ) ಯಾವ ಶುಶ್ರೂಷೆಯನ್ನು ಮಾಡುತ್ತಿದ್ದನೆಂದು ಕೇಳಲು ಭಟ್ಟರು ಇಂತೆಂದರು-

"ಗುರುಂ ಪ್ರಕಾಶಯೇತ್ ಧೀಮಾನ್" ಎಂಬಂತೆ ತಮ್ಮ ಆಚಾರ್ಯರಾದ ಶಠಾರಿಯನ್ನು ಅವರ ಪರಮೋತ್ತಮವಾದ ಗ್ರಂಥಗಳ ಪ್ರಚಾರದಿಂದಲೂ, ಉಪದೇಶದಿಂದಲೂ ಲೋಕದಲ್ಲಿ ಪ್ರಕಾಶಗೊಳಿಸುವುದೇ ಮುಖ್ಯಧ್ಯೇಯವೆಂದು ತಿಳಿದು ಕವಿಯು ಪ್ರಚಾರ ಮಾಡುತ್ತಿದ್ದರು. ಇದೇ ಇವರ ಮುಖ್ಯ ಸೇವೆ.

ಹೀಗೆ ಪ್ರಚಾರ ಮಾಡುತ್ತ ಒಂದು ಸಲ ಪಾಂಡ್ಯದೇಶದ ಮಧುರಾಪುರಿಗೆ ಹೋದರು. ಕಹಳೆಯ ಧ್ವನಿಯು ಮೊಳಗುತ್ತಿರಲು ಮಧುರಕವಿಯು 'ಕಾರಿಮಾರನು ಬಂದನು; ಕುರುಕಾನಗರಾಧೀಶ್ವರನು ಬಂದನು; ಸಹಸ್ರಗೀತೆಯ ದೇವನು ಬಂದನು; ಪರಾಂಕುಶನು ಬಂದನು; ದ್ರಾವಿಡಾಮ್ನಾಯ ಕವಿಸಾರ್ವಭೌಮನು ಬಂದನು; ಕವಿಕಂಠೀರವನು ಬಂದನು.' ಇದೇ ಮೊದಲಾಗಿ ಶಠಾರಿಯ ಕೀರ್ತಿಯನ್ನು ಘೋಷಿಸುತ್ತಿದ್ದನು. ಆ ನಗರದಲ್ಲಿ ಕಂಬನೆಂಬ ದ್ರಾವಿಡಕವಿ ಶ್ರೇಷ್ಠನಿದ್ದನು. ಆತನು ಅನೇಕ ಕವಿಗಳನ್ನು ಗೆದ್ದು ಕೀರ್ತಿವಂತನಾಗಿದ್ದನು. ಆ ಊರು ವಿದ್ವತ್ತಿಗೆ ನೆಲೆಯಾಗಿತ್ತು. ಶಂಖಪೀಠವೆಂಬ ವಿದ್ಯಾಪೀಠವು ಶೋಭಿಸುತ್ತಿತ್ತು. ಕಂಬನಿಗೆ ಅವನ ಅನುರೂಪರಾದ ಮುನ್ನೂರು ಜನ ಶಿಷ್ಯರಾದ ಕವಿಗಳಿದ್ದರು. ಅವರೂ ಸಹ ಅನೇಕ ವಿದ್ವಾಂಸರನ್ನು ಗೆದ್ದಿದ್ದರು. ಅವರು ಈ ಘೋಷಣೆಯನ್ನು ಕೇಳಿ ಸಹಿಸಲಾರದೇ ಮಧುರಕವಿಯನ್ನೂ ಆತನ ಕೋಲಾಹಲವನ್ನೂ ತಡೆದು, -'ಕವಿಶ್ರೇಷ್ಠರಾದ ನಮ್ಮ ಗುರುಗಳು (ಕಂಬನು) ಇರುವಾಗ ಮತ್ತೊಬ್ಬ ದ್ರಾವಿಡಾಮ್ನಾಯ ಕವಿಶ್ರೇಷ್ಠನು ಇರುವುದು ಹೇಗೆ ಸಾಧ್ಯ? ನಿಜವಾಗಿಯೂ ಅಂತಹ ಶಕ್ತಿಯಿದ್ದರೆ ನಮ್ಮ ಗುರುಗಳ ಬಳಿಗೆ ಬರಲಿ, ಸ್ಪರ್ಧೆನಡೆಯಲಿ; ಆಗ ಯಾರು ಶ್ರೇಷ್ಠರು ಎಂಬುದು ತಿಳಿಯುವುದು?'- ಎಂದರು. ಅದನ್ನು ಕೇಳಿ ಮಧುರ ಕವಿಯು -'ನಮ್ಮ ಗುರುಗಳು ಎಲ್ಲಿಗೂ ಬರುವವರಲ್ಲ. ಅವರ ಗ್ರಂಥಗಳಲ್ಲಿನ ಕೆಲವು ಪಾಶುರ (ಪದ್ಯ)ಗಳನ್ನು ಪತ್ರಿಕೆಯಲ್ಲಿ ಬರೆದು ಕೊಡುತ್ತೇನೆ. ಅದನ್ನು ಶಂಖಪೀಠದ ಮೇಲೆ ಇಡು. ನಿಮ್ಮಲ್ಲಿಯೂ ಯಾರು ಯಾರು ಶ್ರೇಷ್ಠರೋ ಅವರ ಕೃತಿಗಳನ್ನೂ ಪೀಠದ ಮೇಲೆ ಇಡಿ. ಪೀಠವು ಯಾವುದನ್ನು ಸ್ವೀಕರಿಸುತ್ತದೋ ಅದೇ ಶ್ರೇಷ್ಠವೆಂದೂ, ಅದನ್ನು ರಚಿಸಿದ ಕವಿಗಳೇ ಶ್ರೇಷ್ಠರೆಂದೂ ಭಾವಿಸೋಣ' ಎಂದು ಹೇಳಿ ಪತ್ರಿಕೆಯನ್ನು ಕೊಟ್ಟು ಕಳುಹಿಸಿದನು. ಅದರಂತೆಯೇ ಉಭಯಪಕ್ಷದವರೂ ಒಪ್ಪಿ ನಡೆಸಲು ಎಲ್ಲರ ಕೃತಿಗಳು ಕೆಳಕ್ಕೆ ಬಿದ್ದು ಶಠಾರಿಯ ಕೃತಿಯಿರುವ ಪತ್ರಿಕೆಯು ಪೀಠದಲ್ಲಿ ಶೋಭಿಸುತ್ತಿತ್ತು. ಆಗ ಕಂಬನು ಅಹಂಕಾರವನ್ನು ಬಿಟ್ಟು ಪತ್ರಿಕೆಯೊಡನೆ ಕುರುಕಾನಗರಕ್ಕೆ ಹೋಗಿ, ಶಠಾರಿಯನ್ನು

ಸೇವಿಸಿ, ಆಚಾರ್ಯರನ್ನಾಗಿ ಗ್ರಹಿಸಿ, ಅವರ ವಿಚಾರವಾಗಿ ಸ್ತುತಿರೂಪವಾದ ಅನೇಕ ಪದ್ಯಗಳನ್ನು ರಚಿಸಿದನು.

ಹೀಗೆ ಮಧುರಕವಿಯು ಗುರುವನ್ನು ಪ್ರಕಾಶಪಡಿಸುತ್ತಿದ್ದನು. ಅದರಂತೆ ಶ್ರೀವೈಷ್ಣವ ಮತವು ಪ್ರಚಾರದಲ್ಲಿಯೂ ಪ್ರಕಾಶವಾಗುವುದರಲ್ಲಿಯೂ ತೊಡಗಿತು. ಈ ಮತವು ಮುಮುಕ್ಷುಗಳಿಗೆ ಉಪಾದೇಯವಾಯಿತು. ಅದರಿಂದಲೇ -'ನ ಶಬ್ದಶಾಸ್ತ್ರಾಭಿರತಸ್ಯ ಮೋಕ್ಷೋ ನ ಚೈವ ರಂಭಾವಸಥ ಪ್ರಿಯಸ್ಯ। ನಭೋಜನಾಚ್ಛಾದನ ತತ್ಪರಸ್ಯ ನಲೋಕವೃತ್ತ ಗ್ರಹಣೇ ರತಸ್ಯ॥ ಏಕಾಂತಶೀಲಸ್ಯ ದೃಢವ್ರತಸ್ಯ ಪಂಚೇಂದ್ರಿಯ ಪ್ರೀತಿನಿವರ್ತಕಸ್ಯ। ಅಧ್ಯಾತ್ಮ ವಿದ್ಯಾರತ ಮಾನಸಸ್ಯ ಮೋಕ್ಷೋಧ್ರುವೋ ನಿತ್ಯಮಹಿಂಸಕಸ್ಯ॥ ಶಮದಮ ನಿಯತಾತ್ಮ ಸರ್ವಭೂತಾನು ಕಂಪೀ ವಿಷಯಸುಖವಿರಕ್ತೋ ಜ್ಞಾನದೃಷ್ಟಿಃ ಪ್ರಶಾಂತಃ। ಅನಿಯತ ನಿಯತಾತ್ಮಾ ನೈವ ಹೃಷ್ಟೋ ನರುಷ್ಟಃ ಪ್ರವಸಿತ ಇವಗೇಹೇ ವರ್ತತೇಯಃ ಸಮುಕ್ತ'-ಎಂಬ ತತ್ವವು ಮಧುರಕವಿಯಂತಹವರಿಂದ ಗುರುಪರಂಪರೆಯಾಗಿ ಲೋಕದಲ್ಲಿ ಪ್ರಚಾರಕ್ಕೆ ಬಂದಿತು. ರಾಮಾನುಜಸಿದ್ಧಾಂತವು ಲೋಕದಲ್ಲಿ ಬೆಳಗಿತು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶಠಜಿದ್ದಿವ್ಯಸೂಕ್ತಿಯ ಶಂಖಪೀಠಾಧಿರೋಹಣವೆಂಬ ನೂರೈದನೆಯ ಅಧ್ಯಾಯವು ಮುಗಿದುದು.

೧೦೬

ಅನಂತರ ವೇದಾಂತಿಯು ನಾಥಮುನಿಯ ವಿಚಾರವನ್ನು ಕೇಳಲು ಭಟ್ಟರು ಹೇಳಲು ಉಪಕ್ರಮಿಸಿದರು-

ವೀರನಾರಾಯಣಪುರದಲ್ಲಿ ಈಶ್ವರಭಟ್ಟರು ಪ್ರಖ್ಯಾತರಾದ ಬ್ರಾಹ್ಮಣರು. ಅವರಿಗೆ ವಿಶ್ವಕ್ಸೇನನ ಮಂತ್ರಿಯಾದ ಗಜವಕ್ತ್ರನ ಅಂಶದಿಂದ ನಾಥಮುನಿಗಳು ಜನಿಸಿದರು. ಅವರು ಸಕಲ ಶಾಸ್ತ್ರಾರ್ಥ ಸಂಪನ್ನರಾಗಿಯೂ, ಸದಾಚಾರನಿಷ್ಠರಾಗಿಯೂ ಇದ್ದರು. ಹೀಗಿರಲು ಅವರಿಗೆ ಈಶ್ವರಮುನಿ ಎಂಬ ಪುತ್ರನ ಜನನವಾಯಿತು. ನಾಥಮುನಿಗಳು ವೀರನಾರಾಯಣ ಪುರದಲ್ಲಿ ರಾಜಗೋಪಾಲ ದೇವರ ಕೈಂಕರ್ಯದಲ್ಲಿಯೇ ಆಸಕ್ತರಾಗಿದ್ದು ಸಮಸ್ತ ದಿವ್ಯದೇಶಗಳ ಯಾತ್ರೆಯನ್ನು ಮಾಡಿ, ಕೊನೆಗೆ ರಾಜಗೋಪಾಲನ ಆಜ್ಞೆಯಂತೆ ವೀರನಾರಾಯಣಪುರಕ್ಕೆ ಬಂದು ಅನೇಕ ಶಿಷ್ಯರಿಗೆ ಪಾಠ ಪ್ರವಚನಗಳನ್ನು ನಡೆಸುತ್ತಾ ಸುಖವಾಗಿ ಇರುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ನಾಥಮುನಿಗಳ ತೀರ್ಥಯಾತ್ರೆ ಎಂಬ ನೂರಾರನೆಯ ಅಧ್ಯಾಯವು ಮುಗಿದುದು.

೧೦೭

ಒಂದು ಸಾರಿ ಕೆಲವರು ಶ್ರೀವೈಷ್ಣವರು ವೀರನಾರಾಯಣಪುರಕ್ಕೆ ಬಂದು ರಾಜ ಗೋಪಾಲ ಸನ್ನಿಧಿಯಲ್ಲಿ ಶಾರ್ಙ್ಗಪಾಣಿ (ಕುಂಭಕೋಣ)ಯ ವಿಷಯವನ್ನುಳ್ಳ ಹತ್ತು ಪದ್ಯ

(ಪಾಶುರ-ಶಠಾರೀಕೃತ)ಗಳನ್ನು ಹಾಡಿದರು. ಅದನ್ನು ಕೇಳಿದ ನಾಥಮುನಿಗಳು-'ಎಲೈ ಶ್ರೀವೈಷ್ಣವೋತ್ತಮರೇ ಈ ದ್ರಾವಿಡ ಪ್ರಬಂಧವು ಅತ್ಯುತ್ತಮವಾಗಿದೆ. ನೀವು ಹಾಡಿದುದರಲ್ಲಿ ಇದು ಸಾವಿರದಲ್ಲಿ ಒಂದೆಂದು ತೋರುತ್ತದೆ. ಎಲ್ಲವನ್ನೂ ಅಭ್ಯಾಸ ಮಾಡಿದ್ದರೆ ಅವನ್ನು ಚೆನ್ನಾಗಿ ಹಾಡಿ ಪ್ರಚಾರ ಮಾಡಿ'- ಎಂದರು. ಅವರು -'ನಮಗೆ ಸಿಕ್ಕಿರುವುದು ಇಷ್ಟೇ'- ಎನ್ನಲು ಕೂಡಲೇ ನಾಥಮುನಿಗಳು ಕುಂಭಕೋಣಕ್ಕೆ ಹೋಗಿ ಶಾರ್ಙ್ಗಪಾಣಿಯನ್ನು ಅಷ್ಟಾಂಗಯೋಗದಿಂದ ಧ್ಯಾನಿಸಲು, ಪರಮಾತ್ಮನು ನಾಥಮುನಿಗಳಿಗೆ ಕುರುಕಾನಗರಿಯಲ್ಲಿ ಅರ್ಚಾರೂಪದಿಂದಿರುವ ಶಠಾರಿಯನ್ನು ತೋರಿಸಿದನು. ಸಂತುಷ್ಟರಾದ ಮುನಿಗಳು ಅಲ್ಲಿಗೆ ಹೋಗಿ ಹುಣಸೇಮರದ ಬುಡದಲ್ಲಿರುವ ಶಠಾರಿಯನ್ನು ವಂದಿಸಿ, ಅಲ್ಲಿ ಕೈಂಕರ್ಯ ನಿರತ ರಾಗಿದ್ದವರನ್ನು ಸಹಸ್ರಗೀತೆಯ ವಿಚಾರವಾಗಿ ಕೇಳಿದರು. ಅವರು ಬಹಳ ದುಃಖದಿಂದ ಇಂತೆಂದರು -'ಸಹಸ್ರಗೀತೆಯು ಅತ್ಯದ್ಭುತವಾದುದು. ಮೋಕ್ಷಪ್ರದವಾದುದು. ಶಠಾರಿಗಳು ಉಪದೇಶ ಮಾಡಿದಮೇಲೆ ಅದನ್ನು ಪಠಿಸಿದವರಿಗೆಲ್ಲ ಪ್ರಾಯಕವಾಗಿ ಶೀಘ್ರದಲ್ಲಿಯೇ ಮುಕ್ತಿಯು ದೊರಕಿದುದರಿಂದ ಆ ಗ್ರಂಥವು ಮಾರಕವೆಂದು ತಾಮ್ರಪರ್ಣಿ ನದಿಯಲ್ಲಿ ಎಸೆಯಲ್ಪಟ್ಟಿತು. ಆದರೆ ಅವುಗಳಲ್ಲಿ ಹತ್ತು ಪದ್ಯಗಳಿರುವ ಪತ್ರಿಕೆಯು ಪ್ರವಾಹ ವಿರುದ್ಧವಾಗಿ ಮೇಲಕ್ಕೆ ಬರಲು ಅದನ್ನು ತೆಗೆದು ರಕ್ಷಿಸಿಕೊಳ್ಳಲಾಯಿತು. ಈಗಲೂ ಈ ಹತ್ತು ಪದ್ಯಗಳನ್ನು ಯಾರಾದರೂ ಶಠಾರಿಯ ಮುಂದೆ ಸಾವಿರ ಸಾರಿ ಭಕ್ತಿಯಿಂದ ಪಾರಾಯಣ ಮಾಡಿದರೆ, ಶಠಾರಿಯು ಪ್ರಸನ್ನನಾಗಿ ಗೀತೆಯನ್ನು ಅನುಗ್ರಹಿಸುವುದರಲ್ಲಿ ಸಂದೇಹವಿಲ್ಲ'-ಎಂದರು ನಾಥಮುನಿಗಳು ಅದರಂತೆ ಪಾರಾಯಣ ಮಾಡಲು ಸಹಸ್ರಗೀತೆಯು ಕರತಲಾಮಲಕದಂತೆ ಗೋಚರಿಸಿತು. ಅಷ್ಟೇ ಅಲ್ಲದೇ ಶಿಷ್ಯವತ್ಸಲನಾದ ಶಠಾರಿಯ ಅನುಗ್ರಹದಿಂದ ನಾಥಮುನಿಗಳಿಗೆ ಭವಿಷ್ಯದಾಚಾರ್ಯರ (ರಾಮಾನುಜಾಚಾರ್ಯರ) ಅರ್ಚಾವಿಗ್ರಹವೂ ದೊರಕಿತು. (ಶಿಲ್ಪಿಯೊಬ್ಬನಿಗೆ ಶಠಾರಿಯು ಕನಸ್ಸಿನಲ್ಲಿ ಕಾಣಿಸಿಕೊಂಡು ಆಚಾರ್ಯರ ವಿಗ್ರಹವನ್ನು ಮಾಡಿ ನಾಥಮುನಿಗಳಿಗೆ ಕೊಡಬೇಕೆಂದು ತಿಳಿಸಿದಂತೆಯೂ, ಆ ವಿಗ್ರಹವು ಕ್ರಮವಾಗಿ ಶಿಷ್ಯ, ಪ್ರಶಿಷ್ಯರಿಗೆ ತಲುಪಿ, ಕೊನೆಗೆ ರಾಮಾನುಜಾಚಾರ್ಯರು ಗೋಷ್ಠೀಪೂರ್ಣರಲ್ಲಿ ಮಂತ್ರಾರ್ಥವನ್ನು ಪಡೆಯುತ್ತಿರಲು ಗೋಷ್ಠೀಪೂರ್ಣರು ತಮ್ಮ ಪುತ್ರಿಗೆ ಕೊಟ್ಟಿದ್ದ ಅರ್ಚಾವಿಗ್ರಹವು ರಾಮಾನುಜರಲ್ಲಿ ಲೀನವಾಯಿತೆಂದು ಹೇಳುತ್ತಾರೆ) ಹೀಗೆ ಅಂತರ್ಹಿತವಾಗಿದ್ದ ಸಹಸ್ರಗೀತೆ (ತಿರುವಾಯ್‌ಮೊಳಿ)ಯನ್ನು ಉದ್ಧರಿಸಿ, ದೇವಗಾನದಂತೆ ಹಾಡುವುದನ್ನು ತಮ್ಮ ಸೋದರಳಿಯಂದಿರಿಗೆ ಕಲಿಸಿ, ಉತ್ಸವಾದಿಗಳಲ್ಲಿ ಮಧುರವಾಗಿ ಪಾರಾಯಣ ಮಾಡುವಂತೆ ಏರ್ಪಡಿಸಿ, ಪ್ರಚಾರಗೊಳಿಸಿ, ನಾಥಮುನಿಗಳು ಲೋಕಕಲ್ಯಾಣವನ್ನು ಮಾಡಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ನಾಥಮುನಿಗಳಿಗೆ ಭವಿಷ್ಯದಾಚಾರ್ಯ ವಿಗ್ರಹಪ್ರಾಪ್ತಿ ಎಂಬ ನೂರೇಳನೆಯ ಅಧ್ಯಾಯವು ಮುಗಿದುದು.

## ೧೦೮

ಚೋಳದೇಶದಲ್ಲಿ ಇಬ್ಬರು ವಾರಾಂಗನೆಯರಿದ್ದರು. ಒಬ್ಬಳು

ದೇವಗಾನದಲ್ಲಯೂ, ಮತ್ತೊಬ್ಬಳು ಮರ್ತ್ಯಗಾನದಲ್ಲಿಯೂ ನಿಪುಣಳು. ಒಂದು ಸಲ ಅವರಿಬ್ಬರಿಗೂ ತಮ್ಮ ತಮ್ಮ ವಿದ್ಯೆಯಲ್ಲಿ ಸ್ಪರ್ಧೆಯುಂಟಾಗಲು ಚೋಳಭೂಪಾಲ ಕ್ರಿಮಿಕಂಠಚೋಳನ ಆಸ್ಥಾನದಲ್ಲಿ ಸಭೆಯು ಸೇರಿತು. ಗಾನವು ಸುಶ್ರಾವ್ಯವಾಗಿತ್ತು. ಅಲ್ಲಿದ್ದವರಿಗೆ ದೇವಗಾನದ ರಹಸ್ಯವು ಗೊತ್ತಿಲ್ಲದ್ದರಿಂದ ಮರ್ತ್ಯಗಾನ ನಿಪುಣಳಿಗೆ ಪುರಸ್ಕಾರವು ದೊರಯಿತು. ದೇವಗಾನವನ್ನು ಹಾಡುವ ಪ್ರಜ್ಞಾವತಿಯು ತನ್ನ ಗಾನವನ್ನು ತಿಳಿಯುವವರು ಯಾರಿರ ಬಹುದೆಂದು ತಿಳಿಯಲು ದಿವ್ಯದೇಶಗಳಲ್ಲೆಲ್ಲ ಸಂಚರಿಸುತ್ತ ವೀರನಾರಾಯಣಪುರಕ್ಕೆ ಬಂದಳು. ಅಲ್ಲಿ ರಾಜಗೋಪಾಲಸ್ವಾಮಿಯ ಸನ್ನಿಧಿಯಲ್ಲಿ ಗಾನ ಮಾಡಲು, ಶ್ರೀ ನಾಥಯೋಗಿಯು ಪರಮಸಂತುಷ್ಟರಾಗಿ, ದೇವರ ತೀರ್ಥಪ್ರಸಾದ ಮೊದಲಾದವುಗಳನ್ನು ಕೊಟ್ಟು, ಆಕೆಯನ್ನು ಗೌರವಿಸಿದರು. ಆಗ ಆಕೆಯು ಚೋಳರಾಜನಲ್ಲಿ ಹೋಗಿ ಈ ವೃತ್ತಾಂತವನ್ನು ತಿಳಿಸಲು, ರಾಜನು ಮತ್ತೊಮ್ಮೆ ಸಭೆಯನ್ನು ಕರೆದನು. ಶ್ರೀ ನಾಥಮುನಿಗಳಿಗೂ ಆಹ್ವಾನವು ಕೊಡಲ್ಪಟ್ಟಿತ್ತು. ಈ ಸಲವೂ ಇಬ್ಬರ ಗಾಯನವೂ ನಡೆಯಿತು. ನಾಥಮುನಿಗಳೊಬ್ಬರನ್ನು ಬಿಟ್ಟು ಮತ್ತೆ ಯಾರೂ ದೇವಗಾನವನ್ನು ಅಭಿನಂದಿಸಲಿಲ್ಲ. ಆಗ ರಾಜನು ನಾಥಮುನಿಗಳಲ್ಲಿ ಅದರ (ದೇವಗಾನದ) ರಹಸ್ಯವನ್ನು ಕೇಳಿ ತಿಳಿದುಕೊಂಡನು. ನಾಥಮುನಿಗಳಲ್ಲಿ ರಾಜನ ಭಕ್ತಿಯು ಹೆಚ್ಚಿತು. ಅಪರಿಮಿತವಾದ ಧನದಿಂದ ಅವರನ್ನು ಗೌರವಿಸ ಬಯಸಿದನು. ಆದರೆ ನಾಥಮುನಿಗಳು ಆ ರಾಜಧನ ಸ್ವೀಕರಿಸಲು ಒಪ್ಪಲಿಲ್ಲ, ಮತ್ತೆ ವೀರನಾರಾಯಣ ಪುರಕ್ಕೆ ಹೋಗಿ ಅಲ್ಲಿಯೇ ಅಷ್ಟಾಂಗಯೋಗನಿರತರಾಗಿಯೂ ಭಗವತ್ಕೈಂಕರ್ಯಾ ಸಕ್ತಚಿತ್ತರಾಗಿಯೂ ಇದ್ದರು.

ನಾಥಮುನಿಗಳಿಗೆ ಪದ್ಮಾಕ್ಷ, ಕುರುಕಾನಾಥನೇ ಮೊದಲಾದ ಹನ್ನೊಂದು ಜನ ಪ್ರಸಿದ್ಧರಾದ ಶಿಷ್ಯರಿದ್ದರು. ಅವರಲ್ಲಿ ವಿಶೇಷವಾಗಿ ಮೊದಲನೆಯ ಇಬ್ಬರು ಶಿಷ್ಯರಿಗೆ ಯೋಗರಹಸ್ಯವನ್ನೂ ಮಂತ್ರಾರ್ಥಗಳನ್ನೂ ಉಪದೇಶಿಸಿ ತಾವು ಯೋಗನಿರತರಾಗಿದ್ದರು. ಆ ಸಮಯದಲ್ಲಿ ಚೋಳರಾಜನು ಗುರುಗಳನ್ನು ನೋಡಲು ಬಂದು ಅವರು ಯೋಗದಲ್ಲಿರಲು ಹಿಂತಿರುಗಿ ಹೋಗುತ್ತಿದ್ದನು. ಅಷ್ಟರಲ್ಲಿ ನಾಥಮುನಿಯು ಯೋಗದಲ್ಲಿ ಶ್ರೀಕೃಷ್ಣನು ಗೋಪಿಯರೊಡನೆ ಇರುವಂತೆ ಕಂಡು ರಾಜನನ್ನೇ ಕೃಷ್ಣನೆಂದು ಭಾವಿಸಿ ಅವನ ಹಿಂದೆ ಓಡಲಾರಂಭಿಸಿದರು. ಶಿಷ್ಯರು ಇದನ್ನು ಕಂಡು ಗಾಭರಿಯಾಗಿ ಅವರನ್ನು ತಡೆಯಲು ಅವರ ಯೋಗವು ಭಗ್ನವಾಗಿ ಮನೆಗೆ ಬಂದರು. ಹೀಗೆ ಯೋಗಮಹಿಮೆಯಿಂದ ಇವರ ಪರಮಭಕ್ತಿಯು ಪರಮಾತ್ಮನಲ್ಲಿ ಸ್ಥಿರವಾಗಿ ನೆಲಸಿತು. ಇವರು ಶಿಷ್ಯರಿಗೆ ಉಪದೇಶ ಮಾಡಿದುದಲ್ಲದೇ ನ್ಯಾಯತತ್ತ್ವ, ಪುರುಷನಿರ್ಣಯ, ಯೋಗರಹಸ್ಯವೆಂಬ ಮೂರು ಗ್ರಂಥಗಳನ್ನು ರಚಿಸಿದರು. ಅವುಗಳನ್ನು ಶಿಷ್ಯರಿಗೆ ಉಪದೇಶಿಸಿ ಮುಖ್ಯಶಿಷ್ಯರನ್ನು ಕರೆದು -'ಮುಂದೆ ಯಾಮುನಾಚಾರ್ಯನೆಂದು ಪ್ರಸಿದ್ಧನಾಗುವ ನನ್ನಪೌತ್ರನು ಜನಿಸುವನು. ಅವನಿಗೆ ನೀವು ಎಲ್ಲ ಶಾಸ್ತ್ರಾರ್ಥಗಳನ್ನು ಅನುಗ್ರಹಿಸಬೇಕೆಂದು ಆಜ್ಞಾಪಿಸಿ ಮತ್ತೆ ಯೋಗನಿರತನಾಗಿದ್ದರು. ಈ ಸಮಯದಲ್ಲಿಯೇ ಚೋಳರಾಜನು ಶಬರರೂಪದಿಂದ ಮೃಗವಿಹಾರಕ್ಕೆಂದು ಬಂದಿದ್ದು ಹೊರಟುಹೋದನು. ನಾಥಮುನಿಗಳು ಯೋಗವಿಮುಖರಾದ ಕೂಡಲೇ ಅವರ ಮಗಳು ಅವರಿಗೆ ಅದ್ಭುತವಾದ ವಿಚಾರವನ್ನು ಅರುಹಿದಳು. 'ಅಪ್ಪ, ಈಗ ನಾನೊಂದು ವಿಚಿತ್ರವಾದ

ಸಂಗತಿಯನ್ನು ಕಂಡೆನು. ತರುಣರೂ, ರೂಪಸಂಪನ್ನರೂ, ಸುಕುಮಾರರೂ, ಮಹಾಬಲಶಾಲಿಗಳೂ, ಕಮಲದಂತೆ ವಿಶಾಲಾಕ್ಷರೂ, ಚೀರಕೃಷ್ಣಾಜಿನಾಂಬರಧಾರಿಗಳೂ, ಧನುಷ್ಪಾಣಿಗಳೂ ಆದ ಇಬ್ಬರು ಕುಮಾರು ನಮ್ಮ ಮನೆಗೆ ಬಂದಿದ್ದರು. ಅವರೊಡನೆ ಸುಕುಮಾರಿಯಾದ ಬಾಲೆಯೋರ್ವಳಿದ್ದಳು. ಇನ್ನೊಂದು ವಿಚಿತ್ರವೆಂದರೆ, ಒಂದು ಬೃಹದಾಕಾರದ ಕೋತಿಯಿತ್ತು. ಬಂದಿದ್ದ ಕುಮಾರರು ನಿನ್ನನ್ನು ಹುಡುಕುತ್ತ ಇದೇ ದಾರಿಯಲ್ಲೇ ಹೋದರು'- ಈ ಮಾತನ್ನು ಕೇಳಿದ ನಾಥಮುನಿಗಳು 'ಅಗ್ರತಃ ಪ್ರಯಯೌ ರಾಮಃ ಸೀತಾಮಧ್ಯೇ ಸುಮಧ್ಯಮಾ। ಪೃಷ್ಠತಸ್ತು ಧನುಷ್ಪಾಣಿಃ ಲಕ್ಷ್ಮಣೋಽನುಜಗಾಮ ಹ'- ಎಂದು ರಾಮಾಯಣದ ಶ್ಲೋಕದ ಅಭಿಪ್ರಾಯವನ್ನು ಮನಸ್ಸಿಗೆ ತಂದುಕೊಂಡು ಎಲ್ಲಿದ್ದರೂ ಅವರನ್ನು ಕಂಡೇಕಾಣುವೆನೆಂದು ಹಟಹಿಡಿದು ದಾರಿಯಲ್ಲಿ ಕಂಡಕಂಡವರನ್ನೆಲ್ಲ "ಇಂತಹವರನ್ನು ಕಂಡಿರಾ?" ಎಂದು ಕೇಳುತ್ತಾ ಕಡೆಗೆ ಯಾವುದೋ ಒಂದು ವನಪ್ರದೇಶದಲ್ಲಿ ಶ್ರೀರಾಮಚಂದ್ರನ ಪ್ರೇಮ ಪರವಶತೆಯಿಂದ ಯೋಗಾಸಕ್ತರಾಗಿ ಅದೇ ಕಾರಣದಿಂದ ಮಹಾಪ್ರಸ್ಥಾನವನ್ನೈದಿದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಶ್ರೀನಾಥಮುನಿಗಳ ಚರಮದೆಶೆಯೆಂಬ ನೂರೆಂಟನೆಯ ಅಧ್ಯಾಯವು ಮುಗಿದುದು.

## ೧೦೯

ಶ್ರೀನಾಥಮುನಿಗಳ ಶಿಷ್ಯರು ಅವರ ಕೀರ್ತಿಯನ್ನು ಹರಡುತ್ತ ರಾಮಾನುಜ ಸಿದ್ಧಾಂತವನ್ನು ಪ್ರಚಾರಪಡಿಸುತ್ತಿದ್ದರು. ಅವರಲ್ಲಿ ಶ್ರೀಕೃಷ್ಣ ಲಕ್ಷ್ಮೀನಾಥನೆಂಬುವವನ ಚರಿತ್ರೆಯು ಅತ್ಯದ್ಭುತವಾದುದು.

ಶ್ರೀಕೃಷ್ಣಲಕ್ಷ್ಮೀನಾಥನು, ಕೃಷ್ಣಮಂಗಳ ಕ್ಷೇತ್ರದ ಒಬ್ಬ ಶ್ರೀವೈಷ್ಣವನು. ಅವನಿಗೆ ಬಾಲ್ಯದಲ್ಲಿ ಉಪನಯನಾದಿ ಸಂಸ್ಕಾರಗಳು ನಡೆದು ನೆಪಮಾತ್ರಕ್ಕೆ ವಿದ್ಯಾಭ್ಯಾಸವೂ ಆಯಿತು. ನಾಥಮುನಿಗಳು ಆತನನ್ನು ಪಂಚಸಂಸ್ಕಾರಗಳಿಂದ ಸಂಸ್ಕರಿಸಿದರು. ಅನಂತರ ಆತನು ಗೃಹಸ್ಥನಾಗಿ ಒಂದು ಸಣ್ಣ ಉಪವನದಲ್ಲಿ ಹೂ-ತುಳಸಿ ಮೊದಲಾದುವುಗಳನ್ನು ಬೆಳೆಸಿ ಮಾಲಿಕೆಗಳನ್ನು ಕಟ್ಟಿ ಬಹು ಭಕ್ತಿಯಿಂದ ಭಕ್ತವತ್ಸಲದೇವನ ಕೈಂಕರ್ಯದಲ್ಲಿಯೇ ನಿರತನಾಗಿದ್ದನು.

ಭಗವಾನ್ ಭಕ್ತವತ್ಸಲನು ಕೃಷ್ಣಲಕ್ಷ್ಮೀನಾಥನ ಭಕ್ತಿಗೆ ಮೆಚ್ಚಿ ತನ್ನಲ್ಲಿ ಹೀಗೆ ಯೋಚಿಸಿದನು -'ಎಲ್ಲರೂ ನನ್ನನ್ನು ಭಕ್ತವತ್ಸಲನೆಂದು ಕರೆಯುತ್ತಾರೆ. ಆದರೆ ಅದು ಇಲ್ಲಿಯವರೆಗೆ ಶಬ್ದಮಾತ್ರದಿಂದ ಇರುವುದಲ್ಲದೆ ಅರ್ಥದಿಂದ ಅಲ್ಲ. ಹಿಂದೆ ನಾನು ಅರ್ಜುನನನ್ನು ನಿಮಿತ್ತವಾಗಿಟ್ಟು ಕೊಂಡು ಎಲ್ಲ ಜನರಿಗೂ ಚರಮಶ್ಲೋಕವನ್ನು ಉಪದೇಶಿಸಿದೆನು. ಅದೂ ಶಬ್ದಮಾತ್ರವಾಗಿಯೇ ಉಳಿಯಿತು. ಅದಾದ ಮೇಲೆ ದಿವ್ಯಸೂರಿಗಳು ಶಠಕೋಪಾದಿಗಳ ರೂಪದಿಂದ ಭೂಲೋಕದಲ್ಲಿ ಅವತರಿಸಿ ಅದೇ ತತ್ತ್ವಾರ್ಥಗಳನ್ನು ಪ್ರಕಟಗೊಳಿಸಿದರು. ಆದರೆ ಅದೂ ಅನುಷ್ಠಾನ ಪರ್ಯಂತವಾಗಿ ಗೋಚರಿಸಲಿಲ್ಲ. ಈಗ ಶ್ರೀಕೃಷ್ಣಲಕ್ಷ್ಮೀನಾಥನಿಗೆ ಮುಕ್ತಿಯನ್ನೂ ಕೊಟ್ಟು ಆ ತತ್ತ್ವವು ಅನುಷ್ಠಾನದಲ್ಲಿ ಬರುತ್ತೆಂಬುದನ್ನು ಜಗತ್ತಿಗೆ

ತೋರಿಸಿಕೊಡುವೆನು'- ಹೀಗೆ ನಿರ್ಧರಿಸಿ ಅಂದಿನಿಂದ ಕೃಷ್ಣಲಕ್ಷ್ಮೀನಾಥನಲ್ಲಿ ಅತ್ಯಂತ ದಯಾಮಯನಾಗಿದ್ದನು.

ಕೃಷ್ಣಲಕ್ಷ್ಮೀನಾಥನು ಎಂದಿನಂತೆ ಪುಷ್ಪಕೈಂಕರ್ಯದಲ್ಲಿ ನಿರತನಾಗಿದ್ದನು. ಒಂದು ದಿನ ಇಬ್ಬರು ಶೂದ್ರರು ಕೈಯಲ್ಲಿ ಬಿಲ್ಲನ್ನು ಹಿಡಿದು ಪಾದರಕ್ಷೆಗಳನ್ನು ಮೆಟ್ಟಿ ಬಂದರು. ಇಬ್ಬರೂ ಒಂದೊಂದು ನಾಯಿಯನ್ನು ಕರೆದುಕೊಂಡು ಭಕ್ತವತ್ಸಲನ ದೇವಾಲಯಕ್ಕೆ ಬಂದರು. ದೇವನ ಸಂದರ್ಶನ ಮಾಡಬೇಕೆಂದು ಅವರಿಗೆ ಮನಸ್ಸುಂಟಾಗಲು, ಪಾದರಕ್ಷೆಗಳನ್ನು ದೇವಸ್ಥಾನದ ಹೊರಗೆ ಕಳಚಿಟ್ಟು ಅವುಗಳ ರಕ್ಷಣೆಗಾಗಿ ನಾಯಿಗಳನ್ನು ಅಲ್ಲಿಯೇ ಬಿಟ್ಟು ಒಳಕ್ಕೆ ದೇವರಸೇವೆಗಾಗಿ ಹೊರಟರು. ಅವರು ಹೊರಕ್ಕೆ ಬರುವ ವೇಳೆಗೆ ಆಶ್ಚರ್ಯಕರವಾದ ಘಟನೆಯೊಂದು ನಡೆದಿತ್ತು.

ಇಬ್ಬರೂ ಪಾದರಕ್ಷೆಗಳನ್ನು ತೆಗೆದಿಟ್ಟರಷ್ಟೆ. ಆದರೆ ಮೊದಲು ಈ ನಾಯಿಗಳಿಗೆ ತಮ್ಮ ಯಜಮಾನನ ಪಾದರಕ್ಷೆಗಳ ಅರಿವಾಗದೆ ಅದಲು ಬದಲಾಗಿ ನೋಡಿಕೊಳ್ಳುತ್ತಿದ್ದವು.. ನಿಜವಾದ ಅರಿವುಂಟಾದ ಕೂಡಲೇ ಅದೇ ಕಾರಣದಿಂದ ಅವೆರಡಕ್ಕೂ ಜಗಳವುಂಟಾಯಿತು. ಜಗಳವೇನು, ಒಂದು ದೊಡ್ಡ ಯುದ್ಧವೇ ಆಯಿತು. ಎರಡು ಬಲಿಷ್ಠವಾದ ನಾಯಿಗಳು ಒಂದನ್ನೊಂದು ಬಿಡುವಂತಿಲ್ಲ. ಹೀಗಾಗಿ ಇದನ್ನು ನೋಡಲು ಒಂದು ಜಾತ್ರೆಯೇ ಸೇರಿತು. ಅವುಗಳಿಗೂ ಹುಮ್ಮಸ್ಸುಹೆಚ್ಚಿ, ಕಾದಾಡಲಾರಂಭಿಸಿದವು. ಕೊನೆಗೆ ಒಂದು ನಾಯಿ ಜರ್ಝರಿತವಾದ ಶರೀರ ಮಾತ್ರದಿಂದ ಉಳಿಯಿತು.

ಇಷ್ಟು ಹೊತ್ತಿಗೆ ದೇವರಸೇವೆ ಮಾಡಿಕೊಂಡು ಅವರಿಬ್ಬರೂ ಹೊರಕ್ಕೆ ಬಂದರು. ಒಬ್ಬನು ತನ್ನ ನಾಯಿ ಸತ್ತದ್ದರಿಂದ ಇದೇ ಕಾರಣಕ್ಕಾಗಿ ಮತ್ತೊಬ್ಬನೊಡನೆ ಯುದ್ಧಕ್ಕೆ ಅನುವಾದನು. ಸುಂದೋಪಸುಂದರಂತೆ ಇಬ್ಬರೂ ಹೊಡೆದಾಡಿ ಮಡಿದರು.

ಕೃಷ್ಣಲಕ್ಷ್ಮೀನಾಥನು ಈ ದೃಶ್ಯವನ್ನು ಕಂಡನು. ಕಂಡು, ಮನಸ್ಸಿನಲ್ಲಿ ಅಂದುಕೊಂಡನು-'ಇವರಿಬ್ಬರೂ ಸೇವಾವೃತ್ತಿಯಿಂದ ಜೀವಿಸುವವರು; ಕ್ಷುದ್ರರು; ಆದರೂ ತಮ್ಮಲ್ಲಿ ಭಕ್ತಿಯಿಂದಿದ್ದ ನಾಯಿಗಳಿಗೋಸ್ಕರ ಅವುಗಳಲ್ಲಿನ ತಮ್ಮ ವಾತ್ಸಲ್ಯವನ್ನು ಪ್ರಕಟಿಸಿ ತನುವನ್ನು ತೊರೆದರು. ಕ್ಷುದ್ರರೂ ಧರ್ಮಾಧರ್ಮಗಳನ್ನು ತಿಳಿಯದವರೂ ಆದ ಇವರ ಭಕ್ತವಾತ್ಸಲ್ಯವೇ ಇಷ್ಟುಮಟ್ಟಿಗೆ ಇರಬಹುದಾದರೆ, ನಿರ್ವ್ಯಾಜ ಬಂಧುವೂ, ಸರ್ವಜ್ಞಮೂರ್ತಿಯೂ, ಸರ್ವಜಗತ್ಪತಿಯೂ, ಅಪಾರ ಕರುಣಾಸಿಂಧುವೂ, ಧರ್ಮಾಧರ್ಮವಿವೇಕಿಯೂ, ಜಗನ್ಮಾತೆಯೂ, ಜಗತ್ಪಿತೃವೂ, ಲಕ್ಷ್ಮೀಪತಿಯೂ, ಆದ ಶ್ರೀಮನ್ನಾರಾಯಣನ ವಾತ್ಸಲ್ಯಕ್ಕೆ ಎಣೆಯುಂಟೆ? ಆಶ್ರಿತರನ್ನು ರಕ್ಷಿಸುವುದರಲ್ಲಿ ಸಂದೇಹವೇ ಇಲ್ಲ'-ಎಂದು ನಿರ್ಧರಿಸಿ, ತನ್ನ ನಿತ್ಯನೈಮಿತ್ತಿಕಾದಿ ಸರ್ವಧರ್ಮಗಳನ್ನು ತೊರೆದು, ಪರಮಾತ್ಮನಲ್ಲಿಯೆ ಸ್ಥಿರಚಿತ್ತನಾಗಿದ್ದನು. ಅಂದಿನಿಂದ ಕೃಷ್ಣಲಕ್ಷ್ಮೀನಾಥನು ಬೆಳಗಾದ ಕೂಡಲೇ ಊರಿನಿಂದ ಹೊರಕ್ಕೆ ಹೋಗಿ ಸ್ನಾನಮಾಡಿಕೊಂಡು ಅಲ್ಲಿಂದ ಚತುಷ್ಪಾದಿಗಳಂತೆ, ಎರಡು ಕೈಗಳಿಂದಲೂ, ಎರಡು ಕಾಲುಗಳಿಂದಲೂ, ನಡೆಯುತ್ತ ದೇವಾಲಯದ ಬಳಿಯಿರುವ ವಕುಳ ವೃಕ್ಷದ ಕೆಳಗೆ ಬಂದು ಮೌನದಿಂದ ಕುಳಿತಿರುತ್ತಿದ್ದನು. ಆಯಾಚಿತವಾಗಿ ಬಂದ ಯಾವುದಾದರೂ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳುತ್ತಿದ್ದನು. ಇಲ್ಲದಿದ್ದರೆ ಹಾಗೆಯೇ

ಮೌನದಿಂದ ಇರುತ್ತಿದ್ದನು. ಆತನನ್ನು ನೋಡಿ ಊರಿನ ಜನರು ಬಗೆಬಗೆಯಾಗಿ ಮಾತನಾಡಿಕೊಳ್ಳುತ್ತಿದ್ದರು. ಕೆಲವರು ಹಾಸ್ಯಮಾಡುತ್ತಿದ್ದರು. ಕೆಲವರು ಬಯ್ಯುತ್ತಿದ್ದರು. ಮತ್ತೆ ಕೆಲವರು ಹೊಗಳುತ್ತಿದ್ದರು.

ಹೀಗೆಯೇ ಕೆಲವು ದಿನಗಳು ಕಳೆದವು. ಒಂದು ದಿನ ರಾತ್ರಿಯಲ್ಲಿ ಊರಿನ ಜನರು ವಿಚಿತ್ರವಾದ ಕನಸ್ಸನ್ನು ಕಂಡರು. ಭಗವಾನ್ ಭಕ್ತವತ್ಸಲನು ರಾತ್ರಿಯು ಬೆಳಗಾದ ಮೇಲೆ ಎಲ್ಲರೂ ನೋಡುತ್ತಿದ್ದಂತೆಯೇ ಕೃಷ್ಣಲಕ್ಷ್ಮೀನಾಥನಿಗೆ ಸಶರೀರ ಮೋಕ್ಷವನ್ನು ಅನುಗ್ರಹಿಸುವನು- ಎಂಬಂತೆ ಗೋಚರಿಸಿತು. ಕೃಷ್ಣ ಲಕ್ಷ್ಮೀನಾಥನಿಗೂ ಇದೇ ರೀತಿಯ ವಿಚಿತ್ರ ಅನುಭವವಾಯಿತು.

ಬೆಳಗಾಯಿತು. ಎಂದಿನಂತೆ ಲಕ್ಷ್ಮೀನಾಥನು, ಸ್ನಾನಮಾಡಿಕೊಂಡು ಶ್ವವೃತ್ತಿಯಿಂದ ದೇವಾಲಯಕ್ಕೆ ಬರುತ್ತಿದ್ದನು. ಕನಸು ಕಂಡಿದ್ದ ಊರಿಗೆ ಊರೇ ಈ ದೃಶ್ಯವನ್ನು ನೋಡಲು ಜಮಾಯಿಸಿತ್ತು. ಕೃಷ್ಣಲಕ್ಷ್ಮೀನಾಥನು ಪ್ರದಕ್ಷಿಣೆಮಾಡಿ ಎರಡು ಪ್ರಾಕಾರಗಳನ್ನೂ ದಾಟಿ, ಭಕ್ತವತ್ಸಲನ ತಿರುವಡಿಗಳ ಬಳಿಗೆ ಹೋದನು. ಜನರು ನೋಡುತ್ತಿರುವಂತೆಯೇ ಕಣ್ಣುಕೋರೈಸುವಂತಹ ಒಂದು ಬೆಳಕು ಕಂಡಿತು. ಕ್ಷಣಮಾತ್ರದಲ್ಲಿ ಮರೆಯಾಯಿತು. ಹೀಗೆ ಭಕ್ತವತ್ಸಲನು ಲಕ್ಷ್ಮೀನಾಥನಿಗೆ ಸಶರೀರ ಮೋಕ್ಷವನ್ನು ಕರುಣಿಸಿ, ಚರಮಶ್ಲೋಕವು ಶಬ್ದಮಾತ್ರದ ತತ್ವವಲ್ಲ, ಉಪದೇಶರೂಪವಾದ ಅರ್ಥಮಾತ್ರವೂ ಅಲ್ಲ, ಅನುಷ್ಠಾನದಲ್ಲಿ ಕಂಡುಬರುವ ತತ್ವವೆಂಬುದನ್ನು ಜಗತ್ತಿಗೆ ತೋರಿಸಿಕೊಟ್ಟನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಲಕ್ಷ್ಮೀನಾಥನಿಗೆಮೋಕ್ಷಪ್ರಾಪ್ತಿ ಎಂಬ ನೂರೊಂಬತ್ತನೆಯ ಅಧ್ಯಾಯವು ಮುಗಿದುದು.

## ೧೧೦

ಅನಂತರ ಭಟ್ಟಾಚಾರ್ಯನು ಪುಡರೀಕಾಕ್ಷನು ಹುಟ್ಟಿದುದು, ಗುರುಶುಶ್ರೂಷೆಯನ್ನು ಮಾಡಿದುದು, ಗುರುಪುತ್ರಿಯರು ಒಂದು ದಿನ ಸ್ನಾನಮಾಡಲು ಹೋಗಿ ಬರುವ ದಾರಿಯಲ್ಲಿ ಕೆಸರು ಕಾಲುವೆಯನ್ನು ಕಂಡು ಅಲ್ಲಿ ನಾವು ಬರುವುದಿಲ್ಲವೆಂದು ಹಠಮಾದಿದುದು, ಅದರಿಂದ ಆ ಕುಮಾರಿಯರಿಬ್ಬರನ್ನೂ ತನ್ನ ಭುಜಗಳ ಮೇಲೆ ಕುಳ್ಳಿರಿಸಿಕೊಂಡು ಗುರುಗಳ ಮನೆಗೆ ಕರೆದುಕೊಂಡು ಹೋದುದೂ, ಇದನ್ನು ಕಂಡ ಗುರುಗಳು ಆತನ ಗುರುಭಕ್ತಿಗೆ ಮೆಚ್ಚಿ ಸರ್ವವೇದಾರ್ಥಗಳ ಜ್ಞಾನವನ್ನುಂಟುಮಾಡುವ ಸರ್ವಶಾಸ್ತ್ರಗಳ ರಹಸ್ಯವನ್ನು ತಿಳಿಯಪಡಿಸುವ ಮತ್ತು ತ್ರಿಕರಣಗಳಿಂದಲೂ ಉಂಟಾಗುವ ಪಾಪಗಳನ್ನು ಪರಿಹರಿಸುವ ಧ್ವಯಮಂತ್ರವನ್ನು ಆತನಿಗೆ ಉಪದೇಶಿಸಿ, ಮುಂದೆ ಅವತರಿಸುವ ಯಾಮುನಾಚಾರ್ಯರಿಗೆ ಇದೆಲ್ಲವನ್ನೂ ಬೋಧಿಸಬೇಕೆಂದು ಆಜ್ಞಾಪಿಸಿದುದೂ, ಆಚಾರ್ಯ ಪರಮಾಚಾರ್ಯ ಕೈಂಕರ್ಯವೇ ಪರಮ ಕರ್ತವ್ಯವೆಂದು ನಂಬಿ ಅವರ ಆದೇಶವನ್ನು ಶಿರಸಾವಹಿಸಿ ನಡೆದುಕೊಂಡುದೇ ಮೊದಲಾದ ಕಥೆಗಳನ್ನು ಕೇಳಿ ಪರಮಾನಂದಭರಿತನಾದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶೀರಾಮಾನುಜಚರಿತದಲ್ಲಿ ಪುಂಡರೀಕಾಕ್ಷವತಾರಾದಿ

ಕಥನವೆಂಬ ನೂರಹತ್ತನೆಯ ಅಧ್ಯಾಯವು ಮುಗಿದುದು.

೧೧೧

ರಾಮಮಿಶ್ರರಿಗೆ ಶಿಷ್ಯರು ಒದಗಲು ಶ್ರೀರಂಗದಲ್ಲಿ ಶ್ರೀವೈಷ್ಣವ ದರ್ಶನವನ್ನು ಅಭಿವೃದ್ಧಿಗೊಳಿಸುತ್ತಿರಲಾಗಿ, ವೀರನಾರಾಯಣಪುರದಲ್ಲಿ ಈಶ್ವರಮುನಿಗೆ ಪುತ್ರರತ್ನವು ಜನಿಸಿದ ಸಮಾಚಾರವು ತಿಳಿಯಿತು. ಅದನ್ನು ಕೇಳಿ ಪರಮಾನಂದ ಭರಿತನಾದ ರಾಮಮಿಶ್ರನು ವೀರನಾರಾಯಣಪುರಕ್ಕೆ ಹೋಗಿ ಈಶ್ವರ ಮುನಿಯನ್ನು ಅಭಿನಂದಿಸಿ, ಶಿಶುವಿಗೆ ಯಾಮುನಾರ್ಯನೆಂದು ನಾಮಕರಣ ಮಾಡಿದನು.(ಇಲ್ಲಿ ನಾಮಕರಣದ ರೀತಿಯು ಚೆನ್ನಾಗಿ ನಿರೂಪಿಸಲ್ಪಟ್ಟಿದೆ).

ಬಾಲ್ಯದಲ್ಲಿಯೇ ಗುರುಗಳಿಂದ ವೇದಾಭ್ಯಾಸವೂ ನಡೆಯಿತು. ವಿಚಿತ್ರವೆಂದರೆ ಒಂದುಸಲ ಹೇಳಿದುದನ್ನು ಮತ್ತೆ ಹೇಳಿಸಿಕೊಳ್ಳಬೇಕಾಗಿರಲಿಲ್ಲ. ಆದುದರಿಂದ ಸಾಕ್ಷಿಮಾತ್ರವಾದ ಗುರುವಿನಿಂದ ಪದಕ್ರಮಾದಿ ಪಾಠವೆಲ್ಲವೂ ಅಲ್ಪಕಾಲದಲ್ಲಿಯೇ ಮುಗಿದುದನ್ನು ಕಂಡು ಸಂತುಷ್ಟನಾದ ತಂದೆಯು, ಮಗನಿಗೆ ಶಾಸ್ತ್ರಾರ್ಥಗಳನ್ನು ಕಲಿಸ ಬಯಸಿದನು. ಮಹಾಭಾಷ್ಯಭಟ್ಟನೆಂಬ ಗುರುವಿನಿಂದ ಷಡಂಗಸಹಿತವಾದ ಶಾಸ್ತ್ರಾರ್ಥಗಳನ್ನೂ ಕಲಿಯುತ್ತಿದ್ದನು.

ಚೋಳಮಹಾರಾಜನ ಆಸ್ಥಾನದಲ್ಲಿ 'ಅಕ್ಕಿಯಾಳ್ವಾನ್' ಎಂಬ ಪ್ರಸಿದ್ಧ ರಾಜ ಪುರೋಹಿತನೊಬ್ಬನು ಇದ್ದನು. ಆಗಿನ ಕಾಲದಲ್ಲಿ ಆತನು ವಿದ್ವಾಂಸರನ್ನು ವಾದದಲ್ಲಿ ಜಯಿಸಿ ಪ್ರತಿವರ್ಷವೂ ಅವರೆಲ್ಲರಿಂದಲ್ಲೂ ಗೊತ್ತಾದ ಹಣವನ್ನು ವಸೂಲು ಮಾಡುತ್ತಿದ್ದನು. ಅದೇ ಪದ್ಧತಿಯಂತೆ ಒಂದು ದಿನ ರಾಜಭಟರು ಮಹಾಭಾಷ್ಯಭಟ್ಟನ ಬಳಿಗೂ ಹಣವನ್ನು ಕೇಳಲು ಬಂದರು. ಆದರೆ ಕೊಡಲು ಹಣವು ಇರಲಿಲ್ಲ, ಶಿಷ್ಯನಾದ ಯಾಮುನನಿಗೂ ಈ ವಿಚಾರವು ತಿಳಿಯಲು ಕುಪಿತನಾಗಿ,-'ನವಯಂ ಕವಯಸ್ತು ಕೇವಲಂ। ನ ವಯಂ ಕೇವಲತಂತ್ರಪಾರಗಾಃ। ಅಪಿ ತು ಪ್ರತಿವಾದಿವಾರಣ ಪ್ರಕಟಾಟೋಪ ವಿಪಾಟನ ಕ್ಷಮಾಃ॥'-ಎಂಬ ಪದ್ಯವನ್ನು ಬರೆದು ಅದೇ ರಾಜಭಟರ ಮೂಲಕ ಕಳುಹಿಸಿದನು.

ಪುರೋಹಿತನು ಪದ್ಯವನ್ನು ನೋಡಿದ ಕೂಡಲೇ ಕಿಡಿಕಿಡಿಯಾದನು. ಎಲ್ಲರೂ ನನ್ನನ್ನು ಗೌರವಿಸುತ್ತಿರುವಲ್ಲಿ ಈ ಮಹಾಭಾಷ್ಯಭಟ್ಟನ ಶಿಷ್ಯನೊಬ್ಬನು ಅದೂ ಕೇವಲ ಹನ್ನೆರಡು ವರ್ಷದ ಬಾಲಕ ನನ್ನನ್ನು ತಿರಸ್ಕರಿಸುವನು. ಇರಲಿ, ರಾಜನಿಂದ ತಕ್ಕ ಶಿಕ್ಷೆಯನ್ನು ಮಾಡಿಸುವೆನು. ಎಂದು, ರಾಜನಿಗೆ ತಿಳಿಸಿದನು. ಅದರಂತೆಯೇ ರಾಜನೂ ಸಹ ಯಾಮುನ ನನ್ನು ಕರೆತರಲು ಭಟರನ್ನು ಕಳುಹಿಸಿದನು. ಆದರೆ ಯಾಮುನನು ಬರಲಿಲ್ಲ. ಆಗ ದೊರೆಯು ಬಾಲನಾದರೂ ಯಾಮುನನು ಪ್ರಾಜ್ಞನಿರಬೇಕೆಂದೂ, ಅವನನ್ನು ಗೌರವದಿಂದ ಕರೆಸಬೇಕೆಂದೂ ಯೋಚಿಸಿ, ಅವನನ್ನು ಕರೆತರಲು ಮರ್ಯಾದೆಯಿಂದ ಪಲ್ಲಕ್ಕಿಯನ್ನು ಕಳುಹಿಸಿದನು. ಬಾಲಕನು ಬರುತ್ತಲೇ ಅರಮನೆಯ ಬಾಗಿಲಿನಲ್ಲಿ ರಾಜನು ಸತ್ಕರಿಸಿ ಒಳಗೆ ಕರೆತಂದನು. ಹೀಗೆ ಯಾಮುನನು ವಿದ್ವತ್ಸಭೆಯನ್ನು ಪ್ರವೇಶಿಸಿದನು.

ಯಾಮುನನು ಬಂದುದನ್ನು ಕೇಳಿ ಅಕ್ಕಿಯಾಳಾನ್ ತನ್ನ ವಿದ್ವತ್ತನ್ನು ಪ್ರದರ್ಶಿಸುವ ವೇಷಭೂಷಣಗಳೊಡನೆ ಬಂದನು. ಆತನು ಬರುತ್ತಲೇ ಯಾಮುನನು -'ಆಶೈಲಾದದ್ರಿಕನ್ಯಾ ಚರಣಕಿಸಲಯ ನ್ಯಾಸಧನ್ಯೋಪಕಂಠಾ ದಾರಕ್ಷೋನೀತ ಸೀತಾ ಮುಖಕಮಲ ಸಮುಲ್ಲಾಸ ಹೇತೋಶ್ಚಸೇತೋಃ। ಆಚಪ್ರಾಚ್ಯ ಪ್ರತೀಚ್ಯ ಕ್ಷಿತಿಧರ ಯುಗಳಾದರ್ಕ ಸೋಮಾವತಂಸಾನ್ಮೀಮಾಂಸಾ ಶಾಸ್ತ್ರಯುಗ್ಮ ಶ್ರಮಮ್ಮದಿತಮನಾ ಮೃಗ್ಯತಾಂ ಮಾದೃಶೋಽನ್ಯಃ॥' ಒಂದು ಪದ್ಯವನ್ನು ಘೋಷಿಸಿದನು. ಇದನ್ನು ಕೇಳುತ್ತಲೇ ನಡುಗಿದ ಪುರೋಹಿತನು ತನ್ನ ಅಧೈರ್ಯವನ್ನು ತೋರಗೊಡದೇ ಗರ್ವದಿಂದ ಕುಳಿತನು. ಮಧ್ಯಸ್ಥರಾಗಿ ಅನೇಕ ವಿದ್ವಾಂಸರೂ, ರಾಜರಾಣಿಯರೂ ಪುರಪ್ರಮುಖರೂ ನೆರೆದಿದ್ದರು.

ಈ ಮಧ್ಯೆ, ಇವರಿಬ್ಬರಲ್ಲಿ ಯಾರು ಗೆಲ್ಲುವರೆಂಬ ವಿಚಾರದಲ್ಲಿ ರಾಜರಾಣಿಯರಿಗೆ ವಿವಾದವುಂಟಾಯಿತು. ಪುರೋಹಿತನು ಗೆದ್ದರೆ ತಾನು ಆರು ತಿಂಗಳ ಕಾಲ ದಾಸಿಯಂತೆ ಇರುವುದಾಗಿ ರಾಣಿಯೂ, ಬಾಲಕನು ಗೆದ್ದರೆ ಅರ್ಧರಾಜ್ಯವನ್ನು ಕೊಡುವುದಾಗಿ ರಾಜನೂ ಪ್ರತಿಜ್ಞೆ ಮಾಡಿದರು.

ಸಭೆಯು ಆಶ್ಚರ್ಯದಿಂದಿರಲು, ಪುರೋಹಿತನು ರಾಜನ ಅನುಮತಿಯಂತೆ ಬಾಲಕನನ್ನು ಉದ್ದೇಶಿಸಿ,-'ಅಪ್ಪಾ ಮಗು, ನೀನು ಇನ್ನೂ ಚಿಕ್ಕವನು. ವಿದ್ವಾಂಸನಾದರೂ ವಾದಮಾಡಲು ಬರುವುದಿಲ್ಲ. ಆದುದರಿಂದ ಹೀಗೆ ಮಾಡೋಣ. ನಮ್ಮಿಬ್ಬರಲ್ಲಿ ಯಾರಾದರು ಒಬ್ಬರು ಲೌಕಿಕವೇ ಆಗಲಿ ವೈದಿಕವೇ ಆಗಲಿ ಮೂರು ವಾಕ್ಯಗಳನ್ನು ಹೇಳೋಣ. ಅದನ್ನು ಪ್ರತಿವಾದಿಯು ಖಂಡಿಸಿದರೆ ಅವನೇ ಗೆದ್ದಂತೆ ಆಗುವುದು. ಗೆದ್ದವನು ಸೋತವನನ್ನು ತಲೆಯಮೇಲೆ ಹೊಡೆಯಬಹುದು'- ಎಂದು ತಿಳಿಸಿದನು. ಸಭೆಯು ಒಪ್ಪಿತು. ಬಾಲಕನೂ ಒಪ್ಪಿದನು. ಅದರಂತೆ ಕೂಡಲೇ ಎದ್ದುನಿಂತು,-'ಅಯ್ಯಾ ಪುರೋಹಿತ, ನಾನು ಮೊದಲು ಮೂರು ಲೌಕಿಕ ವಾಕ್ಯಗಳನ್ನು ಹೇಳುತ್ತೇನೆ. ಅದನ್ನು ನೀನು ಖಂಡಿಸಿದರೆ ಮುಂದೆ ನೀನು ಹೇಳಿದಂತೆ ಶಾಸ್ತ್ರಾರ್ಥವಾದವೂ ನಡೆಯಬಹುದು'- ಎಂದನು. ಒಪ್ಪಿಗೆಯಾಗಲು ಬಾಲಕನು ಪುರೋಹಿತನನ್ನು ಸಂಭೋದಿಸಿ -'ನಿನ್ನ ತಾಯಿಯು ಬಂಜೆಯಲ್ಲ; ಈ ರಾಜನು ಸಾರ್ವಭೌಮನು; ರಾಜಪತ್ನಿಯು ಪತಿವ್ರತೆ'- ಎಂದು ಮೂರು ವಾಕ್ಯಗಳನ್ನು ಹೇಳಿದನು. ಇದನ್ನು ಕೇಳಿದ ಪುರೋಹಿತನು ಪೆಚ್ಚಾಗಿ ಕುಳಿತನು. ಅನಂತರ ಬಾಲಕನು ಇದೇ ರೀತಿಯಾಗಿ ಶಾಸ್ತ್ರವಾದದಲ್ಲಿಯೂ ಸೋಲಿಸಿದನು. ಪುರೋಹಿತನು ತಲೆ ಎತ್ತದೆ ಕುಳಿತಿರಲು ಮತ್ತೆ ಬಾಲಕನು -'ಅಯ್ಯಾ ವಿಪ್ರ, ನೀನು ಹೇಳಿದಂತೆ ನಾನು ನಿನ್ನ ತಲೆಯ ಮೇಲೆ ಪ್ರಹರಿಸಬಹುದು. ಆದರೆ ನಾನು ರಾಜಪುರೋಹಿತನಾದ್ದರಿಂದಲೂ, ದ್ವಿಜನಾದ್ದರಿಂದಲೂ, ರಾಜಾಶ್ರಿತನಾದ್ದರಿಂದಲೂ ನಾನು ಆ ಕೆಲಸವನ್ನು ಮಾಡುವುದಿಲ್ಲ. ಆದರೆ ನಿನಗೆ ಈ ವಿದ್ವಚಿಹ್ನೆಯು ಶೋಭಿಸುವುದಿಲ್ಲ ತೆಗೆದುಬಿಡು'-ಎಂದನು. ಸಭೆಯಲ್ಲಿ ಜಯ ಜಯಕಾರವು ಮೊಳಗಿತು. ರಾಜದಂಪತಿಗಳು ಪರಮಾಶ್ಚರ್ಯಭರಿತರಾದರು. ಹಿಂದೆ ಆತನಿಂದ ಸೋತ ಪಂಡಿತರೆಲ್ಲರೂ ಹಿಗ್ಗಿದರು. ಇದರ ಫಲವಾಗಿ ಬಾಲಕನನ್ನು ಬ್ರಹ್ಮರಥದಲ್ಲಿ ಕುಳ್ಳಿರಿಸಿ ಸಂಭ್ರಮವಾಗಿ ಮೆರವಣಿಗೆ ಮಾಡಿಸಿದರು. ರಾಜನು ರಾಣಿಗೆ ಮಾತು ಕೊಟ್ಟಿದ್ದಂತೆ ಅರ್ಧರಾಜ್ಯವು ಯಾಮುನಾಚಾರ್ಯರಿಗೆ ದೊರಕಿತು. ದೊರಕಿದ ರಾಜ್ಯದಲ್ಲಿ ತಾಯಿತಂದೆ

ಗಳೊಡನೆ ದೇವೇಂದ್ರನಂತೆ ಸುಖವಾಗಿರಲು ಕಾಲಕ್ರಮದಲ್ಲಿ ವಿವಾಹವಾಯಿತು. ಇಬ್ಬರು ಪುತ್ರರು ಜನಿಸಿದರು. ಹಿರಿಯವನ ಹೆಸರು ವರರಂಗ; ಕಿರಿಯವನ ಹೆಸರು ಶೊಟ್ಟನಂಬಿ. ಹೀಗೆ ಯಾಮುನಾಚಾರ್ಯನು ವಾದದಲ್ಲಿ ಜಯಿಸಿ ರಾಜ್ಯವನ್ನು ಪಡೆದು, ರಾಜತೇಜಸ್ಸಿನಿಂದಲೂ ವಿದ್ವತ್ಪ್ರೌಢಿಮೆಯಿಂದಲೂ ಬೆಳಗುತ್ತಿರುವನಾಗಿ, ವಿದ್ವತ್ಪ್ರಕಾಂಡರಿಂದ ಪುರಸ್ಕೃತನಾಗಿಯೂ ಪತ್ನೀಪುತ್ರಾದಿ ಪರಿವಾರದಿಂದ ಸುಖವಾಗಿ ಇರುತ್ತಿದ್ದನು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯಾಮುನಾಚಾರ್ಯ ವಿಜಯವೆಂಬ ನೂರಹನ್ನೊಂದನೆಯ ಅಧ್ಯಾಯವು ಮುಗಿದುದು.

## ೧೧೨

ಈ ವಿಜಯದಿಂದ ಸಂತುಷ್ಟರಾದ ರಾಮಮಿಶ್ರರು ಯಾಮುನನನ್ನು ನೋಡಲು ಬಂದರು. ಪಿತಾಮಹನ (ನಾಥಮುನಿಗಳ) ಆದೇಶಪಾಲನೆಯು (ಯಾಮುನಾಚಾರ್ಯರಿಗೆ ವಿದ್ಯಾದಾನ ಮಾಡುವುದು) ಅವರ ಮುಖ್ಯ ಕರ್ತವ್ಯವಾಗಿತ್ತು. ಅದನ್ನು ನಿರ್ವಹಿಸುವ ಅವ್ಯಾಜ ಕರುಣೆಯಿಂದ ಅವರು ಬಂದರು.

ಆದರೆ ಯಾಮುನಾರ್ಯನು ಈಗ ರಾಜನಾಗಿದ್ದಾನೆ. ಅವನನ್ನು ನೋಡಲು ದಿಗ್ದಿಗಂತದಿಂದ ಪ್ರಸಿದ್ಧರಾದವರೆಲ್ಲರೂ ಬಂದು ಕೆಲವರಿಗೆ ಅವಕಾಶವಾಗಿದೆ. ಕೆಲವರಿಗೆ ಇಲ್ಲ. ರಾಮಮಿಶ್ರರು ಪ್ರಯತ್ನ ಮಾಡಿದರು. ಅವರಿಗೆ ರಾಜನ ದರ್ಶನದ ಅವಕಾಶವು ಸಿಗಲಿಲ್ಲ. ಆಗ ಅವರೊಂದು ಉಪಾಯ ಮಾಡಿದರು. ಮೆಲ್ಲನೆ ರಾಜ-ಪಾಚಕನ ಪರಿಚಯ ಮಾಡಿಕೊಂಡರು. ಆತನಿಗೆ ಪ್ರಿಯವಾದ ಪದಾರ್ಥವಾವುದೆಂಬುದನ್ನು ತಿಳಿದುಕೊಂಡರು. ದಿನವೂ ಆತನ ಊಟಕ್ಕಾಗಿ ಅದನ್ನು (ಅಲರ್ಕಶಾಕ) ತಂದುಕೊಡುತ್ತಿದ್ದರು. ಗುರುವಿನ ಆಜ್ಞೆಯನ್ನು ಪಾಲಿಸುವುದಕ್ಕಾಗಿ ಅವರು ಇದೇ ರೀತಿ ಆರು ತಿಂಗಳ ಕಾಲವನ್ನು ಕಳೆದರು.

ಇಂದಲ್ಲ ನಾಳೆಯಾದರೂ ಯಾಮುನನನ್ನು ನೋಡಬಹುದೆಂಬ ಭರವಸೆಯಿಂದ ಅವರೂ ಕಾಲವನ್ನು ನೂಕುತ್ತಿದ್ದರು. ಆತನನ್ನು ನೋಡಲು ಆಗಲಿಲ್ಲ, ಆಗ ಮತ್ತೊಂದು ಉಪಾಯವನ್ನು ಹುಡುಕಿ ಚಿಂತಿಸಿ, ನಾಲ್ಕುದಿನ ತರಕಾರಿ ತಂದುಕೊಡುವುದನ್ನು ನಿಲ್ಲಿಸಿದರು. ಮಾರನೆಯ ದಿನ ತರಕಾರಿಯನ್ನು ತಂದಾಗ ಅಡಿಗೆಯವನು ಅವರನ್ನು ಪ್ರಭುಗಳಿಗೆ ಪ್ರಿಯವಾದ ತರಕಾರಿಯನ್ನು ತಂದುಕೊಡದಿದ್ದುದಕ್ಕಾಗಿ ಕಟುವಾಗಿ ಅನ್ನಲು, ತಾವು ಪ್ರಭುಗಳಿಗೆ ಚಾಕರನಲ್ಲವೆಂದೂ ತಾವೇ ಸ್ವೇಚ್ಛೆಯಾಗಿ ತಂದುಕೊಡುತ್ತಿದ್ದುದಾಗಿಯೂ ಪ್ರಭುಗಳನ್ನು ನೋಡುವ ಇಷ್ಟವಿರುವುದಾಗಿಯೂ ತಿಳಿಸಿದ ಮೇಲೆ ಈ ವಿಚಾರವು ರಾಜನ ಕಿವಿಯನ್ನು ಮುಟ್ಟಿತು. ಕೂಡಲೇ ರಾಜದರ್ಶನವಾಯಿತು.

ಪರಸ್ಪರ ದರ್ಶನವಾದ ಮೇಲೆ ರಾಜನು ಅವರ ಪ್ರೀತಿಗೆ ಮೆಚ್ಚಿ 'ತಮಗೇನು ಬೇಕೋ ಕೇಳಿದರೆ ಕೊಡುತ್ತೇನೆ'-ಎಂದನು. 'ನನಗೆ ಏನೂ ಬೇಡ. ನೀನು ಕೊಡುವುದಕ್ಕೆ ಬದಲಾಗಿ ನಿನ್ನ ತಾತಂದಿರು ನನ್ನಲ್ಲಿ ಇಟ್ಟಿರುವ ಅಮೂಲ್ಯವಾದ ಹಣವಿದೆ. ಅದನ್ನು ನಿನಗೆ ಕೊಡಬೇಕೆಂದು ಬಯಸಿದ್ದೇನೆ. ಅದನ್ನು ಕೊಡುವವರೆಗೂ ನಿನ್ನ ಅರಮನೆಗೆ

ಬಂದು ಹೋಗಲು ಅವಕಾಶವನ್ನು ಕೊಟ್ಟರೆ ಸಾಕು'- ಎಂದು ರಾಮಮಿಶ್ರರು ಅಚ್ಚರಿಯಾಗುವಂತೆ ತಿಳಿಸಿದರು. ರಾಮಮಿಶ್ರರಿಗೆ ಅವಕಾಶವು ದೊರೆಯಿತು.

ರಾಮಮಿಶ್ರರು ಮಾರನೆಯ ದಿನ ಅರಮನೆಗೆ ಬರುತ್ತ ಭಗವದ್ಗೀತೆಯನ್ನು ಕೈಯಲ್ಲಿ ಹಿಡಿದುಕೊಂಡು ಬಂದರು. ಯಾಮುನಾರ್ಯರ ಕೋರಿಕೆಯಂತೆ,-'ಇದು ಭಗವದ್ಗೀತೆ; ಹಿಂದೆ ಅರ್ಜುನನಿಗೆ ಕೃಷ್ಣನು ಸ್ವತಃ ಉಪದೇಶಿಸಿದುದು. ವೇದಗಳಲ್ಲಿ ಪುರುಷಸೂಕ್ತವು ಹೇಗೆ ಮುಖ್ಯವೋ ಪುರಾಣಗಳಲ್ಲಿ ವಿಷ್ಣುಪುರಾಣ ಹೇಗೆ ಮುಖ್ಯವೋ, ಧರ್ಮಶಾಸ್ತ್ರಗಳಲ್ಲಿ ಮನುಧರ್ಮಶಾಸ್ತ್ರವು ಹೇಗೆ ಮುಖ್ಯವೋ, ಹಾಗೆಯೇ ಶ್ರೀಮನ್ಮಹಾಭಾರತದಲ್ಲಿ ಭಗವದ್ಗೀತೆಯು ಅತ್ಯಂತ ಮುಖ್ಯವಾದುದು. ಇದನ್ನು ತಿಳಿದರೆ ಮತ್ತೊಂದನ್ನು ತಿಳಿಯಬೇಕಾದುದಿಲ್ಲ'-ಎಂದರು. ಅದನ್ನು ಕೇಳಿ ಯಾಮುನಾರ್ಯನು ಗುರುವಿನಲ್ಲಿ ಭಕ್ತಿ ಪ್ರವಣನಾಗಿ ತನಗೆ ಉಪದೇಶ ಮಾಡಬೇಕೆಂದು ಕೇಳಿಕೊಂಡರು. ಗುರುಗಳು ಹದಿನೆಂಟು ಅಧ್ಯಾಯಗಳನ್ನೂ ಹದಿನೆಂಟು ದಿನಗಳಲ್ಲಿ ಉಪದೇಶಿಸಿದರು. ಆತನ ಜ್ಞಾನ-ಭಕ್ತಿ-ವೈರಾಗ್ಯಗಳು ಪ್ರಬುದ್ಧವಾದವು. ರಾಜ್ಯಕೋಶಾದಿಗಳಲ್ಲಿ ಅನಾದರವುಂಟಾಯಿತು. ಆಗ ಭಕ್ತಿ ನಮ್ರನಾಗಿ ತನಗೆ ಪರಮಾತ್ಮನನ್ನು ತೋರಿಸಿಕೊಡಬೇಕೆಂದೂ, ಅವನನ್ನು ನೋಡುವ ಉಪಾಯವನ್ನು ಕರುಣಿಸಬೇಕೆಂದೂ, ಬೇಡಿಕೊಳ್ಳಲು ಭಕ್ತಿ-ಜ್ಞಾನ-ವೈರಾಗ್ಯಗಳ ಪರಾಕಾಷ್ಠೆಯನ್ನೂ ಕಂಡ ರಾಮಮಿಶ್ರರು ಆತನಿಗೆ 'ಚರಮೋಪಾಯ'ವನ್ನು ಉಪದೇಶಿಸಿ ನಿಧಿಯನ್ನು (ಪೈತಾಮಹನಿಧಿ) ತೋರಿಸುವೆನೆಂದು ಶ್ರೀರಂಗಕ್ಕೆ ಕರೆದುಕೊಂಡು ಹೋಗಿ ರಂಗಶಾಯಿಯನ್ನು ತೋರಿಸಿದರು. ಯಾಮುನಾರ್ಯನು ಅಂತಹ ಪೈತಾಮಹ ನಿಧಿಯಾದ ಶ್ರೀರಂಗನಾಥನ ದಿವ್ಯಸುಂದರ ಮೂರ್ತಿಯನ್ನು ಕಂಡು ರಾಜ್ಯಕೋಶಾದಿಗಳನ್ನು ಸಂಪೂರ್ಣವಾಗಿ ತ್ಯಜಿಸಿದನು. ಮಹೇಂದ್ರ ವೈಭವದಿಂದ ಮೆರೆಯುತ್ತಿದ್ದ ಯಾಮುನನು ಅಂದಿನಿಂದ ಯಾಮುನದೇಶಿಕನಾಗಿ ಶ್ರೀರಂಗದಲ್ಲಿಯೇ ನೆಲೆಸಿದನು. ಯಾಮುನದೇಶಿಕೇಂದ್ರರ ಸನ್ನಿಧಿಯಲ್ಲಿ ದಿನಂಪ್ರತಿ ಶಿಷ್ಯಸಂಪತ್ತಿಯೂ ಬೆಳೆಯುತ್ತಿತ್ತು. ಹೀಗೆ ವೈಷ್ಣವದರ್ಶನದ ಆಧಾರಮೂರ್ತಿಯು ಅಲ್ಲಿ ವಿರಾಜಿಸಿತು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಗೀತೋಪದೇಶ ಪೂರ್ವಕವಾಗಿ ಯಾಮುನಾರ್ಯರ ಸಂನ್ಯಾಸ ಸ್ವೀಕಾರವೆಂಬ ನೂರಹನ್ನೆರಡನೆಯ ಅಧ್ಯಾಯವು ಮುಗಿದುದು.

## ೧೧೩

ಯಾಮುನದೇಶಿಕೇಂದ್ರರ ವೈಭವವನ್ನು ಕೇಳಿ ದೇಶದ ಮೂಲೆ ಮೂಲೆಗಳಿಂದಲೂ, ಶಿಷ್ಯರು ಬರಲಾರಂಭಿಸಿದರು. ಅವರಲ್ಲಿ ಈ ಆರು ಮಂದಿ ಬಹುಪ್ರಖ್ಯಾತರಾದರು. ಮಹಾಪೂರ್ಣರು (ಪೆರಿಯನಂಬಿ), ಶ್ರೀಶೈಲಪೂರ್ಣರು, ಗೋಷ್ಠೀಪೂರ್ಣರು,ಮಾಲಾಧರ, ಮಾರನೇರನಂಬಿ (ಚತುರ್ಥವರ್ಣ), ಕಾಂಚೀಪೂರ್ಣ (ಚತುರ್ಥಪೂರ್ಣ)ರು, ಇವರೆಲ್ಲರಿಗೂ ಶಾಸ್ತ್ರಾರ್ಥಗಳನ್ನು ಉಪದೇಶಿಸುತ್ತ ವೈಷ್ಣವದರ್ಶನವನ್ನು ಅಭಿವೃದ್ಧಿಗೊಳಿಸುತ್ತಿದ್ದರು.

ಹೀಗಿರಲು, ಒಂದು ದಿನ ಗುರುಗಳಾಗ ಶ್ರೀರಾಮಮಿಶ್ರರು ಬಂದು ಯಾಮುನಾ ಚಾರ್ಯರ ಸಮೀಪದಲ್ಲಿ ಕುಳಿತು-'ನನ್ನ ಕರ್ತವ್ಯವನ್ನು ಮಾಡಿದುದಾಯಿತು. ನಿಮ್ಮ ತಾತಂದಿರ ಆಸ್ತಿಯಾಗಿ ಉಳಿದಿರುವುದು ಒಂದು ಮಾತ್ರ ಇದೆ. ಅದು ಕುರುಕಾನಗರದಲ್ಲಿರುವ ಕುರುಕನಾಥ ಯೋಗೀಂದ್ರನಲ್ಲಿ ರಕ್ಷಿಸಲ್ಪಟ್ಟಿದೆ. ಅದು ಯೋಗಶಾಸ್ತ್ರ. ನಿಮ್ಮ ಪಿತಾಮಹ (ನಾಥಮುನಿಗಳ)ರ ಇಚ್ಛೆಯಂತೆ ನೀವು ಅದನ್ನು ಆದಷ್ಟು ಬೇಗ ಸ್ವೀಕರಿಸಬೇಕು. ಕಾರಣಾಂತರದಿಂದ ಅದು ನನಗೆ ಲಭ್ಯವಾಗಲಿಲ್ಲ. ಇನ್ನು ನಾನು ಹೋಗಿ ಬರುವೆನು?-ಎಂದು ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಆಚಾರ್ಯರು ತಮ್ಮ ಪೂರ್ವಾಶ್ರಮದ ರಾಜ್ಯವನ್ನು ಶ್ರೀರಂಗನಾಥನ ಕೈಂಕರ್ಯಕ್ಕಾಗಿ ಮೀಸಲಾಗಿಟ್ಟು ಅತಿಶಯವಾಗಿ ಬೆಳಸುತ್ತಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯಾಮುನಾಚಾರ್ಯ ವೈಭವವೆಂಬ ನೂರಹದಿಮೂರನೆಯ ಅಧ್ಯಾಯವು ಮುಗಿದುದು.

೧೧೪

ಯಾಮುನದೇಶಿಕರು ರಾಮಮಿಶ್ರರ ಸಲಹೆಯಂತೆ ಕುರುಕನಾಥನನ್ನು ಕಂಡು ಯೋಗವಿದ್ಯೆಯನ್ನು ತಿಳಿದುಕೊಳ್ಳಬೇಕೆಂದು ಹೊರಟರು. ಇವರು ಹೋದಾಗ ಕುರುಕನಾಥ ಯೋಗೀಂದ್ರನು ಯೋಗಾರೂಢನಾಗಿದ್ದನು. ಆಚಾರ್ಯರು ಯೋಗಕ್ಕೆ ವಿಘ್ನಮಾಡಬಾರದೆಂಬ ಉದ್ದೇಶದಿಂದ ಗೋಡೆಯ ಮರೆಯಲ್ಲಿದ್ದರು. ಆದರೆ ಅವ್ಯಾಜಕರುಣಾಮೂರ್ತಿಯಾದ ಶ್ರೀಯಃಪತಿಯು ಯೋಗಾಸಕ್ತನಾಗಿದ್ದ ಕುರಕಾನಾಥನ ಗಮನವನ್ನು ಆಚಾರ್ಯರ ಕಡೆಗೆ ತಿರುಗಿಸಿದನು. ಆತನ ಭುಜವನ್ನು ಹಿಡಿದು ಅಲುಗಿಸಿ ಗೋಡೆಯ ಕಡೆಗೆ ಸಂಕೇತ ಮಾಡಿದನು. ಆಗ ಬಹಿರ್ಮುಖನಾದ ಯೋಗೀಂದ್ರನು ಯಾಮುನರು ಬಂದ ಕಾರಣವನ್ನು ವಿಚಾರಿಸಿ ಅವರ ಇಚ್ಛೆಯನ್ನು ತಿಳಿದು ತಮ್ಮ ದೇಹಾವಸಾನದ ನಿರ್ದಿಷ್ಟಕಾಲವನ್ನು ತಿಳಿಸಿ ಅದಕ್ಕೆ ಮೊದಲನೆಯ ದಿನ ಇಲ್ಲಿಗೆ ಬರಬೇಕೆಂದು ಅವರಿಗೆ ತಿಳಿಸಿ ಮತ್ತೆ ಯೋಗಾರೂಢನಾದನು. ಆಚಾರ್ಯರು ಅನಂತಶಯನವೇ ಮೊದಲಾದ ತೀರ್ಥಕ್ಷೇತ್ರಗಳ ಯಾತ್ರೆಯನ್ನು ಮಾಡುತ್ತ ಮತ್ತೆ ಶ್ರೀರಂಗಕ್ಕೆ ಬಂದು ಎಂದಿನಂತೆ ವೈಷ್ಣವದರ್ಶನ ಪ್ರವಚನದಲ್ಲಿಯೇ ನಿರತರಾಗಿದ್ದರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯಾಮುನಾರ್ಯರ ತೀರ್ಥಯಾತ್ರಾ ಪ್ರಕರಣವೆಂಬ ನೂರಹದಿನಾಲ್ಕನೆಯ ಅಧ್ಯಾಯವು ಮುಗಿದುದು.

೧೧೫

ಒಂದು ದಿನ ಆಚಾರ್ಯರು ಸಹಸ್ರಗೀತಿ(ತಿರುವಾಯ್‌ಮೊಳಿ)ಯ ಒಂದು ಪದ್ಯದ ಅರ್ಥವನ್ನು ('ಪೊಲಿಕ-ಪೊಲಿಕ-ಎಂಬ ಪದ್ಯ) ವಿವರಿಸುವಾಗ ಬಹು ಚಿಂತಾಕ್ರಾಂತರಾದರು.. ಆ ಪದ್ಯದಲ್ಲಿ ಕಲಿಯುಗದಲ್ಲಿ ವೈಷ್ಣವದರ್ಶನವನ್ನು ಸರ್ವತೋಮುಖವಾಗಿ ವರ್ಧಿಸುವ ಮಹಾತ್ಮನೊಬ್ಬನು ಅವತರಿಸುವನು-ಎಂಬ ಅರ್ಥವಿತ್ತು. ಯಾರಿರಬಹುದೆಂದು ಅವರು

ಯೋಚಿಸುತ್ತಿರಲು ಗುರುಭಕ್ತರಾದ ಶಿಷ್ಯರು ಆ ವೈಭವವು ತಮಗೇ ಸಲ್ಲುವುದರಿಂದ ಪದ್ಯವು ತಮ್ಮನ್ನೇ ನಿರ್ದೇಶಿಸುತ್ತದೆ'- ಎಂದರು. ಆದರೆ ಆಚಾರ್ಯರು ಅದು ತಮ್ಮ ಪೂರ್ವಿಕರಿಗಾಗಲಿ ತಮಗಾಗಲಿ ಅನ್ವಯಿಸುವುದಿಲ್ಲವೆಂದು ನಿಶ್ಚಯಿಸಿ ಪದ್ಮಪುರಾಣ, ಯಾದವಾಚಲ ಮಹಾತ್ಮ್ಯೇ ಮೊದಲಾದ ಆಧಾರ ಗ್ರಂಥಗಳ ಪರಿಶೀಲನೆಯಿಂದ ಆ ಮಹಾತ್ಮನ ಆವಿರ್ಭಾವವನ್ನೇ ನಿರೀಕ್ಷಿಸುತ್ತಿದ್ದರು.

ಕಾಲಕ್ರಮದಲ್ಲಿ ಆಚಾರ್ಯರ ನಿರೀಕ್ಷಣೆಯನ್ನು ಸಫಲಗೊಳಿಸುವುದಕ್ಕಾಗಿಯೇ ದಶರಥ ಪುತ್ರನಾದ ಲಕ್ಷ್ಮಣನ ಅಂಶದಿಂದ (ಶೇಷಾಂಶ) ರಾಮಾನುಜಾಚಾರ್ಯರು ಜನಿಸಿದರು. ಶ್ರೀರಾಮನು ಅವತರಿಸಿದಾಗ ಅವನ ಸಹಾಯಕ್ಕಾಗಿ ಮೂವರು ಸಹೋದರರೂ ಇತರ ದೇವತೆಗಳೂ ಭೂಲೋಕದಲ್ಲಿ ಜನಿಸಿದಂತೆ ಯತಿಪತಿಯ ಸಹಾಯಕ್ಕಾಗಿಯೂ ಅನೇಕ ಸಾತ್ವಿಕ ಮಹನೀಯರು ಆವಿರ್ಭವಿಸಿದರು. ಶ್ರೀರಾಮನ ಅಂಶದಿಂದ ಕೂರನಾಥನು ಭರತನ ಅಂಶದಿಂದ ವಾಧೂಲಕುಲಾಗ್ರಣಿಯಾದ ದಾಶರಥಿಯೂ ಶತ್ರುಘ್ನನ ಅಂಶದಿಂದ ದಾಶರಥಿಯ ಪುತ್ರನಾದ ರಾಮಾನುಜದಾಸನೂ ಅವತರಿಸಿದರು. ಅಲ್ಲದೆ ಚತುಸ್ಸಪ್ತತಿ (೭೪ಮಠಗಳ) ಆಚಾರ್ಯರೂ ಅವತರಿಸಿ ರಾಮಾನುಜ ಯತಿವರ್ಯರ ಸಹಾಯಕರಾಗಿ ನಿಂತರು.

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ಯಾಮುನಾರ್ಯ ವೈಭವದಲ್ಲಿ ರಾಮಾನುಜಾದ್ಯವತಾರವೆಂಬ ನೂರಹದಿನೈದನೆಯ ಅಧ್ಯಾಯವು ಮುಗಿದುದು.

## ೧೧೬

ಯಾಮುನಾಚಾರ್ಯರು ಶ್ರೀರಂಗದಲ್ಲಿ ಪ್ರವಚನಶೀಲರಾಗುತ್ತಿರಲು ಅವರ ದೇಹಸ್ಥಿತಿಯು ಕುಂದಿತು. ತಾವು ನಿರೀಕ್ಷಿಸುತ್ತಿದ್ದ ಮಹಾಪುರುಷನ ಚಿಂತೆಯೂ ಪ್ರಭಲವಾಗುತ್ತಿತ್ತು. ಕೆಲವು ದಿನಗಳಲ್ಲಿಯೇ ಜನಗಳಲ್ಲಿ ಧರ್ಮದಲ್ಲಿನ ಆಸಕ್ತಿಯು ಜಾಗರೂಕವಾಗುತ್ತಿರುವುದನ್ನೂ ಜಗತ್ತು ಪ್ರಕಾಶಮಾನವಾದಂತೆ ಕಂಡುಬರುತ್ತಿರುವುದನ್ನೂ ನೋಡಿ ಆಚಾರ್ಯರು ತಾವು ನಿರೀಕ್ಷಿಸುತ್ತಿದ್ದ ಮಹಾತ್ಮನು ಅವತರಿಸಿರಬೇಕೆಂದು ಯೋಚಿಸಿ ಆತನನ್ನು ಹುಡುಕುವುದಕ್ಕಾಗಿ ಅಲ್ಲಲ್ಲಿಯೇ ತಮ್ಮ ದೂತರನ್ನು ಅಟ್ಟಿದರು. ಅವರು ಹುಡುಕುತ್ತಿರುವಲ್ಲಿ ಶ್ರೀಪೆರಂಬೂದೂರಿನಲ್ಲಿ ರಾಮಾನುಜಾಚಾರ್ಯರು ಹುಟ್ಟಿದುದೂ ವಿದ್ಯಾರ್ಥಿ ದೆಸೆಯಲ್ಲಿಯೇ ರಾಜಕುಮಾರಿಯ ಭೂತಚೇಷ್ಟೆಯನ್ನು ಬಿಡಿಸಿದುದೂ, ಕಾಂಚೀಪೂರ್ಣನ ಸಖ್ಯವಾದುದೇ ಮೊದಲಾದ ವಿಚಾರಗಳು ತಿಳಿದವು. ಆತನೇ ಸಿದ್ಧಾಂತ ಸ್ಥಾಪನಪಟುವೆಂದು ತಿಳಿದು ಒಮ್ಮೆ ಕಾಂಚೀಪುರಕ್ಕೆ ಬಂದು, ದೂರದಿಂದಲೇ ಆತನನ್ನು ಕಂಡು ಮನಸ್ಸಿಗೆ ಸಮಾಧಾನ ತಂದುಕೊಂಡು, ಹೇಗಾದರೂ ಈತನಿಂದಲೇ ಶ್ರೀವೈಷ್ಣವ ದರ್ಶನವನ್ನು ದೇಶದಲ್ಲೆಲ್ಲಾ ಪ್ರಚಾರಗೊಳಿಸುವಂತೆ ಮಾಡಬೇಕೆಂದುಕೊಳ್ಳುತ್ತಾ ಶ್ರೀರಂಗಕ್ಕೆ ಹಿಂತಿರುಗಿದರು.

ಪ್ರವಚನವನ್ನು ನಡೆಸುತ್ತಲೇ ಸ್ತೋತ್ರರತ್ನ, ಚತುಶ್ಶ್ಲೋಕೀ, ವೇದಪ್ರಾಮಾಣ್ಯ, ಸಿದ್ಧಿತ್ರಯ, ಶ್ರೀಗೀತಾಸಹಸ್ರವೆಂಬ ಐದು ಗ್ರಂಥಗಳನ್ನು ರಚಿಸಿ ಲೋಕೋಜ್ಜೀವನ ಮಾಡಿದರು.

ಅಂತಯೇ ರಾಮಾನುಜರನ್ನು ತಮ್ಮ ಪೀಠಕ್ಕೆ ತರುವ ಉತ್ಕಟಾಕಾಂಕ್ಷೆಯಿಂದ ತಮ್ಮ ಶಿಷ್ಯರಲ್ಲಿ ಒಬ್ಬರಾದ ಮಹಾಪೂರ್ಣರನ್ನು ಕರೆದು ಕೂಡಲೇ ಕಾಂಚೀಪುರಕ್ಕೆ ಹೋಗಬೇಕೆಂದು ಅಲ್ಲಿ ವರದರಾಜನಿಗೆ ತೀರ್ಥಕೈಂಕರ್ಯವನ್ನು ಮಾಡುತ್ತಿರುವ ರಾಮಾನುಜರ ಕಿವಿಯಲ್ಲಿ ಬೀಳುವಂತೆ 'ಸ್ತೋತ್ರರತ್ನ'ವನ್ನು ಪಠಿಸುತ್ತಿರಬೇಕೆಂದು ಆಜ್ಞಾಪಿಸಿದರು. ಅವರೂ ಅದರಂತೆಯೇ ಕಂಚಿಗೆ ಬಂದು ಗುರುವಿನ ಆಜ್ಞೆಯನ್ನು ಪಾಲಿಸುತ್ತಿರಲು -"ಸ್ವಾಭಾವಿಕ ನವಧಿಕಾತಿ ಶಯೇಶಿತೃತ್ವಂ ನಾರಾಯಣ ತ್ವಯಿ ನಮೃಷ್ಯತಿ ವೈಧಿಕಃ ಕಃ? ಬ್ರಹ್ಮಾಶಿವಃ ಶತಮಖಃ ಪರಮಸ್ವರಾಡಿತ್ಯೇ ತೇSಪಿಯಸ್ಯ ಮಹಿಮಾರ್ಣವ ವಿಪ್ರುಷಸ್ತೇ"-ಎಂಬ ಪದ್ಯವು ರಾಮಾನುಜರ ಕಿವಿಯಲ್ಲಿ ಬಿದ್ದೊಡನೆಯೇ ಚಕಿತರಾಗಿ ಗ್ರಂಥಕರ್ತರಾರೆಂದು ವಿಚಾರಿಸಿದರು. ಯಾಮುನರೆಂದೂ ಶ್ರೀರಂಗದಲ್ಲಿರುವರೆಂದೂ ತಿಳಿದ ಕೂಡಲೇ ಅವರ ದರ್ಶನಕ್ಕಾಗಿ ಶ್ರೀರಂಗಕ್ಕೆ ಹೊರಟರು. ಆದರೆ ಪರಮಾತ್ಮನ ಲೀಲೆಯೇ ಲೀಲೆ. ಕಪಟನಾಟಕ ಸೂತ್ರಧಾರಿಯಾದ ಶ್ರೀಮನ್ನಾರಾಯಣನು ತನ್ನ ಮನಸ್ಸಿನಲ್ಲಿಯೇ ಚಿಂತಿಸಿದನಂತೆ,-"ಈ ಗುರುಶಿಷ್ಯರ ಸಮಾಗಮವಾಗುವುದಾದರೆ ನನ್ನ ಲೀಲಾವಿಭೂತಿಯು ಮುಗಿದಂತೆಯೇ ಸರಿ'- ಎಂದು ಚಿಂತಿಸಿ, ರಾಮಾನುಜರು ಶ್ರೀರಂಗವನ್ನು ತಲುಪುವ ಮೊದಲೇ ಶಿಷ್ಯಾಗಮನವನ್ನು ನಿರೀಕ್ಷಿಸುತ್ತಿರುವ ಗುರುವಿಗೆ ಪರಮಪದವನ್ನು ಕೊಟ್ಟು ಕರೆಸಿಕೊಂಡನು. ಮುಂದೆ ಆಚಾರ್ಯರು ಗುರುಗಳ ಕಳೇಬರವನ್ನು ಕಂಡುದು, ಬೆರಳುಗಳನ್ನು ನೋಡಿ ಮೂರು ಪ್ರತಿಜ್ಞೆಗಳನ್ನು ಮಾಡಿದುದು, ಅದರಂತೆ ತಮ್ಮ ಪ್ರತಿಜ್ಞೆಯನ್ನು ನಿರ್ವಹಿಸುದುದೂ, ದೇಶದಲ್ಲೆಲ್ಲಾ ವೈಷ್ಣವ ದರ್ಶನವನ್ನು ಸ್ಥಾಪಿಸಿದುದೂ, "ಸಂಪತ್ಪುತ್ರ"ನನ್ನು ದೆಹಲಿಯ ಮುಸಲ್ಮಾನ್ ಬಾದಷಹನ ಅಂತಃಪುರದಿಂದ ವಾತ್ಸಲ್ಯದಿಂದ ಕರೆತಂದು ಯಾದವಗಿರಿ (ಮೇಲುಕೋಟೆ)ಯಲ್ಲಿ ಪ್ರತಿಷ್ಠಾಪಿಸಿ ಅದನ್ನು ಭೂವೈಕುಂಠವನ್ನಾಗಿ ಮಾಡಿದುದೇ ಮೊದಲಾದ ಅದ್ಭುತ ಚರಿತ್ರೆಗಳು ಪ್ರಸಿದ್ಧವೇ ಆಗಿವೇಯಷ್ಟೆ!

ಇಲ್ಲಿಗೆ ಶ್ರೀಪ್ರಪನ್ನಾಮೃತದಲ್ಲಿ ಶ್ರೀರಾಮಾನುಜಚರಿತದಲ್ಲಿ ನೂರಹದಿನಾರನೆಯ ಅಧ್ಯಾಯವು ಮುಗಿದುದು.

ಇಲ್ಲಿಂದ ಮುಂದೆ ಅಂದರೆ ನೂರಹದಿನೇಳನೆಯ ಅಧ್ಯಾಯದಿಂದ ನೂರಇಪ್ಪತ್ತಾರನೆಯ ಅಧ್ಯಾಯದವರೆಗೆ ಅಸ್ಮದ್ವ್ಯತ್ಯಾದಿ ಆಚಾರ್ಯರ ವೈಭವ, ಕಲಿಪ್ರಮಥನ ಮತ್ತು ವಾರಣಾದ್ರೀಶರ ಗುಣಾಗುಣಗಳು, ಭಗವದ್ವಿಷಯ ಸಂಪ್ರದಾಯ ವಿವರಣ, ಲೋಕಾಚಾರ್ಯಾದ್ಯವತಾರ, ಶ್ರೀಭಾಷ್ಯ ಸಂಪ್ರದಾಯ ವಿವರಣ, ಯವನಬಾಧೆಯುಂಟಾಗಲು ಲೋಕಾಚಾರ್ಯರಿಂದಲೂ, ವೇದಾಂತ ದೇಶಿಕರಿಂದಲೂ, ಶ್ರೀರಂಗನಾಥನ ರಕ್ಷಣೆ, ಶ್ರೀಭಾಷ್ಯ ಶ್ರುತಪ್ರಕಾಶಿತಾದ್ವಿಕರಣ, ಶ್ರೀಶೈಲೇಶ ವೃತ್ತಾಂತ, ಶ್ರೀಯತೀಂದ್ರ ಪ್ರವಣಾಷ್ಟದಿಗ್ಗಜ ವೈಭವ ವರ್ಣನ, ವಿಜಯನಗರದಲ್ಲಿ ಪಿಶಾಚಿಗಳಿಗೆ ರಾಮಾಯಣಾರ್ಥೋಪದೇಶ, ನೃಸಿಂಹಾರ್ಯನಿಂದ ಶ್ರೀರಾಮಾಯಣ ಶ್ರವಣ ಮಾಡಿದುದರಿಂದ ಪಿಶಾಚಿಗಳಿಗೆ ಸಾಂತಾನಿಕ ಲೋಕಪ್ರಾಪ್ತಿ, ವಿರೂಪಾಕ್ಷ (ಶೈವ) ರಾಜನಿಗೆ ಪಂಚಸಂಸ್ಕಾರ ಪೂರ್ವಕ ಶ್ರೀರಾಮಾಯಣೋಪದೇಶ, ಹಾಗೂ ಪ್ರಪನ್ನ ಗಾಯತ್ರಿ ಮತ್ತು ಪ್ರಪನ್ನಾಮೃತಗಳ ಪಠನ ಶ್ರವಣಾದಿಗಳ ಮಹಿಮೆಯು ವಿವರಿಸಲ್ಪಟ್ಟಿದೆ.

## ಮಂಗಳಮ್